ಪಾ. ವೆಂ. ಆಚಾರ್ಯ

# ಬ್ರಾಹ್ಮಣರೇನು ಮಾಡಬೇಕು?



ಅಂಕಿತ ಪುಸ್ತಕ

ಅಂಕಿತ ಪುಸ್ತಕದ ೧೦೩ ನೇ ಪ್ರಕಟಣೆ

ಪಾ.ವೆಂ. ಆಚಾರ್ಯ ಸಮಗ್ರ ಸಾಹಿತ್ಯ ಸಂಪುಟ: ೮

ಪ್ರಧಾನ ಸಂಪಾದಕರು: ಡಾ। ಶ್ರೀನಿವಾಸ ಹಾವನೂರ

# ಬ್ರಾಹ್ಮಣರೇನು ಮಾಡಬೇಕು?

ಪಾ. ವೆಂ. ಆಚಾರ್ಯ

ಅಂಕಿತ ಪುಸ್ತಕ
53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ
ಬಸವನಗುಡಿ, ಬೆಂಗಳೂರು - 560 004
☎ 661 7100 (O) 652 6134 (R)

**BRAHMANARENU MAADABEKU?:** by Pa. Vem. Acharya. Edited by Dr. Shrinivasa Havanur. Published by Ankita Pustaka, No. 53, Shamsingh Complex, Gandhi Bazar Main Road, Basavanagudi, Bangalore - 560 004. ☎ 661 7100 (O) 652 6134 (R)

Price : Rs. 95/- Pages: 200

© ಪಾವೆಂ. ವಿಶ್ವಸ್ತ ಸಮಿತಿ

ಮೊದಲನೆಯ ಮುದ್ರಣ - 2002

ಬೆಲೆ : ರೂ. 95/-

ಮುಖಪುಟ: ಶ್ರೀಪಾದ

ಅಕ್ಷರ ಜೋಡಣೆ: ಶ್ರೀಧರ್

ISBN: 81-87321-81-4

ಪ್ರಕಾಶಕರು
**ಅಂಕಿತ ಪುಸ್ತಕ**
53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್
ಗಾಂಧಿಬಜಾರ್ ಮುಖ್ಯರಸ್ತೆ
ಬಸವನಗುಡಿ, ಬೆಂಗಳೂರು - 560 004
☎ 661 7100 (O) 652 6134 (R)

ಮುದ್ರಣ
**ರವಿ ಗ್ರಾಫಿಕ್ಸ್**
ಬೆಂಗಳೂರು.

# ಪ್ರಸ್ತಾವನೆ

ಪಾ.ವೆಂ. ಆಚಾರ್ಯರ ಈ ಲೇಖನ ಸಂಗ್ರಹಕ್ಕೆ ಕೊಟ್ಟ ಶೀರ್ಷಿಕೆ "ಬ್ರಾಹ್ಮಣರೇನು ಮಾಡಬೇಕು?" ಎಂಬುದು. ಗ್ರಂಥವು ಆಕರ್ಷಕವಾಗಿ ಕಾಣಬೇಕು—ಎಂಬ ದೃಷ್ಟಿಯಿಂದ ಕೊಟ್ಟದ್ದಲ್ಲ. ೩೦ ಪುಟಗಳಷ್ಟು ವಿಸ್ತಾರವನ್ನು ಪಡೆದ ಈ ವಿಷಯವು ಆಚಾರ್ಯರ ಆಳವಾದ ಚಿಂತನೆಯ ಫಲವಾಗಿದೆ. ಒಂದು ಜ್ವಲಂತ ಸಾಮಾಜಿಕ ಸಮಸ್ಯೆಯನ್ನು ನಿರ್ವಿಕಾರವಾಗಿ ವಿಶ್ಲೇಷಣೆಗೆ ಒಳಪಡಿಸುವುದಕ್ಕೆ ಮಾದರಿಯಾಗಿ ಈ ಲೇಖನ ಮೊಗವೆತ್ತಿ ನಿಂತಿದೆ.

೧೯೬೦ನೆಯ ದಶಕದಿಂದ ನಡೆದು ಬಂದ ಒಂದು ತಪ್ಪು ಅಭಿಪ್ರಾಯವೆಂದರೆ ಬ್ರಾಹ್ಮಣರು ಮುಂದುವರಿದವರು ಮಾತ್ರವಲ್ಲ ಇತರರನ್ನು ಶೋಷಿಸುವವರು, ವಿದ್ಯೆಯನ್ನು ಗುತ್ತಿಗೆ ಹಿಡಿದವರು, ಇತರ ಜಾತಿಯವರ ಸೌಲಭ್ಯಗಳನ್ನು ಕಸಿದುಕೊಳ್ಳುವವರು— ಇತ್ಯಾದಿಯಾಗಿ ಸಾಹಿತಿಗಳು ಮಾಡುತ್ತಿದ್ದ ಮಿಥ್ಯಾರೋಪಗಳ ನಿರಾಕರಣೆ ಇಲ್ಲಿದೆ. ಹಾಗೆಂದು ಈ ವಿವೇಚನೆ ಏಕಪಕ್ಷೀಯವಲ್ಲ. ಬ್ರಾಹ್ಮಣ ವರ್ಗದವರ ತಪ್ಪುಗಳನ್ನೂ ತೋರಿಸಿ ಎಚ್ಚರಿಸಿದ್ದಾರೆ.

ಬ್ರಾಹ್ಮಣರು V/s ಶೂದ್ರರು ಎಂಬ ಧರತಿಯಲ್ಲಿ ಆರೋಪ ಮುಂಬಂದರೂ, ಅವರುಗಳ ನಡುವಣ ಜಾತಿಯವರೂ ಯಾವ ರೀತಿ ಶೋಷಣೆ ಮಾಡುತ್ತಾರೆ. ಅಲ್ಲಿಯೂ ಪುರೋಹಿತಶಾಹಿ ಇದೆ ಎಂಬುದನ್ನು ಸೋದಾಹರಣವಾಗಿ ಈ ಲೇಖದಲ್ಲಿ ತೋರಿಸಿದ್ದಾರೆ. 'ವಿದ್ಯೆ' ಎಂಬುದನ್ನು ಬ್ರಾಹ್ಮಣರು ಗುತ್ತಿಗೆ ಹಿಡಿದವರು. ಬ್ರಾಹ್ಮಣರ ಮೆದುಳು ಇತರರದಕ್ಕಿಂತ ಶ್ರೇಷ್ಠ—ಎಂದೆಲ್ಲ ಆರೋಪವಿದೆಯಷ್ಟೆ. ವ್ಯಂಗ್ಯವೆಂದರೆ, ಬ್ರಾಹ್ಮಣರೇ ವಿದ್ಯೆಯ ವಿಷಯದಲ್ಲಿ ತಾವು ಮುಂದುವರಿದವರು, ಜಾತ್ಯತಃ ಇತರರಿಗಿಂತ ಬುದ್ಧಿವಂತರು ಎಂಬ ಭ್ರಾಮಕ ಕಲ್ಪನೆಯಲ್ಲಿದ್ದುದನ್ನು ಪಾ.ವೆಂ. ಎತ್ತಿ ತೋರಿಸಿದ್ದಾರೆ. ಇಂಥ ವಿದ್ಯೆಯ ಬಲವಿದ್ದೂ ಏನು ಪ್ರಯೋಜನವಾಗಿದೆ—ಆರ್ಥಿಕವಾಗಿ? ಸಾಮಾನ್ಯ ಬ್ರಾಹ್ಮಣನು ಮಧ್ಯಜಾತಿಯವರಿಗಿಂತ ಬಡವನೇ ಇದ್ದಾನೆ. ಅದರಲ್ಲಿಯೂ ಭೂಸುಧಾರಣಾ ಕಾಯ್ದೆಯಿಂದ ಮತ್ತಷ್ಟು ಬಡವನಾದ, ಅಲ್ಲವೆ? ಇತ್ತ ಒಂದು ಕಾಲಕ್ಕೆ ಸರಕಾರೀ ನೌಕರಿಗಳಲ್ಲಿ ಬ್ರಾಹ್ಮಣರೇ ಹೆಚ್ಚಾಗಿ ಇದ್ದರು. ಆದರೆ ಪಾಶ್ಚಾತ್ಯ ರೀತಿಯ ಪರಿಸರದಲ್ಲಿ ಅದೊಂದು ಐತಿಹಾಸಿಕ ಅನಿವಾರ್ಯವಾಗಿದ್ದಿತು. ಇತರ ಮಧ್ಯಮ ಜಾತಿಯವರಿಗೆ ಕೃಷಿ, ವ್ಯಾಪಾರ, ಕೈಕಸಬು ಮುಂತಾದ್ದರಲ್ಲಿ ಚೆನ್ನಾದ ಗಳಿಕೆ, ಪ್ರವೀಣತೆ ಇತ್ತಾದ್ದರಿಂದ ಅವರಿಗೆ ವಿದ್ಯಾರ್ಜನೆಯ

ಅಗತ್ಯ ಇದ್ದಿತ್ತೆಲ್ಲಿ? ಇಲ್ಲಿ ತೆರೆಯಬೇಕಾದ ಮಾತೆಂದರೆ ಬ್ರಾಹ್ಮಣನ ಮೆದುಳೇನೂ ಶ್ರೇಷ್ಠತಮವಲ್ಲ; ವಿದ್ಯೆಯ ಒಲವು ಅವನಲ್ಲಿ ಜೀವನಾಡಿ ಎನಿಸಿದ್ದಿತು ಮತ್ತು ಅದರಲ್ಲಿ ನೈಪುಣ್ಯವನ್ನು ಪಡೆಯಬೇಕೆಂಬ ಛಲವೂ ಇದೆ. ಈವೊಂದು ನಿರ್ವಿಕಾರದ ನಿಲುಮೆಯನ್ನು ವಿವರಿಸುತ್ತ ಪಾ.ವೆಂ. ಕೊನೆಯಲ್ಲಿ ಬ್ರಾಹ್ಮಣವರ್ಗಕ್ಕೆ ಕೆಲವು ಮನನೀಯ ಸೂಚನೆಗಳನ್ನು ಮಂಡಿಸಿದ್ದಾರೆ. ಸಮಾಜ ಜೀವಿಗಳಲ್ಲಿ ತಾನೇ ಶ್ರೇಷ್ಠ ಎಂಬ ಭಾವನೆ ಕೈಬಿಡಬೇಕು. ವಿದ್ಯಾರ್ಜನೆಯಲ್ಲದೆ ಬೇರೆ ಉದ್ದೇಶಗಳು ತಮ್ಮ ಗೌರವಕ್ಕೆ ಕುಂದು ಎಂದು ತಿಳಿಯಬಾರದು. ಜಾತಿಯ ನಿಮಿತ್ತದಿಂದ ಅಗೌರವ ಪ್ರಸಂಗ ಬಂದರೆ ಆತ್ಮರಕ್ಷಣೆ ಮಾಡಿಕೊಳ್ಳಬೇಕು, ಇತ್ಯಾದಿ.

೧೯೮೦ರಲ್ಲಿ ಈ ಲೇಖನ ಪ್ರಕಟವಾದ ಮೇಲೆ ವಿರೋಧದ ಪ್ರತಿಕ್ರಿಯೆಗಳು ಬಂದದ್ದು ಸ್ವಾಭಾವಿಕವೇ ಆಗಿದ್ದಿತು. ಮೆಚ್ಚಿಕೆಯ ಮಾತುಗಳೂ—ಬ್ರಾಹ್ಮಣ ಪಕ್ಷಪಾತೀ ಲೇಖನ—ಎಂದೇನಲ್ಲ; ನಿಚ್ಚಳವಾದ ವಿವೇಚನ ಎಂಬುದಾಗಿ. ಹಾಗೆ ಬರೆದ ಮೊದಲಿಗರು ಓರ್ವ ಬ್ರಾಹ್ಮಣೇತರ ವೃದ್ಧರಂತೆ. ಇತರ ಪ್ರತಿಕ್ರಿಯೆಗಳಿಗೆ ಪಾ. ವೆಂ. ಉತ್ತರಿಸಿದ್ದಾರೆ. ಆ ಉತ್ತರವನ್ನೂ ಇಲ್ಲಿ ಸೇರಿಸಿದೆ.

ಭಗವಾನ್ ಎಂಬುವರು ಸಂಕ್ರಮಣ ಸಂಚಿಕೆಯಲ್ಲಿ ಬರೆದ ನಿಂದಾವ್ಯಂಜಕ ಲೇಖನಕ್ಕೆ ಮಾತ್ರ ಪಾ.ವೆಂ. ಅತ್ಯಂತ ಕಟುವಾಗಿ ಪ್ರತಿಕ್ರಿಯಿಸಿದ್ದಾರೆ. ಮಾರ್ಮಿಕತೆಯ ಪರಮಾವಧಿಯನ್ನು ತೋರಿಸಿದ್ದಾರೆ. ತಮ್ಮ ಹರಟೆಗಳಲ್ಲಿ ವ್ಯಂಗ್ಯವನ್ನು, ಅಣಕದ ಧರತಿಯನ್ನು ಸಾಕಷ್ಟು ತಂದಿದ್ದರೂ ಇಲ್ಲಿ ಅದು ಗರಿಷ್ಠ ನೆಲೆಯಲ್ಲಿ ಬಂದಿದೆ.

ಅಂದ ಹಾಗೆ ಪಾ.ವೆಂ. ಈ ಬ್ರಾಹ್ಮಣ್ಯ ವಿಷಯದ ಕುರಿತು ಒಂದು ಹರಟೆಯನ್ನೂ ಬರೆದಿದ್ದಾರೆ—ಲಾಂಗೂಲಾಚಾರ್ಯರಾಗಿ. (ಹಿಂದಿಲ್ಲ ಸ್ವಾಮಿ, ಮುಂದಿಲ್ಲ) ಅದನ್ನೂ ಇಲ್ಲಿ ಕೊಟ್ಟಿದೆ. ಅಣಕದ ಶೈಲಿಯಲ್ಲಿ, ಅವರು 'ಬ್ರಾಹ್ಮಣರು ಮುಂದೇನು ಮಾಡಬೇಕು' ಎಂಬುದನ್ನು ಹೀಗೆ ಹೇಳಿದ್ದಾರೆ:

೧) ವಿನೋಬಾರ ಹಾಗೆ ಲೇಖನ, ಮಾತು ಈ ಬಗ್ಗೆ ಮೌನಿಯಾಗಬೇಕು.

೨) ಬರೆಯುವುದಾದರೆ ಬ್ರಾಹ್ಮಣರ ಬಗ್ಗೆ ಮಾತ್ರ ಬರೆಯಬೇಕು.

೩) ಕೆಳಜಾತಿಯ ಹುಡುಗರಿಗೆ ನಿಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡಬೇಕು.

೪) ಜಿನ್ನಾ ಸಾಹೇಬರ ಗ್ರಂಥದಿಂದ ಕದ್ದು, 'ಬೊಮ್ಮನ್‌ಸ್ತಾನ' ಬೇಕು ಎಂದು ಹಟ ಹಿಡಿಯಬೇಕು. ಆ 'ಸ್ತಾನ್' ವಿಂಧ್ಯದ ನೆರೆಯಲ್ಲಿರಲಿ.

೫) ಇವೆಲ್ಲಕ್ಕಿಂತ ಸುಲಭವಾದದ್ದು, ಕ್ರೈಸ್ತ ಇಲ್ಲವೆ ಮುಸ್ಲಿಂ ಮತಕ್ಕೆ ಮತಾಂತರ ಹೊಂದಬೇಕು!

ಈ ಹಾಸ್ಯ ಏನೇ ಇರಲಿ, ಆಚಾರ್ಯರ ಮುಖ್ಯ ಲೇಖನವು ಸಾಹಿತ್ಯ ಲೋಕದಲ್ಲಿ ಸಾಕಷ್ಟು ಹುಯಿಲೆಬ್ಬಿಸಿತು. ಪರ, ವಿರೋಧಿ ಎರಡೂ ರೀತಿಯಲ್ಲಿ ಮತ್ತು ಅವರು ವಿಚಾರ

ಮಾಡುವಂತಾಯಿತು. ಈ ಮಹತ್ವಪೂರ್ಣ ಲೇಖನ ಬ್ರಾಹ್ಮಣ-ಬ್ರಾಹ್ಮಣೇತರ ಚರ್ಚೆಗೆ ತುಸುಮಟ್ಟಿಗಾದರೂ ತಡೆಯನ್ನುಂಟು ಮಾಡಿದೆ.

* * *

ಈ ಸಂಗ್ರಹದಲ್ಲಿಯ ಮಿಕ್ಕ ಚಿಂತನಪರ ಲೇಖನಗಳನ್ನು—ಧಾರ್ಮಿಕ ನೆಲೆ; ಜೀವನ ಮಂಥನ; ವೈಚಾರಿಕ; ಶೈಕ್ಷಣಿಕ ಮತ್ತು ಸಾಮಾಜಿಕ ಎಂಬುದಾಗಿ ವಿಭಾಗಿಸಲಾಗಿದೆ. ಚಿಂತನಪರತೆ ಇವುಗಳ ಮುಖ್ಯ ಲಕ್ಷಣವಾದ್ದರಿಂದ ಕೆಲವು ಚಿಕ್ಕವು, ಇನ್ನೂ ಕೆಲವು ಹೆಚ್ಚಿನ ವಿವರಣೆ ಬೇಡುವಂತಹವೂ ಆಗಿದೆ. ಯಾವದೇ ವಿಷಯ ಮಂಡನೆಯಿರಲಿ, ಪಾ.ವೆಂ. ಅವರ ಮೂಲಭೂತವಾದ ದೃಷ್ಟಿಕೋನ ಎದ್ದು ಕಾಣುತ್ತದೆ. ಅಲ್ಲದೆ ಬಹುಶ್ರುತತೆಯ ಆಳವಾದ ಹಿನ್ನೆಲೆಯೂ ಇದೆ. ಅವರ ವಿಚಾರ ಮಂಥನದ essenceನ್ನೇ ನಾವು ಕಾಣುತ್ತೇವೆ.

ಪಾ.ವೆಂ. ಅವರ ಬಹುತರ ಎಲ್ಲ ಲೇಖನಗಳನ್ನು ೮-೧೦ ಸಂಪುಟಗಳಲ್ಲಿ ಹೊರತರುವ ಯತ್ನ ಮಾಡಿದೆವಷ್ಟೆ. ಹರಟೆ-ಕತೆ-ಕವಿತೆಗಳನ್ನು ಬಿಟ್ಟರೆ, ಉಳಿದ ಲೇಖನಗಳಲ್ಲಿ ಅವರು ಎಲ್ಲೆಲ್ಲಿಂದಲೊ ಸಾಮಗ್ರಿಯನ್ನು ತಂದು ಅರಗಿಸಿಕೊಂಡು ಬರೆದದ್ದು ಹೆಚ್ಚಾಗಿ ಕಂಡು ಬರುತ್ತದೆ. ಇಲ್ಲಿ ಮಾತ್ರ ಅವರ ಮೂಲಭೂತವಾದ ಸ್ವೋಪಜ್ಞತೆಯ ವಿಚಾರ ಗಟ್ಟಿ ಹರಳಾಗಿ ನಿಂತಿದೆ.

**ಪಾವೆಂ**

ಇನ್ನೀಗ ಈ ಮಹಾನ್ ಲೇಖಕರ ಬದುಕನ್ನೂ ಇತರ ಲೇಖನ ಕಾರ್ಯವನ್ನೂ ತುಸು ಪರಿಚಯಿಸಿಕೊಳ್ಳೋಣ.

'ಕಸ್ತೂರಿ'ಯ ಸಮರ್ಥ ಸಂಪಾದಕರು; ಅದಕ್ಕಾಗಿ ಅ.ಭಾ. ಗೋಯಂಕ ಪ್ರಶಸ್ತಿಗರು
'ಓದುಗರೊಡನೆ ಹರಟೆ' ಹೊಡೆದ ಲಾಂಗೂಲಾಚಾರ್ಯರು,
ಪ್ರಥಮ ದರ್ಜೆಯ ಚಿಂತಕರು, ಪಂಡಿತರು,
ಸರ್ವಕುತೂಹಲಿ - ಸರ್ವಜ್ಞಾಚಾರ್ಯರು,

ಈ ರೀತಿಯ ನಾನಾ ಉಪಾಧಿಗಳನ್ನು ಪಡೆದಿದ್ದ ದಿವಂಗತ ಪಾಡಿಗಾರು ವೆಂಕಟರಮಣ ಆಚಾರ್ಯರ ಸಮಗ್ರ ಬರಹಗಳನ್ನು ಪ್ರಕಟಿಸುವ ಯೋಜನೆಯೊಂದು ರೂಪುಗೊಂಡಿದೆ. ಮೊದಲಿಗೆ ಅವರ ಜೀವನ ಪರಿಚಯವನ್ನು ಮಾಡಿಕೊಳ್ಳೋಣ.

ಪಾ.ವೆಂ. ಉಡುಪಿಯ ಪಾಂಡಿತ್ಯದ ಪರಂಪರೆಯ, ಆದರೆ ಕಡು ಬಡತನದ ಮನೆತನದಲ್ಲಿ ೬ ಫೆಬ್ರವರಿ ೧೯೧೫ರಂದು ಜನ್ಮ ತಾಳಿದರು. ಆಗಿನ ಎಸ್.ಎಸ್.ಎಲ್.ಸಿ. ಯಲ್ಲಿ ಶಾಲೆಗೆ ಪ್ರಥಮ ಸ್ಥಾನ ಪಡೆದು ಪಾಸಾಗಿದ್ದರೂ ಕಾಲೇಜಿನ ಕಟ್ಟೆಯನ್ನು ಏರಲಾಗಲಿಲ್ಲ. ದಾರಿದ್ರ್ಯದಲ್ಲಿ ಹೇಗೆ ಸಾಧ್ಯ? ಇಂಥದರಲ್ಲಿಯೇ ಸಾಹಿತ್ಯ ರಚನೆಯ ಹಂಬಲ ಮೂಡಿತ್ತು. ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ, ಔಷಧಿ ಬಾಟಲಿಗೆ ಸಂಬಂಧಿಸಿದ

ಬಂಗಾಲಿ ಜಾಹಿರಾತಿನ ಮೂಲಕ ಬಂಗಾಲಿ ಕಲಿತರು! ಕಾರಣ? ರವೀಂದ್ರರ 'ಗೀತಾಂಜಲಿ' ಯನ್ನು ಅನುವಾದಿಸಬೇಕೆನ್ನುವ ಛಲ.

ಹೊಟ್ಟೆಯ ಪಾಡಿಗಾಗಿ ಅವರು ಉಡುಪಿಯಲ್ಲಿ ಶಾಲಾ ಮಾಸ್ತರಿಕೆ, ಅಂಗಡಿ ಲೆಕ್ಕ, ಮುದ್ರಣ ಕೆಲಸ ಮುಂತಾದ ಹೋರೆಗಳಲ್ಲಿ, ಜೊತೆಗೆ ಆಗಿನ ಸುಪ್ರಸಿದ್ಧ 'ಅಂತರಂಗ' ಪತ್ರಿಕೆಯ ಸಹ ಸಂಪಾದನೆಯಲ್ಲಿ ಏಳೆಂಟು ವರ್ಷ ಕಳೆದರು. ಅಲ್ಲಿಂದ ಮದ್ರಾಸಿನಲ್ಲಿ ಕೆಲ ಕಾಲ ಸವೆಯಿತು. ಅವರು ೧೯೪೨ರಲ್ಲಿ ಹುಬ್ಬಳ್ಳಿಗೆ ಬಂದು 'ಸಂಯುಕ್ತ ಕರ್ನಾಟಕ'ದಲ್ಲಿ ಮುದ್ರಣ ಮೇಲ್ವಿಚಾರಣೆಯ ನೌಕರಿಗೆ ಸೇರಿದರು. ಕೆಲವೇ ದಿನಗಳಲ್ಲಿ ಅವರ ಲೇಖನ ಕಾರ್ಯದ 'ಅಂತರಂಗ' ಪರಿಣತಿಯು ವ್ಯಕ್ತವಾದ್ದರಿಂದ 'ಕರ್ಮವೀರ'ದಲ್ಲಿ ಬರೆಯ ತೊಡಗಿದರು. 'ಲಾಂಗೂಲಾಚಾರ್ಯ'ರಾಗಿ ಹರಟೆಗಳು; ಸಂಪಾದಕ ಸಹಾಯಕರಾಗಿ ಪುಸ್ತಕ ವಿಮರ್ಶೆ, ರಾಜಕೀಯ ಟೀಕೆ ಟಿಪ್ಪಣಿ ಮುಂತಾದವನ್ನು ಬರೆಯತೊಡಗಿದರು.

೧೯೫೬ರಲ್ಲಿ ಕಸ್ತೂರಿ ಡೈಜೆಸ್ಟ್ ಪತ್ರಿಕೆ ಆರಂಭವಾದಾಗ ಪಾ.ವೆಂ. ಅವರಿಗೇ ಸಂಪಾದಕತ್ವವನ್ನು ವಹಿಸಿಕೊಡಲಾಯಿತು. ಅಖಂಡ ೧೮ ವರ್ಷ ಅದರ ಸಂಪಾದನ ಕಾರ್ಯ. ಅವರ ಬೌದ್ಧಿಕ ನೆಲೆಯು ವಿಸ್ತಾರಗೊಂಡದ್ದು ಈ ಕಾಲದಲ್ಲಿಯೇ. ಅವರ ಲೇಖನ ಕಾರ್ಯವೂ ಗರಿಷ್ಠ ಪ್ರಮಾಣವನ್ನು ಕಂಡಿತು.

ಉಡುಪಿಯಲ್ಲಿದ್ದಾಗಲೇ ಲಕ್ಷ್ಮೀ ಅವರೊಂದಿಗೆ ಮದುವೆಯಾಗಿತ್ತು. ನಿವೃತ್ತಿಯ ಕಾಲದಲ್ಲಿ ಆಚಾರ್ಯರು ಅಷ್ಟ ಪುತ್ರ/ಪುತ್ರಿಯರ ಪರಿವಾರವನ್ನು ಹೊಂದಿದ್ದರು.

ನಿವೃತ್ತಿಯ ಹಿಂದಿನ ವರ್ಷ ಪಾ.ವೆಂ. ಕರುಳಿನ ಬೇನೆಯಿಂದ ತತ್ತರಿಸಿದರು. ಆಪರೇಶನ್ ಆಯಿತು; ಒಂದೇ ತಿಂಗಳಿನಲ್ಲಿ ಎರಡು ಬಾರಿ. 'ಸತ್ತೇ ಹೋದರು' ಎನ್ನುವ ಘಟ್ಟದಲ್ಲಿಯೂ ಸಾವನ್ನು ಗೆದ್ದು ಬದುಕಿದರು. ಅವರ ಬರವಣಿಗೆ ಮುಂದುವರಿಯಿತು.

ಅರವತ್ತರ ಗಡಿಯನ್ನು ದಾಟಿದ್ದರಲ್ಲವೆ? ಹಲವಾರು ಸನ್ಮಾನ, ಸಮಾರಂಭಗಳು ಜರುಗಿದವು. ೧೯೭೭ರಲ್ಲಿ ಮೈಸೂರವರು ಸಂಭಾವನಾ ಗ್ರಂಥವನ್ನು- 'ಪಾ.ವೆಂ.- ಕಸ್ತೂರಿ' ಸಮರ್ಪಿಸಿದರು. ಪತ್ರಿಕೋದ್ಯಮದ ಸಾಧನೆಗಾಗಿ ಪಿ.ಆರ್. ರಾಮಯ್ಯ-ಹೆಸರಿನ ಪ್ರಶಸ್ತಿ ಲಭಿಸಿತು. ಅದೇ ಸಾಧನೆಗಾಗಿ ಅಖಿಲ ಭಾರತ ಮಟ್ಟದ ಗೋಯೆಂಕಾ ಪ್ರಶಸ್ತಿಗಾಗಿ ಆಯ್ಕೆಯಾದರು (೧೯೯೨). ಅದನ್ನು ಸ್ವೀಕರಿಸಲೆಂದು ಮುಂಬಯಿಗೆ ಹೋದರು; ಗೊತ್ತಾಗಿದ್ದ ಆ ದಿನ ಸಮಾರಂಭ ನಡೆಯಲಿಲ್ಲ. ಮರು ತಾರೀಖು ನಿಗದಿ ಮಾಡಿದ್ದರ ಮುಂಚೆಯೇ ಆಚಾರ್ಯರು ಅಸು ನೀಗಿದರು. (೪ ಮೇ, ೧೯೯೨).

## ಕೃತಿ ರಚನೆ

ಪಾ.ವೆಂ. ಅವರ ಸಾಹಿತ್ಯ ಕಾರ್ಯವನ್ನು ಈ ಮೂರು ಕಾಲಖಂಡಗಳಲ್ಲಿ ಗುರುತಿಸಬಹುದು.

೧೯೩೨ ರಿಂದ ೧೯೪೨. ಉಡುಪಿಯಲ್ಲಿದ್ದಾಗ 'ಅಂತರಂಗ', 'ಜಯಕರ್ನಾಟಕ'

ಮುಂತಾದ ಪತ್ರಿಕೆಗಳಲ್ಲಿ ಬಂದಂಥ ಕತೆ-ಕವನಗಳ ರಚನೆ. ಅವರ ಮೊದಲ ಕವನ 'ಉದ್ಗಾರ' ಎಂಬುದು ಜಯಕರ್ನಾಟಕದಲ್ಲಿ ಪ್ರಕಟವಾಯಿತು (೧೯೩೩). ಅವರ ಪ್ರಥಮ ಸಣ್ಣಕತೆಯು 'ಮಧುವನ' ಎಂಬ ಕಥಾಸಂಗ್ರಹದಲ್ಲಿ ಬಂದಿದೆ (೧೯೩೫).

೧೯೪೨ ರಿಂದ ೧೯೭೪: ಕರ್ಮವೀರ, ಕಸ್ತೂರಿಗಳಲ್ಲಿ ಪ್ರತಿ ಸಂಚಿಕೆಯಲ್ಲಿಯೂ ಪ್ರಕಟವಾದಂತಹ ಬರಹಗಳು. ಅವರ ಸಾಹಿತ್ಯ ಕೃತಿಗಳ ಬಲು ದೊಡ್ಡ ಮೊತ್ತ ಈ ಕಾಲದ್ದು.

೧೯೭೪ ರಿಂದ ೧೯೯೨: ನಿವೃತ್ತರಾದ ಮೇಲೆ ತುಷಾರ, ಸುಗುಣಮಾಲಾ, ತರಂಗ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದ ಸರ್ವ ವಿಧದ ಬರಹಗಳು. ತುಳು ಕವನಗಳ ರಚನೆಯೂ ಇದೇ ಅವಧಿಯದು. ಜೊತೆಗೆ ತಮ್ಮದೇ 'ಕಸ್ತೂರಿ'ಯಲ್ಲಿ ಪ್ರತಿ ತಿಂಗಳು ವಿವೇಚಿಸಲಾದ 'ಪದಾರ್ಥ ಚಿಂತಾಮಣಿ'.

ಪಾ.ವೆಂ. ಅವರ ಒಟ್ಟಿನ ಬರವಣಿಗೆ ಹತ್ತು ಸಾವಿರ ಪುಟಗಳನ್ನು ಮೀರುವುದಾಗಿದ್ದರೂ ಪುಸ್ತಕ ರೂಪದಲ್ಲಿ ಬಂದದ್ದು ತೀರಾ ಕಡಿಮೆ. 'ರಶಿಯದ ರಾಜ್ಯಕ್ರಾಂತಿ' ಮತ್ತು 'ಸ್ವತಂತ್ರ ಭಾರತ' ಎಂಬೆರಡು ಪ್ರಚಲಿತ ರಾಜಕೀಯ ವಿಶ್ಲೇಷಣೆಗಳು, ನಾಲ್ಕು ಹರಟೆಗಳ ಸಂಗ್ರಹಗಳು ಮತ್ತು ಎರಡೇ ಕವನ ಸಂಗ್ರಹಗಳು. ಎದ್ದು ಕಾಣುವ ಕೃತಿಗಳೆಂದು 'ಸುಭಾಷಿತ ಚಮತ್ಕಾರ' ಹಾಗೂ 'ಪದಾರ್ಥ ಚಿಂತಾಮಣಿ', ಇವನ್ನೂ ಹೆಸರಿಸಬೇಕು.

## ಪಂಚಮುಖಗಳು

ಪಾ.ವೆಂ. ಆಚಾರ್ಯರ ಕೃತಿ ರಚನೆಯ ಭೂಮಿಕೆಯನ್ನು ಐದು ಮುಖಗಳಲ್ಲಿ ರೇಖಿಸಬಹುದು. ಅವೆಂದರೆ;

**ಕಲ್ಪಕತೆ; ಚಿಂತನಪರತೆ; ಶಬ್ದಾಸಕ್ತಿ; ಪತ್ರಿಕಾಧರ್ಮ; ಹಾಗೂ ಅಣಕ ಪ್ರವೃತ್ತಿ.**

ಕಲ್ಪಕತೆ ಅವರ ಕವನ, ಕತೆಗಳಲ್ಲಿ ವ್ಯಕ್ತವಾದರೆ, ಚಿಂತನಪರತೆಯು ಜೀವನ ಸಮಸ್ಯೆಗಳ ಕುರಿತ ವಿಚಾರ ಮಂಥನದಲ್ಲಿ ವ್ಯಕ್ತವಾಗಿದೆ. ಶಬ್ದಾಸಕ್ತಿಯಂತೂ 'ಕಸ್ತೂರಿ'ಯು ಆರಂಭವಾದ ಕಾಲದಿಂದ ತೋರಿಬಂದಿದೆ. ಪತ್ರಿಕಾಧರ್ಮದ ಬಗೆಯನ್ನು ಅವರು ಪಾಲಿಸುವುದಕ್ಕೂ 'ಕಸ್ತೂರಿ'ಯೇ ಕಾರಣವಾಯ್ತು. ಅಣಕಪ್ರವೃತ್ತಿಯು ಅವರಿಗೆ ಜನ್ಮಜಾತ ವಾಗಿದ್ದು, ಅವರ ಹೆಚ್ಚಿನ ಕೃತಿರಚನೆಗೆ ಅರ್ಥಾತ್ ಹರಟೆಗಳಿಗೆ ಪ್ರಮುಖ ಪ್ರೇರಣೆಯಾಗಿ ನೆಲೆಗೊಂಡಿದೆ. ಇವು ಐದೂ ಭೂಮಿಕೆಗಳ ಹಿಂದೆ ಅಖಂಡವಾದ ವ್ಯಾಸಂಗಪ್ರಿಯತೆ ಇದ್ದುದನ್ನೂ ನಾವು ಗಣಿಸತಕ್ಕದ್ದು.

ತುಸು ವಿವರಗಳನ್ನು ಕೊಡೋಣವೆ?

ಅನೇಕರಂತೆ ಪಾ.ವೆಂ. ತಮ್ಮ ಲೇಖನಿಯನ್ನು ಕವನಿಸುವುದರಿಂದಲೇ ಆರಂಭಿಸಿದರು. ಅದೂ ಹನ್ನೊಂದು ವರ್ಷದವರಿದ್ದಾಗ. ಆ ಮುಂದೆಯೂ ಕವಿತಾರಚನೆಗೆ ಮನಗೊಟ್ಟರೂ,

ನಿಯಮಿತವಾಗಿ ಬರೆಯುವುದಕ್ಕೆ ಆಗಲೇ ಇಲ್ಲ. ಆದರೆ ಕಾಲ ಸರಿದಂತೆ ಅವರ ಪ್ರಯೋಗಶೀಲ ಪ್ರವೃತ್ತಿ ಕವಿತೆಯಲ್ಲಿ ನವನವೀನ ಪ್ರಯೋಗ ಮಾಡುವುದಕ್ಕೆ ಪ್ರೇರಿಸಿತು—ಅವರ ಮೊದಲ ಕವನ ಸಂಗ್ರಹ 'ನವನೀರದ'ಕ್ಕೆ ಆಗಿನ ಮುಂಬಯಿ ಸರಕಾರದಿಂದ ಪಾರಿತೋಷಕವೂ ಲಭಿಸಿತ್ತು. ಅನಂತರ ಪ್ರಕಟವಾದ 'ಕೆಲವು ಪದ್ಯಗಳು' ಕೆಲವೇ ಇದ್ದು ಈ 'ಕೆಲವು' ಅವರ ಒಟ್ಟಿನ ಕಾವ್ಯರಚನೆಗೆ ಅನ್ವಯಿಸುತ್ತದೆ.

'ಮಂಕುತಿಮ್ಮನ' ಮಾದರಿಯಲ್ಲಿ ಅವರು 'ಪೆಂಗೋಪದೇಶ'ದ ಪದ್ಯಗಳನ್ನು ರಚಿಸಿದ್ದಾರೆ. ಹೆಚ್ಚಿನವು ಈ ಮುಂಚೆ ಪ್ರಕಟವಾಗಿಲ್ಲ. ಇದೊಂದು ಮಾದರಿ:

ಬದುಕು ಖಟರಾ ಬಸ್ಸು - ವಿಧಿಯದರ ಡ್ರೈವರನು
ಕುಡಿದು ಹೊಡೆಯುತ್ತಾನೆ ಎರಡು ಕಾಣುತ್ತ
ಗಟರವೋ ಮರವೋ ಸಂಕವೋ ಟ್ರಕ್ಕೋ ಗೋಡೆಯೋ
ಮಡಿವವನಿಗಾವುದೇನೋ ಎಲವೋ ಪೆಂಗೇ

ಅವರು ಕತೆಗಳನ್ನು ಬರೆದದ್ದಾದರೂ ಕಡಿಮೆಯೇ. ಹೆಚ್ಚಾಗಿ ಉಡುಪಿಯಲ್ಲಿದ್ದಾಗ ಬರೆದವುಗಳು. ಅವು ೧೯೩೦ರ ದಶಕದ ಕತೆಗಳಾದರೂ ವಿಶಿಷ್ಟ ಸನ್ನಿವೇಶ ಹಾಗೂ ಅನಿರೀಕ್ಷಿತ ಕೊನೆಯಿಂದ ಕೂಡಿದವುಗಳಾಗಿವೆ. ಆ ಕಾಲದಲ್ಲಿ ಬರೆದ 'ಅಪರ ಜೀವನ' ಎಂಬ ಕವಿತೆಯು ಕನ್ನಡದಲ್ಲಿ ಅತೀಂದ್ರಿಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡಂಥ ಮೊತ್ತಮೊದಲಿನ ಕತೆಯಾಗಿದೆ.

ಸಾಹಿತ್ಯಿಕ ಬರಹಗಳಲ್ಲಿ ಪಾ.ವೆಂ. ಅವರದು ಇನ್ನೊಂದು ಬಗೆಯ ವಿಶಿಷ್ಟ ಕೊಡುಗೆ, ಸಂಸ್ಕೃತ ಸಾಹಿತ್ಯ, ಹಳಗನ್ನಡ ಮತ್ತು ಭಾಷಾ ವಿಷಯಗಳಿಗೆ ಸಂಬಂಧಿಸಿದ ಅವರ ಲೇಖನಗಳು, ಮೌಲಿಕ ಅಂಶಗಳನ್ನು ಒಳಗೊಂಡಿವೆ. ಸಂಸ್ಕೃತ ಕಾವ್ಯಗಳಲ್ಲಿಯ ಪ್ರಣಯ ವಿವೇಚನೆ ಗಮನಾರ್ಹವಾಗಿದೆ. ಇತ್ತ ನೇಮಿಚಂದ್ರ, ಕುಮಾರವ್ಯಾಸರ ಬಗೆಗೆ ನವೀನ ಆಲೋಚನೆಗಳನ್ನು ಮಂಡಿಸಿದ್ದಾರೆ. ಸಮಕಾಲೀನ ಕನ್ನಡ ಸಾಹಿತ್ಯದ ಬಗ್ಗೆ ಆಳವಾಗಿ ಯೋಚಿಸಿ ಬರೆದದ್ದು ಕಂಡು ಬಾರದಿದ್ದರೂ ತಮ್ಮ ಸಮಕಾಲೀನ-ಆದರೆ ಹಿರಿಯರಾದ ಸಾಹಿತಿ, ಪತ್ರಕರ್ತರ ಬಗ್ಗೆ ಮನನೀಯವಾದ ವ್ಯಕ್ತಿಚಿತ್ರಗಳನ್ನು ಕೊಟ್ಟಿದ್ದಾರೆ. ಶಿವರಾಮ ಕಾರಂತ, ಶಂ.ಬಾ. ಜೋಶಿ ಇವರುಗಳ ವ್ಯಕ್ತಿಚಿತ್ರಣದ ಜೊತೆಗೆ ಅವರ ಕೃತಿಗಳ ಆಳವಾದ ಅಭ್ಯಾಸಮಾಡಿ ಬರೆದ ಪ್ರಬಂಧಗಳು ಆಚಾರ್ಯರ ವೈದುಷ್ಯಕ್ಕೆ ನಿದರ್ಶನಗಳಾಗಿವೆ. ಇತ್ತ ತಮ್ಮ ಸ್ನೇಹಿತರಾಗಿದ್ದ ದ.ಬಾ. ಕುಲಕರ್ಣಿಯವರ ವ್ಯಕ್ತಿಚಿತ್ರದಲ್ಲಿ ಆತ್ಮೀಯತೆ ಎದ್ದು ತೋರುವಂತಿದೆ.

ದಕ್ಷಿಣಕನ್ನಡ ಜಿಲ್ಲೆಯವರೇ ಆದ ಪಾ.ವೆಂ. ಅವರಿಗೆ ತುಳುಭಾಷೆ, ಉಡುಪಿ ಕೃಷ್ಣ ಮಠದ ಸ್ವಾಮಿಗಳು—ಮುಂತಾದ್ದರ ಬಗ್ಗೆ ಸದ್ಭಾವ ಇದ್ದುದು ಸ್ವಾಭಾವಿಕ. ಈ ಕುರಿತು ಬರೆದಿದ್ದಾರೆ. ತುಳುವಿನ ಶಿಷ್ಟ ಭಾಷೆಯಲ್ಲಿಯೂ ಅವರಿಗೆ ಪರಿಶ್ರಮವಿತ್ತು. ತುಳು ಕಾವ್ಯ 'ಭಾಗವತೋ'ದ ಮೇಲಿನ ಲೇಖ ಈ ದೃಷ್ಟಿಯಿಂದ ಗಮನಾರ್ಹವಾದುದು. ಅವರ ತುಳು

ಕವನಗಳ ಸಂಗ್ರಹವೂ ಪ್ರಕಟವಾಗಿದೆ. (ಬಯ್ಯ ಮಲ್ಲಿಗೆ). ಧರ್ಮದ ಹೆಸರಿನಲ್ಲಿ ನಡೆಯುವ ತಿಕ್ಕಾಟವನ್ನು 'ಆಯ ಬತ್ತೆ ಇಂಬೈ ಬತ್ತೆ' ಎಂಬ ಕವನದಲ್ಲಿ ಚಿತ್ರಿಸಿದ್ದು, ತುಳು ಭಾಷಿಕರ ವಿಶೇಷ ಮೆಚ್ಚುಗೆಯನ್ನು ಗಳಿಸಿದೆ.'ಕಸ್ತೂರಿ'ಗಾಗಿ ಬರೆದ ಲೇಖನಗಳು ೬೦೦ರ ಸಂಖ್ಯೆಯನ್ನು ಮೀರಿವೆ. ಅವನ್ನು ಹೀಗೆ ವರ್ಗೀಕರಿಸಬಹುದು; (ಅ) ಜಗದ್ವಿಖ್ಯಾತ ವ್ಯಕ್ತಿಗಳ ಚರಿತ್ರೆ (ಆ) ದೇಶ-ವಿದೇಶಗಳ ಪರಿಚಯ (ಇ) ಜಗತ್ತಿನಲ್ಲಿ ನಡೆದ ವೈಚಿತ್ರ್ಯಗಳು (ಈ) ಭಾರತದ ಆಗು-ಹೋಗುಗಳು (ಉ) ವೈಜ್ಞಾನಿಕ ವಿಷಯಗಳು.

ಇಷ್ಟೊಂದು ವೈವಿಧ್ಯಮಯ ಲೇಖನಗಳಿಗಾಗಿ ಪಾ.ವೆಂ. ಮಾಹಿತಿಯನ್ನು ಕಲೆಹಾಕುವಲ್ಲಿ ಅದನ್ನು ಪರಿಶೋಧಿಸಿ ವ್ಯವಸ್ಥಿತವಾಗಿ ನಿರೂಪಿಸುವಲ್ಲಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಇವನ್ನೆಲ್ಲ ಮರು-ಮುದ್ರಣ ಮಾಡಿ ಪ್ರಕಟಿಸಿದರೆ ವಿಶ್ವಕೋಶದ ಮಾದರಿಯಲ್ಲಿ ಯುವಪೀಳಿಗೆಗೆ ತುಂಬಾ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

ಅವರ ವೈಜ್ಞಾನಿಕ ಲೇಖನಗಳನ್ನು ಎತ್ತಿ ಹೇಳಬೇಕು. ಕಸ್ತೂರಿಗಾಗಿ ಇತರ ವಿಷಯಗಳ ಬಗ್ಗೆ ಲೇಖನಗಳು ವಿಪುಲವಾಗಿ ಬರುತ್ತಿದ್ದರೂ, ವಿಜ್ಞಾನದ ಬಗ್ಗೆ ಬರೆಯುವ ಶ್ರಮವನ್ನು ವಹಿಸುವವರಿರಲಿಲ್ಲ. ಆದರೆ ಆ ವಿಷಯ ಕಸ್ತೂರಿಯಲ್ಲಿ ಬರಲೇಬೇಕು. ಹೀಗಾಗಿ 'ಕಸ್ತೂರಿ' ದಿನಗಳಲ್ಲಿ ಪಾ.ವೆಂ. ಅವರ ವಾಚನದ ಬಹುಪಾಲು ವಿಜ್ಞಾನ ವಿಷಯಕ್ಕೇ ಮೀಸಲಾಗಿದ್ದಿತು. ಅವರೇನೂ ವಿಜ್ಞಾನವನ್ನು ಕಾಲೇಜು ಮಟ್ಟದಲ್ಲಿ ಓದಿದವರಲ್ಲ. ಅಂಥ ಬರಹಗಳನ್ನು ಇಂಗ್ಲಿಷ್‌ನಲ್ಲಿ ಓದಿ ತಾವು ಅದನ್ನು ಮೊದಲಿಗೆ ಅರ್ಥಮಾಡಿಕೊಳ್ಳಬೇಕಿತ್ತು. ಅದರ ವಿಷಯ ಪೂರ್ತತೆಗೆ ಬೇರೆ ಲೇಖನಗಳನ್ನು ಓದಬೇಕಿತ್ತು; ಕನ್ನಡ ಪಾರಿಭಾಷಿಕ ಪದಗಳನ್ನು ಸೃಷ್ಟಿಸಿಕೊಂಡು ಆಮೇಲೆ ಕನ್ನಡ ಲೇಖವಾಗಿ ಸಿದ್ಧಗೊಳಿಸಬೇಕು. ಪಾ.ವೆಂ. ಮೊದಲ ಸಂಚಿಕೆಯಿಂದ ಹಿಡಿದು ೧೮ ವರ್ಷಗಳ ಕಾಲ ಹಾಗೆ ಮಾಡಿದ್ದಾರೆ. ಆ ಲೆಕ್ಕದಲ್ಲಿ ಅವರೊಬ್ಬ ಕನ್ನಡದ ಗಣ್ಯ ವಿಜ್ಞಾನ ಲೇಖಕರೆಂದೇ ಪರಿಗಣಿಸತಕ್ಕದ್ದು.

ಅವರು ಪ್ರಾಯಶಃ ವಿಜ್ಞಾನದ ಎಲ್ಲ ಪ್ರಕಾರಗಳಲ್ಲಿಯೂ ಕೈಯಾಡಿಸಿದ್ದಾರೆ; ಖಗೋಳ ಶಾಸ್ತ್ರ, ಭೂಭೌತಿಕ, ಸಸ್ಯ-ಪ್ರಾಣಿಗಳ ಪ್ರಪಂಚ, ಜೊತೆಗೆ ಮನೋವಿಜ್ಞಾನ, ಲೈಂಗಿಕ ವಿಜ್ಞಾನಗಳೂ ಅವರ ಗಮನವನ್ನು ಸೆಳೆದಿವೆ. ಆದರೆ ಈ ವಿಜ್ಞಾನ ಲೇಖನ ಸಮುದಾಯದಲ್ಲಿ ವೈದ್ಯಕೀಯಕ್ಕೆ ಹೆಚ್ಚಿನ ಪಾಲು ಸಂದಿದೆ. ರೋಗಗಳ ಸ್ವರೂಪವನ್ನು ತಿಳಿದು ಜನ ಆರೋಗ್ಯವಂತರಾಗಿ ಬಾಳಬೇಕೆಂಬ ಸದಾಶಯವನ್ನು ನಾವು ಅಲ್ಲಿ ಗುರುತಿಸಬಹುದು. ಕೆಲವು ಪ್ರಸಿದ್ಧ ವಿಜ್ಞಾನಿಗಳ ಸಾಧನೆಯನ್ನು ವಿವರಿಸುವ ಚರಿತ್ರೆಗಳನ್ನೂ ಬರೆದಿದ್ದಾರೆ.

ಇನ್ನೀಗ ಹರಟೆಗಳು. ಅವರ ಒಟ್ಟಿನ ಕೃತಿರಚನೆಯ ದೊಡ್ಡ ಮೊತ್ತ 'ಲಾಂಗೂಲಾ ಚಾರ್ಯ' ಹೆಸರಿನ ಹರಟೆಗಳದ್ದೇ. ಮುನ್ನೂರನ್ನು ಮಿಕ್ಕಿದ ಇಷ್ಟೊಂದು ಹರಟೆಗಳನ್ನು ಕನ್ನಡದಲ್ಲಿ ಬೇರಾರೂ ಬರೆದಂತಿಲ್ಲ. ಆದರೇನು, ವಿಷಯ ಮಂಡನೆಯ ಅಥವಾ

ಪದಗುಚ್ಛದ ಪುನರಾವರ್ತನೆ ಕಂಡು ಬರುವುದಿಲ್ಲ. (ಉದಾಹರಣೆಗೆ 'ಕತ್ತೆ'ಯ ನಿಮಿತ್ತದ ಗಾರ್ದಭಗಾನ ಮತ್ತು ಗಾರ್ದಭೋಪಾಖ್ಯಾನ ಎಂಬ ಎರಡು ಹರಟೆಗಳು).

ಹರಟೆ ಬರೆಯುವುದಕ್ಕೆ ಏನಾದರೊಂದು ಪ್ರಕೋಪನ (provocation) ಬೇಕು. ಒಂದು ಯಃಕಶ್ಚಿತ ಘಟನೆ, ಸಣ್ಣ ವಿಚಾರ ಇಲ್ಲವೆ ಆಡಿದ ಒಂದು ಮಾತು—ಇಷ್ಟರ ಮಟ್ಟಿಗಿನ ಪ್ರಕೋಪನ ಅವರಿಗೆ ಸಾಕಿತ್ತು. ಹಾಗೆ ಆರಂಭಿಸಿ ತಮ್ಮ ಬಹುಶ್ರುತತ್ವದ ಬೆಂಬಲದಿಂದ ವಿಷಯವನ್ನು ವ್ಯಂಗ್ಯದ ಧಾಟಿಯಲ್ಲಿಯೇ ಮುಂದುವರಿಸುತ್ತಿದ್ದರು.

'ಕಸ್ತೂರಿ' ನಿಮಿತ್ತದ ಅವರ ಪತ್ರಿಕಾ ಧರ್ಮವನ್ನು ತುಸು ವಿವರಿಸಬೇಕು. ಈಗಿನ ಪತ್ರಿಕಾವೃತ್ತಿಯೆಂದರೆ ತತ್ಕಾಲದ ಸಂಚಿಕೆಗೆ ಏನು ಬೇಕೋ ಅಷ್ಟನ್ನು ಸೆಳೆದುಕೊಂಡು, ಎಷ್ಟು ಬೇಕೋ ಅಷ್ಟಕ್ಕೇನೇ ಗೀಚುವುದನ್ನು ಮುಗಿಸಿ, ಆಮೇಲೆ ಆ ಲೇಖವನ್ನು, (ಆ ಲೇಖಕನನ್ನೂ) ಮರೆತುಬಿಡಬಹುದಾಗಿದೆ. ಪಾ.ವೆಂ. ಅವರಿಗೆ ಅದೊಂದು ಶ್ರದ್ಧೆಯಿಂದ ಮಾಡಬೇಕಾದ ಧರ್ಮಕಾರ್ಯವೇ ಎಂಬಂತಿತ್ತು. ವಿಷಯವೊಂದರ ಬಗ್ಗೆ ಕುತೂಹಲದ ಆಸಕ್ತಿ ಮೂಡಿತೆಂದರೆ ತಾವು ಪೂರ್ವಭಾವಿಯಾಗಿ ತಿಳಿದುಕೊಂಡು ಸೂಕ್ತ ಲೇಖಕರನ್ನು ಹುಡುಕುತ್ತಿದ್ದರು. ಅವರಿಂದ ಬರೆಯಿಸುವುದು, ಅದರ ಸುಧಾರಣೆಗೆ ಸಲಹೆ ಕೊಟ್ಟು ಮತ್ತೆ ಬರೆಯಿಸುವುದು; ಅನಂತರವೇ ಅದನ್ನು ಪ್ರಕಟಿಸುವುದಾಗಬೇಕು. ಈ ಸಂದರ್ಭದಲ್ಲಿ ಪಾ.ವೆಂ. ಹಿರಿ-ಕಿರಿಯರೆನ್ನದೆ ಸಂತತವಾದ ಪತ್ರವ್ಯವಹಾರ ಮಾಡುತ್ತಿದ್ದರು. ಹಳೆಯ 'ಕಸ್ತೂರಿ'ಯ ಲೇಖಕರು ಯಾರನ್ನು ಕೇಳಿದರೂ, ಪಾ.ವೆಂ. ಅವರ ಈ ವಿಶೇಷತೆಯನ್ನು ಬಾಯ್ತುಂಬ ಹೊಗಳುತ್ತಾರೆ.

ಕಸ್ತೂರಿ ವಸ್ತುತಃ ಡೈಜೆಸ್ಟ್ ಪತ್ರಿಕೆ. ನಾನಾ ಕಡೆಗಳಿಂದ ಮಧುವನ್ನು ತಂದು ಇರಿಸಿದ ಜೇನ್ಗೂಡಿನ ಹಾಗೆ ಪಾ.ವೆಂ. ಅವರ ಮೇಲ್ಕಂಡ ಪತ್ರಿಕಾಧರ್ಮದಿಂದಾಗಿ ಆ ಜೇನುತುಪ್ಪ ತರುಣರಿಂದ ಮುದುಕರವರೆಗೆ ಸರ್ವಗ್ರಾಹ್ಯವಾಯಿತು.

ಈ 'ಕಸ್ತೂರಿ' ಪತ್ರಿಕೆಯೇ ಅವರ ಶಬ್ದಾಸಕ್ತಿಗೆ ಪುಟಕೊಟ್ಟಿತು. ಮುದ್ದಣ, ಗೋವಿಂದ ಪೈಗಳಂಥ ಶಬ್ದಾಸಕ್ತರು ಬಾಳಿದ ಪ್ರದೇಶದಿಂದ ಬಂದವರಾಗಿ, ಅವರಲ್ಲಿ ಈ ಪ್ರವೃತ್ತಿ ಮೊದಲಿನಿಂದಲೇ ಇದ್ದಿರಬೇಕು. ಕಸ್ತೂರಿಯ ಆರಂಭದ ಸಂಚಿಕೆಗಳಲ್ಲಿ ಕ್ರಮವಾಗಿ ಬರತೊಡಗಿದ 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ಎಂಬುದರಲ್ಲಿ ಅನಂತರ ಬರತೊಡಗಿದ 'ಪದ-ಅರ್ಥ ಚಿಂತಾಮಣಿ'ಯ ನಿಯಮಿತ ವಿವೇಚನೆಯಲ್ಲಿ ಅದು ಸುವ್ಯಕ್ತವಾಗಿದೆ.

ಶಬ್ದಗಳ ಪೂರ್ವಾಪರ, ಅದರ ಜ್ಞಾತಿಪದಗಳು, ಅವುಗಳಿಂದ ತಿಳಿದುಬರುವ ಸಾಂಸ್ಕೃತಿಕ ಅಂಶಗಳು—ಇವುಗಳ ಆಳಕ್ಕೆ ಇಳಿದು 'ಚಿಂತಾಮಣಿ' ರತ್ನವನ್ನೇ ಹೊರತೆಗೆದರೆನ್ನ ಬೇಕು. ಇಲ್ಲಿ ಶಬ್ದಗಳ ಗಂಟನ್ನು ಬಿಚ್ಚುವುದಲ್ಲದೆ ಅನ್ಯ ಭಾಷಾ ಶಬ್ದಗಳ ನಂಟನ್ನು ತೋರ್ಪಡಿಸಿದ್ದು ಕಂಡುಬರುತ್ತದೆ. ವೈದುಷ್ಯದಿಂದಾಗಿ ಕಿಟೆಲ್, ಡಿ.ಎಲ್. ನರಸಿಂಹಾಚಾರ್ಯ ಮತ್ತು ಜಿ. ವೆಂಕಟಸುಬ್ಬಯ್ಯ—ಇವರ ಸಾಲಿನಲ್ಲಿಯೇ ಪಾ.ವೆಂ. ಅವರನ್ನೂ ಹೆಸರಿಸ ಬೇಕಾಗುವುದು.

ಪಾ.ವೆಂ. ಆಚಾರ್ಯರು ಕಲಿತದ್ದು ಕಡಿಮೆ; ಓದಿದ್ದೇ ಜಾಸ್ತಿ. ಅವರ ಈ ಓದು ಬಿಡುವರಿಯದ್ದು. ಅದೇನೂ ವ್ಯವಸ್ಥಿತವಾದದ್ದಲ್ಲ. ಆದರೆ ಓದಿದ್ದನ್ನು ತಮ್ಮ ಬೌದ್ಧಿಕ ಜರಡಿಯಲ್ಲಿ ಹಿಡಿದು ಗಟ್ಟಿಯಾದ ಆಲೋಚನೆಗಳನ್ನಷ್ಟೇ ಉಳಿಸಿಕೊಂಡರು. ಇನ್ನು ಸಮಕಾಲೀನ ಘಟನೆಗಳಿದ್ದರೆ ತೀವ್ರ ಪ್ರಭಾವಕ್ಕೊಳಗಾಗುತ್ತಿದ್ದರು. ಅನಂತರದ ತಮ್ಮ ಪ್ರತಿಕ್ರಿಯೆಯನ್ನು, ಹಿಂದು ಮುಂದುಗಳನ್ನು ಪರಾಮರ್ಶಿಸಿ, ಸಾರಾಸಾರ ವಿವೇಕದಿಂದ ನಿರೂಪಿಸುತ್ತಿದ್ದರು. ಈ ಕ್ರಮದಲ್ಲಿ ಸ್ವಂತದ ಅಭಿರುಚಿ ಮತ್ತು ಸ್ವತಂತ್ರ ದೃಷ್ಟಿ—ಇವನ್ನು ತಮ್ಮ ಬದುಕು ಮತ್ತು ಬರಹಗಳಲ್ಲಿ ಉಳಿಸಿಕೊಂಡಿದ್ದರು.

ಪಾ.ವೆಂ. ಅವರ ಇನ್ನೊಂದು ವಿಶೇಷತೆ ಎಂದರೆ ಹತ್ತಾರು ವಿಷಯಗಳಲ್ಲಿ ಏಕ ಕಾಲಕ್ಕೆ ಚಿಂತನೆ ನಡೆಸುತ್ತಿದ್ದುದು. ಬರಹವಂತೂ ಸರಿಯೇ, ಅವರೊಡನೆ ಮಾತಿಗೆ ನಿಂತಾಗಲೂ ಇದು ಮನವರಿಕೆಯಾಗುವಂತಿತ್ತು. ವಿಧ ವಿಧವಾದ, ಎಷ್ಟೋ ಸಲ ಒಂದಕ್ಕೊಂದು ಸಂಬಂಧವಿಲ್ಲ, ಎನಿಸುವಂತಹ ವಿಚಾರಗಳು ಕಾರಂಜಿಯ ನೀರಿನಂತೆ ಚಿಮ್ಮುತ್ತಿದ್ದವು. ಸ್ಫುರಣ—ಎನ್ನುವುದು ಹೀಗೇ ಕಾಣಿಸಿಕೊಳ್ಳುವುದಲ್ಲವೆ. ಈ ಸ್ಫುರಣವೇ ನವನವೋನ್ಮೇಷಶಾಲಿನಿಯಾದ ಪ್ರತಿಭೆ-ಎನಿಸಿಕೊಳ್ಳುತ್ತದೆ. ಇಂಥ ಪ್ರತಿಭೆ ಬೇಂದ್ರೆಯವರಲ್ಲಿ ಇದ್ದಿತು. ಅವರ ಅನಂತರ ಹೆಸರಿಸಬೇಕಾದವರು ಪಾ.ವೆಂ. ಆಚಾರ್ಯರೇ.

**ಶ್ರೀನಿವಾಸ ಹಾವನೂರ**

# ಪರಿವಿಡಿ

## ಭಾಗ – 1: ಬ್ರಾಹ್ಮಣ್ಯ


- ಬ್ರಾಹ್ಮಣರೇನು ಮಾಡಬೇಕು? 19
- —ಒಂದು ಪ್ರತಿಕ್ರಿಯೆ 27
- —ಪ್ರತಿಕ್ರಿಯೆಗಳಿಗೆ ಉತ್ತರ 29
- ಗೊಡ್ಡು ಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕ ಮತ (ಮತ್ತೊಂದು ಪ್ರತಿಕ್ರಿಯೆಗೆ ಉತ್ತರ) 34
- ಹಿಂದಿಲ್ಲ ಸ್ವಾಮಿ ಮುಂದಿಲ್ಲ (ಪಾವೆಂ ಅವರ ಹರಟೆಯ ರೂಪದ ಪ್ರತಿಕ್ರಿಯೆ) 44


## ಭಾಗ – 2: ಧಾರ್ಮಿಕ ನೆಲೆಯಲ್ಲಿ


- ನನ್ನ ದೃಷ್ಟಿಯಲ್ಲಿ ಧರ್ಮ 49
- ಗಣಪತಿಯ ಮೂಲಗಳು 53
- ದೈವ 'ನೊಂದೆ' ಎಂದಿತು. ಅದಕ್ಕೇ 'ಮಹಾಭಾರತ'ವಾಯಿತು 55
- ಧರ್ಮಸಂಕಟ 59
- ಶಾಸ್ತ್ರವನ್ನು ಏಕೆ ಪಾಲಿಸಬೇಕು? 60
- ಪ್ರತ್ಯಕ್ಷ; ಶಾಸ್ತ್ರ 63
- ಮತಗಳು: ಅವು ಏನು ಮಾಡಬಲ್ಲವು? 65


## ಭಾಗ – 3: ಚಿಂತನಪರ


- ಜೀವನಕ್ಕೆ ಅರ್ಥವುಂಟೆ? 75
- ಬುದ್ಧಿಜೀವಿ, ಸಮಾಜ ಮತ್ತು ಸಾಹಿತ್ಯ 76

- ❑ ಮಾನವ ಪ್ರವೃತ್ತಿ ಮತ್ತು ಮೌಲ್ಯಗಳು 84
- ❑ ಸುಖ ಬೇಕಾದರೆ ಪ್ರೀತಿ ಬೇಕು 100
- ❑ ಬೇಕು - ಪಾಪ ಪ್ರಜ್ಞೆ 105
- ❑ ಸ್ವಾರ್ಥ-ತ್ಯಾಗ? ಎಲ್ಲ ಲೊಳಲೊಟ್ಟೆಯಂತೆ 108

## ಭಾಗ – 4: ವೈಚಾರಿಕ

- ❑ ಪ್ರಜ್ಞಾವಾದ: ದಿಟ ಮತ್ತು ಸಟೆ 119
- ❑ ಪ್ರಾಮಾಣಿಕತೆಯಲ್ಲಿ ಸುಖವಿದೆ 121
- ❑ ಕೃತಜ್ಞತೆ ಎಂಬ ಸದ್ಗುಣ 126
- ❑ ಅಹಿಂಸೆ, ಶಾಕಾಹಾರ ಇತ್ಯಾದಿ 131
- ❑ ಸಹಿಷ್ಣುತೆ 136
- ❑ ಆಜ್ಞಾಪಾಲನೆ ಮನುಷ್ಯ ಸ್ವಭಾವವೆ? 141
- ❑ 'ನಾನು' ಹೋದರೆ ಸ್ವರ್ಗಕ್ಕೆ ಹೋಗಬಹುದು 146

## ಭಾಗ – 5: ಶೈಕ್ಷಣಿಕ

- ❑ ಶಿಕ್ಷಣ ಮತ್ತು ಜೀವನಮೌಲ್ಯಗಳು 153
- ❑ ಉಚ್ಚಶಿಕ್ಷಣ - ಒಂದು ಪ್ರತಿಕ್ರಿಯೆ 164
- ❑ ಸಂಸ್ಕೃತ ಶಿಕ್ಷಣ: ಹೊಸ ರೀತಿ ಬೇಕು 166
- ❑ ಯುವಕರೇನು ಮಾಡಬೇಕು? 171
- ❑ ವಿದ್ಯಾರ್ಥಿಗಳು ಯೋಚಿಸಬೇಕು 178
- ❑ ನಮ್ಮ ಮಕ್ಕಳನ್ನು ನಾವು ಹೀಗೆ ಬಿಡಬೇಕೆ? 184
- ❑ ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ಮನೋವೃತ್ತಿಗಳು 188

# ಭಾಗ - 1

# ಬ್ರಾಹ್ಮಣ್ಯ

# ಬ್ರಾಹ್ಮಣರೇನು ಮಾಡಬೇಕು?

(ಜ್ವಲಂತ ಸಮಸ್ಯೆಯ ನಿರ್ವಿಕಾರ ವಿವೇಚನೆ)

ಹಲವು ವರ್ಷಗಳಿಂದ ಬ್ರಾಹ್ಮಣ ಆಡಳಿತದಲ್ಲಿರುವ ವಿದ್ಯಾಸಂಸ್ಥೆಯೊಂದರ ಸಮಾರಂಭದಲ್ಲಿ ಮಾತಾಡುತ್ತ ಇತ್ತೀಚೆಗೆ ದಲಿತ ಸಾಹಿತ್ಯ ಪ್ರತಿಪಾದಕ ಸಾಹಿತಿಗಳೊಬ್ಬರು, ದೇಶದಲ್ಲಿ ಎಲ್ಲರೂ ಬ್ರಾಹ್ಮಣರಾಗಬೇಕೆಂದು ಪ್ರತಿಪಾದಿಸಿದರು. ಅದು ಪತ್ರಿಕೆಗಳಲ್ಲಿ ವರದಿಯಾಯಿತು. ಅದನ್ನೇ ನೆವಮಾಡಿ ಬ್ರಾಹ್ಮಣ ವಿರೋಧಿ ಹೇಳಿಕೆಗಳನ್ನು ಒಳಗೊಂಡ ಅನೇಕ ಪತ್ರಗಳು ಪತ್ರಿಕೆಯಲ್ಲಿ ಪ್ರಕಟವಾದವು. ಬರೆದವರಲ್ಲಿ ಹಲವರು ಸಾಹಿತಿಗಳಾಗಿದ್ದರು. ವಾಸ್ತವಿಕವಾಗಿ ಕಳೆದ ಒಂದು ದಶಕದಿಂದ ಸಾಹಿತಿಗಳ ಒಂದು ದೊಡ್ಡ ಗುಂಪು ಬ್ರಾಹ್ಮಣ ವಿರೋಧವನ್ನು ತನ್ನ ಚಟುವಟಿಕೆಯ ಮುಖ್ಯಾಂಶವಾಗಿ ಮಾಡಿಕೊಂಡಿದೆ. ಆಗಾಗ್ಗೆ ಒಂದಲ್ಲ ಒಂದು ನೆವದಿಂದ ಬ್ರಾಹ್ಮಣರ ಮೇಲೆ ಏನಾದರೊಂದು ಕೂಗೆಬ್ಬಿಸುವುದು ನಡೆದೇ ಇದೆ. ಬ್ರಾಹ್ಮಣೇತರ ಸಾಹಿತಿಗಳಲ್ಲಿ ಮತ್ತು ಸಾಹಿತಿಗಳಲ್ಲದವರಲ್ಲಿ ಕೆಲವರಾದರೂ ಈ ಬಗೆಯ ಪ್ರಚಾರವನ್ನು ವಿರೋಧಿಸುತ್ತ ಬಂದಿದ್ದಾರೆಂಬುದನ್ನು ಇಲ್ಲಿ ಹೇಳಬೇಕು. ಅಂಥವರನ್ನು ಸಾಮಾನ್ಯವಾಗಿ ಬ್ರಾಹ್ಮಣರ ಚೇಲಾಗಳೆಂದೋ, ಪ್ರತಿಗಾಮಿಗಳೆಂದೋ ನಿಂದಿಸಲಾಗುತ್ತದೆ. ಖಾಸಗಿಯಲ್ಲಿ ಎಷ್ಟು ರೋಷ ಪ್ರಕಟಿಸಿದರೂ ಬಹಿರಂಗದಲ್ಲಿ ಈ ಪ್ರಶ್ನೆಯನ್ನು ಕುರಿತು ತಮ್ಮ ಅಭಿಪ್ರಾಯಗಳನ್ನಾಗಲಿ ಬ್ರಾಹ್ಮಣರ ಸಮರ್ಥನೆಯನ್ನಾಗಲೀ ಪ್ರಕಟಮಾಡಿದ ಬ್ರಾಹ್ಮಣರು ವಿರಳ.

೧೯೨೦ರ ಸುತ್ತಮುತ್ತ ಮಹಾರಾಷ್ಟ್ರದಲ್ಲಿಯೂ ಮದ್ರಾಸ್ ಪ್ರಾಂತದಲ್ಲಿಯೂ ತಲೆಯೆತ್ತಿ ಕರ್ನಾಟಕದಲ್ಲಿಯೂ ಹಬ್ಬಿದ ಬ್ರಾಹ್ಮಣೇತರ ಚಳವಳಿ ಬಹುತರವಾಗಿ ಮಧ್ಯಮ ಜಾತಿಗಳ ಬ್ರಾಹ್ಮಣೇತರ ರಾಜಕೀಯ ನಾಯಕರ ಮತ್ತು ಸುಶಿಕ್ಷಿತರ ಆಂದೋಲನವಾಗಿತ್ತು. ಸಾಹಿತಿಗಳು ಅದರಲ್ಲಿ ಪಾಲುಗೊಂಡಿದ್ದು ಅಪರೂಪ. ಆದರೆ ಈಗ ಸಾಹಿತಿಗಳ ಮತ್ತು ಬೌದ್ಧಿಕರ ಆಂದೋಲನವಾಗುತ್ತಿರುವುದು ವಿಶೇಷ. ಆ ಚಳವಳಿಗೆ ಸರಕಾರಿ ನೌಕರಿಗಳಲ್ಲಿ ಬ್ರಾಹ್ಮಣರಿಗಿದ್ದ ಪ್ರಾಧಾನ್ಯವನ್ನು ಅಳಿಸಿ ಹಾಕಿ ಸಂಖ್ಯಾಬಲದಲ್ಲಿ ಹೆಚ್ಚಾಗಿದ್ದರೂ ನೌಕರಿಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲದ ಬ್ರಾಹ್ಮಣೇತರರಿಗೆ ಅಂಥಾ ಪ್ರಾತಿನಿಧ್ಯ ದೊರಕಿಸಿಕೊಳ್ಳುವುದು ಉದ್ದೇಶವಾಗಿತ್ತು. ಇದಕ್ಕಾಗಿ ಅರ್ಹತಾ ನಿಯಮಗಳನ್ನು ಸಡಿಲಿಸಬೇಕೆಂಬುದೇ ಮೊದಲಾದ ಸ್ಪಷ್ಟ ಬೇಡಿಕೆಗಳು ಮಂಡಿಸಲ್ಪಟ್ಟಿದ್ದವು. ರಾಜಕೀಯ ಒತ್ತಡಗಳ ಪರಿಣಾಮವಾಗಿ ಈ

ಬೇಡಿಕೆಗಳು ಬಹಳ ಮಟ್ಟಿಗೆ ಸ್ವೀಕರಿಸಲ್ಪಟ್ಟು, ಬ್ರಾಹ್ಮಣೇತರ ವರ್ಗಗಳಲ್ಲಿ ಹೆಚ್ಚು ಮುಂದುವರಿದ ಜಾತಿಗಳು ಮೇಲೆ ಬರುವುದು ಸಾಧ್ಯವಾಯಿತು.

ಹೀಗೆ ಒಂದೆಡೆಗೆ ಸರಕಾರಿ ನೌಕರಿಗಳಲ್ಲಿ ತಮಗಿದ್ದ ಪ್ರಾಧಾನ್ಯವನ್ನು ಕಳೆದುಕೊಳ್ಳುವದರೊಡನೆ ಸ್ವಾತಂತ್ರ್ಯಾನಂತರದ ಭೂಸುಧಾರಣೆಗಳಲ್ಲಿ ದಕ್ಷಿಣ ಭಾರತದಲ್ಲಿ ಬ್ರಾಹ್ಮಣರು ಬಹುತರವಾಗಿ ತಮ್ಮ ಕೃಷಿಭೂಮಿಗಳಿಗೆ ಎರವಾಗಿ ಗ್ರಾಮಗಳಲ್ಲಿ ಇದ್ದು ಬಿದ್ದ ಸ್ಥಾನಮಾನಕ್ಕೂ ಎರವಾದರು. ಅವರು ಎಲ್ಲ ಜಾತಿಗಳಿಗಿಂತ ಹೆಚ್ಚು ನಗರೀಕೃತರಾಗಿ ಕೃಷಿಭೂಮಿಯ ವಿಷಯದಲ್ಲಿ ದೂರವಾಸಿ ಭೂಮಾಲೀಕರಾಗಿದ್ದರಿಂದ ಅವರಿಗೆ ಸ್ವಾಭಾವಿಕವಾಗಿಯೆ ಭೂಸುಧಾರಣೆಯಲ್ಲಿ ಹೆಚ್ಚು ಪೆಟ್ಟು ಬಿತ್ತು ಎನ್ನುವಾ. ಸಂಖ್ಯಾಬಲದಲ್ಲಿ ದಕ್ಷಿಣದಲ್ಲಿ ಎಲ್ಲಿಯೂ ಶೇಕಡಾ ೫ನ್ನು ಮೀರದ ಬ್ರಾಹ್ಮಣರಿಗೆ ಪ್ರಜಾತಂತ್ರಾತ್ಮಕ ಆಡಳಿತದಲ್ಲಿ ನಿರ್ಣಾಯಕ ಸ್ಥಾನಗಳಿಂದ ಉಚ್ಚಾಟನೆಯಾಯಿತು. ದಕ್ಷಿಣದ ರಾಜ್ಯಗಳಲ್ಲಿ ಬ್ರಾಹ್ಮಣರಿಗೆ ಯಾವ ಮಂತ್ರಿ ಸಂಪುಟದಲ್ಲಿಯೂ ಸ್ಥಾನವಿಲ್ಲದೇ ದಶಕಗಳೇ ಕಳೆದದ್ದುಂಟು.

ಬ್ರಾಹ್ಮಣರ ಅನೇಕ 'ಹಲ್ಲುಗಳು' ಉದುರಿಸಲ್ಪಟ್ಟು ಅವರು ಅಶಕ್ತ ಸ್ಥಿತಿಗಿಳಿಸಲ್ಪಟ್ಟ ಕಾಲದಲ್ಲಿ ಬ್ರಾಹ್ಮಣ ವಿರೋಧದ ಕಡಾಯಿ ಆರತೊಡಗಬೇಕಿತ್ತು. ಆದರೆ ಹಾಗಾಗದೆ ಅದನ್ನು ಮತ್ತೆ ಹೊತ್ತಿಸುವ ಪ್ರಯತ್ನ, ಅದೂ ಸಾಹಿತಿಗಳಿಂದ ಪ್ರಾರಂಭವಾದದ್ದು ಸೋಜಿಗದ್ದಾಗಿದೆ.

ಈ ಹೊಸ ಬ್ರಾಹ್ಮಣ ವಿರೋಧ ಸತ್ರದಲ್ಲಿ ಕೆಲವೊಂದು ಸ್ವಾರಸ್ಯಾಂಶಗಳು ಅಡಗಿವೆ. ಜಾತಿಯನ್ನೆತ್ತಿ ಆಡುವುದು ನನಗೂ ಸಂತೋಷದ ಕೃತ್ಯವಲ್ಲ. ಆದರೆ ಬ್ರಾಹ್ಮಣ ಜಾತಿಯನ್ನು ಕುರಿತು ಆಡುವವರು ಜಾತಿಯನ್ನು ಗಮನಿಸಿ ಆಡುತ್ತಿರುವುದರಿಂದ ನಾನೂ ಒಂದು ಕ್ಷಣ ಆ ಮಾರ್ಗವನ್ನು ಅನುಸರಿಸಿದರೆ ಅಪರಾಧವಾಗಲಿಕ್ಕಿಲ್ಲ. ಈ ಬ್ರಾಹ್ಮಣ ವಿರೋಧದ ಆಂದೋಲನದಲ್ಲಿ ಮುಂದಾಳ್ತನ ವಹಿಸಿದವರ ಜಾತಿಗಳನ್ನು ನೋಡಿದರೆ ಅವರಲ್ಲಿ ಹೆಚ್ಚಿನವರು ಬ್ರಾಹ್ಮಣೇತರರ ಹಕ್ಕುಗಳನ್ನು ಎತ್ತಿ ಹಿಡಿದು ೧೯೨೦ರಿಂದಲೂ ಹೋರಾಡುತ್ತ ಬಂದ, ಅದರಿಂದ ಲಾಭ ಪಡೆದ ಮಧ್ಯಮ ಜಾತಿಗಳ ಬ್ರಾಹ್ಮಣೇತರರು. ಎಲ್ಲ ತರಹದ ನೌಕರಿಗಳಲ್ಲಿ ಅವರ ಪಾಲು ಒಂದೇ ಸಮನೆ ಹೆಚ್ಚುತ್ತ ಬಂದಿದೆ. ಭೂಸುಧಾರಣೆಗಳಿಂದಾಗಿ ಕಡಿಮೆ ಪೆಟ್ಟು ತಿಂದ ಜಾತಿಗಳೂ ಇವೇ ಆಗಿವೆ. ಈ ವರ್ಗಗಳೇ ಬ್ರಾಹ್ಮಣರನ್ನು ಅಪ್ಪಳಿಸಿದ ನಂತರದ ಭೂಸುಧಾರಣೆಯ ಹೆದ್ದೆರೆಗಳು ಅನಿವಾರ್ಯವಾಗಿ ತಮ್ಮ ಜಾತಿಯವರ ಜಮೀನುಗಳನ್ನೂ ಕೊಚ್ಚಿಕೊಂಡು ಹೋಗುವುದನ್ನು ತಡೆಯಲು ಬಯಸಿ ಆ ಸುಧಾರಣೆಗಳ ಮುಂದಿನ ಹೆಜ್ಜೆಗಳನ್ನು ಹತ್ತಿಕ್ಕಲು ಯತ್ನಿಸಿದವರೆಂದೂ ಇಲ್ಲಿ ಗಮನಿಸಬೇಕು. ಈ ವರ್ಗದ ಜನರೇ, ಅಂದರೆ ೧೯೨೦ರ ದಶಕದಲ್ಲಿ ಜಾತಿ ಆಧಾರದ ಹಿಂದುಳಿಕೆಯನ್ನಾಧರಿಸಿ ಎಲ್ಲ ರಂಗಗಳಲ್ಲಿ ಪ್ರಾಶಸ್ತ್ಯ ಬೇಡಿದವರೇ, ಈಗ ಜಾತಿ ಆಧಾರದ ಮೇಲೆ ತಮಗಿಂತ ಹಿಂದುಳಿದವರಿಗೆ ಪ್ರಾಧಾನ್ಯ ಕೊಡುವ ಯತ್ನಗಳನ್ನು ಬಲವಾಗಿ ವಿರೋಧಿಸುವವರಾಗಿದ್ದಾರೆ.

ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಬಹುಜನ ಸಮಾಜಗಳ ಹೆಸರಲ್ಲಿ ಅಧಿಕಾರ

ನಡೆಸಿದ ಈ ವರ್ಗವೇ ಅಧಿಕಾರದ ಫಲಗಳನ್ನು ಹೆಚ್ಚಾಗಿ ಉಪಭೋಗಿಸಿ ಆರ್ಥಿಕ ಸಾಮಾಜಿಕ ಉತ್ಕರ್ಷ ಸಾಧಿಸಿಕೊಂಡದ್ದು. ಈಗ ಅವರಿಗಿಂತ ಕೆಳಗಿರುವವರು ಎಚ್ಚೆತ್ತು ತಮಗೆ ಸಿಗಬೇಕಾದ್ದು ಸಿಗಲಿಲ್ಲವೆಂದು ಕೋಪಿಸತೊಡಗಿದ್ದಾರೆ. ಈ ಅವರ ಸಿಟ್ಟನ್ನು ತಮ್ಮಿಂದ ಅರ್ಧ ಶತಮಾನದಿಂದ ಅನಿಷ್ಟಕ್ಕೆ ಶನೀಶ್ವರ ಎನಿಸಿರುವ ಬ್ರಾಹ್ಮಣ ಜಾತಿಯ ಮೇಲೆ ತಿರುಗಿಸಿಬಿಡುವ ಹೇತುವಿನಿಂದ ಈ ಹೊಸ ಬ್ರಾಹ್ಮಣ ವಿರೋಧ ಆಂದೋಲನ ಪ್ರೇರಿತವಾಗಿದೆಯೆಂದು ಕಾಣುತ್ತದೆ. ಇಂಥ ಆರೋಪ ಮಾಡುವುದು ಸಂತೋಷಕರವಾದದ್ದಲ್ಲ. ಆದರೆ ಬ್ರಾಹ್ಮಣರ ಮೇಲೆ ನಿಷ್ಕಾರಣ ಪ್ರಹಾರ ಮಾಡುವುದನ್ನೇ ಉದ್ಯೋಗ ಮಾಡಿಕೊಂಡಿರುವ ಮಧ್ಯಮ ಜಾತಿಗಳ ಈ ಸಾಹಿತಿಗಳ ಕೃತಿಗಳನ್ನು ಯಾವ ರೀತಿ ಅರ್ಥೈಸಲು ಸಾಧ್ಯವಿದೆಯೆಂದು ತೋರಿಸಲು ಇದನ್ನು ಕುರಿತಾಗಿ ಹೇಳಬೇಕಾಗಿದೆ.

ಈ ದೇಶದಲ್ಲಿ ಕಳೆದ ಮೂರೋ ಐದೋ ಸಾವಿರ ವರ್ಷಗಳಿಂದ (ಭಾರತೀಯ ಇತಿಹಾಸದ ಪ್ರಾಚೀನತೆಯ ಬಗ್ಗೆ ಅವರವರ ಕಲ್ಪನೆಗಳನ್ನು ಅನುಸರಿಸಿ) ಆದ ತಪ್ಪುತಡೆ ಅನಾಹುತಗಳಿಗೆಲ್ಲ ಬ್ರಾಹ್ಮಣರನ್ನು ಜವಾಬ್ದಾರಿ ಹಿಡಿಯುವುದು ಇವರ ಫ್ಯಾಶನ್ ಆಗಿಬಿಟ್ಟಿದೆ. ಜಾತಿ ಪದ್ಧತಿಯನ್ನು ಸೃಷ್ಟಿಸಿದವರು ಬ್ರಾಹ್ಮಣರು; ಅದಕ್ಕೆ ಧಾರ್ಮಿಕ ಸ್ವರೂಪ ಕೊಟ್ಟವರು ಬ್ರಾಹ್ಮಣರು; ಅದರಿಂದ ಪ್ರಯೋಜನ ಪಡೆದು ಸುಖಪಟ್ಟವರು ಬ್ರಾಹ್ಮಣರು; ಶಾಸ್ತ್ರ ಸಾಹಿತ್ಯಾದಿಗಳನ್ನು ಸಂಸ್ಕೃತದಲ್ಲಿ ಬರೆದು ಸಾಮಾನ್ಯರಿಗೆ ಅದು ತಿಳಿಯದಂತೆ ಮಾಡಿ ವಿದ್ಯೆಯ ಗುತ್ತಿಗೆ ಹಿಡಿದವರು ಬ್ರಾಹ್ಮಣರು; ಬ್ರಾಹ್ಮಣೇತರರಿಗೆ ವಿದ್ಯೆಯನ್ನು ನಿರಾಕರಿಸಿದವರು ಬ್ರಾಹ್ಮಣರು; ಸಮಾಜವನ್ನು ಶೋಷಿಸಿ ಪರೋಪಜೀವನ ನಡೆಸಿದವರು ಈ ಪುರೋಹಿತ ವರ್ಗದವರು; ಇವರಿಂದಾಗಿಯೇ ಇತರ ಜಾತಿಗಳವರಿಗೆ ವಿದ್ಯೆಗಳಲ್ಲಿ ಮುಕ್ತ ಸ್ಪರ್ಧೆ ಸಾಧ್ಯವಾಗುತ್ತಿಲ್ಲ... ಆದ್ದರಿಂದ ಬ್ರಾಹ್ಮಣರನ್ನು ಎಲ್ಲ ರಂಗಗಳಲ್ಲಿ ಕೆಲಕಾಲ ತಡೆಹಿಡಿಯ ಬೇಕೆಂಬುದು ಅವರ ಈಗಿನ ಕೂಗು.

ಈ ಆರೋಪಗಳು ಬೌದ್ಧಿಕರೆನಿಸುವ ಜನರಿಂದ ಬರುತ್ತಿರುವದರಿಂದ ಇನ್ನಷ್ಟು ಆಶ್ಚರ್ಯಕರವಾಗಿದೆ. ಬ್ರಾಹ್ಮಣರು ಜಾತಿ ಪದ್ಧತಿಯನ್ನು ನಿರ್ಮಿಸಿದರೆಂದು ಇತಿಹಾಸ-ಸಮಾಜಶಾಸ್ತ್ರಗಳಲ್ಲಿ ನಿರಕ್ಷರಿಗಳಾದವರು ಮಾತ್ರ ನಂಬಬಹುದು. ಜಾತಿಗಳು ನಿರ್ಮಾಣ ವಾದದ್ದು ಐತಿಹಾಸಿಕ ಒತ್ತಡಗಳಿಂದ; ಭಾರತದ ವಿಶಿಷ್ಟ ಭೌಗೋಲಿಕ ಪರಿಸರದಿಂದಾಗಿ ಅದು ಗಟ್ಟಿಯಾಯಿತು. ಯುರೋಪ್ ಅಥವಾ ಪಶ್ಚಿಮ ಏಶಿಯದಲ್ಲಿ ಎದ್ದಂಥ ಜನಾಂಗಗಳ ಒತ್ತಡ, ದಂಡಯಾತ್ರೆಗಳು ಇಲ್ಲಿ ಎದ್ದು ನಿಂತ ನೀರಿನ ಕಟ್ಟೆಯೊಡೆದು ಬಿಡಲಿಲ್ಲವಾಗಿ ಅದು ಸ್ಥಿರವಾಯಿತು. ರೋಮನ್ ಇತಿಹಾಸದಲ್ಲಿ ಆಢ್ಯರಿಗೂ ಪ್ಲೆಬ್ (ಸಾಮಾನ್ಯ)ರಿಗೂ ಗಂಭೀರ ಕಲಹಗಳಾದಂತೆ ಇಲ್ಲಿ ಮೇಲ್ಜಾತಿಗಳವರಿಗೂ ಶೂದ್ರರಿಗೂ ಹೋರಾಟವಾಗಲಿಲ್ಲ. ಇದಕ್ಕೆಲ್ಲ ಬ್ರಾಹ್ಮಣರು ಕಾರಣವೆಂದು ಹೇಳುವದಾದರೆ ಬ್ರಾಹ್ಮಣರು ಅತಿಮಾನುಷ ಬುದ್ಧಿ ಬಲದಿಂದ ಸಾವಿರಾರು ವರ್ಷಗಳಿಗಾಗಿ ಯಶಸ್ವಿ ಯೋಜನೆ ಹಾಕಿದರೆಂದು ಒಪ್ಪಬೇಕಾಗುತ್ತದೆ. ಅಂಥ ಅತಿಮಾನುಷ ಬುದ್ಧಿಶಕ್ತಿ ಬ್ರಾಹ್ಮಣರಿಗಿತ್ತೆಂದು ಯಾರೂ ನಂಬುವಂತಿಲ್ಲ. ನಿಜವಾಗಿ

ನಡೆದದ್ದೆಂದರೆ ಶತಮಾನಗಳ ಕಾಲ ನಡೆದು ಬಂದ ಸಂಪ್ರದಾಯಕ್ಕೆ ಬ್ರಾಹ್ಮಣ ಶಾಸ್ತ್ರಕಾರರು ಶಾಸ್ತ್ರಮುದ್ರೆ ಒತ್ತಿದರಷ್ಟೇ. ಆಗಿನ ಎಲ್ಲ ಅರ್ಥವಂತ ವರ್ಗಗಳಿಗೂ ಅದು ಅನುಕೂಲ ವಿದ್ದುದರಿಂದ ಈ ಶಾಸ್ತ್ರಮುದ್ರೆ ಒತ್ತಲು ಸಾಧ್ಯವಾಯಿತೆಂದು ತೋರುತ್ತದೆ. ಪೌರೋಹಿತ್ಯದಿಂದ ಜೀವಿಸುವ ವರ್ಗಕ್ಕೆ ಯಜಮಾನ ಜಾತಿಗಳ ಬೆಂಬಲವಿಲ್ಲದಿದ್ದರೆ ಇದು ಆಗುತ್ತಲೂ ಇರಲಿಲ್ಲ.

ಈ ದೇಶದಲ್ಲಿ ಜಾತಿ ಪದ್ಧತಿಯನ್ನು ಎತ್ತಿ ಹಿಡಿದವರು ಬ್ರಾಹ್ಮಣರು ಮಾತ್ರ ಎಂಬ ರೀತಿಯಲ್ಲಿ ನಮ್ಮ ಇತಿಹಾಸವನ್ನು ಬರೆಯಲಾಗುತ್ತಿದೆ. ಬೌದ್ಧ ಜೈನ ಧರ್ಮಗಳನ್ನು ಕುರಿತು ಬರೆಯುವಾಗ ನಮ್ಮ ಚಿಕ್ಕಮಕ್ಕಳ ಪಾಠಗಳಲ್ಲಿ ಕೂಡ ಆ ಧರ್ಮಗಳ ಸಂಸ್ಥಾಪಕರು ಮಾನವ ಸಮತೆಯಲ್ಲಿ ನಂಬಿಕೆಯಿಟ್ಟಿದ್ದರೆಂದೂ ಜಾತೀಯ ಉಚ್ಚ ನೀಚವನ್ನು ಖಂಡಿಸುತ್ತಿದ್ದ ರೆಂದೂ ಬರೆಯಲಾಗುತ್ತದೆ. ಇದು ಸತ್ಯಕ್ಕೆ ದೂರವಾದದ್ದು. ನಿಜಕ್ಕೂ ಇವೆರಡೂ ಧರ್ಮಗಳು ಯಜ್ಞಸಂಸ್ಥೆಯ ವಿರುದ್ಧ ತಲೆಯೆತ್ತಿದವುಗಳು. ಅವುಗಳ ಮುಂದಾಳುಗಳು ಕ್ಷತ್ರಿಯರಾಗಿದ್ದರೂ ಬೆಂಬಲಿಗರು ವೈಶ್ಯರಾಗಿದ್ದರೆಂಬುದಕ್ಕೆ ತುಂಬಾ ಕುರುಹುಗಳು ಸಿಗುತ್ತವೆ. ವೇದ ಧರ್ಮದಲ್ಲಿ ಬ್ರಾಹ್ಮಣ ಕ್ಷತ್ರಿಯ, ವೈಶ್ಯರೆಲ್ಲರೂ 'ದ್ವಿಜ'ರೆನಿಸಿದ್ದರೂ ವೈಶ್ಯರಿಗಾಗಿ ಅವರ ಸಂಪತ್ತಿಗನುಗುಣವಾದ ಸ್ಥಾನ ಮಾನ ಇಲ್ಲದ್ದರಿಂದ ಅಸಂತುಷ್ಟರಾದ ಅವರು ಹೊಸ ಧರ್ಮಗಳಿಗೆ ಶರಣು ಹೋದರೆಂದು ಜಗತ್ತಿನ ಇತರ ಕಡೆಗಳ ಇತಿಹಾಸದಿಂದ ತರ್ಕಿಸಬಹುದು. ಆದರೆ ಜನ್ಮಸಿದ್ಧ ಜಾತಿಗಳನ್ನು ಬೌದ್ಧರೂ ಜೈನರೂ ಒಂದು ಸಾಮಾಜಿಕ ಒಡಂಬಡಿಕೆ ಯೆಂಬ ರೀತಿಯಲ್ಲಿ ಅಂಗೀಕರಿಸಿದ್ದರೆಂಬುದಕ್ಕೆ ಅವೆರಡರ ಸಾಹಿತ್ಯಗಳಲ್ಲಿಯೂ ಪ್ರಮಾಣಗಳು ಸಿಗುತ್ತವೆ. ಅಂತರವಿಷ್ಟೇ: ಅವರು ಬ್ರಾಹ್ಮಣರಿಗಿಂತ ಕ್ಷತ್ರಿಯ ವೈಶ್ಯರಿಗೆ ಮಹತ್ವ ಕೊಟ್ಟಿದ್ದಾರೆ. ಶೂದ್ರಾತಿಶೂದ್ರರನ್ನು ಅವರು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ.

ಈ ವ್ಯವಸ್ಥೆಯಿಂದ ಬ್ರಾಹ್ಮಣರು ಇತರರನ್ನು ಶೋಷಿಸಿ ತಾವು ಲಾಭ ಮಾಡಿಕೊಂಡರೆಂಬುದೂ ಸರಿಯಲ್ಲ. ಶ್ರೀಮಂತಿಕೆ ಎಂದೂ ಬ್ರಾಹ್ಮಣರ ಆದರ್ಶವಾಗಿರಲಿಲ್ಲ. 'ಬಡ ಬ್ರಾಹ್ಮಣ'ನೇ ಎಲ್ಲ ಕಥೆಗಳಲ್ಲಿ ಕಾಣಿಸಿಕೊಳ್ಳುವಾತ. ಶಾಸ್ತ್ರಗಳಲ್ಲಿ ಹೇಳಿದ ರೀತಿಯಲ್ಲಿ ಗಾರ್ಹಸ್ಥ್ಯ ಧರ್ಮ ಪಾಲಿಸುವವರಿಗೆ ಸಂಪತ್ತಿನ ಸಂಚಯ ಸಾಧ್ಯವೂ ಇರಲಿಲ್ಲ. ನಿರಂತರವಾದ ದಾನ ಪ್ರತಿಗ್ರಹಗಳ ಶ್ರೇಣಿಯಿಂದ ಬ್ರಾಹ್ಮಣರು ತಮ್ಮೊಳಗೆ ಒಂದು ತರಹದ ಅನಾದಿ ಸಮಾಜವಾದವನ್ನು ಜಾರಿಗೆ ತಂದಿದ್ದರು. ಇತ್ತೀಚಿನವರೆಗೆ ಬ್ರಾಹ್ಮಣದಲ್ಲಿ ಅತಿ ಶ್ರೀಮಂತರೂ ಅತಿ ದರಿದ್ರರೂ, ಇತರ ಜಾತಿಗಳಲ್ಲಿರುವಂತೆ, ಇರಲಿಲ್ಲ. ಅವರ ಸರಾಸರಿ ಆದಾಯ ಇತರರಿಗಿಂತ ಸ್ವಲ್ಪ ಮೇಲ್ಮಟ್ಟದಲ್ಲಿ ಇದ್ದರೆ ಅದಕ್ಕೆ ಈ ಸಮಾಜವಾದ ಕಾರಣವಾಗಿತ್ತು.

ಸ್ವಾರಸ್ಯವೆಂದರೆ, ಒಂದು ದಶಕದ ಹಿಂದೆ ಎದ್ದ ಬ್ರಾಹ್ಮಣ ವಿರೋಧಿ ಸಾಹಿತ್ಯ ಚಳವಳಿಯಲ್ಲಿ ಒಬ್ಬ ಸಾಹಿತಿಗಳು ಬ್ರಾಹ್ಮಣರಿಗೆ ಆಸ್ತಿ ಕಡಿಮೆ ಮತ್ತು ಸುಧಾರಣೆಗಳ ನಂತರ ಇನ್ನೂ ಕಡಿಮೆಯಾಯಿತು ಎಂಬ ಅಂಶವನ್ನೇ ಅವರ ವಿರುದ್ಧ ಒಂದು ವಾದವಾಗಿ ಉಪಯೋಗಿಸಿದರು. ಹೌದು ಅವರಿಗೆ ಆಸ್ತಿಯಿಲ್ಲ, ಆದ್ದರಿಂದ ತಾವು ಬದುಕಿರುವ

ಪ್ರದೇಶದ ಹಿತಾಹಿತ ಸುಖದುಃಖಗಳಲ್ಲಿ ಅವರಿಗೆ ಆಸಕ್ತಿಯಿಲ್ಲ. ಆದ್ದರಿಂದ ಅವರು ಇನ್ನೂ ಅಪಾಯಕಾರಿಗಳು ಎಂದು ಅವರು ವಾದಿಸಿದರು! ಬ್ರಾಹ್ಮಣರು ಶ್ರೀಮಂತರಾದರೂ ಅಪರಾಧ, ಬಡವರಾದರೂ ಅಪರಾಧವೇ. ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು.

ಬ್ರಾಹ್ಮಣರು ಇತರರಿಗೆ ವಿದ್ಯೆಯನ್ನು ನಿರಾಕರಿಸಿ ಅಜ್ಞಾನದಲ್ಲಿಟ್ಟರು ಎಂಬುದು ಅವರ ಮೇಲಿನ ಇನ್ನೊಂದು ಕೋಟಿ. ಇದೂ ಮಿಥ್ಯಾರೋಪ. ವೇದಪಾಠವನ್ನು ಶೂದ್ರರಿಗೂ ಸ್ತ್ರೀಯರಿಗೂ ವೇದೋತ್ತರ ಕಾಲದಲ್ಲಿ ನಿರಾಕರಿಸಿದ್ದು ಸತ್ಯ. ಆದರೆ ಇತರ ಯಾವ ಶಾಸ್ತ್ರವೂ ನಿರಾಕರಿಸಲ್ಪಡಲಿಲ್ಲ. ಸಂಸ್ಕೃತದ ಅಧ್ಯಯನ ಕೂಡ ಇದಕ್ಕೆ ಪ್ರಮಾಣ. ಬೇಕಾದರೆ ಮಹಾಭಾರತದಲ್ಲಿ ಬರುವ ಅತಿ ಪವಿತ್ರ ಅಂಶವಾದ ವಿಷ್ಣುಸಹಸ್ರ ನಾಮದ ಫಲಶ್ರುತಿಯನ್ನು ನೋಡಿದರೆ ಸಾಕು. ಅದರ ಫಲಭಾಗದಲ್ಲಿ ಈ ಸ್ತೋತ್ರವನ್ನು ಓದಲು ಕೇಳಲು (ಶೃಣುಯಾತ್ ಪರಿಕೀರ್ತಯೇತ್) ಬ್ರಾಹ್ಮಣರಿಗೆ ಕ್ಷತ್ರಿಯರಿಗೆ ವೈಶ್ಯರಿಗೆ ಶೂದ್ರರಿಗೆಲ್ಲ ಹಕ್ಕು ಕೊಟ್ಟಿದೆ. ಪುರಾಣಗಳ ರಚನೆಯಾದದ್ದೇ, 'ಸ್ತ್ರೀ ಶೂದ್ರ ದ್ವಿಜ ಬಂಧೂನಾಂ' (ಹೆಂಗಸರು, ಶೂದ್ರರು ಮತ್ತು ವಿದ್ಯೆ ಓದದ ಬ್ರಾಹ್ಮಣರ) ಸಲುವಾಗಿ. ಇದು ಬರೇ ಹೇಳಿಕೆಯಲ್ಲ , ಸಂಸ್ಕೃತದಲ್ಲಿ ಶೂದ್ರ ಕವಿಗಳೂ ಇದ್ದರು. ಬ್ರಾಹ್ಮಣ ಧರ್ಮದ ಅತ್ಯಂತ ಕಠೋರ ನೆಲೆವೀಡಾಗಿದ್ದ ಕೇರಳದಲ್ಲಿ ಅನೇಕ ಅಬ್ರಾಹ್ಮಣ ಸಂಸ್ಕೃತ ವಿದ್ವಾಂಸರು ಈಗಲೂ ಇದ್ದಾರೆ.

ವಾಸ್ತವಿಕವಾಗಿ ನಡೆದದ್ದೆಂದರೆ, ಬ್ರಾಹ್ಮಣರು ಇತರರಿಗೆ ಸಂಸ್ಕೃತ ವಿದ್ಯೆ ನಿರಾಕರಿಸಲಿಲ್ಲ. ಆಗಿನ ರಾಜಕೀಯ ಸಂಬಂಧಗಳಲ್ಲಿಯೂ ಉತ್ಪಾದನೆ ವಿವರಣೆಗಳ ಪದ್ಧತಿಯಲ್ಲಿಯೂ ಅಕ್ಷರವಿದ್ಯೆಗೆ ಈಗಿನ ಮಹತ್ವ ಇರಲಿಲ್ಲ. ಬಹುಶಃ ಕೃಷಿಯಲ್ಲಿ ನಿರತರಾಗಿದ್ದವರಿಗೆ ಅಕ್ಷರವಿದ್ಯೆಯಲ್ಲಿ ತಲೆ ಹಾಕಲು ವೇಳೆಯೂ ಇದ್ದಿರಲಿಕ್ಕಿಲ್ಲ.

ವಿದ್ಯೆಯ ನಿರಾಕರಣೆಯ ವಿಷಯದಲ್ಲಿ ತಿಳಿದ ತಿಳಿಯದ ತಪ್ಪು ಭಾವನೆಗಳೂ ತುಂಬಾ ಹಬ್ಬಿವೆ. ಬ್ರಾಹ್ಮಣ ಗಂಡಸರು ವೇದಗಳನ್ನು ತಮ್ಮ ಸ್ವಂತ ಗುತ್ತಿಗೆಯಾಗಿ ಮಾಡಿಕೊಂಡದ್ದರಿಂದ ಯಾರಿಗೂ ಲಾಭ ನಷ್ಟವಾಗಲಿಲ್ಲ. ಬರೇ ವೇದ ಓದಿದವರಿಗೆ ಬ್ರಾಹ್ಮಣರಲ್ಲಿಯೂ ಗೌರವ ಹೆಚ್ಚು ಇರಲಿಲ್ಲ. ತರ್ಕ ವೇದಾಂತಗಳನ್ನು ಓದಿದವರಿಗೆ ಮಾತ್ರ ಗೌರವ ಇತ್ತು. ವೇದ ಮಾತ್ರ ಓದಿ ಪೌರೋಹಿತ್ಯ ವೃತ್ತಿಯಿಂದ ಜೀವಿಸುವವರಲ್ಲಿ ಅನೇಕರು ನಿರಕ್ಷರಿಗಳಾಗಿದ್ದರು. 'ವೇದಾಭ್ಯಾಸ ಜಡರು' ಎಂಬುದಾಗಿ ಕವಿಗಳೂ ತಾರ್ಕಿಕರೂ ವೇದಾಂತಿಗಳೂ ಅವರನ್ನು ತಿರಸ್ಕರಿಸುತ್ತಿದ್ದರು. ಇಂದಿಗೂ ಈ ಜನರೇ ಬ್ರಾಹ್ಮಣರಲ್ಲಿ ಅತಿ ಹಿಂದುಳಿದವರಾಗಿದ್ದಾರೆ. ಆದ್ದರಿಂದ ಬ್ರಾಹ್ಮಣರನ್ನು ನಿಂದಿಸಬೇಕಾದಾಗ 'ಪುರೋಹಿತ ವರ್ಗ' ಎಂದು ಬಯ್ಯುವವರು ಅತ್ಯಂತ ಅಜ್ಞಾನವನ್ನು ಪ್ರದರ್ಶಿಸುತ್ತಾರೆ.

ವಿದ್ಯೆ ಇಲ್ಲದಿರುವಿಕೆಯ ನೈಜ ಕಾರಣ ತಿಳಿಯಬೇಕಾದರೆ ಲಿಂಗಾಯತರ ಉದಾಹರಣೆ ಯನ್ನು ಪರಿಶೀಲಿಸಬೇಕು. ೧೨ನೇ ಶತಮಾನದಲ್ಲಿ ವೈದಿಕ ಸಂಸ್ಥೆಯನ್ನು ಪೂರ್ತಿ ಧಿಕ್ಕರಿಸಿ ಜಾತ್ಯತೀತ ವ್ಯವಸ್ಥೆಯೊಂದನ್ನು ತರುವ ಕಲ್ಪನೆ ಲಿಂಗಾಯತ ನಾಯಕರಾದ ಬಸವಣ್ಣ ನವರಿಂದಾಯಿತು. ಲಿಂಗಾಯತ ಧರ್ಮವನ್ನು ಸೇರಿದವರೆಲ್ಲರಿಗೂ ಸಮಾನಾಧಿಕಾರ

ತಾತ್ವಿಕವಾಗಿಯಾದರೂ ದೊರೆಯಿತು. ಅವರಲ್ಲಿ ಕೆಲವರು ಸಂಸ್ಕೃತ ಕನ್ನಡಗಳೆರಡರಲ್ಲಿ ಅಗಾಧ ವಿದ್ವಾಂಸರೂ ಮಹಾಕವಿಗಳೂ ಆದರು. ಆದರೆ ಈ ಶತಮಾನದ ಪ್ರಾರಂಭದಷ್ಟು ಹೊತ್ತಿಗೆ ಅವರು ವಿದ್ಯೆಯಲ್ಲಿ ಹಿಂದುಳಿದವರೆಂದು ಸವಲತ್ತುಗಳನ್ನು ಬೇಡಲಾರಂಭಿಸಿದರು. ಈ ನಿರ್ವಿದ್ಯೆಗೆ ಬ್ರಾಹ್ಮಣರು ಕಾರಣವಾಗಿರಲಿಲ್ಲ. ಅವರಿಗೆ ಪ್ರತ್ಯೇಕ ಮಠಗಳೂ ಇದ್ದವು. ಅವರಿಗೆ ವಿದ್ಯೆ ಬೇಕಾದರೆ ಬ್ರಾಹ್ಮಣರನ್ನು ಆಶ್ರಯಿಸಬೇಕಾಗಿರಲಿಲ್ಲ. ಆದರೆ ಆರ್ಥಿಕ ಸಂಬಂಧಗಳಲ್ಲಿ ಕೃಷಿಕರ ಸ್ಥಾನ ಮತ್ತು ಅಗತ್ಯಗಳು ವಿದ್ಯೆಯನ್ನು ಅವರಿಗೆ ಅನಿವಾರ್ಯವಾಗಿ ಮಾಡಲಿಲ್ಲವಾದ್ದರಿಂದ ಅವರು ವಿದ್ಯೆಯಲ್ಲಿ ಹೆಚ್ಚು ಆಸಕ್ತರಾಗಲಿಲ್ಲ. ಅಕ್ಷರವಿದ್ಯೆಯ ಅಗತ್ಯದ ಪ್ರಮಾಣವನ್ನಾಧರಿಸಿ ಲಿಂಗಾಯತರಲ್ಲಿ ಅಯ್ಯನವರೂ ಬಣಜಿಗರೂ ಹೆಚ್ಚು ಅಕ್ಷರಸ್ಥರಾಗಿದ್ದರು. ಬ್ರಾಹ್ಮಣರಲ್ಲಿಯೂ ಹಳ್ಳಿಗಾಡಿನಲ್ಲಿದ್ದವರು ಪಟ್ಟಣವಾಸಿಗಳಿಗಿಂತ ಕಡಿಮೆ ವಿದ್ಯಾವಂತರಾಗಿದ್ದರು, ಅಗ್ರಹಾರ ಘಟಿಕಾ ಸ್ಥಾನಗಳಲ್ಲಿದ್ದವರು ಹೆಚ್ಚು ವಿದ್ಯಾವಂತ ರಾಗಿದ್ದರು.

ಹೌದು, ಒಂದು ವಿಷಯದಲ್ಲಿ ಬ್ರಾಹ್ಮಣರು ಭಿನ್ನರಾಗಿದ್ದರು. ಅದೆಂದರೆ ವಿದ್ಯೆಯ ಮೋಹ. ಶತಮಾನಗಳ ಪರಂಪರೆಯಿಂದ ಬ್ರಾಹ್ಮಣರ ಒಂದು ಪ್ರಾಥಮಿಕ ಮಹತ್ವಕಾಂಕ್ಷೆ ವಿದ್ಯಾವಂತರಾಗಬೇಕೆಂಬುದಾಗಿ ಇತ್ತು. ಈ ಹೇತು (motivation) ಬ್ರಾಹ್ಮಣರನ್ನು ಪ್ರೇರಿಸುತ್ತಿದ್ದುದರಿಂದ ಅವಕಾಶ ಸಿಕ್ಕಾಗಲೆಲ್ಲ ಬ್ರಾಹ್ಮಣರು ವಿದ್ಯಾರ್ಜನೆಯನ್ನು ಉಳಿದೆಲ್ಲಕ್ಕಿಂತ ಹೆಚ್ಚಾಗಿ ಬೆಂಬತ್ತಿದರು. ಈಗಿನ ಕಾಲದಲ್ಲಿಯೂ ಬ್ರಾಹ್ಮಣರು ವಿದ್ಯೆಯಲ್ಲಿ ಹೆಚ್ಚು ಯಶಸ್ವಿಗಳಾಗುತ್ತಿದ್ದರೆ ಈ ಹೇತುವಿನಿಂದಲೇ ಹೊರತು ಬೇರಾವ ಸೌಕರ್ಯದಿಂದಲ್ಲ. ಅವರ ತಲೆಯಲ್ಲಿ ಹೆಚ್ಚು ಮಿದುಳು ಖಂಡಿತ ಇಲ್ಲ. ಆದರೆ ಸುದೀರ್ಘ ಪರಂಪರೆಯಿಂದ ಮಿದುಳನ್ನು ಉಪಯೋಗಿಸುವ ಶಿಸ್ತು ಅವರಿಗೆ ಲಭಿಸಿತು. ವಿದ್ಯೆಯಲ್ಲಿ ಯಶಸ್ಸು ಮಿದುಳಿನ ಗಾತ್ರದಿಂದ ಸಿದ್ಧವಾಗತಕ್ಕದ್ದಲ್ಲ. ಅದನ್ನು ಪ್ರೇರಿಸುವ ಹೇತು ಮತ್ತು ನಿಯೋಜಿಸುವ ಶಿಸ್ತು ಇವು ಯಶಸ್ಸಿನ ಗುಟ್ಟು.

ಇದನ್ನು ನಾನು ಬ್ರಾಹ್ಮಣ ಬ್ರಾಹ್ಮಣೇತರ ಇಬ್ಬರ ಗಮನಕ್ಕಾಗಿಯೂ ಹೇಳುತ್ತಿದ್ದೇನೆ. ಬ್ರಾಹ್ಮಣರಲ್ಲಿ ಕೆಲವರು ಇಂದು ಕೂಡ ತಮ್ಮ ಮಿದುಳು ಶೂದ್ರ ಮಿದುಳಿಗಿಂತ ಶ್ರೇಷ್ಠವಾದುದೆಂಬ ಭ್ರಾಮಕ ಕಲ್ಪನೆಯಲ್ಲಿದ್ದಾರೆ. ಅದನ್ನು ಬಾಯಿಬಿಟ್ಟು ಹೇಳುತ್ತಲೂ ಇರುತ್ತಾರೆ. ಇದರಿಂದ ಅವರು ಇತರ ಜಾತಿಗಳ ಜನರ ದ್ವೇಷವನ್ನು ಮಾತ್ರ ಸಂಪಾದಿಸು ತ್ತಾರಷ್ಟೇ. ವಸ್ತುತಃ ಬ್ರಾಹ್ಮಣ ದ್ವೇಷದ ಮೂಲದಲ್ಲಿ ದುಯ್ಯಂ ಮಿದುಳಿನ ಬ್ರಾಹ್ಮಣರ (ಅವ್ವಲ್ ಮಿದುಳಿನವರು ತಮ್ಮ ಮಿದುಳಿನ ಬಗ್ಗೆ ಹೇಳಿಕೊಳ್ಳುವುದಿಲ್ಲ) ಈ ತರಹದ ದುರಹಂಕಾರದ ಮಾತುಗಳೇ ಹಾರುವರು ವಾಸ್ತವಿಕವಾಗಿ ಶೂದ್ರರಿಗೆ ಮಾಡಿದ ಅಥವಾ ಮಾಡುವ ಅಥವಾ ಮಾಡದಿರುವ ಅನ್ಯಾಯಗಳಿಗಿಂತ ಹೆಚ್ಚಾಗಿ ಕೆಲಸ ಮಾಡುತ್ತವೆಂದು ಬ್ರಾಹ್ಮಣರು ತಿಳಿಯಲಾರದೆ ಹೋಗಿದ್ದಾರೆ. ಆದ್ದರಿಂದ ವಿದ್ಯಾಪ್ರಪಂಚದಲ್ಲಿ ತಮ್ಮ ಮುಂದಾಳ್ತನಕ್ಕೆ ನಿಜವಾದ ಕಾರಣ ಮಾನಸಿಕ ಹೇತು ಮತ್ತು ದೈಹಿಕ ಮಾನಸಿಕ ಶಿಸ್ತು ಎಂಬುದನ್ನು ಮರೆಯುತ್ತಿದ್ದಾರೆ. ಅವರು ಇದನ್ನು ಇನ್ನೂ ಮರೆತು ಬರೆ ಜಂಬವನ್ನೇ

ನೆಚ್ಚಿಕೊಂಡರೆ ಮುಂದೆ ಅವರು ಈ ರಂಗದಲ್ಲಿ ಪೂರ್ತಿ ಹಿಂದೆ ಬೀಳುವುದು ಖಂಡಿತ.

ಬ್ರಾಹ್ಮಣೇತರರಿಗೆ ಯಾಕೆ ಇದನ್ನು ಹೇಳುತ್ತಿದ್ದೇನೆಂದರೆ, ಅವರಲ್ಲಿ ಅನೇಕರು ಬಾಯಿಯಿಂದ ಅಲ್ಲದಿದ್ದರೂ ಮನಸ್ಸಿನಿಂದ ಬ್ರಾಹ್ಮಣ ಬುದ್ಧಿಯ ಶ್ರೇಷ್ಠತ್ವವನ್ನು ಸುಳ್ಳು ಸುಳ್ಳೇ ನಂಬಿ ಧೃತಿಗೆಟ್ಟು ಕೋಪಗೊಳ್ಳುತ್ತಾರೆ. ಹೆಚ್ಚು ಬಲವಾದ ಪ್ರೇರಣೆ ಮತ್ತು ಮಾನಸಿಕ ಶಿಸ್ತನ್ನು ಅವರು ರೂಪಿಸಿಕೊಂಡರೆ ಬ್ರಾಹ್ಮಣರೊಡನೆ ಹೆಚ್ಚು ನಿಃಶಂಕೆಯಿಂದ ಆತ್ಮವಿಶ್ವಾಸದಿಂದ ಸ್ಪರ್ಧಿಸಬಲ್ಲರು. ಅಷ್ಟಾದರೆ ಬ್ರಾಹ್ಮಣರನ್ನು ನಿಂದಿಸುವ ಅಗತ್ಯ ಅವರಿಗೆ ಉಳಿಯುವುದಿಲ್ಲ. ಇದರಲ್ಲಿ ಬ್ರಾಹ್ಮಣರ ಹಿತವೂ ಅಡಕವಾಗಿದೆ.

ಬ್ರಾಹ್ಮಣರ ಮೇಲೆ ಮಾಡಲಾಗುವ ಆರೋಪಗಳಲ್ಲಿ ಹುರುಳಿಲ್ಲವೆಂದು ತೋರಿಸಲು ನಾನು ಈ ಲೇಖನದಲ್ಲಿ ಪ್ರಯತ್ನಿಸಿದ್ದೇನೆ. ಸರಕಾರಿ ಸೇವೆಗಳಲ್ಲಿ ಅವರಿಗಿರುವ ಸಂಖ್ಯಾಪ್ರಾಧಾನ್ಯ ಕೂಡ ಸಾಂಸ್ಕೃತಿಕ ಮತ್ತು ಐತಿಹಾಸಿಕ ಆಕಸ್ಮಿಕವೇ. ಬ್ರಿಟಿಷ್ ಪೂರ್ವದ ಆಳಿಕೆಗಳಲ್ಲಿ ಬ್ರಾಹ್ಮಣರು ಈ ನೌಕರಿಗಳಲ್ಲಿ ಹೆಚ್ಚಾಗಿ ಇದ್ದಿಲ್ಲ. ಮುಸ್ಲಿಂ ಮತ್ತು ಬ್ರಿಟಿಶ್ ಆಳಿಕೆಗಳಲ್ಲಿ ಬ್ರಾಹ್ಮಣ ವಿದ್ವಾಂಸರಿಗೆ ಹಿಂದಿದ್ದ ರಾಜಾಶ್ರಯ ತಪ್ಪಿದ್ದರಿಂದ ಅವರು ಪಾಶ್ಚಾತ್ಯ ವಿದ್ಯೆಯತ್ತ ಹೊರಳಿದರು. ಭಾರತದ ಪರಂಪರಾಗತ ಆರ್ಥಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೆ ಸರಕಾರಿ ಕೆಲಸವನ್ನೊಳಗೊಂಡು ಹೆಚ್ಚಿನ ರಂಗಗಳಲ್ಲಿ ಅಕ್ಷರ ವಿದ್ಯೆಗೆ ಮಹತ್ವ ಇರಲಿಲ್ಲ. ಭೂಮಿಯನ್ನೊಳಗೊಂಡು ಸಮಾಜದ ಸಂಪತ್ತಿನ ಅಧಿಕ ಭಾಗ ದಕ್ಷಿಣಭಾರತದಲ್ಲಂತೂ ಬ್ರಾಹ್ಮಣೇತರ ಮೇಲ್ಜಾತಿಗಳವರ ಕೈಯಲ್ಲೇ ಇತ್ತು. ಅವರು ಸುಲಭವಾಗಿ ದಕ್ಷಿಣೆ ಕೊಟ್ಟು ಬ್ರಾಹ್ಮಣರಿಂದ ತಮಗೆ ಬೇಕಾದ ಸೇವೆಗಳನ್ನು ಪಡೆಯುತ್ತಿದ್ದರು. ಆಗಿನ ದೃಷ್ಟಿಯಿಂದ ಅವರಿಗೆ ಅದು ಅಗ್ಗವಾಗಿಯೂ ಇತ್ತು. ಆದರೆ ವಿದೇಶೀ ಆಳಿಕೆಯ ಆಗಮನ ಮತ್ತು ಆರ್ಥಿಕ ಸಂಬಂಧಗಳ ಬದಲಾವಣೆಯಿಂದ ಸರಕಾರಿ ನೌಕರಿಗಳ ಅಗಾಧ ಬೆಳವಣಿಗೆ ಮತ್ತು ಅದರೊಂದಿಗೆ ಆ ನೌಕರಿಗಳಿಗೆ ದೊರಕಿದ ಹೊಸ ಪ್ರತಿಷ್ಠೆಯೂ ಅಂಥಾ ನೌಕರಿಗಳಲ್ಲಿ ವಿದ್ಯಾರ್ಹತೆಗಳಿಗೆ ಸಿಕ್ಕಿದ ಪ್ರಾಧಾನ್ಯವೂ ಹೊಸ ಪರಿಸ್ಥಿತಿಯನ್ನು ನಿರ್ಮಿಸಿದವು. ಇದರ ಪ್ರಯೋಜನ ಪಡೆಯಲು ಬ್ರಾಹ್ಮಣರಿಗೆ ಇತರರಿಗಿಂತ ತುಂಬಾ ಸೌಲಭ್ಯವಿತ್ತು. ಅವರಿಗೆ ಒಂದು ಬಗೆಯ ವಿದ್ಯೆಯಿಂದ ಇನ್ನೊಂದಕ್ಕೆ ಬದಲಾಯಿಸುವ ಸಮಸ್ಯೆ ಮಾತ್ರ ಇತ್ತು. ಹಿಂದೆ ವಿದ್ಯೆಯನ್ನು ಕಡೆಗಣಿಸಿದ ಜಾತಿಗಳಿಗೆ, ಅಕ್ಷರವಿದ್ಯೆಯ ಕೇವಲ ಲಾಭದಿಂದ ದಾಪುಗಾಲಿಕ್ಕಿ ಅಕ್ಷರವಿದ್ಯೆಯಲ್ಲಿ ಪಳಗಿದವರೊಡನೆ ಸ್ಪರ್ಧಿಸಿ ಗೆಲ್ಲುವ ಪ್ರಚಂಡ ಸಮಸ್ಯೆ ಇತ್ತು. ಇದರಲ್ಲಿ ಬ್ರಾಹ್ಮಣರ ತಪ್ಪೇನೂ ಇದ್ದಿಲ್ಲ. ಸಿಕ್ಕಿದ ಸಂದರ್ಭವನ್ನು ಅವರು ಪೂರ್ತಿ ಉಪಯೋಗಿಸಿ-ಕೊಂಡರು ಮಾತ್ರ.

ಬ್ರಾಹ್ಮಣರ ಮುಂದೆ ಈಗ ಮುಖ್ಯವಾಗಿ ಎರಡು ಬಗೆಯ ಸಮಸ್ಯೆಗಳಿವೆ. ಒಂದು, ತಮ್ಮ ಮೇಲೆ ನಡೆಯುವ ಮಿಥ್ಯಾಪ್ರಚಾರವನ್ನು ಎದುರಿಸುವ ಪ್ರಶ್ನೆ. ಇನ್ನೊಂದು, ತಮ್ಮ ಆರ್ಥಿಕ ಬೌದ್ಧಿಕ ಮಟ್ಟವನ್ನು ಕಾದುಕೊಳ್ಳುವುದು ಹೇಗೆ ಎಂಬುದು. ಬ್ರಾಹ್ಮಣರ ಮೇಲಿನ ಮುಖ್ಯ ಆರೋಪಗಳು ಎಷ್ಟು ಟೊಳ್ಳು ಎಂಬುದನ್ನು ಮೇಲೆ ವಿವರಿಸಲಾಗಿದೆ. ತಮ್ಮ ಪೂರ್ವಜರು ಮಹಾಪರಾಧ ಮಾಡಿದ್ದಾರೆ ಎಂಬ ಆಂತರಿಕ ಶಂಕೆಯನ್ನು ಬ್ರಾಹ್ಮಣರು

ತೊರೆಯಬೇಕು. ಯಾವುದಾದರೂ ದೇಶದಲ್ಲಿ ಇಂಥದೇ ಪರಿಸ್ಥಿತಿಯಲ್ಲಿ ಯಾವೊಂದು ವರ್ಗ ಸಿಲುಕಿದಾಗ ಏನು ಮಾಡಬಹುದೋ ಅದನ್ನಷ್ಟೇ ಬ್ರಾಹ್ಮಣರು ಮಾಡಿದ್ದಾರೆ. ಜಾತಿಯನ್ನು ನಿವಾರಿಸುವ ಉದ್ದೇಶದಿಂದಲೇ ಹೊರಟವರು ತಾವೇ ಕಾಲಾಂತರದಲ್ಲಿ ಜಾತಿಗಳಾಗಿ ಹೋದದ್ದನ್ನು ಈ ದೇಶದಲ್ಲಿ ನೋಡುತ್ತಿದ್ದೇವೆ. ತೀರ ಇತ್ತೀಚಿನ ಉದಾಹರಣೆ ಬೇಕಾದರೆ ನವಬೌದ್ಧರು. ಹಿಂದೂ ಧರ್ಮದ ಜಾತಿಕಟ್ಟು ಅಳಿಯಲಾರದೆಂದು ಹೇಳಿ ಡಾ. ಅಂಬೇಡಕರರು ಬೌದ್ಧಧರ್ಮ ಸ್ವೀಕರಿಸಿ ತಮ್ಮ ಅನುಯಾಯಿಗಳಿಗೂ ಹಾಗೆ ಮಾಡಲು ಸೂಚಿಸಿದರು. ಆದರೆ ಮಹಾರಾಷ್ಟ್ರದ 'ಮಹಾರ'ರಿಗೇ ಈ ನವಬೌದ್ಧಮತ ಬಹಳ ಮಟ್ಟಿಗೆ ಸೀಮಿತವಾಗಿದೆ.

ಜಾತಿಗಳು ಅಳಿದು ಅಖಂಡ ಹಿಂದೂ ಸಮಾಜ ಸ್ಥಾಪಿತವಾಗುವುದು ಎಲ್ಲ ದೃಷ್ಟಿಯಿಂದ ಆದರ್ಶ ಪರಿಹಾರ ನಿಜ. ಆದರೆ ಇಂದಿನ ಪ್ರಜಾಸತ್ತಾತ್ಮಕ ರಾಜಕೀಯದಲ್ಲಿ ಇದು ಸದ್ಯಕ್ಕಂತೂ ಸಾಧ್ಯವಾಗಿ ಕಾಣುವುದಿಲ್ಲ. ಜಾತ್ಯತೀತತೆಯನ್ನು ಉದ್ಘೋಷಿಸುತ್ತ ಜಾತಿಗಳನ್ನು ಗಟ್ಟಿ ಮಾಡುವ ಧೋರಣೆಗಳನ್ನು ಜಾರಿಗೆ ತರಲಾಗುತ್ತಿದೆ. ಅಖಂಡ ಹಿಂದೂ ಸಮಾಜದ ಕಲ್ಪನೆಯನ್ನು ಪ್ರತಿಪಾದಿಸುವವರನ್ನು ಮತವಾದಿಗಳು (communalists) ಎಂದು ಕರೆಯಲಾಗುತ್ತಿದೆ. ಏನಿದ್ದರೂ ಹಿಂದೂ ಸಮಾಜವನ್ನು ಜಾತಿಯಿಂದ ಮುಕ್ತಗೊಳಿಸುವ ಯತ್ನಕ್ಕೆ ಬ್ರಾಹ್ಮಣರು ಕೈಹಾಕಿದರೆ ಅವರ ಮೇಲಿನ ಸಂಶಯ ಮತ್ತು ಹೆಚ್ಚಬಹುದಾಗಿದೆ.

ಆದ್ದರಿಂದ ಬ್ರಾಹ್ಮಣರು ಆತ್ಮರಕ್ಷಣೆ ಮಾತ್ರ ಮಾಡಿಕೊಳ್ಳಬಲ್ಲರು. ತಮ್ಮ ಮೇಲಿನ ದ್ವೇಷದ ಕಾರಣಗಳಲ್ಲೊಂದಾದ ದುರಭಿಮಾನದ ಮಾತು ಆಡುವುದನ್ನು ಅವರು ತೊರೆಯಬೇಕು. ಎರಡನೆಯದಾಗಿ ತಮ್ಮೊಳಗಿನ ಉಪಭೇದಗಳನ್ನು ಸಾವಕಾಶವಾಗಿಯಾದರೂ ಬುದ್ಧಿಪೂರ್ವಕ ನಿವಾರಿಸಿಕೊಳ್ಳಬೇಕು. ನೌಕರಿಗಳಲ್ಲಿ ಅವರಿಗಿರುವ ಪ್ರಾಧಾನ್ಯ ಮಂಜಿನ ನೀರು. ಬೇಗನೇ ಅದು ರಾಜಕೀಯ ವಸ್ತುಸ್ಥಿತಿಗಳಿಂದ ನಷ್ಟವಾದೀತು. ಬ್ರಾಹ್ಮಣರು ಉದ್ಯಮ, ವ್ಯಾಪಾರ ಮೊದಲಾದ ಎಲ್ಲ ಮಾನವ ಉಪಕ್ರಮಗಳಲ್ಲಿಯೂ ತಮ್ಮ ಜೀವನೋಪಾಯಗಳನ್ನು ಅರಸಬೇಕು. ಯಾವ ಉದ್ಯೋಗವೂ ತಮ್ಮ ಗೌರವಕ್ಕೆ ಕಡಿಮೆ ಎಂದು ತಿಳಿಯಬಾರದು ಮತ್ತು ಇದೆಲ್ಲದರೊಡನೆ ಅವರು ತಮ್ಮ ಬೌದ್ಧಿಕ ಮಟ್ಟವನ್ನು ಕಾಯ್ದುಕೊಳ್ಳಬೇಕು. ತಮ್ಮ ಪ್ರಾಚೀನ ವಿದ್ಯಾಪ್ರೇಮ ಮಾನಸಿಕ ಕುತೂಹಲವನ್ನು ಹಿಂದಿಗಿಂತಲೂ ಹೆಚ್ಚು ಬೆಳೆಸಿಕೊಳ್ಳಬೇಕು. ಅವರು ಇಂದು ಸಿಲುಕಿಕೊಂಡಿರುವ ಪರಿಸ್ಥಿತಿಯಲ್ಲಿ ತಮ್ಮ ಅಸ್ತಿತ್ವವನ್ನು ಸದ್ಯದ ಮಟ್ಟದಲ್ಲಿ ಉಳಿಸಿಕೊಳ್ಳುವುದಕ್ಕಾಗಿಯೇ ಇತರರಿಗಿಂತ ಹೆಚ್ಚು ಪರಿಶ್ರಮ ಮಾಡಬೇಕಾಗುತ್ತದೆ. ಆದ್ದರಿಂದ ಅವರು ಈಗ ಎಲ್ಲೆಲ್ಲಿಯೂ ತಾಂಡವವಾಡುತ್ತಿರುವ ಸುಲಭ ವಿದ್ಯೆ, ಪರಿಶ್ರಮಹೀನವಾದ ಡಿಗ್ರಿ, ಐಷಾರಾಮದ ಜೀವನದ ಹುಚ್ಚಿಗೆ ಸಿಲುಕಬಾರದು. ಹೀಗೆ ಮಾಡುವುದರಿಂದ ಮಾತ್ರ ಅವರಲ್ಲಿ ಪ್ರಗತಿ ಶಾಶ್ವತವಾದೀತು. ಯುರೋಪಿನ ಯಹೂದ್ಯರ ಕೈಯಿಂದ ಬ್ರಾಹ್ಮಣರು ಕಲಿಯಬಹುದಾದ್ದು ಬಹಳ ಇದೆ.

*(ಜೂನ್ ೧೯೮೦)*

■

# ಒಂದು ಪ್ರತಿಕ್ರಿಯೆ

ಮಹನೀಯರೆ,

ನಿಮ್ಮ ಪತ್ರಿಕೆಯನ್ನು ಆಸ್ಥೆಯಿಂದ ಓದುತ್ತಿರುವವರಲ್ಲಿ ನಾನೊಬ್ಬ. ಬಡ ಮತ್ತು ಹಿಂದುಳಿದ ಜನರ ಸಲುವಾಗಿ ನೀವು ನಡೆಸಿರುವ ಹೋರಾಟ ನನಗೆ ಮೆಚ್ಚಿಕೆಯಾಗಿದೆ. ಕಂದಾಚಾರಗಳ ವಿರುದ್ಧ ನೀವು ಕತ್ತಿ ಕಟ್ಟುತ್ತಿರುವುದು ಕೂಡ ಪ್ರಶಂಸಾರ್ಹವಾಗಿದೆ.

ಆದರೆ ನೀವು ಶಬ್ದ ಪ್ರಯೋಗದಲ್ಲಿ ಈಗಿಗಿಂತ ಹೆಚ್ಚು ಸ್ಪಷ್ಟವಾಗಿರುವುದು ಅಗತ್ಯವೆಂದು ನನಗೆ ತೋರುತ್ತದೆ. ಉದಾಹರಣೆಗೆ ನೀವು ಆಗಾಗ್ಗೆ ಉಪಯೋಗಿಸುವ 'ಪುರೋಹಿತ ವರ್ಗ' ಎನ್ನುವ ಶಬ್ದ. ಪ್ರತಿಯೊಂದು ಜಾತಿಮತಕ್ಕೂ ಪುರೋಹಿತ ವರ್ಗ ಇದ್ದೇ ಇದೆ. ಬ್ರಾಹ್ಮಣರೆಂದು ಹೇಳುವ ಬದಲು ನೀವು ಈ ಶಬ್ದ ಉಪಯೋಗಿಸುವುದು ಯೋಗ್ಯವಲ್ಲ. ಬ್ರಾಹ್ಮಣರಲ್ಲೇ ಆದರೂ ಈ ಪುರೋಹಿತ ವರ್ಗಕ್ಕೆ ಸೇರಿದವರು ಅತ್ಯಂತ ದೈನ್ಯದಲ್ಲಿರುವವರೇ ಎಂದು ನಾನು ಇಲ್ಲಿ ದಿನವೂ ಗಮನಿಸುತ್ತಿದ್ದೇನೆ. ಅವರ ಮೈ ಬಟ್ಟೆ ಹೊಲಸು ನಾರುತ್ತಿರುತ್ತವೆ.

ನಾವು ನಮ್ಮ ಶತ್ರುಗಳು ಯಾರೆಂಬ ಬಗ್ಗೆ ನಮ್ಮ ಮನಸ್ಸಿನಲ್ಲಿಯೂ ಮಾತಿನಲ್ಲಿಯೂ ಸ್ಪಷ್ಟವಾಗಿರುವುದು ಹೋರಾಟದ ಯಶಸ್ಸಿಗೆ ಅತ್ಯಗತ್ಯವಾದದ್ದು. ಅಸ್ಪಷ್ಟ ಶತ್ರು ಬಾಣಕ್ಕೆ ಸರಿಯಾಗಿ ಗುರಿಯಾಗಲಾರನು. ಬ್ರಾಹ್ಮಣ ಜಾತಿ ನಮ್ಮ ಶತ್ರುವೆಂದು ನಮಗೆ ದೃಢವಿದ್ದರೆ ಹಾಗೆ ಹೇಳುವುದು ಅಗತ್ಯ. ಇಲ್ಲವಾದರೆ ಲಿಂಗಾಯತ ಮೊದಲಾದ ಅನೇಕ ಮಧ್ಯವರ್ತಿಗಳ ಪುರೋಹಿತವರ್ಗಕ್ಕೂ ನಮ್ಮ ಮಾತು ಅನ್ವಯಿಸಿ ಅನವಶ್ಯಕ ಗೊಂದಲವೇಳುತ್ತದೆ.

ನಲವತ್ತು ವರ್ಷಗಳಿಂದ ಈ ದಲಿತ ಪ್ರಪಂಚವನ್ನು ಗಮನಿಸುತ್ತಿರುವ ನನಗೆ ಈಗೀಗ ನಮ್ಮ ಶತ್ರುಗಳು ಬದಲಾಗಿದ್ದಾರೆಯೇ ಅನಿಸುತ್ತದೆ. ಆಂಧ್ರದಲ್ಲಿ ಹರಿಜನರ ಮೇಲೆ ನಡೆದ ಅತ್ಯಾಚಾರಗಳನೇಕವುಗಳಲ್ಲಿ ಪುರೋಹಿತ ವರ್ಗದವರು ಎಷ್ಟು ಸೇರಿದ್ದರು? ಮೊನ್ನೆ ಬಿಹಾರಿನಲ್ಲಿ ನಡೆದ ಅತ್ಯಾಚಾರಗಳನ್ನು ಈ ವರ್ಗದವರೇ ಮಾಡಿದರೇ? ಹಳ್ಳಿಗಳಲ್ಲಿ ಹೊಸದಾಗಿ ಶ್ರೀಮಂತರಾದ ಭೂಮಾಲಿಕ-ರೈತರು ತಮಗೆ ಅಗ್ಗದ ಕೆಲಸಗಾರರು ಕಾಯಂ ಆಗಿ ಸಿಗಬೇಕೆಂಬ ಉದ್ದೇಶದಿಂದ ಎಷ್ಟು ಮಟ್ಟಿಗೆ ಹರಿಜನರನ್ನು ಹಿಂದಿಡುತ್ತಿದ್ದಾರೆ? ಜಾತಿ ಭೇದವನ್ನೇ ಕಿತ್ತು ಹಾಕಿ, ದೇವಾಲಯಗಳ ಪೌರೋಹಿತ್ಯಕ್ಕೆ ಯಾವ ಜಾತಿಯವರನ್ನೂ ನೇಮಿಸಬಹುದು ಎಂದು ಹೇಳುತ್ತಿರುವ ದ್ರಾವಿಡ ಮುನ್ನೇತ್ರ ಕಳಗದವರೇ ಆಳುತ್ತಿರುವ ಮದ್ರಾಸಿನ ದಕ್ಷಿಣ ಆರ್ಕಾಟು ಜಿಲ್ಲೆಯ ಗಿಂಜಿ ತಾಲೂಕಿನ ಸೇವಲಪುರಿ ಎಂಬಲ್ಲಿ ಸವರ್ಣ

ಹಿಂದುಗಳ ಒತ್ತಾಯದಿಂದ ಹರಿಜನರಿಗಾಗಿ ಬೇರೆಯೇ ರಸ್ತೆ ಕಟ್ಟಿದರಂತೆ. ಈ 'ಸವರ್ಣ'ರಲ್ಲಿ ಬ್ರಾಹ್ಮಣರು ಎಷ್ಟು ಜನ?

ಒಂದು ಸಂಗತಿಯನ್ನು ನಾವು ನೆನಪಿಡಬೇಕು. ತಲೆಮಾರಿನಿಂದ ತಲೆಮಾರಿಗೆ ಶತ್ರು ಮಿತ್ರರು ಬದಲಾಗುತ್ತಾರೆ. ನಮ್ಮ ತಂದೆಯರ ಕಾಲದಲ್ಲಿ ಶತ್ರುಗಳಾಗಿದ್ದವರು ನಮ್ಮ ಕಾಲದಲ್ಲಿ ಶತ್ರುಗಳಾಗಿ ಉಳಿದಿರಲಿಕ್ಕಿಲ್ಲ. ಶತ್ರುತ್ವ ಬೆಳಸಬೇಕೆಂದಿದ್ದರೂ ಅವರಲ್ಲಿ ತ್ರಾಣ ಉಳಿದಿರಲಿಕ್ಕಿಲ್ಲ. ಹೊಸದೊಂದು ವರ್ಗ ಆ ಸ್ಥಾನಕ್ಕೆ ಬಂದಿರಬಹುದು. ನಮ್ಮ ಅಜ್ಜನನ್ನು ಮೆಟ್ಟಿದವನ ಮೊಮ್ಮಕ್ಕಳ ಮೇಲೆ ವೈರ ತೀರಿಸಿಕೊಳ್ಳಬೇಕೆಂಬ ಆಸೆ ಸಹಜವಾದರೂ ಅದರಲ್ಲಿ ನಾವು ಕಾಲಹರಣ ಮಾಡಿದರೆ ಇನ್ನೊಬ್ಬ ಅವರಿಗಿಂತಲೂ ಬಲಿಷ್ಠ ಶತ್ರು ನಮ್ಮನ್ನು ಮೆಟ್ಟಲು ಅಣಿಯಾಗುತ್ತಿರುವುದನ್ನು ನಾವು ಗಮನಿಸದೆ ಹೋಗಬಹುದು.

ದೇಶಪಾಂಡೆ ನಗರ, ಹುಬ್ಬಳ್ಳಿ — ವೆಂಕಪ್ಪ ಲಕ್ಕಪ್ಪ

# ಪ್ರತಿಕ್ರಿಯೆಗಳಿಗೆ ಉತ್ತರ

ನನ್ನ 'ಬ್ರಾಹ್ಮಣರೇನು ಮಾಡಬೇಕು?' ಲೇಖನದ ಬಗ್ಗೆ ಬಂದ ಪ್ರತಿಕ್ರಿಯೆಗಳನ್ನು ನೋಡಿದೆ. ಪ್ರಕಟಿಸಲು ಸಾಧ್ಯವಾಗದ ಕೆಲವನ್ನು ಸಂಪಾದಕರು ನನಗೆ ತೋರಿಸಿದ್ದಾರೆ. ಆ ಬಗ್ಗೆ ನನ್ನ ಪ್ರತಿಕ್ರಿಯೆಗಳನ್ನು ಆದಷ್ಟು ಸಂಕ್ಷೇಪವಾಗಿ ಇಲ್ಲಿ ಕೊಡುತ್ತೇನೆ.

೧. ಬ್ರಾಹ್ಮಣ ಸಂಘದವರು ತಮ್ಮ ಸ್ಮರಣಾಂಕಕ್ಕೆ ಒಂದು ಲೇಖನ ಕೇಳಿದಾಗ ಹಲ ವರ್ಷಗಳಿಂದ ನನ್ನನ್ನು ನೋಯಿಸುತ್ತ ಬಂದ ಹೊಸ ಬ್ರಾಹ್ಮಣ ವಿರೋಧಿ ಕೂಗನ್ನು ಕುರಿತು ಬರೆದು ಮನ ತೊಳೆದುಕೊಳ್ಳಬೇಕೆಂದುಕೊಂಡೆ. ಬ್ರಾಹ್ಮಣರನ್ನು ಎಚ್ಚರಿಸುವುದು ನನ್ನ ಉದ್ದೇಶವಾಗಿತ್ತು. ಅವರ ಕೆಲ ತಪ್ಪುಗಳನ್ನು ತೋರಿಸುವುದೂ ನನ್ನ ಕರ್ತವ್ಯವೆಂದು ನಾನು ಬಗೆದೆ. ಹಾಗೆಯೆ ಬ್ರಾಹ್ಮಣರ ಮೇಲೆ ಬರುತ್ತಿರುವ ಮಿಥ್ಯಾರೋಪಗಳನ್ನು ನಿರಾಕರಿಸಬೇಕೆಂದೂ ನನಗೆ ಅನಿಸಿತು.

೨. ಪ್ರೊ. ಚಂದ್ರಶೇಖರ ಪಾಟೀಲರು ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಕ್ಕೆ ಅವರಿಗೆ ಧನ್ಯವಾದಗಳು. ನನ್ನ ಲೇಖನಕ್ಕೆ ತತ್‌ಕ್ಷಣದ ಹೇತು ಈಚೆಗೆ ಬ್ರಾಹ್ಮಣ್ಯದ ಬಗ್ಗೆ ನಡೆದ ವಿವಾದವಾಗಿದ್ದರೂ ಪ್ರೊ. ಪಾಟೀಲರು ಸಂಪಾದಿಸುತ್ತಿರುವ 'ಸಂಕ್ರಮಣ' ಪತ್ರಿಕೆಯಲ್ಲಿ ಬಹಳ ಕಾಲದಿಂದ ಬಂದ ಲೇಖನಗಳೂ ವರದಿಗಳೂ ಇವೆ.

೩. ಬ್ರಾಹ್ಮಣರು ನಿರ್ದೋಷ ಸರ್ವಗುಣ ಪರಿಪೂರ್ಣರೆಂದು ನಾನೆಂದೂ ವಾದಿಸಿಲ್ಲ. ಅವರ ತಲೆಗಳಲ್ಲೆಲ್ಲ ಅಪ್ರತಿಮ ಮಿದುಳೇ ಇದೆಯೆಂದು ನಾನು ಹೇಗೆ ನಂಬುವುದಿಲ್ಲವೋ ಹಾಗೆಯೇ ಅವರಲ್ಲಿ ದುರ್ಗುಣಗಳೂ ಇವೆಯೆಂದು ಭಾವಿಸುತ್ತೇನೆ. ಆದರೆ ದೇಶದ ಎಲ್ಲ ಕಷ್ಟಗಳಿಗೂ ಅವರೇ ಕಾರಣ ಎನ್ನುವುದನ್ನೂ ನಾನು ಒಪ್ಪಲಾರೆ. ಮಧ್ಯಮ ಜಾತಿಗಳು—ದೇಶದ ಅಧಿಕಾಂಶ ಭೂಸೊತ್ತಿನ ಧಾರಕರು—ತಮ್ಮ ಜವಾಬ್ದಾರಿಯನ್ನು ಹಾರಿಸಿಕೊಳ್ಳಲಾರವು. ಇಂದು ಕೂಡ ಹಳ್ಳಿಗಾಡಿನಲ್ಲಿ ಹರಿಜನ ಗಿರಿಜನರ ಮೇಲೆ ನಡೆಯುವ ಅತ್ಯಾಚಾರಗಳಲ್ಲಿ ಬ್ರಾಹ್ಮಣರು ಭಾಗಿಗಳಾಗಿಲ್ಲವೆಂದು ತಮಿಳುನಾಡಿನ ಶ್ರೀ ಎಂ. ಕರುಣಾನಿಧಿಯವರು ಈಚೆಗೆ ಹೇಳಿದ್ದಾರೆ. ಬ್ರಾಹ್ಮಣರು ದಬ್ಬಾಳಿಕೆಯ ಪ್ರಮುಖ ಉಪಕರಣವಾಗಿ ಉಳಿದಿಲ್ಲ. ದಲಿತರ ನಾಯಕತ್ವ ವಹಿಸಿದ ಪ್ರೊ. ಪಾಟೀಲರು ಈ ಪೈಲನ್ನು ಯಾಕೆ ಗಮನಿಸುವುದಿಲ್ಲ?

೪. ಭಾರತದ ಸಮಾಜ ರಚನೆಯ ಬಗ್ಗೆ ನನ್ನ ವಿಚಾರಗಳನ್ನು ಪ್ರೊ. ಪಾಟೀಲರು ಹೆಚ್ಚಿನ ಅಂಶದಲ್ಲಿ ಪ್ರಶ್ನಿಸಿಲ್ಲ. ಅವರು ಮುಖ್ಯವಾಗಿ ಎತ್ತಿರುವುದು ಎರಡು ಗೌಣಾಂಶಗಳನ್ನು.

ಒಂದು, ಪುರೋಹಿತಶಾಹಿ ಎಂಬ ಅರ್ಥರಹಿತ ಪದಪ್ರಯೋಗದ ಬಗ್ಗೆ ನನ್ನ ಟೀಕೆ; ಮತ್ತು ಎರಡು, ಸರಕಾರಿ ನೌಕರಿಗಳಲ್ಲಿ ಇನ್ನೂ ಬ್ರಾಹ್ಮಣರಿಗೆ ಅವರ ಸಂಖ್ಯೆ ಮೀರಿದ ಪ್ರಾತಿನಿಧ್ಯ.

ಪುರೋಹಿತಶಾಹಿಯಲ್ಲಿ ತಾವು ಬ್ರಾಹ್ಮಣ ಪೇಜಾವರ ಸ್ವಾಮಿಗಳನ್ನೂ ಲಿಂಗವಂತ ಮೂರುಸಾವಿರ ಮಠದ ಸ್ವಾಮಿಗಳನ್ನೂ ಇನ್ನಿತರ ಸ್ವಾಮಿಗಳನ್ನೂ ಸೇರಿಸಿದ್ದಾಗಿ ಪ್ರೊ. ಪಾಟೀಲರು ಹೇಳಿದ್ದಾರೆ. ಅವರು ತಮ್ಮ ಶತ್ರುಗಳ ಪರಿಧಿಯನ್ನು ವಿಸ್ತರಿಸುತ್ತಿರುವುದು ಸಂತೋಷ. ಆದರೆ ಅವರಿಗೆ ವೇಳೆ ಇದ್ದರೆ ಕಳೆದ ಒಂದು ದಶಕದಿಂದ ಸಂಕ್ರಮಣದಲ್ಲಿ ಬಂದ ಲೇಖನಗಳಲ್ಲಿ ಪುರೋಹಿತಶಾಹಿ ಪದವನ್ನು ಯಾವ ವರ್ಗಕ್ಕೆ ಅನ್ವಯಿಸಿ ಪ್ರಚಾರ ಮಾಡಲಾಗುತ್ತಿದೆ ಎನ್ನುವುದನ್ನು ತಮಗೆ ತಾವೇ ನಿರ್ಧರಿಸಿಕೊಳ್ಳಲಿ. ಮಠಾಧಿಪತಿಗಳಿಗೆ ದೀವಟಿಗೆ ಹಿಡಿಯಲು ನಾನು ಹೊರಟಿಲ್ಲ. ಆದರೆ ಪೇಜಾವರ ಸ್ವಾಮಿಗಳು ಹರಿಜನಕೇರಿಗೆ ಹೋಗಿ ಬಂದರೆ, ಮೂರುಸಾವಿರ ಮಠದ ಸ್ವಾಮಿಗಳು ಸಕಲರಿಗೆ ಲಿಂಗಧಾರಣೆ ಮಾಡಿಸಲು ಸಿದ್ಧರಾದರೆ, ಅದಕ್ಕೆ ಯಾಕೆ ಕೆರಳಬೇಕೆಂದು ನನಗೆ ತಿಳಿಯುವುದಿಲ್ಲ. ಜನರ ಬುದ್ಧಿಯೊಳಗೆ ಹೆಣೆದುಕೊಂಡ ಜೇಡರ ಬಲೆಗಳನ್ನು ಗುಡಿಸುವುದರಲ್ಲಿ ಒಂದು ಹೆಜ್ಜೆಯನ್ನಾದರೂ ಮುಂದಿಡುವವರನ್ನು, ನಾವು ಬದಲಾವಣೆಯನ್ನೇ ಬಯಸುವದಾದರೆ, ಸ್ವಾಗತಿಸಬೇಕೇ ಹೊರತು ಖಂಡಿಸಬೇಕೇಕೆ?

ಎರಡನೆಯದಾಗಿ, ಸರಕಾರಿ ನೌಕರಿಗಳಲ್ಲಿ ಬ್ರಾಹ್ಮಣರಿಗೆ ಸಂಖ್ಯೆ ಮೀರಿದ ಪ್ರಾಧಾನ್ಯದ ವಿಷಯ. ಸರಕಾರಿ ನೌಕರಿಗಳನ್ನೊಂದೇ ಯಾಕೆ ಪ್ರೊ. ಪಾಟೀಲರು ಗಣನೆಗೆ ತೆಗೆದುಕೊಳ್ಳುತ್ತಾರೆ? ವ್ಯಾಪಾರ ವ್ಯವಹಾರ, ಖಾಸಗಿ ಉದ್ಯಮಗಳು ಭೂ ಒಡೆತನ ಮೊದಲಾದ ಜೀವನೋಪಾಯಗಳಲ್ಲಿರುವ ಜಾತೀಯ ಪ್ರಾತಿನಿಧ್ಯದ ಪ್ರಶ್ನೆಯನ್ನು ಅವರು ಯಾಕೆ ಲೆಕ್ಕಕ್ಕೆ ತೆಗೆದುಕೊಳ್ಳಬಾರದು? ನಮ್ಮ ರಾಜ್ಯದ್ದಷ್ಟೇ ಅಲ್ಲ, ದೇಶದ ಈಚೆಗಿನ ವಿಶ್ವವಿದ್ಯಾಲಯಗಳಲ್ಲಿಯೇ ಪ್ರತಿಯೊಂದೂ ಒಂದೊಂದು ಜಾತಿಯ ಸೊತ್ತಾಗುತ್ತಿರುವುದನ್ನು ಕಾಣುತ್ತಿರುವವರಿಗೆ ಸರಕಾರಿ ನೌಕರಿಗಳಲ್ಲಿ ಮೊದಲಿಂದ ಇದ್ದ ಬ್ರಾಹ್ಮಣರ ಪ್ರಾಧಾನ್ಯ ಇನ್ನೂ ಅಷ್ಟಿಷ್ಟು ಉಳಿದಿರುವುದು ಯಾಕೆ ಆಶ್ಚರ್ಯವಾಗಿ ಕಾಣುತ್ತದೆ?

೫. ಪ್ರೊ. ಪಾಟೀಲರು ತಾವು ಕೈಕೊಂಡ ಕ್ರಾಂತಿಯ ಯಜ್ಞದಲ್ಲಿ ಪಾಲುಗೊಳ್ಳಲು ಬ್ರಾಹ್ಮಣರಿಗೂ ಆಮಂತ್ರಣವಿತ್ತಿದ್ದಾರೆ. ಆದರೆ ನಿರಂತರವಾಗಿ ಆಮಂತ್ರಿತರ ಭರ್ತ್ಸನೆ ಮಾಡುವ ಅವರ ರೀತಿ ಆಮಂತ್ರಣದ ವಿಚಿತ್ರ ಮಾದರಿಯಾಗಿದೆ.

೬. ಬ್ರಾಹ್ಮಣರ ಉಳಿಗಾಲ, ಉದ್ಧಾರಗಳಿಗೆ ಅನೇಕರು ಅನೇಕ ಉಪಾಯಗಳನ್ನು ಮುಂದಿಟ್ಟಿದ್ದಾರೆ. ಅವುಗಳಲ್ಲಿ ಬ್ರಾಹ್ಮಣರು ತಮ್ಮ ಧರ್ಮಕರ್ಮಗಳಲ್ಲಿ ಪುನಃ ಆಸಕ್ತಿ ತಾಳಬೇಕು, ತಮ್ಮ ಆದಿಮ ವೈಭವಕ್ಕೆ ಹಿಂದಿರುಗಬೇಕು, ಎಂಬುದೊಂದು. ಯಾವುದೊಂದು ಜನದ ಆದಿಮ ವೈಭವ, ಅಥವಾ ಧರ್ಮ ಕರ್ಮಗಳ ಪುನರುಜ್ಜೀವನಕ್ಕೆ ಅದರಿಂದಾಗುವ ಪ್ರಯೋಜನಕ್ಕೆ ತುಂಬಾ ಮಿತಿ ಇದೆ. ಇವೆಲ್ಲವೂ ಕಾಲಹತವಾಗಿರುತ್ತವೆ. ಬ್ರಾಹ್ಮಣ ಪರಂಪರೆಯಲ್ಲಿ ನನಗೆ ಕಾಣುವ ಅತಿ ಮುಖ್ಯ ಜೀವನಾಡಿಯೆಂದರೆ ವಿದ್ಯೆಯ ಒಲವು,

ಈ ವಿಷಯದಲ್ಲಿ ಪರಮಾವಧಿ ನೈಪುಣ್ಯದ ಛಲ. ಅದು ಚಾರ್ವಾಕರಿಂದ ಹಿಡಿದು ವೈದಿಕರವರೆಗೆ ಎಲ್ಲ ವಿಚಾರಧಾರೆಗಳಿಗೂ ಆಶ್ರಯ ಕೊಟ್ಟಿರುವುದರಿಂದ ಯಾವೊಂದು ವಿಶಿಷ್ಟ ಅಭಿಪ್ರಾಯ ಅಥವಾ ಕರ್ಮವನ್ನು ತನ್ನ ನಿಷ್ಠಾಕೇಂದ್ರವಾಗಿ ಮಾಡಿಕೊಳ್ಳುವುದು ಬ್ರಾಹ್ಮಣ ಪರಂಪರೆಗೆ ಸರಿ ಹೊಂದಲಾರದು. ಯಹೂದ್ಯ ಪರಂಪರೆಯಲ್ಲಿಯೂ ಈ ಪ್ರಾಂಜಲತ್ವ ಇದೆಯೆಂದು ಕೇಳಿದ್ದೇನೆ. ಯಹೂದ್ಯರಿಂದ ಕಲಿಯತಕ್ಕ ಪಾಠದ ಬಗ್ಗೆ ನಾನು ನನ್ನ ಲೇಖನದಲ್ಲಿ ಪ್ರಸ್ತಾಪಿಸಿದ್ದೇನೆ. ಒಂದು ಪಾಠವೆಂದರೆ ಒಬ್ಬನು ಯಾವುದೇ ಬೌದ್ಧಿಕ ಪರಿಶ್ರಮದಲ್ಲಿ ಆಸಕ್ತಿಯುಳ್ಳವನಾದರೂ ಒಂದು ಜೀವನೋಪಾಯದ ಕೈಕೆಲಸದ ಅಥವಾ ದೇಹಶ್ರಮದ ವೃತ್ತಿಯನ್ನು ಕಲಿಯಬೇಕೆಂಬ ಹಳೇ ಯೆಹೂದ್ಯ ಪದ್ಧತಿ ಹೀಗೆ. ಅತಿಶ್ರೇಷ್ಠ ಯಹೂದ್ಯ ತತ್ವಜ್ಞಾನಿ ಸ್ಪಿನೋಜಾ, ಗಾಜು ತೇದು ಭೂತಗನ್ನಡಿ ಮಾಡುವ ವೃತ್ತಿಯಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ. ಬ್ರಾಹ್ಮಣರು ಹೀಗೆ ಮಾಡುವುದು ಹಿತವೆಂದು ನನಗೆ ತೋರುತ್ತದೆ. ಯಾವ ಕೆಲಸವನ್ನೂ ತುಚ್ಛವೆಂದು ಬಗೆಯಬಾರದು. ಕೈಕೆಲಸ ಮಾಡಿಯೂ ಮೂಲಭೂತ ಆಸಕ್ತಿ ಬೌದ್ಧಿಕವಾಗಿ ಉಳಿಯಬೇಕು; ಪ್ರಯತ್ನ ಪರಮಾವಧಿ ನೈಪುಣ್ಯದತ್ತ ಇರಬೇಕು. ಬ್ರಾಹ್ಮಣರಲ್ಲಿ ಲೋಕೋತ್ತರ ಬುದ್ಧಿಶಕ್ತಿ ಅಥವಾ ಸಾಮರ್ಥ್ಯ ಇದೆಯೆಂಬುದು ಮೂಢನಂಬಿಕೆಯಾದ್ದರಿಂದ ಮೇಲೆ ಹೇಳಿದ್ದು ಸುಲಭವಲ್ಲವೆಂದು ನಾನು ಬಲ್ಲೆ. ಎಲ್ಲರಿಗೂ ವಿಜ್ಞಾನವೋ ತತ್ವಜ್ಞಾನವೋ ನೈಪುಣ್ಯವೋ ಪೂರ್ತಿ ಸಾಧ್ಯವಾಗಲಿಕ್ಕಿಲ್ಲ. ಆದರೂ ಆ ಒಲವುಗಳನ್ನು ಪ್ರಯತ್ನಪೂರ್ವಕ ಬೆಳಸಿಕೊಂಡರೆ ಒಂದು ಜನಾಂಗವಾಗಿ ಬ್ರಾಹ್ಮಣರಿಗೊಂದು ಈಥೋಸ್ ಉಂಟಾದೀತು. ಅದು ಅವರನ್ನು ಕಾಪಾಡೀತು. ಕಷ್ಟದ ಕೆಲಸ; ಆದರೆ ಬ್ರಾಹ್ಮಣರು ಒಂದು ಗುಂಪಾಗಿ ಉಳಿದು ಬದುಕಬೇಕೆಂಬ ಕಡು ಬಯಕೆ ಬ್ರಾಹ್ಮಣರಿಗಿದ್ದರೆ ಆ ಕಷ್ಟಕ್ಕೆ ಅವರು ಸಿದ್ಧರಾಗಬೇಕು. ಹೌದು, ಬಯಕೆ ಇದ್ದರೆ!

ಹಿರಿಯರಾದ ಶ್ರೀ ಪಿ.ವಿ. ಜೋಶಿಯವರು ಬ್ರಾಹ್ಮಣನಿಗೆ ರಾಜಕಾರಣ ಬೇಡವೆಂದು ತಮ್ಮ ಪಕ್ವಾನುಭವದಿಂದ ಸೂಚಿಸಿದ್ದಾರೆ. ಆದರೆ ಇಂದು ರಾಜಕೀಯ ಇಲ್ಲದ ಯಾವ ರಂಗವೂ ಉಳಿದಿಲ್ಲ. ವ್ಯಾಪಾರ, ನೌಕರಿ, ವಿಶ್ವವಿದ್ಯಾಲಯ, ಶಾಲೆ, ಕಾಲೇಜು, ಕೃಷಿ, ಎಲ್ಲದರಲ್ಲಿಯೂ ರಾಜಕಾರಣ ತುಂಬಿರುವಾಗ ಬ್ರಾಹ್ಮಣ ಅದರಿಂದ ತಪ್ಪಿಸಿಕೊಂಡು ಬದುಕುವುದು ಹೇಗೆ? ಅಲ್ಲದೆ ಚುನಾವಣಾ ರಾಜಕೀಯವನ್ನು ತೊರೆಯುತ್ತೇನೆನ್ನುವುದು ಎರಡನೇ ದರ್ಜೆಯ ನಾಗರಿಕತ್ವವನ್ನು ಸ್ವೀಕರಿಸಿದಂತಲ್ಲವೆ? ಬ್ರಾಹ್ಮಣರು-ಪ್ರತ್ಯೇಕ ಸಮಾಜವಾಗಿ ಉಳಿಯಬೇಕೆಂದಿದ್ದರೆ ಏನೇನು ಮಾಡಬೇಕೆಂಬುದನ್ನು ವಿವರವಾಗಿ ಯೋಚಿಸುವುದು ಅವರ ಸಂಘಟನೆ ಕೈಕೊಳ್ಳುವವರ ಕೆಲಸ. ಅದು ಕೆಲಸ ಮಾಡುತ್ತ ಮಾಡುತ್ತ ನಿರ್ಧರಿಸಬೇಕಾದ್ದು.

೭. ಆದರೂ ಆದರ್ಶ ಪರಿಹಾರ ಬ್ರಾಹ್ಮಣರು ಅಖಂಡ ಹಿಂದೂ ಸಮಾಜದಲ್ಲಿ ಲೀನವಾಗಿ ಹೋಗುವುದು ಎಂದು ನಾನು ಬರೆದಿದ್ದೇನೆ. ಅದು ಸದ್ಯಕ್ಕಂತೂ ಕಷ್ಟದ್ದೆಂದೂ ಹೇಳಿದ್ದೇನೆ. ಹೀಗೆ ಹೇಳಿದ್ದಕ್ಕೆ ಪ್ರೊ. ಪಾಟೀಲರು ನನ್ನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಆದರೆ ಜಾತಿಯನ್ನು ನಿರಾಕರಿಸುವ ಯತ್ನ ಮಾಡಿದ ಬ್ರಾಹ್ಮಣರಿಗೆ ಏನೇನಾಗಿದೆಯೆಂದು

ಅವರು ಅರಿಯದವರಲ್ಲ. ಜಾತಿ-ಜನಿವಾರ ಬಿಟ್ಟ ಶಿವರಾಮ ಕಾರಂತರಿಗೆ, ಅನಂತಮೂರ್ತಿಯವರಿಗೆ 'ಶೂದ್ರ ಸಾಹಿತಿ'ಗಳೆನಿಸಿಕೊಂಡವರಿಂದ ಏನೇನು ಬಿರುದು ಸಿಕ್ಕಿತೆಂದು ನೋಡಿದ ಮೇಲೆಯೇ ನನಗೆ ಈ ಬಗ್ಗೆ ನಿರಾಶೆ ಆದದ್ದು. ಒಂದು ಗುಂಪಿನ ಮೇಲೆ ಮಿತಿ ಮೀರಿದ ಒತ್ತಡ ಬಿದ್ದರೆ ಅದು ಅನಿವಾರ್ಯವಾಗಿ ತನ್ನ ಗತಕಾಲದ ಚಿಪ್ಪಿನೊಳಗೆ ಹುದುಗಿಕೊಳ್ಳುತ್ತದೆ. ನಮ್ಮ ದೇಶದಲ್ಲಿ ಪ್ರತಿಯೊಂದು ಪ್ರಗತಿಪರ ಚಳವಳಿಯೂ ಕೊನೆಯಲ್ಲಿ ನಾಯಕಪಟ್ಟದ ಬಂಡೆಗಲ್ಲಿಗೆ ಅಪ್ಪಳಿಸಿ ಛಿನ್ನ ವಿಚ್ಛಿನ್ನವಾಗಿ ಹೋಗುತ್ತದೆ. ಬ್ರಾಹ್ಮಣನಾಗಿ ಹುಟ್ಟಿದವನು ಏನನ್ನೇ ಬಿಟ್ಟರೂ ಹಿಡಿದರೂ ಈ ಬಂಡೆಗಲ್ಲನ್ನು ಅವನು ಎದುರಿಸಲೇಬೇಕಾಗುತ್ತದೆ. ಅವನು ಅತ್ಯಂತ ವಿಧೇಯ ಅನುಯಾಯಿಯಾಗಿರಲು ಒಪ್ಪದೆ ಇದ್ದರೆ ತತ್ಕ್ಷಣ ಅವನ ಜಾತಿಯನ್ನು ಹೊರತೆಗೆಯಲಾಗುತ್ತದೆ. ಏನು ಮಾಡಿದರೂ ನಿಮ್ಮ ಜಾತಿ ನಿಮ್ಮನ್ನು ಬಿಡದೆಂದ ಮೇಲೆ ವಸ್ತುಸ್ಥಿತಿಯನ್ನೊಪ್ಪಿಕೊಂಡು ಎದ್ದು ನಿಂತು ಹೋರಾಡುವುದೊಂದೇ ಬ್ರಾಹ್ಮಣರಿಗಿರುವ ಗೌರವದ ದಾರಿಯಲ್ಲವೆ?

೮. ಯಹೂದ್ಯರ ಸಾಮ್ಯವನ್ನು ನಾನು ಉಲ್ಲೇಖಿಸಿದ್ದಕ್ಕೆ ಹಲವರಲ್ಲಿ ತಪ್ಪು ತಿಳುವಳಿಕೆ ಉಂಟಾಗಿದೆ. ಬ್ರಾಹ್ಮಣರು ಪ್ರತ್ಯೇಕವಾಗಿ ಉಳಿದು ತಮ್ಮ ಬೌದ್ಧಿಕ, ವ್ಯಾವಹಾರಿಕ ಉನ್ನತಿಯನ್ನು ಉಳಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ ಇಟ್ಟುಕೊಂಡು ಅದರಲ್ಲಿ ಸಾಧಾರಣ ಯಶಸ್ಸನ್ನು ಪಡೆದರೆ ಅವರು ಯುರೋಪಿನ ಯಹೂದ್ಯರು ಎದುರಿಸಿದ ಸ್ಥಿತಿಯನ್ನು ಎದುರಿಸಿಬೇಕಾಗುತ್ತದೆ. ಯಹೂದ್ಯರನ್ನು ಕೊನೆಗೆ ಸಮೂಲ ನಾಶಮಾಡಿದವನು ಜರ್ಮನಿಯ ಹಿಟ್ಲರನಾದರೂ ಶತಮಾನಗಳಿಂದ ರಶಿಯದಿಂದ ಫ್ರಾನ್ಸಿನವರೆಗೆ ಇಡೀ ಯುರೋಪಿನಲ್ಲಿ ಅವರನ್ನು ಎಲ್ಲೆಡೆ ದ್ವೇಷಿಸಲಾಗುತ್ತಿತ್ತು. ಯಾವ ದೇಶದಲ್ಲಿ ಏನು ತೊಂದರೆ ಹುಟ್ಟಿದರೂ ಅದಕ್ಕೆ ಯಹೂದ್ಯರನ್ನು ಹೊಣೆ ಹಿಡಿಯಲಾಗುತ್ತಿತ್ತು. ಶ್ರೀ ಜಿ.ಟಿ. ನಾರಾಯಣರಾಯರು ಅದರ ಕಾರಣ ತಿಳಿಸಿದ್ದಾರೆ. ಪ್ರತ್ಯೇಕತೆಯನ್ನೂ ಉನ್ನತಿಯನ್ನೂ ಉಳಿಸಿಕೊಂಡ ಯಾವ ಅಲ್ಪಸಂಖ್ಯಾತ ಗುಂಪೂ ಬಹುಜನ ಸಮಾಜದ ಪೂರ್ವಾಗ್ರಹವನ್ನು ಎದುರಿಸಲೇಬೇಕಾಗುತ್ತದೆ. ಇದಕ್ಕೆ ನಮ್ಮ ದೇಶ ಹೊರತಾಗಿ ನಿಲ್ಲದು. ಬ್ರಾಹ್ಮಣರ ಮೇಲೆ ಈ ಹತ್ತು ವರ್ಷಗಳಲ್ಲಿ ಹೊರಿಸಲಾಗುತ್ತಿರುವ ಆರೋಪಗಳಲ್ಲಿ ಕೆಲವಾದರೂ ಯುರೋಪಿನ ಯಹೂದ್ಯರ ಮೇಲೆ ನಾಜಿ ರಾಜಕಾರಣಿಗಳು ಹೊರಿಸಿದಂಥವುಗಳೇ ಆಗಿವೆ. ಬ್ರಾಹ್ಮಣವಿರೋಧಿ ಪ್ರಚಾರದಲ್ಲಿ ನಿರತರಾದವರಿಗೆ ತಾವು ಎಂಥ ಬೆಂಕಿಗೆ ಗಾಳಿ ಹಾಕುತ್ತಿದ್ದೇವೆಂದು ಗೊತ್ತಿರಲಿಕ್ಕಿಲ್ಲ. ಅವರು ಬ್ರಾಹ್ಮಣರಿಗೆ ಯಾವ ಭೌತಿಕ ಹಿಂಸೆಯನ್ನೂ ಬಯಸುವುದಿಲ್ಲವೆಂದು ನಾನು ಬಲ್ಲೆ. ಆದರೆ ಒಮ್ಮೆ ದಳ್ಳುರಿ ಎದ್ದಿತೆಂದರೆ ಅದನ್ನು ಅಂಕೆಯಲ್ಲಿಡಲು ಅದನ್ನು ಹಚ್ಚಿದವರಿಂದಲೂ ಆಗದು. ಭಾರತದಲ್ಲಿ ಹೀಗಾಗಲಿಕ್ಕಿಲ್ಲೆಂದು ಯಾರಾದರೂ ಹೇಳುತ್ತಿದ್ದರೆ ಗಾಂಧೀವಧೆಯ ನಂತರ ಮಹಾರಾಷ್ಟ್ರದಲ್ಲಾದ ಬ್ರಾಹ್ಮಣ ಬೇಟೆಯನ್ನು ನೆನೆದುಕೊಳ್ಳಲಿ.

ಎಲ್ಲಾ ಮುಗಿದು ಹೋದ ಮೇಲೆ ಬರೇ 'ಮರಣೋತ್ತರ ಪರೀಕ್ಷೆ' ಮಾತ್ರ ಸಾಧ್ಯವಾಗುತ್ತದೆ. ಗಾಂಧೀವಧೆಯ ನಂತರದಲ್ಲಿ ನಡೆದ ಕೃತ್ಯಗಳನ್ನು ಮಾಡಿದವರಿಗೆ

ಏನೇನೂ ಶಿಕ್ಷೆ ಆಗಲಿಲ್ಲ. ೬೦ ಲಕ್ಷ ಯಹೂದ್ಯರ ಕಗ್ಗೊಲೆಯಾದ ಮೇಲೆ ಮರಣೋತ್ತರ ಪರೀಕ್ಷೆ ಮಾಡಿದ ಸಹಾನುಭೂತಿಪರರು ಒಂದು ಮಾತು ಹೇಳಿದರು: ಯಹೂದ್ಯರು ಕುರಿಗಳಂತೆ ತಮ್ಮ ನಾಶಕ್ಕೆ ಕತ್ತೊಡ್ಡಿದರು. ಅವರೇನಾದರೂ ಎದ್ದು ನಿಂತು ಪ್ರತಿಭಟಿಸಿದ್ದರೆ ಇಷ್ಟು ದೊಡ್ಡ ದುರಂತ ಘಟಿಸುತ್ತಿರಲಿಲ್ಲ! ಯಹೂದ್ಯರನ್ನು ಉಲ್ಲೇಖಿಸುವಾಗ ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಉಳಿಯುವುದೆಂದರೇನು ಎಂಬ ಎಚ್ಚರಿಕೆ ಕೊಡುವುದೂ, ಪ್ರೊ. ಪಾಟೀಲ-ರಂಥವರಿಗೆ ಅವರ ಮಾತುಗಳ ಪರಿಣಾಮ ಎಲ್ಲಿಗೆ ಹೋದೀತೆಂದು ತೋರಿಸಿಕೊಡುವುದೂ ನನ್ನ ಉದ್ದೇಶವಾಗಿತ್ತು. ಯಹೂದ್ಯರ 'ಮರಣೋತ್ತರ ಪರೀಕ್ಷಾ' ವರದಿಯೇ ಬ್ರಾಹ್ಮಣರಿಗೆ ಸಂಘಟಿತರಾಗಲು ನಾನು ಸೂಚಿಸುವುದಕ್ಕೆ ಕಾರಣ. ಕೆಲವರು ಸೂಚಿಸಿದಂತೆ 'ಬ್ರಾಹ್ಮಣಸ್ಥಾನ'ವನ್ನು ಸ್ಥಾಪಿಸುವ ಯೋಚನೆ ಆಗದ ಹೋಗದ ಮಾತು. ಬ್ರಾಹ್ಮಣರು ಚಾಪೆಯ ಕೆಳಗೆ ನುಸುಳಿ ಬದುಕಬಹುದೆಂಬ ಭ್ರಮೆ ಬಿಟ್ಟು ಧೀರರಾಗಬೇಕು.

೯. ನನ್ನ ಅಭಿಮಾನಿಗಳಾದ ಶ್ರೀ ಜಯದೇವರಿಗೆ (ಪ್ರೊ. ಪಾಟೀಲರೂ ನನ್ನ ಮೇಲೆ ಆದರವುಳ್ಳವರೆ) ನಾನು ಬ್ರಾಹ್ಮಣನೆಂಬಂತೆ ಬರೆದದ್ದು ನಿರಾಶೆಯುಂಟುಮಾಡಿದಂತೆ ತೋರುತ್ತದೆ. ಹಿಂದಿನಂತೆ ಇಂದಾದರೂ ಯಾವೊಂದು ಸಾರ್ವಜನಿಕ ಕರ್ತವ್ಯ ನನ್ನ ಪಾಲಿಗೆ ಬಂದರೆ ಜಾತಿಪ್ರಜ್ಞೆಯಿಲ್ಲದೇ ಅದನ್ನು ಮಾಡುತ್ತೇನೆಂದು ನಾನು ಅವರಿಗೆ ಆಶ್ವಾಸನ ಕೊಡುತ್ತೇನೆ. ಅನ್ಯಾಯದ ಆರೋಪಗಳನ್ನು ಕೇಳಿ ಕೇಳಿ ಬೇಸತ್ತು ನಾನು ಬರೆದೆನಷ್ಟೆ. ವ್ಯಕ್ತಿಗೆ ಹೇಗೋ ಗುಂಪುಗಳಿಗೂ-ಅಪರಾಧಿಗಳಿಗೆ ಕೂಡ-ಆತ್ಮರಕ್ಷಣೆಯ ಹಕ್ಕು ಮೂಲಭೂತವಾದದ್ದು ತಾನೆ! ನನ್ನ ಲೇಖನ ಪ್ರಕಟವಾದ ನಂತರ ಪ್ರಥಮತಃ ನನ್ನನ್ನು ಅಭಿನಂದಿಸಿದವರು ಬ್ರಾಹ್ಮಣರಲ್ಲ , ಒಬ್ಬ ಬ್ರಾಹ್ಮಣೇತರ ವೃದ್ಧರು ಎಂಬುದನ್ನು ಕೃತಜ್ಞತೆಯಿಂದ ಉಲ್ಲೇಖಿಸುತ್ತೇನೆ. (ನನಗೆ ಬ್ರಾಹ್ಮಣೇತರ ಅಭಿಮಾನಿಗಳೇ ಹೆಚ್ಚು ಜನರು.) ನಿಜವಾಗಿ ಹಿಂದುಳಿದ ಜಾತಿಗಳಿಗೆ ಕೆಲ ಕಾಲ ಕೆಲ ಅಧಿಕ ಸೌಕರ್ಯಗಳನ್ನು ಕೊಡುವುದು ಅನಿವಾರ್ಯವೆಂದು ನಾನು ಒಪ್ಪುತ್ತೇನೆ (ಹಾಗೆ ಬರೆದೂ ಇದ್ದೇನೆ). ಆದರೆ ಇದಕ್ಕಾಗಿ ದಿನ ಬೆಳಗಾದರೆ ಒಂದು ಜಾತಿಯ ಮೇಲೆ ಕೆಂಡ ಕಾರುವ ಅಗತ್ಯವಿಲ್ಲ-ಅದೂ ಸಾರಾಸಾರ ವಿಚಾರವುಳ್ಳ ಬೌದ್ಧಿಕ ಜನ. ಬೌದ್ಧರು ಮತ್ತು ಜಾತಿಪದ್ಧತಿ ವಿಷಯದ ಬಗ್ಗೆ ದೀರ್ಘನಿಕಾಯವನ್ನು ಶ್ರೀ ಜಯದೇವರು ನೋಡಬಹುದು.

*(ಕಸ್ತೂರಿ, ಜೂನ್, ೧೯೭೩)*

■

# 'ಗೊಡ್ಡು ಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕ ಮತ'

## (ಮತ್ತೊಂದು ಪ್ರತಿಕ್ರಿಯೆ)

ಸಂಕ್ರಮಣ ೧೯೭೩ರಲ್ಲಿ ಭಗವಾನ್ ಎಂಬುವರು ಬರೆದ 'ಗೊಡ್ಡು ಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕ ಮತ' ಎಂಬ ಲೇಖನವನ್ನು ಓದಿದೆ. ಶ್ರೀ ಭಗವಾನನೇ ಸ್ವತಃ ಬರೆದ ಮೇಲೆ ಅದು ಸರಿಯೇ ಇರಬೇಕು, ಅದನ್ನು ಪ್ರಶ್ನಿಸುವುದು ಪಾಖಂಡತನವಾದೀತು ಎಂದು ತೋರಿತು. ಆದರೆ ಆಮೇಲೆ ಬ್ರಾಹ್ಮಣರು ಕಂಡ ಭಗವಾನ್ ಯಾವಾಗಲೂ ಪ್ರಾಮಾಣಿಕ ಮತ್ತು ನ್ಯಾಯಶೀಲ ಇಸಮಲ್ಲವೆಂದು ನೆನಪಾಯಿತು. ಕೆಲವು ದುರ್ಜನರನ್ನು ದುರ್ಮಾರ್ಗಕ್ಕೆಳೆಯುವ ಅಥವಾ ಅವರನ್ನು ದುಷ್ಟರಾಗಿಯೆ ಉಳಿಸುವ ಸಲುವಾಗಿ ಇಡೀ ಒಂದು ಅವತಾರವನ್ನೇ ಎತ್ತುವ ಕಷ್ಟ ತೆಗೆದುಕೊಳ್ಳಲು ಸಿದ್ಧನಾದ ವಂಚಕ ಶಿಖಾಮಣಿ ಅವನು. ಈ ಆಟದಲ್ಲಿ ಕೆಲ ದುಷ್ಟರ ಸಂಗಡ ಅನೇಕ ಪಾಪದ ಪ್ರಾಣಿಗಳು ದುರ್ಜನರಲ್ಲದಿದ್ದರೂ ತಪ್ಪುದಾರಿ ಹಿಡಿದು ನರಕಕ್ಕೆ ಹೋಗಬೇಕಾಗುತ್ತದೆಂಬುದು ಶ್ರೀ ಭಗವಾನನ ಆತ್ಮಸಾಕ್ಷಿಗೆ ಸ್ವಲ್ಪವೂ ನೋವುಂಟು ಮಾಡುವುದಿಲ್ಲ. ಅವನಿಗೆ ಪ್ರಪಂಚದಲ್ಲಿ ದುರ್ಜನರನ್ನು ಖಾಯಂ ಆಗಿ ಉಳಿಸುವುದರಲ್ಲಿ ಒಂದು ನಿಹಿತ ಸ್ವಾರ್ಥ ಇದೆ. ದುರ್ಜನರು ಇಲ್ಲದೆ ಹೋದರೆ ಸಜ್ಜನರು ಕೂಡ ತನ್ನನ್ನು ಮರೆತಾರೆಂಬ ಸಂಶಯ ಅವನಿಗೆ. (ಸಂಶಯ ಏನು, ಅವನಿಗೆ ಖಾತ್ರಿಯೇ ಇದೆ. ಬ್ರಾಹ್ಮಣರು ಕಂಡ ಭಗವಾನನಲ್ಲಿ ಇತರ ಒಳ್ಳೇ ಗುಣಗಳು ಇರಲಿಕ್ಕಿಲ್ಲ; ಆದರೆ ಅವನು ತುಂಬಾ ವಾಸ್ತವವಾದಿ) ಆದ್ದರಿಂದ ಈ ಶ್ರೀ ಭಗವಾನನೂ ಬ್ರಾಹ್ಮಣರ ಭಗವಂತನದೇ ಇನ್ನೊಂದು ಅವತಾರವಿರಬಹುದೆಂದು ಬಗೆದು ಅವನ ಮಾಯಾವಿತನವನ್ನು ತೋರಿಸಿ ಕೆಲವರಾದರೂ ಸಜ್ಜನರನ್ನು ನರಕದಿಂದ ಉಳಿಸಬೇಕೆಂದು ನನಗನಿಸಿತು.

ಶ್ರೀ ಭಗವಾನನು ಅನಂತಮೂರ್ತಿಯವರ 'ಸಂಸ್ಕಾರ'ವನ್ನು ತಪ್ಪು ದಿಕ್ಕಿನಿಂದ ಬಾರಿಸುತ್ತಿದ್ದಾನೆ. ಸ್ವತಃ ಒಂದು ತರಹದ ಅಜಾಮಿಳ ಬ್ರಾಹ್ಮಣರಾದ ಅನಂತಮೂರ್ತಿಯವರಿಗೆ ಸಂಸ್ಕಾರ ಮಾಡಬೇಕಾದರೆ ಅವರ ಕಥೆಯ ಕೋಟೆಯಲ್ಲಿ ಸಾಕಷ್ಟು ಛಿದ್ರಗಳು ಇವೆ. ಒಂದು ದೊಡ್ಡ ಛಿದ್ರವೆಂದರೆ ನಾರಣಪ್ಪನ ಸಂಸ್ಕಾರ ಸಮಸ್ಯೆ ಪರಿಹರಿಸುವುದಕ್ಕೆ ಪ್ರಾಣೇಶಾಚಾರ್ಯರಂಥ ವಿದ್ವಾನ್ ಬ್ರಾಹ್ಮಣನು ತಪ್ಪು ಪುಸ್ತಕದಲ್ಲಿ ಹುಡುಕಿ ರಾತ್ರಿಯ ನಿದ್ದೆಯನ್ನೂ ಹಗಲಿನ ಊಟವನ್ನೂ ಕಳೆದುಕೊಂಡದ್ದು. ಅಜಾಮಿಳನಂಥ ಬ್ರಾಹ್ಮಣನನ್ನೇ ಹುಟ್ಟಲು ಕೊಟ್ಟ ಬ್ರಾಹ್ಮಣರು ಅಂಥವನು ಸತ್ತರೆ ಅವನ ಹೆಣವನ್ನು ಏನು ಮಾಡಬೇಕೆಂಬ ವಿಚಾರ

ಮಾಡದಷ್ಟು ಹೆಡ್ಡರಾಗಿರಲಿಲ್ಲ. ಬ್ರಾಹ್ಮಣರು ಏನು ಬಿಟ್ಟರೂ ಊಟ ಬಿಡುವವರಲ್ಲ. ಹೆಣ ತೆಗೆಯದೆ ಊಟಮಾಡಬಾರದೆಂಬ ನಿಯಮ ಮಾಡಿಕೊಂಡ ಮೇಲೆ ಅದನ್ನು ಬೇಗನೆ ಸಾಗಹಾಕಿ ಊಟವನ್ನು ಸಕಾಲದಲ್ಲಿ ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಅವರು ಮಾಡಿಕೊಂಡಿರಲೇಬೇಕು. ಮಾಡಿಯೇ ಇದ್ದಾರೆ. ಪ್ರಾಣೇಶಾಚಾರ್ಯರು ತಕ್ಕ ಸ್ಮೃತಿಗ್ರಂಥದಲ್ಲಿ ಹುಡುಕಿದ್ದರೆ ಐದು ನಿಮಿಷಗಳಲ್ಲಿ ನಾರಣಪ್ಪನನ್ನು ಏನು ಮಾಡಬೇಕೆಂದು ಅವರಿಗೆ ಗೊತ್ತಾಗುತ್ತಿತ್ತು. ಎಲ್ಲಿ ಹುಡುಕಬೇಕೆಂದೇ ತಿಳಿಯದವರು ಎಂಥಾ ವಿದ್ವಾಂಸ, ಎಂಥಾ ಬ್ರಾಹ್ಮಣ! ಅವರೆಲ್ಲೋ ಅಪ್‌ಸ್ಟಾರ್ಟ್ ಬ್ರಾಹ್ಮಣ ಇರಬೇಕೆಂದೇ ನನಗನಿಸುತ್ತದೆ. ಬ್ರಾಹ್ಮಣನ ಸೋಗುಹಾಕಿಕೊಂಡ ಮತ್ತಾರೋ ಇರಬೇಕು. ಆದ್ದರಿಂದ ಅವರನ್ನು 'ಅವರು' ಎನ್ನುವುದಕ್ಕೂ ನನಗೆ ಹೇವರಿಕೆಯಾಗುತ್ತದೆ. ಇನ್ನು ಮುಂದೆ 'ಅವನು' ಎಂದೇ ಸಂಬೋಧಿಸುತ್ತೇನೆ. ಆದರೆ ಬಡ ಅನಂತಮೂರ್ತಿಯವರು ಏನು ಮಾಡಿಯಾರು? ಪ್ರಾಣೇಶನಿಗೆ ಐದು ನಿಮಿಷಗಳಲ್ಲಿ ಉಪಾಯ ಸಿಕ್ಕಿದ್ದರೆ ಕಥೆ ಮುಂದೆ ಸಾಗುತ್ತಿರಲಿಲ್ಲ. ಸಾಗಿರದಿದ್ದರೆ ಭೂಕಂಪವಾಗುತ್ತಿರಲಿಲ್ಲ ಎಂಬುದು ನಿಜ. ಆದರೆ ಪ್ರಾಣೇಶಾಚಾರಿಗೆ ಚಂದ್ರಿಯ ಮೈರುಚಿ ಕಾಣುವ ಸಂದರ್ಭ ತಪ್ಪಿಹೋಗುತ್ತಿತ್ತು; 'ಸಂಸ್ಕಾರ' ಪುಸ್ತಕವಾಗಿ, ಸಿನೆಮ ಆಗಿ ಅಪಕೀರ್ತಿ ತಂದು ಅನಂತಮೂರ್ತಿಯವರನ್ನು ಪ್ರಸಿದ್ಧ ಬ್ರಾಹ್ಮಣಾಧಮನಾಗಿ ಮಾಡುವುದೂ ತಪ್ಪುತ್ತಿತ್ತು; ಭಗವಾನನಿಗೆ ಮತ್ತೊಮ್ಮೆ ಅವತಾರ ಮಾಡುವ ಅವಕಾಶವೂ ತಪ್ಪುತ್ತಿತ್ತು. ಕೊನೆಯದರಿಂದಂತೂ ಭೂಕಂಪವೇ ಆಗುತ್ತಿತ್ತು.

ಅನಂತಮೂರ್ತಿಯವರ ಮೇಲೆ ಗೋಳೀಬಾರು ಮಾಡುವುದಕ್ಕೆ ಇನ್ನೂ ಕೆಲ ಆಯಕಟ್ಟಿನ ಸ್ಥಳಗಳನ್ನು ಶ್ರೀಮದ್ಭಗವಾನನು ಗುರುತಿಸಬಹುದಿತ್ತು? ಆದರೆ ಭಗವಾನ ಅತ್ತ ಕಣ್ಣೆತ್ತಿ ನೋಡುವುದಿಲ್ಲ. ಪ್ರಾಣೇಶಾಚಾರಿಯ ಸೋಲಿಗೆ ಮತ್ತು ಚಾರ್ವಾಕ ನಾರಣಪ್ಪನ ಸೋಲಿಗೆ ಕಾರಣವಾದದ್ದು ವಿಚಾರಹೀನ ಅಥವಾ ಅವೈಜ್ಞಾನಿಕ ಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕತನ ಎಂದು ಭಗವಾನನು ಹೇಳುವುದರಲ್ಲಿ ಹುರುಳಿಲ್ಲ. ಯಾಕೆಂದರೆ ಬ್ರಾಹ್ಮಣ್ಯದಲ್ಲಿ ವಿಚಾರಯುಕ್ತವಾದದ್ದು ಅಥವಾ ವೈಜ್ಞಾನಿಕವಾದದ್ದು ಏನೂ ಇರಲಿಕ್ಕೇ ಸಾಧ್ಯವಿಲ್ಲೆಂಬುದು ಆಧುನಿಕ ವೈಜ್ಞಾನಿಕವಾದದ ಲೇಟೆಸ್ಟ್ ಮೂಲಭೂತ ನಿಲುಮೆಯಾಗಿದೆ. ಅವರ ಕಷ್ಟವೆಂದರೆ ಇಬ್ಬರೂ ಇಡಿಯ ಮನುಷ್ಯರೇ ಅಲ್ಲ. ನಾರಾಯಣಪ್ಪ ಪ್ರಾಣೇಶಾಚಾರಿ ಸೇರಿದರೆ ಮಾತ್ರ ಒಬ್ಬ ಮನುಷ್ಯ. ನಾರಣಪ್ಪ ಸೂಳೇಗಾರಿಕೆ ಮಾಡುತ್ತಾನೆಂಬುದಕ್ಕೆ ಪ್ರಾಣೇಶಾಚಾರಿ ಸ್ವಯಂ ಹೇರಿಕೊಂಡ ಬ್ರಹ್ಮಚರ್ಯ ಆಚರಿಸುತ್ತಾನೆ. ಅವನು ಕುಡಿಯುತ್ತಾನೆಂಬುದಕ್ಕೆ ಇವನು ಕೃಚ್ಛ್ರವ್ರತಾಚರಣೆ ಮಾಡುತ್ತಾನೆ. ಹಾಗೆಯೇ ಇವನು ಸದಾಚಾರ ಪ್ರದರ್ಶನ ಮಾಡುತ್ತಾನೆಂಬುದಕ್ಕೇ ನಾರಣಪ್ಪ ದುರಾಚಾರಿಯಾಗುತ್ತಾನೆ. ಇಬ್ಬರಿಗೂ ಸ್ವಂತ ಬುದ್ಧಿಯಿಲ್ಲ—ಸ್ವಂತನಿಷ್ಠೆಯೂ ನಂಬಿಕೆಯೂ ಇಲ್ಲ. ಪ್ರಾಣೇಶಾಚಾರಿ ಬಲ ಅಂದರೆ ನಾರಣಪ್ಪ ಎಡ ಅನ್ನಬೇಕು. ಪ್ರಾಣೇಶಾಚಾರಿ ಬಲವನ್ನು ಆರಿಸಿಕೊಂಡದ್ದೂ ಸ್ವಂತ ಆಯ್ಕೆಯಲ್ಲ. ಕಾಶಿಯಲ್ಲಿ

ಅವನ ಸಹಪಾಠಿಯಾಗಿದ್ದ—ಏನವನ ಹೆಸರು—ಶಾಸ್ತ್ರಿ ಸೂಳೇಮನೆಗೆ ಹೋದದ್ದರಿಂದ ಪ್ರಾಣೇಶ ಬ್ರಹ್ಮಚರ್ಯೆಯ ಬೇಡಿ ತೊಟ್ಟ. ಶಾಸ್ತ್ರಿಯಿಂದ ಅಗಲಿದ ಮೇಲೆ ನಾರಣಪ್ಪನಿಗೆ ಆತುಕೊಂಡ. ಅವನಿಗೆ ಸ್ವಂತವಾಗಿ ನಿಲ್ಲಲು ಎರಡು ಕಾಲಿಲ್ಲ. ಆದ್ದರಿಂದ ಶಾಸ್ತ್ರಿಯ ನಂತರ ನಾರಣಪ್ಪ ಆಚಾರಿಯ Picture of Dorian Gray ಆಗುತ್ತಾನೆ. ಇಬ್ಬರೂ ಎರಡು ಕೋಲುಗಳು ಒಂದಕ್ಕೊಂದು ತಲೆ ಆನಿಸಿ ಅಸ್ಥಿರವಾದ ಒಂದು ಸಮತೋಲನ ಸ್ಥಾಪಿಸಿಕೊಂಡಂತೆ ಬಾಳುತ್ತಾರೆ. ಒಂದು ಕೋಲು ಕೊನೆಗೆ ಡಮ್ಮನೆ ಬಿತ್ತು. ಇನ್ನೊಂದೂ ಮಲಗಿತು. ಡೋರಿಯನ್ ಗ್ರೇಯ ಚಿತ್ರ ಹರಿಯಿತು. ಆ ಚಿತ್ರಕ್ಕೆ ಟ್ರಾನ್ಸ್‌ಫರ್ ಆಗಿದ್ದ ವಿಕಾರಗಳೆಲ್ಲ ಥಟ್ಟನೆ ಪ್ರಾಣೇಶಾಚಾರಿಗೆ ಮರುವರ್ಗಾವಣೆಯಾದವು. ನಾರಣಪ್ಪನ ಚಂದ್ರಿಯನ್ನು ಪ್ರಾಣೇಶಾಚಾರಿ ಅಪ್ಪಿಕೊಂಡ; ಪ್ರಾಣೇಶಾಚಾರಿಯ 'ಭಗವಂತ ನಾರಾಯಣ'ನನ್ನು ನಾರಣಪ್ಪ ಪ್ರಾಣಪ್ರಯಾಣ ಸಮಯದಲ್ಲಿ ತಬ್ಬಿಕೊಂಡ. ಚಂದ್ರಿಯನ್ನು ಅಪ್ಪಿಕೊಂಡಾಗ ಆಚಾರಿಗೆ ತೊಳಲಾಟ ಯಾಕಾಗುವುದಿಲ್ಲ ಅಂದರೆ ಅಂಥಾ ತೊಳಲಾಟ ಹುಟ್ಟಿಸುವ ನಂಬಿಕೆಗಳು ಅವನ ಮೂಲ ಅಂತರಂಗದಲ್ಲಿ ಇರಲೇ ಇಲ್ಲ. ಅವನಲ್ಲಿ ಕ್ರಿಯಾಶಕ್ತಿ ಇದ್ದೇ ಇಲ್ಲ; ಪ್ರತಿಕ್ರಿಯಾಶಕ್ತಿ ಮಾತ್ರ ಇತ್ತು. ಕ್ರಿಯಾಶಕ್ತಿಯ ಉಗಮ ನಷ್ಟವಾದ ನಂತರ ಅವನಿಗೆ ಕಣ್ಣು ಕಟ್ಟಿ ಕಾಡಿನಲ್ಲಿ ಬಿಟ್ಟಂತಾಗುತ್ತದೆ. ಕಥೆಯ ಮೂರನೇ ಭಾಗದಲ್ಲಿ ಬರುವ ಅವನ ಭ್ರಾಂತ ಅಲೆದಾಟ ಅದೇ. ಇದೆಲ್ಲ ತೀರ ಅರ್ಥರಹಿತ—ಅಬ್ಸರ್ಡ್—ಅನಿಸುತ್ತದೆಯೆ? ಹೌದು, ಹಳೇ ಸಾಂಪ್ರದಾಯಕ ಸಮಾಜಗಳೆಲ್ಲ ಅಬ್ಸರ್ಡಿಟಿಯ ಮೊಟ್ಟೆಗಳಾಗಿರುತ್ತವೆ. ಅವುಗಳಲ್ಲಿ ಅರ್ಥವಿರುವಂತೆ ಕಾಣುವುದು ನಿಜವಾದ ಹೊಸ ಸಮಸ್ಯೆಗಳು ಧುತ್ತೆಂದು ಅವುಗಳ ಮುಂದೆ ನಿಲ್ಲದಿರುವವರೆಗೆ ಮಾತ್ರ. ಹೊಸ ಸಮಸ್ಯೆಗಳು ಎದುರಾದೊಡನೆ ಅವುಗಳ ಅಬ್ಸರ್ಡಿಟಿ ಎದ್ದು ಕಾಣುತ್ತದೆ. ಅನಂತಮೂರ್ತಿಯವರು ಬ್ರಾಹ್ಮಣ ಸಮಾಜವನ್ನು ಆರಿಸಿಕೊಂಡದ್ದು ಆ ಸಮಾಜ ಅವರು ಓಡಾಡಿದ ಸಮಾಜ ಎಂಬುದರಿಂದ. ಗೌಡರ, ಲಿಂಗಾಯತರ, ಹೊಲೆಯರ ಯಾವ ಅಂಧಪರಂಪರಾಗತ ಸಮಾಜವನ್ನೂ ಹೀಗೆ ಚಿತ್ರಿಸಲು ಸಾಧ್ಯವಿದೆ. ಅವರಿಗೆ ಆ ಸಮಾಜಗಳ ಅಷ್ಟು ಪರಿಚಯವಿಲ್ಲ; ಇದ್ದರೂ ಅವರು ಅಂಥ ಕೆಲಸಕ್ಕೆ ಅಲ್ಲಿ ಕೈಹಾಕ ಹೋಗಿದ್ದರೆ ತಮ್ಮ ಮೃದುವಾದ ಗೋದಿಬಣ್ಣದ ಚರ್ಮದ ಮೇಲೆ ಅವರಿಗೆ ಇದ್ದ ಮಮತೆ ಅದಕ್ಕೆ ಕಾರಣವಾಗಿರಬಹುದು. ಅರ್ಥಾತ್ ಆ ಸಮಾಜಗಳು ಇನ್ನೂ ಪರಿಪಕ್ವ ಅಬ್ಸರ್ಡಿಟಿಯ ಅವಸ್ಥೆಯನ್ನು ತಲುಪಿಲ್ಲ.

ಈ ಅಬ್ಸರ್ಡಿಟಿಯ ಮೊಟ್ಟೆಯಲ್ಲಿ ಜೀವಂತ ಮನುಷ್ಯರೆಂದರೆ ಗುಟ್ಟಾಗಿ ಅವಲಕ್ಕಿ ಮುಕ್ಕಿದ ಆ ಪಾಮರಬ್ರಾಹ್ಮಣ, ಹೆಣಕ್ಕೆ ಜಾತಿಯಿಲ್ಲ ಎಂಬ ಅಂತರ್ಜ್ಞಾನ ಪಡೆದ ಚಂದ್ರಿ, ಬದುಕುವುದರಲ್ಲಿ ಅರ್ಥವಿದೆಯೆಂದು ತೋರಿಸುವ ಮಾಲೇರ ಪುಟ್ಟ—ಮೇಲೆ ಹೇಳಿದ ವರಸೆಯಲ್ಲೇ ಅವರು ಉತ್ತರೋತ್ತರ ಜೀವಂತ, ಆದ್ದರಿಂದ ಅರ್ಥವುಳ್ಳ ವ್ಯಕ್ತಿಗಳು. ಅವರು ಜನರು; ಪ್ರಾಣೇಶಾಚಾರಿ, ನಾರಣಪ್ಪ ಇತ್ಯಾದಿಗಳ ಹಾಗೆ ಬರೇ ಫಾರ್ಮುಲಾ ಅಥವಾ

ಕೊರಲರಿ ಅಥವಾ ಕಾನ್‌ವರ್ಸ್‌ಗಳಲ್ಲ. ಪ್ರಾಣೇಶಾಚಾರಿಯೆಂಬ ಫಾರ್ಮುಲಾದ Xಗೆ ಏನೋ ಒಂದು ನಿಜವಾದ ಅಂಕಿಯ ಬೆಲೆ ಕೆಲ ನಿಮಿಷ ಅಥವಾ ತಾಸುಗಳ ಕಾಲ ಚಂದ್ರಿ, ಪುಟ್ಟರ ಸಾನ್ನಿಧ್ಯದಲ್ಲಿ ಬರುತ್ತದೆ. ಅವರು ಕಣ್ಮರೆಯಾದೊಡನೆ ಅದು ಮೊದಲಿನಂತೆ ಅಬ್ಸರ್ಡ್ ಆಗುತ್ತದೆ. ಚಂದ್ರಿಯ ಕಡೆ ಹೋಗಬೇಕೆಂದ ಪ್ರಾಣೇಶಾಚಾರಿಗೆ ಕುಂದಾಪುರದ ಗಾಡಿ ಸಿಗುವುದಿಲ್ಲ. ದುರ್ವಾಸಪುರದ್ದೇ ಸಿಗುತ್ತದೆ. ನಾರಣಪ್ಪನಿಗೆ ಮುಸಲ್ಮಾನರ ಕೈಯಲ್ಲಾದರೂ ಸಂಸ್ಕಾರವಾಗುತ್ತದೆ. ಪ್ರಾಣೇಶಾಚಾರಿಯ ಜೀವಂತ ಹೆಣಕ್ಕೆ ಸಂಸ್ಕಾರವೂ ಇಲ್ಲ, ಪ್ರಜ್ಞೆಯೂ ಬರುವುದಿಲ್ಲ. ರೂಢವಾದ ಸಂಸ್ಕಾರಕ್ಕೆ ಆತ ಎಷ್ಟು ರೂಢನಾಗಿದ್ದಾನೆಂದರೆ ಅವನೊಂದು ಶಾಶ್ವತ ಕೋಮಾ ಸ್ಥಿತಿಯಲ್ಲಿದ್ದಾನೆ. ತನ್ನ ಸಮಸ್ಯೆಗಳನ್ನು ತೀರಿಸಿಕೊಳ್ಳಲಾರದ ಸಮಾಜಗಳ ಅಂತ್ಯ ಸಂಸ್ಕಾರಕ್ಕೆ ಆತಂಕವಾಗುವುದು ಅದರ ಕೊಳಕು ಮುಖ (ನಾರಣಪ್ಪ)ವಲ್ಲ, ಅದರ ಚೆಲ್ಲು ಮುಖ (ಪ್ರಾಣೇಶಾಚಾರಿ) ಎಂಬ ತಥ್ಯವೂ ಇದರಿಂದ ಧ್ವನಿಸುತ್ತದೆ. ಕ್ರಾಂತಿಕಾರರಿಗೆ ಈ ತಥ್ಯ ಗೊತ್ತು. ಆದ್ದರಿಂದಲೇ ಅವರು ತಾವು ನಾಶ ಮಾಡಬೇಕೆಂದಿರುವ ವ್ಯವಸ್ಥೆಯ ಅಸಹ್ಯ ಮುಖಕ್ಕಿಂತ ಮೊದಲು ಸಹ್ಯ ಮುಖದ ಮೇಲೆ ದಾಳಿ ಮಾಡುತ್ತಾರೆ.

* * *

ಶ್ರೀ ಭಗವಾನನು 'ಸಂಸ್ಕಾರ'ದಲ್ಲಿ ಆದರ್ಶವಾದ ಇಲ್ಲ ಎಂದು ತಕರಾರು ಮಾಡುತ್ತಾನೆ. ಬರೇ ಹೊಲಸನ್ನು ಪ್ರದರ್ಶಿಸುವುದು ವಾಸ್ತವವಾದವಾಗದು ಎಂದೂ ಟೀಕಿಸುತ್ತಾನೆ. ಬ್ರಾಹ್ಮಣರು ಈ ಟೀಕೆಯನ್ನು ಆದರ್ಶವಾದದ ಮೇಲಿನ ಪ್ರೀತಿಯಿಂದಲ್ಲದಿದ್ದರೂ ತಮ್ಮ ಜಾತಿಯವರ ಮೇಲೆ ಕೊಡಲಿಗೆ ಕಾವಾಗಿ ಅನಂತಮೂರ್ತಿಯವರು ದಾಳಿ ಮಾಡಿದ್ದರ ಸೇಡಿಗಾಗಿ ಸ್ವಾಗತಿಸುತ್ತಾರೆ. ಬ್ರಾಹ್ಮಣರಿಗೂ ಆದರ್ಶವಾದಕ್ಕೂ ಅಂಥಾ ಅಚ್ಚು ಮೆಚ್ಚೇನೂ ಇಲ್ಲ, ಇರಲಿಲ್ಲ—ಎಂಬುದು ಮಾತ್ರ ಸತ್ಯ. ಅವರು ಮೆಚ್ಚುವುದು ಪ್ರಪಂಚದ ರಾಗದ್ವೇಷಗಳನ್ನು ಪೂರ್ಣಪ್ರಕಾಶಕ್ಕೆ ಹಿಡಿಯುವ ಜೀವನ ನಾಟಕವನ್ನು. ಮಹಾಭಾರತದ ಉತ್ತರೋತ್ತರ ಆವೃತ್ತಿಗಳಲ್ಲಿ ಕೃಷ್ಣಭಗವಾನನ ಉಚ್ಛ್ರಾಯವಾಗುತ್ತ ಹೋಗುವುದು ಬ್ರಾಹ್ಮಣನ amoral ನಾಟಕೀಯ ದೃಷ್ಟಿಯ ಕುಪ್ರಸಿದ್ಧ ಉದಾಹರಣೆಯಾಗಿದೆ. ಆದರ್ಶವಾದಿ ನೀತಿವಾದಿ ಸಾಹಿತ್ಯವೆಲ್ಲ ಕನ್ನಡದಲ್ಲಂತೂ ಜೈನರಿಂದ, ಲಿಂಗವಂತರಿಂದ ಬಂದಿದೆ. ಪ್ರಪಂಚವನ್ನು ಬದಲಿಸುವ ಸಾಧ್ಯತೆಯಲ್ಲಿ ಮನುಷ್ಯನ perfectibilityಯಲ್ಲಿ ನಂಬಿಕೆ ಇರುವುದು ಈ ಮಂದಿಗೆ. ಸೌಮ್ಯ ಆಹಾರ ತಿಂದು, ಹಾಲಿಗಿಂತ ಮತ್ತೇರಿಸುವಂಥಾದ್ದೇನನ್ನೂ ಕುಡಿಯದೆ frigid ಹೆಂಡಂದಿರೊಡನೆ ಮಲಗಿ ದಡ್ಡು ಕಟ್ಟಿದ ಬ್ರಾಹ್ಮಣರ ಅಭಿರುಚಿಗೆ ಆದರ್ಶವಾದದ ರಸಾಯನ ಏನೂ ಆಕರ್ಷಕವಾಗುವುದಿಲ್ಲ. ಒದ್ದೆಬಟ್ಟೆ ಉಟ್ಟು ವೀರನಾರಾಯಣನ ಮಂಟಪದ ಕಂಬದ ಹತ್ತಿರ ನಿಂತಾಗ ಕುಮಾರವ್ಯಾಸನಿಗೆ ಮೈಬೆಚ್ಚಗೆ ಮಾಡುವುದಕ್ಕೆ ಭಾರತದ ಉದಗ್ರ ರಾಗದ್ವೇಷಗಳ ಕಥೆಯೇ ಬೇಕಾಯಿತು; ಆದರ್ಶವಾದಿ

ರಾಮಾಯಣ ಬರೇ 'ಕತೆಗಳ ಭಾರ' ಎನಿಸಿತವನಿಗೆ. ರಾಮಾಯಣ ಎರಡನೇ ದರ್ಜೆಯ ಕವಿಗಳ ಕೈಲಿ ಒದ್ದಾಡುತ್ತ ಕಡೆಗೆ ಕುವೆಂಪು ಬರವನ್ನು ಕಾಯಬೇಕಾಯಿತು. ಅವರು ತಮ್ಮ ಘನವಾದ ಆದರ್ಶವಾದದ ರೋಲರಿನ ಕೆಳಗೆ ಮಂಥರೆಯ ಬೆನ್ನನ್ನು ಕೂಡ ನೆಟ್ಟಗೆ ಮಾಡಿದರು. ಬ್ರಾಹ್ಮಣರು ಮಂಥರೆಯ ಡೊಂಕು ಬೆನ್ನನ್ನು ಡೊಂಕಾಗಿಯೇ ಕಾಣಲು ಬಯಸುತ್ತಾರೆ. ಚಂದ್ರಿಯ ಮೊಲೆಯನ್ನು ದುಂಡಾಗಿಯೇ ಇರಿಸಬಯಸುತ್ತಾರೆ. ಅನಂತಮೂರ್ತಿಯವರು ಅಜಾಮಿಳನಾದರೂ ಬ್ರಾಹ್ಮಣರೇ ಅಲ್ಲವೆ? ಅವರು ಸಜ್ಜನರನ್ನು ಮಡ್ಡಿ ತಲೆಯವರನ್ನಾಗಿಯೆ ಮಾಡಿ ಸಂತೋಷಿಸುವುದು ಶ್ರೀ ಭಗವಾನನಿಗೆ ಯಾಕೆ ಆಶ್ಚರ್ಯ ತರಿಸುತ್ತೋ ನಾ ಕಾಣೆ. ಕಾಗೆಗಳಿಂದ ಕೋಗಿಲೆಗಳ ಗಾನವನ್ನು ಭಗವಾನ್ ಯಾಕೆ ನಿರೀಕ್ಷಿಸುತ್ತಾನೆ? ಮೇಲಾಗಿ ಅನಂತಮೂರ್ತಿಯವರು ಆದರ್ಶಪಾತ್ರ ನಿರ್ಮಿಸುತ್ತೇನೆಂದು ಎಲ್ಲಿ ಪ್ರಾಮಿಸ್ ಮಾಡಿದ್ದರು? ಕಾಗೆಗಳು ಕೋಗಿಲೆಗಳಾದರೆ ಕೋಗಿಲೆಗಳಿಗೂ ಕಷ್ಟವೇ. ಕೋಗಿಲೆ ಮರಿಗಳನ್ನು ಸಾಕುವವರೊಂದು ಬೇಕಲ್ಲ!

* * *

ಇನ್ನು ನಾವು ಶ್ರೀಮದ್ಭಗವಾನನ ಲೇಖನದ ನಿಜವಾದ ಉದ್ದೇಶವನ್ನು ಹೊರಗೆಡಹುವ ಎರಡನೇ ಭಾಗಕ್ಕೆ ಬರುತ್ತೇವೆ. ಅದೆಂದರೆ ಜಾತಿ ಮತ್ತು ಹೆಣ್ಣು. ಅನಂತಮೂರ್ತಿಯವರನ್ನು ಬಹಳ ವರ್ಷಗಳ ನಂತರ ಈಗ ನೋಡುವಾಗ ಸಾಕಷ್ಟು ಕ್ರಾಂತಿಕಾರಿಗಳಾಗಿ ಭಗವಾನನಿಗೆ ಕಾಣಿಸುವುದೇ ಇಲ್ಲ. ಯಾಕಂದರೆ ಶೂದ್ರಸ್ತ್ರೀಯರನ್ನು ಅವರು ಬ್ರಾಹ್ಮಣರ ಭೋಗವಸ್ತುವಾಗಿ ಮಾಡಿದ್ದಾರೆ. ಶೂದ್ರಸ್ತ್ರೀಯರನ್ನು ಶೂದ್ರರದೇ ಭೋಗವಸ್ತುವಾಗಿ ಮಾಡಿದರೆ ಭಗವಾನನ ಆಕ್ಷೇಪವಿಲ್ಲ; ಬ್ರಾಹ್ಮಣ ಸ್ತ್ರೀಯರನ್ನೇ ಶೂದ್ರರ ಭೋಗವಸ್ತುವಾಗಿ ಮಾಡಿದರೆ ಅನಂತಮೂರ್ತಿ ತಾಜಾ ಕ್ರಾಂತಿಕಾರರಾಗುತ್ತಿದ್ದರು.

ಬ್ರಾಹ್ಮಣರು ತಮ್ಮ ಹೆಂಗಸರನ್ನು ಬೀಗದೊಳಗಿಟ್ಟು ಇತರರ ಹೆಂಗಸರನ್ನು ಕದಿಯುವುದು ಮಾತ್ರ ಪ್ರತಿಕ್ರಾಂತಿಕಾರಕ. ಆದರೆ ಮನು ಇಂಥ ಸಾರ್ವಜನಿಕ ಭೋಗವಸ್ತುವಾದ ಪ್ರತ್ಯೇಕ ಸ್ತ್ರೀವರ್ಗವನ್ನು ನಿರ್ಮಿಸಿದ್ದಾನೆಂಬುದನ್ನು ಶ್ರೀಮದ್ಭಗವಾನನು ಗಮನಿಸಬೇಕೆಂದು ನನ್ನ ವಿನಯಪೂರ್ವಕ ಕೋರಿಕೆ. ಅದೇ ಚಂದ್ರಿಯ ಜಾತಿ. ಚಂದ್ರಿ ಶೂದ್ರಳೂ ಅಲ್ಲ, ಬ್ರಾಹ್ಮಣಳೂ ಅಲ್ಲ—ತಾಜಾ ಸೂಳೇ ಜಾತಿ. ರುಸುಂ ಕೊಡುವ ತ್ರಾಣವಿದ್ದರೆ ಯಾರೂ ಅವಳನ್ನು ಭೋಗಿಸಬಹುದು.

ಅನಂತಮೂರ್ತಿಯವರು ಬ್ರಾಹ್ಮಣಿಯೊಬ್ಬಳನ್ನು ಶೂದ್ರನ ಸಂಗಡ ಮಲಗಿಸಬಹುದಾಗಿತ್ತು. ಹಾಗೆ ಮಾಡುವ ಬ್ರಾಹ್ಮಣಿಯರು ವಾಸ್ತವಿಕ ಪ್ರಪಂಚದಲ್ಲಿಯೂ ಇದ್ದಾರೆ. ಹೊಲತಿಯೊಡನೆ ಮಲಗಿ ಆಮೇಲೆ ಶುದ್ಧಾಚಾರಕ್ಕಾಗಿ ಸ್ನಾನ ಮಾಡಿ ಆಹ್ನಿಕಕ್ಕೆ ಹೋಗುವ ಬ್ರಾಹ್ಮಣರು ಬ್ರಾಹ್ಮಣ ನಿರ್ಮಿತ ಕಾದಂಬರಿಗಳಲ್ಲಿದ್ದ ಹಾಗೆಯೆ ಶೂದ್ರನೊಡನೆ ಮಲಗಿ

ಆಮೇಲೆ ಸಚೇಲ ಸ್ನಾನಮಾಡಿಯೆ ಮನೆಯೊಳಗೆ ಹೋಗಿ ಧಾಬಳಿ ಉಡುವ ಬ್ರಾಹ್ಮಣೆಯರು ವಾಸ್ತವಿಕ ಪ್ರಪಂಚದಲ್ಲಿದ್ದಾರೆ. ಅವರನ್ನು ಅನಂತಮೂರ್ತಿ ಕಂಡಿರಲೂಬಹುದು. ಅಂಥ ಒಂದು ಸ್ತ್ರೀಯನ್ನು ಶ್ರೀಮದ್ಭಗವಾನನ ಸಂಪ್ರೀತಿಗಾಗಿ ಬಲಿಕೊಡದೆ ಇದ್ದದ್ದು ದೊಡ್ಡ ಅಪರಾಧ. ಆದರೆ ಬಡಪಾಯಿ ಮೂರ್ತಿ ನಿರ್ಮಿಸಲು ಹೊರಟ ಸನ್ನಿವೇಶಕ್ಕೆ ಅದು ಹೊಂದಿಕೆಯಾಗುವುದು ಕಷ್ಟವಿತ್ತು. ಅಥವಾ ಹೊಂದಿಕೆಯಾಗುವಂತೆ ಕಥೆಯನ್ನು ತಿರುಗಿಸುವಷ್ಟು ಬುದ್ಧಿವಂತಿಕೆ ಅವರಲ್ಲಿ ಇದ್ದಿಲ್ಲ. ಅದಕ್ಕೆ ಅನೇಕ ವಿಡ್ದೂರಗಳಿದ್ದವು—ಇವೆ. ಅನಂತಮೂರ್ತಿ ಪುರುಷನು ಅಪೇಕ್ಷಿಸುವ ಉನ್ಮುಕ್ತ ಸ್ತ್ರೀಸುಖದ ಬಿಚ್ಚುಮೊಗ್ಗೆ ಬಣ್ಣನೆಗೆ ಇಳಿದಿದ್ದರು. ಇದನ್ನು ಕೊಡುವ ತ್ರಾಣವುಳ್ಳ ಬೆಳ್ಳಿಯನ್ನೋ ಕಾಳಿಯನ್ನೋ ಅವರ ಬ್ರಾಹ್ಮಣ ಪಾತ್ರಗಳು ಜೊಲ್ಲು ಸುರಿಸುತ್ತಾ ಬಣ್ಣಿಸುತ್ತವೆ.

ಬದಲಿಗೆ ಬ್ರಾಹ್ಮಣೆಯನ್ನು ಭೋಗಿಸುವ ಶೂದ್ರನ ಚಿತ್ರಣ ತರಬೇಕಾದರೆ ಏನಾಗುತ್ತದೆ? ಬ್ರಾಹ್ಮಣ ಹುಡುಗಿಯರನ್ನು ತೊಟ್ಟಿಲಿಂದಲೇ frigid ಆಗಲು ಬೆಳೆಸಲಾಗುತ್ತದೆ. ಅವರನ್ನು ಬ್ರಾಹ್ಮಣ ಪುರುಷರಿಗೆ ಇಷ್ಟವಾದ ಭೋಗ್ಯವಸ್ತುವಾಗಿ ಕೂಡ ಬೆಳೆಸಲಾಗುವುದಿಲ್ಲ. ಕೇವಲ ಸಂತಾನಕ್ಕೆ 'ಕ್ಷೇತ್ರ'ವಾಗಿ ಅವರನ್ನು ರೂಪಿಸುವುದೇ ಬ್ರಾಹ್ಮಣ ಸಮಾಜ ರೂಪಿಸಿದ ಸ್ತ್ರೀ ಚಾರಿತ್ರ್ಯದ ತಳಹದಿ. ಸಂಭೋಗ ಅವಳಿಗೆ ಸುಖವಲ್ಲ ಕರ್ತವ್ಯ (ಬ್ರಾಹ್ಮಣ ಆದರ್ಶದಲ್ಲಿ ಪುರುಷನಿಗೆ ಕೂಡ ಸಂಭೋಗ ಸುಖವಲ್ಲ—ಸುಖ ಆಗಬಾರದು. ಅವನಿಗೆ ಅದು ಗರ್ಭಾಧಾನ, ನಿಷೇಕ ಮಾತ್ರ. 'ಪ್ರಜಾಯೈ ಗೃಹಮೇಧಿನಾಮ್') ಇಂಥ ಸ್ತ್ರೀಯನ್ನು ಶೂದ್ರನೊಬ್ಬ ಭೋಗಿಸಿದರೆ ಅವನಿಗೆ ಸಿಗಬಹುದಾದ ಇಂದ್ರಿಯ ಸುಖ ಎಷ್ಟಿರಬಹುದು? ಅಂಥದೇನಾದರೂ ಬ್ರಾಹ್ಮಣೆಯಿಂದ ಸಿಗುವಂತಿದ್ದರೆ ಸುಖಾಶಿಯಾದ ಜೊಲ್ಲುಸುರುಕ ಬ್ರಾಹ್ಮಣನು ಶೂದ್ರ ಸ್ತ್ರೀಯ ಸಂಗಕ್ಕೆ ಬಾಯ್ಬಿಡುವನಾದರೂ ಏಕೆ? 'ಬೇಳೇ ಹುಳಿ ವಾಸನೆ ಬರುವ ಬಾಯಿಯ' ಬ್ರಾಹ್ಮಣ ಹೆಣ್ಣು ಬ್ರಾಹ್ಮಣನಿಗೇ ಅಸಹ್ಯಳಾಗಿದ್ದರೆ ಉನ್ಮುಕ್ತ ಸಂಭೋಗಕ್ಕೆ ಅಭ್ಯಸ್ತನಾದ ಶೂದ್ರನಿಗೆ ಅದರಲ್ಲಿ ರಸಾನುಭವ ಸಾಧ್ಯವಿಲ್ಲ. ಬ್ರಾಹ್ಮಣೆಯನ್ನು ಭೋಗಿಸಿ ಬಂದ ಶೂದ್ರ ಅದನ್ನು ಗೆಳೆಯರ ಮುಂದೆ ಹಾಡಿಹೊಗಳಲಾರ. ಬಹುಶಃ ಅನಂತಮೂರ್ತಿಯ ಸಮಸ್ಯೆ ಅದು.

ಬ್ರಾಹ್ಮಣರು ಶೂದ್ರಸ್ತ್ರೀಯರನ್ನು ಭೋಗಿಸುವ ವಿಷಯದಲ್ಲಿ ಭಗವಾನನು ತಪ್ಪು ಕಲ್ಪನೆಯ ತಳಹದಿಯ ಮೇಲೆ ಆಕ್ಷೇಪಗಳನ್ನು ಅನಂತಮೂರ್ತಿ, ಭೈರಪ್ಪ ಮೊದಲಾದವರ ಮೇಲೆ ಎತ್ತುತ್ತಾನೆ. ಯಾಕೆಂದರೆ ಶೂದ್ರಸ್ತ್ರೀಯ ಭೋಗವನ್ನು ಭಗವಾನನು ಶೂದ್ರ ಸಮಾಜದ ಮೇಲೆ ಬ್ರಾಹ್ಮಣರ 'ಆಕ್ರಮಣ ಮತ್ತು ವಿಜಯ' ಎಂದು ಭಾವಿಸಿದ್ದಾನೆ. ಬ್ರಾಹ್ಮಣನಿಗೆ ಅದು 'ವಿಜಯ'ವಲ್ಲ; ಇಂದ್ರಿಯಸುಖ—ಕೇವಲ ಸುಖ. ಬ್ರಾಹ್ಮಣಿ ಅದನ್ನು ಅವನಿಗೆ ಕೊಡಲಾರಳು. ಯಾಕೆಂದರೆ ಅವಳು ಬಂದಿನಿ. ಯುಗಾಂತರದ ಮಾನಸಿಕ ಆಕ್ರಮಣದಿಂದ ಬಂದಿನಿ. ಸಂಭೋಗದಿಂದ ಅವಳು ಮಾನಸಿಕವಾಗಿ ಸುಖಪಡಲಾರಳಾದ್ದ

ರಿಂದ ಅದನ್ನು ಕೊಡಲೂ ಆಗಳು. ಅವಳು free agent ಅಲ್ಲ. ಶೂದ್ರಸ್ತ್ರೀ ಅದನ್ನು ಕೊಡಬಲ್ಲಳು. ಯಾಕಂದರೆ ಅವಳು ಬ್ರಾಹ್ಮಣಿಗಿಂತ ಸ್ವತಂತ್ರಳು. ಪುರುಷನನ್ನು ಸುಖ ಕೊಡತಕ್ಕವನೆಂದು ನೋಡುವುದಕ್ಕೆ ಸ್ತ್ರೀಯ ಮನಸ್ಸಿಗೆ ಕೋಳಗಳನ್ನು ಬ್ರಾಹ್ಮಣರ ಹಾಗೆ ಶೂದ್ರರು ತೊಡಿಸುವುದಿಲ್ಲ. ಶೂದ್ರಸ್ತ್ರೀ ಸ್ವತಂತ್ರಳೆಂಬುದರಿಂದಲೇ ಅವಳು ಹೆಚ್ಚು abandon ನಿಂದ ಸುಖ ಕೊಡಬಲ್ಲಳು. ಕೊಡಬಲ್ಲಳು ಯಾಕೆಂದರೆ ಅವಳು ಬ್ರಾಹ್ಮಣಿಯ ಹಾಗೆ ಸಂಭೋಗದಲ್ಲಿ ನಿಷ್ಕ್ರಿಯ 'ಕ್ಷೇತ್ರ'ವಲ್ಲ. ಅವಳು ಯಾವುದೇ ಶಾಶ್ವತ ಅಥವಾ ತಾತ್ಕಾಲಿಕ ಸಂಯೋಗದಲ್ಲಿ participant ಆಗಿರುವುದರಿಂದ ಆ ವಿಷಯದಲ್ಲಿ ಅವಳಿಗೆ inhibitions ಇಲ್ಲದ್ದರಿಂದ ಸುಖ ಕೊಡುವ ಸಾಧ್ಯತೆ ಹೆಚ್ಚುತ್ತದೆ. ಯಾವ ಸಮಾಜಗಳಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ಹೆಚ್ಚೋ ಆ ಸಮಾಜಗಳ ಸ್ತ್ರೀಯರಲ್ಲೇ ಹೆಚ್ಚು ಅವೈಧ ಸಂಬಂಧಗಳು ಏರ್ಪಡುತ್ತವೆ. ಬೆಳ್ಳಿ ಬ್ರಾಹ್ಮಣನಿಗೆ ಒಲಿಯುವುದಕ್ಕೆ ಅವಳು ಸ್ವತಂತ್ರಳೆಂಬುದು, ತನ್ನ ಆಯ್ಕೆಗಳನ್ನು ಮಾಡಿಕೊಳ್ಳಲಾಪವಳೆಂಬುದು ಮೂಲಕಾರಣ ಹೊರತು ಬ್ರಾಹ್ಮಣ aggression ಮಾಡಿದನೆಂಬುದಕ್ಕಲ್ಲ. ಅವಳು ಸ್ವಜಾತಿಯಲ್ಲಿಯೂ ಮೆಚ್ಚಿದವರಿಗೆ ತನ್ನ ಒಲವನ್ನು ಪ್ರದಾನಮಾಡಬಲ್ಲಳೆಂಬುದರಿಂದ ಬ್ರಾಹ್ಮಣನಿಗೆ ಕೂಡ ಅದು ಲಭ್ಯವಾಗುತ್ತದೆ.

ಹೀಗೆ ಬ್ರಾಹ್ಮಣ ಪುರುಷರು 'ಕೆಳ' ಜಾತಿಯ ಹೆಣ್ಣನ್ನು ಭೋಗಿಸುವುದು aggression ಅಥವಾ conquest ಆಗುವುದಿಲ್ಲ. ಅದು ಆಯ್ಕೆಯ ಪ್ರಶ್ನೆಯಾಗುತ್ತದಷ್ಟೇ. ತದ್ವಿರುದ್ಧವಾಗಿ ಶೂದ್ರರು ಬ್ರಾಹ್ಮಣಿಯರನ್ನು ಗೆದ್ದುಕೊಂಡರೆ ಅದು conquest ಅಥವಾ aggression ಆಗುತ್ತದೆ. ಏನೇನೂ ಪ್ರಗತಿ ಪರರಲ್ಲ ಎಂದು ಭಾವಿಸಲ್ಪಡುವ ಭೈರಪ್ಪನವರು 'ದಾಟು'ವಿನಲ್ಲಿ ಇದನ್ನು ಗಮನಿಸುವಷ್ಟು ಸೂಕ್ಷ್ಮಜ್ಞತೆಯನ್ನು ತೋರಿಸುತ್ತಾರೆ. ಅದರ ಮಂತ್ರಿ ಮಹಾಶಯರು ತಾವು ಭೋಗಿಸಿದ ನೂರಾರು ಬ್ರಾಹ್ಮಣ ಹೆಣ್ಣುಗಳ ವಿಷಯ ಹೇಳಿಕೊಳ್ಳುತ್ತಾರೆ. ಇದು ಅವರಿಗೆ ಹೆಮ್ಮೆಯ ವಿಷಯ. ಯಾಕೆಂದರೆ ಅದು ಅವರ aggression ಮತ್ತು conquest ನಿಂದ ದೊರೆತದ್ದು. ಬ್ರಾಹ್ಮಣಿಯರ ಸಂಭೋಗದ ಸುಖವನ್ನು ಅವರು ತಮ್ಮ ಹೆಂಗಸರೊಡನೆಯ ಸಂಭೋಗ ಸುಖಕ್ಕೆ ಹೋಲಿಸುವುದಿಲ್ಲ. ಬಹುಶಃ ಬ್ರಾಹ್ಮಣಿಯರಿಂದ ಅದು ಸಿಕ್ಕಿರಲಿಕ್ಕಿಲ್ಲ. ಬ್ರಾಹ್ಮಣಿಯನ್ನು ಭೋಗಿಸಿ ಬ್ರಾಹ್ಮಣನನ್ನು ಸೋಲಿಸಿದೆ ಎಂದಷ್ಟೇ ಅದರಲ್ಲಿ ತೃಪ್ತಿ. ಗೆದ್ದದ್ದು ವಶಪಡಿಸಿಕೊಂಡದ್ದು ಬರಡು ನೆಲವಾಗಿದ್ದುದರಿಂದ ಆ ಬಗ್ಗೆ ಪ್ರಶಂಸೆಯ ಮಾತೆಲ್ಲಿ?

ಒಂದು ಜಾತಿಯ ಹೆಣ್ಣು ಇನ್ನೊಂದು ಜಾತಿಯ ಗಂಡನ್ನು ಒಲಿಯುವುದನ್ನು ಅತಿಕ್ರಮಣ ಎಂದು ಬಗೆಯುವುದು ಮನು ಹೇಳುವ ಅನುಲೋಮ-ಪ್ರತಿಲೋಮ ಕಲ್ಪನೆಯ ಹಿಂದು ಮುಂದಾದ ಸ್ವೀಕಾರವಾಗುತ್ತದೆ; ಅದು ಹೆಣ್ಣಿಗೆ ಸ್ವತಂತ್ರ ಅಸ್ತಿತ್ವವನ್ನು ನಿರಾಕರಿಸುವ ಅದೇ ಸ್ಮೃತಿಕಾರನ ಸಿದ್ಧಾಂತದ ಅಪ್ರಜ್ಞಾತ ಸ್ವೀಕಾರವಾಗುತ್ತದೆ. ಸರ್ವಜ್ಞನಾದರೂ ಶ್ರೀಭಗವಾನನು ಇದನ್ನು ಲಕ್ಷಿಸಬೇಕೆಂದು ಪ್ರಾರ್ಥಿಸುತ್ತೇನೆ. ಬ್ರಾಹ್ಮಣ ಲೇಖಕರು ಇಂಥ

ಸನ್ನಿವೇಶಗಳನ್ನು ತಂದಾಗಲೆಲ್ಲ ಅದು ಶೂದ್ರ ಹೆಣ್ಣುಗಳಿಗಿಂತ ಬ್ರಾಹ್ಮಣ ಸ್ತ್ರೀಯರು ಹೆಚ್ಚು ಪತಿವ್ರತೆಯರೆಂದು ತೋರಿಸುವ ದುರ್ಬುದ್ಧಿಯಾಗಿರುತ್ತದೆಂಬುದು ಶ್ರೀಭಗವಾನನ ಮಾಯಾವಿತನ. 'ಸಂಸ್ಕಾರ'ದ ಮಾಲೇರು ಶೂದ್ರರಲ್ಲ; ಬ್ರಾಹ್ಮಣವಿಧವೆಯರ ಅಪಾತಿವ್ರತ್ಯದ ಫಲವೆಂದು ಭಗವಾನನು ಗಮನಿಸಬೇಕು. ಪುರಾಣಕಾಲಕ್ಕೆ ತಿರುಗಿದರೆ ಬೃಹಸ್ಪತಿಯ ಬ್ರಾಹ್ಮಣಿ ತಾರೆಯನ್ನು ಕೆಳಜಾತಿಯ ಚಂದ್ರ ಒಲಿಸಿಕೊಂಡ; ಗೌತಮನ ಪತ್ನಿ ಅಹಲ್ಯೆ ಕೆಳಗಿನ 'ಜಾತಿ'ಯ ಇಂದ್ರನೊಡನೆ ವ್ಯಭಿಚರಿಸಿದಳು; ಜಮದಗ್ನಿಯ ಪತ್ನಿ ರೇಣುಕೆ ಪರಪುರುಷನಲ್ಲಿ ಮಾನಸಿಕ ವ್ಯಭಿಚಾರ ಮಾಡಿದ್ದರಿಂದ ಅವಳ ತಲೆಯನ್ನು ಮಗ ಪರಶುರಾಮ ಹೊಯ್ದ. ಇದನ್ನೆಲ್ಲ ಬ್ರಾಹ್ಮಣರೇ ಬರೆದಿಟ್ಟರು. ಇದಕ್ಕೆಲ್ಲ ಹೆದರಿ ಬ್ರಾಹ್ಮಣರು ತಮ್ಮ ಹೆಂಗಸರನ್ನು ಬಾಲ್ಯದಿಂದಲೇ brainwash ಮಾಡತೊಡಗಿದರು. ಹೆಂಗಸರನ್ನು ಆದಷ್ಟು ಅನಾಕರ್ಷಕವಾಗಿ ಮಾಡಲು ಹೆಣಗಿದರು. ಗಂಡ ಸತ್ತಾಗ ಅವರ ತಲೆ ಬೋಳಿಸಿದರು. ಈ ಬಲವಂತದ ಪಾತಿವ್ರತ್ಯದ ತತ್ತ್ವವನ್ನು ಶೂದ್ರರೂ ಒಪ್ಪಿದರೆ ಬ್ರಾಹ್ಮಣ ಪುರುಷರಂತೆ ಶೂದ್ರ ಪುರುಷರೂ ತಮ್ಮ ಸ್ತ್ರೀಯರ ಪಾತಿವ್ರತ್ಯಕ್ಕೆ ಹೆಮ್ಮೆ ಪಡಬಹುದು. ಬ್ರಾಹ್ಮಣರ ಹಾಗೆ ತಮ್ಮ 'ಸಾಂಸ್ಕೃತಿಕ' ಕಟ್ಟಡವನ್ನು ತಮ್ಮ ಸ್ತ್ರೀಯರ ಬಿಳಿಯೆಲುವುಗಳ ಬುನಾದಿಯ ಮೇಲೆ ನಿಲ್ಲಿಸಿ ಬ್ರಾಹ್ಮಣರ ತರಹದ ಶ್ರೇಷ್ಠತ್ವವನ್ನು ಅನುಭವಿಸಬಹುದು.

ಅನಂತಮೂರ್ತಿ ಮತ್ತು ಭೈರಪ್ಪನವರ ಎದುರಿಗೆ ಕುವೆಂಪು ಕಾದಂಬರಿಗಳನ್ನು ಇರಿಸಿ ಕುವೆಂಪು ನಿಲುಮೆಯ ಹೆಚ್ಚಳವನ್ನು ಭಗವಾನ್ ತೋರಿಸಲೆಳಸಿದ್ದಾನೆ. ತಮ್ಮ ಜಾತಿಯ ಹೆಣ್ಣು ಕೆಳಜಾತಿಯ ಸೆಟ್ಟಿಗೆ ಬಸುರಾಗಿ ಆತ್ಮಹತ್ಯೆ ಮಾಡಿಕೊಂಡಂತೆ ಕುವೆಂಪು ಬರೆದದ್ದು ಶ್ರೀ ಭಗವಾನನ ಮೆಚ್ಚಿಗೆ ಗಳಿಸಿದೆ. (ದಕ್ಷಿಣ ಕನ್ನಡದ ಸೆಟ್ಟಿಗಳು ಗಟ್ಟದ ಮೇಲಿನ ಗೌಡರಿಗಿಂತ ಕೆಳಜಾತಿಯವರೆಂಬುದಕ್ಕೆ ಕೆಲ ಬಂಟಸೆಟ್ಟರ ಸಹಿಸಂಗ್ರಹ ಮಾಡಲು ಭಗವಾನನು ಯತ್ನಿಸಲಿ! ಭಗವಾನನೆಂದು ಲಕ್ಷಿಸದೆ ಅವರು ಸೋಟೆ ತೋರಿಸಿಯಾರು!) ನಾನು ಕೇಳುತ್ತೇನೆ, ಆ ಬಡಪಾಯಿಯನ್ನು ಕುವೆಂಪು ಕೊಲ್ಲಬೇಕಾಗಿತ್ತೇಕೆ? ಢಾಣಾಡಂಗುರವಾಗಿ ಸೆಟ್ಟಿಯೊಡನೆ ಸಂಸಾರ ಮಾಡಿಕೊಂಡಂತೆ ತೋರಿಸಿದರೆ ಇನ್ನೂ ಪ್ರಗತಿಪರವಾಗುತ್ತಿರಲಿಲ್ಲವೆ? 'ಮಲೆಗಳಲ್ಲಿ ಮದುಮಗಳು' ವಿನಲ್ಲಿ ಒಂದು ಸನ್ನಿವೇಶದಲ್ಲಿ ಬ್ರಾಹ್ಮಣ ತರುಣಿಯೊಬ್ಬಳು ಗೌಡ ತರುಣನ ಉಬ್ಬಿದ ಸ್ನಾಯುಗಳನ್ನು ಕಂಡು ಹಸಿವುಗಣ್ಣುಗಳಿಂದ ನೋಡುತ್ತಾಳೆ. ಅವನ ಹಿಂದೆ ಅವಳು ಓಡಿ ಹೋಗಲಿಲ್ಲ ಎಂದು ನಾನು ಆಕ್ಷೇಪಿಸುತ್ತೇನೆ. ಅದೇ ಕಾದಂಬರಿಯಲ್ಲಿ ಗೌಡರ ಹುಡುಗ ಮುಕುಂದ ಬಯಸಿದ್ದರೆ ಐಂಚಲು ಅವನಿಗೆ ತನ್ನನ್ನು ಒಪ್ಪಿಸಿಕೊಳ್ಳಬಹುದಾಗಿತ್ತು ಎಂದು ಬರುವ ಮಾತನ್ನೂ ಶ್ರೀ ಭಗವಾನನ ಮಾನದಂಡದಿಂದ ಮೇಲು ಜಾತಿಯವರ ಸೊಕ್ಕೆಂದೇ ಹೇಳಲು ಬರುವುದಿಲ್ಲವೇ? ಡಿ.ಎಚ್. ಲಾರೆನ್ಸ್‌ನ 'ಲೇಡಿ ಚಾಟರ್ಲಿ'ಯಲ್ಲಿಯೂ ಲೇಡಿ ಚಾಟರ್ಲಿಗೆ ಸಂಗಸುಖವನ್ನು ತೋರಿಸುವ

ವನಪಾಲಕ ನಿಜವಾಗಿ ಕೆಳವರ್ಗದವನ ಸೋಗುಮಾತ್ರ ಹಾಕಿದ ಸುಸಂಸ್ಕೃತ ವ್ಯಕ್ತಿ ಎಂದು ಚಿತ್ರಿತವಾಗಿರುವುದನ್ನೂ ವರ್ಗಾಂಧತೆ ಎನ್ನಲು ಬಂದೀತು.

ಜಾತಿಯ ಕನ್ನಡಕ ಹಾಕಿಕೊಂಡು ನೋಡಿದಾಗ ಇದ್ದದ್ದು ಕಾಣುವುದಿಲ್ಲ, ಇಲ್ಲದ್ದು ಕಾಣುತ್ತದೆ. ಭೈರಪ್ಪನವರು ಬ್ರಾಹ್ಮಣರಾಗಿರದೆ ಶೂದ್ರರಾಗಿದ್ದರೆ ಒಂದಕ್ಷರವನ್ನೂ ಬದಲಿಸದೆಯೂ 'ದಾಟು'ವಿನಲ್ಲಿ ಪ್ರಗತಿಪರ ಅರ್ಥವನ್ನು ಕಾಣಲು ಬರುತ್ತಿತ್ತು. ಮೋಹನ ಉಂಟು ಮಾಡಿದ ಜಲಪ್ರಳಯ ಸನ್ನಿವೇಶ ಮೇಲ್ಜಾತಿಯವರಿಗೆ ತೋರಿಸಿದ ಮುನ್ನೆಚ್ಚರವೆನ್ನಲು ಬರುತ್ತಿತ್ತು ; ಮಂತ್ರಿ ಮಹಾಶಯರು ಕೆಡಿಸಿದ ನೂರಾರು ಬ್ರಾಹ್ಮಣ ಹೆಣ್ಣುಗಳ ಮಾತು ಗಮನಕ್ಕೇ ಬರುತ್ತಿರಲಿಲ್ಲ. ಮಾತಂಗಿಯೊಡನೆ ಬ್ರಾಹ್ಮಣನ ವ್ಯಭಿಚಾರದ ಫಲವಾಗಿ ಹುಟ್ಟಿದ ಮಗನ ಅಪ್ರತಿಹತ ಬ್ರಾಹ್ಮಣ ದ್ವೇಷ ಬ್ರಾಹ್ಮಣರಿಗೆ ಬುದ್ಧಿಮಾತೆಂದು ಅಂಗೀಕೃತವಾಗುತ್ತಿತ್ತು. ಆತ್ಯಂತಿಕ ಏಕಾಂತದಲ್ಲಿಯೂ ಮೋಹನದಾಸ ಸತ್ಯಳ ಸತೀತ್ವ ಕೆಡಿಸದೆ ಬಿಟ್ಟದ್ದು ಅತಿಶೂದ್ರನೊಬ್ಬನ ಅಸಮಾನ ಆತ್ಮಸಂಯಮದ ಪ್ರತಿಪಾದನೆಯೆಂದು ಗೃಹೀತವಾಗುತ್ತಿತ್ತು.

ಬೇರೆ ಬೇರೆ ಜಾತಿಯವರಿಗೆ ತಂತಮ್ಮ ಶ್ರೇಷ್ಠತ್ವ ಸಾಧಿಸಲು ಶಾಸ್ತ್ರಾಧಾರ ಸೃಷ್ಟಿಸಿಕೊಡುವ ಬ್ರಾಹ್ಮಣನ ಚಿತ್ರಣವನ್ನು ಶೋಷಣೆಯ ನಿರ್ಭಯ ಚಿತ್ರಣವೆಂದು ಹೊಗಳಬಹುದಾಗಿತ್ತು. ಎಲ್ಲಾ ಜಾತಿಗಳೂ ತಮ್ಮ ಶ್ರೇಷ್ಠತ್ವದ ಸಾಧನೆಗೆ ಶಾಸ್ತ್ರಾಧಾರ ಹುಡುಕಲು ಹಂಬಲಿಸುವುದು ಬ್ರಾಹ್ಮಣ ನಿರ್ಮಿತ ಸಮಾಜದ ಚೌಕಟ್ಟು ನಿರ್ಮಿಸಿದ ಸಾಂಸ್ಕೃತಿಕ ಪ್ರಪಾತದಿಂದ ಉದ್ಭವಿಸಿದ ಮಹಾಮಾನಸಿಕ ದುರಂತದ ದೈತ್ಯ ಚಿತ್ರಣವೆಂದು ಹೊಗಳಬಹುದಾಗಿತ್ತು.

ಈಗ ನಾವು ಕೆಳಜಾತಿಯವರನ್ನು ಸ್ತ್ರೀ ವಿಷಯದಲ್ಲಿ ಹೀಗೆ ಚಿತ್ರಿಸಿದರೆ ನಾಳೆ ಆ ಜಾತಿಯವರಲ್ಲೇ ಲೇಖಕರು ಸೃಷ್ಟಿಯಾದಾಗ ಅವರು ನಮ್ಮ ಹೆಂಗಸರನ್ನು ಅದೇ ರೀತಿ ಚಿತ್ರಿಸುವರು ಎಂಬ ಎಚ್ಚರಿಕೆಯನ್ನು ಸರ್ವಜ್ಞನಾದ ಭಗವಾನನು ಕೊಟ್ಟಿದ್ದಾನೆ. ಚಿತ್ರಿಸುವುದಕ್ಕೆ ಅವರಿಗೆ ಧಾರಾಳ ನೈಜ ಅವಕಾಶಗಳು ಅಷ್ಟು ಹೊತ್ತಿಗೆ ಲಭ್ಯವಾಗುತ್ತವೆಂದು ಪ್ರಸ್ತುತ ಲಕ್ಷಣಗಳು ತೋರಿಸುತ್ತವೆ. ಭೈರಪ್ಪನವರು ಇದಕ್ಕೂ ಮುಂದೆ ಹೋಗಿ ಬರೇ ವಾಚಿಕದಲ್ಲಿ ನಿಲ್ಲದೆ ಬ್ರಾಹ್ಮಣ ಸ್ತ್ರೀಯರನ್ನು ನಿಜವಾಗಿ ಕೆಡಿಸುವ ಮೂಲಕ ಪ್ರತಿಘಾತ ಪ್ರಾರಂಭ ವಾಗುತ್ತಿದೆಯೆಂದು ಮುನ್ನೆಚ್ಚರಿಸಿದ್ದಾರೆ.

ಹಾಗಾದರೆ ಬ್ರಾಹ್ಮಣರು ಏನು ಮಾಡಬೇಕು?

೧) ವಿನೋಬಾಭಾವೆಯವರ ಹಾಗೆ ಲೇಖನಿ ಮೌನವನ್ನು ಸ್ವೀಕರಿಸುವುದು ಉತ್ತಮ ಪಕ್ಷ. ನೀವು ಏನೂ ಬರೆಯದಿದ್ದರೆ ನಿಮ್ಮನ್ನು ಟೀಕಿಸುವುದಕ್ಕೆ ಏನೂ ಸಾಮಗ್ರಿ ಸಿಗುವುದಿಲ್ಲ.

೨) ಬರೆಯುವುದಾದರೆ ಬ್ರಾಹ್ಮಣರ ಬಗ್ಗೆ ಮಾತ್ರ ಬರೆಯಿರಿ. ಬೇರೆ ಜಾತಿಯವರ ಪ್ರವೇಶ ಆಗದಂತೆ ನೋಡಿರಿ. ನೀವು ಒಳ್ಳೇದು ಬರೆದರೂ ಏನೋ ಕುಯುಕ್ತಿ ಇರಬೇಕೆಂದು ಬೇರೆಯವರಿಗೆ ಸಂಶಯ ಬರಬಹುದು.

ಇ) ಒಳ್ಳೊಳ್ಳೇ ಕೆಳಜಾತಿಯ ಹುಡುಗರಿಗೆ ನಿಮ್ಮ ಹೆಣ್ಣು ಮಕ್ಕಳನ್ನು ಕೊಟ್ಟು ನಿಮ್ಮ ಸಂಪರ್ಕಗಳನ್ನು ಚೊಕ್ಕ ಮಾಡಿಕೊಳ್ಳಿರಿ. ಹೇಗೂ ವರದಕ್ಷಿಣೆಯಿಂದಾಗಿ ನಿಮ್ಮ ಮಕ್ಕಳಿಗೆ ಮದುವೆಯಾಗುವುದು ಕಷ್ಟವಾಗಿದೆ.

ಈ) ಜಿನ್ನಾಸಾಹೇಬರ ಪುಸ್ತಕದಿಂದ ಒಂದು ಪುಟ ಕದ್ದು ನಿಮಗಾಗಿ ಒಂದು ಬ್ರೊಮ್ಮನಿಸ್ತಾನ ಬೇಡಿರಿ. ಗೋದಾವರಿಯ ಹತ್ತಿರ. ವಿಂಧ್ಯದಿಂದ ದಕ್ಷಿಣಕ್ಕೇ ನಿಮ್ಮ ಸಂಖ್ಯೆ ಒಂದೂವರೆ ಕೋಟಿ ಆಗಬಹುದು. ಇತರ ಜಾತಿಗಳಲ್ಲಿ ನಿಮಗೆ ಬೆಂಬಲ ಸಿಗಲೂಬಹುದು. ನೀವು ಹೋದರೆ ಅವರಿಗೆ ಅವಕಾಶಗಳು ಹೆಚ್ಚಾಗುತ್ತವಲ್ಲ. ಆದರೆ ನೀವು ಇಲ್ಲದ ಪ್ರಪಂಚ ಅವರಿಗೆ ಹೇಗೆ ಹೇಗೋ ಅನಿಸುವ ಸಂಭವವೂ ಇದೆ. ಅವರು ಬೇರೆ ಅನಿಷ್ಟಕ್ಕೆ ಶನೀಶ್ವರರನ್ನು ಹುಡುಕಬೇಕಾದೀತು. ನಿಮಗೂ ನಿಮಗಿಂತ ಕೆಳಗಿನ ಜಾತಿಯವರು ಇಲ್ಲದಿದ್ದರೆ ಜೀವಕ್ಕೆ ಕಸಿವಿಸಿಯಾದೀತು. ಆದರೆ ನಿಮ್ಮಲ್ಲೇ ಕೆಲವರನ್ನು ಮೇಲು ಕೆಲವರನ್ನು ಕೀಳು ಎಂದು ಮಾಡಿಕೊಳ್ಳಲು ಸಾಧ್ಯವಿದೆ. ಈಗಾಗಲೇ ಅದಕ್ಕೆ ಪೂರ್ವಪರಂಪರೆ ಇದೆ.

ಇದೆಲ್ಲ ಮಾಡುವುದಕ್ಕೆ ಆಲಸ್ಯವಾದರೆ ಭಗವಾನನಿಗೆ ಮೊರೆ ಹೋಗಿರಿ. ನಿಮ್ಮ ಪೂರ್ವಜರು ಘಜನಿ ಮಹಮ್ಮದ ಬಂದಾಗ ಧಾಬಳಿ ಅಡ್ಡ ಕಟ್ಟಿರಲಿಲ್ಲವೆ?

■

# ಹಿಂದಿಲ್ಲ ಸ್ವಾಮಿ ಮುಂದಿಲ್ಲ!

## (ಪಾವೆಂ ಅವರ ಹರಟೆಯ ರೂಪದ ಪ್ರತಿಕ್ರಿಯೆ)

"ಜಾತೀ ಜೀವೊ ತೆಗೆದಿದ್ದಾರಂತಲ್ಲೊ, ಏನನ್ಯಾಯೊ" ಎಂದು ಲಾಂಗೂಲಾಚಾರ್ಯರ ಮಿತ್ರರು ಮೊನ್ನೆ ಮುಂಜಾನೆ ಅವರ ಮನೆಯೊಳಗೆ ನುಗ್ಗಿ ಬಂದು ಆಚಾರ್ಯರೇ ಯಾರದೋ ಜೀವ ತೆಗೆದಿದ್ದಾರೋ ಎಂಬಂತೆ ಕೈಲಿ ಹಿಡಿದಿದ್ದ ಪೇಪರನ್ನು ಮುಖಕ್ಕೆ ತಿವಿದರು. ಆ ಮಿತ್ರರಿಗೆ ಬಂಗಾಲಿಗಳಂತೆ ಆಕಾರವನ್ನು ಓಕಾರವಾಗಿ ಉಚ್ಚರಿಸುವ ಅಭ್ಯಾಸವಿತ್ತು.

ಆಚಾರ್ಯರು ಗಾಬರಿಯಾಗಿ "ಯಾರು, ಯಾರು ಜೀವ ತೆಗೆದರು?" ಎಂದು ಕೇಳಿದರು. ಒಂದು ಜಾತಿಯವರ ಜೀವವನ್ನು ಇನ್ನೊಂದು ಜಾತಿಯವರು ತೆಗೆಯುವುದರ ಸುದ್ದಿಯನ್ನು ಅದೇ ಕೆಲ ದಿನಗಳ ಹಿಂದೆ ಓದಿದ್ದ ಆಚಾರ್ಯರಿಗೆ ಇದೇನೂ ಅಸಂಭವ ಸುದ್ದಿ ಅನಿಸಲಿಲ್ಲ.

"ಮೂರ್ಖೊ ಇದ್ದೀ!" ಎಂದರು ಮಿತ್ರರು. "ಜಾತೀ ಜೀ. ವೊ. ತಿಳಿಯಿತೇ? ಜಾತಿ ಜೀವ ಅಲ್ಲ! ನಿನ್ನ ಮೈಸೂರು ಸರಕಾರದವರು ಉತ್ತರ ಕರ್ನಾಟಕಕ್ಕೂ ಜಾತೀ ಜೀ.ವೊ. ತೆಗೆದಿದ್ದಾರಂತೆ!"

ಆಚಾರ್ಯರಿಗೆ ಜ್ಞಾನೋದಯವಾಗತೊಡಗಿತು. ಅವರ ಕೈಯಿಂದ ಪೇಪರು ತೆಗೆದುಕೊಂಡು ಓದಿದ ಮೇಲೆ ಮೈಸೂರು ಸರಕಾರದವರು ಉತ್ತರ ಕರ್ನಾಟಕದ ತಾಂತ್ರಿಕ ಕಾಲೇಜುಗಳಿಗೆ ಪ್ರವೇಶ ಕೊಡುವುದಕ್ಕೂ ಜಾತೀಯ ನಿಯಮಗಳನ್ನು ಅನ್ವಯಿಸುವ ಸರಕಾರಿ ಆಜ್ಞೆ ಹೊರಡಿಸಿದ್ದಾರೆ ಎಂಬುದಕ್ಕಾಗಿ ಆಚಾರ್ಯರ ಮಿತ್ರರು ಇಷ್ಟು ಬಿಸಿಯೇರಿ ಬಂದಿದ್ದಾರೆಂದು ತಿಳಿಯಿತು.

"ಪುಣ್ಯಾತ್ಮಾ, ನೀನು ಒದರಾಡುವುದು ನೋಡಿ ಯಾರೋ ನನ್ನ ಸಂಬಂಧಿಕರು ಯಾವುದೋ ಜಾತಿಯ ಜೀವ ತೆಗೆದರು, ಇನ್ನು ಭಯಂಕರ ಪರಿಸ್ಥಿತಿ ಉತ್ಪನ್ನವಾಗುತ್ತದೆ ಎಂದು ನನ್ನ ಕೈಕಾಲೇ ಹೋಗಿದ್ದವು. ಜಾತೀಯ ಜೀ.ಓ. ತಾನೆ?" ಎಂದು ಆಚಾರ್ಯರು ಮಿತ್ರನಿಗೆ ಸಮಾಧಾನ ಮಾಡಲು ಯತ್ನಿಸಿದರು.

ಮೈಸೂರಿನ ಜಾತೀಯ ಆಜ್ಞೆಯಿಂದ ಈ ಬ್ರಾಹ್ಮಣರು ಯಾಕೆ ಇಷ್ಟೆಲ್ಲ ಬಿಸಿಯೇರಬೇಕೆಂದು ಲಾಂಗೂಲಾಚಾರ್ಯರಿಗೆ ಅರ್ಥವೇ ಆಗುವುದಿಲ್ಲ. ಆಚಾರ್ಯರಿಗೆ ಮೆಡಿಕಲ್ ಅಥವಾ ಎಂಜಿನಿಯರಿಂಗ್ ಕಾಲೇಜಿಗೆ ಕಳಿಸಬಹುದಾದ ಮಕ್ಕಳಿಲ್ಲದ್ದು ಅವರ ಶಾಂತತೆಗೆ ಒಂದು ಕಾರಣವಾಗಿರಬಹುದು. ಹಾಗೆ ಕೇಳಿದರೆ ಅವರ ಬಿಸಿಯೇರಿದ ಮಿತ್ರರಿಗೂ ಮೆಡಿಕಲ್ ಕಾಲೇಜಿಗೆ ಹೋಗಬಲ್ಲ ಮಕ್ಕಳಿಲ್ಲ. ಅವರ ಇದ್ದ ಒಬ್ಬ ಮಗ

ಮೆಟ್ರಿಕ್ಕಿನ ಗೋಡೆ ಹಾರಲಾರದೆ ಯಾವುದೋ ಕಚೇರಿಯಲ್ಲಿ 65 + ಭತ್ತೆ ಕಾರಕೂನನಾಗಿದ್ದಾನೆ.

ಲಾಂಗೂಲಾಚಾರ್ಯರನ್ನು ಕೇಳಿದರೆ ಈ ಜಾತೀಯ ಆಜ್ಞೆಯ ದಿನಾಚರಣೆಯನ್ನು ಬ್ರಾಹ್ಮಣರೆಲ್ಲ ಸೇರಿ ದೀಪೋತ್ಸವದೊಡನೆ ಆಚರಿಸಬೇಕು. ಏಕೆಂದರೆ ಈ ರಾಜ್ಯದ ಎರಡು ಕೋಟಿ ಪ್ರಜಾ ಜನರಲ್ಲಿ ನಿಜವಾಗಿ ಮುಂದುವರಿದವರೆಂದರೆ ಬ್ರಾಹ್ಮಣರು ಮಾತ್ರ ಎಂಬುದಾಗಿ ಈಗ ಅಧಿಕೃತವಾಗಿ ಒಪ್ಪಿಕೊಳ್ಳಲಾಗಿದೆ. ಉಳಿದ ಎಲ್ಲ ಜಾತಿಗಳೂ ಹಿಂದುಳಿದ ಜನ ಎಂದೂ ಅದೇ ರೀತಿ ಅಧಿಕೃತವಾಗಿ ಸಾರಲಾಗಿದೆ. ಮತ್ತು ಈ ವಿಷಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಪಾವಟೆಯವರ ಹೊರತು ಮತ್ತಾರೂ ಆಕ್ಷೇಪವೆತ್ತಿಲ್ಲವೆಂದ ಮೇಲೆ ಸಕಲ ಜಾತಿಗಳೂ ಇದಕ್ಕೆ ಸೈಗುಟ್ಟಿದಂತಾಯಿತು.

ಬ್ರಾಹ್ಮಣರು ಯಾವುದರಲ್ಲಿ ಮುಂದುವರಿದವರು ಎಂದು ನೋಡೋಣ. ಹಣದಲ್ಲಂತೂ ಅಲ್ಲ. ಯಾರೂ ಈವರೆಗೆ ಅವರು ಹಣದಲ್ಲಿ ಮುಂದಿದ್ದಾರೆಂದು ಆರೋಪ ಹೊರಿಸಿಲ್ಲ. ಭೂಸುಧಾರಣೆಯ ಕಾಯಿದೆಗಳು ಪಾಸಾದ ಮೇಲಂತೂ ಕೈಕೆಸರಾಗದೆ ಬಾಯಿ ಮೊಸರಾಗಬಲ್ಲದೆಂದು ಭ್ರಮಿಸಿದ ಬ್ರಾಹ್ಮಣರೆಲ್ಲರ ಬಾಯಿಗೆ ಕೆಸರು ಬಿದ್ದಿದೆ. ಅಂದಮೇಲೆ ಬ್ರಾಹ್ಮಣರು ಯಾವುದರಲ್ಲಾದರೂ ಇದ್ದರೆ ಬುದ್ಧಿಯಲ್ಲಿ ಮುಂದೆ ಎಂಬುದು ಸಿದ್ಧ ವಾದಂತಾಯಿತು.

ಬ್ರಾಹ್ಮಣರು ಬುದ್ಧಿಯಲ್ಲಿ ಮುಂದುವರಿದವರು ಎಂಬುದನ್ನು ಬ್ರಾಹ್ಮಣರು ಮೊದಲಿ ನಿಂದಲೂ ಒಪ್ಪಿಕೊಂಡಿದ್ದರು. ಅವರಿಗೆ ತಮ್ಮ ಬುದ್ಧಿ ವೈಭವದ ಬಗ್ಗೆ ಎಷ್ಟು ಅಭಿಮಾನವಿದೆಯೆಂದರೆ, ಮೆಟ್ರಿಕ್ ಪರೀಕ್ಷೆಯಲ್ಲಿ ಇಪ್ಪತ್ತೈದು ಸಲ ಗೋತಾ ಹೊಡೆದ ಬ್ರಾಹ್ಮಣನೂ ತಾನು ಬೇರಾವ ಜಾತಿಯ ಬುದ್ಧಿವಂತರಿಗಿಂತ ಅಲ್ಲದಿದ್ದರೂ ಹೆಡ್ಡರಿಗಿಂತ ಶ್ರೇಷ್ಠ ಹೆಡ್ಡನೆಂದು ದೃಢವಾಗಿ ನಂಬುತ್ತಾನೆ. ಈಗ ಅರ್ಧ ಶತಮಾನದಿಂದ ಬ್ರಾಹ್ಮಣೇತರರೇನೊ ಎಚ್ಚತ್ತು ತಾವು ಬುದ್ಧಿಯಲ್ಲಿ ಹಿಂದುಳಿದವರಲ್ಲ ಎಂದು ಒಮ್ಮೆಲೇ ಕಂಡುಹಿಡಿದಿದ್ದರು. ಬ್ರಾಹ್ಮಣರ ಬುದ್ಧಿಶಕ್ತಿಯು ಕೇವಲ ಬ್ರಾಹ್ಮಣರ ಅಪಪ್ರಚಾರವೆಂದವರು ಸಾಧಿಸತೊಡಗಿದ್ದರು. ಬಳೆಗಾರ ರನ್ನನು ರುದ್ರಭಟ್ಟನಿಗಿಂತ ದೊಡ್ಡ ಕವಿಯಾಗಿದ್ದಿಲ್ಲವೆ? ಚಾಮರಸನು ಕುಮಾರ ವ್ಯಾಸನಿಗಿಂತ ಶ್ರೇಷ್ಠನಾಗಿದ್ದಿರಲಿಲ್ಲವೆ? ಕುಮಾರವ್ಯಾಸನೇ ಶ್ರೇಷ್ಠನೆಂದು ನೀವು ಹಟಹಿಡಿದರೂ ಕುಮಾರವ್ಯಾಸನು ಬ್ರಾಹ್ಮಣೇತರನಾಗಿದ್ದನೆಂದು ಕೆಲ ಸಂಶೋಧಕರು ತೋರಿಸಿ ಕೊಟ್ಟಿಲ್ಲವೆ?

ಆದರೆ ಈಗ ಬ್ರಾಹ್ಮಣೇತರರ ಬುದ್ಧಿ ವೈಭವದ ಪ್ರತಿಪಾದಕರು ತಮ್ಮ ವಿಚಾರಗಳನ್ನು ಬಿಟ್ಟುಕೊಟ್ಟಂತೆ ಕಾಣುತ್ತದೆ. ಕನಿಷ್ಠ ಪಕ್ಷ, ಲಾಭದಾಯಕವಾದ ಶಿಕ್ಷಣ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಮಟ್ಟಿಗಾದರೂ ತಾವು ಬುದ್ಧಿಯಲ್ಲಿ ಹಿಂದುಳಿದವರೆಂದು ಬ್ರಾಹ್ಮಣ ರಲ್ಲದವರು ಒಪ್ಪಿಕೊಂಡಂತಾಗಿದೆ. "ನಾವು ಬುದ್ಧಿವಂತಿಕೆಯಲ್ಲಿ ಯಾರಿಗೂ ಹಿಂದಿಲ್ಲ. ಆದರೆ ಈ ಅರ್ಜಿಯ ಮಟ್ಟಿಗೆ ನಾವು ಹಿಂದುಳಿದವರೆಂದು ಹಟದಿಂದ ಒಪ್ಪಿಕೊಳ್ಳುತ್ತೇವೆ. ಪ್ರವೇಶ ಸಿಕ್ಕಿದ ಮೇಲೆ ನಾವು ಪುನಃ ಬುದ್ಧಿವಂತರೇ ಆಗುತ್ತೇವೆ" ಎಂಬುದು ಅವರ ಹೇಳಿಕೆಯಾಗಿದೆ. ನಿಮಗೆ ಇದು ತರ್ಕಶುದ್ಧವಲ್ಲ ಎಂದು ತೋರಬಹುದು. ಆದರೆ ಬ್ರಾಹ್ಮಣರು ಯಾವಾಗಲೂ ತರ್ಕಶಾಸ್ತ್ರದ ದೆಸೆಯಿಂದಲೇ ಕೆಟ್ಟಿದ್ದಾರೆ. ಸಂಖ್ಯಾಬಲದ

ತರ್ಕಶಾಸ್ತ್ರವೇ ಬೇರೆ ಇದೆ. ಅದರ ಪ್ರಕಾರ ಸ್ಕಾಲರ್‌ಶಿಪ್, ಎಂಜಿನಿಯರಿಂಗ್ ಕಾಲೇಜಿನ ಪ್ರವೇಶ ಮತ್ತು ನೌಕರಿಗಳನ್ನು ದೊರಕಿಸುವ ಮಟ್ಟಿಗೆ ನೀವು ಬುದ್ಧಿವಂತ ವರ್ಗದವರಲ್ಲದಿದ್ದರೂ ಇತರ ಎಲ್ಲ ಪ್ರಸಂಗಗಳಲ್ಲಿ ನೀವು ಮಹಾ ಬುದ್ಧಿವಂತರಾಗಿರಬಲ್ಲಿರಿ. ನಿಮ್ಮ ಹತ್ತಿರ ರಾಜಕೀಯ ಅಧಿಕಾರವಿದ್ದಾಗ ನೀವು ಏಕಕಾಲದಲ್ಲಿ ಬುದ್ಧಿವಂತರೂ ಬುದ್ಧಿವಂತರಲ್ಲದವರೂ ಆಗಿರಬಲ್ಲಿರಿ. ಇದು ಪ್ರಜಾಸತ್ತೆ. ಇಲ್ಲಿ ಬಹುಸಂಖ್ಯಾಕರು ಹೇಳಿದರೆ 2 + 2 = 5 ಏಕೆ 15 ಸಹ ಆಗಬಲ್ಲದು.

ಆದರೂ ಕರ್ನಾಟಕದಲ್ಲಿನ ಮುಂದುವರಿದ ಹಿಂದುಳಿದ ವರ್ಗಗಳ ವ್ಯಾಖ್ಯೆಯು ಇತಿಹಾಸದ ಒಂದು ಅದ್ಭುತ ಸಂಶೋಧನೆಯಾಗಿ ಉಳಿಯಲಿದೆ. 1917ರಲ್ಲಿ ವಿಶ್ವೇಶ್ವರಯ್ಯನವರು ದಿವಾನಗಿರಿಗೆ ರಾಜೀನಾಮೆ ಕೊಟ್ಟಂದಿನಿಂದ ಮೈಸೂರಲ್ಲಿ ಮುಂದುವರಿದವರನ್ನು ಹಿಂದೂ, ಹಿಂದುಳಿದವರನ್ನು ಮುಂದೂ ಜಗ್ಗುವ ಯತ್ನ ನಡೆದೇ ಇದೆ. ಆದರೆ ಈ ಕುಟಿಲ ಬ್ರಾಹ್ಮಣರು ಈಶಾವಾಸ್ಯೋಪನಿಷತ್ತಿನ ಬ್ರಹ್ಮನಂತೆ ಕೂತಲ್ಲೇ ಓಡುವುದರಲ್ಲಿ ನಿಸ್ಸೀಮರಿರುವಂತೆ ಕಾಣುತ್ತದೆ. ಏಕೆಂದರೆ ಹಿಂದುಳಿದವರು ಇಷ್ಟು ವರ್ಷಗಳ ನಂತರವೂ (ಕಾಲೇಜು ಪ್ರವೇಶನಗಳ ಮಟ್ಟಿಗೆ ಮಾತ್ರ) ಮುಂದುವರಿದವರಾಗಲು ಸಮರ್ಥರಾಗಿಲ್ಲ. ಮುಂದೋಡಿದಷ್ಟೂ ಅವರು ಹಿಂದುಳಿಯುವಂತಿದೆ. ಅಷ್ಟೇ ಏಕೆ ಮುಂಬಯಿ ಕರ್ನಾಟಕದಲ್ಲಿ ಕೂಡ, ಹಿಂದೆ ಮುಂದುವರಿದವರಾಗಿದ್ದ ಕೆಲ ಜಾತಿಗಳು ಈಗ ಹೊಸ ಕರ್ನಾಟಕವಾದ ಮೇಲೆ ಒಮ್ಮೆಲೇ ಹಿಂದುಳಿದವರಾಗಿದ್ದಾರೆ. ಬ್ರಾಹ್ಮಣರು ಮಾತ್ರ ಎಲ್ಲೆಲ್ಲಿಯೂ ಮುಂದುವರಿದಿದ್ದಾರೆ. ಅಂದ ಮೇಲೆ ಐನ್‌ಸ್ಟೇನರ ಪ್ರಕಾರದಂತೆ ಬ್ರಾಹ್ಮಣರ ಮುಂದೋಟವೂ ಜಗತ್ತಿನ ಪರಮಾವಧಿ ವೇಗವಾಗಿರಬೇಕು. ಹೀಗಿರುವಾಗ ಬ್ರಾಹ್ಮಣರು ದೀಪೋತ್ಸವ ಆಚರಿಸಬಾರದೇಕೆ? ಜೈ ಬೊಮ್ಮನ್ ಕೀ!

ಆದರೆ ಬ್ರಾಹ್ಮಣರಿಗೆ ಮೆಡಿಕಲ್ ಕಾಲೇಜು, ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸ್ಥಾನಗಳು ಬೇಕೇ ಬೇಕು, ನೌಕರಿಗಳು ಬೇಕೇ ಬೇಕು ಎಂದಿದ್ದರೆ ಅದಕ್ಕೆ ದಾರಿ ಅವರು ಭಾವಿಸಿದಷ್ಟು ಕಷ್ಟವಾಗಿಲ್ಲ. ಸುದೈವದಿಂದ ನಮ್ಮ ದೇಶದಲ್ಲಿ ಹೇಗೆ ಒಂದೇ ಕೋಮಿನವರು ಏಕ ಕಾಲಕ್ಕೆ ಮುಂದುವರಿದವರೂ ಹಿಂದುಳಿದವರೂ ಆಗಿರಬಲ್ಲರೋ ಹಾಗೆಯೇ ಮುಂದುವರಿದವರೆನಿಸಿದವರು ಇಪ್ಪತ್ತನಾಲ್ಕು ತಾಸುಗಳಲ್ಲಿ ಹಿಂದುಳಿದವರಾಗಲೂ ಸಾಧ್ಯವಿದೆ. ಬ್ರಾಹ್ಮಣರು ಬ್ರಾಹ್ಮಣೇತರರಾಗುವುದು ಬಹಳ ಸುಲಭ. ಯಾರಾದರೊಬ್ಬ ಮುಲ್ಲಾ ಇಲ್ಲವೆ ಪಾದ್ರಿಯ ಬಳಿಗೆ ಹೋದರೆ ನಿಮ್ಮನ್ನವರು ಕೂಡಲೇ ನಿಮ್ಮ ಮುಂದುವರಿದತನದಿಂದ ಮುಕ್ತಗೊಳಿಸಬಲ್ಲರು. ಸುಬ್ರಹ್ಮಣ್ಯ ಭಟ್ಟರು ಅಬ್ರಹಾಂ ಬೇಟ್ರ ಆದರೆ, ಅಥವಾ ರಾಮಯ್ಯನವರು ರಹೀಮತುಲ್ಲಾ ಆದರೆ ಅವರು ಒಂದೇ ಜಿಗಿತಕ್ಕೆ ಹಿಂದುಳಿದವರಾಗುವರು. ಅಷ್ಟು ದೂರ ಹೋಗಲು ನಿಮಗೆ ತೊಂದರೆಯಾದರೆ ಲಿಂಗವಂತರಾಗಿ ನೀವು ನಿಮ್ಮ ಮುಂದುವರಿದತನದ ನರಕದಿಂದ ಹಿಂದುಳಿತದ ಸ್ವರ್ಗಕ್ಕೆ ಸಾಗಬಲ್ಲಿರಿ.

ಬ್ರಾಹ್ಮಣರೇ, ನಿಮ್ಮ ಪರಿಸ್ಥಿತಿ ಅಮೇರಿಕದ ನೀಗ್ರೋನ ಅವಸ್ಥೆಯಷ್ಟು ಕೆಟ್ಟಿಲ್ಲ. ನೀಗ್ರೋ ಕ್ರೈಸ್ತನಾಗಿಯೂ ಅವನಿಗೆ ಸಮಾನ ಹಕ್ಕು ಸಿಗಲಿಲ್ಲ. ನಮಗೆ ಸಿಗಬಹುದು. ■

# ಭಾಗ - 2

# ಧಾರ್ಮಿಕ ನೆಲೆ

# ನನ್ನ ದೃಷ್ಟಿಯಲ್ಲಿ ಧರ್ಮ

ನನ್ನ ದೃಷ್ಟಿಯಲ್ಲಿ 'ಧರ್ಮ' ಎಂಬುದೊಂದು ಅಬದ್ಧ ಎಂದು ಹೇಳಬೇಕಾಗುತ್ತದೆ. 'ಧರ್ಮ'ವೆನ್ನುವುದು ಧರ್ಮವೇ ಆಗಿದ್ದರೆ ಅದರಲ್ಲಿ ನನ್ನದು, ಇನ್ನೊಬ್ಬರದು ಎಂಬ ಭೇದ ಇರಲಾರದು, ಇರಬಾರದು. 'ಧರ್ಮ' ಎಂದರೆ ಧರಿಸುವಂಥಾದ್ದು ಅಥವಾ ಆಧಾರ ಕೊಟ್ಟು ನಿಲ್ಲಿಸಿ ಹಿಡಿಯುವಂಥಾದ್ದು ಎಂದು ಹಿಂದಿನವರು ಹೇಳಿದ್ದಾರೆ. ಯಾರನ್ನು ಅಥವಾ ಏನನ್ನು ಎತ್ತಿ ಹಿಡಿಯುವಂಥಾದ್ದು ಎಂದರೆ ಪ್ರಪಂಚವನ್ನು ಎಂದು ಉತ್ತರಿಸಬೇಕಾಗುತ್ತದೆ. ಪ್ರಪಂಚವನ್ನು ಎಂದರೆ ಈ ಸೃಷ್ಟಿಯನ್ನು ಮತ್ತು ಸ್ವಲ್ಪ ಸಂಕುಚಿತ ಅರ್ಥದಲ್ಲಿ ಮನುಷ್ಯ ಪ್ರಪಂಚವನ್ನು ಎತ್ತಿ ಹಿಡಿಯುವುದು; ಎಂದರೆ ಈ ಪ್ರಪಂಚ ಸೃಷ್ಟಿಯಾದಂದಿನಿಂದ ಅನೂಚಾನವಾಗಿ ನಡೆದುಬಂದಂತೆ ಮುಂದೆ ಕೂಡಾ ನಡೆಯುವಂತೆ ಮಾಡಲು ನಮ್ಮ ಕೈಯಲ್ಲಾಗುವಷ್ಟು ಮಟ್ಟಿಗೆ ನಮ್ಮ ನಡವಳಿಕೆಯನ್ನು ರೂಪಿಸಿಕೊಂಡು ಬಾಳುವುದು. ನಾವು ಮತ್ತು ನಮ್ಮ ಇರವಿನ 'ಇಂದು' ಎಂಬ ಕಾಲಖಂಡವು ಆಗಿಹೋದ ಅನಾದಿ ಕಾಲ ಮತ್ತು ಆಗಲಿರುವ ಅನಂತ ಕಾಲ ಇವುಗಳ ನಡುವಣ ಗೊಣಸು. ಆಗಿ ಹೋದ ಕಾಲ ನಮ್ಮ ಕೈಯಲ್ಲಿಲ್ಲ ಅಥವಾ ನಮ್ಮ ಕೈಯಿಂದ ನುಣಚಿ ಹೋಗಿಬಿಟ್ಟಿದೆ. ಅದನ್ನು ತಿದ್ದಲು ಇನ್ನು ಅಸಾಧ್ಯ; ಆಗಲಿರುವ ಕಾಲ ಬಹುಮಟ್ಟಿಗೆ ನಮ್ಮ ಕೈಯಲ್ಲಿದೆ. ಅದನ್ನು ನೇರ್ಪಡಿಸಲು ಯತ್ನಿಸುವುದು ನಮ್ಮ ಕೆಲಸ. ಆದರೆ ಅದು ಇನ್ನೂ ಬರಬೇಕಷ್ಟೇ. ಅದನ್ನು ನೇರ್ಪಡಿಸಬೇಕಾದರೆ ನಾವು 'ಇಂದ'ನ್ನು ಮೊದಲು ನೇರ್ಪಡಿಸಬೇಕು. ಅದಕ್ಕೆ ನಿನ್ನಿನ ಅನುಭವವನ್ನು ಬಳಸಬೇಕು. ನಾಳೆಗೆ ನಾವು ಇರಲಿಕ್ಕೇ ಇಲ್ಲ. ಆದರೆ ನಿನ್ನೆಯವರು ನಮ್ಮ ಕೈಗೆ ಕೊಟ್ಟು ಹೋದ ಈ ಬದುಕಿನ ದೀವಟಿಗೆಗೆ ಎಣ್ಣೆ ಎರೆದು ಮಸಿಯನ್ನು ಕೆರೆದು ಸಾಧ್ಯವಾದರೆ ಅದು ನಮ್ಮ ಕೈಗೆ ಬಂದಾಗಿದ್ದುದಕ್ಕಿಂತ ಹೆಚ್ಚು ಪ್ರಕಾಶಮಾನವಾಗುವಂತೆ ಮಾಡಿ ಅದನ್ನು ನಾಳೆಯ ಕೈಗೆ ದಾಟಿಸಲು ನಾವು ಸಿದ್ಧರಾಗಬೇಕು. ಅಷ್ಟು ಮಾಡಿದರೆ ನಮ್ಮ ಕೆಲಸವಾಯಿತು. ಇದು ನಮ್ಮ 'ಧರ್ಮ'.

ಪ್ರಪಂಚವನ್ನು ಮತ್ತು ಮನುಷ್ಯನನ್ನು ಎಂದದ್ದಾಯಿತು. ನಾವು ಮನುಷ್ಯರಾಗಿ ಹುಟ್ಟಿದ್ದರಿಂದ ನಮ್ಮ ನಡವಳಿಕೆಯೆಲ್ಲ ನಮ್ಮ ಮನುಷ್ಯತನದಿಂದ ಪರಿಮಿತವಾಗಿದೆ. ನಾವು ಮನುಷ್ಯರಿಗೆ ಹೊಣೆಗಾರರಾಗಿದ್ದೇವೆ. ಆದರೆ ಮನುಷ್ಯನು ಪ್ರಪಂಚಬದ್ಧನಾಗಿರುವುದರಿಂದ ಮತ್ತು ಅವನನ್ನು ಪ್ರಪಂಚದ ಹೊರಗೆ ಕಲ್ಪಿಸಲು ಬಾರದಾದ್ದರಿಂದ ಆ ಪ್ರಪಂಚಕ್ಕೂ ನಾವು ಜವಾಬ್ದಾರರಾಗಿದ್ದೇವೆ. ಪ್ರಪಂಚ ಇದ್ದರೆ ಮನುಷ್ಯ, ಮನುಷ್ಯ ಇದ್ದರೆ ಪ್ರಪಂಚ.

ಧರ್ಮ ಎಂಬುದಕ್ಕೆ ಇಂದು ಹತ್ತು ಹಲವು ಬೇರೆ ಬೇರೆ ಬಳ್ಳಿಗಳು ಸುತ್ತಿಕೊಂಡಿವೆ ಯಾದರೂ ಮನುಷ್ಯ ಅದರ ಕೇಂದ್ರವಾಗಿದ್ದಾನೆ. ಜೀವಂತ ವಸ್ತುಗಳೆಲ್ಲವೂ ಪ್ರಪಂಚದಲ್ಲಿ ಒಳಗೊಂಡಿವೆ; ಅಜೀವಗಳೂ ಸೇರಿವೆ. ಆದರೆ ಅಜೀವಗಳು ತಮ್ಮ ಅಂತರ್ನಿಹಿತ 'ಧರ್ಮ'ದಿಂದಲೂ ಜೀವಗಳು ತಮ್ಮ ಅಂತರ್ನಿಹಿತ ಪ್ರೇರಣೆಗಳಿಂದಲೂ ಪ್ರೇರಿತ ವಾಗಿರುವುದರಿಂದ ಅವು ಹೊಣೆಗಾರಿಕೆಯಿಂದ ಮುಕ್ತವಾಗಿವೆ. ಅವುಗಳಿಗೆ 'ಗತ' ಇದ್ದರೂ ಅದು ಅವಿವೇಚಿತವಾದ ಅನುಭವದ ರೂಪದಲ್ಲಿ ಅವುಗಳ ಇರವಿನಲ್ಲಿ ಸಂಚಿತವಾಗಿ ಅವುಗಳನ್ನು ನಡೆಸುತ್ತದೆ. ಅವುಗಳಿಗೆ ನಿನ್ನೆ ಇಂದು ನಾಳೆಯ ಕಲ್ಪನೆ ಇಲ್ಲ. ಮನುಷ್ಯನು ಮಾತ್ರ ಕಾಲದ ಈ ಸರಪಳಿಯ ಪ್ರಜ್ಞೆ ಉಳ್ಳವನು, ಕಲ್ಪನೆ ಉಳ್ಳವನು. ಈ ಪ್ರಜ್ಞೆಯೇ 'ವಿವೇಕ' ಎಂಬುದನ್ನು ಉಂಟುಮಾಡಿದೆ. ವಿವೇಕದಿಂದ ಸಂಪನ್ನನಾಗಿರುವುದರಿಂದಲೇ ಅವನಿಗೆ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ಕೈಲಾದಷ್ಟು ನಿರ್ವಹಿಸುವುದೇ ಧರ್ಮ.

ನನ್ನ ದೃಷ್ಟಿಯಲ್ಲಿ ಧರ್ಮ ಎಂಬುದು ಸಮಷ್ಟಿಯಲ್ಲಿ ವ್ಯಷ್ಟಿಯ ನಡವಳಿಕೆಯನ್ನು ನಿರೂಪಿಸುವಂಥಾದ್ದು, ಪ್ರಪಂಚದಲ್ಲಿ ನಾನೊಬ್ಬನೇ ಇದ್ದದ್ದು. ಇರುವುದು, ಇರಲಿರುವುದು. ಆದರೆ 'ಧರ್ಮ' ಎಂಬ ಒಂದು ಭಾವವೇ ಇರಲಾರದು. ಕನಿಷ್ಠ ಪಕ್ಷಕ್ಕೆ ಇಬ್ಬರಾದರೂ ಇದ್ದಲ್ಲಿ ಧರ್ಮ ಉದ್ಭವಿಸುತ್ತದೆ. ಈ ಇಬ್ಬರಲ್ಲಿ ಸಂಪರ್ಕ ಬಂದೊಡನೆ ಧರ್ಮದ ಕ್ರಿಯೆ ಆರಂಭವಾಗುತ್ತದೆ. ಇಬ್ಬರೂ 'ಇರ'ಬೇಕು. ಇಬ್ಬರೂ 'ಆಗ'ಬೇಕು ಇದಕ್ಕಾಗಿ ಇಬ್ಬರ ಚರ್ಯೆಗಳಿಗೂ ಪರಧಿಗಳನ್ನು ಕಲ್ಪಿಸಬೇಕು. ಇಬ್ಬರಿಗೂ ಜೀವದ ಅಸ್ತಿತ್ವದ ಪ್ರಧಾನ ಲಕ್ಷಣವಾದ 'ಅಹಂ' ಎಂದರೆ 'ತಾನು' ಎಂಬ ಪ್ರಜ್ಞೆ ಇದೆ. ಈ ತಾನು ತನ್ನ ಆಪ್ಯಾಯನ (Pleasure) ಗಳನ್ನು ಅರಸುತ್ತ ಇರುತ್ತದೆ. ಏಕೆಂದರೆ ಆಪ್ಯಾಯನಗಳು 'ಅಹಂ' ಇನ ಅನ್ನ. 'ಅನ್ನ' ಇಲ್ಲದೆ 'ಪ್ರಾಣ' ಇಲ್ಲ. ಪ್ರಾಣ ಇಲ್ಲದೆ 'ಅಸ್ತಿತ್ವ' ಇಲ್ಲ. ಎರಡು ವ್ಯಕ್ತಿಗಳು ಆಪ್ಯಾಯನಗಳನ್ನು ಅರಸುವಾಗ ಅವುಗಳ ಹೊಲಗಳಲ್ಲಿ ಏಕದೇಶತ್ವ ಬಂದೇ ಬರುತ್ತದೆ. ಅದು ತಾಕಲಾಟಕ್ಕೆ ಕಾರಣವಾಗುತ್ತದೆ. ತಾಕಲಾಟ ಒಂದು ಮಿತಿಯೊಳಗಿದ್ದರೆ ನಿರುಪದ್ರವಿಯಾಗಿರುತ್ತದೆ. ಅದು ಉತ್ತೇಜಕವೂ ಆಗಿರಬಲ್ಲದು. ಉತ್ತೇಜನವೂ ಆಪ್ಯಾಯನದಂಥದೇ ಹಿತವಾದ ಅನುಭವವಾಗಿರುತ್ತದೆ. ಅದು ತನ್ನತನದ ಪ್ರಜ್ಞೆಯನ್ನು ತೀವ್ರಗೊಳಿಸುತ್ತದೆ. ಆದರೆ ಅದು ಒಂದು ಅಳತೆಯನ್ನು ಮೀರಿದರೆ ಜ್ವರವಾಗುತ್ತದೆ. ಜ್ವರದಂತೆ ಅದೂ ಮಾರಕ. ಈ ಜ್ವರ ದಾಟುರೋಗವಾಗಿರುವುದರಿಂದ ಎರಡೂ ವ್ಯಕ್ತಿಗಳನ್ನು ಹಾಳು ಮಾಡುತ್ತದೆ. ತಾಕಲಾಟಗಳನ್ನು ಅಂದರೆ 'ಸ್ವಾರ್ಥ'ಗಳ ಹಿತಕರವಾದ ಘರ್ಷಣೆಗಳನ್ನ, ಅವು ಕವೋಷ್ಣ ಅಥವಾ ಉಗುರು ಬೆಚ್ಚಗಿನ ತಾಪ ಮಟ್ಟವನ್ನು ಮೀರದಂತೆ ನೋಡಿಕೊಳ್ಳುವುದಕ್ಕಾಗಿ ಇಬ್ಬರೊಳಗೆ ಒಂದು ತಿಳಿವಳಿಕೆಯನ್ನು ರೂಪಿಸ ಬೇಕಾಗುತ್ತದೆ. ಅದನ್ನು 'ಒಡಂಬಡಿಕೆ' ಎನ್ನಬಹುದು. 'ಒಡಂ' ಎಂದರೆ ಒಪ್ಪಿಗೆ; 'ಪಡು' ಎಂದರೆ ಮಲಗುವುದು. ಒಟ್ಟಿಗೆ ಮಲಗುವುದು, ಸಾಧ್ಯವಾಗಬೇಕಾದರೆ ಮಲಗಿದ್ದಲ್ಲಿ ಒಬ್ಬನಿಗೊಬ್ಬನು ಅಪಾಯಮಾಡದಂತೆ ನಂಬಿಕೆ ಇಡುವ ಸ್ಥಿತಿಯನ್ನು ಉಂಟುಮಾಡುವುದು.

ಅದು ಧರ್ಮ. ಒಡಂಬಡಿಕೆಯಿಂದ ಒಡನಾಟ ಸಾಧ್ಯವಾಗುತ್ತದೆ. 'ಒಡನಾಟ' ಎಂದರೆ ಒಟ್ಟಿಗೆ ತಿರುಗುವುದು, ಒಡನಾಟದಿಂದ ಇಬ್ಬರ ಹಿತವನ್ನೂ ಹೆಚ್ಚಿಸಬಹುದು. ಆದ್ದರಿಂದ ಒಡನಾಟ ಧರ್ಮ.

ಪ್ರಾಣಿ ಅಮರವಲ್ಲ; ಜೀವ ಅಮರ. ಅಮರತ್ವ ನಿಸರ್ಗದ ಧ್ಯೇಯ ಎಂಬುದು ಸಕಲ ಪ್ರಾಣಿಗಳ ವರ್ತನೆಯಿಂದ ಸಿದ್ಧವಾಗುತ್ತದೆ. ಈ ಅಮರತ್ವವನ್ನು ವೈಯಕ್ತಿಕವಾಗಿ ಅಲ್ಲ, ಜಾತಿಯ ಪುನರುತ್ಪತ್ತಿ ಅಥವಾ ಸಂತಾನ ಮೂಲಕ ಸಾಧಿಸಲಾಗುತ್ತದೆ. ಸಂತಾನೋತ್ಪತ್ತಿಗೆ ಸಂಬಂಧಿಸಿದ ಕ್ರಿಯೆಯ ಪ್ರವೃತ್ತಿ ಸಕಲ ಜೀವಿಗಳಲ್ಲಿ ಅತ್ಯಂತ ಪ್ರಚಂಡವೇ ಆಗಿರುವುದು ಈ ಧ್ಯೇಯಕ್ಕೆ ಸಾಕ್ಷಿ. ಈ ಪ್ರವೃತ್ತಿಗೆ ಮಾನವನೂ ಹೊರತಲ್ಲ. ಈ ಪ್ರವೃತ್ತಿ ಎಲ್ಲ ಪ್ರಾಣಿಗಳಲ್ಲಿಯೂ ಬಲವಾದ ಸ್ಪರ್ಧೆಗೆ ಪ್ರೇರಣೆ ನೀಡುತ್ತದೆ. ಆದರೆ ಮಾನವೇತರ ಪ್ರಾಣಿಗಳಲ್ಲಿ ಈ ಸ್ಪರ್ಧೆ ಮಾರಕವಾಗದಂತೆ ಜನ್ಮಸಿದ್ಧ ಅಂತರ್ನಿಯಂತ್ರಣಗಳಿವೆ. ಮಾನವ ಹೀಗೆ ಅಂತರ್ನಿಯಂತ್ರಣಗಳಿಂದ ಪೂರ್ತಿ ಪ್ರತಿಬದ್ಧನಾಗಿಲ್ಲ. ಆದ್ದರಿಂದ ಗಂಡು ಹೆಣ್ಣನ್ನು ಕಾಮಿಸುವ ಈ ತೀಕ್ಷ್ಣವಾದ ಸಹಜ ಪ್ರೇರಣೆಯ ಫಲವಾಗಿರುವ ಸ್ಪರ್ಧೆ ಇತರ ಆಪ್ಯಾಯನಗಳ ಅರಸುವಿಕೆಯಲ್ಲಿ ಒದಗುವ ತಾಕಲಾಟಕ್ಕಿಂತಲೂ ಭೀಕರ ಮತ್ತು ಮಾರಕವಾಗುವ ಭಯವಿದೆ. ಈ ಸ್ಪರ್ಧೆಯ ಮಾರಕತ್ವವನ್ನು ನಿಗ್ರಹಿಸುವ ಸಲುವಾಗಿಯೇ ಪ್ರತಿ ಮಾನವನಿಗೂ ಪುನರುತ್ಪತ್ತಿಯ ಪ್ರೇರಣೆಗೆ ಸಮಾಧಾನವೀಯುವ ವ್ಯವಸ್ಥೆಯಾಗಿ ವಿವಾಹಸಂಸ್ಥೆ ಏರ್ಪಟ್ಟಿದೆ. ಇದು ಸಂತಾನೋತ್ಪತ್ತಿಯ ಹಕ್ಕನ್ನು ಪ್ರತಿಯೊಬ್ಬರಿಗೂ ಗ್ಯಾರಂಟಿಯಾಗಿ ಕೊಡುವ ಏರ್ಪಾಡು ಮಾತ್ರವಲ್ಲ; ಸಂತಾನದ ರಕ್ಷಣೆ, ತರಬೇತಿ-ಎರಡರಲ್ಲಿಯೂ ಮಾತಾಪಿತೃಗಳ ಸಹಕಾರದ ಗ್ಯಾರಂಟಿಯನ್ನೂ ಕೊಡುತ್ತದೆ. ಇದರಿಂದಲೇ ಮನುಷ್ಯ ವ್ಯಕ್ತಿಯ ವರ್ತಮಾನ ಗೋಣಸನ್ನು ಹಿಂದಿನದಕ್ಕಿಂತ ಬಲವಾಗಿ ಮಾಡಿ ಮುಂದಿನದನ್ನು ಇನ್ನೂ ಬಲಪಡಿಸುವುದು ಸಾಧ್ಯವಾಗಿದೆ. ಇದು ಒಡಂಬಡಿಕೆ ಮತ್ತು ಒಡನಾಟದ ಒಂದು ಕವಲಾದರೂ ಮನುಷ್ಯ ಜಾತಿಯ ಉಳಿವು, ಬಾಳಿವುಗಳಿಗೆ ತಳಕಟ್ಟಾಗಿದೆ. ಈ ಒಡಂಬಡಿಕೆಯ ಪಾಲನೆ ಧರ್ಮ.

ಇಬ್ಬರೇ ಇರುವುದಾದರೆ ಒಡಂಬಡಿಕೆ ಸಾಕು. ಆದರೆ ಪ್ರಪಂಚ ಬಹು ದೊಡ್ಡ ಸಮೂಹವಾಗಿರುವುದರಿಂದ ಅಲ್ಲಿ ಅಸಂಖ್ಯ ತಾಕಲಾಟಗಳು ರೂಪುಗೊಂಡು ವೈಯಕ್ತಿಕ ಒಡಂಬಡಿಕೆಗಳು ಸಾಲದಂತಾಗುತ್ತದೆ. ಮಾನವನ ದೀರ್ಘಾನುಭವದಿಂದ ನಮ್ಮ ಚರ್ಯೆಗೆ ವಿಶಾಲವಾದ ನಾನಾ ಕಟ್ಟುಪಾಡುಗಳು ಏರ್ಪಟ್ಟಿವೆ. ಇದು ಸಮಷ್ಟಿ ಒಡಂಬಡಿಕೆ. ಅದಕ್ಕೆ ಕಾನೂನೆಂದು ಹೆಸರು. ಮಾನವನ ಪರಿಸರ ಬದಲಾದಂತೆ ಕೆಲ ಕಟ್ಟುಪಾಡುಗಳು ಹೋಗಬೇಕಾದೀತು. ಕೆಲವು ಬದಲಾಗಬೇಕಾದೀತು. ಕೆಲವು ಹೊಸದಾಗಿ ಬರಬೇಕಾದೀತು. ವರ್ತಮಾನ ಏರ್ಪಾಡು ತನ್ನ ಕಾಲ ತತ್ವದಿಂದಾಗಿ ದೊಡ್ಡ ಸಮುದಾಯಗಳಿಗೆ ಅನ್ಯಾಯಕ್ಕೆ ಕಾರಣವಾಗುವುದುಂಟು. ಅದನ್ನು ಸಮಷ್ಟಿ ಜಾಣ್ಮೆಯಿಂದ ತಿದ್ದಬೇಕಾಗುವುದು. ಆದರೆ ಒಡಂಬಡಿಕೆ ಇದ್ದಷ್ಟು ಕಾಲ-ಅದನ್ನು ಬದಲಿಸದಿರುವಷ್ಟು ಕಾಲ ಅದು ಪಾಲಿಸಲ್ಪಡಬೇಕು, ಇದೂ ಧರ್ಮ.

ಎಲ್ಲರೂ ಸ್ವೇಚ್ಛೆಯಿಂದ ತಂತಮ್ಮ ಹಿತಾನುಭವಗಳ, ಆಪ್ಯಾಯನಗಳ ಅನ್ವೇಷಣೆಗಿರುವ ಮಿತಿಗಳನ್ನು ಒಪ್ಪಿ ಪಾಲಿಸುವುದು ಧರ್ಮವಾದರೂ ಅಪರಿಮಿತ ಸಂಖ್ಯೆಯಲ್ಲಿರುವ ಮಾನವರಲ್ಲಿ ಎಲ್ಲರೂ ತಾವಾಗಿ ಹಾಗೆ ಮಾಡುವರು ಎನ್ನಲು ಬಾರದು. ಪ್ರಕೃತಿಗಿಂತ ಬುದ್ಧಿ ಬಲವಾಗಿರುವ ಮಾನವನು ಒಡಂಬಡಿಕೆ ಮುರಿಯಲು ಉಪಾಯ ಹೂಡುತ್ತಾನೆ. ಇದನ್ನು ತಡೆಯಲು ದಂಡವಿಧಾನಗಳು ಬೇಕು. ಈ ದಂಡ ವಿಧಾನಗಳಲ್ಲಿ ಸಹಕರಿಸುವುದು-ಕೆಲವೊಮ್ಮೆ ತಮ್ಮ ಹಿತವನ್ನೇ ಬಲಿ ಕೊಟ್ಟಾದರೂ-ಸಮಷ್ಟಿ ಹಿತಕ್ಕೆ ಅಗತ್ಯವಾದ್ದರಿಂದ ಆ ಸಹಕಾರ ಧರ್ಮ.

ನನ್ನ ಧರ್ಮದೃಷ್ಟಿಯಲ್ಲಿ ದೇವರು ಪ್ರವೇಶಿಸುವುದಿಲ್ಲ. ಆದರೆ ದೇವರಿಗೆ ನನ್ನ ವಿರೋಧವಿಲ್ಲ. ಏಕೆಂದರೆ ದೇವರು ಸತ್ಯವಿರಲಿ ಅಸತ್ಯವಿರಲಿ ಅದರ ಕಲ್ಪನೆ ಮನುಷ್ಯನಿಗೆ ಯಾಕೆ ಹೊಳೆಯಿತು. ಯಾಕೆ ಅವನ ಮನಸ್ಸನ್ನು ಹಿಡಿದುಕೊಂಡಿತು—ಇದು ನನಗೆ ಗೊತ್ತಿಲ್ಲ. ಹಾಗೆಯೇ ಕಲೆ ಸಂಗೀತ ಮೊದಲಾದವುಗಳನ್ನೊಳಗೊಂಡ ಭಾವಿ ಪ್ರಪಂಚದ ಉತ್ಪತ್ತಿಯಾಕಾಯಿತೆಂದೂ ನನಗೆ ಗೊತ್ತಿಲ್ಲ. ದೇವರು ಮತ್ತು ಅಧ್ಯಾತ್ಮ ಇವುಗಳಿಗೂ ಸಂಗೀತಾದಿಗಳಿಗಿರುವಂಥ ಯಾವುದೋ ಧ್ಯೇಯ ನಿಸರ್ಗದಿಂದ ಉದ್ದೇಶಿತವಾಗಿರಬಹುದು. ಅದು ಆಪ್ಯಾಯನ ತತ್ವದ (Pleasure principle) ಕೋಟೆಗೆ ಸೇರಿರಬಹುದೆಂದು ನನಗೆ ಅನಿಸುತ್ತದೆ. ಅದು ಮಾನವನ ಮನಸ್ಸಿನ ಉದಾತ್ತೀಕರಣ ಮಾಡಲು ನೆರವಾಗುತ್ತಿರಬಹುದು. ಧರ್ಮ ಎಂದು ನಾನು ಮೇಲೆ ಹೇಳಿರುವ ವಿಧಿ ಮತ್ತು ನಿಷೇಧಗಳನ್ನು ಪಾಲಿಸುವಲ್ಲಿ ಮನುಷ್ಯನಿಗುಂಟಾಗುವ ಹತಾಶೆಗಳನ್ನು ಸಹಿಸಿಕೊಂಡು ತಾಕಲಾಟಗಳ ತೀವ್ರತೆಯನ್ನು ಇಳಿಸಲು ಸಂಗೀತಾದಿಗಳಂತೆ ಅಪರೋಕ್ಷಾನುಭೂತಿಯೂ ಒಂದು ಸಾಧನವಾಗಿರಬಹುದು.

ದೇವರು ಮನುಷ್ಯನ ಆಶ್ಚರ್ಯದ ಫಲವೆಂದು ನಾನು ಬಗೆಯುತ್ತೇನೆ. ತತ್ವಜ್ಞಾನವೂ ಹಾಗೆಯೆ. ಅರ್ಥರಹಿತವೆನಿಸುವ ಪ್ರಪಂಚದಲ್ಲಿ ಅರ್ಥವನ್ನರಸುವ ಸಾಹಸ ಅದು. ಆದರೆ ದೇವರು ಅದನ್ನು ಅನುಭವಿಸಿದವರಿಗೆ ಮಾತ್ರ ಪ್ರತ್ಯಕ್ಷ ಸತ್ಯ. ಉಳಿದವರಿಗೆ ಅದು ಪರೋಕ್ಷ-ಒಂದು ಭ್ರಮೆ ಕೂಡ ಆಗಬಹುದು. ಎಲ್ಲ ಭ್ರಮೆಗಳಂತೆ ದೇವರು ಎಂಬುದೂ ಅಪಾಯ ಜಡಿತವಾಗಿದೆ. ಆದ್ದರಿಂದ ಆ ಬಗ್ಗೆ ಎಚ್ಚರಿಕೆ ಅತ್ಯಗತ್ಯ. ಅದು ಎಷ್ಟೋ ಸಲ ನನ್ನ ಧರ್ಮ ಕಲ್ಪನೆಗೆ ಒಗ್ಗದ ಘೋರ ತಾಕಲಾಟಗಳಿಗೆ, ಪ್ರಚೋದನೆ ಕೊಟ್ಟದ್ದುಂಟು. ಆದರೆ ಇನ್ನೂ ಅನೇಕ ಐಡಿಯಗಳು ಇಂಥ ದೋಷದಿಂದ ಕಲುಷಿತವಾಗಿವೆ. ದೇವರನ್ನು ಒಂದು ಅಸ್ಪಷ್ಟವಾದ ಜೈವಿಕ ಧ್ಯೇಯದ ಉಪಕರಣವೆಂದು ನಾನು ನಂಬುತ್ತೇನೆ.

ಕೊನೆಯದಾಗಿ, ಧರ್ಮದ ಬಗ್ಗೆ ಒಂದು ಮಾತು: ಧರ್ಮ ಮನುಷ್ಯನಿಗಾಗಿರಬೇಕು, ಧರ್ಮಕ್ಕಾಗಿ ಮನುಷ್ಯನಲ್ಲ ಎಂಬ ಕೂಗನ್ನು ನಾನೊಪ್ಪಲಾರೆ. ಅದು ಮನುಷ್ಯ ಕುಲಕ್ಕಾಗಿ ಇರುವಂಥದ್ದು ಹೊರತು ಮನುಷ್ಯ ವ್ಯಕ್ತಿಗಾಗಿ ಅಲ್ಲ. ಅದರ ಸ್ವಭಾವವೇ ನಿಯಂತ್ರಣ. ಧರ್ಮ ವ್ಯಕ್ತಿಗಳ ಹಿತಕ್ಕಾಗಿ ಇರಬಹುದು—ವ್ಯಕ್ತಿಗಳ ಇಷ್ಟಕ್ಕಾಗಿ ಇರಲಾರದು. ಧರ್ಮ ಫಲಕಾರಿಯಾಗಬೇಕಾದರೆ ಅದನ್ನು ಮನುಷ್ಯ ವ್ಯಕ್ತಿಗಿಂತ ಮೇಲೆಯೇ ಇಡಬೇಕಾಗುತ್ತದೆ. ವೈಯಕ್ತಿಕ ಇಷ್ಟದ ಅಡಿಯಾಳಾಗಿ ಅಲ್ಲ.

■

# ಗಣಪತಿಯ ಮೂಲಗಳು

ಗಣಪತಿಯ ಮೂಲಗಳು ಬಹಳೇ ಪುರಾತನ ಕಾಲಕ್ಕೆ ಹೋಗುತ್ತವೆ. ಈಗ ನಾವು ಪೂಜಿಸುವ ರೂಪದಲ್ಲಿ , ಗುಣಗಳಲ್ಲಿ , ಗಣಪತಿಯ ಉದಯ ನಾಲ್ಕು-ಐದನೇ ಶತಮಾನದಲ್ಲಿ ಆಗಿರಬೇಕೆಂದು ಇತಿಹಾಸ ಸಂಶೋಧಕರು ಹೇಳುತ್ತಿದ್ದರು. 'ಗಣಪತಿ' ಶಬ್ದ ಮತ್ತು ಆತನ ಸ್ತುತಿ ಋಗ್ವೇದದಲ್ಲಿ ಕಾಣಿಸುತ್ತದೆ. ಋಗ್ವೇದ ಮಂತ್ರವೊಂದರಲ್ಲಿ ಅವನನ್ನು 'ಮಘವ' ಎಂದು ಕರೆದಿರುವುದರಿಂದ ಇಂದ್ರನನ್ನೂ ಗಣಪತಿಯೆಂದು ಸಂಬೋಧಿಸುತ್ತಿದ್ದರೆಂದು ಊಹಿಸಬಹುದು. ಪುರಾತನ ಭಾರತದಲ್ಲಿ ಗಣರಾಜ್ಯ (Republic)ಗಳಿದ್ದವೆಂಬುದು ನಿರ್ವಿವಾದ. ಈ ಗಣ ರಾಜ್ಯಗಳ ತೀರ ಈಚೆಗಿನ ಐತಿಹಾಸಿಕ ಉದಾಹರಣೆ ಬಿಹಾರದ ಲಿಚ್ಛವಿಗಳದು. ದೇವತೆಗಳನ್ನು ಕೂಡ ಗಣಗಳೆಂದೇ ಕಲ್ಪಿಸಿ ಇಂದ್ರನನ್ನು ಆ ಗಣಗಳ ಅಧಿಪತಿಯೆಂದು ಭಾವಿಸಲಾಗುತ್ತಿತ್ತೆಂದು ತರ್ಕಿಸಲೆಡೆಯಿದೆ. ಗಣಪತಿ ಅಥವಾ ಇಂದ್ರಪದವಿ ವಂಶಾನುಗತವಾಗಿರದೆ ಅದು ಆಯ್ಕೆಯ ಪದವಿಯಾಗಿರಬೇಕು.

ವೇದಗಳಲ್ಲಿ ಬರುವ ಎರಡು ಪ್ರಸಿದ್ಧ ಗಣಪತಿ ಮಂತ್ರಗಳಿಂದ ಗಣಗಳ (republics) ಪತಿಯಲ್ಲಿ ಜನಗಳು ಯಾವ ಗುಣಗಳನ್ನು ನಿರೀಕ್ಷಿಸುತ್ತಿದ್ದರೆಂದು ತಿಳಿಯುತ್ತದೆ. ಎರಡೂ ಮಂತ್ರಗಳಲ್ಲಿ ಅವನನ್ನು 'ಕವಿ'ಯೆಂದು ಕರೆಯಲಾಗಿದೆ. 'ನಿಷಾನೀದ ಗಣಪತೇ' ಎಂದು ಆರಂಭವಾಗುವ ಮಂತ್ರದಲ್ಲಿ 'ತ್ವಾಮಾಹುರ್ವಿಪ್ರತಮಂ ಕವೀ ನಾಂ' ನೀನು ಕವಿಗಳಲ್ಲಿ ವಿಪ್ರತಮ—ಅಂದರೆ ಜ್ಞಾನಿಗಳಲ್ಲಿ ಅತ್ಯಂತ ಜ್ಞಾನಿಯೆಂದು ಕರೆದು 'ನಿಷಾನೀದ' ಬಾ, ಸುಖವಾಗಿ ಕುಳಿತುಕೋ ಎಂದು ಆಮಂತ್ರಿಸಲಾಗಿದೆ. 'ಗಣಾನಾಂ ತ್ವಾ ಗಣಪತಿಮುಪಾಸ್ಮಹೇ' ಎಂದಾರಂಭವಾಗುವ ಮಂತ್ರದಲ್ಲಿ ಕೂಡ 'ಕವಿ ಕವೀನಾಂ' ಜ್ಞಾನಿಗಳಲ್ಲಿ ಜ್ಞಾನಿ ಅವನನ್ನು ಎಂದು ಹೊಗಳಿದ್ದಾರೆ. ಅಂದರೆ ಗಣಗಳಿಗೆ ಅಧಿಪತಿಯಾಗುವವನು ಇಡೀ ಗಣಸಮುದಾಯ ದಲ್ಲಿ ಅತ್ಯಂತ ಜ್ಞಾನಿಯಾದವನಿರಬೇಕೆಂದು ಜನರು ನಿರೀಕ್ಷಿಸುತ್ತಿದ್ದರು. ಎರಡನೇ ಮಂತ್ರದಲ್ಲಿ ಅವನಿಗೆ 'ಬ್ರಹ್ಮಣಸ್ಪತಿ' (ಬೃಹಸ್ಪತಿ) ಯೆಂಬ ಉಪಾಧಿಯಿರುವುದರಿಂದ ಅವನು ಪರಮ ವಿದ್ಯಾವಂತನಿರಬೇಕಿತ್ತು. ಹಾಗಿದ್ದಾಗಲೇ ಅವನನ್ನು 'ಜ್ಯೇಷ್ಠ ರಾಜ' (ಹಿರಿಯರಸು) ಎಂದು ಸ್ವೀಕರಿಸುತ್ತಿದ್ದರು.

ಮೇಲೆ ಹೇಳಿದ ಮಂತ್ರಾಂಶಗಳಿಂದ ನಮಗೆ ಮುಂದೆ ಗಣಪತಿ ವಿದ್ಯಾದೇವತೆ ಹೇಗಾದನೆಂಬುದಕ್ಕೆ ಅತ್ಯಂತ ಪ್ರಾಚೀನ ಸೂಚನೆ ಸಿಗುತ್ತದೆ. ಮೊದಲು ಉದಾಹರಿಸಿದ ಮಂತ್ರದಲ್ಲಿ ಇನ್ನೊಂದಂಶ ಸೂಚಿಸಲ್ಪಡುತ್ತದೆ. 'ನಿಷಾನೀದ' ಎಂದು ಅವನನ್ನು ಕರೆದ

ಮೇಲೆ 'ನ ಋತೇ ತ್ವತ್ ಕ್ರಿಯತೇ ಕಿಂಚ ನಾರೇ' ನಿನ್ನನ್ನು ಬಿಟ್ಟು ಯಾವ ಕೆಲಸವೂ ಆಗದು ಎಂಬ ಮಾತು ಬರುತ್ತದೆ. ಯಾವ ಮಹತ್ವದ ಉಪಕ್ರಮವೂ ಗಣಪತಿಯ ಉಪಸ್ಥಿತಿಯಲ್ಲೇ ಜರುಗಬಹುದಾಗಿತ್ತು. ಪ್ರತಿಯೊಂದಕ್ಕೆ ಅವನನ್ನು ಕರೆದು ಗೌರವಿಸಿಯೇ ಕೆಲಸ ಮುಂದುವರಿಯುತ್ತಿತ್ತು ಎಂದಾಯಿತು. ಯಾವ ಧಾರ್ಮಿಕ ಲೌಕಿಕ ಸಮಾರಂಭದಲ್ಲಿಯೂ ಗಣಪತಿಯನ್ನು ಮೊಟ್ಟ ಮೊದಲು ಪೂಜಿಸುವ ಸಂಪ್ರದಾಯದ ಮತ್ತು ಅವನನ್ನು ಮೊದಲು ಮನ್ನಿಸದಿದ್ದರೆ ವಿಘ್ನ ಕಟ್ಟಿಟ್ಟದ್ದು ಎಂಬ ನಂಬಿಕೆಯ ಮೂಲವೂ ಈ ವೇದ ಮಂತ್ರದಲ್ಲಿಯೇ ನಮಗೆ ಸಿಗುತ್ತದೆ.

ಇಂದ್ರನನ್ನು ಕುರಿತು ಈ ಮಂತ್ರ ಇರಬಹುದಾದರೂ ಅವನ ಪ್ರತಿಬಿಂಬವಾಗಿ ಭೂಮಿಯ ಮೇಲಿನ ಗಣರಾಜ್ಯಗಳ ಹಿರಿಯರಿಗೆ ಅಗ್ರಮರ್ಯಾದೆ ಕೊಟ್ಟು ಅವರ ಸಾನ್ನಿಧ್ಯದಲ್ಲಿ ಸರ್ವಕಾರ್ಯಗಳು ನಡೆಯುತ್ತಿರಬೇಕು. ಗಣರಾಜ್ಯಗಳು ಅಸ್ತವಾದ ಮೇಲೂ ಗಣಪತಿಯು ಅಲಂಕರಿಸುತ್ತಿದ್ದ ಸ್ಥಾನದಲ್ಲಿ ಒಂದು ಮಂಡಲದಲ್ಲಿ ಬರೆದು ಅದರಲ್ಲಿ ಗಣ ನಾಯಕನನ್ನು ಕೂರ್ಚರೂಪದಲ್ಲಿ ಕುಳಿತಿದ್ದಾನೆಂದು ಗ್ರಹಿಸಿ ನಾವೀಗ ಮಂಗಳಕಾರ್ಯಗಳನ್ನು ಮುಂದುವರಿಸುತ್ತಿದ್ದೇವೆ. 'ವಂದಿಸುವುದಾದಿಯಲಿ ಗಣನಾಥನ' ಎಂಬುದಕ್ಕೆ ಇಲ್ಲಿ ಮೂಲ ಸಿಗುತ್ತದೆ.

ನಮ್ಮ ಗಣ ರಾಜ್ಯಗಳಲ್ಲಿ ಕೊನೆಯದು ಲಿಚ್ಛವಿ ರಾಜ್ಯ. ಬುದ್ಧನ ಕಾಲದಲ್ಲಿ ಸಾಕಷ್ಟು ಪ್ರಬಲವಾಗಿದ್ದ ಜನರಿಂದ ಜನರಿಗಾಗಿ ಏರ್ಪಟಿದ್ದ ಆಯ್ಕೆಗೊಂಡ ಅಧಿಪತಿ (ಗಣನಾಯಕ, ಗಣಪತಿ)ಯುಳ್ಳ ಈ ರಾಜ್ಯ ಮುಂದೆ ದೇಶದಲ್ಲಿ ಪ್ರಬಲವಾಗುತ್ತಿದ್ದ ಸಾಮ್ರಾಜ್ಯವಾದಿ ರಾಜಕಾರಣದ ನಡುವೆ ಕೊನೆಗೊಮ್ಮೆ ಗುಪ್ತರ ಕಾಲದಲ್ಲಿ ಕೊನೆಗೊಂಡಿತು. ಲಿಚ್ಛವಿ ರಾಜಕುಮಾರಿಯನ್ನು ಗುಪ್ತರಾಜನಿಗೆ ಮದುವೆ ಮಾಡಿ ಕೊಡುವುದರೊಡನೆ ಆ ಗಣರಾಜ್ಯ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತು. ಆದರೆ ಗಣಪತಿಯನ್ನು ಮರೆಯಲಾಗಲಿಲ್ಲ. ಸಾಂಕೇತಿಕವಾಗಿಯಾದರೂ ಈ ನರ ಬೃಹಸ್ಪತಿಯನ್ನು ದೈವಕವಾಗಿ ಆರಾಧಿಸುವದು ಪರಂಪರೆಯಾಗಿ ಮುಂದುವರಿದು ಒಂದು ಬೃಹತ್ ದೈವೀ ಸ್ವರೂಪ ಪಡೆದಿದೆ. ಗಣಪತಿಯ ಸುತ್ತ ಅಲೌಕಿಕ ಘಟನೆಗಳ ಪೊದೆ ಬಳ್ಳಿಗಳು ಬೆಳೆದು ಬಂದಿವೆ. ಅವನು ರಾಜಕಾರ್ಯದಲ್ಲಿ ನಿಯುಕ್ತನಾಗಿದ್ದರೂ ಪಂಡಿತರಲ್ಲಿ ಪಂಡಿತನಾಗಿದ್ದನೆಂಬುದರಿಂದಲೇ ಮಹಾಭಾರತವನ್ನು ಬರೆದುಕೊಳ್ಳಲು ವ್ಯಾಸಮುನಿ ಅವನನ್ನು ಆರಿಸಿಕೊಂಡನು. 'ಶ್ರೀ ಗಣಾಧಿಪತಯೇ ನಮಃ' ಎಂದೇ ಅಕ್ಷರ ತೀಡುವುದು ಆರಂಭವಾಗುತ್ತಿತ್ತು. ಇದು ಅರ್ಥವತ್ತಾದದ್ದು.

ನಮ್ಮ ಆಧುನಿಕ ಗಣನಾಯಕರಿಗೂ 'ಕವಿಗಳಲ್ಲಿ ವಿಪ್ರತಮ'ರಾಗಿರಬೇಕೆಂಬ ನಿಯಮ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು! ಶ್ರೀ ಗಣೇಶ ಆ ಬುದ್ಧಿಯನ್ನು ದಯಪಾಲಿಸಲಿ.

■

# ದೈವ 'ನೊಂದೆ' ಎಂದಿತು.
# ಅದಕ್ಕೇ 'ಮಹಾಭಾರತ'ವಾಯಿತು

'ಜಯ' ಎಂಬ ಚಾರಣಗೀತದಿಂದ 'ಮಹಾಭಾರತ'ವಾಗಿ ಬೆಳೆಯುವ ಪ್ರಕ್ರಿಯೆಯಲ್ಲಿ ನಮ್ಮ ರಾಷ್ಟ್ರೀಯ ಮಹಾಕಾವ್ಯ ಏನೇನು 'ಅನೈತಿಹಾಸಿಕ' ಅಂಶಗಳನ್ನು ಸೇರಿಸಿಕೊಂಡಿತು ಎಂಬ ಪ್ರಶ್ನೆಗೆ ಮಹಾಭಾರತದ ಪಾಠಗಳ ತುಲನಾತ್ಮಕ ವಿಮರ್ಶೆ ಮಾಡಿ ಸಂಪಾದಿಸಿದ ವಿದ್ವಾಂಸರು ಸುಮಾರಾಗಿ ಒಪ್ಪಬಹುದಾದ ಉತ್ತರ ಕೊಡಬಲ್ಲವರಿರಬಹುದು. ಆದರೆ ಮಹಾಭಾರತವಾಗುವ ಈ ಪ್ರಕ್ರಿಯೆಯಲ್ಲಿ ಅದೊಂದು ಮಹಾನೈತಿಕ ಆಖ್ಯಾನವಾಗಿ ರೂಪುಗೊಂಡಿತೆಂದೂ ಅದು ಈ ದೇಶದ ಸಮಷ್ಟಿ ಆತ್ಮಸಾಕ್ಷಿಯ ಪ್ರತೀಕವಾಯಿತೆಂದೂ ಒಪ್ಪಬೇಕು.

ನಾವೀಗ ಕಾಣುವ ರೂಪದಲ್ಲಿ ಮಹಾಭಾರತದ ಚರಮ ಪರಿಣಾಮ ಈ ದೇಶದ ಮತ್ತು ಕೆಲಮಟ್ಟಿಗಾದರೂ ಹಿಮಾಲಯದಾಚೆಗಿನ ಅನೇಕ ದೇಶಗಳ ರಾಜರ ಮತ್ತು ಅವರ ಸೈನ್ಯಗಳ ಮಾರಣಹೋಮ. ಹದಿನೆಂಟು ಅಕ್ಷೋಹಿಣಿ ಎಂದು ಹೇಳಲ್ಪಟ್ಟ ಈ ಹೋಮದ ಮಾನವ ಆಹುತಿಗಳ ನಿಜವಾದ ಸಂಖ್ಯೆ ಎಷ್ಟೇ ಇದ್ದಿರಬಹುದಾದರೂ ಅದೊಂದು ಪ್ರಚಂಡ ಹತ್ಯಾಕಾಂಡವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಒಂದು ರಾಜವಂಶಕ್ಕೆ ಸೇರಿದ ಎರಡು ಕವಲುಗಳ ಭೂವಿವಾದದಲ್ಲಿ ವಾದಗ್ರಸ್ತವಾದ ಪ್ರದೇಶ ಈಗಿನ ಯಾವ ಭಾರತೀಯ ಪ್ರಾಂತ್ಯಕ್ಕಿಂತಲೂ ಸಣ್ಣದಾಗಿತ್ತು. ಇಷ್ಟೊಂದು ಚಿಕ್ಕ ಭೂಭಾಗದ ವಿವಾದ ಬಗೆಹರಿಸುವುದಕ್ಕೆ ಇಂಥ ದೊಡ್ಡ ಮಾರಣಹೋಮವಾದದ್ದು ಸಮಂಜಸವೇ ಎಂಬ ಪ್ರಶ್ನೆಯನ್ನು ಅದರಲ್ಲಿ 'ನಿಮಿತ್ತ ಮಾತ್ರ'ನಾದ ಅರ್ಜುನನೇ ಪ್ರಾರಂಭದಲ್ಲೇ ಎತ್ತಿದ್ದ ; ಈಗಲೂ ನಾವು ಎತ್ತಬಹುದು. ಅದಕ್ಕೆ ಉತ್ತರವನ್ನು ಕೊಡಬೇಕಾದವನು ಈಗ ನಮಗೆ ಲಭ್ಯವಿರುವ ಈ ಮಹಾಗಾಥೆಯ ಸಂಸ್ಕರಣದ ಪ್ರಕಾರ ಅದರ ಪುರೋಹಿತನಾದ ಶ್ರೀಕೃಷ್ಣನೇ.

ಶ್ರೀ ಕೃಷ್ಣನನ್ನು ಪರಮಾತ್ಮನ ಪೂರ್ಣಾವತಾರ ಎನ್ನುವ ಶ್ರದ್ಧೆಯನ್ನು ಒಂದು ಕ್ಷಣ ಬದಿಗಿಟ್ಟು ಒಬ್ಬ ಮಹಾಮಾನವ ಎಂದು ಮಾತ್ರ ಗ್ರಹಿಸಿ ವಿಚಾರ ಮಾಡಿದರೆ, ಆತ ಈ ಸಜ್ಜನ ದುರ್ಜನ ಸಮೇತವಾದ ಈ ದ್ವಾಪರ ಜನರಾಶಿಯನ್ನು ನಾಶಮಾಡಬೇಕೆಂಬ ನೈತಿಕ ನಿರ್ಣಯವನ್ನು ಯಾಕೆ ಮಾಡಿದ, ಎಂದು ಮಾಡಿದ, ಎಂದು ಯೋಚಿಸಬೇಕಾಗುತ್ತದೆ. ಪಾಂಡವರ ತಾಯಿ ಅವನ ಸಂಬಂಧಿಕಳು, ಆದ್ದರಿಂದ ಈ ದಾಯಾದಿ ಕಲಹದಲ್ಲಿ ಅವರ

ಪರವಾಗಿ ಕೆಲಸ ಮಾಡಿದನೆ? ಹಾಗೆ ಕಾಣುವುದಿಲ್ಲ. ಅಣ್ಣ ಬಲರಾಮನ ಒಲವುಗಳನ್ನು ನೋಡಿದರೆ ಯಾದವರು ಪಾಂಡವಪಕ್ಷಪಾತಿಗಳೆಂದು ಹೇಳಲು ಬಾರದು. ಕೃಷ್ಣನೇ ಆದರೂ ಪಾಂಡವರಿಗೆ ಆಗುತ್ತಿದ್ದ ಅನ್ಯಾಯಗಳನ್ನು ಬಲ್ಲವನಾಗಿದ್ದರೂ ಪಾಂಡವರಿಗೆ ಅಂಥಾ ನೆರವು ನೀಡುವ ಇರಾದೆ ಇದ್ದವನಂತೆ ಪ್ರಾರಂಭದಲ್ಲಿ ಕಾಣುವುದಿಲ್ಲ. ಹಾಗಾದರೆ ಅವನ ವಿಚಾರ ಯಾವಾಗ ನಿಷ್ಠುರತ್ವಕ್ಕೆ ತಿರುಗಿತು? ಎಂದು ಆಲೋಚಿಸಿದರೆ ನನಗೆ ಅನಿಸುವುದು ದ್ರೌಪದೀ ವಸ್ತ್ರಾಪಹರಣ ಪ್ರಸಂಗದೊಂದಿಗೆ ಕೃಷ್ಣನ ಭೂಭಾರಹರಣ ಸಂಕಲ್ಪ ಗಟ್ಟಿಗೊಂಡಿತೆಂದು, ಒಬ್ಬ ಮನೆತನಸ್ಥ ಹೆಣ್ಣನ್ನು ಅದೇ ಭರತ ಕುಲಕ್ಕೆ ಸೇರಿದವಳನ್ನು ಬೀದಿಯಲ್ಲೆಳೆದು ತಂದು, ತುಂಬಿದ ಸಭೆಯ ಮುಂದೆ ಅವಳನ್ನು ಬತ್ತಲೆ ಮಾಡಬೇಕೆಂದು ದುರ್ಯೋಧನ ನಿರ್ಣಯಿಸಿ ತಮ್ಮನಿಂದ ಅವಳ ಉಡಿಗೆ ಕೈಹಾಕಿಸಿದಾಗ ಎಂತೆಂಥಾ ಧರ್ಮಜ್ಞರು, ಜ್ಞಾನಿಗಳೆನಿಸಿದವರು, ಆಚಾರ್ಯಪುರುಷರು ಇದ್ದ ಸಭೆಯಲ್ಲಿ ಒಬ್ಬರಾದರೂ ಎದ್ದು ಅದನ್ನು ಉಗ್ರವಾಗಿ ಪ್ರತಿಭಟಿಸಲಿಲ್ಲ. ಮಾತ್ರವಲ್ಲ ಆ ಅಬಲೆ ಆರ್ತಳಾಗಿ ಅವರ ಧಾರ್ಮಿಕ, ನೈತಿಕ, ನ್ಯಾಯಿಕ ವಿವೇಕಕ್ಕೆ ಆತ್ಮಸಾಕ್ಷಿಗೆ ಮನವಿ ಮಾಡಿಕೊಂಡರೂ ಯಾರೊಬ್ಬರೂ ಒಂದು ಬೆರಳನ್ನೂ ಎತ್ತದೆ ತಲೆಕೆಳಗೆ ಹಾಕಿ ಕುಳಿತಿದ್ದರು. (ಪ್ರತಿಭಟಿಸಿದವನೊಬ್ಬನೇ, ಅವನು ದುರ್ಯೋಧನನ ತಮ್ಮ) ಭೀಷ್ಮರಿಗೇನು ಧರ್ಮಜ್ಞಾನದ ಕೊರತೆಯೇ? ದ್ರೋಣರು ಅನ್ನಕ್ಕೆ ಬಿದ್ದವರೇ? ಅವರಿಗೆ ಧೈರ್ಯದ ಕೊರತೆಯೇ? ಅವರಿಗೆ ಸ್ವಂತ ರಾಜ್ಯವಿತ್ತು. ಆಗಿನ ರಾಜಾಧಿಕಾರದ ರೂಢಿಗಳನ್ನು ನೋಡಿದರೆ ದುರ್ಯೋಧನನಿಗೆ ಈಗಿನ ಸರ್ವಾಧಿಕಾರಿಗಳ ಅಧಿಕಾರವಿದ್ದಿಲ್ಲ. ಅಲ್ಲಿ ಯಾರೂ ಜೀವಹೇಡಿಗಳೂ ಇದ್ದಿಲ್ಲ.

ಆದರೆ ನನಗನಿಸುವ ಹಾಗೆ, ಅವರೆಲ್ಲ ರೂಢಿಸಮ್ಮೂಢ ಚೇತನರಾಗಿದ್ದರು. 'ಶಾಸ್ತ್ರ' ಎಂದು ಅವರು ತಿಳಿದುಕೊಂಡದ್ದರ ಪ್ರಕಾರ ದುರ್ಯೋಧನ ತನ್ನ 'ಹಕ್ಕುಗಳ ಪರಿಧಿಯೊಳಗೆ ಈ ದುಷ್ಕೃತ್ಯಕ್ಕೆ ಅನುವಾಗಿದ್ದ.' He was within his rights. ಧರ್ಮರಾಯ ಅವಳನ್ನು ಪಣಕ್ಕಿಟ್ಟು ಕಳೆದುಕೊಂಡ ಮೇಲೆ ಅವಳು ಎಷ್ಟೇ 'ಕಾನೂನು ಮಾತಾಡಿ'ದರೂ ಅವಳು ಕ್ರೀತ ದಾಸಿಯಾಗಿದ್ದಳು. ಆಗಿನ ಸಂಪ್ರದಾಯದ ಪ್ರಕಾರ ದಾಸಿಯ ಮೇಲೆ ಯಜಮಾನನ ಸಂಪೂರ್ಣ ಪ್ರಭುತ್ವ ಇತ್ತು. ಆ ಕಾಲದಲ್ಲಿ ಮಾತ್ರವಲ್ಲ ಅದರ ಹಿಂದಿನ ಮತ್ತು ಮುಂದಿನ ಎಷ್ಟೋ ಕಾಲದವರೆಗೆ ಕ್ರೀತದಾಸ ದಾಸಿಯರನ್ನು ಕಟ್ಟ ಕನಿಷ್ಠ ಪ್ರಮಾಣದ ಮಾನಾಚ್ಛಾದನದಲ್ಲಿ ಇಡುತ್ತಿದ್ದರೆಂದು ಕೆಲವೊಂದು ಪುರಾಣಗಳಿಂದ ಅನಿಸುತ್ತದೆ.

ಅವರು ಓಡಿಹೋಗುವುದನ್ನು ತಪ್ಪಿಸಲು ಇದು ಅವಶ್ಯವಾಗಿತ್ತು. ಪೂರ್ಣ ವೇಷದಲ್ಲಿದ್ದರೆ ಅವರನ್ನು ಗುರುತಿಸುವುದು ಹೇಗೆ?

ಹಸ್ತಿನಾಪುರದ ಸಭೆಯಲ್ಲಿದ್ದ ಶಾಸ್ತ್ರಜ್ಞರ ಶಾಸ್ತ್ರಜ್ಞಾನದ ಪರಿಮಿತಿಯಲ್ಲಿ ದೇಶದ ಅತ್ಯುಚ್ಚ ರಾಜಕುಲದ ನಾರಿಯೊಬ್ಬಳನ್ನು ಅವಳು ಪಣಕ್ಕಿಟ್ಟು ಸೋಲಲ್ಪಟ್ಟಳೆಂಬ ಕಾರಣಕ್ಕಾಗಿ ಅವಳ ಹೊಸ ಯಜಮಾನ—ಅದೇ ಕುಲದ ಪ್ರಭೃತಿಯಾದವನು ಸಾರ್ವಜನಿಕರ ಕಣ್ಮುಂದೆ ಬತ್ತಲು ಮಾಡುವುದಕ್ಕೆ ಪ್ರವೃತ್ತನಾಗುವ, ಈ ಹಿಂದೆ ಎಲ್ಲಿಯೂ ಜರಗಿರಲಾರದ,

ಹೊಚ್ಚ ಹೊಸ ಸಂದರ್ಭಕ್ಕೆ ಸದುತ್ತರ ಇರಲಿಲ್ಲ. They had no written law or case law to deal with such an unprecedented situation ಅನ್ನೋಣ ಇಂದಿನ ಪರಿಭಾಷೆಯಲ್ಲಿ! ಇದು ತಪ್ಪು ಎಂಬುದು ಅವರ ಮತಿಗೆ ಹೊಳೆಯುತ್ತಿತ್ತು. ಆದರೆ ಪ್ರಾಯೋಗಿಕ ಕಾನೂನಿನಲ್ಲಿ ಸರಿ ತಪ್ಪುಗಳಿಲ್ಲ, ಹಕ್ಕುಗಳು ಮುಖ್ಯವಾಗಿದ್ದವು. ಕಾನೂನಿನ ದೃಷ್ಟಿಯಲ್ಲಿ ದ್ರೌಪದಿ ಬರೇ ಒಂದು 'ಆಸ್ತಿ' (a piece of property) ಆಗಿದ್ದಳು. ಈ ಸಜ್ಜನರ ವಿವೇಕ ಅಮಲಿನಲ್ಲಿ ತರಬಹುದಾದ ಕಾನೂನಿನ ಬಲವನ್ನು ಹೊಂದಿರಲಿಲ್ಲ. ಅಲ್ಲದೆ ಈಗ ದ್ರೌಪದಿಯ ಪ್ರಕರಣದಲ್ಲಿ ಅವಳಿಗನುಕೂಲವಾದ ತೀರ್ಪು ನೀಡಿದಲ್ಲಿ ನಾಳೆ ದೇಶದ ಸಹಸ್ರಸಹಸ್ರ ದಾಸ ದಾಸಿಯರು ಈ ಪೂರ್ವ ತೀರ್ಪನ್ನು ಉಪಯೋಗಿಸಿಕೊಂಡು ಹಕ್ಕುಗಳನ್ನು ಕೇಳಿದರೆ! ಎಂಬ ಭಯವೂ ಅವರಿಗೆ ಇದ್ದಿರಬಹುದು. ಅಷ್ಟೇ ಏಕೆ, 'ಧರ್ಮರಾಯ'ನೆನಿಸಿದ ಯುಧಿಷ್ಠಿರನಿಗೇ ಅನುಮಾನವಿತ್ತು. ಬಹುಶಃ ಇಡೀ ಸಭೆಯಲ್ಲಿ ಭೀಮನೊಬ್ಬನನ್ನು ಬಿಟ್ಟರೆ ಯಾರೊಬ್ಬರಿಗೂ ಇಲ್ಲಿ ಧರ್ಮ ಏನೆಂಬ ಪ್ರಜ್ಞೆ ಇರಲಿಲ್ಲ. ಕಾನೂನು ಏನೆಂದು ಮಾತ್ರ ಅವರಿಗೆ ಗೊತ್ತಿತ್ತು. ಅವರ ವಿವೇಕಗಳನ್ನು ಕಾನೂನಿನ ಭ್ರಾಂತಿ ಮಸುಳಿಸಿಬಿಟ್ಟಿತ್ತು. ಈ ಘೋರ ಅನೀತಿಯನ್ನು ಪ್ರತಿಭಟಿಸಿ (ಈಗಿನಂತೆ) 'ಸಭಾತ್ಯಾಗ' ಮಾಡುವಷ್ಟು ಕೂಡ ಅವರ ನೈತಿಕ ಆತ್ಮಸಾಕ್ಷಿ ಸೆಟೆದು ನಿಲ್ಲಲಿಲ್ಲ. ಅವರೆಲ್ಲರೂ ನೈತಿಕವಾಗಿ ಸತ್ತವರಾಗಿದ್ದರು. ಅದಕ್ಕೇ ದ್ರೌಪದಿಯಿಂದ 'ಇದು ಸಭೆಯಲ್ಲ. ಮಂದಿಯ ನೆರವಿ' ಎಂದು ಕುಮಾರವ್ಯಾಸ ಹೇಳಿಸುತ್ತಾನೆ. ಕೆಲವೊಂದು ಪ್ರಸಂಗದಲ್ಲಿ ಹಕ್ಕುಗಳ ವಿರುದ್ಧ ನ್ಯಾಯವನ್ನು, ನಿಜವಾದ ಧರ್ಮವನ್ನು ಎತ್ತಿ ಹಿಡಿಯಲು ಬಲ ಪ್ರಯೋಗ ಮಾಡಬೇಕಾಗುತ್ತದೆ. ಇದರ ಪ್ರಜ್ಞೆ ಭೀಮನೊಬ್ಬನಿಗಷ್ಟೇ ಇತ್ತು. ಅದಕ್ಕಾಗಿಯೇ ಅವನು ತಮ್ಮನಿಗೆ "ತಾ ಬೆಂಕಿ, ನನ್ನೀ ಕೆಲಸಕ್ಕೆ ಬಾರದ ಭುಜಗಳನ್ನು ಸುಟ್ಟು ಬಿಡುತ್ತೇನೆ" ಅನ್ನುತ್ತಾನೆ—ಕುಮಾರವ್ಯಾಸನ ಪ್ರಕಾರ.

ಈ ಕ್ಷಣದಲ್ಲಿಯೇ ಈ ಎಲ್ಲ ಅರಸರ, ಕ್ಲೀಬ ಪಂಡಿತರ ಭಾರವನ್ನು ತಾಳಲಾರದೆ ಭೂದೇವಿ ತತ್ತರಿಸಿದಳೆಂಬಂತೆ ದುರ್ನಿಮಿತ್ತಗಳು ಕಾಣಿಸಿಕೊಂಡವು. ದ್ವಾಪರದ ನೈತಿಕ ಪ್ರಜ್ಞೆ ಗೋಳಾಡಿತೆಂಬಂತೆ ಹಗಲಲ್ಲೇ ನರಿಗಳು ಊಳಿಟ್ಟವು. ಈ ಕ್ಷಣದಲ್ಲಿ ತಾನೇ ಶ್ರೀಕೃಷ್ಣ ಇನ್ನು ಸಾಕು; ಇವರೆಲ್ಲರೂ 'ಕೊಳೆಯದ ಹೆಣ'ಗಳು. ಇವರು ನೈತಿಕವಾಗಿ ಈಗಾಗಲೇ ನಾರುತ್ತಿದ್ದಾರೆ. ಇವರ ಜೀವಚ್ಛವಗಳನ್ನು ಸುಡದಿದ್ದರೆ ರೋಗ ಪೃಥ್ವಿಯನ್ನೇ ಕೆಡಿಸುವುದು ನಿಜ, ಎಂದು ನಿರ್ಧರಿಸಿದ. ದುರ್ಯೋಧನನನ್ನು ದುಶ್ಶಾಸನನ್ನು ಕೊಲ್ಲಿಸುವುದೇನು ದೊಡ್ಡದಾಗಿರಲಿಲ್ಲ. ಭೀಮನಿಂದ ಜರಾಸಂಧನನ್ನು ಕೊಲ್ಲಿಸಿದಂತೆ ಏನಾದರೂ ಮಾಡ ಬಹುದಿತ್ತು. ಆದರೆ ಅಧರ್ಮದ ವಿರುದ್ಧ ದನಿಯೆತ್ತಲಾರದ ಈ ಶಾಸ್ತ್ರ ಸಮ್ಮೂಢ ಚೇತನರನ್ನೊಳಗೊಂಡು ಇಡೀ ಟೋಳಿಯನ್ನೇ ನಾಶ ಮಾಡಬೇಕು—ಬೇರೆ ಇಲಾಜಿಲ್ಲ, ಎಂದು ಕೃಷ್ಣ ಸಂಕಲ್ಪಿಸುತ್ತಾನೆ. ಅದಕ್ಕೆ ಏನು ಬೆಲೆಯಾದರೂ ಸೈ. ಶ್ರೀ ಕೃಷ್ಣ ಬರೇ ಅವತಾರವಲ್ಲ; ದ್ವಾಪರದ ನೈತಿಕ ಪ್ರಜ್ಞೆ-ನಿಷ್ಕ್ರಿಯ ವಿವೇಕವಲ್ಲ, ಸಕ್ರಿಯ ಪ್ರಜ್ಞೆ.

"ಇವರನ್ನೆಲ್ಲ ನಾನು ಆಗಲೇ ಕೊಂದಿದ್ದೇನೆ; ನೀನು ಬರೇ ನಿಮಿತ್ತ ಮಾತ್ರನಾಗು ಸಾಕು" ಎಂದು ಕೃಷ್ಣ ಭಗವದ್ಗೀತೆಯಲ್ಲಿ ಅರ್ಜುನನಿಗೆ ಹೇಳುವುದನ್ನು ಇಲ್ಲಿ ನೆನೆದುಕೊಳ್ಳಬಹುದು. ಮನುಷ್ಯರು ಎದ್ದುನಿಂತು ಒಬ್ಬ ನಿರಪರಾಧಿ ಆರ್ತ ಮಹಿಳೆಗೆ ಪರಿಹಾರ ಒದಗಿಸಬಹುದಾಗಿದ್ದಾಗ ಅವಳನ್ನು ದೇವರಿಗೆ ಮೊರೆಯಿಡಬೇಕಾದಂತೆ ಮಾಡಿದ ಈ ಮೂಢಾತ್ಮರೂ ಕೇವಲ ತಾನು ಬಿದ್ದಾಗ ನಕ್ಕಳೆಂಬ ರೊಚ್ಚಿಗೆ ಪ್ರತೀಕಾರ ಮಾಡುವ ಹುಮ್ಮಸದಲ್ಲಿ ತಾನು ರಾಜ, ಪ್ರಜಾ ಸಮುದಾಯಕ್ಕೆ ಮೇಲ್ಪಂಕ್ತಿಯಾಗತಕ್ಕವ ಎಂಬುದನ್ನು ನೆನೆಯದ ದುರ್ಯೋಧನನೂ ಸಮಾನವಾಗಿಯೇ ಅಳಿಸಿ ಹಾಕಬೇಕಾದ ಲಿಪಿಗಳು—ಎಂಬ ಸಂಕಲ್ಪ ಆ ಗಳಿಗೆಯಲ್ಲಿ ದೈವ ಸಂಕಲ್ಪವಾದದ್ದು.

ಅದನ್ನೇ ಶ್ರೀಕೃಷ್ಣ ಸಂಧಿಗಾಗಿ ಬಂದ ವಿದುರನಿಗೆ ಹೇಳಿದ್ದಾನೆ.

"ಎಮಗೆ ಸರಿಯಿತ್ತಂಡದಲ್ಲಿಯ
ಮಮತೆ, ಬೇರೊಬ್ಬರಲಿ ಪಕ್ಷ
ಭ್ರಮೆಯ ಮಾಡೆವು, ಹಿತವ ಬಯಸುವೆವೆರೆಡು ಸಂತತಿಗೆ
ಕಮಲ ಮುಖಿ ಸುಲಿವಡೆದು ಲಕ್ಷ್ಮೀ
ರಮಣ ಲಕ್ಷ್ಮೀ ರಮಣ ಲಕ್ಷ್ಮೀ
ರಮಣ ಎಂದೊರಲಿದೊಡೆ ಸಂಜಯ ನೊಂದೆ ನಾನೆಂದ"

(–ಕುಮಾರವ್ಯಾಸ, ಉದ್ಯೋಗ ಪರ್ವ ಸಂಧಿ-೫)

ಭೂಮಿಗೆ ಭಾರ ಅಸಹನೀಯವಾಗುವುದು ದುರ್ಜನರ ದೌರ್ಜನ್ಯ ಮಾತ್ರದಿಂದಲ್ಲ; ಸಜ್ಜನರು, ಜ್ಞಾನಿಗಳು ಎನಿಸಿದವರು ಮೋರೆಗೆ ಮುಸುಕು ಹಾಕಿಕೊಂಡು ಅನ್ಯಾಯಗಳ ಮೊರೆಗೆ ಕಿವುಡಾದಾಗ. ಒಂದಲ್ಲ ಒಂದು ಆಮಿಷದಿಂದ, ದುರ್ಜನರನ್ನು ವಿರೋಧಿಸದೆ, ಸುಳ್ಳು ವಿವೇಕದ ಮಾತನ್ನಾಡುತ್ತ ನಿಷ್ಕ್ರಿಯರಾದಾಗ, ಆಗ ದೈವ ನೊಂದೆನೆನ್ನುತ್ತದೆ. ಇಂಥ ಸುಳ್ಳು ವಿವೇಕವನ್ನೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣ "ಪ್ರಜ್ಞಾವಾದಾಂಶ್ಚ ಭಾಷಸೇ" ನಿನ್ನ ನಿಷ್ಕ್ರಿಯತೆಯನ್ನು rationalise ಮಾಡುತ್ತಿದ್ದೀ, ವಿವೇಕದ ನುಡಿಗಳ ಮರೆಯಲ್ಲಿ ಮುಚ್ಚಿಕೊಳ್ಳುತ್ತೀ, ಎಂದು ಅರ್ಜುನನ ವ್ಯಾಜದಿಂದ ಸಜ್ಜನರನ್ನು ಜರೆದದ್ದು. ಹಕ್ಕುಗಳಿಗೆ, ರೂಢಿಗಳಿಗೆ, ಶಾಸ್ತ್ರದ ಮಾತುಗಳಿಗೆ-ಎಲ್ಲಕ್ಕೂ ಎಲ್ಲೆಯೆಂಬುದಿದೆ. ಅದನ್ನು ಮೀರಿದ್ದೆಲ್ಲ ಮರ್ಯಾದೆಯ ಅತಿಕ್ರಮಣ. ಶ್ರೀಕೃಷ್ಣ ಈ ಸತ್ಯವನ್ನು ಎತ್ತಿ ಹಿಡಿಯಲು ಯುಗಾಂತರಕಾರಕ ಯುದ್ಧವನ್ನು ಮಾಡಿಸಿದ. ದ್ರೌಪದಿಯ ಮೊರೆ ಯುಗದ ಮೊರೆ; ನಿಶ್ಚೇತನ ತಥ್ಯದ ವಿರುದ್ಧ ಸತ್ಯದ ಮೊರೆ; ವಾಚಿಕ ಸತ್ಯದ ವಿರುದ್ಧ ಋತದ ಮೊರೆ. ಮನುಷ್ಯರು 'ಋತಸ್ಯ ಗೋಪ್ತ'ರಾಗಲು ಹಿಂಜರಿದಾಗ ಮಾತ್ರ ದೈವ ಆ ಕೆಲಸಕ್ಕೆ ಇಳಿಯಬೇಕಾಗುತ್ತದೆ. ಅದೇ ಅವತಾರ. ಅದು ಇಳಿದಾಗ ಯುಗಪ್ರಳಯ ಎನ್ನಬಹುದಾದದ್ದು ಸಂಭವಿಸುತ್ತದೆ. ಕ್ಲೀಬ ವಿವೇಕವೂ ಆಗ ಅವಿವೇಕದೊಡನೆ ಬೆಲೆ ತೆರುತ್ತದೆ.

■

# ಧರ್ಮಸಂಕಟ

ಮನುಷ್ಯನ ಬದುಕು ದ್ವಂದ್ವಗಳಿಂದ ತುಂಬಿದೆ. ಅವನು ಆಯ್ಕೆಮಾಡಬೇಕಾಗುತ್ತದೆ. ದ್ವಂದ್ವದಲ್ಲಿ ಯಾವುದನ್ನು ಆರಿಸಿಕೊಂಡರೂ ಅವನಿಗೆ ಸಂಕಟ ಇದ್ದೇ ಇರುತ್ತದೆ. ಕಾನೂನು ಅಥವಾ ಧರ್ಮವನ್ನೇ ತೆಗೆದುಕೊಳ್ಳುವಾ. ಕಾನೂನು, ಧರ್ಮ, ನೀತಿ ಎಲ್ಲವೂ ಮನುಷ್ಯರಿಗಾಗಿ ಇದೆ; ಇರಬೇಕು. ಹಾಗೆಂದು ಈ ಕಾಲದಲ್ಲಿ ಎಲ್ಲರೂ ಕೂಗಿಕೊಳ್ಳುತ್ತಾರೆ. ಕಾನೂನು, ಧರ್ಮ ಇವು ಜಡೆಗಟ್ಟಿದಾಗ ಅವು ಮನುಷ್ಯನಿಗೆ ಪೀಡಕವಾಗುತ್ತವೆ. ಅವುಗಳನ್ನು ವಿರೋಧಿಸುವವರ ಸಂಖ್ಯೆ ಹೆಚ್ಚುತ್ತದೆ. ಮನುಷ್ಯನಿಗಾಗಿ ಕಾನೂನು ಎಂಬ ತತ್ವಕ್ಕೆ ಜನ ಕಿವಿಗೊಡುತ್ತಾರೆ. ಇದು ತುಂಬ ನ್ಯಾಯವಾಗಿಯೂ ಕಾಣಿಸುತ್ತದೆ.

ಆದರೆ ಮನುಷ್ಯನಿಗಾಗಿ ಕಾನೂನು, ಮನುಷ್ಯನಿಗಾಗಿ ಧರ್ಮ ಎಂಬುದನ್ನು ನೀವು ಒಪ್ಪಿದಿರೋ, ಕಾನೂನನ್ನು, ಧರ್ಮವನ್ನು ಅಮಲಿನಲ್ಲಿ ತರುವುದೇ ಅಸಾಧ್ಯಪ್ರಾಯವಾಗಿ ಬಿಡುತ್ತದೆ. ಯಾವೊಂದು ನಿಯಮವನ್ನು ತೆಗೆದುಕೊಂಡರೂ ಕೆಲವರಿಗಾದರೂ ಅದು ಅನಿಷ್ಟವಾಗಿಯೇ ತೀರುತ್ತದೆ. ಧರ್ಮದ ವಿರುದ್ಧ ದಂಗೆ ಹೂಡುವುದು ಸೂಕ್ತವೆಂದಾದರೆ ಯಾವೊಂದು ನಿಯಮವೂ ದಂಗೆಗೆ ಒಳಗಾಗದೆ ಉಳಿಯದು. ದಂಗೆಗೆ ಪಕ್ಕಾದ ಕೂಡಲೆ ನಿಯಮವನ್ನು ಸಡಿಲಿಸುವುದು ಬದಲಿಸುವುದಾದರೆ ಅದಕ್ಕೆ ಏನೂ ಮರ್ಯಾದೆ ಉಳಿಯುವುದಿಲ್ಲ. ಧರ್ಮವೋ ಕಾನೂನೋ ಸಫಲವಾಗಬೇಕಾದರೆ ಅದಕ್ಕೊಂದು ಶಾಶ್ವತತೆಯೂ ಅನುಕೂಲತೆಯೂ ಇರಬೇಕಾಗುತ್ತದೆ.

ಆದರೆ ಈ ವಿವೇಕವನ್ನು ಒಪ್ಪಿದರೆ ನಿಯಮದ ಹಿಂದೆ ಸಾವಕಾಶವಾಗಿ ಒಂದು ಪ್ರತಿಷ್ಠಿತ ಸ್ವಾರ್ಥ ಬೆಳೆದು ನಿಲ್ಲುತ್ತದೆ. ಅದು ಪೀಡಕವಾಗಿ ಬಿಡುತ್ತದೆ. ಕಾಲ ಬದಲಾಗಿ ಒಂದು ಧರ್ಮ ನಿಯಮ ಅರ್ಥ ಕಳೆದುಕೊಂಡ ಮೇಲೂ ಅದನ್ನು ಬದಲಾಯಿಸಿ ಬಹುಜನ ಹಿತಕಾರಿಯಾಗಿ ಮಾಡುವುದಕ್ಕೆ ಬಲವತ್ತರ ವಿರೋಧ ಸಿದ್ಧವಾಗಿರುತ್ತದೆ.

ನಮ್ಮಲ್ಲಿ ಇದೇ ಆಯಿತು. ನಿಯಮಕ್ಕೆ ಅನುಲ್ಲಂಘ್ಯತೆಯನ್ನು ಕೊಡುವುದಕ್ಕಾಗಿ ಅದನ್ನು ದೈವ ನಿರ್ಮಿತ, ಋಷಿ ಪ್ರಣೀತವೆಂದು ಪ್ರತಿಷ್ಠಾ ವಿಧಾನ ಬೆಳೆಸಿದರು. ಆ ನಿಯಮ ಅರ್ಥಹೀನವಾದ ಮೇಲೆ ಅದನ್ನು ಬದಲಿಸುವ ಅಗತ್ಯವಾದಾಗ, "ಅಯ್ಯೋ ದೇವರು ಮಾಡಿದ್ದು, ಋಷಿಗಳು ಹೇಳಿದ್ದು, ಅದನ್ನು ಬದಲಿಸುವುದಕ್ಕೆ ನಾವೇನು ದೇವರೇ ಋಷಿಗಳೇ?" ಎಂದು ಹೆದರಿಸಿ ತಡೆದದ್ದಾಯಿತು. ಬದಲಾವಣೆ ಅಸಾಧ್ಯವಾಗಿ ಹೋಯಿತು. ಈಗ ಬಂಡಾಯವೇ ಎದ್ದಿದೆ. ಆದರೆ ಧರ್ಮದ ವಿರುದ್ಧ ಬಂಡಾಯ ಒಳ್ಳೇದು, ಕೆಟ್ಟದ್ದು ಎಲ್ಲದರ ಮಾನ ಕಳೆದು ಸ್ವೇಚ್ಛಾಚಾರಕ್ಕೆ ಎಡೆಕೊಟ್ಟುಬಿಟ್ಟಿದೆ. ■

# ಶಾಸ್ತ್ರವನ್ನು ಏಕೆ ಪಾಲಿಸಬೇಕು?

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಹೇಳಿದ ಮಾತುಗಳಲ್ಲಿ "ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವಿನಿಶ್ಚಯೇ" ಎಂಬುದೂ ಒಂದು. ಗೀತೆಯಲ್ಲಿ ಕೃಷ್ಣ ಆತ್ಮಸ್ವರೂಪ, ಆತ್ಮಸ್ವಭಾವ ಇತ್ಯಾದಿಗಳನ್ನೆಲ್ಲಾ ವಿವರಿಸಿ, ಮನುಷ್ಯನ ಲೌಕಿಕ ಕರ್ತವ್ಯಗಳನ್ನು ಬೋಧಿಸುತ್ತಾನೆ. ಆಮೇಲೆ ಇದನ್ನೆಲ್ಲಾ ವಿಚಾರಿಸಿ 'ಯಥೇಚ್ಛಸಿ ತಥಾ ಕುರು'—ಹೇಗೆ ಮನಸ್ಸು ಬಂತೋ ಹಾಗೆ ಮಾಡು—ಎಂಬ ಕಾರ್ಯಸ್ವಾತಂತ್ರ್ಯವನ್ನು ಕೊಡುತ್ತಾನೆ. ಹೀಗಿದ್ದರೂ "ಏನು ಮಾಡಬೇಕು ಏನು ಮಾಡಬಾರದು ಎಂಬುದರಲ್ಲಿ ನಿನಗೆ ಶಾಸ್ತ್ರವೇ ಪ್ರಮಾಣ" ಎಂಬುದಾಗಿ ನಿರ್ಬಂಧ ಹೊರಿಸುವುದು ಆಶ್ಚರ್ಯಕರವಾಗಿ ಕಾಣುತ್ತದೆ. ವಾಸ್ತವವಾಗಿ ಸನಾತನ ಮಾರ್ಗದ ಅನುಯಾಯಿಗಳು ಕೃಷ್ಣನ ಈ ಮಾತನ್ನು ಅವಲಂಬಿಸಿಯೇ ತಮ್ಮ ಪ್ರಸ್ಥಾನವನ್ನು ಕಟ್ಟಿರುತ್ತಾರೆ. ಎಲ್ಲರೂ ಸ್ವತಂತ್ರವಾಗಿ ವಿಚಾರಿಸಿ ತಮಗೆ ಸರಿದೋರಿದಂತೆ ನಡೆದುಕೊಳ್ಳಬೇಕು ಎಂದು ಹೇಳುವ ಇಂದಿನ ಯುಗದಲ್ಲಿ ಶಾಸ್ತ್ರಕ್ಕೆ ನಮ್ಮ ಬುದ್ಧಿಯನ್ನು ಮಾರಿಕೊಳ್ಳಬೇಕು ಎನ್ನುವ ಕೃಷ್ಣನ ಅಪ್ಪಣೆ ಪ್ರತಿಗಾಮಿಯೆನಿಸುವುದಿಲ್ಲವೆ?

ಇದು ಗೀತೆಯನ್ನು ವಿಮರ್ಶನ ಬುದ್ಧಿಯಿಂದ ಓದುವ ಪ್ರತಿಯೊಬ್ಬನಿಗೂ ಉಂಟಾಗುವ ಸಂಶಯ. ಆದರೆ ಶ್ರೀಕೃಷ್ಣನ ಈ ಹೇಳಿಕೆ ಮೊದಲ ನೋಟಕ್ಕೆ ಕಾಣುವಷ್ಟು ಪ್ರತಿಗಾಮಿಯಲ್ಲ. ಅದರಲ್ಲಿ ಗಾಢವಾದ ವ್ಯವಹಾರಬುದ್ಧಿ ಅಡಕವಾಗಿದೆ.

ಶಾಸ್ತ್ರ ಎಂದರೇನು? ಮನುಷ್ಯನ ಸಾಮಾಜಿಕ ವರ್ತನೆಯನ್ನು ನಿಶ್ಚಯಿಸಿ ಶಿಸ್ತಿಗೊಳಪಡಿಸುವುದೇ ಶಾಸ್ತ್ರ. ಸಮಾಜದಲ್ಲಿ ಬದುಕುವ ಅಗತ್ಯವಿಲ್ಲದಿದ್ದರೆ ಬಹುಶಃ ಮನುಷ್ಯನಿಗೆ ಶಾಸ್ತ್ರವೇ ಅಗತ್ಯವಿರುತ್ತಿರಲಿಲ್ಲ. ಕೃತಯುಗದಲ್ಲಿ ಮನುಷ್ಯರೆಲ್ಲರೂ ಧರ್ಮವನ್ನು ಸ್ವಪ್ರೇರಣೆಯಿಂದ ಪಾಲಿಸುತ್ತಿದ್ದುದರಿಂದ ರಾಜ, ರಾಜ್ಯ, ಆಳಿಕೆ ಮುಂತಾದ ಯಾವುದೂ ಇರಲಿಲ್ಲ ಎಂಬುದಾಗಿ ಭಾಗವತ ಪುರಾಣದಲ್ಲಿ ಒಂದೆಡೆ ಹೇಳಲಾಗಿದೆ. ಶಾಸ್ತ್ರ ಅಥವಾ ಶಾಸನದಲ್ಲಿ ಸಮಷ್ಟಿಹಿತಕ್ಕಾಗಿ—ಅಗತ್ಯವಿದ್ದರೆ ಒತ್ತಾಯದಿಂದ—ವ್ಯಕ್ತಿಯಿಂದ ಕರ್ತವ್ಯ ಮಾಡಿಸುವುದು ಮತ್ತು ಸಮಾಜಕ್ಕೆ ಅಹಿತಕರವಾದ ಕೆಲಸವನ್ನು ಮಾಡದಂತೆ ತಡೆಯುವುದು ಒಳಗೊಂಡಿದೆ. ಶಾಸ್ತ್ರವೆಂದರೆ ನಿಯಮಗಳು. ಯುದ್ಧ ಮಾಡುವುದರಿಂದ ಕೆಡುಕು ಇದೆ; ಆದರಿಂದ ಯುದ್ಧ ಮಾಡುವುದಿಲ್ಲ ಎಂದು ಮೊಂಡು ಹಿಡಿದ ಅರ್ಜುನನಿಗೆ ಕೃಷ್ಣ ಕರ್ತವ್ಯಬೋಧನೆ ಮಾಡುತ್ತಿರುವುದರಿಂದ ಶಾಸ್ತ್ರ ಎಂಬುದಕ್ಕೆ ಮನುಷ್ಯನ ಕರ್ತವ್ಯ, ವರ್ತನೆಗಳ ನಿಯಮ ಎಂದೇ ಅರ್ಥ ತಿಳಿದುಕೊಳ್ಳಬೇಕು.

ಹಿಂದಿನ ಕಾಲದಲ್ಲಿ ಧರ್ಮಶಾಸ್ತ್ರಗಳು ಮನುಷ್ಯನ ಕರ್ತವ್ಯ ಅಕರ್ತವ್ಯಗಳನ್ನು

ನಿರ್ಧರಿಸುತ್ತಿದ್ದವು. ಹಿಂದುಗಳಿಗೆ ಮಾತ್ರವಲ್ಲ, ಕ್ರೈಸ್ತರಿಗೂ ಮುಸ್ಲಿಮರಿಗೂ ಅವರವರ ಧರ್ಮಶಾಸ್ತ್ರಗಳು ಇದ್ದವು. ಅವುಗಳಿಗೆ ಪಂಡಿತರು ಅರ್ಥವಿವರಣೆ ಮಾಡುತ್ತಿದ್ದರು. ಇಂದಿನ ಕಾಲದಲ್ಲಿ ಸರಕಾರಗಳು, ಪ್ರತಿನಿಧಿ ಸಭೆಗಳು 'ಶಾಸ್ತ್ರ'ಗಳನ್ನು ಮಾಡುತ್ತಿವೆ. ಅವುಗಳಿಗೆ ಕಾನೂನು ಎನ್ನುತ್ತೇವೆ ಅವುಗಳಿಗೆ ನ್ಯಾಯಾಲಯಗಳು ಅರ್ಥ ವಿವರಣೆ ಮಾಡುತ್ತವೆ. ಕೃಷ್ಣನ ಅಪ್ಪಣೆಯನ್ನು ಇಂದಿನ ಯುಗಕ್ಕೆ ಅನ್ವಯಿಸುವುದಾದರೆ ಕಾರ್ಯಾಕಾರ್ಯಗಳನ್ನು ನಿಶ್ಚಯಿಸುವಾಗ ಇಂದಿನ ಶಾಸ್ತ್ರಗಳಾದ ಕಾನೂನುಗಳು ಪ್ರಜೆಗಳಿಗೆ ಬಂಧನಕಾರಕ ಎಂದು ಅರ್ಥವಾಗುತ್ತದೆ. ಈ ಕಾನೂನು ನನ್ನ ಸದಸದ್ವಿವೇಕಕ್ಕೆ ಒಪ್ಪುವುದಿಲ್ಲ. ಆದ್ದರಿಂದ ನಾನು ಅದನ್ನು ಪಾಲಿಸುವುದಿಲ್ಲ ಅಥವಾ ಅದನ್ನು ಮುರಿಯುತ್ತೇನೆ ಎಂದು ಹೇಳುವ ಸ್ವಾತಂತ್ರ್ಯ ಪ್ರಜೆಗೆ ಇಲ್ಲ ಎಂಬುದು ಕೃಷ್ಣನ ಅಪ್ಪಣೆಯಾಗಿದೆ.

ನಮ್ಮ ದೇಶದಲ್ಲಿ ಮತ್ತು ಇತರ ಅನೇಕ ದೇಶಗಳಲ್ಲಿ ಕಾಣಬರುವ ಅವ್ಯವಸ್ಥೆಗೆ ನಮ್ಮ ನಾಯಕರಲ್ಲಿ ಅನೇಕರು ಶಾಸ್ತ್ರ ಪ್ರಾಮಾಣ್ಯವನ್ನು ಮೀರಿ ವರ್ತಿಸುವುದೂ ವರ್ತಿಸುವಂತೆ ಇತರರನ್ನು ಪ್ರೋತ್ಸಾಹಿಸುವುದೂ ಕಾರಣವಾಗಿದೆ. ಸಮಾಜಕ್ಕೆ ಶಾಸ್ತ್ರ, ಅಥವಾ ಕಾನೂನು ಅಥವಾ ಕಟ್ಟಳೆ—ಹೇಗೆಯೇ ಅದನ್ನು ಕರೆಯಿರಿ—ಅತ್ಯಗತ್ಯವಾಗಿದೆ. ಅದಿಲ್ಲದೆ ಸಮಾಜ ನಿಲ್ಲಲಾರದು. ಸಮಾಜ ನಮ್ಮನ್ನು ರಕ್ಷಿಸುತ್ತಿರುವಾಗ ಸಮಾಜ ಮಾಡಿದ ಕಟ್ಟಳೆಗಳನ್ನು ಪಾಲಿಸಲೇಬೇಕು. ನಾವು-ನಾವು ನಮ-ನಮಗೆ ಸರಿದೋರಿದ ಕಾನೂನು ಕಟ್ಟಳೆಗಳನ್ನು ಪಾಲಿಸುತ್ತೇವೆ. ಉಳಿದವುಗಳನ್ನು ಮುರಿಯುತ್ತೇವೆ ಎಂದರೆ ಎಲ್ಲ ಕಾನೂನುಗಳೂ ನಿಷ್ಕ್ರಿಯವಾಗಿ ಸಮಾಜ ಕುಸಿದುಬೀಳಬೇಕಾಗುತ್ತದೆ. ಯಾವುದಾದರೂ ಒಂದು ಕಾನೂನಿಗೋ ರಾಜಕೀಯ ನೀತಿಗೋ ವಿರುದ್ಧವಾಗಿ ಇನ್ನಾವುದಾದರೂ ಕಾನೂನನ್ನು ಮುರಿದು ಬೀದಿ ದೀಪಗಳನ್ನು ಒಡೆಯುತ್ತೇವೆ. ಬಸ್ಸುಗಳನ್ನು ಸುಡುತ್ತೇವೆ ಎಂಬುದು ಸಮಾಜ ಕುಸಿದುಬೀಳುವಂತೆ ಮಾಡುವ ಶೀಘ್ರೋಪಾಯವಾಗಿದೆ.

ಹಾಗಾದರೆ ಅನ್ಯಾಯವಾದ ಕಾಯದೆ, ರಾಜನೀತಿಗಳನ್ನು ವಿರೋಧಿಸದೆ ಕುರಿಗಳಂತೆ ತಲೆಯೊಡ್ಡಬೇಕೆ? ಹಾಗೇನೂ ಇಲ್ಲ. ಕೃಷ್ಣನಾದರೂ 'ಕಾರ್ಯಾಕಾರ್ಯವಿನಿಶ್ಚಯೇ' ಮಾಡತಕ್ಕ ಮಾಡಬಾರದ ಕೆಲಸಗಳ ವಿಷಯದಲ್ಲಿ ಶಾಸ್ತ್ರಪ್ರಮಾಣವೆನ್ನುತ್ತಾನೆಯೇ ಹೊರತು ವಿಚಾರ ಪ್ರಚಾರ ರಂಗಕ್ಕೆ ಶಾಸ್ತ್ರವನ್ನು ಅನ್ವಯಿಸಿಲ್ಲ. ಒಂದು ಕಾಲಕ್ಕೆ ಯೋಗ್ಯವಾದ ಕಾನೂನು ಇನ್ನೊಂದು ಕಾಲಕ್ಕೆ ಅನ್ಯಾಯದ್ದಾಗುವ ಸಂಭವ ಇದ್ದೇ ಇದೆ. ಇವುಗಳನ್ನು ಬದಲಾಯಿಸುವ ಅಗತ್ಯ ಬರಬಹುದು. ಬದಲಾವಣೆಯನ್ನು ವಿರೋಧಿಸುವವರೂ ಇದ್ದೇ ಇರುವರು. ಆದರೆ ಬದಲಾವಣೆಗೆ ಪ್ರಯತ್ನ ವಿಚಾರ ಮಥನದಿಂದ. ಮನವೊಲಿಸುವಿಕೆಯಿಂದ ಆಗಬೇಕೇ ಹೊರತು ಕಾನೂನನ್ನು ಮುರಿಯುವುದರಿಂದಲ್ಲ. ಇದು ಅವಸರಪಡುವವರಿಗೆ ತೀರ ಸಾವಕಾಶ ಕ್ರಮವೆನಿಸಬಹುದು. ಆದರೆ ಸಮಾಜ ಸಮಾಜವಾಗಿ ಉಳಿಯುವುದಕ್ಕೆ, ಅದರಿಂದ ನಮಗೆ ಇದ್ದಬಿದ್ದ ರಕ್ಷಣೆ ಪೋಷಣೆಯಾದರೂ ದೊರೆಯುವುದಕ್ಕೆ ಈ ವಿಲಂಬ ನಾವು ತೆರಲೇಬೇಕಾದ ಬೆಲೆಯಾಗಿದೆ. ಭಾರತೀಯರು ತಮ್ಮ ಶಾಸ್ತ್ರ ಅಂದರೆ ಕಾನೂನುಗಳು-ದೈವ ನಿರ್ಮಿತ ಎಂದು ಹೇಳುತ್ತ ಬಂದಿದ್ದಾರೆ. ಇದರಲ್ಲಿ ಒಂದಕ್ಷರವನ್ನೂ

ಬದಲಿಸುವ ಅಧಿಕಾರ ಮನುಷ್ಯಮಾತ್ರರಾದ ನಮಗೆ ಇಲ್ಲ ಎಂಬುದಾಗಿ ತಿಳಿವಳಿಕೆ ಹಬ್ಬಿದೆ. ಆದರೆ ವ್ಯವಹಾರದಲ್ಲಿ ನಮ್ಮ ಧರ್ಮಶಾಸ್ತ್ರಗಳು ಬದಲಾಗುತ್ತಲೇ ಬಂದಿವೆ. ೧೦೮ ಸ್ಮೃತಿಗಳು, ಅಂದರೆ ಧರ್ಮಶಾಸ್ತ್ರಗಳು, ಇವೆಯೆಂದು ಪ್ರತೀತಿ. ಮನುಸ್ಮೃತಿ ಎಂದೋ ಜಾರಿಯಿಂದ ತೆಗೆದು ಹಾಕಲ್ಪಟ್ಟಿದೆ. ನಮ್ಮ ಸನಾತನಿಗಳನ್ನು ಕೇಳಿದರೆ ಈ ಬದಲಾವಣೆಗಳಿಗೆ ಯುಗಾಂತರ ಧರ್ಮ ಅಥವಾ ದೇಶಾಂತರ ಧರ್ಮ ಎಂದು ವಿವರಣೆ ಕೊಡುತ್ತಾರೆ. ಶಾಸ್ತ್ರಗಳು ಕಾಲ ದೇಶ ಸ್ಥಿತಿಗಳಿಂದ ನಿಯಂತ್ರಿತವಾಗುತ್ತವೆ ಎಂದು ಅವರೂ ಒಪ್ಪಿದ ಹಾಗಾಯಿತು. ದೈವಪ್ರಣೀತ, ಋಷಿಪ್ರಣೀತ ಶಾಸ್ತ್ರ ಎನ್ನುವುದಕ್ಕೆ ಅವುಗಳನ್ನು ಅವಸರದಲ್ಲಿ ಲಘು ಮನಸ್ಸಿನಿಂದ ತಕ್ಕ ಯೋಗ್ಯತೆಯಿಲ್ಲದವರು ಬದಲಿಸಬಾರದು ಎಂದಷ್ಟೇ ತಾತ್ಪರ್ಯ ಮತ್ತು ಎಲ್ಲಿಯವರೆಗೆ ಒಂದು ಶಾಸ್ತ್ರ ನಿಯಮ ಅಥವಾ ಕಾನೂನು ಜಾರಿಯಲ್ಲಿದೆಯೋ ಆವರೆಗೆ ಅದನ್ನು ಬದಲಿಸುವುದಕ್ಕಾಗಿ ಪ್ರಚಾರವಲ್ಲದೆ ಅದನ್ನು ಮೀರಿ ಕಾನೂನು ಭಂಗ ಮಾಡುವುದು ಕೃಷ್ಣನ ಆಜ್ಞೆಗೆ ವಿರುದ್ಧ. ಬದಲಾವಣೆಗಳು ಆಗಬಹುದು, ಆಗಿವೆ; ಬದಲಾವಣೆಯಾದ ಮೇಲೆ ಅದೇ ಶಾಸ್ತ್ರ. ಅದರ ಉಲ್ಲಂಘನೆಯನ್ನು ಅದಕ್ಕೆ ವಿರೋಧ ಮಾಡಿ ಸೋತವರು ಕೂಡ ಮಾಡುವುದು ಶಾಸ್ತ್ರವಿರುದ್ಧ.

ಬಹಳ ಅಪರೂಪವಾಗಿ ಹಿಂದಿನ ಕಾಲದಲ್ಲಿಯೂ ಬಲ್ಲವರು ಶಾಸ್ತ್ರಗಳನ್ನು ಮುರಿದಿದ್ದಾರೆ. ಅಥೆನ್ಸಿನ ಋಷಿ ಸಾಕ್ರೆಟೀಸನು ಅಥೆನ್ಸಿನ ಕಾನೂನುಗಳಲ್ಲಿ ಕೊರತೆ ಕಂಡು, ವಿರೋಧ ಮಾಡಿ ವಿಚಾರಣೆಗೆ ಗುರಿಯಾದ. ಅವನಿಗೆ ಸೆರೆಮನೆಯಿಂದ ಪಾರಾಗಿ ಹೋಗುವುದು ಸುಲಭವಿತ್ತು. ಆದರೆ ಆತ ಅದಕ್ಕೆ ಒಪ್ಪಲಿಲ್ಲ. ಈ ದೇಶದ ಕಾನೂನುಗಳಿಂದ ನಾನು ರಕ್ಷಣೆ ಪೋಷಣೆ ಪಡೆದಿದ್ದೇನೆ. ಯಾವುದೋ ಒಂದು ಕಾನೂನು ನನಗೆ ಒಪ್ಪಿತವಿಲ್ಲ ಎಂದಾಕ್ಷಣ ನಾನು ರಾಜ್ಯದ ಕಟ್ಟಡದ ಭದ್ರತೆಗೆ ಅಗತ್ಯವಾದ ದಂಡ ವಿಧಿಯಿಂದ ತಪ್ಪಿಸಿಕೊಳ್ಳಲಾರೆ ಎಂದಾತ ಹೇಳುತ್ತಾನೆ. ಅಪರಾಧ ಮಾಡಿದವನು ದಂಡನೆಗೆ ತಲೆ ಕೊಡಲೇಬೇಕು. ಗಾಂಧೀಜಿಯಾದರೂ ಹೀಗೆಯೆ ಮಾಡಿದರು. ಧರ್ಮ ಶಾಸ್ತ್ರಗಳಾದರೂ ಶಾಸ್ತ್ರವಿರುದ್ಧವಾಗಿ ವರ್ತಿಸಿದವರು ಇಲ್ಲೇ ತಕ್ಕ ಶಿಕ್ಷೆಯನ್ನು ಒಪ್ಪಿಕೊಂಡರೆ ಪಾಪಮುಕ್ತಿಯಾಗುತ್ತದೆ ಎನ್ನುತ್ತವೆ. ಆದರೆ ಬುದ್ಧಿಪೂರ್ವಕವಾಗಿ ಪ್ರತಿಭಟನಾರೂಪವಾಗಿ 'ಸತ್ಯಾಗ್ರಹ' ಮಾಡುವುದು ಎಲ್ಲರ ಬಾಯ ತುತ್ತಲ್ಲ. ಪರಿಶುದ್ಧ ಚೇತನನಿಗೆ ಮಾತ್ರ ಆ ಅಧಿಕಾರವಿದೆ.

ಕಾಲಪರಿಸ್ಥಿತಿಯನ್ನರಿತು 'ಶಾಸ್ತ್ರ'ಗಳಲ್ಲಿ ಬದಲಾವಣೆ ಮಾಡದಿದ್ದರೆ ಏನಾಗುವುದೆಂದು ಕ್ರಾಂತಿಗಳ ಇತಿಹಾಸ ನಮಗೆ ಹೇಳುತ್ತದೆ. ಅದು ಬದಲಾವಣೆಯ ವಿರೋಧಿಗಳನ್ನು ನುಂಗಿ ನೀರು ಕುಡಿಯುತ್ತದೆ. ಹಾಗೆಯೆ ಅನ್ಯಾಯಗಳನ್ನು 'ಕ್ರಾಂತಿ'ಯಿಂದ ಸರಿಪಡಿಸುತ್ತೇವೆ ಎನ್ನುವವರಿಗೂ ಅದೇ ಪಾಠ ಹೇಳುತ್ತದೆ. ಜನತೆಯ ಶತ್ರುಗಳನ್ನು ನುಂಗಿದ ನಂತರ ಕ್ರಾಂತಿ ತನ್ನ ಮಕ್ಕಳನ್ನೇ ನುಂಗತೊಡಗುತ್ತಾಳೆ; ಮತ್ತು ಈ ಹುಚ್ಚು ಹಿಂಸಾಚಾರವನ್ನು ನಿಲ್ಲಿಸುವುದಕ್ಕೆ ಒಬ್ಬ ಸರ್ವಾಧಿಕಾರಿ ತಲೆಯೆತ್ತುತ್ತಾನೆ ಆಗ ಯಾರಿಗೂ ಕಾರ್ಯಸ್ವಾತಂತ್ರ್ಯ ಮಾತ್ರವಲ್ಲ, ವಿಚಾರ ಸ್ವಾತಂತ್ರ್ಯವೂ ಉಳಿಯುವುದಿಲ್ಲ. ಕೃಷ್ಣನ ಶಾಸ್ತ್ರ ಪ್ರಾಮಾಣ್ಯದ ಉಪದೇಶವನ್ನು ಸರಿಯಾದ ಬೆಳಕಿನಲ್ಲಿ ನೋಡಿದರೆ ಅದು ಇಂದಿಗೂ ಅನ್ವಯಿಸುವಂಥಾದ್ದಿದೆ. ■

# ಪ್ರತ್ಯಕ್ಷಂ ಶಾಸ್ತ್ರ

ಇದನ್ನು ಬರೆಯುವಾಗ ನನ್ನೆದುರು ಉಡುಪಿಯಿಂದ ಹೊರಡುವ ಒಂದು ಪಂಚಾಂಗದ ೨೪ನೇ ಪುಟವಿದೆ. ಅದು ಪ್ರಭವ ಸಂವತ್ಸರದ ಆಷಾಢ ಕೃಷ್ಣಪಕ್ಷದ ಪಂಚಾಂಗವಿರುವ ಪುಟ. ಅಲ್ಲಿ ಜುಲೈ ೧೭ನೇ ದಿನ 'ದಕ್ಷಿಣಾಯನಾರಂಭಃ' ಎಂದು ಉಲ್ಲೇಖವಾಗಿದೆ. ನಮ್ಮ ಸಂಧ್ಯಾವಂದನೆ ಸಂಕಲ್ಪಗಳಲ್ಲಿ ಅಂದಿನಿಂದ ತಾನೇ ನಾವು ದಕ್ಷಿಣಾಯನೇ ಎಂದು ಹೇಳುತ್ತೇವೆ. ದಕ್ಷಿಣಾಯನದಲ್ಲಿ ನಿಷಿದ್ಧವಾದ ಧರ್ಮಕರ್ಮಗಳ ನಿಲುಗಡೆಯನ್ನು ಅಂದಿನಿಂದ ತಾನೇ ನಾವು ಪ್ರಾರಂಭಿಸುತ್ತೇವೆ.

ಈಗ ದಕ್ಷಿಣೋತ್ತರಾಯಣಗಳೆಂದರೇನು? ಸೂರ್ಯನ ಆಭಾಸಿಕ ದಕ್ಷಿಣೋತ್ತರ ಚಲನೆಗಳನ್ನೇ ಆಯನಗಳೆಂದು ಕರೆಯುವುದಲ್ಲವೇ? ಈ ಚಲನೆಗಳ ಗಡುವುಗಳೇ ಆಯನ ಸಂಕ್ರಮಗಳಲ್ಲವೇ? ಅಥವಾ ಆಯನಗಳಿಗೆ ಬೇರೇನಾದರೂ ಅರ್ಥವಿದೆಯೆ?

ಯಾಕೆಂದರೆ ನಿಜವಾಗಿ ದಕ್ಷಿಣಾಯನ ಪ್ರಾರಂಭವಾಗುವುದು ಜುಲೈ ೧೭ ರಂದು ಅಲ್ಲ. ಅದಕ್ಕಿಂತ ಸುಮಾರು ಮೂರು ವಾರ ಮೊದಲು. ಜೂನ್ ೨೨ರ ಸುಮಾರಿಗೆ ಇದು ಪ್ರತ್ಯಕ್ಷ. ಊಹೆಗೆ ಇಲ್ಲಿ ಅವಕಾಶವಿಲ್ಲ. ಬೇಕಾದವರು, ನೆಲದ ಮೇಲೊಂದು ಗೂಟ ನೆಟ್ಟು ಅದರ ನೆರಳು ಎಂದು ತಿರುಗತ್ತದೆಂದು ಖಚಿತಪಡಿಸಿಕೊಳ್ಳಬಹುದು. ಇದಕ್ಕೆ ಜಟಿಲ ಗಣಿತವೂ ಬೇಡ. ಇಷ್ಟು ಪ್ರತ್ಯಕ್ಷವಾದುದನ್ನು ಕಡೆಗಣಿಸಿ ನಮ್ಮ ಆಚರಣೆಯ ಪಂಚಾಗಗಳಲ್ಲಿ ಆಯನ ಪರಿವರ್ತನೆಗಳನ್ನು ತಪ್ಪು ದಿನಗಳಂದು ಏಕೆ ಕಾಣಿಸುತ್ತಾರೆ? ಅದೂ 'ಪ್ರತ್ಯಕ್ಷಂ ಜ್ಯೋತಿಷಂ ಶಾಸ್ತ್ರಂ' ಎಂದು ಹೇಳಿಕೊಳ್ಳುತ್ತಿರುವಾಗ?

ನನ್ನ ಖಗೋಲಜ್ಞ ಮಿತ್ರರ ಹೇಳಿಕೆಯ ಪ್ರಕಾರ ಸೂರ್ಯಸಿದ್ಧಾಂತ, ಆರ್ಯಭಟೀಯ ಮೊದಲಾದ ಖಗೋಲ ಗಣಿತಗ್ರಂಥಗಳನ್ನು ಸುಮಾರು ೧೫ ಶತಮಾನಗಳ ಹಿಂದೆ ಬರೆದವರು ತಮ್ಮ ಕಾಲದ ಪ್ರತ್ಯಕ್ಷ ಖಗೋಲ ಅವಸ್ಥೆಗಳನ್ನು ಲೆಕ್ಕಕ್ಕೆ ಹಿಡಿದು ತಮ್ಮ ಗಣಿತ ವಿಧಾನಗಳನ್ನು ರೂಪಿಸಿದರು. ಆಯನ ಚಲನವೆಂಬ ವಿಶಿಷ್ಟ ಖಗೋಲಿಯ ಸ್ಥಿತ್ಯಂತರದ ದೆಸೆಯಿಂದ ಆಯನ ಸಂಕ್ರಮ ಮುಹೂರ್ತ ಹಿಂದೆ ಹಿಂದೆ ಸರಿಯುತ್ತ ಬಂದು ಇಂದು ಮೂರು ವಾರಗಳಷ್ಟು ಹಿಂದೆ ಬಿದ್ದಿದೆ. ಈ ಪ್ರಕ್ರಿಯೆ ಇನ್ನೂ ಶತಮಾನಗಳವರೆಗೆ ನಡೆಯಲಿದ್ದು ಆಯನ ಸಂಕ್ರಮ ಮತ್ತಷ್ಟು ಹಿಂದೆ ಸರಿಯಲಿದೆ. ಮತ್ತು ನಮ್ಮ ಸಂಕಲ್ಪಗಳಲ್ಲಿ ಕಾಲೋಚ್ಚಾರ ಇನ್ನೂ ಇನ್ನೂ ತಪ್ಪಾಗಲಿದೆ.

ನಮ್ಮ ಪೂರ್ವಜರು ವಿಧಿಸಿದಂತೆ ಉತ್ತರ ದಕ್ಷಿಣಾಯನಗಳಿಗೆ ವಿಹಿತವಾದ ಕರ್ಮ

ಮತ್ತು ಕರ್ಮನಿಷೇಧಗಳು ಶುಭಾಶುಭಫಲಗಳನ್ನು ನೀಡುತ್ತವೆಂದು ನಮಗೆ ನಂಬಿಕೆಯಿರುವುದು ನಿಜವಾದರೆ ಪ್ರತ್ಯಕ್ಷ ಖಗೋಲ ಸ್ಥಿತಿಗಳಿಗನುಸಾರವಾಗಿ ನಡೆದುಕೊಳ್ಳಬೇಕಲ್ಲವೆ? ಅದು ಬಿಟ್ಟು ಪ್ರತ್ಯಕ್ಷ ವಿರುದ್ಧವಾದ ಸ್ಥಿತಿಗಳನ್ನು ಅವಲಂಬಿಸಿದರೆ ಕರ್ಮ ಫಲ ವ್ಯತ್ಯಾಸ ಹೊಂದುವುದಿಲ್ಲವೆ? ಉತ್ತರಾಯಣ ಪುಣ್ಯಕಾಲದಲ್ಲಿ ಮಾಡಬೇಕಾದ್ದನ್ನು ಬೇರಾವುದೋ ಕಾಲದಲ್ಲಿ ನಡೆಸಿದರೆ ಶಾಸ್ತ್ರೋಕ್ತ ಫಲ ಸಿಕ್ಕೀತೆ?

ಇದಕ್ಕುತ್ತರವಾಗಿ ನಮ್ಮ ಧರ್ಮ ಶಾಸ್ತ್ರಾದಿಗಳಲ್ಲಿ ವಿಶಿಷ್ಟ ಗಣಿತಾನುಸಾರವಾಗಿ ಕರ್ಮಗಳನ್ನು ನೆರವೇರಿಸಬೇಕೆಂಬ ವಿಧಿಯಿದೆಯೆಂಬ ವಾದ ಮುಂದೆ ಬರುತ್ತದೆಯೆಂದು ನಾನು ಬಲ್ಲೆ. ಯಾಕೆಂದರೆ ಕಳೆದ ಮುಕ್ಕಾಲು ಶತಮಾನಕ್ಕಿಂತಲೂ ಹೆಚ್ಚು ಕಾಲದಿಂದ ಪಂಚಾಂಗಕರ್ತರೂ ಧರ್ಮಶಾಸ್ತ್ರಜ್ಞರೂ ಈ ಪ್ರಶ್ನೆಯನ್ನು ಚರ್ಚಿಸಿದರೂ ವಿಷಯ ಅನಿಶ್ಚಿತವಾಗಿಯೇ ಉಳಿದಿದೆ. ಆದರೆ ನಾನು ಮುಂದಿಡುವ ಪ್ರಶ್ನೆಯೆಂದರೆ ಪ್ರತ್ಯಕ್ಷಕ್ಕೂ ಶಾಸ್ತ್ರಕ್ಕೂ ಅಸಂಗತಿ ತಲೆದೋರಿದಾಗ ನಾವು ಶಾಸ್ತ್ರವನ್ನೇ ಅನುಸರಿಸಿ ಪ್ರತ್ಯಕ್ಷವನ್ನು ಕೈಬಿಡಬೇಕೆ? ಇಲ್ಲಿ ಕೇವಲ ಉತ್ತರ ದಕ್ಷಿಣಾಯನಗಳನ್ನು ಎತ್ತಿಕೊಂಡು ಬರೆದಿದೆಯಾದರೂ ಅದು ನಮ್ಮ ಪಂಚಾಂಗಗಳ ಸಕಲ ಅಂಶಗಳಿಗೂ ಅನ್ವಯಿಸುತ್ತದೆ. ನಾವೀಗ ಅನುಸರಿಸುವ ಗಣಿತ ಪದ್ಧತಿ (ಮುಖ್ಯವಾಗಿ ಆರ್ಯಭಟೀಯ ಮತ್ತು ಸೂರ್ಯ ಸಿದ್ಧಾಂತ)ಗಳು ಕಾಲಹತ ವಾಗಿವೆಯೆಂಬುದು ವಿದಿತವಾದ ಮಾತು.

ಶಾಸ್ತ್ರದ ಮಾತನ್ನೇ ಅನುಸರಿಸುತ್ತೇವೆಂದರೂ ನಮ್ಮ ಧಾರ್ಮಿಕ ಪಂಚಾಂಗಗಳಲ್ಲಿ ಗ್ರಹಣಗಳನ್ನು ಆಧುನಿಕ ಗಣಿತದಿಂದ ಗುಣಿಸಿ ಹಾಕುವುದು ಯಾವ ಶಾಸ್ತ್ರಪ್ರಕಾರ? ಗ್ರಹಣ ಪುಣ್ಯಕಾಲದ ವಿಧಿಗಳು ಪ್ರತ್ಯಕ್ಷದ ಪ್ರಕಾರ ನಡೆಯಬೇಕಾದರೆ ಆಯನ ಪುಣ್ಯಕಾಲದ ಸ್ನಾನಾದಿಗಳು ಪುರಾತನ ಗಣಿತ ಪ್ರಕಾರ ನಡೆಯುವುದು ಯುಕ್ತಿ ಸಂಗತವೇ?

ಇಂಥ ಅಸಂಗತಿಗಳನ್ನು ನಮ್ಮ ಮಠಾಧಿಪತಿಗಳು ನೇರಗೊಳಿಸಬೇಕೆಂದು ನನಗೆ ತೋರುತ್ತದೆ. ಬೇರೆ ಧರ್ಮಗಳ ಪೀಠಗಳು ಖಗೋಲದಲ್ಲಾದ ಸ್ಥಿತ್ಯಂತರಗಳನ್ನು ಒಪ್ಪಿಕೊಂಡು ತಮ್ಮ ಧಾರ್ಮಿಕ ಪಂಚಾಂಗಗಳಲ್ಲಿ ಅಳವಡಿಸಿಕೊಂಡಿವೆ. ರೋಮನ್ ಕೆಥೋಲಿಕ್ ಕೆಲೆಂಡರಿನಲ್ಲಿ ಅವಶ್ಯ ಬದಲಾವಣೆಗಳನ್ನು ಮಾಡಲಾಯಿತು. ಇಸ್ಲಾಂ ಧರ್ಮವಂತೂ ಎಷ್ಟೇ ಶುದ್ಧವಾಗಿದ್ದರೂ ಬರೇ ಗಣಿತ ಸಿದ್ಧ ಸ್ಥಿತಿಯನ್ನು ಒಪ್ಪಿಕೊಳ್ಳದೆ ಪ್ರತ್ಯಕ್ಷ ಚಂದ್ರದರ್ಶನವನ್ನು ತನ್ನ ಆಚರಣೆಗಳಿಗೆ ಆಧಾರವಾಗಿರಿಸಿಕೊಂಡಿದೆ. ನಮ್ಮಲ್ಲಿ ಕೂಡ ಸೂರ್ಯ, ಆರ್ಯಾದಿ ಸಿದ್ಧಾಂತಗಳು ಆ ಕಾಲದಲ್ಲಿ ಹಿಂದಿನ ಗಣಿತಗಳಿಂದುಂಟಾಗಿದ್ದ ಗೊಂದಲವನ್ನು ಪರಿಹರಿಸಲೆಂದೇ ಸಿದ್ಧವಾದವುಗಳು. ನಮ್ಮ ಧರ್ಮಶಾಸ್ತ್ರಗಳೂ ಕಾಲಧರ್ಮಕ್ಕನುಗುಣವಾಗಿ ಬದಲಾಗುತ್ತ ಬಂದಿವೆ. ಹೀಗಿರುವಾಗ ಬದಲಾವಣೆಗೆ ಅಸಡ್ಡೆಯೇಕೆ?

■

# ಮಠಗಳು: ಅವು ಏನು ಮಾಡಬಲ್ಲವು?

ನಮ್ಮ ದೇಶದಲ್ಲಿ ಮಠಗಳ ಉದಯ ಎಂದು ಆಯಿತೋ ಹೇಳುವುದು ಕಷ್ಟ. ವೈದಿಕ ಕಾಲದಲ್ಲಿ ಬಹುಶಃ ಸಂಸ್ಥಾತ್ಮಕ ಧರ್ಮ ಇದ್ದಿಲ್ಲ. ಉಪನಿಷತ್ ಮತ್ತು ಮಹಾಭಾರತ ಕಾಲದಲ್ಲಿ ತತ್ವಚಿಂತನ ಮತ್ತು ತತ್ವಬೋಧನಕ್ಕಾಗಿ ಅರಣ್ಯಗಳಲ್ಲಿ ಆಶ್ರಮಗಳು ಇದ್ದವಾದರೂ ಅವು ಗ್ರೀಸಿನಲ್ಲಿ ಸಾಕ್ರೆಟೀಸ್, ಪ್ಲೇಟೋ, ಅರಿಸ್ಟಾಟಲರ 'ಜಿಮ್ನಾಶಿಯಂ' ಮಾದರಿಯವಾಗಿದ್ದಿರಬಹುದು. ಧರ್ಮಕ್ಕೆ ಮಠಗಳಂಥ ಕೇಂದ್ರ ಸಂಸ್ಥೆಗಳು ಬೌದ್ಧ ಮತ್ತು ಜೈನರಿಂದ ಪ್ರಾರಂಭವಾದವೆಂದು ತೋರುತ್ತದೆ. ಇದರಲ್ಲಿ ಆಶ್ಚರ್ಯಪಡತಕ್ಕದ್ದೇನೂ ಇಲ್ಲ. ಜನಸಾಮಾನ್ಯರನ್ನು ಗಮನಕ್ಕೆ ತೆಗೆದುಕೊಂಡ ಈ ಧರ್ಮಗಳು 'ಸಂಘ' ಸ್ವರೂಪದ ಧರ್ಮೋಪದೇಶವನ್ನು ಅನಿವಾರ್ಯವಾಗಿಯೇ ಕೈಕೊಳ್ಳಬೇಕಾಗಿತ್ತು. ಆಶ್ರಮಗಳು ಅರಣ್ಯ ಕೇಂದ್ರಿತವಾಗಿದ್ದರೆ ವಿಹಾರ ಮೊದಲಾದ ಈ ಹೊಸ ಧರ್ಮಗಳು ಸಂಘಗಳು ನಗರ ಕೇಂದ್ರಿತವಾಗಿದ್ದವು. ನೂರಾರು ಸಾವಿರಾರು ಸಂನ್ಯಾಸಿಗಳೂ (ಸಂನ್ಯಾಸಿನಿಯರೂ) ಒಟ್ಟಾಗಿ ವಾಸಿಸುತ್ತಿದ್ದದ್ದರಿಂದ ಅವರಲ್ಲಿ ಶಿಸ್ತು ಕಾಪಾಡಿ ಕಾರ್ಯವಿತರಣೆ ಮಾಡಲು ಅಧಿಕಾರ ಸಂಪನ್ನರಾದ ಮುಖ್ಯಸ್ಥರಿರುವುದೂ ಅವಶ್ಯವಾಗಿತ್ತು.

ಬೌದ್ಧ-ಜೈನ ಧರ್ಮಗಳ ಒಂದು ವಿಶೇಷವೆಂದರೆ (ಮುಂದೆ ಕ್ರೈಸ್ತ ಧರ್ಮವೂ ಈ ಪದ್ಧತಿಯನ್ನೇ ರೂಪಿಸಿಕೊಂಡಿತು) ಧರ್ಮವನ್ನು ಅರಸಿಕೊಂಡು ಜಿಜ್ಞಾಸುಗಳು ಬರುವುದರ ಬದಲಾಗಿ ಧರ್ಮವೇ ಜನರ ಬಾಗಿಲಿಗೆ ಬರುವಂತೆ ವ್ಯವಸ್ಥೆಯನ್ನು ಮಾಡಿದ್ದು. ಬೌದ್ಧ ಜೈನರ ಕಾಲದಲ್ಲಿ ಹೀಗೆ ಧರ್ಮಕ್ಕೆ ಸಂಘಟನಾ ರೂಪ ಬಂತು. ವೈದಿಕ ಪಂಥಗಳು ಮತ್ತು ಈ ದೇಶದಲ್ಲಿ ಬೇರೆಯೇ ಪರಂಪರೆಗಳನ್ನನುಸರಿಸಿ ಅನೂಚಾನವಾಗಿದ್ದ ಅವೈದಿಕ ಆದರೆ ಈಶ್ವರೀಯವಾದ ಪಂಥಗಳು ಕೂಡ ಕೆಲವೇ ಕಾಲದಲ್ಲಿ ಧರ್ಮಕ್ಕೆ ಸಂಘಟಿತ ಸ್ವರೂಪ ಕೂಡುವುದರಲ್ಲಿ ಮತ್ತು ಜನಸಾಮಾನ್ಯರನ್ನು ಆಕರ್ಷಿಸಿ ದೀಕ್ಷಾ ಮೂಲಕವಾಗಿ ಜನರನ್ನು ಒಂದು ಧರ್ಮಕೇತನದ ಕೆಳಗೆ ತರುವುದರಲ್ಲಿ ಅನುಕೂಲತೆ ಇರುವುದನ್ನೂ ಅದರಿಂದ ಒದಗುವ ಶಕ್ತಿಯನ್ನೂ ಮನಗಂಡವು. ಹೀಗೆ ಶ್ರೀ ಶಂಕರಾಚಾರ್ಯರೂ ಅನಂತರ ಬಂದ ಅನೇಕ ಆಚಾರ್ಯರೂ ಮಠಪೀಠಗಳನ್ನು ಸಂಘಟಿಸಿದ್ದನ್ನು ಕಾಣುತ್ತೇವೆ. ದಕ್ಷಿಣದಲ್ಲಿ ಪೂರ್ವ ಪರಂಪರೆಯಿಂದ ನಡೆದು ಬಂದಿದ್ದ ಅವೈದಿಕ ಪಂಥಗಳೂ ಅದೇ ಸಮಯದಲ್ಲಿ ಅಥವಾ ಸ್ವಲ್ಪ ಹಿಂದೆ ಮುಂದೆ, ಮಠಗಳ ಮೂಲಕ ಒಂದು ಧಾರ್ಮಿಕ ಪಂಥದ ಜನರ ಚಟುವಟಿಕೆಗಳಿಗೂ ಚಿತ್ತಕ್ಕೂ ಒಂದು ಕೇಂದ್ರವನ್ನು ಒದಗಿಸುತ್ತ ಬಂದದ್ದೂ ಗೋಚರವಾಗುತ್ತದೆ.

ಬೌದ್ಧಾದಿ ನಿರೀಶ್ವರೀಯ ಪಂಥಗಳು ಕೊನೆಗೆ ತಮ್ಮ ವಿರೋಧಿಗಳ ಈ ಸಂಘಟನೆಗೆ ಸೋತ ಹಾಗೆಯೂ ತೋರುತ್ತದೆ.

ಜನರ ಅತ್ಯಂತ ಆತ್ಮೀಯ ಭಾವನೆ ನಂಬಿಕೆಗಳ ಕೇಂದ್ರಗಳಾಗಿ ಬೆಳೆದು ಬಂದ ಮಠಗಳ ಪ್ರಚಂಡಶಕ್ತಿಯನ್ನು ರಾಜರು ಗಮನಿಸಿ, ಅವುಗಳ ಆಶೀರ್ವಾದ ಬಲವಿದ್ದರೆ ತಮ್ಮ ಆಳಿಕೆ ಹೆಚ್ಚು ಭದ್ರವಾಗುವುದೆಂಬುದಕ್ಕಾಗಿಯಾದರೂ ಅವುಗಳಿಗೆ ದತ್ತಿ-ದಾನಗಳನ್ನು ಕೊಟ್ಟರು. ಇತರ ಅನುಕೂಲವಂತ ಜನರಿಗಂತೂ ಇಂಥ ದತ್ತಿ-ದಾನಗಳು ಪುಣ್ಯಕರ, ಪಾಪಹರಗಳಾಗಿದ್ದವು. ಈ ಪ್ರಕಾರ ಮಠಗಳ ಹತ್ತಿರ ಆಸ್ತಿಯೂ ತಕ್ಕ ಪ್ರಮಾಣದಲ್ಲಿ ಕೂಡಿ ಬಿತ್ತು. ಆದರಿಂದ ಅವುಗಳಲ್ಲಿ ಬರೇ ಧಾರ್ಮಿಕ ಸತ್ವವಲ್ಲದೆ ಲೌಕಿಕ ಶಕ್ತಿಯೂ ಸಂಚಿತವಾಯಿತು.

ಮಠಗಳ ಇಂದಿನ ಪಾತ್ರವನ್ನು ನಾವು ನಿರ್ಧರಿಸಬೇಕಾದರೆ ಹಿಂದೆ ಅವು ಆಡಿದ ಪಾತ್ರದ ಸ್ವರೂಪವನ್ನು ವಿಶದಿಸಿಕೊಳ್ಳಬೇಕಾಗುತ್ತದೆ. ರಾಜವಂಶಗಳ, ಪಾಳೆಯ ಪಟ್ಟುಗಳ ಉದಯ ಅಸ್ತಮಾನಗಳಿಂದ ಪದೇ ಪದೇ ಅವ್ಯವಸ್ಥಿತವಾಗುತ್ತಿದ್ದ ರಾಜಕೀಯ ಪ್ರಭುತ್ವದ ಅನಿಶ್ಚಿತತೆಯ ನಡುವೆ ಈ ಪರಂಪರಾಗತ ಮಠಗಳು ಒಂದು ಶಾಶ್ವತ ಶಕ್ತಿ ಕೇಂದ್ರಗಳಾಗಿದ್ದವು. ರಾಜಕೀಯ ನಿಷ್ಠೆಗಳು ಬದಲಾಗುತ್ತಿದ್ದರೂ ಧರ್ಮ ಪಂಥಗಳ ಪ್ರತೀಕಗಳಾಗಿದ್ದ ಮಠಗಳ ಮೇಲೆ,—ಆಯಾ ಗುಂಪಿನದೇ ಆಗಿರಲೊಲ್ಲದೇಕೆ,—ಇದ್ದ ನಿಷ್ಠೆ ಏಕರೂಪವಾಗಿತ್ತು. ಈ ದೃಷ್ಟಿಯಿಂದ ರಾಜರೂ ರಾಜಕೀಯ ಮಹತ್ವಾಕಾಂಕ್ಷೆಯುಳ್ಳವರೂ ಮಠಗಳನ್ನು ಎದುರು ಹಾಕಿಕೊಳ್ಳಲು ಧೈರ್ಯ ಮಾಡುತ್ತಿರಲಿಲ್ಲ. ಅಕಸ್ಮಾತ್ತಾಗಿ ಮಠ ಮಾನ್ಯಗಳ ಮೇಲೆ ದಾಳಿಯಾಗಿ ಅವುಗಳಿಗೆ ನಷ್ಟವೊದಗಿದರೂ ಬಹಳ ಬೇಗನೆ ಅವುಗಳಿಗೆ ಪರಿಹಾರವೊದಗಿಸಿ ಮತ್ತಷ್ಟು ದತ್ತಿ ಕೊಡುವ ಮೂಲಕ ರಾಜರು ಕ್ಷೋಭೆಯನ್ನು ತಡೆಗಟ್ಟಿದ್ದು ಶಾಸನಗಳಿಂದ ಕಂಡು ಬರುತ್ತದೆ. ರಾಜ್ಯಕರ್ತರು ಮಠಗಳಿಗೆ ಅಂಜಿಯೇ ನಡೆಯುತ್ತಿದ್ದಂತೆ ಕಾಣುತ್ತದೆ. ಸ್ವತಃ ರಾಜನ ಧಾರ್ಮಿಕ ನಂಬಿಕೆಗಳೇನೇ ಇರಲಿ, ಸಾಮಾನ್ಯವಾಗಿ ಎಲ್ಲ ಧರ್ಮಗಳ ಮಠಗಳಿಗೂ ಅಷ್ಟಿಷ್ಟು ಸಹಾಯವನ್ನು ಅವನು ಮಾಡುತ್ತಲೇ ಇದ್ದನು. ಕೆಲ ಮಟ್ಟಿಗೆ ರಾಜ್ಯ ಶಕ್ತಿಗಿಂತ ಈ ಧಾರ್ಮಿಕ ಶಕ್ತಿ ಬಲಿಷ್ಠವಾಗಿತ್ತೆಂದೇ ಹೇಳಬಹುದು. ಕ್ರೈಸ್ತ ಜಗತ್ತಿನಲ್ಲಿ ರೋಮಿನ ಪೋಪರು ಸಂಪಾದಿಸಿದ ರಾಜಕೀಯ ಪ್ರಭಾವವನ್ನು ಭಾರತದಲ್ಲಿ ಯಾವ ಮಠಗಳೂ ಸಂಪಾದಿಸಲಿಲ್ಲ ಎಂಬುದು ನಿಜ. ಆದರೂ ಮುಸಲ್ಮಾನರ ರಾಜಕೀಯ ಪ್ರಭುತ್ವಕ್ಕೆದುರಾಗಿ ಹಿಂದೂ ಪ್ರಭುತ್ವವನ್ನು ಕಟ್ಟುವುದಕ್ಕೆ ಮಠಗಳು ಯಶಸ್ವಿ ಪ್ರಯತ್ನ ಮಾಡಿದ ಉದಾಹರಣೆ ಒಂದಾದರೂ ನಮಗೆ ಸಿಗುತ್ತದೆ.

ಈ ಮಠಗಳು ವಹಿಸುತ್ತಿದ್ದ ಸಾಮಾಜಿಕ ಪಾತ್ರವೇನು? ಒಂದು ಹೊಸ ಮತ ಪ್ರಾರಂಭವಾದಾಗ ಅದಕ್ಕೆ ಒಂದೆಡೆ ವಿದ್ವಾಂಸರಲ್ಲಿ ಮತ್ತು ಇನ್ನೊಂದೆಡೆ ಜನಸಾಮಾನ್ಯರಲ್ಲಿ ಅನುಯಾಯಿಗಳನ್ನು ಸಂಪಾದಿಸುವ ಕಾರ್ಯವನ್ನು ಅವು ನಿರ್ವಹಿಸಿರಬೇಕು. ಹಾಗೆಯೆ ಪ್ರತಿವಾದಿಗಳನ್ನು ಎದುರಿಸಿ ತಮ್ಮ ಮತದ ಸಮಂಜಸತ್ವವನ್ನು ನಿರಂತರವಾಗಿ ಎತ್ತಿ

ಹಿಡಿಯುವುದಕ್ಕಾಗಿ ವಿದ್ವಾಂಸರನ್ನು ತರಬೇತಿಗೊಳಿಸುವ ನೆಲೆಗಳಾಗಿಯೂ ಅವು ವರ್ತಿಸಿದವು. ಹಾಗೆಯೇ ತಮ್ಮ ಸಾಮಾನ್ಯ ಅನುಯಾಯಿಗಳಿಗೆ ತಮ್ಮ ಮತದ ಮೂಲ ತತ್ವಗಳ ಬಗ್ಗೆ ಸಾಮಾನ್ಯ ತಿಳುವಳಿಕೆಯನ್ನಾದರೂ ಪ್ರವಚನಾದಿಗಳ ಮೂಲಕ ಒದಗಿಸುವ ವ್ಯವಸ್ಥೆಯನ್ನೂ ಅವು ಮಾಡಿದವು. ಅನುಷ್ಠಾನಗಳ ಮೂಲಕ ಜನರಿಗೆ ಆಧ್ಯಾತ್ಮಿಕ ಮನಸ್ಸಮಾಧಾನವನ್ನು ನೀಡುವ ಕೇಂದ್ರಗಳು ಅವಾದವು. ಮಠದ ಮತ್ತು ಅದರ ಸ್ವಾಮಿಗಳ ಮೇಲೆ ಭಕ್ತಿಯೂ ಭಯವೂ ಕೂಡ್ರುವಂತೆ ಮಾಡಿ ಅನುಯಾಯಿಗಳ ಸಂಘಟನೆಗೆ ಅವು ಆಧ್ಯಾತ್ಮಶಕ್ತಿಯನ್ನು ಪ್ರಭುತ್ವಶಕ್ತಿಯನ್ನೂ ತಮ್ಮಲ್ಲಿ ಏಕತ್ರಿತಗೊಳಿಸಿಕೊಂಡವು. ಮಠಗಳ ಧನ ಸಂಪತ್ತು ಅವುಗಳ ಪ್ರಭುಶಕ್ತಿಗೆ ಬಲವನ್ನು ನೀಡಿತು. ಧರ್ಮ ಮತ್ತು ಅರ್ಥಶಾಸ್ತ್ರಗಳಲ್ಲಿ ಪ್ರಜೆಯ ಹೆಚ್ಚಿನ ಲೌಕಿಕ ಸಾಮಾಜಿಕ ಆಚರಣೆಗಳಲ್ಲಿ ಬಹು ಭಾಗ ರಾಜನ ಅಥವಾ ರಾಜಪ್ರತಿನಿಧಿಯ ನ್ಯಾಯಸ್ಥಾನದ ನಿರ್ಣಯಗಳಿಗೆ ಒಳಪಟ್ಟಿತ್ತು. ಮಠಗಳು ಪ್ರಬಲವಾದ ನಂತರ, ಒಂದು ಸಮಾಜದೊಳಗಿನ ಆಚರಣೆಗಳಲ್ಲಿನ ನಿಯಮ ಭಂಗ ಮತ್ತು ವಿವಾದಗಳ ಮೇಲೆ ನಿರ್ಣಯವೀಯುವ ಅಧಿಕಾರವನ್ನು ಆ ಸಮಾಜದ ಮಠಗಳು ವಶಪಡಿಸಿಕೊಂಡಂತೆಯೂ ಕಾಣುತ್ತದೆ. ಹೀಗೆ ದಾನ ದಂಡ ಶಕ್ತಿಗಳನ್ನು ಸಂಪಾದಿಸಿಕೊಂಡ ಮಠಗಳು ಒಂದು ಮಿತಿಯವರೆಗೆ ರಾಜ್ಯ ಶಕ್ತಿಗೆ ಸಮಾನಾಂತರವಾದ ಪ್ರಭುಶಕ್ತಿಯಾದವು. 'ಸ್ವಾಮಿ' ಶಬ್ದವೇ ಈ ಅಂಶವನ್ನು ಸೂಚಿಸಲು ಸಾಕು. ಅದು ಸಾಲದಿದ್ದರೆ, ಅನೇಕ ಮಠಾಧಿಪತಿಗಳು ತಮ್ಮನ್ನು 'ಮಹಾರಾಜ'ರೆಂದು ಹೆಸರಿಸಿಕೊಳ್ಳುವುದನ್ನೂ ಅವರು 'ಪಟ್ಟವೇರು'ವುದನ್ನು ಅವರ ಆಸನವೂ 'ಸಿಂಹಾಸನ'ವೆನಿಸುವುದನ್ನೂ ಅವರದನ್ನು 'ಆಧ್ಯಾತ್ಮ ಸಾಮ್ರಾಜ್ಯ' ಎಂದು ಕರೆಯುವುದನ್ನು ಸಾರ್ವಜನಿಕ ಸಮಾರಂಭಗಳಲ್ಲಿ ಅವರು ರಾಜಸದೃಶ ವೇಷಭೂಷಿತರಾಗಿ ರಾಜಸದೃಶ ಪರಿವಾರ ಸಮೇತವಾಗಿ ಕಾಣಿಸಿಕೊಳ್ಳುವದನ್ನು ಉಲ್ಲೇಖಿಸಬಹುದು. ಸರ್ವಸಂಗಪರಿತ್ಯಾಗಿ ಗಳಾದ ಯತಿಗಳಿಗೆ ಈ ವೈಭವದ ಸಂಗವಾಗುವುದು ಅವರ ಅಧಿಕಾರದಲ್ಲಿ ಧಾರ್ಮಿಕ ರಾಜಕಗಳೆರಡೂ ಮಿಶ್ರವಾಗಿದ್ದುದನ್ನೇ ತೋರಿಸುತ್ತದೆ. ರಾಜನ ಹಾಗೆಯೇ ಮಠಾಧಿಪತಿಯೂ ತನ್ನ ಅನುಕೂಲವಂತ ಅನುಯಾಯಿಯಿಂದ ಇಷ್ಟು ಕೊಟ್ಟುಬಿಡಬೇಕು ಎಂದು ಆಜ್ಞಾಪೂರ್ವಕ ವಾಗಿ ತೆಗೆದುಕೊಳ್ಳುವಷ್ಟು ಅಧಿಕಾರವನ್ನು ಸಂಪಾದಿಸಿದ ಉದಾಹರಣೆಗಳುಂಟು.

ಇದು ಕಳೆದ ಶತಮಾನದ ಅಂತ್ಯದಲ್ಲಿ ಇದ್ದ ಸ್ಥಿತಿ. ಎಲ್ಲಾ ಅಧಿಕಾರದ ಹಾಗೆ ಮಠಗಳ ಅಧಿಕಾರವೂ ಕಾಲ ಕಳೆದಂತೆ ಸ್ವಾರ್ಥದ ಸೆಳವಿಗೆ ಸಿಕ್ಕು ಬಾಹ್ಯ ನಿಯಂತ್ರಣವಿಲ್ಲದ್ದರಿಂದ ಕೊಳೆತ ನೀರಾಗತೊಡಗಿತ್ತು. ಮಠಗಳು ನಡೆಸಬೇಕಾಗಿದ್ದ ಸಾಮಾಜಿಕ ಕರ್ತವ್ಯಗಳು ಕೇವಲ ಸಾಂಕೇತಿಕವಾಗಿಬಿಟ್ಟಿದ್ದವು. ಹೊರತು ಅರ್ಥವತ್ತಾಗಿ ಉಳಿದಿರಲಿಲ್ಲ. ಅವುಗಳ ಮೇಲೆ ಜನರಿಗಿದ್ದ ನಿಷ್ಠೆ ಒಂದು ಗತಾನುಗತಿಕ ಅಭ್ಯಾಸವಾಗಿತ್ತೇ ಹೊರತು ಆ ನಿಷ್ಠೆಯಲ್ಲಿ ಸತ್ಯ ಉಳಿದಿರಲಿಲ್ಲ. ವಿವಿಧ ಧರ್ಮಗಳೂ ಮತಗಳು ಆ ವೇಳೆಗಾಗಲೇ ಭಾರತೀಯ ಸಮಾಜದಲ್ಲಿ ಒಂದು ಪಾರಸ್ಪರಿಕ ಸಮತೋಲಕ್ಕೇ ಬಂದುಬಿಟ್ಟಿದ್ದುದರಿಂದ ತಂತಮ್ಮ ಅಸ್ತಿತ್ವವನ್ನು ಎತ್ತಿ ಹಿಡಿಯುವುದಕ್ಕಾಗಿ ಅವು ಧಾರ್ಮಿಕ ವಿದ್ಯಾರಂಗದಲ್ಲಿ ಕೂಡ ಹೊಸಹೊಸ

ಪ್ರಯತ್ನಗಳನ್ನು ಕೈಕೊಳ್ಳಬೇಕಾದ ಅಗತ್ಯ ಉಳಿದಿರಲಿಲ್ಲ. ಜಾತಿನಿಷ್ಠವಾದ ಈ ದೇಶದಲ್ಲಿ ಜಾತಿ ಬೇಧ ವಿರೋಧಿಗಳಾಗಿ ತಲೆಯೆತ್ತಿದ ಮತಗಳು ಕೂಡ ಜಾತಿಪದ್ಧತಿಗೆ ಹೊಂದಿಕೊಂಡು ಬಿಟ್ಟಿದ್ದರಿಂದ ಪರಮತದವರನ್ನು ಒಲಿಸಿಕೊಂಡು ತಮ್ಮ ಮತವನ್ನು ವಿಸ್ತರಿಸುವ ಹಂಬಲವೂ ಇಲ್ಲದೆ ಧಾರ್ಮಿಕ ವಿದ್ಯೆಯೂ ಒಂದು ವಿಧವಾದ ಬಾಯಿಪಾಠದ ಮಟ್ಟಕ್ಕಿಳಿದು ಹೋಗಿತ್ತು, ಇಸ್ಲಾಮಿನ ಕೈಕಸುವು ತಗ್ಗಿದ ಮೇಲೆ ಕೂಡ ಅವರ ಅನುಯಾಯಿಗಳನ್ನು ಮತಾಂತರ ಮಾಡಿಕೊಳ್ಳುವ ವಿಚಾರ ಯಾವ ಪಂಥದವರಿಗೂ ಹೊಳೆಯದಿದ್ದುದನ್ನು ನೋಡಿದರೆ ಹಿಂದೂ ಮತ ಎಷ್ಟು ಮಟ್ಟಿಗೆ ಕೊರಡಾಗಿ ಹೋಗಿತ್ತೆಂದು ಗೊತ್ತಾಗುತ್ತದೆ. ಇದರ ಮೇಲೆ ಕ್ರೈಸ್ತಮತ ತನ್ನ ಹೆಚ್ಚು ನವಿರಾದ ಪದ್ಧತಿಯಿಂದ ಹೊಸ ಮತಾಂತರದ ಸೂತ್ರವನ್ನು ಪ್ರಾರಂಭಿಸಿತ್ತು. ಅದನ್ನು ಹಿಂದೂ ಮಠಗಳು ಅಸಡ್ಡೆಯಿಂದಲೇ ಕಂಡವು. ಸಾಮಾನ್ಯ ಅನುಯಾಯಿಗಳು ಕೂಡ ಇದು ಅಪರಿಹಾರ್ಯವಾದ ವಿಪತ್ತೆಂದು ಬಗೆದರೇ ಹೊರತು ಆ ಬಗ್ಗೆ ಏನೂ ಮಾಡಬೇಕೆಂದು ಎಣಿಸಲಿಲ್ಲ. ಬಳಗದಲ್ಲಿ ಉಳಿಯಬೇಕೆಂದವರು ಉಳಿದರು; ಹೋದವರು ಹೋಗಿಬಿಟ್ಟರು. ಹೀಗಿತ್ತು ಪರಿಸ್ಥಿತಿ.

ನಮ್ಮಲ್ಲಿ ಅನೇಕ ಸಂಪ್ರದಾಯವಂತರೂ ಧರ್ಮಾಭಿಮಾನಿಗಳೂ ಪಾಶ್ಚಾತ್ಯವಿದ್ಯೆ ನಮ್ಮನ್ನು ಕೆಡಿಸಿತೆಂದು ಹೇಳುವುದುಂಟು. ಆದರೆ ನಮ್ಮ ಧರ್ಮಗಳ ವಿಷಯದಲ್ಲಿ ನಮಗೆ ಅರ್ಥಪೂರ್ಣವಾದ ಆಸಕ್ತಿಯನ್ನು ಹುಟ್ಟಿಸುವುದಕ್ಕೆ ಪಾಶ್ಚಾತ್ಯ ವಿದ್ಯೆಯೇ ನೆರವಾಯಿತೆಂಬ ಮಾತು ನಮಗೆ ಅಷ್ಟೊಂದು ಅಭಿಮಾನದ ಸಂಗತಿಯಾಗದಿದ್ದರೂ ಸತ್ಯವಾದ ಮಾತು. ಪಾಶ್ಚಾತ್ಯರ ಸರ್ವಭಕ್ಷಕವಾದ ಬೌದ್ಧಿಕ ಹಸಿವು ಹಿಂದೂ ಧರ್ಮದಲ್ಲಿರುವ ಗುಣಗಳನ್ನು ಎತ್ತಿ ತೋರಿಸಿದ್ದನ್ನು ನಾವು ಓದಿಕೊಂಡ ಮೇಲೆಯೆ ನಮ್ಮ ಪುರಾತನರ ಮೌಲ್ಯ ಪದ್ಧತಿ, ವಿಚಾರಧಾರೆಗಳ ಬಗ್ಗೆ ನಮಗೆ ನಿಜವಾದ ಆಸಕ್ತಿ ಮೂಡಿದ್ದು.

ಕೇವಲ ಲೌಕಿಕ ಪ್ರಯೋಜನಾಪೇಕ್ಷೆಯಿಂದ ನಾವು ಪಾಶ್ಚಾತ್ಯವಿದ್ಯೆಯನ್ನು ಅಭ್ಯಸಿಸಿದರೂ ಅದು ನಮ್ಮ ಮನೋವೃತ್ತಿಯ ಮೇಲೆ ಗಾಢವಾದ ಪ್ರಭಾವ ಬೀರದಿರಲಿಲ್ಲ. ತರ್ಕದ ಒರೆಗಲ್ಲಿಗೆ ಹಚ್ಚಿ ಪ್ರತಿಯೊಂದನ್ನೂ ಪರೀಕ್ಷಿಸುವ ಮತ್ತು ಯಾವುದನ್ನೂ ಕೇವಲ 'ಬಾಬಾ ವಾಕ್ಯ ಪ್ರಮಾಣ'ದ ಮೇಲೆ ಅಂಗೀಕರಿಸದಿರುವ ಪ್ರವೃತ್ತಿಯನ್ನು ಅದು ನಮಗೆ ದಯಪಾಲಿಸಿತು. ಹಿಂದೂ ಧರ್ಮದ ನಾನಾ ಮತ ಸಂಪ್ರದಾಯಗಳಲ್ಲಿ ಪ್ರತಿಯೊಂದರಲ್ಲಿಯೂ ಗುಣಗಳಿದ್ದರೂ ಆ ಗುಣಗಳಿಗೆ ಆಯಾ ಮತದ ಸಂಸ್ಥೆಗಳು ಉತ್ತಮ ಉದಾಹರಣೆಗಳಾಗಿಲ್ಲ ಎಂಬುದನ್ನು ಸುಶಿಕ್ಷಿತರು ಗಮನಿಸಿದರು. ಮಠಗಳೂ ಪುರೋಹಿತ ವರ್ಗದವರೂ ಸಮಾಜಕ್ಕೆ ಯಾವ ಪ್ರತಿಫಲವನ್ನೂ ಕೊಡದೆ ಸಮಾಜದಿಂದ ಸಾಧ್ಯವಿದ್ದಷ್ಟು ಸೆಳೆದುಕೊಳ್ಳುವ ಪರೋಪಜೀವಿ ಗಳೆಂಬ ಭಾವನೆ ಬೆಳೆದುಬಿಟ್ಟಿತು. ಹೀಗಾಗಿ ಮಠಗಳ ಮೇಲೆ ಅಸಡ್ಡೆ ಮತ್ತು ಒಂದು ತರಹದ ನಿಷ್ಕ್ರಿಯವಾದ ಬಂಡಾಯ ಪ್ರಾರಂಭವಾಗಿಬಿಟ್ಟಿತು. ನಿಯಮಾನುಷ್ಠಾನಗಳನ್ನು ಬಹಿರಂಗವಾಗಿ ಧಿಕ್ಕರಿಸಿದವರ ಮೇಲೆ ಕೂಡ ಕ್ರಮಕೈಕೊಳ್ಳುವ ಚೈತನ್ಯ ಮಠಗಳಲ್ಲಿ ಉಳಿಯಲಿಲ್ಲ.

ಈ ಶತಮಾನದ ಪೂರ್ವಾರ್ಧದಲ್ಲಿದ್ದ ಮಟ್ಟಿಗಲ್ಲದಿದ್ದರೂ ಬಹುಮಟ್ಟಿಗೆ ಇಂದಿಗೂ ಮಠಗಳ ಬಗ್ಗೆ ವಿದ್ಯಾವಂತರ ದೃಷ್ಟಿ ಇದೇ ಆಗಿದೆ. ಇದನ್ನು ನೋಡಿಯೇ ಸರಕಾರ ಹಿಂದೂಧರ್ಮದ ವೈಯಕ್ತಿಕ ರೀತಿನೀತಿಗಳಲ್ಲಿ ನಿರ್ಭಯವಾಗಿ ಕೈಹಾಕತೊಡಗಿತು.

ಮಠಗಳ ಇಳಿದುಹೋದ ಪ್ರತಿಷ್ಠೆಯ ಕಾರಣಗಳನ್ನು ಬೆದಕಿದರೆ ಅವು ಅನೇಕ ಕಾಲದಿಂದ ದೇಶದಲ್ಲಿ ಬದಲಾಗುತ್ತಿರುವ ಪರಿಸ್ಥಿತಿಯನ್ನು ಗಮನಿಸದಿರುವದೇ ಕಾರಣವೆಂದು ಹೇಳಬಹುದು. ಮಠಗಳಿಗೆ ಸಾಮಾಜಿಕ ಕರ್ತವ್ಯಗಳಿವೆ ಎಂಬ ಪ್ರಜ್ಞೆಯನ್ನು ಅವು ಕಳೆದುಕೊಂಡದ್ದರಿಂದಲೇ ಅವುಗಳ ಬಗ್ಗೆ ಅಸಡ್ಡೆ ಮೂಡಿತು. ಬಹುತರ ಮಠಗಳು ಬದಲಾದ ಪರಿಸ್ಥಿತಿಯಲ್ಲಿ ತಮ್ಮ ಸಾಮಾಜಿಕ ಪಾತ್ರವನ್ನು ಕುರಿತು ಚಿಂತಿಸದಿರುವುದು ಅವುಗಳ ಒಂದು ಕೊರತೆಯಾಗಿತ್ತು. ಪೂಜಾನುಷ್ಠಾನ ಉತ್ಸವಾದಿಗಳನ್ನು ಏರ್ಪಡಿಸುವುದರಿಂದ ಮಾತ್ರವೇ ತಮ್ಮ ಕರ್ತವ್ಯಪಾಲನೆಯಾಯಿತೆಂದು ಅವು ಎಣಿಸಿಕೊಂಡಿದ್ದವು. ಇಂದಿಗೂ ಈ ವಿಚಾರಧಾರೆ ಸಾಕಷ್ಟು ಮಠಾಧೀಶರಲ್ಲಿ ಉಳಿದುಕೊಂಡಿದೆ.

ಮಠಗಳ ಸಾಮಾಜಿಕ ಹೊಣೆಗಾರಿಕೆಗಳೇನು? ಎಂದು ಕೇಳಿದರೆ, ಜನರ ಸುಖ ದುಃಖಗಳಿಗೆ ಗಮನಕೊಡುವುದು ಎಂದು ಒಂದು ಮಾತಿನಲ್ಲಿ ಹೇಳಬಹುದು. ಆಧ್ಯಾತ್ಮಿಕವಾಗಿ ತೀರಾ ಮುಂದುವರಿದವರಿಗೆ ಹೇಳುವಂತೆ ಈ ಸಂಸಾರವೇ ದುಃಖದ ಮೂಲ ಎಂದು ಉಪದೇಶಿಸಿದರೆ ಸಾಲದು. ಈ ಉಪದೇಶವನ್ನು ಅರಗಿಸಿಕೊಳ್ಳಬಲ್ಲವರ ಸಂಖ್ಯೆ ಕಡಿಮೆ. ಇಹದ ದಿನ ದಿನದ ತಾಪತ್ರಯಗಳ ನಿವೃತ್ತಿಗೆ ವ್ಯವಸ್ಥೆ ಆಗಬೇಕು. ದೇವರನ್ನು ಆರಾಧಿಸಿರಿ, ಅಥವಾ ಇಂಥ ಯೋಗಿಯನ್ನು ನಂಬಿರಿ. ನಿಮ್ಮ ದುಃಖ ನಿವೃತ್ತಿಯಾಗುತ್ತದೆ. ಸಂಪತ್ತು ಬರುತ್ತದೆ ಇತ್ಯಾದಿ ಉಪದೇಶಗಳು ಟೊಳ್ಳಾಗಿ ಭಾಸವಾಗುತ್ತವೆ.

ನಮ್ಮ ಮಠಗಳು ಕ್ರೈಸ್ತ ಮಠಗಳಿಂದ ಕಲಿಯಬೇಕಾದ್ದು ಬಹಳ ಇದೆ. ಕ್ರೈಸ್ತ ಮತದಲ್ಲಿಯೂ ಕರ್ತವ್ಯ ಹೀನವಾದ ಅಧಿಕಾರದಿಂದ ಮಠಗಳು ತೀರ ಮಲಿನವಾದ ಕಾಲವೊಂದಿತ್ತು, ಆದರೆ ಪ್ರೊಟೆಸ್ಟೆಂಟ್ ಬಂಡಾಯದ ನಂತರ ಅವು ಎಚ್ಚತ್ತು ತುಂಬಾ ಕರ್ತವ್ಯ ಪರವಾಗಿವೆ.

ಮೊದಲನೆಯದು ವಿದ್ಯೆ. ವಿದ್ಯೆ ಪುರಾತನದಿಂದಲೂ ನಮ್ಮ ಮಠಗಳ ಒಂದು ಕಾರ್ಯರಂಗವಾಗಿತ್ತು. ಆದರೆ ಅದು ಕೇವಲ ಮತಸಂಬಂಧವಾದದ್ದಾಗಿತ್ತು. ಜೀವನೋಪಾಯಕ್ಕೆ ಸಾಧಕವಾದ ವಿದ್ಯೆಗಳು ಆಗ ವಂಶಪಾರಂಪರ್ಯವಾಗಿದ್ದುದರಿಂದ ಮಠಗಳಿಗೆ ಆ ಯೋಚನೆ ಇಲ್ಲದಿದ್ದುದು ಸಹಜವಾಗಿತ್ತು. ಆದರೆ ಈ ಶತಮಾನದಲ್ಲಿ ಯಾವ ಅಲ್ಪ ಜೀವನೋಪಾಯಕ್ಕೂ ಸಂಘಟಿತ ಸ್ವರೂಪದ ವಿದ್ಯೆ ಅಗತ್ಯವಾಗಿದೆ. ಅದಕ್ಕಾಗಿ ಲೌಕಿಕ ವಿದ್ಯಾಲಯಗಳ ಮಹತ್ವ ಹೆಚ್ಚಾಗಿದೆ. ಸುದೈವದಿಂದ ಈಗ ಎರಡು ಮೂರು ದಶಕಗಳಿಂದ ಮಠಗಳು, ಈ ಕಡೆಗೆ ಹೆಚ್ಚು ಗಮನ ಹರಿಸುತ್ತಿವೆ. ಮಠಗಳ ನೆರವಿನಿಂದ ದೇಶದಲ್ಲೆಲ್ಲಾ ವಿದ್ಯಾಲಯಗಳು ನಡೆಯತೊಡಗಿವೆ. ಇದೊಂದರಿಂದಲೇ ಮಠ ಸಂಸ್ಥೆಗಳನ್ನು ತಿರಸ್ಕಾರದಿಂದ ಕಾಣುತ್ತಿದ್ದ ನನ್ನಂಥವರು ತಂತಾವೇ ಮಠಗಳ ಕಡೆ ಆಕರ್ಷಿತರಾಗತೊಡಗಿದ್ದಾರೆ.

ಆದರೂ ಮಠಾಧಿಪತಿಗಳು ಇನ್ನೂ ಸ್ವಲ್ಪ ಮುಂದೆ ಹೋಗಬಾರದೇ ಎನಿಸುತ್ತಿದೆ. ಕೇವಲ ಮತ ಸಂಬಂಧದ ಅಭ್ಯಾಸವಲ್ಲದೆ ಲೌಕಿಕ ವಿದ್ಯೆಗಳನ್ನು ಸ್ವತಃ ಅಧ್ಯಯನ ಮಾಡಿ ಪಾಂಡಿತ್ಯ ಸಂಪಾದಿಸಿ ವಿಶ್ವವಿದ್ಯಾಲಯಗಳಲ್ಲಿ ಅವರು ಅಧ್ಯಾಪಕರಾಗಲಾರರೇ—ತಾವೇ ನಡೆಸುವ ವಿದ್ಯಾಲಯಗಳಲ್ಲೇ ಎನ್ನಿ. ಇದು ತರುಣ ವಯಸ್ಸಿನ ಜನರು ಹೆಚ್ಚು ನೇರವಾಗಿ ಅವರ ಕಣ್ಮುಂದೆ ಬರುವರು. ಅವರ ಚಿತ್ತಗಳನ್ನು ರೂಪಿಸುವ ಅವಕಾಶ ಇವರಿಗೆ ಪ್ರಾಪ್ತವಾದಂತೆ ಅವರ ಸುಖದುಃಖಗಳ ನೇರ ಪರಿಚಯ ಇವರಿಗಾಗಿ ಬದಲಾದ ಪರಿಸ್ಥಿತಿಗೆ ಕೈಕೊಳ್ಳಬೇಕಾದ ಕಾರ್ಯಗಳ ಪ್ರಜ್ಞೆ ಇವರಿಗೆ ದೊರಕಲಾರದೆ?

ಎರಡನೆಯದು ವೈದ್ಯಕ. ಮಾನವನ ದುಃಖ ಪರಿಹಾರ ಕ್ರೈಸ್ತಧರ್ಮದ್ದೆಷ್ಟೋ ಅಷ್ಟೇ ಹಿಂದೂ ಧರ್ಮದ ಆದರ್ಶವೂ ಆಗಿದೆ. ಯಾಕೋ ಏನೋ ಅದಕ್ಕೆ ಸಾಕಷ್ಟು ಪ್ರಾಧಾನ್ಯ ಸಿಗಲಿಲ್ಲ. ಮಠಗಳು ಔಷಧಾಲಯ, ಆಸ್ಪತ್ರೆ, ವೈದ್ಯಕೀಯ ಸಂಶೋಧನ ಸಂಸ್ಥೆಗಳಲ್ಲಿ ತೀವ್ರವಾದ ಆಸಕ್ತಿಯನ್ನು ವಹಿಸಬೇಕೆಂದು ನನಗೆ ತೋರುತ್ತದೆ. ಇದು ಮಠಗಳ ಮುಖ್ಯ ಧ್ಯೇಯವಾದ ದೈವಭಕ್ತಿಯ ಪ್ರಸಾರಕ್ಕೂ ಒಳ್ಳೆಯ ಮಾರ್ಗ ಎನಿಸುತ್ತದೆ. ರುಗ್ಣನ ಚಿತ್ತ ದೈವಾಭಿಮುಖವಾಗಿರುವಷ್ಟು ಸ್ವಸ್ಥನ ಚಿತ್ತ ಇರುವುದಿಲ್ಲ. ಈ ವಿಷಯದಲ್ಲಿಯೂ ಮಠಾಧಿಪತಿಗಳು ಸಹಾಯ ಮಾತ್ರ ಮಾಡದೆ ನೇರವಾಗಿಯೂ ಭಾಗವಹಿಸಿದರೆ ತುಂಬಾ ಪ್ರಯೋಜನವಾದೀತು. ಕ್ರೈಸ್ತರಲ್ಲಿ ರೋಗಿಯ ಮನೆಗೆ ಹೋಗಿ ಗುರುಗಳು ಧರ್ಮೋಪದೇಶ ಮಾಡುವ ಒಳ್ಳೇ ಪದ್ಧತಿ ಇದೆ.

ನನ್ನನ್ನು ಎಲ್ಲಕ್ಕೂ ಮಿಗಿಲಾಗಿ ದುಃಖಕ್ಕೆ ಗುರಿ ಮಾಡಿರುವುದೆಂದರೆ ಬದಲಾಗಿರುವ ಸಾಮಾಜಿಕ ಆರ್ಥಿಕ ಪರಿಸರದಲ್ಲಿ ಸಮಾಜದ ರೂಢಿ ಸಂಪ್ರದಾಯಗಳಲ್ಲಿ ಆಗಬೇಕಾದ ಅನಿವಾರ್ಯ ಬದಲಾವಣೆಗಳ ವಿಷಯದಲ್ಲಿ ಮತಗಳ ಅನಾಸಕ್ತಿ. ಕಳೆದ ಶತಮಾನದಲ್ಲಿ ಸತೀ ಪದ್ಧತಿಯ ರದ್ದತಿಯಿಂದಾರಂಭಿಸಿ ಈ ಶತಮಾನದ ಮಧ್ಯದಲ್ಲಿ ಬಹುಪತ್ನೀತ್ವ ನಿಷೇಧದ ವರೆಗೆ ಆದ ಧಾರ್ಮಿಕ ಸ್ವರೂಪದ ಸಾಮಾಜಿಕ ಸುಧಾರಣಾ ಕಾಯಿದೆಗಳೆಲ್ಲ ಕೈಬೆರಳಲ್ಲೆಣಿಸುವಷ್ಟು ಸುಧಾರಣಾವಾದಿಗಳ ಪ್ರೋತ್ಸಾಹದಿಂದ, ವಿದೇಶಿ ಮತ್ತು ದೇಶಿ ಸರಕಾರಗಳಿಂದ ಜಾರಿಯಲ್ಲಿ ತರಲ್ಪಟ್ಟವಾಗಿವೆ. ಈ ಕಾನೂನುಗಳನ್ನೆಲ್ಲ ಮಠಾಧಿಪತಿಗಳನ್ನು ಕೇಳದೆ ಹೆಚ್ಚಿನ ವೇಳೆ ಅವರ ವಿರೋಧವನ್ನು ಲೆಕ್ಕಿಸದೇ ಮಾಡಿದ್ದಾಗಿದೆ. ಮತ ಸಂಬಂಧದಲ್ಲಿ ಅಧಿಕಾರ ಹೊಂದಿದವರನ್ನು ಮೂಲೆಗೊತ್ತಿ ರಾಜಕೀಯ ಮುಂಗೈ ಕಸುವಿನಿಂದ ಈ ಕಾನೂನುಗಳನ್ನು ಈ ಪ್ರಜಾಸತ್ತಾತ್ಮಕ ಯುಗದಲ್ಲಿಯೂ ಮಾಡಲು ಸಾಧ್ಯವಾಗುತ್ತಿದೆ ಎಂದರೆ ಮಠಗಳ ಅಸ್ತಿತ್ವ ನಿರರ್ಥಕವಾಗಿದೆಯೆಂದೇ ಅಲ್ಲವೆ?

ಈ ಕಾನೂನುಗಳಲ್ಲಿ ಹೆಚ್ಚಿನವು ಸಮಾಜಕ್ಕೆ ಹಿತಕರವಾಗಿವೆಯೆಂಬುದನ್ನು ಒಪ್ಪಿ ಬಿಡಬಹುದು. ಆದರೆ ನಮ್ಮ ಧರ್ಮಾಧಿಕಾರಿಗಳು ಅವುಗಳಿಗೆ ಅನುಕೂಲ ಮತದವರಾಗಿರಲಿಲ್ಲ ಎಂಬುದೂ ಅಷ್ಟೇ ನಿಜ. ಇಂಥ ಸುಧಾರಣೆಗಳು ಮಠ ಪ್ರೇರಣೆಯಿಂದ ಅಲ್ಲದಿದ್ದರೂ ಬೆಂಬಲದಿಂದ ಬಂದಿದ್ದರೆ ಎಷ್ಟು ಒಳಿತಾಗುತ್ತಿತ್ತು! ಕೆಥೋಲಿಕ ಕ್ರೈಸ್ತ ಪೀಠಾಧಿಪತಿಗಳಲ್ಲಿ

ಸಂತತಿ ನಿಯಂತ್ರಣದಂಥ ವಿಷಯದಲ್ಲಿ ಆಗುತ್ತಿರುವ ಚರ್ಚೆಯನ್ನು ನೋಡಿದರೆ ಅದಕ್ಕಿಂತ ಎಷ್ಟೋ ಮಹತ್ವದ ವಿಷಯಗಳ ಬಗ್ಗೆ ನಮ್ಮ ಮಠಾಧಿಪತಿಗಳಲ್ಲಿ ಏನೂ ಚರ್ಚೆಯಾಗ ದಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಹಿಂದುಗಳಲ್ಲದ ಇತರ ಧರ್ಮೀಯರ ರೂಢಿ ಸಂಪ್ರದಾಯಗಳಲ್ಲಿ ಕೈಹಾಕಲು ಅತ್ಯಗತ್ಯವಾಗಿದ್ದರೂ ಕೂಡ—ಸರಕಾರಗಳು ಹಿಂಜರಿಯುವುದನ್ನು ನೋಡಿದರೆ ನಮ್ಮ ಧರ್ಮಸ್ಥಾನಗಳನ್ನು ಧಿಕ್ಕರಿಸಿದರೆ ಅಪಾಯವಿಲ್ಲ ಎಂಬ ಗ್ರಹಿಕೆ ಅವರಿಗಿದ್ದಂತೆ ಕಾಣುತ್ತದೆ. ಈ ಗ್ರಹಿಕೆಯನ್ನು ಪ್ರತಿಭಟಿಸುವುದು ಮಠಗಳ ಕರ್ತವ್ಯ. ಒಳ್ಳೆಯದನ್ನು ಸರಕಾರ ಮಾಡಿದರೇನು ನಾವು ಮಾಡಿದರೇನು ಎನ್ನುವುದು ಅಕರ್ಮಣ್ಯತೆಯಾಗುತ್ತದೆ. ಸರಕಾರಗಳು, ರಾಜಕಾರಣದ ಕ್ಷಣಿಕ ಅವಶ್ಯಕತೆಗಳಿಂದ ಪ್ರಚೋದಿಸಲ್ಪಟ್ಟಿರುತ್ತವೆ. ಪೀಠಾಧಿಪತಿಗಳು ಸಮ್ಮತಿ ಇಲ್ಲದೆ, ಒಂದು ಸಮಾಜವು ಧಾರ್ಮಿಕವೆಂದು ತಿಳಿಯುವ ವಿಷಯಗಳಲ್ಲಿ ಕಾನೂನು ಮಾಡಲು ಸರಕಾರಗಳಿಗೆ ಸಾಧ್ಯಮಾಡಿಕೊಟ್ಟರೆ ನಾಳೆ ರಾಜಕೀಯ ಅವಶ್ಯಕತೆಗಳಿಗಾಗಿ ಅಹಿತಕರ ಕಾನೂನುಗಳನ್ನು ಮಾಡುವ ಸಾಧ್ಯತೆಗೆ ಅವಕಾಶ ಕೊಟ್ಟಂತಾಗುತ್ತದೆ. ಆದರೆ ಸಮಾಜ ಸುಧಾರಣೆಯ ವಿಷಯದಲ್ಲಿ ಮಠಗಳ ಮಾತುಗಳಿಗೆ ಬೆಲೆ ಬರಬೇಕಾದಲ್ಲಿ ತಮ್ಮ ಮನೆಗಳನ್ನು ತಾವೇ ರಿಪೇರಿ ಮಾಡಿಕೊಳ್ಳುವುದಕ್ಕೆ ಅವರು ಸಿದ್ಧರಾಗಬೇಕಾಗುತ್ತದೆ ಎಂದೂ ನಾವು ನೆನಪಿಡಬೇಕು.

ಧರ್ಮದ ಮೇಲೆ ಜನರ ವಿಶ್ವಾಸ ಹೆಚ್ಚುತ್ತಿದೆ. 'ಪ್ರಗತಿ' ಎಂದು ಕರೆಯಲ್ಪಡುವ ಅನೇಕ ವಿಷಯಗಳ ಪೊಳ್ಳುತನದ ಅರಿವೂ ಆಗುತ್ತಿದೆ. ಮಠಾಧಿಪತಿಗಳಿಗೂ ಜನಸಾಮಾನ್ಯರಿಗೂ ದ್ವಿಮುಖ ಸಂಪರ್ಕ ಏರ್ಪಡಿಸುವುದೇ ಆದರೆ ಇಂದಿನ ಸಂದರ್ಭದಲ್ಲಿ ಅವುಗಳ ಬಲ ಖಂಡಿತವಾಗಿ ಹೆಚ್ಚುವುದು. ಅವುಗಳ ಮಾತು ನಡೆಯುವದು. ಅವುಗಳನ್ನು ಅಸಡ್ಡೆ ಮಾಡುವುದು ಸಾಧ್ಯವಾಗದು. ಇದಕ್ಕೆ ಮಠಗಳು ಬದಲಾದ ಸ್ಥಿತಿಗಳಿಗೆ ಸಂವಾದಿ ಗಳಾಗಬೇಕಾಗುತ್ತವೆ. ಅವುಗಳಲ್ಲಿ ಕ್ಷಾತ್ರ ಸ್ವಲ್ಪ ಹೆಚ್ಚಾಗಬೇಕಾಗುತ್ತದೆ.

ಆದರೆ ಮಠಗಳು ಇರಬೇಕೆ? ಅವು ಯಾವಾಗಲೂ ಪ್ರಗತಿ ವಿರೋಧಿಗಳಾಗಿಲ್ಲವೇ? ನಾವು ಆರಿಸಿದ ಸರಕಾರಗಳ ಮುಖದಿಂದಲೇ ನಮ್ಮ ಉದ್ಧಾರವಾಗದೆ? ಮಠಗಳೆಂಬ ಸಮಾಂತರ ಸರಕಾರಗಳು ಅನವಶ್ಯಕವಲ್ಲವೇ? ಇದಕ್ಕೆ ಉತ್ತರ ಮಠಗಳು ನಡೆದುಕೊಳ್ಳುವ ರೀತಿಯನ್ನೇ ಅವಲಂಬಿಸಿದೆ. ಪ್ರಜಾತಾಂತ್ರಿಕ ಸರಕಾರಗಳು ತೀರ ತಾತ್ಕಾಲಿಕ ಉದ್ದೇಶಗಳಿಗೆ ದಾಸರಾಗುವ ಭಯವಿದೆ. ಮಠಗಳು ಹೆಚ್ಚು ಶಾಶ್ವತ ಮೌಲ್ಯಗಳನ್ನು ಪ್ರತಿನಿಧಿಸುವವು! ಪ್ರತಿನಿಧಿಸಿದರೆ ಸಮಾಜದ ವಾಹನವನ್ನು ಅಕ್ಷುಣ್ಣವಾಗಿರಿಸುವ ಶಕ್ತಿಯಾಗಬಲ್ಲವು.

■

# ಭಾಗ - 3

# ಚಿಂತನಪರ

# ಜೀವನಕ್ಕೆ ಅರ್ಥವುಂಟೆ?

**ಜೀವನಕ್ಕೆ** ಅರ್ಥವುಂಟೆ — ಈ ಪ್ರಶ್ನೆಗೆ ಮೊದಲು ಜೀವನ ಮತ್ತು ಅರ್ಥ ಇವೆರಡಕ್ಕೂ ನಾವು Definition ಕೊಡಬೇಕಾಗುತ್ತದೆ. ಮನುಷ್ಯನ ಜೀವನವನ್ನು ಕುರಿತೇ ಹೇಳುವುದಾದರೆ ಸೃಷ್ಟಿಯ ಒಂದು ಅಂಗವಾದ ಮನುಷ್ಯನ ಜೀವನವನ್ನು ಸೃಷ್ಟಿಯಿಂದ ಪ್ರತ್ಯೇಕಿಸಲು ಬರುವುದಿಲ್ಲವಾದ್ದರಿಂದ ಮನುಷ್ಯನ ಜೀವನಕ್ಕೆ ಸೃಷ್ಟಿಗಿಂತ ಭಿನ್ನವಾದ ಅಸ್ತಿತ್ವವನ್ನು ಹೇಳಲು ಬರುವುದಿಲ್ಲ. ಹಾಗೆ ಅರ್ಥ ಶಬ್ದಕ್ಕೆ ಪ್ರಯೋಜನವೆಂಬ ಅರ್ಥ ಹೇಳುವುದಾದರೆ ಮನುಷ್ಯನ ಜೀವನಕ್ಕೆ ಸೃಷ್ಟಿಗಿಂತ ಪ್ರತ್ಯೇಕವಾದ ಅರ್ಥ ಇಲ್ಲ ಎನ್ನದೆ ನನಗೆ ಬೇರೆ ದಾರಿ ಕಾಣುವುದಿಲ್ಲ. ಜೀವನಕ್ಕೆ ಮನುಷ್ಯ ತಾನು ರೂಪಿಸಿಕೊಳ್ಳಬಹುದಾದ ಅರ್ಥ ಹೊರತು ಇನ್ನೊಂದು ಅರ್ಥ ಇಲ್ಲ ಎಂಬ ಅಸ್ತಿತ್ವವಾದಿಗಳ ವಾದ ಮನುಷ್ಯನನ್ನು ಭೂತದಿಂದ ಪ್ರತ್ಯೇಕಿಸುವುದಾದರೆ ಮಾತ್ರ ಆಕರ್ಷಕವೆನಿಸುತ್ತದೆ. ಆದರೆ ಮನುಷ್ಯನನ್ನು ಭೂತದಿಂದ ಪ್ರತ್ಯೇಕಿಸಲಾಗುವುದಿಲ್ಲ: ವ್ಯಕ್ತಿಯ ಭೂತಾದ್ ಭೂತಕ್ಕೆ ಹೋಗುವಾಗ ನಮ್ಮ ಹುಟ್ಟು ನಮ್ಮ ಹೊರಗಿನ ಶಕ್ತಿಯ (ದೇವರೇ ಎಂದಲ್ಲ) ಕೈವಾಡವಾದ್ದರಿಂದ ನಮ್ಮ ಅರ್ಥಾನ್ವೇಷಣೆಯ ಆದ್ಯಂತ ಮಿತಿಗಳು ಮಾತ್ರವಲ್ಲ ಅರ್ಥಾನ್ವೇಷಣ ಸಾಮಗ್ರಿಯ ಆಳ ಎತ್ತರಗಳ ಮಿತಿಯೂ ಗೋಚರಕ್ಕೆ ಬರುತ್ತದೆ. ಮನುಷ್ಯನಾಗಲಿ ಅವನ ಜೀವನವಾಗಲಿ ಸೃಷ್ಟಿಗಿಂತ ಹೊರಗಿನ ಅರ್ಥವನ್ನು ಹೊಂದಿಲ್ಲವೆಂದೇ ಅನಿಸುತ್ತದೆ.

'ಸೃಷ್ಟಿ'ಗೆ ಅರ್ಥವಿಲ್ಲ ಎನಿಸಿದರೂ Continuity ಯೇ ಅದರ ಅರ್ಥವೆಂದು ನನಗೆ ತೋರುತ್ತದೆ. ಮನುಷ್ಯನನ್ನೊಳಗೊಂಡು ಸಕಲ ಪದಾರ್ಥಗಳು ಸ್ವಭಾವವೆಂಬ ನಿಯಂತ್ರಣ ಶಕ್ತಿಗೆ ಒಳಪಟ್ಟು Continuityಯನ್ನು ಸಾಧಿಸುತ್ತಿವೆ. 'ವ್ಯಕ್ತಿ'ಗಳು ಕ್ಷಣಿಕ; ಜೀವನ, ಸೃಷ್ಟಿ ನಿರಂತರ. ಯಾವುದು ಇದಕ್ಕೆ ಅನುಕೂಲವಾಗಿ ಸಾಗುತ್ತದೋ ಅದು ಸ್ವಾಭಾವಿಕ; ಯಾವುದು ಪ್ರತಿಕೂಲವೋ ಅದು ಅಸ್ವಾಭಾವಿಕ. ನಮ್ಮ ಅನುಭವದಲ್ಲಿ ಬದುಕು ಸ್ವಾಭಾವಿಕ- ಏಕೆಂದರೆ ಬದುಕುವ ಇಚ್ಛೆ ಸಾರ್ವತ್ರಿಕ. ಅದೇ ಅರ್ಥ. ಪ್ರಾಣಿ ಮಾತ್ರವಲ್ಲ ಪದಾರ್ಥ ಮಾತ್ರವಾದದ್ದು ಸಾವನ್ನು ಮೆಚ್ಚುವುದಿಲ್ಲವಾದದ್ದರಿಂದ ಅದು ಅರ್ಥ ವ್ಯತಿರಿಕ್ತ. ಇದರರ್ಥ ವ್ಯಕ್ತಿಗಳಿಗೆ ಸಾವಿಲ್ಲ ಎಂದಲ್ಲ. ಆದರೆ ವ್ಯಕ್ತಿಗಳು ಜೀವಜಾತದಲ್ಲೆಲ್ಲ ಕ್ಷಣಿಕವಾದವುಗಳೇ. ಆದರೂ ಅವುಗಳ ಎಲ್ಲಕ್ಕಿಂತ ಪ್ರಬಲವಾದ ಇಚ್ಛೆಗಳು ಅಸ್ತಿತ್ವವನ್ನು ಮುಂದುವರಿಸುವಂಥವುಗಳಾದ್ದರಿಂದ ಬದುಕಿನ ಅರ್ಥ Continuity ಹೊರತು ವೈಯಕ್ತಿಕ ಅಮರತ್ವವಲ್ಲ. ನಮ್ಮ ಶರೀರದೊಳಗಿನ ಕೋಟ್ಯಂತರ ಕೋಶಗಳು ಕ್ಷಣಿಕ 'ಸಾಯು'ತ್ತವೆ; ರಕ್ತ ಕಣಗಳು ಶರೀರದ ಅಖಂಡ Survival ಸಲುವಾಗಿ ಕ್ಷಣಶಃ ತಮ್ಮನ್ನು ಬಲಿಗೊಟ್ಟುಕೊಳ್ಳುತ್ತವೆ. ಹುತ್ತದೊಳಗಿರುವ ಗೆದ್ದಲುಗಳ ವೈಯಕ್ತಿಕ ಅಸ್ತಿತ್ವಕ್ಕೆ totalityಯ ಹೊರತು ಅರ್ಥವಿಲ್ಲ. ■

# ಬುದ್ಧಿಜೀವಿ, ಸಮಾಜ ಮತ್ತು ಸಾಹಿತ್ಯ
## (ಆಲೋಚನೆ)

ಬುದ್ಧಿಜೀವಿ ಎಂಬ ಶಬ್ದವು ಇಂಗ್ಲೀಷಿನ Intellectual ಎಂಬುದಕ್ಕೆ ಸರಿಯಾದ ಪರ್ಯಾಯಪದ ಅಂತ ನನಗೆ ಅನಿಸುವುದಿಲ್ಲ. ನಿಜವಾಗಿ ಈ ಬುದ್ಧಿಜೀವಿ ಶಬ್ದದಲ್ಲಿಯೇ ನಮ್ಮ Intellectual ಜನರ ಸಮಸ್ಯೆ ಪ್ರತಿಬಿಂಬಿತವಾಗಿದೆಯೇ ಅಂತ ನನಗೆ ಸಂದೇಹ ಬರುತ್ತಿದೆ. ಬುದ್ಧಿಜೀವಿ ಎಂದರೆ ತನ್ನ ಬುದ್ಧಿಶಕ್ತಿಯಿಂದ ಬದುಕುವವನು ಅಂತ ಧ್ವನಿತವಾಗುತ್ತದೆ. ಅರ್ಥಾತ್ ಬುದ್ಧಿಯು ನಮಗೆ ಬದುಕುವ ಹಾದಿಯಾಗಿದೆ, ಜೀವನದ ಉಪಕರಣವಾಗಿದೆ, ನಮ್ಮ Means of Production ಆಗಿದೆ. ಬುದ್ಧಿ ನಮ್ಮ ದೈನಂದಿನ ಆಜೀವಿಕೆಗೆ ಇಷ್ಟು ಸಂಬದ್ಧವಾಗಿರುವಾಗ ಅದರಿಂದ ಅನ್ನಮಯ ಪ್ರಪಂಚಕ್ಕಿಂತ ಉನ್ನತವಾಗಿರುವುದು ಹುಟ್ಟಬಲ್ಲದೇ? ನನ್ನ ಅಭಿಪ್ರಾಯದಲ್ಲಿ ಬುದ್ಧಿಜೀವಿಗೂ ಇಂಟೆಲೆಕ್ಚುವಲ್ಲನಿಗೂ ಇರುವ ಅಂತರ ಕಸಬುಗಾರನಿಗೂ ಕಲಾಕಾರನಿಗೂ ಇರುವ ಅಂತರಕ್ಕಿಂತ ಕಡಿಮೆಯದಲ್ಲ. ಆದ್ದರಿಂದ ಇಲ್ಲಿ ನಾನು ಬುದ್ಧಿಜೀವಿಯ ಬದಲು Intellectual ಶಬ್ದಕ್ಕೆ ಪರ್ಯಾಯವಾಗಿ 'ಬೌದ್ಧಿಕ' ಎಂಬ ಶಬ್ದವನ್ನು ಬಳಸುತ್ತೇನೆ.

ಬೌದ್ಧಿಕನೆಂದರೆ ಯಾರು? ಜಗತ್ತಿನ ಜನರಲ್ಲಿ ಹನ್ನೆರಡು ರಾಶಿಗಳು ಎನ್ನುವ ಜ್ಯೋತಿಷಿಗಳ ವಿಭಾಗ ತಪ್ಪು. ಜಗತ್ತಿನಲ್ಲಿರುವುದು ಎರಡೇ ರಾಶಿ—ಮೇಷ ಮತ್ತು ವೃಷಭ—ಅಂತ ನನ್ನ ಒಬ್ಬ ವಿನೋದಿ ಮಿತ್ರರು ಹೇಳುತ್ತಿದ್ದರು. ನಾನು ಇದನ್ನು ತಿದ್ದಿ ಮನುಷ್ಯನ ಎರಡು ರಾಶಿಗಳನ್ನು ಮೇಷ ಮತ್ತು ತುಲಾ ಅಂತ ವಿಭಾಗಿಸುತ್ತೇನೆ. ಮೇಷ ರಾಶಿಯವರು ಗತಾನುಗತಿಕವಾಗಿ ಒಂದೇ ದಾರಿಯಲ್ಲಿ ಸಾಗುತ್ತಾರೆ, ಯಾರಾದರೂ ಬೇರೆ ಕಡೆ ದಬ್ಬಿದರೆ ಆಕಡೆ ತಿರುಗುತ್ತಾರೆ. ಅವರ ಬದುಕಿಗೆ ಪ್ರವೃತ್ತಿಯ ಪ್ರಚೋದನೆಯೇ ಚುಕ್ಕಾಣಿ. ಜಗತ್ತು ಇಂಥವರಿಂದಲೇ ತುಂಬಿದ್ದರೆ ನಿಜವಾಗಿ ಅದು ಸುಖ-ಶಾಂತಿಮಯ ವಾಗಿಯೇ ಇರುತ್ತಿತ್ತು. ಆದರೆ ಆ ಸುಖಶಾಂತಿಯನ್ನು ಭಂಗಿಸುವುದನ್ನು ತುಲಾ ರಾಶಿಯವರು ತಮ್ಮ ಉದ್ಯೋಗವಾಗಿ ಮಾಡಿಕೊಂಡಿದ್ದಾರೆ. ಅವರು ತಕ್ಕಡಿಯಲ್ಲಿ ತೂಗಿ ಎಲ್ಲೋ ಏನೋ ತಪ್ಪಾಗಿದೆ ಎನ್ನುತ್ತಾರೆ. ಅವರ ತಲೆ ಓಡುತ್ತದೆ. ಜಗತ್ತು ಈಗಿರುವುದಕ್ಕಿಂತ ಏನೋ ಬೇರೆ ತರಹವಾಗಿರಬೇಕೆಂದು ಅವರಿಗೆ ತೋರುತ್ತದೆ. ಅವರು ಪ್ರಶ್ನಿಸುತ್ತಾರೆ. ಅದಕ್ಕೆ ಉತ್ತರ ಹುಡುಕುವುದಕ್ಕೆ ಹೆಣಗುತ್ತಾರೆ. ಅವರ ಮನಸ್ಸು ಕೇವಲ ಪ್ರಕೃತಿಯ ಪ್ರಚೋದನೆಯಲ್ಲದ ತರ್ಕದ ಸ್ತರದಲ್ಲಿ ವರ್ತಿಸುತ್ತದೆ. ಅವರು ಕೇಳುವ ಪ್ರಶ್ನೆಗಳು ಎಲ್ಲರ ಮನಸ್ಸನ್ನೂ

ವಿಚಲಿತಗೊಳಿಸುತ್ತವೆ. ಇದನ್ನೇ ನಾವು ವಿಚಾರ ಕ್ರಾಂತಿ ಎನ್ನುವುದು. ಪ್ರಪಂಚದಲ್ಲಾಗುವ ಎಲ್ಲ ಬದಲಾವಣೆಗಳ ಬುಡದಲ್ಲೂ ಬೌದ್ಧಿಕ ಜನರ ಈ ಪ್ರಶ್ನಪ್ರವೃತ್ತಿ ಇದೆ.

Mankind is carried forward on the shoulders of a few great men—ಎನ್ನುವ ಮಾತು ಬಹಳ ಮಟ್ಟಿಗೆ ನಿಜವಾಗಿದೆ. ಆದರೆ ಇಲ್ಲಿ great men ಎನ್ನುವಲ್ಲಿ great thinkers ಎಂದು ಅರ್ಥ ಮಾಡಿಕೊಳ್ಳಬೇಕು. ಮಾನವ ಜೀವನವನ್ನು ಪಶುಸ್ತರದಿಂದ ಮೇಲೆತ್ತುವ ವರ್ಗ ಇದೇ. ಇದನ್ನೇ ನಾವು Intellectuals ಎನ್ನುವುದು. ಆದರೆ ಈ ವಿಚಾರವೆಷ್ಟು ಸರ್ವಶ್ರುತವಾಗಿದೆಯೆಂದರೆ ಅದನ್ನು ಹೆಚ್ಚು ವಿವರಿಸುವುದು ಅಗತ್ಯವಿಲ್ಲ.

ಈ ಬೌದ್ಧಿಕ ವರ್ಗದ ಪ್ರಭಾವವನ್ನು ಕುರಿತು ಹೆಚ್ಚು ಪುರಾವೆಗಳು ಅಗತ್ಯವೆಂದು ತೋರುವುದಿಲ್ಲ. ಗ್ರೀಕ್ ಇತಿಹಾಸದಲ್ಲಿ ಸಾಕ್ರೆಟೀಸನನ್ನು ತೆಗೆದುಕೊಳ್ಳಿ. ಅವನು ಜಗತ್ತಿನ ಮಹಾ ಬೌದ್ಧಿಕರಲ್ಲಿ ಒಬ್ಬ. ಅವನಿಗೆ ಅಥೆನ್ಸಿನ ನ್ಯಾಯಮಂಡಲಿಯು ವಿಷ ಕುಡಿಸಿತು ಎಂಬ ನಾಟಕೀಯ ಸನ್ನಿವೇಶದ ಗಲಾಟೆಯಲ್ಲಿ ನಾವು ಸಾಕ್ರೆಟೀಸನು ಯುರೋಪಿನ ಜೀವನದ ಮೇಲೆ ಬೀರಿದ ಪ್ರಭಾವವನ್ನು ಮರೆತು ಬಿಡುವ ಸಂಭವವಿದೆ. ನೂರು ಹುಂಬರಿಗಿಂತ ಒಬ್ಬ ಬುದ್ಧಿಶಾಲಿ ಶ್ರೇಷ್ಠ ಎನ್ನುವ ವಿಚಾರವನ್ನು ಪ್ರತಿಪಾದಿಸುವ ಮೂಲಕ ಅವನು ಅಥೆನ್ಸಿನ ಅರ್ಥ ಕಳೆದುಕೊಂಡ ಪ್ರಜಾತಂತ್ರದ ಬುಡಕ್ಕೇ ಕೊಡಲಿ ಹಾಕಿದ. ಅವನೂ ಅವನ ಶಿಷ್ಯ ಪ್ಲೇಟೋನೂ ಪ್ರತಿಪಾದಿಸಿದ ತತ್ವಗಳು ಗ್ರೀಸಿನ ಬೌದ್ಧಿಕ ವರ್ಗವನ್ನು ಪೂರ್ತಿಯಾಗಿ ವಶಪಡಿಸಿಕೊಂಡು ಒಂದು ಶತಮಾನಕ್ಕಿಂತಲೂ ಕಡಿಮೆ ಅವಧಿಯಲ್ಲಿ ಗ್ರೀಸಿನ ಪುಟ್ಟ ಪುಟ್ಟ ಪರಸ್ಪರ ಕಲಹಮಗ್ನ ಪ್ರಜಾಸತ್ತೆಗಳನ್ನು ಉರುಳಿಸಿದವು. ಅಲೆಗ್ಸಾಂಡರನ ವಿಶ್ವವಿಜೇತ ಸತ್ರವನ್ನು ಮೈಯುಬ್ಬಿ ಓದುವಾಗ ನಾವು ಸಾಕ್ರೆಟೀಸ ಇಲ್ಲದೆ ಅಲೆಗ್ಸಾಂಡರ್ ಬಹುಶಃ ಆಗುತ್ತಿರಲಿಲ್ಲವೆಂದು ಯೋಚಿಸುವುದಿಲ್ಲ.

ನಾನು ಸಾಕ್ರೆಟೀಸನನ್ನು ವಿಶೇಷವಾಗಿ ಉಲ್ಲೇಖಿಸಲಿಕ್ಕೆ ಕಾರಣವಿದೆ. ಸಾರ್ವಜನಿಕವಿರಲಿ ಖಾಸಗಿ ಇರಲಿ, ಜೀವನದಲ್ಲಿ ಬೌದ್ಧಿಕ ಚಿಂತನೆಯ ಅಗತ್ಯವನ್ನು ಸ್ಪಷ್ಟವಾಗಿ ಪ್ರಬೋಧಿಸಿದ ಯುರೋಪಿಯನ್ನರಲ್ಲಿ ಅವನೇ ಮೊದಲಿಗ. ಅವನ ಮತ್ತು ಅವನ ಶಿಷ್ಯ ಪ್ರಶಿಷ್ಯರಾದ ಪ್ಲೇಟೋ ಅರಿಸ್ಟಾಟಲರ ಪ್ರಭಾವ ಇಂದಿನವರೆಗೂ ಸಾಗಿಬಂದಿದೆ. ಕಾರ್ಲ್‌ಮಾರ್ಕ್ಸ್‌ನಂಥವರೂ ಅವನ ಅನುಯಾಯಿಗಳೂ ತಮ್ಮ Dictatorship of the proletariat ವಿಚಾರಗಳನ್ನು ಮಂಡಿಸುವಾಗ ಪ್ಲೇಟೋನ ರಿಪಬ್ಲಿಕ್ಕಿನಿಂದಲೇ ಪ್ರಚೋದಿತರಾದರು, ಈ ಮಹಾ ಸಮಾಜವಾದಿಗಳೂ ಮನುಷ್ಯರ ಅಸಮಾನತೆಯಲ್ಲಿ ನಂಬಿಕೆ ಇಟ್ಟವರಾಗಿದ್ದರು.

ಯುರೋಪಿನ ಇತಿಹಾಸದಲ್ಲಿ ಬೌದ್ಧಿಕರು ಪ್ರಚೋದಿಸಿದ ಇನ್ನೊಂದು ವಿಪ್ಲವ ೧೮ನೇ ಶತಮಾನದಲ್ಲಿ ಎದ್ದು ಕಾಣಿಸುತ್ತದೆ. ವಾಲ್ತೇರ್ ಮತ್ತು ರೂಸೋ ಅವರು ಹೆಚ್ಚಿನ ವಿಚಾರಗಳಲ್ಲಿ ಪರಸ್ಪರ ವಿರೋಧಾಭಿಪ್ರಾಯ ತಳೆದವರಾದರೂ ಅವರಿಬ್ಬರು ಪ್ರೇರಿಸಿದ ಹೊಸ ಬೌದ್ಧಿಕ ವಾತಾವರಣವು ಮಧ್ಯಯುಗವನ್ನು ಪೂರ್ತಿಯಾಗಿ ಅಲುಗಿಸಿ ಅವರಿಬ್ಬರೂ

ನಿರೀಕ್ಷಿಸಿರಲಾರದ ಫ್ರೆಂಚ್ ಕ್ರಾಂತಿಗೆ ಕಾರಣವಾಯಿತು. These two men have destroyed France ಎಂದು ಫ್ರೆಂಚ್ ರಾಜ ಲೂಯಿ ಹೇಳಿದ್ದು ಅತಿಶಯೋಕ್ತಿಯಾಗಿರಲಿಲ್ಲ. ಅದು ಹಳೇ ಯುರೋಪನ್ನು ಉರುಳಿಸಿ ಹೊಸ ಔದ್ಯೋಗಿಕ ಯುಗಕ್ಕೆ ದಾರಿಮಾಡಿಕೊಟ್ಟಿತು. ಸಾಕ್ರೆಟೀಸನಿಲ್ಲದೆ ಅಲೆಗ್ಝಾಂಡರ್ ಹೇಗೆ ಅಸಾಧ್ಯವಾಗಿದ್ದನೋ ಹಾಗೆ ವಾಲ್ಟೇರ್-ರೂಸೋ ಗಳಿಲ್ಲದೆ ನೆಪೋಲಿಯನ್ನನನ್ನೂ ಕಲ್ಪಿಸಲು ಸಾಧ್ಯವಿಲ್ಲ.

ನಮ್ಮ ಭಾರತೀಯ ಇತಿಹಾಸದಲ್ಲಿ ಇಂಥ ಬೌದ್ಧಿಕ ಕ್ರಾಂತಿಗಳು ಆಗಿಲ್ಲವೆಂದಲ್ಲ. ಆದರೆ ಇತಿಹಾಸವನ್ನು ನೋಡುವ ನಮ್ಮ ಪೂರ್ವಜರ ವಿಚಿತ್ರ ದೃಷ್ಟಿಯಿಂದಾಗಿ ನಮಗೆ ಅವುಗಳನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟವಾಗಿದೆ. ಬುದ್ಧನು ಖಂಡಿತವಾಗಿ ಒಬ್ಬ ಮಹಾ ಬೌದ್ಧಿಕ. ಬಹುಶಃ ಕೃಷ್ಣನೂ ಹೌದು. ಷಡ್ದರ್ಶನಗಳ ಪ್ರವರ್ತಕರೂ ಬೌದ್ಧಿಕರೇ. ಆದರೆ ನಿತ್ಯಜೀವನದ ಆಗುಹೋಗುಗಳನ್ನು ಕುರಿತು ಚಿಂತಿಸಿ, ನವೀನ ಬೌದ್ಧಿಕ ಪ್ರಶ್ನೆಗಳನ್ನೂ ಉತ್ತರಗಳನ್ನೂ ಮಂಡಿಸಿದವರು ಎಷ್ಟು ಜನ? ಇಡೀ ಜನಾಂಗಗಳಲ್ಲಿಯೇ ಹೊಸಶಕ್ತಿಯನ್ನು ಹೊರಹೊಮ್ಮಿಸಿದ ಬೌದ್ಧಿಕರು ಎಷ್ಟು ಜನ-ಹೇಳುವುದು ಕಷ್ಟ. ಇವರಲ್ಲಿ ಹೆಚ್ಚಿನವರು ಇಲ್ಲಿನ ಪ್ರಶ್ನೆಗಳ ಬದಲಿಗೆ ಅಲ್ಲಿನ ಪ್ರಶ್ನೆಗಳ ವಿಚಾರದಲ್ಲಿ ಆಸಕ್ತಿ ತಾಳಿದ್ದು ನಮ್ಮಲ್ಲಿ ಬೌದ್ಧಿಕತೆಯ ಬೆಳವಣಿಗೆಗೆ ಆತಂಕವಾಗಿರಬಹುದೇನೋ.

ಭಾರತವು ಬ್ರಿಟಿಷರ ಪ್ರಭುತ್ವಕ್ಕೆ ಒಳಪಟ್ಟ ನಂತರವೇ ನಮ್ಮ ದೇಶದಲ್ಲಿ ಒಂದು ಹೊಸ ಬೌದ್ಧಿಕ ವಾತಾವರಣ ನಿರ್ಮಾಣವಾದದ್ದು ಕಾಣಿಸುತ್ತದೆ. ನಮ್ಮ ಗತಾನುಗತಿಕವಾದ ವಿಚಾರಸರಣಿ ಮುಸ್ಲಿಮರ ಆಕ್ರಮಣದಿಂದಲೂ ಬದಲಾಗಿರಲಿಲ್ಲ. ನಮ್ಮ ಸೋಲಿಗೆ ಕಾರಣವೇನು? ನಮ್ಮ ಲೌಕಿಕ ಸಂಘಟನೆಯಲ್ಲಿ ಎಲ್ಲಿ ಹುಳುಕು ಇದೆ? ಎಂಬ ಪ್ರಶ್ನೆಗಳನ್ನು ಗಜನಿ ಮಹಮ್ಮದನಿಂದ ಹಿಡಿದು ಅಹಮ್ಮದ ಶಾ ಅಬ್ದಾಲಿಯವರೆಗಿನ ಕಾಲದಲ್ಲಿ ಯಾರೂ ಗಂಭೀರವಾಗಿ ಕೇಳಿ ಉತ್ತರ ಹುಡುಕಿದಂತಿಲ್ಲ. ಮುಸ್ಲಿಂ ಅತಿಕ್ರಮಣದಿಂದ ನಮ್ಮಲ್ಲಿ ಹೊಸ ಬೌದ್ಧಿಕ ವಿಪ್ಲವ ಏಕೆ ಹುಟ್ಟಲಿಲ್ಲ? ಎಂಬ ಪ್ರಶ್ನೆಗೆ ಎಂ.ಎನ್. ರಾಯ್‌ರು ಕೊಟ್ಟ ಉತ್ತರ ಬಹುಶಃ ಸಮರ್ಪಕವಾಗಿದೆ. ಇಸ್ಲಾಮಿನ ನೇತೃತ್ವವು ಪ್ರಗತಿಶೀಲ ಅರಬರ ಕೈಯಿಂದ ಅನಾಗರಿಕ ತುರ್ಕ-ಮಂಗೋಲರ ಕೈಗೆ ಹೋಗಿ ಸ್ವತಃ ಮುಸ್ಲಿಮರಲ್ಲಿ ಬೌದ್ಧಿಕ ವಾತಾವರಣ ಕುಂಠಿತವಾಗಿತ್ತು. ಭಾರತೀಯರನ್ನು ಸೋಲಿಸಿದ ಇಸ್ಲಾಮಿ ವಿಜೇತರು ಬಹುಮಟ್ಟಿಗೆ ಭಾರತೀಯರಿಗಿಂತ ಕಡಿಮೆ ನಾಗರಿಕರಾಗಿದ್ದರು. ಅವರು ಭಾರತೀಯರಲ್ಲಿ ಹೊಸ ಲೌಕಿಕ ವಿಚಾರ ವಾತಾವರಣವನ್ನು ಪ್ರೇರಿಸುವಷ್ಟು ಬೌದ್ಧಿಕ ಪ್ರಭಾವ ಹೊಂದಿರಲಿಲ್ಲ. ಬದಲಾವಣೆಯನ್ನು ಅನಾವಶ್ಯಕವಾಗಿ ಮಾಡದ ಚಾತುರ್ವರ್ಣ್ಯ ಪದ್ಧತಿಯ ನಾಯಕರಾದ ಬ್ರಾಹ್ಮಣರ ಅತ್ಯಂತ ನಿಶಿತವಾದ ತರ್ಕಶಾಸ್ತ್ರವು ಶಾರೀರಿಕ ಬಲದ ಪ್ರತಿನಿಧಿಯಾದ ಇಸ್ಲಾಮಿನಿಂದ ಹೆಚ್ಚು ಅಲುಗಾಡಲಿಲ್ಲ. ಅರ್ಥಾತ್ ಇಸ್ಲಾಂ ಭಾರತೀಯ ಬುದ್ಧಿಗೆ ಬಲವಾದ ಏಟನ್ನೂ ಕೊಡಲಿಲ್ಲ, ಆಹ್ವಾನವನ್ನೂ ಒದಗಿಸಲಿಲ್ಲ. ಬ್ರಾಹ್ಮಣರು ಮುಖ್ಯವಾಗಿ ಚರ್ಚಿಸುತ್ತಿದ್ದದ್ದು ಆಮುಷ್ಮಿಕ ವಿಚಾರ. 'ಚೆನ್ನಾಗಿ ಊಟ ಮಾಡಿದವರು ದೇವರ ಬಳಿಗೆ

ಹೋಗಲು ಅತಿ ಹತ್ತಿರದ ದಾರಿ ಯಾವುದೆಂದು ವಿಚಾರಿಸುತ್ತಿದ್ದರು. ಅವರು ಹಾಗೆ ಮಾಡಲೇಬೇಕಿತ್ತು. ಏಕೆಂದರೆ ಹೊಟ್ಟೆ ಭಾರವಾಗಿದ್ದುದರಿಂದ ಬಹು ದೂರ ನಡೆಯುವ ಶಕ್ತಿ ಅವರಿಗಿರಲಿಲ್ಲ' ಎಂದು ನನ್ನ ಹಿಂದಿನ ಮಾಲಿಕರಾದ ಪಣಿಯಾಡಿಯವರು—ಸ್ವತಃ ಮೀಮಾಂಸಾ ಶಿರೋಮಣಿಗಳು—ಹಾಸ್ಯ ಮಾಡುತ್ತಿದ್ದದ್ದು ನನಗೆ ಇಲ್ಲಿ ನೆನಪಿಗೆ ಬರುತ್ತದೆ.

ಬ್ರಿಟಿಷ್ ಪ್ರಭುತ್ವ ಇಲ್ಲಿ ಬಲವಾಗಿ ನೆಲೆಯೂರಿದ ನಂತರ ಭಾರತೀಯರು ನಿಜವಾದ ಬೌದ್ಧಿಕ ವಿಪ್ಲವವನ್ನು ಕಂಡರು. ಬ್ರಿಟಿಷ್ ಪ್ರಭುತ್ವ ಇಲ್ಲಿ ಅಪ್ರತಿರುದ್ಧವೆಂದು ಸಿದ್ಧವಾಗುತ್ತಿದ್ದಾಗ ಯುರೋಪಿನಲ್ಲಿ ರಿನ್ನಾಸೆನ್ಸ್ ಆಗಲೇ ಎರಡು ಶತಮಾನದ ಯೌವನದಲ್ಲಿತ್ತು. ಮಹಾ ತತ್ವಜ್ಞಾನಿಗಳೂ ಮಹಾ ಖಗೋಲ ವಿಜ್ಞಾನಿಗಳೂ ಬೌದ್ಧಿಕ ಉತ್ಪಾತವೆಬ್ಬಿಸಿದ್ದರು. ಪ್ಲಾಸಿ ಕದನವಾದಾಗ ಫ್ರೆಂಚ್ ಕ್ರಾಂತದರ್ಶಿಗಳು ಹೊಸ ವಿಚಾರಗಳನ್ನು ಪ್ರಚಾರಿಸುತ್ತಿದ್ದರು. ೧೮೫೭ರ ಹೊತ್ತಿಗೆ ಔದ್ಯೋಗಿಕ ಕ್ರಾಂತಿಯಾಗಿಹೋಗಿತ್ತು. ಮುದ್ರಣಕಲೆ ಜ್ಞಾನಪ್ರಸಾರವನ್ನು ಸಾರ್ವತ್ರಿಕವಾಗಿ ಮಾಡಿತ್ತು. ನಮ್ಮ ವಿದ್ಯಾವಂತ ವರ್ಗಕ್ಕೆ ಈಗ ಎದುರಾದ ಆಕ್ರಮಣವು ಭೌತಿಕವಾಗಿ ಮಾತ್ರವಲ್ಲ, ಬೌದ್ಧಿಕವಾಗಿಯೂ ಅಪ್ರತಿಭಟನೀಯವಾಗಿತ್ತು. ಅದರ ಸಮ್ಮುಖದಲ್ಲಿ ಭಾರತೀಯ ಬುದ್ಧಿ ಕತ್ತರಿಸಿದ ಬಳ್ಳಿಯ ಹಾಗೆ ಹೊಸ ಚಿಗುರುಗಳನ್ನು ಬಿಟ್ಟಿತು. ನಮ್ಮ ಇಡೀ ಸಾಮಾಜಿಕ ಅವಸ್ಥೆಯನ್ನೇ ರಾಜಾರಾಮ ಮೋಹನ ರಾಯರು ಮರುವಿಚಾರಕ್ಕೊಳಪಡಿಸಿದರು. ಸಂಸ್ಕೃತ ವಿದ್ಯೆಯಲ್ಲಿ ಪ್ರಕಾಂಡ ಪಂಡಿತರಾದ ಈಶ್ವರಚಂದ್ರ ವಿದ್ಯಾಸಾಗರರು ಪಾಶ್ಚಾತ್ಯ ವಿದ್ಯೆಯ ಅಧ್ವರ್ಯುಗಳಾದರು. ಎಲ್ಲೆಲ್ಲಿ ಬ್ರಿಟಿಷರು ಮೊದಲು ಧ್ವಜ ಸ್ಥಾಪಿಸಿದ್ದರೋ ಅಲ್ಲೆಲ್ಲ ನಮ್ಮ ಶತಮಾನಗಳ ಸಂಪ್ರದಾಯವನ್ನು ಪ್ರಶ್ನಿಸುವ ಪ್ರವೃತ್ತಿ ಹುಟ್ಟಿತು. ನಮ್ಮ ವಿದ್ಯಾವಂತ ವರ್ಗ ಪಾಶ್ಚಾತ್ಯ ಸಾಹಿತ್ಯ, ಪಾಶ್ಚಾತ್ಯ ರಾಜಕೀಯ ತತ್ವಜ್ಞಾನ ಪಾಶ್ಚಾತ್ಯ ವಿಜ್ಞಾನಗಳನ್ನು ಓದಿತು. ಶತಮಾನ ಮುಗಿಯುವುದರೊಳಗೆ ಬ್ರಿಟಿಷರು ತಾವು ನಟ್ಟ ಸಸಿಯ ಫಲವನ್ನು ಕಾಣತೊಡಗಿದರು. ನಮಗೇಕೆ ಸ್ವಾತಂತ್ರ್ಯ ಬೇಡ? ಎಂಬ ಪ್ರಶ್ನೆಯನ್ನು ಅವರು ಎದುರಿಸಬೇಕಾಯಿತು. ಮುಂದಿನ ಕಾಲು ಶತಮಾನದೊಳಗೆ ಭಾರತೀಯ ಬೌದ್ಧಿಕತೆ ಪ್ರಬುದ್ಧತೆಗೆ ಮುಟ್ಟಿತ್ತು. ನಮ್ಮವರು ಎರಡು ನೋಬೆಲ್ ಪಾರಿತೋಷಕಗಳನ್ನು ಗೆದ್ದರು.

ಭಾರತದ ಸ್ವಾತಂತ್ರ್ಯವು ತೊಂಭತ್ತು ಪಾಲು ಭಾರತೀಯ ಬೌದ್ಧಿಕರ ಶಿಲ್ಪ ಎಂದು ಹೇಳಲೇಬೇಕು. ನಮ್ಮ ಪ್ರಮುಖ ನಾಯಕರು ಪ್ರಮುಖ ಬೌದ್ಧಿಕರೇ—ವಕೀಲರು, ಡಾಕ್ಟರರು, ಪ್ರೊಫೆಸರರು—ಆಗಿದ್ದರೆಂಬುದನ್ನು ಯಾರು ಅಲ್ಲಗಳೆಯುವರು? ಈ ಬೌದ್ಧಿಕರಲ್ಲಿ ಹಲವರು ಸಮಾಜದ ಸ್ಥಾಪಿತ ನಿಯಮಗಳನ್ನು ಪ್ರಶ್ನಿಸುವವರೂ ಆಗಿದ್ದರು. ಮೋತೀಲಾಲರು ವಿದೇಶಯಾತ್ರೆ ಮಾಡಿ ಬಂದು ಪ್ರಾಯಶ್ಚಿತ್ತವನ್ನು ನಿರಾಕರಿಸಿದರು. ಗಾಂಧೀಜಿ ಅಸ್ಪೃಶ್ಯ ಹುಡುಗಿಯನ್ನು ದತ್ತಕ ಹಿಡಿದರು. ಇಂದು ನಾವು ಏನಾಗಿದ್ದೇವೋ ಅದೆಲ್ಲ ಬೌದ್ಧಿಕತೆಯ ಪರಿಣಾಮವಾಗಿದೆ. ಕಲಕತ್ತೆಯಲ್ಲಿ ಮೊದಲ ಮೆಡಿಕಲ್ ಕಾಲೇಜು ಸುರುವಾದಾಗ ಶವಚ್ಛೇದದಿಂದ ಜಾತಿ ಹೋದೀತೆಂದು ಭಯಪಟ್ಟು ಯಾವ ಬ್ರಾಹ್ಮಣನೂ ಅಲ್ಲಿ

ಸೇರಲೊಪ್ಪಲಿಲ್ಲ. ಇಂದು ಬ್ರಾಹ್ಮಣರನ್ನು ಮೆಡಿಕಲ್ ಕಾಲೇಜುಗಳಿಂದ ಹೊರಗಿಡಬೇಕಾದರೆ ಕಾಯದೆ ಮಾಡಬೇಕಾಗಿ ಬಂದಿದೆ. ೧೭ನೇ ಶತಮಾನದಲ್ಲಿ ವಿಶ್ವಗುಣಾದರ್ಶ ಚಂಪುವಿನ ಕರ್ತ ಉತ್ತರದ ಬ್ರಾಹ್ಮಣರು ಸರಕಾರಿ ನೌಕರಿ ಮಾಡುವ ಭ್ರಷ್ಟರು ಎಂದು ನಿಂದಿಸಿದ್ದ. ೨೦ನೇ ಶತಮಾನದ ಆದಿಯೊಳಗೆ ದಕ್ಷಿಣದ ಬ್ರಾಹ್ಮಣರು ಸರಕಾರಿ ನೌಕರಿಯಲ್ಲೆಲ್ಲಾ ತುಂಬಿಹೋಗಿ ಉಳಿದವರಿಗೆ ಅಲ್ಲಿ ಎಡೆ ಮಾಡಿಕೊಡಲು ಬ್ರಾಹ್ಮಣರನ್ನು ಒತ್ತಾಯದಿಂದ ಬದಿಗೆ ಸರಿಸುವ ಪ್ರಸಂಗ ಬಂತು. ಬೌದ್ಧಿಕರು ಭಾರತದಲ್ಲಿ ಎಲ್ಲವನ್ನೂ ಬದಲು ಮಾಡಿಬಿಟ್ಟರು. ಭಾರತ ಸ್ವಾತಂತ್ರ್ಯದೊಡನೆ ಬೌದ್ಧಿಕರ ಸಾಧನೆಯ ಒಂದು ಘಟ್ಟ ಪೂರ್ಣವಾಯಿತೆನ್ನಬಹುದು.

ದುರ್ದೈವದಿಂದ ಭಾರತದ ಸ್ವಾತಂತ್ರ್ಯದ ನಂತರ ಬೌದ್ಧಿಕರ ಸಾಧನೆಯನ್ನು ಇದೇ ಪ್ರಶಂಸಾತ್ಮಕ ಮಾತುಗಳಿಂದ ವರ್ಣಿಸಲು ಸಾಧ್ಯವಿಲ್ಲದಾಗಿದೆ. ಈ ಮೂವತ್ತು ವರ್ಷಗಳ ಕಥೆಯನ್ನು ನೋಡಿದರೆ ನಮ್ಮ ಬೌದ್ಧಿಕರು ಇಲ್ಲಿ ಬಹಳ ದೊಡ್ಡ ಸೋಲನ್ನು ತಿಂದಿದ್ದಾರೆ ಎನ್ನದೆ ವಿಧಿಯಿಲ್ಲ. ತಾವೇ ಪ್ರವರ್ತಿಸಿದ ಯುಗದಲ್ಲಿ ಬೌದ್ಧಿಕರು ನಿಸ್ಸಹಾಯರಾದ ಸಂತ್ರಸ್ತರಾಗಿದ್ದಾರೆ.

ಇಂದಿನ ಜೀವನದಲ್ಲಿ ಬೌದ್ಧಿಕರು ಎಲ್ಲಿದ್ದಾರೆ? ಜವಾಹರಲಾಲ ನೆಹರೂ ಅವರು ಮಹಾಬೌದ್ಧಿಕರಾಗಿದ್ದರು. ಅವರ ಅವಸಾನದೊಡನೆ ಈ ದೇಶದಲ್ಲಿ ಬೌದ್ಧಿಕರ ರಾಜಕೀಯ ಮೃತ್ಯುವಾಗಿದೆ, ನಂಬೂದ್ರಿಪಾದರನ್ನು ಬಿಟ್ಟರೆ ಕೇಂದ್ರದಲ್ಲಾಗಲಿ ರಾಜ್ಯಗಳಲ್ಲಾಗಲಿ ಬೌದ್ಧಿಕ ಎನ್ನಬಹುದಾದವರೊಬ್ಬರೂ ರಾಜಕೀಯ ಕರ್ಣಧಾರತ್ವದಲ್ಲಿದ್ದಾರೆನ್ನಲು ಬಾರದು. ವಿಶ್ವ ವಿದ್ಯಾಲಯಗಳು ಬೌದ್ಧಿಕತೆಯ ದೇವಾಲಯಗಳು. ಅವುಗಳ ಸತ್ತಾಧಿಕಾರವು ಬೌದ್ಧಿಕರಲ್ಲದವರ ಕೈಗೆ ಸಾವಕಾಶವಾಗಿ ಸರಿಯುತ್ತಿದೆ. ಬೌದ್ಧಿಕ ಮುಂದಾಳುತನವಿಲ್ಲದೆ ಅವು ಮದ್ದಿನ ಮನೆಗಳಾಗಿವೆ.

ಬೌದ್ಧಿಕರ ಪ್ರಭಾವ ಹೀಗೇಕೆ ಅವನತಿ ಹೊಂದಿದೆ? ಯಾರೂ ಅವರನ್ನು ಲಕ್ಷಿಸುವುದಿಲ್ಲ ಏಕೆ? ಎರಡು ಮುಖ್ಯ ಕಾರಣಗಳು ನನಗೆ ತೋರುತ್ತಿವೆ.

ಮೊದಲನೆಯದಾಗಿ, ನಮ್ಮಲ್ಲಿ ಬೌದ್ಧಿಕರು ಬುದ್ಧಿಜೀವಿಗಳಾಗಿ ಹ್ರಾಸ ಹೊಂದಿದ್ದಾರೆ. ಪ್ರಾರಂಭದಲ್ಲೇ ಹೇಳಿದಂತೆ ಬೌದ್ಧಿಕನು ತನ್ನ ಬುದ್ಧಿಯನ್ನು ಐಹಿಕ ಸುಖಸಂಪತ್ತು ವೈಭವಗಳ ಸಂಪಾದನೆಗಾಗಿ ವಿನಿಯೋಗಿಸುತ್ತ ಹೋಗುವುದರಿಂದ ಅವನ ನೈತಿಕ ಅಧಃಪಾತವಾಗುತ್ತದೆ. ಅವನು ಬುದ್ಧಿಜೀವಿಯಾಗುತ್ತಾನೆ. ತನಗೆ ಮತ್ತು ತನ್ನವರಿಗಾಗಿ ಮನೆ, ಮಠ, ಕಾರು, ಅಧಿಕಾರ ದರ್ಪಗಳನ್ನು ಗಳಿಸುವುದು ಅವನ ಪ್ರಧಾನ ಲಕ್ಷ್ಯವಾಗುತ್ತದೆ. ಇದಕ್ಕಾಗಿ ಅವನು ತನ್ನ ಬುದ್ಧಿಯನ್ನು ಅತಿ ಹೆಚ್ಚು ಬೆಲೆ ಕೊಡುವವನಿಗೆ ಮಾರಲು ಸಿದ್ಧನಾಗುತ್ತಾನೆ.

ಸಾಮಾನ್ಯ ವಿದ್ಯಾವಂತನನ್ನು ಬೌದ್ಧಿಕರ ವರ್ಗದಲ್ಲಿ ಸೇರಿಸದೆ ಕೇವಲ ಅತಿಶ್ರೇಷ್ಠ ಶಿಕ್ಷಣ ಹೊಂದಿದವರನ್ನು ಮಾತ್ರವೇ ಬೌದ್ಧಿಕರೆಂದು ಪರಿಗಣಿಸಿ ಪರಿಸ್ಥಿತಿಯನ್ನು ವಿಶದ ಪಡಿಸೋಣ. ನಾವೆಲ್ಲರೂ ರಾಜಕಾರಣಿಗಳನ್ನು ಎಲ್ಲಕ್ಕೂ ದೂರುವ ಚಟ ಮಾಡಿಕೊಂಡಿದ್ದೇವೆ.

ಆದರೆ ಬೌದ್ಧಿಕರ ಸಹಾಯವಿಲ್ಲದೆ ಯಾವ ರಾಜಕಾರಣಿಯೂ ಚಿರಕಾಲ ಅಧಿಕಾರ ನಡೆಸಲಾರ. ನಮ್ಮ ಶ್ರೇಷ್ಠ ಸರಕಾರಿ ಅಧಿಕಾರಿಗಳೆಲ್ಲ ಬೌದ್ಧಿಕರೇ. ಆದರೆ ದೇಶದಲ್ಲಿ ನಡೆಯುವ ಭ್ರಷ್ಟಾಚಾರಗಳಲ್ಲಿ ಹೆಚ್ಚಿನವುಗಳ ಮೂಲ ಶೋಧಿಸಿ ಕೊನೆಗೆ ನಮ್ಮೀ ಬೌದ್ಧಿಕ ವರ್ಗದ ಹತ್ತಿರಕ್ಕೇ ನಾವು ತಲುಪುತ್ತೇವೆ. ಅತ್ಯುಚ್ಚ ಬುದ್ಧಿಶಕ್ತಿಯ ವಿದ್ವಾಂಸರೊಬ್ಬರು ಸುಳ್ಳು ಲೆಕ್ಕ ತೋರಿಸಿ ಕಾಲೇಜಿನಿಂದ ಚಿಕ್ಕಪುಟ್ಟ ಮಾನದಲ್ಲಿ ಹಣ ಸುಲಿಯುತ್ತಿದ್ದುದನ್ನು ನಾನು ಕೆಲ ವರ್ಷ ಹಿಂದೆ ಕೇಳಿದೆ. ಒಂದು ಚಿಕ್ಕ ಕಾರು ಕೊಳ್ಳದಿದ್ದರೆ ತಮ್ಮ ಕೆಲಸವೇ ಸಾಗುವಂತಿಲ್ಲೆಂದು ಅವರು ತಮ್ಮ ಮಿತ್ರರೊಡನೆ ಹೇಳಿದರಂತೆ. ಸರಕಾರದಲ್ಲಿರುವ ಬೌದ್ಧಿಕ ವರ್ಗವು ತಮ್ಮ ಪ್ರಾಮಾಣಿಕ ಅಭಿಪ್ರಾಯವನ್ನು ಮಂತ್ರಿಗಳ ಮುಂದಿಡದೆ ಅವರಿಗೆ ಇಷ್ಟವೆನಿಸುವ ಅಭಿಪ್ರಾಯವನ್ನೇ ಕೊಡುವುದು ಬಹಿರಂಗ ರಹಸ್ಯವಾಗಿದೆ. ಇಂಥ ಬೌದ್ಧಿಕ ವರ್ಗವು ಜನರಿಗೆ ಯಾವ ಮಾರ್ಗದರ್ಶನ ಮಾಡಬಲ್ಲದು?

ನಿಜವಾಗಿ ನಮ್ಮ ಬೌದ್ಧಿಕ ವರ್ಗದಲ್ಲಿ ಅನೇಕರಿಗೆ ರಾಷ್ಟ್ರಕ್ಕೆ ಮಾರ್ಗದರ್ಶನ ನೀಡುವ ಇಚ್ಛೆ ಇದೆಯೇ ಎಂದು ಸಂಶಯಪಡಬೇಕಾಗಿದೆ. ಹಣ, ಪ್ರತಿಷ್ಠೆಗಳನ್ನು ಸಂಚಯಿಸಿ ಸಾಮಾನ್ಯರಿಂದ ಸಾಧ್ಯವಿದ್ದಷ್ಟು ದೂರವಾಗಿ ಶ್ರೇಷ್ಠ ವರ್ಗವೆನಿಸುವುದೇ ನಮ್ಮಲ್ಲಿ ಅನೇಕರ ಧ್ಯೇಯವಾಗಿದೆ. ಅವರು ಒಂದು ಬಗೆಯ ಅಪರಿಚಿತ-ಪರಕೀಯ ವರ್ಗವಾಗುತ್ತಿದ್ದಾರೆ.

ನಮ್ಮ ಬೌದ್ಧಿಕ ವರ್ಗದ ಬಾಲಬಡಕತನ ವಿಚಿತ್ರವಾಗಿದೆ. ದೇಶದ ಮಹಾವಿಜ್ಞಾನಿಗಳ ಸಭೆಯನ್ನು ವಿಜ್ಞಾನದ ಅಂಕಲಿಪಿ ತಿಳಿಯದ ರಾಜಕಾರಣಿ ಉದ್ಘಾಟಿಸಬೇಕು. ಮಹಾಕವಿಗಳ ಸನ್ಮಾನಕ್ಕೆ ಕವಿತೆಯೆಂದರೇನೆಂದರಿಯದವರು ಅಧ್ಯಕ್ಷರಾಗಬೇಕು. ಬೌದ್ಧಿಕರನ್ನು ರಾಜಕಾರಣಿಗಳು Purchasable ಎಂದೆಣಿಸಿದರೆ ಏನಾಶ್ಚರ್ಯ? ಹೈಡ್ರೋಜನ್ ಬಾಂಬನ್ನು ನಿರ್ಮಿಸಲು ನಿರಾಕರಿಸಿ ರಾಜಕಾರಣಿಗಳ ಕೈಯಲ್ಲಿ ಪೀಡೆ ಅನುಭವಿಸಲಿಕ್ಕೆ ಸಿದ್ಧರಾಗುವ ಓಪೆನ್ ಹೇಮರರು ನಮಗೀಗ ಬೇಕಾಗಿದ್ದಾರೆ. ನೋಬೆಲ್ ಪಾರಿತೋಷಕವನ್ನು ಒಲ್ಲೆನೆಂಬ ಸಾರ್ತ್ರರು ಬೇಕಾಗಿದ್ದಾರೆ. ಬೌದ್ಧಿಕ ವರ್ಗದ ಗೌರವ ಆಗ ಹೆಚ್ಚುತ್ತದೆ.

ಬೌದ್ಧಿಕರ ಪ್ರಭಾವದ ಅವನತಿಗೆ ಇನ್ನೊಂದು ಕಾರಣವೆಂದರೆ ಅನೇಕ ಪ್ರಾಮಾಣಿಕ ಬೌದ್ಧಿಕರ ಪಲಾಯನವಾದವಾಗಿದೆ. ಜಯಪ್ರಕಾಶ ನಾರಾಯಣರು ಇದರ ಒಂದು ಉದಾಹರಣೆ. ಜಗತ್ತನ್ನು ಮೂಲದಿಂದಲೇ ಬದಲಿಸದೆ ಏನೂ ಪ್ರಯೋಜನವಿಲ್ಲ ಎಂದು ಇಂದಿನ ಸುಡುಸುಡು ಸಮಸ್ಯೆಗಳ ಬಗ್ಗೆ ಉದಾಸೀನರಾಗಿರುವುದು ಈ ವರ್ಗದ ಲಕ್ಷಣವಾಗಿದೆ.

ನಮ್ಮ ಬೌದ್ಧಿಕ ವರ್ಗದಲ್ಲಿ ಇನ್ನೊಂದು ಅತಿ ಅಪಾಯಕರ ಪ್ರವೃತ್ತಿಯನ್ನು ಕಾಣುತ್ತಿದ್ದೇವೆ. ಅದೆಂದರೆ ಆಧ್ಯಾತ್ಮದ ಕಡೆ ಜಾರುತ್ತ ಹೋಗುವುದು. ನಮ್ಮ ಅತ್ಯಂತ ಸುಶಿಕ್ಷಿತ ವರ್ಗದ ವಿಜ್ಞಾನವನ್ನು ಅಭ್ಯಾಸಿಸಿದ ಜನರು ಕೂಡ ಸಾಧುಸಂತರೆಂದುಕೊಳ್ಳುವವರನ್ನು ಆರಾಧಿಸುವ ರೀತಿ ನೋಡಿದರೆ ಆಶ್ಚರ್ಯವಾಗುತ್ತದೆ. ಯೋಗಿಯೆಂದು ಹೇಳಿಕೊಳ್ಳುವವ

ರೊಬ್ಬರು ನೀರಿನ ಮೇಲೆ ನಡೆಯುತ್ತೇನೆಂದರೆ ಅದನ್ನು ಅಕ್ಷರಶಃ ನಂಬುವ ವಿದ್ಯಾವಂತರೆಷ್ಟು ಜನ! ಶ್ರೀ ನೀರದ ಚೌಧರಿಯವರು ತಮ್ಮ "Hindu Mind" ಗ್ರಂಥದಲ್ಲಿ ಹೇಳಿದ ಮಾತು ನಿಜವೇನೋ ಎನಿಸುತ್ತದೆ. ಈ ದೇಶದ ಹವಾಗುಣದಿಂದಾಗಿ ನಮಗೆ ವಾಸ್ತವಕ್ಕಿಂತ ಕಾಲ್ಪನಿಕವನ್ನು-Fantasticನ್ನು ನಂಬುವುದೇ ಸುಖವೆನಿಸುತ್ತದೆಂದು ಅವರು ಹೇಳುತ್ತಾರೆ. ನಮ್ಮ ತತ್ವಜ್ಞಾನದಲ್ಲಿ ಪ್ರಾಚೀನದಿಂದಲೂ ಬುದ್ಧಿವಿರೋಧಿ ಎಳೆಯೊಂದು ಇದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು 'ಪ್ರಜ್ಞಾವಾದಾಂಶ್ಚ ಭಾಷಸೇ' ಎಂದು ಆಕ್ಷೇಪಿಸುತ್ತಾನೆ. 'ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ' ಎಂದು ಕೊನೆಗೆ ವಿಧಿಸುತ್ತಾನೆ. ಇದು Intellectualismನ ವಿರುದ್ಧ ಎಚ್ಚರಿಕೆಯಾಗಿದೆ. 'ನ ಬುದ್ಧಿಭೇದಂ ಜನಯೇತ್ ಅಜ್ಞಾನಾಂ ಕರ್ಮಸಂಗಿನಾಂ' ಎಂದು ಕೃಷ್ಣ ಉಪದೇಶಿಸುತ್ತಾನೆ. ಸಾಮಾನ್ಯರ ತಲೆಯಲ್ಲಿ ಇಲ್ಲದ ಸಂಶಯಗಳನ್ನು ಹುಟ್ಟಿಸಬೇಡ! ಆದರೆ ಬೌದ್ಧಿಕರ ಕೆಲಸವೇ ಸಂಶಯಗಳನ್ನು ಹುಟ್ಟಿಸುವುದಾಗಿದೆ. ಅದಿಲ್ಲದೆ ಯಾವ ಬದಲಾವಣೆಯೂ ಸಾಧ್ಯವಿಲ್ಲ.

ನಮ್ಮ ದೇಶಕ್ಕಿಂದು ಬದಲಾವಣೆ ಬೇಕಾಗಿದೆ. ಇದನ್ನು ಬೌದ್ಧಿಕರು ಮಾತ್ರವೇ ತರಬಲ್ಲರು. ಇಂದಿನ ಈ ವಿಪನ್ನ ಪರಿಸ್ಥಿತಿಯ ಮೂಲವೆಲ್ಲಿದೆಯೆಂದು ನಿಚ್ಚಳವಾಗಿ ವಿಚಾರಿಸುವ ಮತ್ತು ನಿರ್ಭಯವಾಗಿ ಪ್ರಚಾರಿಸುವ ಕಾರ್ಯವನ್ನು ಬೌದ್ಧಿಕರು ಹೊಚ್ಚ ಹೊಸದಾಗಿ ಪ್ರಾರಂಭಿಸಬೇಕು. ಬೌದ್ಧಿಕರಿಗೆ ಇಂದು ಇರುವ ಒಂದು ದೊಡ್ಡ ಕೊರತೆಯೆಂದರೆ ಅವರ ವಿಚಾರ ಶಕ್ತಿಯು ಹೆಚ್ಚಾಗಿ ಓದಿನ ಮೂಲಕ ಪ್ರಚೋದಿತವಾಗಿರುವುದು. ಈ ಓದಿನ ಸಾಮಗ್ರಿ ಬಹುಶಃ ವಿದೇಶೀಯವಾಗಿದೆ. ನಾವು ಪ್ರಶ್ನಿಸುವ ಅಭ್ಯಾಸವನ್ನು ವಿದೇಶೀಯರಿಂದ ಅಂಟಿಸಿಕೊಂಡದ್ದು ಸರಿ. ಆದರೆ ಪ್ರಶ್ನೆಗಳು ನಮ್ಮವೇ ಆಗಿರಬೇಕು, ಉತ್ತರಗಳೂ ನಮ್ಮವೇ ಆಗಿರಬೇಕು. ನಾವು ಈವರೆಗಿನ ನಮ್ಮ ಪ್ರೀತಿಯ ನಂಬಿಕೆಗಳನ್ನು ಪುನಃ ಒರೆಗಲ್ಲಿಗೆ ಹಚ್ಚಬೇಕಾಗಿದೆ. ಒರೆಗಲ್ಲೂ ನಮ್ಮದೇ ಆಗಬೇಕು.

ಬೌದ್ಧಿಕನು ನಮ್ಮ ದೇಶದಲ್ಲಿ ಇಂದು ಬಿಡಿಸಬೇಕಾದ ಸಮಸ್ಯೆಗಳು ಅನೇಕವಾಗಿವೆ. ಜಾತಿಯ ಪದ್ಧತಿಯನ್ನು ಇಂದು ಎಲ್ಲರೂ ನಿಂದಿಸಿದರೂ ಜಾತಿಗಳು ಇನ್ನೂ ಬಲವಾಗಿರುವುದೇಕೆ? ಯಾವ ಶಕ್ತಿಗಳು ಅದಕ್ಕೆ ಜೀವದಾನ ಮಾಡುತ್ತಿವೆ? ನಾವೆಲ್ಲರೂ ರಾಷ್ಟ್ರೀಯ ಭಾವೈಕ್ಯದ ಹೆಸರಲ್ಲಿ ಕೂಗುತ್ತಿದ್ದರೂ ಪ್ರಾದೇಶಿಕ ಹಟವಾದ ಹೆಚ್ಚುತ್ತಿರುವುದೇಕೆ? ಶಿವಸೇನೆಗಳಂಥ ಚಳವಳಿಗಳು ಬಲಪಡುತ್ತಿರುವುದೇಕೆ? ಇಂಥ ಸಮಸ್ಯೆಗಳ ಕಡೆಗೆ ಬೌದ್ಧಿಕರಾದ ನಾವು ತೋರಿಸುವ ಪ್ರತಿಕ್ರಿಯೆ ಭಾವನಾತ್ಮಕವಾಗಿರುತ್ತವೆ ಹೊರತು ವಸ್ತುನಿಷ್ಠವಾಗಿರುವುದಿಲ್ಲ. ಉದಾಹರಣೆಗೆ ಮಹಾರಾಷ್ಟ್ರದೊಡನೆ ನಮ್ಮ ಗಡಿ ಸಮಸ್ಯೆಯಲ್ಲಿ ಅಡಕವಾದ ನಿಜವಾದ ಬಲಾಬಲಗಳೇನು? ರಾಷ್ಟ್ರೀಯ ಮಟ್ಟದಲ್ಲಿಯೂ ಕಾಶ್ಮೀರ ಸಮಸ್ಯೆಯಂಥ ಕಗ್ಗಂಟುಗಳ ವಿಷಯದಲ್ಲಿ ಬೌದ್ಧಿಕರು ವಸ್ತುನಿಷ್ಠವಾಗಿ ಪ್ರತಿಕ್ರಿಯೆ ತೋರಿಸುವುದಿಲ್ಲ. ಸುಳ್ಳು ದೇಶಭಕ್ತಿ, ಸುಳ್ಳು ಪ್ರಾಂತಾಭಿಮಾನಗಳು ನಮ್ಮ ವಸ್ತುನಿಷ್ಠತೆಯನ್ನು ಹಾಳುಮಾಡುತ್ತವೆ. ೩೦ ವರ್ಷದ

ಅವಧಿಯಲ್ಲಿ ಬ್ರಿಟಿಷ್ ಜನಾಂಗದಲ್ಲಿ ತನ್ನ ಸಾಮ್ರಾಜ್ಯವನ್ನು ಪೂರ್ತಿಬಿಟ್ಟುಕೊಡುವ ಮನೋಭಾವವನ್ನು ಸೃಷ್ಟಿಸುವುದರಲ್ಲಿ ಬ್ರಿಟಿಷ್ ಬೌದ್ಧಿಕರು ವಹಿಸಿದ ಪಾತ್ರ ಹೊಗಳ ತಕ್ಕಂಥದು.

ಸಾಹಿತ್ಯವು ಬೌದ್ಧಿಕತೆಯ ಆಧಾರವೂ ಹೌದು, ಪರಿಣಾಮವೂ ಹೌದು. ನಮ್ಮ ಪ್ರಥಮ ಬೌದ್ಧಿಕ ಜಾಗೃತಿಯ ಸಂಗಡವೇ ಹುಲುಸಾದ ಹೊಸ ಸಾಹಿತ್ಯದ ಸೃಷ್ಟಿಯಾಯಿತು. ಮಹಾ ವಿಚಾರಗಳು ಶ್ರೇಷ್ಠ ಸಾಹಿತ್ಯಕ್ಕೆ ಪ್ರಚೋದನ ಕೊಡುತ್ತವೆ. ಆ ವಿಚಾರಗಳನ್ನು ಹಬ್ಬಿಸುವುದಕ್ಕೆ ಈ ಸಾಹಿತ್ಯ ಸಾಧನವೂ ಆಗುತ್ತದೆ. ಹೊಸ ಬೌದ್ಧಿಕ ವಾತಾವರಣವನ್ನು ಸೃಷ್ಟಿಸುವಲ್ಲಿ ಸಾಹಿತಿಗಳು ಚಿಂತಕರಾಗಿಯೂ ಕಲಾವಿದರಾಗಿಯೂ ಪಾತ್ರವಹಿಸಬೇಕಾಗಿದೆ. ಸಾಹಿತ್ಯದಲ್ಲಿ ಬಂದದ್ದು ಬುದ್ಧಿಯನ್ನು ಮುಟ್ಟಿದರೆ ಬದಲಾವಣೆಗಳು ಬಿರುಸಾಗಿ ಸಾಧ್ಯ. ನವೀನ ದೃಷ್ಟಿಯ, ನವೀನ ಬೌದ್ಧಿಕ ಮಟ್ಟದ ಸಾಹಿತ್ಯ ಭಾರತದ ಅನೇಕ ಭಾಷೆಗಳಲ್ಲಿ ಇಂದು ಸೃಷ್ಟಿಯಾಗುತ್ತಿದೆ. ಆದರೆ ಅದನ್ನು ಜನ ಸ್ವೀಕರಿಸುವುದು ಸಾವಕಾಶವಾಗುತ್ತಿದೆ. ಬುದ್ಧಿಯಿಂದ ಮಾತ್ರ ಸ್ಪರ್ಶಿಸಲು ಬರುವ ವಿಚಾರಗಳ ಕಡೆ ಜನರನ್ನು ಸೆಳೆಯುವ ಕೆಲಸವನ್ನೂ ಇಂದು ಸಾಹಿತಿ ಮಾಡಬೇಕಾಗಿದೆ.

■

# ಮಾನವ ಪ್ರವೃತ್ತಿ ಮತ್ತು ಮೌಲ್ಯಗಳು

೧

'ಪ್ರವೃತ್ತಿ' ಮತ್ತು 'ಮೌಲ್ಯ' ಇವೆರಡೂ ತುಂಬ ತೊಡಕಾದ ಮತ್ತು ವಿವಾದಾತ್ಮಕ ಕಲ್ಪನೆಗಳು. ಇವುಗಳನ್ನು ಇಂಗ್ಲಿಷಿನ instinct ಮತ್ತು value ಎಂಬ ಪದಗಳಿಗೆ ಸಮಾನಾರ್ಥಕವಾಗಿ ಪ್ರಯೋಗಿಸಲಾಗಿದೆ. ಪ್ರವೃತ್ತಿಯನ್ನು ಭಾರತೀಯರು ಪ್ರಕೃತಿಯೆಂದೂ ಕರೆದಿದ್ದಾರೆ. "ನೀನು ವೈಚಾರಿಕ (ಪ್ರಜ್ಞಾವಾದ ಎಂಬುದು ಇಲ್ಲಿ ಬಳಸಿದ ಶಬ್ದ) ಮಾರ್ಗದಿಂದ ಯಾವ ಬಗೆಯಲ್ಲಿ ಬೇಕು-ಬೇಡಗಳನ್ನು ತೀರ್ಮಾನಿಸಿದರೂ ಪ್ರಕೃತಿ ನಿನ್ನನ್ನು (ನೀನೆಣಿಸಿದ ದಾರಿಗಳಲ್ಲಿ) ತಳ್ಳಿಯೇ ತಳ್ಳುತ್ತದೆ" ಎಂದು ಕೃಷ್ಣ ಭಗವದ್ಗೀತೆಯಲ್ಲಿ ಹೇಳುವಾಗ ಪ್ರಕೃತಿಯನ್ನು ಮೂಲಪ್ರವೃತ್ತಿ ಎಂಬರ್ಥದಲ್ಲಿ ಪ್ರಯೋಗಿಸಿದ್ದಾನೆ. ಹಿಂದಿನವರು ಈ ಮೂಲಪ್ರವೃತ್ತಿಗಳನ್ನು 'ಆಹಾರ ನಿದ್ರಾಭಯ ಮೈಥುನ' ಎಂಬ ಕವಲುಗಳಾಗಿ ಹೆಸರಿಸಿ ಇವು ಮನುಷ್ಯನಿಗೂ ಪಶುಗಳಿಗೂ ಸಮಾನವೆಂದು ಹೇಳಿದರು. ಮನುಷ್ಯ ಇವುಗಳನ್ನು ಮೀರಿನಿಂತು ತನ್ನ ನಡವಳಿಕೆಯನ್ನು ರೂಪಿಸಿಕೊಳ್ಳಬೇಕು—ಎಂದು ಒಂದು ಸುಭಾಷಿತ ಉಪದೇಶಿಸಿದೆ. ಆಧುನಿಕ ಕಾಲದಲ್ಲಿ ನಾವು ಮೌಲ್ಯ ಎಂದು ಕರೆಯುವುದು ಈ ಮೀರಿ ನಿಲ್ಲುವುದಕ್ಕೆ ಸಂಬಂಧಿಸಿದ ತತ್ವಗಳೇ. ಹಿಂದಿನವರು ಧರ್ಮ ಎಂದು ಇದನ್ನು ಕರೆದರೆಂದು ಸುಮಾರಾಗಿ ಹೇಳಬಹುದು. ಧರ್ಮ ಎಂಬ ಶಬ್ದ ಬಳಕೆಯಲ್ಲಿ ಅನೇಕಾರ್ಥಗಳನ್ನು ಸಂಪಾದಿಸಿ ಅಸ್ಫುಟವಾಗಿರುವುದರಿಂದ, ನಿಖರತೆಯನ್ನು ಕಳೆದುಕೊಂಡಿರುವುದರಿಂದ 'ಮೌಲ್ಯ' ಎಂಬ ಹೊಸ ಶಬ್ದವನ್ನು ಪ್ರಯೋಗಿಸುವುದಾಗಿದೆ. 'ಧಾರಯತಿ ಇತಿ ಧರ್ಮಃ' ಎನ್ನುವುದೇ ಅಳತೆಕೋಲಾಗಿದ್ದರೆ ಧರ್ಮ ಎಂಬ ಶಬ್ದ ಬಳಸಿದರೂ ತಪ್ಪಿಲ್ಲ. ಯಾಕೆಂದರೆ ಅಂತಿಮ ತಾತ್ಪರ್ಯದಲ್ಲಿ value ಅಥವಾ ಮೌಲ್ಯಧಾರಣೆ, ಎತ್ತಿಹಿಡಿಯುವುದು, ನಿಲ್ಲಿಸಿ ಮುನ್ನಡೆಸುವುದು ಎಂಬುದಕ್ಕಾಗಿಯೆ ಇದೆ.

ಪ್ರವೃತ್ತಿ ಎಂಬುದು ಪ್ರಕೃತಿಗೆ ಸಂಬಂಧಿಸಿದ್ದರೆ ಮೌಲ್ಯ ಎಂಬುದು ಸಂಸ್ಕೃತಿಯ ಕೋಟೆಗೆ ಸೇರಿದ್ದು. ಆದರೆ, ಇವೆರಡೂ ನಾವು ಬಯಸುವಷ್ಟು ಪರಸ್ಪರ ಭಿನ್ನ ಪದಾರ್ಥಗಳಲ್ಲ. Instinct ಎಂಬುದರ ಅರ್ಥವೇ ವಿಜ್ಞಾನಿಗಳಲ್ಲಿಯೂ ಚಿಂತಕರಲ್ಲಿಯೂ ವಿವಾದಗಳಿಂದ ಜಟಿಲವಾಗಿದೆ. ಪ್ರಕೃತಿ ಅಥವಾ ಪ್ರವೃತ್ತಿ ಎಂಬುದು ನಮ್ಮ ನಮ್ಮ ಜೈವಿಕ ಭೂತಕಾಲದಲ್ಲಿ ಬೇರುಬಿಟ್ಟಿದ್ದು. ಒಂದು ಜೈವಿಕ ವ್ಯಕ್ತಿ (Individual)ಯ ಭೂತಕಾಲದ ಅನುಭವದಿಂದ ಕಲುಷಿತವಾಗದೆ ಆ ವ್ಯಕ್ತಿಯ ಮೂಲಸ್ವಭಾವದಲ್ಲೇ ಇದ್ದುಕೊಂಡ ಗುಣ

ಅಥವಾ ಗುಣಗಳು ಪ್ರವೃತ್ತಿಗಳು ಎನ್ನಲಾಗುತ್ತದೆ. ಅದು ತಂತಾನೇ ಜೈವಿಕ ವ್ಯಕ್ತಿಯನ್ನು ಕ್ರಿಯೆಗೆ ಪ್ರಚೋದಿಸುತ್ತದೆ. ಕೋಳಿಮರಿ ತತ್ತಿಯಿಂದ ಹೊರಬಂದೊಡನೆ ತಾಯಿಯನ್ನು ಅನುಸರಿಸಿ ಹೋಗತೊಡಗುವುದು ಪ್ರವೃತ್ತಿ. ಅದು 'ಕುರುಡು'. ಯಾಕೆಂದರೆ ಕೋಳಿಮರಿ ತಾಯಿಯನ್ನೆ ಅನುಸರಿಸುತ್ತದೆ ಅನ್ನುವಂತಿಲ್ಲ. ಅದು ತಾಯಿಯಲ್ಲದಿದ್ದರೆ ಯಾವೊಂದು ಚಲಿಸುವ ವಸ್ತುವನ್ನೂ ಬೆಂಬತ್ತಿ ಹೋಗುತ್ತದೆ. ಅದೇ ಕಣ್ಣು ತೆರೆದ ನಾಯಿಮರಿಗಳೂ ಯಾವೊಂದು ಚಲಿಸುವ ವಸ್ತುವನ್ನೂ ಬೆಂಬತ್ತಿ ಹೋಗುತ್ತವೆ. ಹುಟ್ಟಿದೊಡನೆ ನಾಯಿಮರಿ ತಾಯಿಯ ಮೊಲೆಯುಣ್ಣುವುದೂ ಹಿಂದಿನ ಅನುಭವ ಅಥವಾ ಕಲಿಕೆಯಿಂದ ಪ್ರೇರಿತವಾಗದ ಪ್ರಾಕೃತಿಕ ಪ್ರವೃತ್ತಿಯೇ. ಅದರಿಂದ ಹೊಟ್ಟೆ ತುಂಬುವುದೆಂಬ ಅನುಭವ ಆಮೇಲೆ ಬರತಕ್ಕದ್ದು. ಅತ್ತ ಮರಿಗೆ ಮೊಲೆಯುಣ್ಣಿಸುವುದೂ ಅದನ್ನು ವಿಪತ್ತುಗಳಿಂದ ರಕ್ಷಿಸುವುದೂ ತಾಯಿನಾಯಿಯ ಪ್ರಕೃತಿಯಲ್ಲೇ ನಿಹಿತವಾದ ಪ್ರವೃತ್ತಿ. ಮೊಲೆಯುಣ್ಣುವುದನ್ನು 'ಆಹಾರ' ಪ್ರವೃತ್ತಿಯೆಂದರೆ ಮೊಲೆಯೂಡಿಸುವುದನ್ನು ಮಾತೃತ್ವದ ಪ್ರವೃತ್ತಿ ಎನ್ನುತ್ತೇವೆ.

ಇದಕ್ಕೆ ವಿರುದ್ಧವಾಗಿ ಜೀವಿ ಈ ಜಗತ್ತಿನಲ್ಲಿ ವ್ಯಕ್ತಿಯಾಗಿ ಬಾಳತೊಡಗಿದ ಮೇಲೆ ಬಂದ ಅನುಭವದಿಂದ ಪಾಠ ಕಲಿತು ಪರಿಸರಕ್ಕೆ ತನ್ನನ್ನು ಒಗ್ಗಿಸಿಕೊಳ್ಳುವುದು ಸಂಸ್ಕಾರ. ಕುರುಡು ಆಹಾರ ಪ್ರವೃತ್ತಿಯಿಂದ ಮಗು ಪ್ರಾರಂಭದಲ್ಲಿ ಎಲ್ಲವನ್ನೂ ಬಾಯಲ್ಲಿ ತುರುಕಿಸುತ್ತದೆ. ಆದರೆ ಅದರಿಂದ ಪುಷ್ಟಿಯಾಗಲಿ ತುಷ್ಟಿಯಾಗಲಿ ಇಲ್ಲವೆಂದು ಅನುಭವಕ್ಕೆ ಬಂದ ಮೇಲೆ ಅದು ಆಯ್ಕೆಗಳನ್ನು ಆರಂಭಿಸುತ್ತದೆ.

ಎಲ್ಲ ಪ್ರವೃತ್ತಿಗಳ ಮೂಲವನ್ನು ಒಂದೇ ತತ್ವದಲ್ಲಿ ಹೇಳಬೇಕಾದರೆ 'ಬದುಕು'ವುದು ಎನ್ನಬೇಕಾಗುತ್ತದೆ. ಇದನ್ನು ಆಹಾರ-ನಿದ್ರಾ-ಭಯ-ಮೈಥುನವೆಂದಾದರೂ ವಿಂಗಡಿಸಿರಿ, ಮಾತೃತ್ವ ಮತ್ತಿತರ ತಲೆಕಟ್ಟುಗಳನ್ನು ಬೇಕಾದರೆ ಸೇರಿಸಿರಿ, ಎಲ್ಲದರ ಮೂಲ ಬದುಕುವುದು. ಯಾವ ಜೀವವೂ ಇದ್ದಂತಿರಲಾರದು. ಬದುಕುವುದೆಂದರೆ ಆಗುತ್ತಿರುವುದು ಅಂದರೆ ಬೆಳೆಯುವುದು. ಇದಕ್ಕಾಗಿ ಆಹಾರ-ಅನ್ನ. ಬದುಕು ಅಂದರೆ ಚಟುವಟಿಕೆ. ಚಟುವಟಿಕೆ ಅಂದರೆ ಶ್ರಮ. ಶ್ರಮದ ನಂತರ ವಿಶ್ರಾಮ. ಅದೇ ನಿದ್ದೆ. ಭಯ ಎಂಬುದು ಬದುಕುವುದಕ್ಕೆ ಅತ್ಯಗತ್ಯವಾದದ್ದು. ಅದಿಲ್ಲದೆ ಜೀವಿಗಳು ಸ್ವಲ್ಪ ಕಾಲವೂ ಬದುಕಲಾರವು. ಮೈಥುನವೆಂಬುದು, ಮೃತ್ಯುವಿಗೆ ಬದುಕು ಕಂಡುಹಿಡಿದ ಉತ್ತರ. ಯಾವ ಜೀವಿಯೂ ಚಟುವಟಿಕೆಯ ಸಹಜ ಪರಿಣಾಮವಾದ ವಾರ್ಧಕ್ಯ ಮೃತ್ಯುಗಳಿಂದ ತಪ್ಪಿಸಿಕೊಳ್ಳಲಾರದಾದ್ದರಿಂದ ಜೀವಿ ತನ್ನನ್ನು ತನ್ನ ಸಂತಾನದ ಮೂಲಕ ಚಿರಂತನವಾಗಿಸಿಕೊಳ್ಳುತ್ತದೆ. 'ಆತ್ಮಾ ವೈ ಪುತ್ರನಾಮಾಸಿ' ತಾನೇ ತನ್ನ ಮಗ. ತನ್ನನ್ನು ತನ್ನಾಚೆಗೆ ದಾಟಿಸಿಕೊಂಡು ಹೋಗುವುದು ಬದುಕಿನ ವಿಸ್ತರಣೆಯ ತುಂಬಾ ಅಪಾಯಕರ ಕಾರ್ಯವಾದ್ದರಿಂದ ಅದರ ಉಪಕರಣವಾದ ಮೈಥುನದ ಪ್ರವೃತ್ತಿ ಅತ್ಯಂತ ಪ್ರಬಲವಾಗುತ್ತದೆ. ಮಾತೃಪ್ರೇಮದ ಪ್ರವೃತ್ತಿ ಕೂಡಾ ಕೆಲವೇಳೆ ಅಷ್ಟೇ ಉಗ್ರವಾಗಿರುವುದು. ಮೈಥುನ ಪ್ರವೃತ್ತಿಯದೇ ಒಂದು ಮುಖ. ತನ್ನದೇ ಒಂದು ತುಣುಕಿಗೆ ಸ್ವತಂತ್ರವಾಗಿ ಬದುಕುವ ಶಕ್ತಿ ಬರುವವರೆಗೆ ನಿಸರ್ಗದಲ್ಲಿ ಮಾತೃತ್ವದ ಪ್ರವೃತ್ತಿ ಕೆಲಸ

ಮಾಡುತ್ತದೆ. 'ಕುಪುತ್ರೋ ಜಾಯೇತ ಕ್ವ ಚಿದಪಿ ಕುಮಾತಾ ನ ಭವತಿ' ಎಂಬುದು ಮನುಷ್ಯೇತರ ಪ್ರಾಣಿಗಳಲ್ಲಿ ಸಂತಾನದ 'ರೆಕ್ಕೆ ಬಲಿಯುವ'ವರೆಗೆ ಮಾತ್ರ ಜಾಗ್ರತವಾಗಿರುವಂತಾದ್ದು. ಕೆಲಕೀಟಗಳಲ್ಲಿ ಮಾತೃತ್ವದ ಪ್ರವೃತ್ತಿ ತತ್ತಿಯಿಡುವುದರೊಡನೆ ಮುಕ್ತಾಯವಾಗುತ್ತದೆ. ಕೆಲ ಜಲಚರಗಳಲ್ಲಿ ಗಂಡೇ ಮಾತೃತ್ವದ ಜವಾಬ್ದಾರಿ ನಿರ್ವಹಿಸುತ್ತದೆ. ಕೆಲಪ್ರಾಣಿಗಳಲ್ಲಿ ಕಾಣಿಸುವ ಪರಸ್ಪರ ಸಹಕಾರ, ಸಹಾಯ ಮೊದಲಾದ ಪ್ರವೃತ್ತಿಗಳನ್ನು ಕೂಡ ನಾವು ಸ್ವಲ್ಪ ದೂರದಿಂದಲಾದರೂ ಬದುಕುವ (survival) ಆದ್ಯ ಪ್ರವೃತ್ತಿಗೇ ಜೋಡಿಸಬಹುದು. ವೈಯಕ್ತಿಕ ಚಿರಂಜೀವಿತ್ವಕ್ಕೆ ಸ್ವಂತದ್ದಾಗಲಿ, ವ್ಯಕ್ತಿಯ ಸ್ವಸಂತತಿ ಮೂಲಕದ್ದಾಗಲಿ ನಿಸರ್ಗದಲ್ಲಿ ಎಷ್ಟು ಬೆಲೆ ಉಂಟೋ ನಾ ಕಾಣೆ. ಸಂಘ ಜೀವಿಗಳಾದ ಇರುವೆ, ಜೇನ್ನೊಣ ಮೊದಲಾದುವುಗಳ ಬದುಕು ನೋಡಿದರೆ ಅವು ಮಾಡುವ ವೈಯಕ್ತಿಕ ಬಲಿದಾನಗಳನ್ನು ಕಂಡರೆ, ನಿಸರ್ಗ ಲೆಕ್ಕಕ್ಕೆ ತೆಗೆದುಕೊಳ್ಳುವುದು ವ್ಯಕ್ತಿಗಳ ಉಳಿಗಾಲವನ್ನಲ್ಲ, ಜಾತಿಯ ಉಳಿಗಾಲವನ್ನು ಎಂದೇ ಅನಿಸುತ್ತದೆ. ವಿಕಾಸದ ಮೇಲಂತಸ್ತುಗಳಲ್ಲಿರುವ ಜೀವಿಗಳಲ್ಲಿ ಸಹಕಾರ, ಆತ್ಮ ಸಮರ್ಪಣೆ ಕಂಡು ಬಂದರೆ ಅದನ್ನು ಕೂಡ ನಾವು ಈ ಜಾತಿ ರಕ್ಷಣೆಯ ಧ್ಯೇಯಕ್ಕೇ ತಳಕು ಹಾಕಬೇಕಾಗುತ್ತದೆ.

ಮನೋವಿಜ್ಞಾನಿಗಳು ವಿಶೇಷವಾಗಿ ಗಮನಿಸುವ ಇನ್ನೊಂದು ಸಹಜ ಪ್ರವೃತ್ತಿಯಾದ ಆಕ್ರಮಣ ಪ್ರವೃತ್ತಿ ಕೂಡ ಆತ್ಮರಕ್ಷಣೆ ಮತ್ತು ವಿಕಾಸವಾದಿಗಳು ಹೇಳುವ ಸಮರ್ಥರ ಉಳಿಗಾಲಕ್ಕೆ ಸಂಬಂಧಿಸಿದ್ದು. ಅದೂ ಕೊನೆಗೆ ಕುಲ ಅಥವಾ ಜಾತಿ ಬದುಕುಳಿಯುವುದರೊಡನೆಯೆ ತಳಕು ಬಿದ್ದದ್ದಾಗಿದೆ. ಮಾಂಸಾಹಾರಿ ಪ್ರಾಣಿಗಳಲ್ಲಿ ಅದು ಆಹಾರ ಸಂಪಾದನೆಗೂ ಅಗತ್ಯ. ಸಂಪಾದಿಸಿದ್ದನ್ನು ತನಗಾಗಿಯೆ ಉಳಿಸಿಕೊಳ್ಳಲು ಮತ್ತು ಗುಂಪಿನಲ್ಲಿ ಹೆಚ್ಚು ತ್ರಾಣವುಳ್ಳದ್ದಕ್ಕೆ ಹೆಚ್ಚಿನ ಪಾಲು ಪಡೆಯಲು ಕೂಡ ಅದು ಸಹಾಯಮಾಡುತ್ತದೆ. 'ಸಿಂಹದ ಪಾಲು' ಎನ್ನುವ ಮಾತು ಬಂದದ್ದು ಇದಕ್ಕಾಗಿಯೆ. ಆಕ್ರಮಣ ಪ್ರವೃತ್ತಿ ಪ್ರಯೋಜನಕ್ಕೆ ಬರುವ ಇನ್ನೊಂದು ಸನ್ನಿವೇಶವೆಂದರೆ ಮೈಥುನ. ಹೆಣ್ಣನ್ನು ಉಪಭೋಗಿಸುವ ಅಧಿಕಾರಕ್ಕಾಗಿ ಒಂದೇ ಜಾತಿಯ ಲಭ್ಯ ಗಂಡುಗಳಲ್ಲಿ ನಡೆಯುವ ಕಚ್ಚಾಟದ ಮೂಲಕ ಅತ್ಯಂತ ಸಮರ್ಥಗಂಡಿನಿಂದಲೇ ಸಂತಾನೋತ್ಪಾದನೆ ಆಗಬೇಕೆಂಬ ಉದ್ದೇಶ ಫಲಿಸುತ್ತದೆ. ಅದು ಕುಲದ ಅಥವಾ ಜಾತಿಯ ಮುಂದಿನ ಪೀಳಿಗೆಗಳು ಸಾಧ್ಯವಿದ್ದಷ್ಟು ಬಲಿಷ್ಠವಾಗಿ ಮುಂದುವರಿಯಬೇಕೆಂಬುದಕ್ಕಾಗಿ.

ಪ್ರಾಣಿಗಳಲ್ಲಿ ಇನ್ನೂ ಅನೇಕ ಪ್ರವೃತ್ತಿಗಳನ್ನು ಗುರುತಿಸಬಹುದು. ಆದರೆ ಅವೆಲ್ಲವೂ ಜೀವಿಯ ಅಥವಾ ಅದರ ಜಾತಿಯ ಉಳಿಗಾಲ ಮತ್ತು ಶಾಶ್ವತೀಕರಣಕ್ಕೇ ಲಗತ್ತಾಗಿವೆಯೆಂದು ತೋರಿಸಲು ಸಾಧ್ಯವುಂಟು.

ಈ ಅಂಶಗಳನ್ನು ಇಷ್ಟು ವಿಸ್ತಾರವಾಗಿ ಚರ್ಚಿಸುವ ಉದ್ದೇಶವೆಂದರೆ, ಮನುಷ್ಯನ ವಿಷಯದಲ್ಲಿ ನಾವು ಯಾವೊಂದು 'ಉದಾತ್ತ' ಮೌಲ್ಯದ ವಿಚಾರ ಮಾಡುವಾಗ ಆತನೂ ಮೂಲತಃ ಒಬ್ಬ ಪ್ರಾಣಿಯೆಂಬುದನ್ನು ಮರೆತರೆ ನಡೆಯದು ಎಂಬುದಾಗಿದೆ. 'ಕೆಳಗಿನ'

ಪ್ರಾಣಿಗಳಲ್ಲಿರುವ ಮೂಲ ಪ್ರವೃತ್ತಿಗಳನ್ನು ಅವನೂ ದಾಯವಾಗಿ ಪಡೆದಿದ್ದಾನೆ. ಅವುಗಳ ಸಹಜತ್ವವನ್ನೂ ಪ್ರಾಬಲ್ಯವನ್ನೂ ಕಡೆಗಣಿಸುವ ಯಾವೊಂದು ಮೌಲ್ಯ ಪದ್ಧತಿಯೂ ಯಶಸ್ವಿಯಾಗಲಾರದು; ಯಶಸ್ವಿಯಾದರೆ ಅದು ಮನುಷ್ಯ ಕುಲದ ಮುಂದುವರಿಕೆಗೆ ಹಿತಾವಹವೂ ಆಗಲಾರದು.

ಪ್ರವೃತ್ತಿಗಳು ಜಾರಿಗೆ ಬರುವ 'ಯಂತ್ರ' ಅಥವಾ ಪ್ರಕ್ರಿಯೆ ಯಾವುದು? ಎಂಬುದನ್ನು ಇಲ್ಲಿ ಸಂಕ್ಷಿಪ್ತವಾಗಿ ವಿಚಾರಿಸಬೇಕು. ಜೀವಶಾಸ್ತ್ರ, ಶರೀರ ಶಾಸ್ತ್ರಗಳನ್ನು ಅಭ್ಯಸಿಸಿದವರೂ, ಸಂಶೋಧನೆ ಮಾಡಿದವರೂ ಮೂಲ ಪ್ರವೃತ್ತಿಗಳು ಬಹುತರವಾಗಿ ಬಹಳ ತೇಜಸ್ವಿ ರಾಸಾಯನಿಕ ಸ್ವರೂಪದವುಗಳೆಂದು ಹೇಳುತ್ತಾರೆ. ಆಹಾರ, ನಿದ್ರೆ, ಭಯ ಇವೆಲ್ಲವೂ ರಾಸಾಯನಿಕ ಅಂತಃಸ್ರಾವಗಳಿಂದ ಪ್ರೇರಿತವಾಗುತ್ತವೆ. ಮೈಥುನ ಸಂಬಂಧಿ ಪ್ರವೃತ್ತಿಗಳಿಗೂ ರಾಸಾಯನಿಕಗಳೇ ಚೋದಕಗಳು. ಹೆಣ್ಣು ಬೆದೆಗೆ ಬರುವುದು ರಾಸಾಯನಿಕ ಕ್ರಿಯೆ. ಬೆದೆಗೆ ಬಂದ ಹೆಣ್ಣು ತನ್ನ ಮೈಯಿಂದ ಸೂಸುವ ಗಂಧ ರಾಸಾಯನಿಕವೇ. ಅದು ಗಂಡಿನ ಘ್ರಾಣೇಂದ್ರಿಯಕ್ಕೆ ತಲುಪಿದಾಗ ಅಪ್ರತಿಭಟನೀಯವಾದ ಮೈಥುನಾಪೇಕ್ಷೆಯನ್ನು ಕೆರಳಿಸುತ್ತದೆಂಬುದೂ ಸಿದ್ಧವಾಗಿದೆ. ಆಕ್ರಮಣ ಪ್ರವೃತ್ತಿಗೆ ಸಂಬಂಧಿಸಿದ ಕ್ರೋಧವೂ ರಾಸಾಯನಿಕ ಪ್ರಚೋದನೆಯಿಂದ ಜಾರಿಗೆ ಬರುತ್ತವೆ. ಇವುಗಳಲ್ಲಿ ಆಹಾರಾಪೇಕ್ಷೆ, ಹೆಣ್ಣಿನಲ್ಲಿ ಕಾಮಾತುರ ಮುಂತಾದವು ಲಯಬದ್ಧವಾಗಿ ಜಾರಿಗೆ ಬರುವುದಾದರೆ ಕ್ರೋಧ, ಆಕ್ರಮಣ ವೃತ್ತಿ ಮೊದಲಾದವುಗಳು ಸನ್ನಿವೇಶವನ್ನು ಅನುಸರಿಸಿ ಜಾರಿಗೆ ಬರಬಹುದು. ಸುದೈವದಿಂದ ಇವೆಲ್ಲ ತಾತ್ಕಾಲಿಕ ಮತ್ತು ತಾತ್ಪೂರ್ತಿಕ ಪ್ರಕ್ರಿಯೆಗಳು. ಆದರೆ ಜಾರಿಯಲ್ಲಿದ್ದಷ್ಟು ಕಾಲ ಅವು ಅತ್ಯಂತ ಶಕ್ತಿಶಾಲಿಗಳು ಮತ್ತು ಏತಕ್ಕಾಗಿ ಅವು ಪ್ರಚೋದಿಸಲ್ಪಟ್ಟವೋ ಆ ಉದ್ದೇಶ ವಿಫಲಿತವಾಗುತ್ತಲೇ ಇದ್ದರೆ ಶರೀರದ ಮತ್ತು ಮನಸ್ಸಿನ ಆರೋಗ್ಯಕ್ಕೆ ಧಕ್ಕೆ ತರಬಲ್ಲವು. ಆಹಾರ ಸಂಬಂಧಿ ರಾಸಾಯನಿಕ ಪ್ರಚೋದನೆಗಳು ಬಹಳ ಸಲ ಅಸಂತೃಪ್ತವಾದರೆ ಅವು ಜಠರ ವ್ರಣಕ್ಕೆ ಕಾರಣವಾಗಬಲ್ಲವು; ಕ್ರೋಧ ಪ್ರಚೋದನೆ ಆಗುತ್ತಲೇ ಇದ್ದರೆ ಮತ್ತು ಅದು ಸಮಾಧಾನ ಹೊಂದದಿದ್ದರೆ ಜಠರ ವ್ರಣಗಳಿಗೋ, ರಕ್ತದ ಒತ್ತಡಕ್ಕೋ ಮಾನಸಿಕ ಅಸಮತೋಲನೆಗೋ ದಾರಿಮಾಡಬಲ್ಲುದು ಇತ್ಯಾದಿ. ಇದನ್ನೆಲ್ಲ ಇಲ್ಲಿ ಹೇಳುವ ಕಾರಣವೆಂದರೆ ಪ್ರವೃತ್ತಿಗಳು ಸ್ವಯಂ ಚೋದಿತವಾಗಿದ್ದು ಅವು ಚೋದನೆ ಹೊಂದುವ ಪ್ರಸಂಗ ಬಂದಾಗ ಚೋದಿತವಾಗದಂತೆ ಮಾಡುವುದು ವ್ಯಕ್ತಿಯ ಕೈಯಲ್ಲಿಲ್ಲ. ಮೌಲ್ಯ ವ್ಯವಸ್ಥೆಯನ್ನು ಕಲ್ಪಿಸುವಾಗ ನಾವು ಇದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಸಹಜ ಪ್ರವೃತ್ತಿಗಳು, ಅವುಗಳ ಸ್ವರೂಪ, ಉದ್ದೇಶಗಳ ಬಗ್ಗೆ ಇಷ್ಟು ಹೇಳಿದ ನಂತರ, ನಿಸರ್ಗದಲ್ಲಿ ಈ ಅತ್ಯಂತ ಪ್ರತಾಪಿಗಳಾದ ಕಾರಕಗಳಿಗೆ ನಿಸರ್ಗವೇ ಯೋಜಿಸಿದ ಲಗಾಮು ಅಥವಾ ಬಿರಿ (ಬ್ರೇಕ್)ಗಳನ್ನು ಅರ್ಥ ಮಾಡಿಕೊಳ್ಳಬೇಕು. ಉದಾಹರಣೆಗೆ, ಪ್ರಾಣಿಯ ವೈಯಕ್ತಿಕ ಉಳಿಗಾಲ. ಬೆಳೆಗಾಲಗಳಿಗಾಗಿ ಇರುವ ಆಕ್ರಮಣವೃತ್ತಿ ಕುಲ ಅಥವಾ ಜಾತಿಯ ವಿನಾಶದಲ್ಲಿ ಪರಿಣಮಿಸದಂತೆ ಪ್ರಾಣಿಯ ಪ್ರವೃತ್ತಿಯಲ್ಲೇ ಹೆಚ್ಚಾಗಿ

ನಿಗ್ರಹಗಳನ್ನು ನಿಸರ್ಗ ಇಟ್ಟಿದೆ. ಆಹಾರ ಅತ್ಯಂತ ಅವಶ್ಯವೂ ದುರ್ದಮ್ಯವೂ ಆದ ಪ್ರವೃತ್ತಿ. ಆದರೆ ಕೆಲವೇ ಪ್ರಾಣಿಜಾತಿಗಳಲ್ಲಿ ಹೊರತು ಹಸಿವಾಗಿದೆಯೆಂಬುದಕ್ಕೆ ಸ್ವಜಾತಿಯನ್ನು ಕೊಂದು ತಿನ್ನುವುದನ್ನು ನಾವು ಪ್ರಾಣಿಗಳಲ್ಲಿ ಕಾಣುವುದಿಲ್ಲ. ಆಕ್ರಮಣ ಪ್ರವೃತ್ತಿ ಉಗ್ರವಾದದ್ದು. ಆದರೂ ಸ್ವಜಾತಿಯೊಳಗೆ ನಡೆಯುವ ಕದನಗಳಲ್ಲಿ ಪ್ರಾಣಿಗಳು ಜಾತಿ ಬಾಂಧವರನ್ನು ಕೊಲ್ಲುವುದು ಅಪರೂಪ. ಸ್ತ್ರೀ ಪ್ರಾಣಿಯ ವಿರುದ್ಧ ಸ್ವಜಾತಿಯ ಪುರುಷ ಪ್ರಾಣಿಗಳು ಆಕ್ರಮಣ ಮಾಡುವುದೂ ವಿರಳ (ಈ ವಿಷಯವನ್ನು ನಾನು 'ಮಾನವಿಕ ಕರ್ನಾಟಕ' ೮-೬ ರಲ್ಲಿ ಸ್ವಲ್ಪ ವಿವರವಾಗಿ ಚರ್ಚಿಸಿದ್ದೇನೆ) ಈ ಮತ್ತು ಇಂಥ ನಿಗ್ರಹಗಳು (Inhibitions) ವಿಶೇಷತಃ ವಿಕಾಸ ಶ್ರೇಣಿಯಲ್ಲಿ ಮೇಲುಸ್ತರದ ಅನೇಕ ಪ್ರಾಣಿಗಳಲ್ಲಿರುವುದನ್ನು ಅಧ್ಯಯನಗಳಲ್ಲಿ ಕಂಡುಕೊಳ್ಳಲಾಗಿದೆ. ಸಾಮಾನ್ಯ ಸ್ಥಿತಿಯಲ್ಲಿ ಹಿಂಸ್ರ ಪ್ರಾಣಿಗಳೆನಿಸಿಕೊಳ್ಳುವ ಮಾಂಸಾಹಾರಿ ಪ್ರಾಣಿಗಳು ಕೂಡ ತಮ್ಮ ಹೊಟ್ಟೆಗೆ ಬೇಕಾದ್ದಕ್ಕಿಂತ ಹೆಚ್ಚು ಬೇಟೆಯನ್ನು ಕೊಲ್ಲುವುದಿಲ್ಲ. ಅಪವಾದಗಳು ಇಲ್ಲವೆಂದಲ್ಲ. ಅಪವಾದವೂ ನಿಸರ್ಗದ ಒಂದು ನಿಯಮ. ಅಸಾಧಾರಣ ಸನ್ನಿವೇಶಗಳಲ್ಲಿ ಜಾರಿಗೆ ಬಂದು ಒಟ್ಟು ಉಳಿಗಾಲಕ್ಕೆ (survival) ಒಂದು ಕವಲುದಾರಿಯಾಗಿ ಈ ಸ್ವಭಾವ ವೈಪರೀತ್ಯ (behavioural aberration) ಪ್ರಾಣಿ ಪ್ರವೃತ್ತಿಯಲ್ಲಿ ನಿಹಿತವಾಗಿರಲೂಬಹುದು. ಪರಿಸರ ತಾಳಿಕೊಳ್ಳಲಾರದಷ್ಟು ಸಂಖ್ಯಾದಟ್ಟಣೆ ಇರುವ ಸನ್ನಿವೇಶದಲ್ಲಿ ಭಾರತೀಯ ಕಪಿಗಳಲ್ಲಿ ಸ್ವಜಾತಿ ಹತ್ಯೆಯ ಉದಾಹರಣೆಗಳು ಈಚೆಗೆ ಗಮನಿಸಲ್ಪಟ್ಟಿವೆ. ಬಂಧನದಲ್ಲಿರುವ ಇಲಿಗಳಲ್ಲಿಯೂ ಇದು ಗೋಚರವಾಗಿದೆ. ಆದರೆ ಒಟ್ಟಿನಲ್ಲಿ ನಿಸರ್ಗ ಪ್ರಾಣಿ ಪ್ರವೃತ್ತಿಯಲ್ಲಿಟ್ಟ ಉಗ್ರಾಂಶಗಳು ಅಂಕೆ ತಪ್ಪಿ ಘಾತಕವಾಗದಂತೆ ತನ್ನದೇ ತಡೆಗಳನ್ನು ಯೋಜಿಸಿದೆ ಎನ್ನಬೇಕು.

ಆದರೆ ಪ್ರಾಣಿಗಳ ಸ್ವಭಾವದಲ್ಲಿ ನಿಹಿತವಾದ ಉಗ್ರ ಷಡ್ವೈರಿಗಳ ಮೇಲೆ ಇರುವ ಈ ಹಿಡಿತ ಅಥವಾ ನಿಗ್ರಹ ಕೂಡ ಆ ಷಡ್ವೈರಿಗಳಂತೆ ಸ್ವಯಂಚಾಲಿತವಾದದ್ದು. ನಾವು ಇಚ್ಛೆಯೆಂದು ಕರೆಯುವ ವೈಶಿಷ್ಟ್ಯ ಪ್ರಾಣಿಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ಇಲ್ಲ. ಎಲ್ಲವೂ ನಿಸರ್ಗದ ಕರೆಗನುಸಾರವಾಗಿ ನಡೆಯುತ್ತದೆ. ಈ ವ್ಯವಸ್ಥೆ ಗತಾನುಗತಿಕವಾಗಿ ಬದುಕುವುದಕ್ಕೆ ಹೆಚ್ಚು ಗಟ್ಟಿಮುಟ್ಟಾದ ಉಪಾಯವೇನೋ ಸರಿ. ಆದರೆ ಪರಿಸರದ ಆಕಸ್ಮಿಕ ಬದಲಾವಣೆಗಳನ್ನು ಎದುರಿಸುವುದಕ್ಕಾಗಲಿ, ಕುಲವನ್ನು ಕಾಪಾಡುವುದಕ್ಕಿಂತ ಹೆಚ್ಚಿನ ಮೇಲ್ಮೆಗೆ ಏರುವುದಕ್ಕಾಗಲಿ, ಅದು ನೆರವಾಗುವುದಿಲ್ಲ. ಪರಿಸರದ ತೀವ್ರ ವ್ಯತ್ಯಾಸಗಳನ್ನು ಎದುರಿಸುವುದಕ್ಕೆ ಸೃಷ್ಟಿ ನೈಸರ್ಗಿಕ ಆಯ್ಕೆಯ ಉಪಕರಣವನ್ನು ಪ್ರಯೋಗಿಸಿ ಹೊಸ ಹೊಸ ಪ್ರಾಣಿಗಳನ್ನೇ ಉಂಟುಮಾಡಿದಂತೆ ಕಾಣುತ್ತದೆ. ಈ ವಿಧಾನದಲ್ಲಿರುವ ದೌರ್ಬಲ್ಯಗಳಿಂದ ಸೃಷ್ಟಿಯಲ್ಲಿ ಕೆಲಪ್ರಾಣಿಗಳು ನಿರ್ವಂಶವೇ ಆದಾವು. ಹೊಸ ಪ್ರಾಣಿ-ಜಾತಿಗಳು ಹೆಚ್ಚಿನ ಬುದ್ಧಿಶಕ್ತಿಯುಳ್ಳವುಗಳೇ ಆಗಿದ್ದುವೆಂಬ ಗ್ಯಾರಂಟಿ ಇಲ್ಲ. ಬೇಟೆಯಾಡಿ ಬದುಕಲು ರೂಪುಗೊಂಡ ಪ್ರಾಣಿಗಳು ಸಸ್ಯಾಹಾರಿಗಳಿಗಿಂತ ಒಟ್ಟಿನಲ್ಲಿ ಹೆಚ್ಚು ಬುದ್ಧಿಶಾಲಿಗಳಾದವೆಂದು ವಾದಿಸುವವರಿದ್ದಾರೆ. ಆದರೂ ಬುದ್ಧಿಯೆಂದು ನಾವು ಕರೆಯುವ ಗುಣದಲ್ಲಿ ಸಸ್ಯಾಹಾರಿಗಳೇ

ಆದ ವಾನರ ಜಾತಿಗಳು ಮಾಂಸಾಹಾರಿಗಳಿಗಿಂತಲೂ ಮೇಲೆ ಹೋದವೆಂಬುದೂ ಸತ್ಯ. ಏನಿದ್ದರೂ ಪರಿಸರವನ್ನು ತಮಗನುಕೂಲವಾದ ರೀತಿಯಲ್ಲಿ ಬದಲಾಯಿಸುವ ಬುದ್ಧಿಶಕ್ತಿ ಮತ್ತು ಶಾರೀರಿಕ ಬದಲಾವಣೆ ವಾನರಕುಲದಲ್ಲಿ ಮನುಷ್ಯನ ವಿಕಾಸವಾಗುವವರೆಗೂ ದೊರೆಕೊಳ್ಳಲಿಲ್ಲ.

೨

ಮನುಷ್ಯ ವಾನರಕುಲದಿಂದ ಬೇರ್ಪಟ್ಟು ಮೇಲೇರಿ ಬಂದಾಗ, ಶಾರೀರಿಕ ಘಟನೆಯಲ್ಲಿ ನೆಟ್ಟಗೆ ನಡೆಯುವ ಸಾಮರ್ಥ್ಯ ಮತ್ತು ಪ್ರಾಣಿ ಜಗತ್ತಿನಲ್ಲಿ ಸಾಮಾನ್ಯವಾದ ಶರೀರ: ಮಿದುಳಿನ ಗಾತ್ರಗಳ ದಾಮಾಶಯಕ್ಕಿಂತ ಹೆಚ್ಚಿನ ಮಿದುಳಿನ ಪ್ರಮಾಣ ಇವು ಅವನಿಗೆ ಸಿಕ್ಕಿದ ಅಧಿಕ ದಾಯಗಳಾಗಿದ್ದವು. ಈ ಎರಡು ಸೌಕರ್ಯಗಳಿಂದಾಗಿ ಅವನು ತನ್ನ ಸುತ್ತಲ ಪ್ರಾಣಿಗಳೊಡನೆ ನಡೆದ ಜೀವನಸ್ಪರ್ಧೆಯಲ್ಲಿ ಅಧಿಕಾಧಿಕ ಯಶಸ್ಸನ್ನು ಸಂಪಾದಿಸಿದ. ಶರೀರದ ತ್ರಾಣದಲ್ಲಿಯಾಗಲಿ, ಚಲನೆಯ ಚಾಪಲ್ಯದಲ್ಲಿಯಾಗಲಿ, ಸಹಜ ಆಯುಧಗಳಲ್ಲಿಯಾಗಲಿ ಇತರ ಸಸ್ಯಾಹಾರಿ ಅಥವಾ ಮಾಂಸಾಹಾರಿ ಪ್ರಾಣಿಗಳಿಗೆ ಸರಿದೂಗಲಾರದ ಅವನು ಮೊದಲಿನಿಂದಲೂ ತನ್ನ ಬುದ್ಧಿಬಲವನ್ನೇ ಅವಲಂಬಿಸಿ ಬದುಕಿದ; ಅವನ ಕೈಗಳ ರಚನೆ ಬುದ್ಧಿಬಲದ ಆಯುಧವಾಗಿತ್ತು. ಪ್ರಾಚೀನದಿಂದ ಇಂದಿನವರೆಗಿನ ಮಾನವ ತಲೆಬುರುಡೆಗಳನ್ನು ಅಭ್ಯಸಿಸಿದ ಮನುಷ್ಯ ವಿಜ್ಞಾನಿಗಳು ಮನುಷ್ಯನ ಮಿದುಳು ಗಾತ್ರದಲ್ಲಿ ಬೆಳೆದಷ್ಟು ವೇಗವಾಗಿ ಮತ್ತೆ ಯಾವ ಪ್ರಾಣಿಯದೂ ಬೆಳೆದಿಲ್ಲವೆಂದು ಹೇಳುತ್ತಾರೆ. ಅದರ ಗಾತ್ರ ಮಾತ್ರವಲ್ಲ, ಸ್ವರೂಪವೂ ವಿಶಿಷ್ಟರೀತಿಯಲ್ಲಿ ಬದಲಾಯಿತು. ವಿಶೇಷವಾಗಿ ವಿಚಾರಶಕ್ತಿಯ ಅಧಿಷ್ಠಾನವಾದ ಮಿದುಳಿನ ಕಂದುಬಣ್ಣದ ಹೊರ ಆವರಣದ ಬೆಳವಣಿಗೆ ಮಾನವನಿಗೆ ಪೃಥ್ವಿಯಲ್ಲಿ ಅಪ್ರತಿಭಟಿತ ಸ್ಥಾನವನ್ನು ಸಂಪಾದಿಸಿಕೊಟ್ಟಿತು. ಎಲ್ಲದಕ್ಕೆ ಕಳಸವಿಡುವಂತೆ ಭಾಷೆಯನ್ನು ಅವನು ರೂಪಿಸಿಕೊಂಡ.

ಮಾನವನ ಮಿದುಳಿನ ವೈಶಿಷ್ಟ್ಯಗಳನ್ನು ಹಲವು ತರದಲ್ಲಿ ವಿಶ್ಲೇಷಿಸಲಾಗಿದೆ. ಅದರಲ್ಲಿ ಇತರ ಅರಣ್ಯವಾಸಿ ಅಥವಾ ಮೈದಾನವಾಸಿ ಪ್ರಾಣಿಗಳಿಗಿರುವಂತೆ ಶ್ರವಣ ಮತ್ತು ಘ್ರಾಣಾನುಭವಗಳ ವಿಶ್ಲೇಷಣೆ, ನಿಯಂತ್ರಣಗಳಿಗೆ ಸಂಬಂಧಿಸಿದ ಪ್ರದೇಶಗಳಿಗಿಂತ ದೃಷ್ಟಿಯಿಂದ ಬರುವ ಅನುಭವಗಳ ವಿಶ್ಲೇಷಣೆ ಮತ್ತು ನಿಯೋಜನೆಗೆ ಅಧಿಕ ಪ್ರದೇಶವನ್ನು ವ್ಯಾಪಿಸಿದೆ. ಕೈ-ಕಣ್ಣುಗಳ ವ್ಯಾಪಾರಗಳ ಸಂಯೋಜನೆಯ ಭಾಗವೂ ಮಹತ್ವ ಪಡೆದಿದೆ. ಇದಕ್ಕೂ ಮನುಷ್ಯ ಬುದ್ಧಿಯ ಸ್ವರೂಪ ಮತ್ತು ವಿಕಾಸಕ್ಕೂ ಸಂಬಂಧವಿದ್ದಂತೆ ಕಾಣುತ್ತದೆ. ಇಂದ್ರಿಯ ವಾಸನೆಯೆಂದೂ ಜ್ಞಾನದೃಷ್ಟಿಯೆಂದೂ ನಾವು ಹೇಳುವಾಗ ವಿಚಾರಶಕ್ತಿಯನ್ನು ಕಣ್ಣುಗಳಿಗೂ ಇಂದ್ರಿಯ ಪ್ರವೃತ್ತಿಗಳನ್ನು ಮೂಗಿಗೂ ತಳಕುಹಾಕುತ್ತೇವೆ. 'ಮಾತು ಜ್ಯೋತಿರ್ಲಿಂಗ', "First there was the Word" ಎನ್ನುವಾಗ ಭಾಷೆಗೂ ತಿಳುವಳಿಕೆಗೂ ಇರುವ ಸಂಬಂಧವನ್ನು ವ್ಯಂಜಿಸುತ್ತೇವೆ. ಮಾನವ ಮಿದುಳಿನ ಸ್ವರೂಪದಲ್ಲಿಯೂ ಭಾಷೆಯ

ಅಭಿವ್ಯಕ್ತಿ ಉಪಕರಣಗಳಲ್ಲಿಯೂ ಕುರುಹು ತೋರಿಸುವ ಅನೇಕ ಮಾನವ ಮಸ್ತಿಷ್ಕದ ವೈಶಿಷ್ಟ್ಯಗಳನ್ನು ಉಲ್ಲೇಖಿಸಬಹುದು. ಆದರೆ ಅವು ಇಲ್ಲಿ ಅಷ್ಟು ಪ್ರಸ್ತುತವಲ್ಲ. ಮುಖ್ಯವಾಗಿ ಹೇಳಬೇಕಾದ್ದು ಇಷ್ಟೇ: **ವಾಸನಾ** ಶಬ್ದದಿಂದ ನಾವು ಅಭಿಪ್ರಾಯಿಸುವ ಪ್ರವೃತ್ತಿಗಳ ತಾತ್ಕ್ಷಣಿಕ ಪ್ರಭಾವ ಪ್ರೇರಣೆ ವಿಧೇಯತೆಗಳ ಸರಪಳಿ ಕ್ರಿಯೆಯನ್ನು ಹಿಂದಕ್ಕೆ ತಳ್ಳಿ, **ದೃಷ್ಟಿ** ಶಬ್ದದಿಂದ ಪ್ರತೀಯಮಾನವಾಗುವ ಭೂತ-ವರ್ತಮಾನ-ಭವಿಷ್ಯದ್ ಸಂಕಲ್ಪನೆ(concept)ಯ ಸಾಮರ್ಥ್ಯವನ್ನೂ ಅದರಿಂದ ತನ್ನ ವರ್ತನೆಗೆ ನಿಯಂತ್ರಣಗಳನ್ನೂ ಪಡೆಯುವ ಮೂಲಕ ಮನುಷ್ಯನು ಮೆಲ್ಲಮೆಲ್ಲನೆ ಪರಿಸರಕ್ಕೆ ಪ್ರತಿಸ್ಪಂದಿಸುವ ಜೀವಿಯ ನಿಟ್ಟಿನಿಂದ ಪರಿಸರವನ್ನು ಸ್ಪಂದನೆಗೊಳಪಡಿಸುವ ಜೀವಿಯಾಗಿ ಬೆಳೆದನು. ವಿಧೇಯತ್ವದಿಂದ ವಿಧಾಯಕತ್ವಕ್ಕೆ ಆರೋಹಿಸಿದನು.

ಆದರೆ ವಾಸನಾಬಂಧದಿಂದ ಬಿಡುಗಡೆ ಹೊಂದಿ ವಿಚಾರಕ್ಕೆ ಪಟ್ಟಗಟ್ಟಿದ್ದಕ್ಕೆ ಮನುಷ್ಯ ಬೆಲೆ ತೆರಲೇಬೇಕಾಯಿತೆಂದು ನನಗೆ ತೋರುತ್ತದೆ. ಅದೆಂದರೆ ವಾಸನೆಯ ಅಥವಾ ಪ್ರವೃತ್ತಿಯ ಸಂಗಡವೇ ಇದ್ದ ಸ್ವಯಂಚಾಲಿತ ನಿಯಂತ್ರಣಗಳ ಕಟ್ಟು ಸಡಿಲಿಬಿಟ್ಟಿತು. ವ್ಯಕ್ತಿತ್ವವನ್ನು ಹಿಂದಿನವರು ಮನೋ-ಬುದ್ಧಿ-ಅಹಂಕಾರ-ಚಿತ್ತಗಳಾಗಿ ವಿಂಗಡಿಸಿದ್ದಾರೆ. ಇತರ ಪ್ರಾಣಿಗಳಲ್ಲಿ ಈ ನಾಲ್ಕು ಪೈಲುಗಳೊಳಗೆ ಒಂದು ನವಿರಾದ ಸಮತೋಲವನ್ನು ನಿಸರ್ಗ ಇಟ್ಟಿತ್ತು. ಕುಲ ಅಥವಾ ಜಾತಿಯ ಉಳಿಗಾಲಕ್ಕೆ ಅಸಂಗತವಾಗದಂತೆ ವ್ಯಕ್ತಿಯ ಉಳಿಗಾಲ ಮತ್ತು ಅಭಿವೃದ್ಧಿಗೆ ಅಗತ್ಯವಾದಷ್ಟು ಅಹಂಕಾರವಿತ್ತೇ ವಿನಾ ಅದು ಒಟ್ಟಂದದ ಹಿತವನ್ನು ಮುರಿಯುವಷ್ಟು ಇರಲಿಲ್ಲ. ಇತರ ಪೈಲುಗಳ ಸ್ವಯಂಚಾಲಿತ ಕಡಿವಾಣಗಳ ಎಳೆತ ಅಹಂಕಾರವನ್ನು ಅಂಕೆಯಲ್ಲಿಡುತ್ತಿತ್ತು. ಅನ್ನಕ್ಕಾಗಲಿ ಹೆಣ್ಣಿಗಾಗಲಿ ನಡೆಯುವ ಅನಿವಾರ್ಯ ಸ್ಪರ್ಧೆ ಮಾರಕವಾಗುವಷ್ಟು ಉಗ್ರವಾಗುತ್ತಿರಲಿಲ್ಲವೆಂದು ಈ ಮೊದಲೇ ನಾನು ವಾದಿಸಿದ್ದೇನೆ. ಆದರೆ ಮನುಷ್ಯನಲ್ಲಿ ಮನಸ್ಸಿನ ಸ್ವಯಂಚಾಲಿತ ಪ್ರೇರಣೆಗಳು ಅಡಿಗೆಬಿದ್ದು ಬುದ್ಧಿಗೆ ಸಾರಥಿಪದ ಸಿಕ್ಕುತ್ತಲೇ ಪರಿಸ್ಥಿತಿ ಪೂರಾ ವ್ಯತ್ಯಾಸಹೊಂದಿತು. ಅಹಂಕಾರ ಎಲ್ಲ ವೈಯಕ್ತಿಕ ಅಸ್ತಿತ್ವದ ಕೇಂದ್ರದಲ್ಲಿರುತ್ತದೆ. ಬುದ್ಧಿಗೆ ಸಾರಥಿತ್ವ ದೊರೆತರೆ ಅದು ಅಹಂಕಾರದ ಅಧೀನವಾಗಿಯೇ. ಇದು ಮೊದಮೊದಲ ಮಾನವರಲ್ಲಿ ಜಾತಿಯ ಉಳಿಗಾಲಕ್ಕೆ ಅಪಾಯಕರ ವಾಗಿ ಪರಿಣಮಿಸಿರಬಹುದು. ಮನುಷ್ಯರು ನರಹಂತಕರು ಮಾತ್ರವಲ್ಲ, ನರಭಕ್ಷಕರೂ ಆಗಿದ್ದರು; ಪ್ರಾಣಿಗಳಲ್ಲಿ ತೀರ ಅಪರೂಪವಾದ ಬಲವತ್ ಸಂಭೋಗವನ್ನೂ ಮನುಷ್ಯರು ಮಾಡುತ್ತಿದ್ದರು ಎಂಬುದಕ್ಕೆ ಸಂದೇಹವಿಲ್ಲ. ಇದನ್ನೆಲ್ಲ ಮನುಷ್ಯನ ಅಹಂಕಾರ ಬುದ್ಧಿಗಳ-ಸಂಯೋಗ ಯಾವ ವೈಚಾರಿಕ ಮಾರ್ಗದಿಂದ ಸರಿಕಂಡಿತೋ ಈಗ ಊಹಿಸುವುದು ಕಷ್ಟ. ಬಹುಶಃ ತನ್ನ ಕಾಲ-ಸಂಕಲ್ಪನಾ (time-concept) ಬಲದಿಂದ ಮನುಷ್ಯ ಬುದ್ಧಿ ಇಂದಿನ ಪ್ರತಿಸ್ಪರ್ಧಿ **ನಾಳೆಯೂ ನಾಡದೂ** ಅದೇ ಆಗಿ ಉಳಿಯುತ್ತಾನೆಂದು ಮನಗಂಡಿತ್ತು; ಆದ್ದರಿಂದ ಅವನು ಅಳವಿನಲ್ಲಿ ಸಿಕ್ಕಾಗ ಮುಗಿಸಿಯೇ ಬಿಡುವುದು ಸಮಸ್ಯೆಗೆ **ಶಾಶ್ವತ** ಪರಿಹಾರವಾಗುವುದೆಂದು ತೀರ್ಮಾನಿಸಿತ್ತು. **ಸಾವೆಂಬುದು ಶಾಶ್ವತ** ಎಂಬ ಅನುಭವ

ಅವನಿಗೆ ಆಗಿತ್ತು. ಅವನಿಗೆ ತಾನೂ ಸಾಯಬೇಕಾಗುತ್ತದೆಂಬ **ತಿಳಿವಳಿಕೆ** (ಅಂತಃಪ್ರಜ್ಞೆ ಇದ್ದೇ ಇದೆ-ಪ್ರಾಣಿಗಳಿಗೂ) ಬಂದಿತ್ತು. ಸಾವಿನ ಈ ಅರಿವು ಅವನನ್ನು ಸ್ವಲಾಭಕ್ಕಾಗಿ ಹಂತಕನನ್ನಾಗಿ, ಮತ್ತು ತನ್ನ ಭವಿಷ್ಯಕ್ಕಾಗಿ ಭಯಭರಿತನನ್ನಾಗಿ ಮಾಡಿತ್ತು.

ಈ ಸ್ಥಿತಿಯಲ್ಲೇ ಇಂದಿನವರೆಗೂ ನಡೆದು ಬಂದ ಅನೇಕ ಮಾನವ ವರ್ತನೆಗಳು ರೂಪುಗೊಂಡಿರಬೇಕು. ಪುರಾತನ ಆಖ್ಯಾಯಿಕೆಗಳಲ್ಲಿ ಈ ಕಾಡು ಅವಸ್ಥೆಯ ಸಂಕೇತಗಳು ಸಿಗುತ್ತವೆ. ಸುಂದೋಪಸುಂದರ ಕತೆ ಹೆಣ್ಣಿಗಾಗಿ **ಆಮರಣ** ಹೋರಾಟವನ್ನು ಚಿತ್ರಿಸುತ್ತದೆ. ನಾಯಿ-ಬೆಕ್ಕುಗಳಲ್ಲಿ ಇಂಥ ಹೋರಾಟ ನಡೆದಾಗ ತಾನು ಜಯಿಸಲಾರೆನೆಂದು ಕಂಡುಕೊಂಡ ಗಂಡು ಶರಣಾಗತಿ ಅಥವಾ ಪಲಾಯನ **ಮಾರ್ಗ** ಅನುಸರಿಸುತ್ತದೆ. ಆಮೇಲೆ ಬಲವಂತ ಗಂಡು ಅದನ್ನು ಹಿಂಸಿಸುವುದಿಲ್ಲ; ಕೊಲ್ಲುವುದಂತು ಇಲ್ಲವೇ ಇಲ್ಲ ಎನ್ನಬಹುದು. ಮನುಷ್ಯ ಹಾಗೆ ಮಾಡುತ್ತಾನೆ—ಆಗಲೂ ಈಗಲೂ. **ಸ್ಪರ್ಧಿ** ಈಗ **ಶತ್ರು**ವಾಗಿದ್ದಾನೆ.

ಇದು ಅವಶ್ಯವೂ ಆಗಿದ್ದಿರಬಹುದು. ಪ್ರಾಣಿಗಳಲ್ಲಿ ಒಮ್ಮೆ ಶಕ್ತಿ ಪರೀಕ್ಷೆಯಲ್ಲಿ ಮೇಲು ಕೀಳು ಸಿದ್ಧವಾದ ಮೇಲೆ ಗೆದ್ದಜೀವಿಗೆ ಸೋತಜೀವಿ ಯಾವಾಗಲೂ ದಾರಿಬಿಟ್ಟು ಕೊಡುವ ಮೂಲಕ ತನ್ನ ಕನಿಷ್ಠತ್ವವನ್ನು ಒಪ್ಪಿಕೊಂಡೇ ಬದುಕುತ್ತದೆಂದು ಪ್ರಾಣಿಜೀವನವನ್ನು ನಿರೀಕ್ಷಿಸಿದವರು ಹೇಳುತ್ತಾರೆ. ಆದರೆ ಮನುಷ್ಯನಲ್ಲಿ ಬುದ್ಧಿಶಕ್ತಿಯ ಉದಯ ಬಲಾಬಲ ಪರೀಕ್ಷೆಗೆ ಹೊಸತೊಂದು ಮುಖವನ್ನು ಕೊಟ್ಟಿತ್ತು. ಸೋತು ಶರಣಾಗತನಾದವನು ಶರೀರದಲ್ಲಿ ದುರ್ಬಲನಾದರೂ ಬುದ್ಧಿಯಲ್ಲಿ ಹೆಚ್ಚು ಧೂರ್ತನಾಗಿರಬಹುದು. ಅವನು ಮತ್ತೆ ಸ್ಪರ್ಧೆಯನ್ನು ನಿಷ್ಕರ್ಷಿಸಲು 'ಇತರ' ಮಾರ್ಗಗಳನ್ನು ಅನುಸರಿಸಿ ಬಲಿಷ್ಠನನ್ನು ಸದೆಯಬಹುದು. ಇದೂ ನೈಸರ್ಗಿಕ ಆಯ್ಕೆಯ ರೀತ್ಯಾ ಆಗಬೇಕಾದ್ದೇ. ಬುದ್ಧಿಶಕ್ತಿ ಬದುಕಿನ ಒಂದು ಅವಶ್ಯಮುಖ ಎನಿಸಿದಾಗ ನೈಸರ್ಗಿಕ ಆಯ್ಕೆಯಲ್ಲಿ ಅದಕ್ಕೂ ಅವಕಾಶ ಇರಲೇಬೇಕು. ಆದರೆ ಇದು ಮಾನವ ಸ್ಪರ್ಧೆಗಳನ್ನು ಹೆಚ್ಚು ಘಾತಕವಾಗಿ ಮಾಡುವುದರಲ್ಲಿ ಕೈಯಾಸರೆ ನೀಡಿರಬಹುದು. ಆದ್ದರಿಂದಲೇ ಇಂದಿಗೂ ಉಳಿದುಕೊಂಡು ಬಂದಿರುವ ಶತ್ರುಶೇಷ ಮತ್ತು ಅಗ್ನಿಶೇಷವನ್ನು ಉಳಿಸಬೇಡ ಎಂಬ ರಾಜಕೀಯಶಾಸ್ತ್ರದ ಉಪದೇಶ.

ಈ ಅಪಾಯಕರ ಸನ್ನಿವೇಶದಲ್ಲಿಯೇ ನಾವು ಈಗ ಮೌಲ್ಯಗಳು ಎಂದು ಕರೆಯುವ ಮಾನವ ವರ್ತನೆಯ ವಿಶೇಷ ತಲೆದೋರಿದ್ದೆಂದು ತೋರುತ್ತದೆ. ಅದು ಪ್ರವೃತ್ತಿ ಸಿದ್ಧವಾಗಿದ್ದು ಅಡಿಗೆಬಿದ್ದ 'ಧರ್ಮ'ಗಳನ್ನು ಬುದ್ಧಿಮಾರ್ಗ ಮೂಲಕ ಪುನಃ ಸ್ಥಾಪಿಸಿ ಕುಲಕ್ಷಯ ಅಥವಾ ಜಾತಿಕ್ಷಯವನ್ನು ತಪ್ಪಿಸುವ ಉಪಾಯವಾಗಿರಬೇಕು. ಇದರಲ್ಲಿ ನೈಸರ್ಗಿಕ ಪ್ರವೃತ್ತಿಯ ಪಾಲೆಷ್ಟು, ಪ್ರಜ್ಞಾಪೂರ್ವಕ ಪ್ರಚುರಗೊಂಡದ್ದೆಷ್ಟು ಎಂಬ ಬಗ್ಗೆ ವಾದದಲ್ಲಿ ಆಳವಾಗಿ ಇಳಿಯುವ ಇಚ್ಛೆ ನನಗಿಲ್ಲ. ಹೊಸ ವಿಜ್ಞಾನವಾದ ಸಾಮಾಜಿಕ ಜೀವಶಾಸ್ತ್ರದ Socio-biology-ಅಧ್ವರ್ಯುಗಳು ಮಾನವ ವರ್ತನೆಯ ಹೆಚ್ಚು ಕಡಿಮೆ ಎಲ್ಲ ಅಂಶಗಳೂ ಮೂಲದಲ್ಲಿ ಅವನ ಜೈವಿಕ ಸ್ವರೂಪದಲ್ಲೆ—ಅವರ ಮಾತಿನಲ್ಲಿ 'ಜೀನ್'ಗಳಲ್ಲೇ —ನಿಹಿತವಾಗಿದೆಯೆಂದು ಹೇಳುತ್ತಾರೆ. ಸಂಸ್ಕಾರದಿಂದ ಅದನ್ನು ಅಷ್ಟಿಷ್ಟು ನಿಯೋಜಿಸಬಹುದೇ

ಹೊರತು ಜೀನುಗಳಲ್ಲಿ ಮೂಲತಃ ಇಲ್ಲದ್ದನ್ನು ಅಪ್ಪಟ ಹೊಸತಾಗಿ ರೂಢಗೊಳಿಸುವ ಯತ್ನ ಸಫಲವಾಗಲಿಕ್ಕಿಲ್ಲವೆಂದು ಕೂಡ ಅವರು ಭಾವಿಸುತ್ತಾರೆ. ಇದು ಜೀವ ಮತ್ತು ಮನೋವಿಜ್ಞಾನಿಗಳಲ್ಲಿ ಇನ್ನೂ ಉಗ್ರ ವಿವಾದ ಸ್ಥಿತಿಯಲ್ಲಿರುವ ಥಿಯರಿ. ಈ ಥಿಯರಿಯಲ್ಲಿ ಸ್ವಲ್ಪವಾದರೂ ಸತ್ಯ ಇರಬೇಕು. ಏಕೆಂದರೆ ಮನುಷ್ಯನಲ್ಲಿ ಬಹಳ ಪ್ರಾಚೀನದಿಂದ ಸ್ವೀಕೃತವಾದ ಅನೇಕ ಮೌಲ್ಯಗಳು ಮನುಷ್ಯೇತರ ಪ್ರಾಣಿಗಳಲ್ಲಿ ಸ್ವಾಭಾವಿಕವಾಗಿಯೇ ಉಳ್ಳ ಸ್ವಯಂಚಾಲಿತ ನಿಯಂತ್ರಣಗಳಿಗೆ, ನಿಗ್ರಹಗಳಿಗೆ ಎದ್ದು ಕಾಣುವ ಹೋಲಿಕೆಯುಳ್ಳವಾಗಿವೆ. ಉದಾಹರಣೆಗೆ ಸ್ತ್ರೀದಾಕ್ಷಿಣ್ಯ, ನರಹತ್ಯೆ (=ಸ್ವಜಾತಿಹತ್ಯೆ)ಯ ನಿಷೇಧ, ನರಮಾಂಸ ಭಕ್ಷಣೆಯ ನಿಷೇಧ, ಇತ್ಯಾದಿ.

ಸರಿಯಾಗಿ ವಿಚಾರಿಸಿದರೆ, ಮನುಷ್ಯನಲ್ಲಿ ಕಾಣಬರುವ ಸದ್ಗುಣ ಅಥವಾ ಸನ್ಮೌಲ್ಯ ಅಥವಾ ದುರ್ಗುಣ ಅಥವಾ ಅಧಮ ಮೌಲ್ಯಗಳಲ್ಲಿ ಮುಕ್ಕಾಲು ಪಾಲು ಇತರ ಒಂದಲ್ಲ ಒಂದು ಪ್ರಾಣಿಯಲ್ಲಿ ಕಾಣಬರುವಂಥಾದ್ದೇ. ಸಹಕಾರವೇ?—ಗುಂಪಾಗಿ ಬೇಟೆಯಾಡುವ ಪ್ರಾಣಿಗಳನ್ನು ನೋಡಿ. ಸಮೂಹಕ್ಕಾಗಿ ವ್ಯಕ್ತಿಯ ಸ್ವೇಚ್ಛಾ ಬಲಿದಾನವೇ?—ಇರುವೆ, ಗೆದ್ದಲುಗಳನ್ನು ನೋಡಿ. ಪಾಲುಮಾಡಿಕೊಂಡು ತಿನ್ನುವ ಪ್ರವೃತ್ತಿಯೆ?—ಕಾಗೆಗಳನ್ನು ನೋಡಿ. ಪಾತಿವ್ರತ್ಯ ಅಥವಾ ಏಕಪತ್ನೀ ವ್ರತವೇ?—ಸಾರಸ ಮೊದಲಾದ ಪಕ್ಷಿಗಳನ್ನು ನೋಡಿ. ಕೃತಜ್ಞತೆಯೆ?—ನಾಯಿಯನ್ನು ನೋಡಿ. ಪ್ರಶಂಸಾಪ್ರಿಯತೆಯೆ?—ಕುದುರೆ, ನಾಯಿಗಳನ್ನು ನೋಡಿ. ಪ್ರದರ್ಶನಪ್ರಿಯತೆ—ನಮ್ಮ ಕವಿ ಕಲಾವಿದ ನಟರಲ್ಲಿ ಎದ್ದು ಕಾಣುವಂತಾದ್ದು—ಕಪಿಗಳಲ್ಲಿಯೂ ಇದೆ ಎಂದರೆ ಕೆರಳಬಾರದು. (ಲೇಖಕನೂ ಈ ಬಳಗಕ್ಕೇ ಸೇರಿದವನು ಎಂಬುದರಿಂದ). ಮೌಲ್ಯಗಳ ಪಟ್ಟಿಯಲ್ಲಿ ನಾವು ಸೇರಿಸತಕ್ಕವುಗಳಲ್ಲಿ ಮೂರು ಮಾತ್ರ-ಧಾರ್ಮಿಕ, ಕಲಾತ್ಮಕ, ರಕ್ತಸಂಬಂಧಿಗಳಲ್ಲಿ ಲೈಂಗಿಕ ಸಂಬಂಧ ನಿಷೇಧ-ಮಾನವ ವಿಶಿಷ್ಟವಾಗಿವೆಯೆನ್ನಬೇಕಾಗುತ್ತದೆ.

ಮೌಲ್ಯಗಳು ಎಂಬ ಪರಿಕಲ್ಪನೆ ಕೇವಲ ಮಾನವನು ಸೃಷ್ಟಿಸಿಕೊಂಡ ಅಸ್ವಾಭಾವಿಕ ನಿಯಮಗಳಲ್ಲ; ಅವುಗಳಿಗೆ ಸಾಮೂಹಿಕ ಉಳಿಗಾಲದ ಸೃಷ್ಟಿಯ ಆದ್ಯ ಧ್ಯೇಯದೊಡನೆ ಅವಿಭಾಜ್ಯ ಸಂಬಂಧವಿದೆಯೆಂದು ತೋರಿಸುವುದಕ್ಕಾಗಿಯೆ ಮನುಷ್ಯನ ಪ್ರಾಣಿತ್ವವನ್ನು ಸಾಧಿಸುವ ಈ ನಿದರ್ಶನಗಳನ್ನು ಎತ್ತಿಕೊಡಲಾಗಿದೆ ಹೊರತು ಮಾನವನ್ನನ್ನು ಮೃಗತ್ವಕ್ಕೆ ಇಳಿಸುವುದಕ್ಕಾಗಿ ಅಲ್ಲ.

ಮೌಲ್ಯಗಳ ಮೂಲ ನೈಸರ್ಗಿಕ ಎನ್ನುವುದು ಬೇರೆ, ಬುದ್ಧಿಯ ಉದಯದ ನಂತರ ಅದು ತೀರ ಸಹಜವಾಗಿ ಮಾನವನಲ್ಲಿ ಮುಂದುವರಿಯಿತೆನ್ನುವುದು ಬೇರೆ ಎಂದು ಮೇಲೆ ವಾದಿಸಿದ್ದೇನೆ. ಪ್ರಾಣಿಗಳಲ್ಲಿ ಸ್ವಯಂ ನಿಹಿತವಾದದ್ದನ್ನು ಮಾನವನಲ್ಲಿ ಪ್ರಯತ್ನಪೂರ್ವಕವಾಗಿ ನೆಲೆಗೊಳಿಸಬೇಕಾಯಿತು.

ಮನುಷ್ಯ ವರ್ತನೆಯ ಅನೇಕ ಅಂಶಗಳು ಅವನು ಬೇಟೆ ಮತ್ತು ಕಂದಮೂಲ ಫಲಗಳನ್ನು ಹುಡುಕಿ ತಿನ್ನುವ ಅವಸ್ಥೆಯಲ್ಲಿದ್ದಾಗ ಮತ್ತು ಹಿಮಯುಗದ ಕಠೋರ

ಪರಿಸರದಲ್ಲಿ ರೂಪುಗೊಂಡವುಗಳೆಂದು ಮನುಷ್ಯ ಶಾಸ್ತ್ರಜ್ಞರು ಹೇಳುತ್ತಾರೆ. ಅವನು ಆಗಲೇ ಕಲ್ಲಿನಿಂದ ಆಯುಧಗಳನ್ನು ಮಾಡಿಕೊಳ್ಳಲು ಕಲಿತಿದ್ದ. ಹಿಮಯುಗದ ಕೊನೆ ಮುಟ್ಟುವಷ್ಟರಲ್ಲಿ ಅವನ ಆಯುಧಗಳು ಸಾಕಷ್ಟು ಸೂಕ್ಷ್ಮವೂ ಕಾರ್ಯದಕ್ಷವೂ ಆಗಿದ್ದವು. ಬೆಂಕಿಯ ಉಪಯೋಗವನ್ನೂ ಅವನು ಸಾಧಿಸಿದ್ದ.

ಮೌಲ್ಯ ಕಲ್ಪನೆಯ ತಳದಲ್ಲಿ ಮನುಷ್ಯನ ಸಮಾಜ ಜೀವನ ಇದೆ. ಒಟ್ಟು ಬದುಕಿಲ್ಲದೆ ಮೌಲ್ಯ ಇಲ್ಲ. ಮನುಷ್ಯ ಇತರ ಅನೇಕ ಪ್ರಾಣಿಗಳಂತೆ ಒಂಟಿ ಸಲಗನಾಗಿದ್ದಾಗ ಅದರ ಅಗತ್ಯ ಇದ್ದಿರಲಾರದು. ಆದರೆ ಆಯುಧೋಪಕರಣಗಳ ಕರ್ತನಾಗಿಯೂ ದೊಡ್ಡಪ್ರಾಣಿಗಳ ಬೇಟೆಗಾರನಾಗಿಯೂ ಉತ್ಕರ್ಷ ಹೊಂದುವಾಗ ಅವನು ಒಂಟಿತನದಿಂದ ಹೊರಗೆ ಬರಬೇಕಾಯಿತು. ದೊಡ್ಡ ಪ್ರಾಣಿಗಳ ಬೇಟೆ ಒಬ್ಬನಿಂದಾಗತಕ್ಕದ್ದಲ್ಲ. ಹಲವರ ಸಹಕಾರ ಪ್ರಾಣಿಗಳ ಬೆಂಬತ್ತುವುದರಲ್ಲಿಯೂ ಅನಂತರ ಅವುಗಳನ್ನು ವಸತಿಗಳಿಗೆ ಸಾಗಿಸುವುದರಲ್ಲಿಯೂ ಅನಿವಾರ್ಯವಾಗಿತ್ತು. ಕಲ್ಲಿನ ಆಯುಧಗಳ ನಿರ್ಮಾಣದಲ್ಲಿ ಪ್ರಾವೀಣ್ಯವೂ ಎಲ್ಲ ಆದಿಮಾನವರಿಗೆ ಸಮಾನವಾಗಿ ಸಿದ್ಧಿಸಿರಲಿಕ್ಕಿಲ್ಲ. ಹೆಚ್ಚು ಸಿದ್ಧಹಸ್ತನಾದವನಿಂದ ಕಡಿಮೆ ಸಿದ್ಧರಾದವರು ಉಪಕರಣಗಳನ್ನು ಪಡೆಯಬೇಕಾಗುತ್ತಿತ್ತು. ಈ ರೀತಿ ಸಹಕರಿಸುವುದು ಎಲ್ಲರಿಗೂ ಉಪಯುಕ್ತವೆಂಬ ತಿಳಿವಳಿಕೆ ಬುದ್ಧಿವಂತನಾದ ಮನುಷ್ಯನಿಗೆ ಸುಲಭವಾಗಿಯೇ ಬಂತು. ಆದರೆ ಈ ಸಹಕಾರ ಸಾಧ್ಯವಾಗಬೇಕಾದರೆ ಪರಸ್ಪರರಲ್ಲಿ ವಿಶ್ವಾಸ, ಸತ್ಯಸಂಧತೆ, ಪಾಲುಮಾಡಿಕೊಳ್ಳುವಿಕೆ ಮೊದಲಾದ ವರ್ತನೆಗಳು ಅವಶ್ಯವಾಗಿದ್ದುವು. ಬೇಟೆ ಮೊದಲಾದ ಚಟುವಟಿಕೆಗಳಲ್ಲಿ ಮತ್ತು ಆಯುಧ ನಿರ್ಮಾಣದಲ್ಲಿ ಅನುಭವಕ್ಕೆ ಪ್ರಾಮುಖ್ಯವಿತ್ತು. ಆದ್ದರಿಂದ ಅನುಭವಿಯಾದ ಹಿರಿಯನಿಗೆ, ಅವನ ಚಟುವಟಿಕೆಯ ಶಕ್ತಿ ಕುಂದಿದ ಮೇಲೂ ಒಂದು ಬೆಲೆ ಬಂತು. ಲೈಂಗಿಕತೆ ಪ್ರಚಂಡ ಶಕ್ತಿಯುತ ಪ್ರಚೋದನೆಯೇ ಆಗಿತ್ತು. ಆದರೆ ವ್ಯಕ್ತಿಗಳು ಸಹಕರಿಸಬೇಕಾದರೆ ಈ ವಿಷಯದಲ್ಲಿ ಒಂದು ಸ್ಥೂಲವಾದ ಒಪ್ಪಂದವಿಲ್ಲದಿದ್ದರೆ ಹೇಗೆ ನಡೆಯಬೇಕು?

ಈ ಪ್ರಕಾರ ಮಾನವ ಮೌಲ್ಯಗಳ ಪ್ರಥಮ ತಳಹದಿಯ ಮೂಲೆ ಕಲ್ಲುಗಳು ಇಕ್ಕಲ್ಪಟ್ಟವು. ಅವು ಗುಂಪಿನ ಹಿತಕ್ಕೆ, ಕೆಲವೇಳೆ ವೈಯಕ್ತಿಕ ಉಳಿಗಾಲಕ್ಕೆ ಕೂಡ ಅಗತ್ಯವಾದ ಜೈವಿಕ ಅನಿವಾರ್ಯತೆಗಳಾಗಿದ್ದವು. ಅವುಗಳನ್ನು ಈಗ ಧರ್ಮ, ನೀತಿ ಇತ್ಯಾದಿಗಳ ರೂಪದಲ್ಲಿ ಅಥವಾ ಹೆಸರುಗಳಲ್ಲಿ ಪ್ರತಿಷ್ಠಿಸಲಾದರೂ ಅವುಗಳ ಬೀಜಗಳು ನಮ್ಮ ಪಾಶವ ಪೂರ್ವೇತಿಹಾಸದಲ್ಲೇ ಇದ್ದವು. ಆದರೂ ವಿಚಾರವಂತನಾದ ಮನುಷ್ಯನಲ್ಲಿ ಅವುಗಳನ್ನು ಗಟ್ಟಿಯಾಗಿ ನೆಲೆಗೊಳಿಸುವುದು ಸುಲಭವಾಗಿರಲಿಕ್ಕಿಲ್ಲ. 'ಅಹಂ'ಕಾರ ವ್ಯಕ್ತಿ ಸ್ವಾರ್ಥವನ್ನು ಮಾತ್ರವಲ್ಲ, ಅವನ ತಾತ್ಕಾಲಿಕ ಮತ್ತು ಬಲವತ್ತರ ಪ್ರಚೋದನೆಗಳ ಧ್ಯೇಯಗಳನ್ನು, ಬೆಂಬತ್ತಿ ಹೋಗುವುದಕ್ಕೆ ಪ್ರೇರಿಸುತ್ತಿತ್ತು. ಅದನ್ನು ಹದ್ದುಬಂದಿಗೆ ತರುವ ಈ ನೀತಿಗಳನ್ನು ಪ್ರಯತ್ನಪೂರ್ವಕ ಮತ್ತು ಅನ್ಯ ಉಪಾಯಗಳ ಸಹಾಯದಿಂದ ಸ್ಥಾಪಿಸುವ ಅಗತ್ಯ ಬಿದ್ದಿರಬೇಕು.

ಮೌಲ್ಯಗಳನ್ನು ಅಥವಾ ನೀತಿಯನ್ನು ನೆಲೆಗೊಳಿಸುವುದೆಂದರೆ, ಮಾನವನ ಅಹಂಕಾರದ ಕುದುರೆಯನ್ನು ಪಳಗಿಸುವುದಾಗಿತ್ತು. ಪ್ರಾಣಿಗಳನ್ನು ಪಳಗಿಸುವಾಗ ಇಂದಿಗೂ ಉಪಯೋಗಿಸುವ ಉಪಾಯಗಳೆಂದರೆ ಕಂಡೀಶನಿಂಗ್ ಎಂದು ಕರೆಯುವ 'ದಂಡನೆ ಮತ್ತು ಬಹುಮಾನ'ದ ದ್ವಂದ್ವತಂತ್ರ. ಶಿಕ್ಷೆ, ಶಿಕ್ಷಣ ಎಂಬ ಶಬ್ದಗಳಲ್ಲಿ ಈ ತರಬೇತಿಯ ತಾತ್ಪರ್ಯ ಹುದುಗಿದೆ. ಚಿಕ್ಕಂದಿನಿಂದಲೇ ಅದು ಪ್ರಾರಂಭವಾಗಬೇಕು. ಅದಕ್ಕೆ ವಿಧೇಯತೆ ಕ್ಷಣಾತ್ ಮತ್ತು ಸ್ವಯಂಚೋದಿತ (automatic) ಎಂಬಂತೆ ಆಗಬೇಕು. ಅದು ನಿಶ್ಚಿತ ಶಾಬ್ದಿಕ ಸಂಕೇತಗಳ (command words) ಮೂಲಕ ನಡೆಯಬೇಕಾದ ಕ್ರಿಯೆ; ಅದು ಆಲೋಚನೆಯ ಕಮ್ಮಟ್ಟಿನ ಮೂಲಕ ಹಾಯ್ದು ಬರಬೇಕಾದರೆ ವ್ಯವಸ್ಥಿತ ಸಾಮೂಹಿಕ ನಡವಳಿಕೆ ಸಾಧ್ಯವಿಲ್ಲ. ಆದ್ದರಿಂದ ಧರ್ಮ, ನೀತಿ, ಮೌಲ್ಯ ಇವುಗಳ ವಿಷಯದಲ್ಲಿ ಒಂದು ಚರಮತ್ವ, ಅಶಂಕ್ಯತ್ವ, ಅಚಿಂತನೀಯತ್ವ ಇರಬೇಕಾಗುತ್ತದೆ. ಗಂಟೆ ಬಾರಿಸಿದ ಕೂಡಲೆ ಬಾಯಲ್ಲಿ ತಂತಾನೆ ನೀರು ಬಿಡುತ್ತಿದ್ದ ಪೌಲೋವನ ನಾಯಿಯ ನಡವಳಿಕೆಯನ್ನು ಹೆಚ್ಚು ಕಡಿಮೆ ಹೋಲುವಂಥ ಮೌಲ್ಯ ವಿಧೇಯತ್ವಕ್ಕೆ ಸಾಮಾಜಿಕ ಮನುಷ್ಯನನ್ನು ಪಳಗಿಸಬೇಕಾಗಿತ್ತು.

ಇಲ್ಲಿಯೇ 'ಧರ್ಮ'ದ ಪರಿಕಲ್ಪನೆ ಆಗಿರಬೇಕು. ಅದಕ್ಕೆ ಸೌಲಭ್ಯ ಒದಗಿಸಿದ್ದು ಯಾವ ಕಾರಕ ಎಂದು ಆಲೋಚಿಸುವಾಗ ಮರಣಭಯವೆಂದು ನನಗೆ ತೋರುತ್ತದೆ. ಪರಲೋಕ ಕಲ್ಪನೆ ಮರಣಕ್ಕೆ ಮಾನವಮನಸ್ಸು ಕಂಡುಕೊಂಡ ಪ್ರತೀಕಾರ. ಆ ಪರಲೋಕ ಇಹದ್ದೇ ವಿಸ್ತರಣೆ. ಇಲ್ಲಿ ಸರಿಯಾಗಿ ನಡೆದುಕೊಂಡವರಿಗೆ ಅಲ್ಲಿಯೂ ಒಳಿತಾಗುತ್ತದೆ. ಇಲ್ಲಿ ಕೆಡುಕು ಮಾಡಿದವರಿಗೆ ಅಲ್ಲಿ ಅಧೋಗತಿ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ, ನಾವು ಕಾಣುವ ಮಟ್ಟಿಗೆ ಮರಣ ಶಾಶ್ವತ, ಜೀವನ ಕ್ಷಣಿಕ. ಆದರೆ ಮರಣ ಶಾಶ್ವತವಾದರೆ ಪರಲೋಕವೂ ಶಾಶ್ವತ. ಅಲ್ಲಿನ ಸುಖದುಃಖ ಶಾಶ್ವತ. ಅದನ್ನು ನಿಯಾಮಕ ಮಾಡುವ ಶಕ್ತಿಗಳು ಇಹದ ಮಾನವ ಶಕ್ತಿಗಳಿಗಿಂತಲೂ ಬಲಿಷ್ಠ. ಹೀಗೆ ಆತ್ಮ, ಪರಮಾತ್ಮನ ಊಹೆ. ಆ ಶಾಶ್ವತಕ್ಕಾಗಿ ಈ ಕ್ಷಣಿಕದಲ್ಲಿ ಕೆಲತ್ಯಾಗಗಳು ಇಷ್ಟ. ಮನುಷ್ಯ ಬುದ್ಧಿವಂತ ನಿಜ; ಆದರೆ ಅವನ ಬುದ್ಧಿಗೆ ಯಾವುದು ನಿಲುಕಲಿಲ್ಲವೋ ಅದನ್ನು ತರ್ಕದಿಂದ ಭರ್ತಿ ಮಾಡಿಕೊಳ್ಳಬೇಕಾಗಿತ್ತು. ತರ್ಕ ನಿರ್ವಿಕಾರವಾಗಿದ್ದರೆ ಸರಿ; ಆದರೆ ಮನುಷ್ಯ, ಬಯಕೆಗಳ ಮುದ್ದೆಯಾದ್ದರಿಂದ ತರ್ಕ ಇಚ್ಛೆಯ ಆಳಾಗುತ್ತದೆ. ಈ ಕಲಸು ಮೇಲೋಗರದಿಂದ ಭಾವನೆಯ ಉದಯ. ಭಾವನೆಯಿಂದ ಕಲ್ಪನೆ, ಕನಸು, ಕಣಸು; ಅಪರೋಕ್ಷ ದರ್ಶನ; ಅದಕ್ಕಾಗಿ ದಾರ್ಶನಿಕ, ಋಷಿ, ಹಿರಿಯ, ಮಾಂತ್ರಿಕ, ಕ್ರಾಂತದರ್ಶಿ, ತ್ರಿಕಾಲ ಜ್ಞಾನಿ; ಆತ ಆ ಲೋಕವನ್ನು ಕಂಡು ಅಲ್ಲಿನ ಶಕ್ತಿಗಳು ಮನುಷ್ಯನಿಂದ ನಿರೀಕ್ಷಿಸುವ ನಡವಳಿಯನ್ನರಿತು, ಕಡಿಮೆ ಭಾವನಾಶಕ್ತಿಯುಳ್ಳವರಿಗೆ ತಿಳಿಸುತ್ತಾನೆ; ಅದು ಅನುಲ್ಲಂಘ್ಯ. ಉಲ್ಲಂಘನೆ ಪಾಪ; ಪಾಪ ಅಲ್ಲಿನ ಶಾಶ್ವತ ಸುಖವನ್ನು ಕೆಡಿಸುತ್ತದೆ; ವಿಧೇಯತೆ ಅದನ್ನು ನೇರ್ಪಡಿಸುತ್ತದೆ. ಹೀಗೆ ಪುಣ್ಯ-ಪಾಪ; ಹೀಗೆ ಸ್ವರ್ಗ-ನರಕ; ಹೀಗೆ ದೈವಾಜ್ಞೆ, Law. ಅದು ದಿವ್ಯದೃಷ್ಟಿಯಿಂದ ಕಂಡದ್ದು. ಯಹೂದ್ಯರ ಮಹರ್ಷಿ ಮೋಸೆಸ್ ದಿವ್ಯದೃಷ್ಟಿಯಿಂದ ಕಂಡು ತನ್ನ ಕುಲದವರಿಗೆ

ವಿಧಿಸಿದ ದಶವಿಧ ಆಜ್ಞೆಗಳಲ್ಲಿ ಹೆಚ್ಚಿನವು ಇಹದ ಒಟ್ಟಂದದ ಬದುಕನ್ನು ಹಸನುಗೊಳಿಸುವುದಕ್ಕೆ ಸಲ್ಲುವಂಥವು. ಇದಕ್ಕೆ ಒಂದು ಅಪರೋಕ್ಷದರ್ಶನ ಬೇಕಾಗಿತ್ತೇ? ಎಂದು ನಮಗೆ —ತರ್ಕಮಾರ್ಗದಲ್ಲಿ ಮುಂದುವರಿದು ಹೇತ್ವಾಭಾಸಗಳನ್ನು ಗುರುತಿಸಬಲ್ಲವರಿಗೆ—ಸೋಜಿಗ ನಗೆ ತರಬಹುದು. ಆದರೆ ದರ್ಶನದಲ್ಲಿ ಕಂಡೇ ಅವುಗಳನ್ನು ವಿಧಾಯಕ ಮಾಡಲಾಯಿತು. ಆದ್ದರಿಂದಲೇ ಅದಕ್ಕೆ ಬೆಲೆ ಬಂತು. ಮನುಷ್ಯನ ಸಾಮಾನ್ಯ ಬುದ್ಧಿಯಿಂದ ಹೊರಟಿದ್ದಾಗಿದ್ದರೆ ಅದನ್ನು ಮನುಷ್ಯ ಒಪ್ಪುತ್ತಾನೆಯೆ? ಅಲೌಕಿಕ ಮೂಲದ್ದಾದ್ದರಿಂದ ಅದಕ್ಕೆ ಚಿರಂತನತ್ವ ಬಂತು. ಆದರೂ ಜ್ಞಾತಾಜ್ಞಾತ ಉಲ್ಲಂಘನೆ ಆಗುತ್ತದೆ. ಅದಕ್ಕೆ ಪ್ರಾಯಶ್ಚಿತ್ತಗಳಿವೆ. ಅವುಗಳನ್ನು ಇಲ್ಲಿ ಅನುಭವಿಸಿದರೆ ಅಲ್ಲಿ ಶಿಕ್ಷೆ ಇಲ್ಲ. ಪ್ರಯತ್ನಪೂರ್ವಕ ವಿಧಿಗಳನ್ನು ಅನುಸರಿಸಿದರೆ ಪುಣ್ಯ, ದೈವಾನುಗ್ರಹ; ಉಭಯತ್ರ ಸುಖ.

ಹೀಗೆ 'ಶಿಕ್ಷೆ ಮತ್ತು ಬಹುಮಾನ'ಗಳ ಜೋಡುಕಡಿವಾಣದಿಂದ ಕಾಡುಮನುಷ್ಯನನ್ನು ಸಹನೀಯ ಸಾಮಾಜಿಕ ಜೀವಿಯಾಗಿ ಪಳಗಿಸಲಾಯಿತು. ಬಹುಮಾನಗಳಲ್ಲಿ ಪಾರಲೌಕಿಕ ಹಿತ ಮಾತ್ರವಲ್ಲದೆ ಇಹದಲ್ಲಿ ಪ್ರಶಂಸೆಯೂ ಸೇರುತ್ತದೆ. ಪ್ರಶಂಸೆ, ಮಾನವನ 'ಅಹಂ'ಗೆ ಆಪ್ಯಾಯನವಾದಂತೆ ಅದಕ್ಕೆ ಕಡಿವಾಣವೂ ಆಗುತ್ತದೆ. ಒಮ್ಮೆ ಸಿಕ್ಕಿದ ಪ್ರಶಂಸೆಯನ್ನು ಉಳಿಸಿಕೊಳ್ಳುವ, ಬೆಳೆಸಿಕೊಳ್ಳುವ ಹಂಬಲ ಸದ್ವರ್ತನೆಯನ್ನು ಮುಂದುವರಿಸಿಕೊಂಡು ಹೋಗುತ್ತದೆ. ಆದರೂ ಮೌಲ್ಯಗಳ ಗತಿ-ಪ್ರಗತಿ ಸಾವಕಾಶವೇ ಆಗಿತ್ತು. ಮೌಲ್ಯಗಳು ಹೆಚ್ಚಂಶ ಸಾಮೂಹಿಕ ಸಾಮರಸ್ಯದ ಇರಾದೆಯಿಂದ ರೂಪಿತ ಮತ್ತು ಪುನಃಸ್ಥಾಪಿತವಾದ 'ಸೃಷ್ಟಿ ಸಂಕಲ್ಪ'ಗಳೆಂದು ನಾವೆನ್ನುವುದು ಸರಿಯಾಗಿದ್ದರೆ, ಅವುಗಳ ವಿಧೇಯತೆ ಆಗಿನ ಮಿತಸಂಖ್ಯೆಯ ಗುಂಪುಗಳ ಆಂತರಿಕ ನಡೆವಳಿಗಷ್ಟೇ ಅನ್ವಯಿಸುವವೆಂದು ಪುರಾತನ ಮನುಷ್ಯ ಗ್ರಹಿಸಿದಂತೆ ಕಾಣುತ್ತದೆ. ನಮ್ಮ ಗುಂಪಿನ ಹೊರಗಿನವರೊಡನೆ ನಮ್ಮ ನಡವಳಿಕೆಯಲ್ಲಿ ಕೊಲಬೇಡ, ಕಳಬೇಡ; ಹುಸಿಯ ನುಡಿಯಲು ಬೇಡ ಇತ್ಯಾದಿಗಳು ಜ್ಯಾರಿಯಲ್ಲಿರಲೇ ಇಲ್ಲ. ಗುಂಪುಗುಂಪುಗಳ ನಡುವೆ ಧನಾಪಹಾರ, ಕನ್ಯಾಪಹಾರ, ರುಂಡಬೇಟೆ ಸಾಮಾನ್ಯವಾಗಿದ್ದುವು. ವ್ಯಕ್ತಿವ್ಯಕ್ತಿಗಳೊಳಗಿನ ಸ್ಪರ್ಧೆಯ ಮಾರಕತ್ವವನ್ನು ಅಳವಿನಲ್ಲಿ ತಂದ ಮೇಲೂ ಮನುಷ್ಯನ ಸ್ವಭಾವದಲ್ಲೆ ಒಳಗೆ ಕೂಳ್ಕುದಿಯುತ್ತಿರುವ ಆಕ್ರಮಣಶೀಲತೆಯನ್ನು ಆಗಾಗ್ಗೆ ಗುಂಪುಗಳ ನಡುವಿನ ಮರಣಾಂತಿಕ ಸ್ಪರ್ಧೆಯ ರೂಪಕ್ಕೆ ಪರಿವರ್ತಿಸಿ ಒಳಗೆ ಕಲೆತ ವಿಷವನ್ನು ಹೊರಕಕ್ಕುವುದಾಯಿತು. ಅಲೌಕಿಕದ ಭಯ ಕೂಡ ಇದಕ್ಕೆ ಅಡ್ಡಿ ಬರಲಿಲ್ಲ.

ಬದಲಿಗೆ ಮನುಷ್ಯನ ಮಿತಬುದ್ಧಿ 'ನಮ್ಮ' ಅಲೌಕಿಕ ಬೇರೆ 'ಅವರ' ಅಲೌಕಿಕ ಬೇರೆಯೆ ಎಂದು ವಿಂಗಡಿಸಿ 'ನಮ್ಮ' ಅಲೌಕಿಕದ ನೆರವನ್ನು 'ಅವರ' ಅಲೌಕಿಕದ ವಿರುದ್ಧ ಪಡೆದದ್ದು ಕಾಣುತ್ತದೆ. ಯಹೂದ್ಯ ಪಿತಾಮಹರು ರೂಪಾತೀತನಾದ ಪರಮಾತ್ಮನನ್ನು ಕಲ್ಪಿಸಬಲ್ಲವರಾಗಿದ್ದರು. ಆದರೆ ಅವನೊಡನೆ ಅವರು ಮಾಡಿಕೊಂಡದ್ದು ಒಪ್ಪಂದ. 'ಯೆಹೋವಾ! ನಿನ್ನನ್ನು ನಾವು ಏಕಮಾತ್ರ ದೈವತವೆಂದು ಸ್ವೀಕರಿಸುತ್ತೇವೆ. ನಮ್ಮನ್ನು

ಕಾಪಾಡು.' ಇತರ ದೇವತೆಗಳ ಆರಾಧಕರ ಸಂಗಡ ಬರುವ ಘರ್ಷಣೆಗಳಲ್ಲಿ ಯಹೂದ್ಯರ ಪರದೈವ ಯಹೂದ್ಯರನ್ನೇ ಬೆಂಬಲಿಸುತ್ತಾನೆ. ದೇವಾಸುರರ ಯುದ್ಧವೂ ಎರಡು ದೈವತಗಳ ಆರಾಧಕರ ನಡುವೆ ಹೋರಾಟವೇ. ಅವರಿಗೆ ಇವರ ದೈವ ದುಷ್ಟ; ಇವರಿಗೆ ಅವರದ್ದು. ಮನುಷ್ಯ, ಪೂರ್ವಶಿಲಾಯುಗದಿಂದ ಉತ್ತರಶಿಲಾಯುಗಕ್ಕೆ, ಅಲ್ಲಿಂದ ಲೋಹಯುಗಕ್ಕೆ, ಅಲ್ಲಿಂದ ಇಂದಿನ ಪರಮಾಣುಯುಗಕ್ಕೆ ದಾಟಿ ಬಂದಿದ್ದಾನೆ. ಮಹಾಬೌದ್ಧಿಕರೂ, ಮಹಾದಾರ್ಶನಿಕರೂ, ಮಹಾ ಅಪೌರುಷೇಯ ಧರ್ಮಸ್ಥಾಪಕರೂ ಎದ್ದು ಬಂದು ಮನುಷ್ಯಕುಲ ಒಂದೇ ಎಂದು ಬೋಧಿಸಿದ್ದಾರೆ. ಇವರ ವಿಶ್ವದರ್ಶನಗಳಿಂದ ಹೆಚ್ಚುಹೆಚ್ಚು ದೊಡ್ಡ ದೊಡ್ಡ ಮಾನವಗುಂಪುಗಳ ನಿರ್ಮಾಣವಾಗಿರಬಹುದು. ಆದರೆ ಅವರವರ ಅನುಯಾಯಿಗಳು ತಮ್ಮ ತಮ್ಮ ವಿಶ್ವಧರ್ಮವೇ ನಿಜವಾದ ವಿಶ್ವಧರ್ಮ, ಇತರ ವಿಶ್ವಧರ್ಮಗಳು ಪಾಖಂಡಗಳು; ಆದ್ದರಿಂದ 'ನಮ್ಮ' ಧರ್ಮದ ನೀತಿಕಟ್ಟಿನ ಸೌಲಭ್ಯಗಳನ್ನು 'ಅವರಿಗೆ' ಕೊಡಬೇಕಾಗಿಲ್ಲ. ಅವರನ್ನು ದೋಚಬಹುದು, ಕೊಲ್ಲಬಹುದು, ವಂಚಿಸಬಹುದು ಎಂಬಂತೆ ವರ್ತಿಸಿದರು. ಇಂದು ಕೂಡ ರಾಷ್ಟ್ರಗಳೆಂಬ ಹೆಸರಿನಿಂದ ಮನುಷ್ಯ ಸಮುದಾಯಗಳ ವಿಭಜನೆಯಾಗಿದ್ದು ಅವು ಕೂಡ ಅದೇ 'ನಾವು' ಮತ್ತು 'ಅವರು' ಎಂಬ ತಳಹದಿಯ ಮೇಲೆ ಅದೇ ಬಗೆಯಲ್ಲಿ 'ನ್ಯಾಯಧರ್ಮಾ'ತೀತ ಸ್ಪರ್ಧೆಗಳನ್ನು ನಡೆಸುತ್ತಿವೆ. ಮನುಷ್ಯನ ಆಕ್ರಮಣ ಪ್ರವೃತ್ತಿಯನ್ನು ಪಳಗಿಸುವುದು ಸುಲಭವಲ್ಲ—ಇಂದಿಗೂ. ಪರಲೋಕದ ಭಯ ಹೆಚ್ಚುಕಡಿಮೆ ಅಂತರ್ಧಾನವೇ ಆದ ಈ ಯುಗದಲ್ಲಿ ಸ್ವಜಾತಿಹನನದಿಂದ ಮಾನವ ಕುಲವನ್ನು ರಕ್ಷಿಸಬೇಕಾದ ಮೌಲ್ಯ ಯಾವುದೆಂಬುದನ್ನು ಯೋಚಿಸುವುದಕ್ಕೆ ಹೆಚ್ಚಿನ ಕಷ್ಟವಿಲ್ಲ; ಆದರೆ ಆ ಮೌಲ್ಯಕ್ಕೆ ತಾತ್‌ಕ್ಷಣಿಕ ವಿಧೇಯತೆಯನ್ನು ಹೇಗೆ ಉಂಟು ಮಾಡಬೇಕೆಂಬುದೇ ಪ್ರಶ್ನೆ.

ಆದರೆ ಬುದ್ಧಿಯ ಪ್ರಭಾವದಿಂದ ಇಂದಿನ ವಿಚಾರವಾದಿಯುಗದವರೆಗೆ ಮಾನವನು ಹಾದುಬಂದ ಅನುಭವಗಳು ಅನೇಕ ಮೌಲ್ಯಗಳನ್ನು ಬದಲಾಯಿಸಿವೆ; ಅನೇಕ ಉದಾತ್ತ ಮೌಲ್ಯಗಳನ್ನು ರೂಪಿಸಿವೆ; ಬಹುಮುಖವಾಗಿ ಮೌಲ್ಯಗಳು ಕವಲೊಡೆದಿವೆ. ಶಿಲಾಯುಧಗಳ ಯುಗದಿಂದ ಪರಮಾಣು ಅಸ್ತ್ರಗಳ ಇಂದಿನ ಯುಗದವರೆಗಿನ ಭೌತಿಕ ಪ್ರಗತಿ ಮಾನವನನ್ನು ದಿನ ದಿನದ ಬಾಳಿಗೆ ದಿನದಿನ ಬೆನ್ನುಮುರಿದು ದುಡಿಯುವ ಅಗತ್ಯದಿಂದ ಮುಕ್ತಗೊಳಿಸಿರುವುದರಿಂದ ಮಾನವನ ಅಂತಃಸತ್ವಕ್ಕೆ ಬಗೆಬಗೆಯ ರೀತಿಗಳಲ್ಲಿ ಹೂಬಿಡಲು ಸಾಧ್ಯವಾಗಿದೆ. ಇದನ್ನು ಸಾಧ್ಯವಾಗಿ ಮಾಡಿದ ಕಾರಕಗಳಲ್ಲಿ ಒಂದು ದೊಡ್ಡ ಪಾಲು ಮಾನವನ ಆಕ್ರಮಣಶೀಲತೆಯದೇ ಎನ್ನಬಹುದು. ಇನ್ನೊಂದು ದೊಡ್ಡ ಪಾಲು ಅವನ ಲೈಂಗಿಕ ಉದ್ದಾಮತೆಗೆ ಸಲ್ಲುತ್ತದೆ. ಕೇವಲ ವೈಯಕ್ತಿಕ ಮತ್ತು ಕುಲದ ಉಳಿಗಾಲಕ್ಕಾಗಿ ಮನುಷ್ಯರು ಇವೆರಡು ಪ್ರವೃತ್ತಿಗಳನ್ನು ದೈನಂದಿನವಾಗಿ ಬೆಂಬತ್ತಬೇಕಾದ ಅಗತ್ಯವನ್ನು ನಾಗರಿಕತೆಯ ಮುನ್ನಡೆ ಉತ್ತರೋತ್ತರವಾಗಿ ಕಡಿಮೆಮಾಡುತ್ತ ಬಂದಿದೆ. ಹೀಗೆ

ಉಳಿತಾಯವಾದ ಇಂದ್ರಿಯಶಕ್ತಿಗಳು ಮಹತ್ತರವಾದ ಮೌಲ್ಯಗಳನ್ನು ಉನ್ನತಿಗೆ ಹಿಡಿದಿವೆ. ತ್ಯಾಗ, ಆತ್ಮಸಮರ್ಪಣೆ, ಪರಹಿತ, ಔದಾರ್ಯ, ಶೌರ್ಯ, ಸ್ವಾತಂತ್ರ್ಯ, ಸ್ವಾಭಿಮಾನ, ಕಲೆ, ಸಾಹಿತ್ಯ, ಸೌಂದರ್ಯ ಮೊದಲಾದ ಮೌಲ್ಯಗಳ ಮತ್ತು ಆ ಮೌಲ್ಯಗಳನ್ನು ಬೆಂಬತ್ತಿದ್ದರಿಂದಾಗಿ ಉದ್ಭವಿಸಿದ ಮಹಾಕೃತಿಗಳು ಮಾನವಕುಲ ಅಭಿಮಾನ ಪಡುವಂತಿವೆ. ಅವುಗಳಲ್ಲಿ ಕೆಲವು ಆಕ್ರಮಣ ಪ್ರವೃತ್ತಿಯ ಮತ್ತು ಕೆಲವು ಲೈಂಗಿಕ ಪ್ರವೃತ್ತಿಯ ಮತ್ತು ಕೆಲವು ಉಭಯಪ್ರವೃತ್ತಿಗಳ ಮಿಶ್ರಣದ ಉದಾತ್ತೀಕೃತ ರೂಪಗಳಲ್ಲವೇ? ಎಷ್ಟು ಮಹಾಪರಹಿತಕಾರ್ಯಗಳು ಆಕ್ರಮಣವೃತ್ತಿಯ ರೂಪಾಂತರಗಳು? ಎಷ್ಟು ಕವಿಗಳು ಕಲಾವಿದರು ತಮ್ಮ ಲೈಂಗಿಕ ಹತಾಶೆಗಳನ್ನು ಕಲಾತ್ಮಕ ಸಿದ್ಧಿಗಳಾಗಿ ಎರಕಹೊಯ್ಯಲಿಲ್ಲ? ವಿಜ್ಞಾನದ ಮುನ್ನಡೆಯ ಹಿಂದೆಯೆ ಇವೆರಡು ಪ್ರವೃತ್ತಿಗಳ ಒತ್ತಡ ಎಷ್ಟಿದೆ? ಮತ್ತು ಇವುಗಳಿಂದ ಸ್ಥಾಪಿತ ಮತ್ತು ವಿಕಸಿತವಾದ ಮೌಲ್ಯಗಳಿಂದ ಎಷ್ಟುಮಟ್ಟಿಗೆ ಆ ಮೂಲಪ್ರವೃತ್ತಿಗಳ ಮಾರಕತೆಯನ್ನು ಮೆದುಗೊಳಿಸುವುದಕ್ಕೆ, ತನ್ಮೂಲಕ ವ್ಯಕ್ತಿ ಮತ್ತು ಜಾತಿಯ ಉಳಿಗಾಲಕ್ಕೆ ನೆರವು ಸಿಕ್ಕಿದೆ?

ಮೌಲ್ಯ ವಿವೇಚನೆಯಲ್ಲಿ ನಾನಿಲ್ಲಿ ಆಧ್ಯಾತ್ಮಿಕ, ದೈವಿಕ ಮೌಲ್ಯಗಳಿಗೆ ಗಮನಕೊಟ್ಟಿಲ್ಲ, ಮೌಲ್ಯ ಎಂಬುದು ನನ್ನ ದೃಷ್ಟಿಯಲ್ಲಿ ಜೀವಿಗೆ ಕೇವಲ ಇಂದ್ರಿಯ ಪ್ರವೃತ್ತಿಗಳ ಸಮಾಧಾನದಿಂದ ದೊರಕುವ ತೃಪ್ತಿಗಿಂತ ಭಿನ್ನವಲ್ಲದಿದ್ದರೂ ಮೇಲಿನ ಸ್ತರದ ತೃಪ್ತಿಯನ್ನು ಕೊಡುವಂಥಾ ಒಲವುಗಳು. ಆ ದೃಷ್ಟಿಯಿಂದ ಆಧ್ಯಾತ್ಮಿಕ ಮತ್ತು ದೈವಿಕ ಭಾವನೆಗಳೂ ಮೌಲ್ಯಗಳೇ ಅವುಗಳನ್ನು ಭ್ರಾಂತಿಗಳು ಎನ್ನುವುದಾದರೆ ಎಲ್ಲ ಮೌಲ್ಯಗಳೂ ಭ್ರಾಂತಿಗಳೇ.

ಇಂದು ಮಾನವ ಕುಲ ಜ್ಞಾನ, ಸ್ವಾತಂತ್ರ್ಯ, ಅಭಿಮಾನ ಎಂಬ ಮೌಲ್ಯಗಳ ಅಪ್ರತಿಹತ ಅನುಸರಣೆಯಿಂದ ಒಂದು ಅಪಾಯಕರ ಪ್ರಪಾತದ ಅಂಚಿಗೆ ಬಂದು ನಿಂತಿದೆ. ಜ್ಞಾನದಾಹ ಅವನಿಗೆ ಒಂದು ಜಾತಿಯಾಗಿ ಆತ್ಮಹತ್ಯೆಯ ಶಕ್ತಿಕೊಟ್ಟಿದೆ; ವೈಯಕ್ತಿಕ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯದ ಹಂಬಲ, ಈ ಜ್ಞಾನಾನ್ವೇಷಣೆಯ ಮತ್ತು ಅದರಿಂದ ಲಭಿಸಿದ ಸದಸತ್ ಬಲಗಳ ಸಂಗ್ರಹ ಮತ್ತು ವಿಸ್ತರಣೆಗೆ ತಡೆಹಾಕುವುದನ್ನು ಕಷ್ಟವಾಗಿ ಮಾಡಿದೆ. ಆಕ್ರಮಣದ್ದೇ ಒಂದು ಮುಖವಾದ ಅಭಿಮಾನ ಅವನಿಗೆ ಸ್ಪರ್ಧೆಯಲ್ಲಿ ಮಿತಿಗಳನ್ನು ಒಪ್ಪಿಕೊಳ್ಳುವುದನ್ನು ಅಸಾಧ್ಯಪ್ರಾಯವಾಗಿ ಮಾಡಿದೆ. ಜ್ಞಾನದ ಪ್ರಸ್ಫೋಟದಿಂದಾಗಿ ಮಾನವ ಗುಂಪುಗಳನ್ನು ಈವರೆಗೆ ಕಾಪಾಡಿಕೊಂಡು ಬಂದ ಅಲೌಕಿಕದ ಭಯವೆಂಬ ಮೌಲ್ಯ ಹೆಚ್ಚು ಕಡಿಮೆ ನಷ್ಟವಾಗಿದೆ. (ಧರ್ಮಭೀರು ಇತ್ಯಾದಿ ಪದಗಳಿಂದ ಭಯವೂ ಒಂದು ಮೌಲ್ಯ ಎಂದು ಸ್ವೀಕೃತವಾಗಿದೆ) ಹೀಗೆ ಮನುಷ್ಯ ಇಂದು ತನಗೆ ಮಾತ್ರ ಜವಾಬ್ದಾರಿಯಾಗಿದ್ದಾನೆ. ಆದರೆ ಈ 'ತಾನು' ಎಂಬುದು ದೈವಿಕ ಮೌಲ್ಯಗಳು ಆಳುತ್ತಿದ್ದಾಗಿನ ಕಾಲದಲ್ಲಿ ಇದ್ದಂತೆ ಶಾಶ್ವತವೂ, ಅಲೌಕಿಕವೂ, ಅನುಲ್ಲಂಘ್ಯವೂ ಆಗಿಲ್ಲ. ಆದ್ದರಿಂದ ಅದು ಪ್ರವೃತ್ತಿಗಳ ನಿಗ್ರಹಕ್ಕೆ ಬೇಕಾದ ಶಕ್ತಿಯನ್ನು ಹೊಂದಿದೆಯೇ ಎಂಬುದು ಸಂಶಯಾಸ್ಪದ. ಈ ಸ್ಥಿತಿಯಲ್ಲಿ ಕೆಲವೊಂದು ಹಳೆಯ ಮೌಲ್ಯಗಳ ಸ್ಥಾಪನೆ ಅಗತ್ಯವಾಗಿದೆ. ಹಿಂದೆ ಹೀಗೆ ಆಗಿದೆ. ವ್ಯಕ್ತಿಯ

ಸ್ವಾತಂತ್ರ್ಯವನ್ನು ಗುಂಪಿನ ಸ್ವಾತಂತ್ರ್ಯಕ್ಕೂ, ಗುಂಪಿನ ಸ್ವಾತಂತ್ರ್ಯವನ್ನು ರಾಷ್ಟ್ರ ಸ್ವಾತಂತ್ರ್ಯಕ್ಕೂ, ಉತ್ಕರ್ಷಕ್ಕೂ ಅಧೀನವಾಗಿ ಮಾಡುವ ಮೌಲ್ಯಗಳನ್ನು ಮಾನವ ಕುಲ ರೂಢಿಸಿಕೊಂಡಿತು. ಆದರೆ ಮೌಲ್ಯಗಳು ದೀರ್ಘಾನುಭವದಿಂದ ಹೊರಟು, ಸಾರ್ವತ್ರಿಕ ಗೌರವವುಳ್ಳ ಅಧಿಕಾರವಾಣಿಯಿಂದ ಅಥವಾ ಬಲದಿಂದ ಪ್ರಣೀತವಾಗಿ, ದೀರ್ಘ ತರಬೇತಿಯಿಂದ ರೂಢಿಪ್ರತಿಕ್ರಿಯಾ ಸ್ವರೂಪದ ವಿಧೇಯತೆಯನ್ನು ಸಂಪಾದಿಸಿ ನೆಲಸಬೇಕಾದವುಗಳು. ಅಷ್ಟು ವೇಳೆ ಇದೆಯೇ ಎಂಬುದೀಗ ಪ್ರಶ್ನೆ.

ಮನುಷ್ಯನ ಮೂಲಪ್ರವೃತ್ತಿಗಳ ಬಹುಭಾಗ ಅವನು ಅಪಾಯಕರವಾಗಿ ಬದುಕಿದ್ದಾಗ ರೂಪುಗೊಂಡು ಇಳಿದು ಬಂದುವುಗಳು. ಇಂದು ಆ ಅಪಾಯಗಳನ್ನು ನಾಗರಿಕತೆ ನಿವಾರಿಸಿದೆ. ನ್ಯಾಯ (law) ಎಂಬ ಮೌಲ್ಯ ವ್ಯಕ್ತಿಹಿತಗಳನ್ನು ಬಹುಮಟ್ಟಿಗೆ ಕಾಯುತ್ತದೆ. ಲೈಂಗಿಕ ಸ್ಪರ್ಧೆ ಘಾತಕವಾಗದಂತೆ ವಿವಾಹಸಂಸ್ಥೆ ಇದೆ. ಸ್ಪರ್ಧೆಯ ಪ್ರವೃತ್ತಿಗೆ ವ್ಯಾಪಾರ, ಕಲೆ, ವಿಜ್ಞಾನ ಮೊದಲಾದ ಅನೇಕ ನಿರುಪದ್ರವಿ ಅವಕಾಶಗಳಿವೆ. ಆದರೂ ಮನುಷ್ಯನ ಶರೀರದ ರಾಸಾಯನಿಕ ಸ್ವರೂಪ ಹಿಮಯುಗದಲ್ಲಿದ್ದಂತೆಯೇ ಇದೆ. ಅವು ಅವನನ್ನು ಅನಿಷ್ಟ-ಅಪಾಯಕರವಾದ ಕ್ರೋಧಾದಿಮಾರ್ಗಗಳಲ್ಲಿ ಪ್ರೇರಿಸುತ್ತಿವೆ. ಇಂದಿನ ವ್ಯಕ್ತಿಗಿಂತ ಮಾನವ ಸಮಾಜಕ್ಕೆ ಇದು ಗಂಡಾಂತರವೊಡ್ಡುತ್ತಿದೆಯೆಂದು ಒಬ್ಬ ವಿಜ್ಞಾನಿ ವಾದಿಸಿದ್ದು ನನಗೆ ಇಲ್ಲಿ ನೆನಪಾಗುತ್ತದೆ. ದೈವಾತ್ ಇಂದು ಮನುಷ್ಯನ ಜ್ಞಾನಸೀಮೆ ಈ ರಾಸಾಯನಿಕ ಪ್ರಚೋದಕಗಳನ್ನು ಸರಿಯಾಗಿ ತಿಳಿದುಕೊಳ್ಳುವಷ್ಟು ವಿಸ್ತರಿಸಿದೆ. ಅವನ ರಾಸಾಯನಿಕ ರಚನೆಯನ್ನೇ ಬದಲಿಸಲು ಇಂದು ಸಾಧ್ಯವಿದೆ. ಅವನ ಆಕ್ರಮಣ ಭಾವವನ್ನು ತಗ್ಗಿಸಬಹುದು; ಕಾಮಾತಿರೇಕವನ್ನೂ ಕ್ರೋಧಾತಿರೇಕವನ್ನೂ ತಹಬಂದಿಗೆ ತರುವ ಚಿಕಿತ್ಸೆಕೊಡಬಹುದು. ಆದರೆ ಹೀಗೆ ಮಾಡಿದರೆ ದೀರ್ಘ ಪರಿಣಾಮ ಏನಾದೀತು? ಆಕ್ರಮಣ ಮತ್ತು ಕಾಮಪ್ರವೃತ್ತಿಗಳೊಡನೆ ತಳುಕುಬಿದ್ದ ಅನೇಕ ಸದ್‌ಗುಣಗಳ ಗತಿಯೇನು? ಮನುಷ್ಯನ ಮೂಲಸ್ವಭಾವವನ್ನು ರಾಸಾಯನಿಕವಾಗಿಯೇ ಆಗಲಿ ರೂಢಕ್ರಿಯೆ (conditioning) ಯಿಂದಲೇ ಆಗಲಿ, ಕ್ರಾಂತಿಕಾರಕವಾಗಿ ಬದಲಿಸುವುದು ಅತ್ಯಂತ ಅಪಾಯಕಾರಿ. ಮದ್ದುಹಾಕಿ ಗಂಡನನ್ನು ವಶೀಕರಿಸಿಕೊಳ್ಳುವ ಹೆಣ್ಣು ಅವನನ್ನು ವಿಧೇಯನನ್ನಾಗಿ ಮಾಡಿಕೊಳ್ಳುತ್ತಾಳೆ. ಸಂಗಡವೇ ಅವನು ಮಂಕಾಗಿ ಮೂಲೆ ಹಿಡಿಯುತ್ತಾನೆ.

ಸಮಸ್ಯೆಗೆ ಉತ್ತರ ತರ್ಕಮಾರ್ಗದಿಂದ ದುಷ್ಕರ. ಒಂದು ದುರ್ಮುಹೂರ್ತದಲ್ಲಿ ವ್ಯಕ್ತಿಯ ಒಂದು ಚಿಕ್ಕ ದುಡುಕಿನಿಂದ ಅಥವಾ ಒಂದು ಆಕಸ್ಮಿಕದಿಂದ ಮಾನವಕುಲ ಸಾಮೂಹಿಕ ನಾಶವನ್ನು ತಂದುಕೊಳ್ಳಲೂಬಹುದು. ಒಂದು ವೇಳೆ ಹಾಗಾದರೂ ಮನುಷ್ಯಕುಲದ ಅಸ್ತಿತ್ವ ವ್ಯರ್ಥವೆಂದಾಗದು. ಇನ್ನಾವುದಾದರೊಂದು ಲೋಕದಿಂದ ಇಲ್ಲಿ ಬರಬಹುದಾದ ಭವಿಷ್ಯತ್ತಿನ ಒಂದು ಬುದ್ಧಿಶಾಲಿ ಪ್ರಾಣಿ ಇಲ್ಲಿನ ಭಗ್ನಾವಶೇಷಗಳನ್ನು ಕಂಡರೆ ಇದೊಂದು ಮಹೋನ್ನತವಾದ ಟ್ರಾಜಡಿ ಎಂದು ಭಾವಿಸಿ ಹೀಗಾಗಬಾರದಿತ್ತು

ಎಂದುಕೊಂಡೀತೇ ಹೊರತು ಇದೊಂದು ತುಚ್ಛಪ್ರಯೋಗವೆಂದೆಣಿಸಲಾರದು. ಬೈರನ್ನನು ನೆಪೋಲಿಯನ್ನನ ಬಗ್ಗೆ ಹೇಳಿದ್ದನ್ನೇ ವ್ಯತ್ಯಾಸಗೊಳಿಸಿ,

ಕ್ಷುದ್ರನಾಗಿ ಬದುಕಬೇಕೆ ಮಹಿಮನಾಗಿ
ಸಾಯಬೇಕೆ—
ಎರಡರಲ್ಲಿ ಮಹೋನ್ನತವೆ ಆಗಿತ್ತಲ್ಲ
ನಿನ್ನ ಆಯ್ಕೆ!

—ಎಂದು ಆ ಜೀವಿ ಪ್ರಶಂಸಿಸಬಹುದು.

ಆದರೆ ನಾನು ಆಶಾವಾದಿ. ದೈವಿಕದಲ್ಲಿ ಅಲ್ಲದಿದ್ದರೂ ವಿಶ್ವಸಂಕಲ್ಪದಲ್ಲಿ ನಂಬಿಕೆಯುಳ್ಳವನು. ಆ ವಿಶ್ವಸಂಕಲ್ಪ ನಮ್ಮ ಮೂಲ ರಾಸಾಯನಿಕ ಸ್ವರೂಪದಲ್ಲೇ ನಿಹಿತವಾಗಿದೆಯೆಂದೂ ನಾನು ನಂಬುತ್ತೇನೆ. ನಾವು ಜೀವವಿಕಾಸವನ್ನು ಅರ್ಥಮಾಡಿಕೊಂಡ ರೀತಿಯಿಂದ, ಮಾನವ ಚರಿತ್ರೆ ನಡೆದು ಬಂದ ಕ್ರಮದಿಂದ, ಆ ಸಂಕಲ್ಪ ಜೀವ ಜಾತಗಳ ಸಾಮೂಹಿಕ ಉಳಿಗಾಲವನ್ನೇ ಧ್ಯಾನಿಸುತ್ತಿದೆಯೆನಿಸುತ್ತದೆ. ಆದ್ದರಿಂದ ಬಿಕ್ಕಟ್ಟಿನ ಕ್ಷಣದಲ್ಲಿ ವಿಶ್ವಸಂಕಲ್ಪ ನಮ್ಮ ಸ್ವಭಾವದಲ್ಲೇ ನಮಗಿನ್ನೂ ಅರ್ಥವಾಗದ ಒಂದು ಅಜ್ಞಾತಕಾರಕವನ್ನು ಜಾಗ್ರತಗೊಳಿಸಿ ಕುಲವನ್ನು ಕಾಪಾಡುತ್ತದೆಂದು ನಿರೀಕ್ಷಿಸುತ್ತೇನೆ.

■

# ಸುಖ ಬೇಕಾದರೆ ಪ್ರೀತಿ ಬೇಕು

## (ಬರ್ಟ್ರಂಡ್ ರಸೆಲ್ಲರ ವಿಚಾರಗಳನ್ನನುಸರಿಸಿ)

ಮಾನವ ಜೀವಿಗಳು ಸುಖ ಎಂದು ಏನನ್ನು ಕರೆಯುತ್ತಾರೋ ಅದು ಜೀವನದಲ್ಲಿ ಅವನವನ ಉತ್ಸಾಹ ಎಷ್ಟಿದೆ ಎಂಬುದನ್ನು ಅವಲಂಬಿಸುತ್ತದೆ. ಒಬ್ಬನು ಸಾಮಾನ್ಯವಾಗಿ ಸುಖಿಯೋ ಅಸುಖಿಯೋ ಎಂಬುದನ್ನು ಅವನಲ್ಲಿ ವ್ಯಕ್ತವಾಗುವ ಉತ್ಸಾಹದಿಂದಲೇ ಅಳೆಯಬಹುದು. ಉತ್ಸಾಹಿಯು ಜೀವನದಲ್ಲಿ ಇಷ್ಟವಾದ ಅಂಶಗಳಿವೆಯೆಂದು ಒಪ್ಪುತ್ತಾನೆ ಮತ್ತು ಅದನ್ನು ಸಾಧಿಸಲು ಯತ್ನಿಸುತ್ತಾನೆ. ನಿರುತ್ಸಾಹಿಯು ಬಾಳಿನಲ್ಲಿ ಕತ್ತಲೆಯನ್ನೇ ಕಾಣುತ್ತಾನೆ. ಯಾವುದಕ್ಕೂ ಏನೂ ಅರ್ಥವಿಲ್ಲ ಎಂಬ ಗ್ರಹಿಕೆಯಿಂದಲೇ ಅವನು ಹೊರಡುವುದರಿಂದ ಅವನಿಗೆ ಸುಖವೆಂಬ ಪದಾರ್ಥ ದುರ್ಲಭವಾಗುತ್ತದೆ.

ಉತ್ಸಾಹದ ತಳದಲ್ಲಿ ಪ್ರೀತಿ ಎಂಬ ಪದಾರ್ಥವಿದೆಯೆಂಬುದು ಅನೇಕರ ಗಮನಕ್ಕೆ ಬರುವುದಿಲ್ಲ. ತನ್ನನ್ನು ಯಾರಾದರೂ ಪ್ರೀತಿಸುತ್ತಾರೆ ಎಂಬ ಅರಿವು ತನ್ನೊಡನೆ ಉತ್ಸಾಹವನ್ನು ತರುತ್ತದೆ. ತನ್ನನ್ನು ಪ್ರೀತಿಸುವವರಿಲ್ಲ ಎಂಬ ಭಾವನೆ ಇದ್ದವನಿಗೆ ಬಾಳಿನಲ್ಲಿ ಉತ್ಸಾಹ ಬರುವುದು ಕಷ್ಟ.

ತನ್ನನ್ನು ಯಾರೂ ಪ್ರೀತಿಸುವುದಿಲ್ಲ ಎಂಬ ಅನಿಸಿಕೆ ಮನುಷ್ಯನಿಗೆ ಏಕೆ ಬರುತ್ತದೆ? ಕಾರಣಗಳು ಬಗೆಬಗೆಯವಾಗಿರಬಹುದು. ತಾನು ಶುದ್ಧಅಯೋಗ್ಯ-ತನ್ನನ್ನು ಯಾರೂ ಪ್ರೀತಿಸಲಾರರು ಎಂಬ ಭ್ರಮೆ ಅವನಿಗಿರಬಹುದು; ಅಥವಾ ಬಾಲ್ಯದಲ್ಲಿ ತನ್ನ ಸುತ್ತಲ ಇತರ ಮಕ್ಕಳಿಗಿಂತ ಅವನಿಗೆ ಪ್ರೀತಿಯ ಪಾಲು ಕಡಿಮೆ ದೊರೆತಿರಬಹುದು; ಇಲ್ಲವೇ ನಿಜವಾಗಿಯೂ ಅವನನ್ನು ಯಾರೂ ಪ್ರೀತಿಸುತ್ತಿರಲಿಕ್ಕಿಲ್ಲ.

ಪ್ರೇಮವಂಚಿತರಾದವರು ಅದಕ್ಕಾಗಿ ಹಂಬಲಿಸಿ ಅಪೂರ್ವ ದಯೆ ಔದಾರ್ಯದ ಕೃತಿಗಳನ್ನು ಮಾಡುವುದುಂಟು. ಇದಕ್ಕೆ ಪ್ರತಿಯಾಗಿ ಅವರು ಪ್ರೀತಿ ನಿರೀಕ್ಷಿಸುತ್ತಾರೆ. ಆದರೆ ಅವರಿಗೆ ಅದು ದೊರೆಯುವುದು ಅಪರೂಪ. ಪ್ರತಿಫಲಾಪೇಕ್ಷೆಯಿಂದ ಕೊಟ್ಟ ಯಾವ ದಾನವೂ ತೆಗೆದುಕೊಂಡವರಲ್ಲಿ ನಿಜವಾದ ಕೃತಜ್ಞತೆಯನ್ನು, ಪ್ರೀತಿಭಾವನೆಯನ್ನು ಜಾಗರಿಸಲಾರದು. ಪ್ರೀತಿಗಾಗಿ ಬೇಡುವವರಿಗೆ ಅದು ದೊರೆಯುವುದಿಲ್ಲ. ಇದು ಮಾನವ ಸ್ವಭಾವ. ಹೀಗಾದೊಡನೆ ಆ ವ್ಯಕ್ತಿ ಪ್ರಪಂಚವೇ ಕೃತಘ್ನವಾಗಿದೆಯೆಂಬ ತೀರ್ಮಾನಕ್ಕೆ ಬರುತ್ತಾನೆ.

ಪ್ರೀತಿಯ ಅಭಾವವುಳ್ಳವರು ಇನ್ನೊಂದು ರೀತಿಯಲ್ಲೂ ಪ್ರತಿಕ್ರಿಯೆ ತೋರಿಸಬಹುದು. ಯುದ್ಧ, ಕ್ರಾಂತಿಗಳ ಮೂಲಕ ತಮ್ಮನ್ನು ಪ್ರೀತಿಸಲೊಲ್ಲದ ಪ್ರಪಂಚದ ಮೇಲೆ ಅವರು ಸೇಡು ತೀರಿಸಿಕೊಳ್ಳಬಹುದು. ಇಲ್ಲವೇ ಪರರನ್ನು ವಿಷಬಾಣಗಳಿಂದ ನೋಯಿಸುವ ತೀಕ್ಷ್ಣ ಬರವಣಿಗೆಗಳಿಂದ ತಮ್ಮ ಕೋಪವನ್ನು ಪ್ರಕಟಿಸಬಹುದು. ಇಂಥವರು ಪ್ರಚಂಡ ಪುರುಷರಾಗಿರುತ್ತಾರೆ; ಮಹಾ ಧೈರ್ಯಶಾಲಿಗಳಾಗಿರುತ್ತಾರೆ. ಅದನ್ನೆಲ್ಲ ದುರುಪಯೋಗ ಪಡಿಸುತ್ತಾರಷ್ಟೇ.

ಆದರೆ ಸಾಮಾನ್ಯ ಯೋಗ್ಯತೆಯ ಜನ ಪ್ರೀತಿಯ ಹಸಿವನ್ನು ನಿರಾಶೆ, ಹೊಟ್ಟೆಕಿಚ್ಚು, ಆಗಾಗ್ಗೆ ಪರನಿಂದೆಗಳ ಮೂಲಕ ವ್ಯಕ್ತಪಡಿಸುತ್ತಾರೆ. ಪ್ರೀತಿಸುವವರಿಲ್ಲದ ಮನುಷ್ಯನಲ್ಲಿ ಅಧೈರ್ಯವುಂಟಾಗುವುದರಿಂದ ಅವನು ರೂಢಿಬಿದ್ದದ್ದನ್ನೇ ಮಾಡುತ್ತ ಗೊತ್ತಿದ್ದ ದಾರಿಯಲ್ಲೇ ಸಾಗುತ್ತಾನೆ. ಸಾಹಸ ವೃತ್ತಿ ಅವನಲ್ಲಿ ಹುಟ್ಟುವುದಿಲ್ಲ. ಇದು ಉತ್ಸಾಹಕ್ಕೆ ಪೋಷಕವಲ್ಲ.

ಅಧೈರ್ಯ ಇಲ್ಲವೇ ಅಸುರಕ್ಷಿತತೆಯ ಭಾವನೆಯುಳ್ಳವರಿಗಿಂತ ಧೈರ್ಯವಂತರು, ಸುರಕ್ಷಿತತೆಯ ಭಾವನೆಯುಳ್ಳವರು ಹೆಚ್ಚು ಸುಖಿಗಳಾಗುತ್ತಾರೆ. ಆತ್ಮವಿಶ್ವಾಸವು ಉತ್ಸಾಹದ ಹಾಗೆಯೇ ಸುಖಕ್ಕೆ ಬೀಜವೆನ್ನಲಾಗದಿದ್ದರೂ ಪೋಷಕ ದ್ರವ್ಯ. ಅದು ಸರಿಯಾದ ಮಾದರಿಯ ಪ್ರೀತಿಯಿಂದ ಬಂದಷ್ಟು ಬೇರಾವುದರಿಂದಲೂ ಬಾರದು.

ಸರಿಯಾದ ಪ್ರೀತಿ ಎಂದರೇನು? ಸುರಕ್ಷಿತತೆಯ ಭಾವನೆ ಬರಲು ಆಧಾರ ನಮಗೆ ಇತರರಿಂದ ದೊರೆಯುವ ಪ್ರೀತಿ ಹೊರತು ನಾವು ಕೊಡುವ ಪ್ರೀತಿಯಲ್ಲ. ಪ್ರೀತಿಯೊಂದೇ ಸಾಲದು; ಪ್ರಶಂಸೆಯೂ ಬೆರತಿದ್ದರೆ ಮನುಷ್ಯ ಕೃತಾರ್ಥತೆಯನ್ನು ಅನುಭವಿಸುತ್ತಾನೆ. ಸಂಗೀತಗಾರ ಹಾಡುತ್ತಿರುವಾಗ ನೀವು ತಲೆದೂಗುತ್ತಿದ್ದರೆ, ಭೇಷ್! ಎನ್ನುತ್ತಿದ್ದರೆ ಅವನ ಉತ್ಸಾಹ ಇಮ್ಮಡಿಸುತ್ತದೆ. ಕವಿ, ನಟ, ಗಾಯಕರು ಹೀಗೆ ಸಾರ್ವಜನಿಕ ಪ್ರೇಮದಿಂದ ಉಬ್ಬುವವರು. ಅದಿಲ್ಲದಿದ್ದರೆ ಅವರು ಅತೀವ ಅಸುಖಿಗಳಾಗುತ್ತಾರೆ.

ಬಾಲ್ಯದಲ್ಲಿ ತಂದೆತಾಯಿಗಳ ಕೊಂಡಾಟ ಚೆನ್ನಾಗಿದ್ದರೆ ಮಕ್ಕಳು ಸುಖಿಗಳಾಗಿರುತ್ತಾರೆ. ಆ ಪ್ರೀತಿಯನ್ನು ಅವರು ಮನಸಾ ಗಮನಿಸುತ್ತಾರೆಂದಲ್ಲ. ಅವರಿಗೆ ಅದು ಸಹಜವಾಗಿ ಬರುವುದರಿಂದ ಅದರ ಬಗ್ಗೆ ಅವರು ವಿಚಾರಿಸುವುದಿಲ್ಲ. ಪ್ರೀತಿಪಾತ್ರರಾದ ಮಕ್ಕಳು ಹೊರ ಜಗತ್ತನ್ನು ಚಿಂತಿಸುತ್ತಾರೆ, ದೊಡ್ಡವರಾದ ಮೇಲೆ ಮಾಡಬೇಕಾದ ಹೊಸ ಹೊಸ ಸಾಹಸಗಳ ಕಲ್ಪನೆ ಕಟ್ಟುತ್ತಾರೆ. ಇದೆಲ್ಲಕ್ಕೆ ಮನಸ್ಸಿನ ತಳದಲ್ಲಿ ತನ್ನನ್ನು ಕಷ್ಟದಿಂದ ಕಾಪಾಡುವವರಿದ್ದಾರೆ ಎಂಬ ಪ್ರಜ್ಞೆ ಇರುವುದೇ ಕಾರಣ. ಪ್ರೀತಿ ವಂಚಿತರಾದ ಮಕ್ಕಳು ಅತಿ ನಮ್ರರಾಗಿ ಅಳುಬುರುಕರಾಗಿ ಸ್ವಾರ್ಥಿಗಳಾಗಿ ಬೆಳೆಯುತ್ತಾರೆ. ಪ್ರಾಯ ಬರುವುದರೊಳಗೇ ಬಾಳು ಸಾವುಗಳ ಚಿಂತನೆ ಪ್ರಾರಂಭಿಸುತ್ತಾರೆ. ಪ್ರಪಂಚವೆಲ್ಲ ಅರ್ಥವಿಲ್ಲದ ಸಂತೆ ಎಂಬ ನಿರ್ಣಯಕ್ಕೆ ಬರುತ್ತಾರೆ. ಬುದ್ಧಿಶಾಲಿಗಳಾಗಿದ್ದರೆ ಈ ಗೊಂದಲವನ್ನೆಲ್ಲ ಸರಿಪಡಿಸಿ ವ್ಯವಸ್ಥಿತ ರೂಪವನ್ನು ಕೊಡುವ ನಿರಾಶಾವಾದಿ ತತ್ವಜ್ಞಾನದ ಸೌಧ ಕಟ್ಟುತ್ತಾರೆ. ಈ ವ್ಯವಸ್ಥಿತ

ಸೌಧದಲ್ಲಿ ಅಪಧೈರ್ಯವಿಲ್ಲದೆ ಮಾನಸಿಕ ವಿಹಾರ ಮಾಡಬಹುದಲ್ಲ! ವಾಸ್ತವ ಪ್ರಪಂಚದಲ್ಲಿ ಚಲಿಸಲು ಅವರಿಗಾಗುವ ಅಂಜಿಕೆಯೇ ಈ ಆದರ್ಶ ಪ್ರಪಂಚದ ಕಲ್ಪನೆಗೆ ಕಾರಣವಾಗಿರುತ್ತದೆ.

ಆದ್ದರಿಂದ ನಿಮ್ಮ ಮಗು ಬೆಳೆದು ಜಗತ್ತಿನೊಡನೆ ಹೊಂದಿಕೊಂಡು ಸುಖಿಯಾಗಿ ಬಾಳಬೇಕಾದರೆ ಅದಕ್ಕೆ ನಿಮ್ಮ ಮಮತೆಯನ್ನು ಎರೆಯಿರಿ. ಆದರೆ ಸರಿಯಾದ ಮಮತೆಯನ್ನು ಎರೆಯಿರಿ. ಮಮತೆಯಲ್ಲಿಯೂ ಸರಿಯಾದ, ತಪ್ಪಾದ ಮಮತೆಗಳಿವೆ. ಸ್ವತಃ ತೀರ ಅಂಜುಬುರುಕಿಯಾದ ತಾಯಿ ಮಗುವನ್ನು ಅತಿಯಾಗಿ ಪ್ರೀತಿಸಿ ಕಾಪಾಡಲು ಯತ್ನಿಸುತ್ತಾಳೆ. ರಸ್ತೆ ದಾಟಬೇಡ, ಕಾರಿನಡಿ ಬಿದ್ದೀಯೆ; ಅಲ್ಲಿ ಹೋಗಬೇಡ, ಹೋರಿ ಇರಿದೀತು; ನೀರು ಕುಡಿಯಬೇಡ, ನೆಗಡಿಯಾದೀತು ಹೀಗೆ ಪ್ರತಿಯೊಂದು ಚಿಲ್ಲರೆ ಅಪಾಯವನ್ನೂ ಹೆಚ್ಚಿಸಿ ಹೇಳಿದರೆ ಮಗು ಪ್ರಪಂಚವನ್ನು ಅಪಾಯಕರ ಸ್ಥಳವೆಂದು ಬಗೆದು ಯಾವಾಗಲೂ ತಾಯಿಯ ನೆರಳಲ್ಲೇ ನಡೆಯಲಾರಂಭಿಸುವುದು. ಈ ಅಭ್ಯಾಸ ದೊಡ್ಡವನಾದ ಮೇಲೂ ಉಳಿದುಕೊಳ್ಳುವುದು. ಈ ಅತಿ ಮಮತೆಯು ಅವನನ್ನು ಸದಾ ದೈಹಿಕ ಮತ್ತು ಮಾನಸಿಕ ಪರಾಧೀನತೆಯಲ್ಲಿಡುವುದು. ಅಂಗರಕ್ಷಕರಿಲ್ಲದೆ ನಡೆಯದು. ಮದುವೆಯಾದ ಮೇಲೆ ಅವರು ಹೆಂಡತಿಯಿಂದ ಒಂದು ಬಗೆಯ ಮಾತೃತ್ವವನ್ನೇ ಅಪೇಕ್ಷಿಸುವರು. ಇದರಿಂದ ಹೆಂಡತಿಯ ಮನಸ್ಸಿನಲ್ಲಿ ಗಂಡನ ಮೇಲೆ ಗೌರವ ಇಳಿದು ಹೋಗುವುದು ಸಹಜ. ಅವಳು ಅವನನ್ನು ಒಂದು ಬೆಳೆದ ಮಗುವಿನಂತೆ ನಡೆಸಿಕೊಳ್ಳುತ್ತಾಳೆ. ಹಾಗಾದಾಗ ಗಂಡನಿಗೆ ವ್ಯಥೆಯಾಗುತ್ತದೆ.

ಅಂದಾಕ್ಷಣ ಮಗು ಅಪಾಯವನ್ನು ಹುಡುಕಿಕೊಂಡು ಹೋಗುವಂತೆ ಪ್ರೋತ್ಸಾಹಿಸುವುದು ಮಮತೆ ಎಂದು ಅರ್ಥವಲ್ಲ. ಮಮತೆಯಲ್ಲಿ ಅನಿವಾರ್ಯವಾಗಿ ರಕ್ಷಣಾಭಾವ ಸ್ವಲ್ಪವಾದರೂ ಇದ್ದೇ ಇರುತ್ತದೆ. ಪ್ರೀತಿಪಾತ್ರರಿಗೆ ಕಷ್ಟವಾದರೆ ನಾವು ನೋಯದೆ ಇರಲಾರೆವು. ಆದರೆ ಮಮತೆಯು ಅನಾಹುತವನ್ನೇ ಊಹಿಸಿ ಹೆದರಿಸುವದರಲ್ಲಿಲ್ಲ ; ಕಷ್ಟ ಬಂದಾಗ ಸಹಾನುಭೂತಿ ತೋರಿಸುವುದರಲ್ಲಿದೆ. "ಬಿದ್ದೆಯಾ ಮಗು? ಹೋಗಲಿ ಬಿಡು!" ಎಂದು ಧೂಳು ಝಾಡಿಸಿ ಒಂದು ಮುದ್ದುಕೊಟ್ಟರೆ ಮಗುವಿಗೆ ಆಗುವ ಹಿತ, "ಆಡಬೇಡ, ಬಿದ್ದೀ" ಎನ್ನುವುದರಿಂದ ಆಗುವುದಿಲ್ಲ. ಪರರ ಸಲುವಾಗಿ ಭಯಪಡುವುದು ಒಂದು ವಿಧದ ಸೊತ್ತಿನ ಭಾವನೆ ಹೊರತು ನಿಜವಾದ ಪ್ರೀತಿಯಲ್ಲ. ಪ್ರತಿಯೊಂದು ವಿಷಯದಲ್ಲಿಯೂ ಭಯ ಪ್ರಚೋದನೆ ಮಾಡುವ ತಾಯಿತಂದೆಗಳು ಮಗುವಿನ ಮೇಲೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವ ಗುಪ್ತ ಅಭಿಲಾಷೆಗೆ ಪ್ರೀತಿಯ ರೂಪ ಕೊಡುತ್ತಾರಷ್ಟೇ.

ಪ್ರೀತಿಗೆ ಧೈರ್ಯದಾಯಕ ಮುಖವಲ್ಲದೆ ಇನ್ನೊಂದು ಮುಖವೂ ಇದೆಯೆಂದು ನೆನಪಿಡುವುದು ಅಗತ್ಯವಾಗಿದೆ. ಅದೆಂದರೆ ದಾಂಪತ್ಯ ಸುಖ. ತಾಯಿಯಿಂದ ಅತಿರಕ್ಷಿತನಾದ ವ್ಯಕ್ತಿಗೆ ಹೆಣ್ಣಿನಲ್ಲಿ ನಿಜವಾದ ಕಾಮಾಸಕ್ತಿಯನ್ನು ಪ್ರಚೋದಿಸುವುದು ಕಷ್ಟವಾಗುತ್ತದೆ. ಇದು ಜೀವನದ ಅತ್ಯಂತ ಕಮನೀಯವಾದ ಸುಖಕ್ಕೆ ಅವನು ಎರವಾಗುವಂತೆ ಮಾಡುತ್ತದೆ. ಹಾಗೆಯೆ ಗಂಡಿನಲ್ಲಿ ಆಸಕ್ತಿಯನ್ನು ಪ್ರೇರಿಸಲಾರದ ಹೆಣ್ಣು ಕೂಡ ಪುರುಷನಿಂದ ದೊರಕುವ

ನಿಜವಾದ ಸುಖದಿಂದ ವಂಚಿತಳಾಗುತ್ತಾಳೆ. ಹೀಗೆ ಆಸಕ್ತಿವಿಹೀನ ದಾಂಪತ್ಯ ಪರ್ಯವಸಾನದಲ್ಲಿ ಪೂರ್ಣ ವಿರಕ್ತಿಯ ರೂಪ ಹೊಂದುತ್ತದೆ.

ಪ್ರೀತಿಯನ್ನು ಪಡೆಯುವುದು ಹೇಗೆ ಸುಖಕ್ಕೆ ಅಗತ್ಯವೆಂಬುದನ್ನು ಈವರೆಗೆ ಚರ್ಚಿಸಿದ್ದಾಯಿತು. ಆದರೆ ಅದು ಒಂದು ಮುಖ ಮಾತ್ರ. ಅಷ್ಟೇ ಮಹತ್ವದ ಇನ್ನೊಂದು ಮುಖ ಪ್ರೀತಿಯನ್ನು ಕೊಡುವುದು. ದೋಣಿಯಲ್ಲಿ ನೀವು ಹೊರಟಿದ್ದೀರಿ. ನದಿಯ ದಂಡೆಯಲ್ಲಿ ಬೆಳೆದ ಮರಗಿಡಗಳು, ಅವು ನೀರಲ್ಲಿ ತೋರುವ ಪ್ರತಿಬಿಂಬ, ಬಿಳಿದಾಗಿ ಹಬ್ಬಿದ ಮಳಲ ದಿಬ್ಬ ಇವು ನಿಮ್ಮಲ್ಲಿ ಅಪೂರ್ವವಾದ ಆನಂದವನ್ನು ಉಂಟುಮಾಡುತ್ತವೆ. ನಿಮ್ಮ ಆನಂದಕ್ಕೂ ನದೀತೀರದಿಂದ ನಿಮಗಾಗುವ ಪ್ರಯೋಜನಕ್ಕೂ ಏನೂ ಸಂಬಂಧವಿಲ್ಲ. ಆಗ ಒಮ್ಮೆಲೇ ದೋಣಿ ಓಲಾಡಿ ಮಗುಚಿಕೊಂಡು ನೀವು ನೀರುಪಾಲಾಗುತ್ತೀರಿ. ಈಗ ನೀವು ಈಸಿ ನೀರಿನೊಡನೆ ಹೋರಾಡಿ ಹೇಗೋ ದಡ ಸೇರುತ್ತೀರಿ. ಈಗ ನೀವು ದಡವನ್ನು ಕಾಣುವ ದೃಷ್ಟಿಯೇ ಬೇರೆ. ಅದೀಗ ನಿಮಗೆ ಆಪದ್ಬಾಂಧವವಾಗಿದೆ. ಬದುಕಿಕೊಳ್ಳಲು ನೆರವಾಗಿದೆಯೆಂಬುದಕ್ಕೆ ನೀವು ಅದನ್ನು ಕೊಂಡಾಡುತ್ತೀರಿ.

ನದೀತೀರವನ್ನು ಕುರಿತು ನೀವು ಅನುಭವಿಸುವ ಈ ಎರಡು ಮೆಚ್ಚಿಕೆಗಳು ಒಂದೇ ಅಲ್ಲ. ಎರಡನೆಯದು ದಡ ನಿಮಗೆ ಜೀವ ಉಳಿಸಿಕೊಳ್ಳುವ ಸಾಧನವಾಯಿತು ಎಂಬುದರಿಂದ ಉದ್ಭವಿಸಿದ್ದು. ದಂಡೆಯ ಸೌಂದರ್ಯ ಅಥವಾ ಮತ್ತಾವ ಗುಣವೂ ಅದಕ್ಕೆ ಕಾರಣವಲ್ಲ. ಮೊದಲನೆಯದು ಹಾಗಲ್ಲ. ಅದು ದಡದ ಸ್ವಂತ ಗುಣಗಳ ಬಗ್ಗೆ ನೀವು ಪಟ್ಟಭಾವನೆ. ಅದರಲ್ಲಿ ಲಾಭದೃಷ್ಟಿ ಇಲ್ಲ. ಪ್ರೀತಿಯಲ್ಲೂ ಇಬ್ಬಗೆ. ಒಂದು ಪ್ರಯೋಜನ ದೃಷ್ಟಿಯುಳ್ಳದ್ದು, ಇನ್ನೊಂದು ಗುಣ ದೃಷ್ಟಿಯುಳ್ಳದ್ದು. ಎರಡರಲ್ಲಿ ಯಾವುದು ಶ್ರೇಷ್ಠ ಎಂದು ಕೇಳಿದರೆ ಗುಣನಿಷ್ಠವಾದ ಪ್ರೀತಿಯೆಂದು ಉತ್ತರ ಕೊಡಲೇಬೇಕಾಗುತ್ತದೆ. ಪ್ರಯೋಜನ ನಿಷ್ಠವಾದ ಪ್ರೀತಿ ಸ್ವಾರ್ಥಮೂಲವಾದದ್ದು. ಸ್ವಾರ್ಥವು ಭಯಮೂಲವಾದದ್ದು. ಭಯವು ಎಂದಿಗೂ ಸುಖದಾಯಕವಾಗದು. ಹಾಗೆಂದು ಲಾಭದೃಷ್ಟಿಯ ಪ್ರೀತಿಯನ್ನು ತುಚ್ಛವೆಂದು ತೆಗೆದು ಹಾಕುವಂತಿಲ್ಲ. ನೀರಿಗೆ ಬಿದ್ದಾಗ ನೀವು ದಡದ ಸೌಂದರ್ಯವನ್ನು ಸವಿಯಲಾರಿರಿ. ಪ್ರಾಣವಿದ್ದರೆ ತಾನೇ ಸೌಂದರ್ಯಾನುಭೂತಿ? ಎಲ್ಲ ಪ್ರೀತಿಯಲ್ಲಿ ಈ ಪ್ರಕಾರ ಅಂಕಿತವಾಗಿ ಎರಡೂ ಬಗೆ ಬೆರೆತಿವೆ. ಹಾಗಿರುವುದು ಅಗತ್ಯ. ಆದರೂ ಪ್ರಯೋಜನ ಮೂಲವಾದ ಪ್ರೀತಿ ನಕಾರಾತ್ಮಕವಾದದ್ದು. ಅದು ಅಸುಖದಿಂದ ನಿಮ್ಮನ್ನು ತಪ್ಪಿಸಬಹುದು. ಸುಖವನ್ನು ಕೊಡುವಂಥದು ನಿಃಸ್ವಾರ್ಥವಾದ ಮೆಚ್ಚಿಕೆಯೆ.

ಆದ್ದರಿಂದ ಅತ್ಯುತ್ತಮ ಪ್ರೀತಿ ಕೊಟ್ಟು ಪಡೆಯುವ ಪ್ರೀತಿಯಾಗಿದೆ. ಅದು ಜೀವನದಾಯಿ, ಚೈತನ್ಯದಾಯಿ. ಅದು ಪಡೆಯುವುದನ್ನು ಅಳುಕಿಲ್ಲದೆ ಪಡೆಯುತ್ತದೆ, ಕೊಡುವುದನ್ನು ಯತ್ನವಿಲ್ಲದೆ ಕೊಡುತ್ತದೆ. ಹೀಗೆ ಉಭಯ ವ್ಯಕ್ತಿಗಳೂ ಪ್ರಪಂಚವನ್ನು ಹೆಚ್ಚು ಮೆಚ್ಚಿಕೊಳ್ಳುತ್ತಾರೆ, ಹೆಚ್ಚು ಸುಖಿಗಳಾಗುತ್ತಾರೆ.

ಆದರೆ ಜಗತ್ತಿನಲ್ಲಿ ತೆಗೆದುಕೊಳ್ಳುವುದರಲ್ಲೇ ಆಸಕ್ತರಾದ ಜನರನ್ನು ನಾವು ವಿಪುಲವಾಗಿ

ಕಾಣುತ್ತೇವೆ. ಅವರು ಯಾವಾಗಲೂ ಹೀರುತ್ತಾರೆ ಹೊರತು ಕೊಡುವುದಿಲ್ಲ. ಒಬ್ಬರಿಂದ ಜೀವನರಸವನ್ನೆಲ್ಲ ಹೀರಿದ ಮೇಲೆ ಅವರನ್ನು ಚರಟದಂತೆ ಒಗೆದು ಬಿಟ್ಟು ಹೊಸದೊಂದು ರಸಸ್ಥಾನದಲ್ಲಿ ಅನುರಕ್ತರಾಗುತ್ತಾರೆ. ಹೀಗೆ ತಾವು ಹಿಗ್ಗಿ ಸ್ವಾರಸ್ಯವಾಗಿ ಬಾಳುತ್ತ ತಮಗೆ ಆಶ್ರಯವಾಗಿದ್ದವರನ್ನು ಒಣಗಿಸಿ ನೀರಸಗೊಳಿಸುತ್ತ ಜೀವನ ಸಾಗಿಸುವವರಿಗೆ ದೊರೆಯುವುದು ಸುಖವಲ್ಲ, ಉತ್ತೇಜನ ಮಾತ್ರ ಎನ್ನಬೇಕಾಗುತ್ತದೆ. ಅವರು ಮನುಷ್ಯರನ್ನು ತಮ್ಮ ಲಾಭದ ಉಪಕರಣಗಳೆಂದು ಬಗೆಯುತ್ತಾರೆಯೆ ಹೊರತು ಮನುಷ್ಯರೇ ಒಂದು ಲಾಭ ಎಂದು ಅರಿಯರು. ಜೀವನದಲ್ಲಿ ಇಂಥವರು ಯಶಸ್ವಿಗಳಾಗುತ್ತಾರೆ, ಮೆರೆಯುತ್ತಾರೆ. ಹೆಚ್ಚಾಗಿ ಮಹತ್ವಾಕಾಂಕ್ಷಿಗಳಲ್ಲಿ ಈ ಗುಣ ಕಾಣಿಸುತ್ತದೆ. ಸುಖದ ಅಪಾರ್ಥ ಮಾಡಿಕೊಂಡದ್ದರಿಂದ ಈ ಪ್ರವೃತ್ತಿ ಹುಟ್ಟುತ್ತದೆ. ನಿಜವಾದ ಸುಖಯೆಂಬುದು ಅನ್ಯೋನ್ಯಹಿತದಲ್ಲಿ ಅಡಕವಾಗಿದೆ ಯೆಂದರಿಯದ ಅಹಂಕಾರದ ವಜ್ರಕವಚದಲ್ಲಿ ಅವರು ಬಾಳುತ್ತಾರೆ. ಅವರ ಹೃದಯದ ಬಿಸುಪು ಈ ಪಂಜರವನ್ನು ವಿಸ್ತರಿಸಲು, ಸಮರ್ಥವಾಗುವುದಿಲ್ಲ. ಬಾಲ್ಯದಲ್ಲಿ ಪಟ್ಟ ಕಷ್ಟ, ಪ್ರೀತಿವಂಚಿತ ಜೀವನ, ತಮಗಾದ ಅನ್ಯಾಯ ಇವುಗಳಿಂದ ಉಂಟಾದ ಮಾನವ ದ್ವೇಷವು ಬಹುಶಃ ಪ್ರೀತಿಯನ್ನು ಬಹಿಷ್ಕರಿಸಿದ ಮಹತ್ವಾಕಾಂಕ್ಷೆಗೆ ಸಾಮಾನ್ಯ ಕಾರಣವಾಗಿರುತ್ತದೆ.

ನಿಜವಾದ ಸುಖಾಪೇಕ್ಷಿಗಳು ಅತಿಯಾದ ಮಹತ್ವಾಕಾಂಕ್ಷೆ, ಮಿತಿಗೆಟ್ಟ ಅಹಂಕಾರಗಳ ಸೆಲೆಬಿಡಿಸಿಕೊಳ್ಳುವುದು ಅಗತ್ಯ. ಈ ಸೆರೆಯಿಂದ ಮುಕ್ತನಾದವನ ಲಕ್ಷಣವೆಂದರೆ ಪ್ರೀತಿಯನ್ನು ದಾನ ಮಾಡಬಲ್ಲ ಗುಣ. ಪಡೆದ ಪ್ರೀತಿಯು ಕೊಡುವ ಭಾವನೆಯನ್ನು ಪ್ರಚೋದಿಸಬೇಕು. ಆಗಲೇ ಪ್ರೀತಿಯು ಪರಮಾವಧಿ ಹಿತವನ್ನು ಸಾಧಿಸಬಹುದು.

ಇಂಥ ಪರಸ್ಪರವಾದ ಪ್ರೀತಿಯ ಬೆಳವಣಿಗೆಗೆ ಅನೇಕ ಆತಂಕಗಳು ಇವೆ. ಕೆಲವು ಮಾನಸಿಕ, ಕೆಲವು ಸಾಮಾಜಿಕ. ಮೆಚ್ಚಿಕೆಯನ್ನು ಮನಸ್ಸಿನಲ್ಲಿ ಮೂಡಿದೊಡನೆ ವ್ಯಕ್ತಪಡಿಸಲು ನಾವು ಅಂಜುತ್ತೇವೆ. ಮುಂದೆ ಈ ಮೆಚ್ಚಿಕೆಗೊಳಗಾದವರು ಅಪಾತ್ರರೆಂದು ಸಿದ್ಧವಾಗಬಹುದೆಂಬ ಅಂಜಿಕೆ ನಮ್ಮನ್ನು ಪೀಡಿಸುತ್ತಿರುತ್ತದೆ. ನೀತಿ, ಜಾಣ್ಮೆ ಎರಡೂ ದೃಷ್ಟಿಗಳಿಂದ ಪ್ರೀತಿಯಲ್ಲಿ ಜಾಗ್ರತೆಯನ್ನು ನಮಗೆ ಬೋಧಿಸಲಾಗುತ್ತದೆ. ಇದರಿಂದ ನಾವು ಪ್ರೀತಿವಿಷಯದಲ್ಲಿ ಜಿಪುಣರಾಗುತ್ತೇವೆ. ಮೋಸಹೋಗುವ ಭಯ ನಮ್ಮನ್ನು ಹಿಂದೆಳೆಯುತ್ತದೆ. ಹೀಗೆ ನಾವು ಮನುಷ್ಯಮಯ ಪ್ರಪಂಚದಲ್ಲಿ ಏಕಾಂಗಿಗಳಾಗಿ ಬದುಕುತ್ತೇವೆ.

■

# ಬೇಕು-ಪಾಪಪ್ರಜ್ಞೆ

**ಕೆ**ಲ ದಿನಗಳ ಹಿಂದೆ ಹುಬ್ಬಳ್ಳಿಯ ಪ್ರಮುಖ ಪತ್ರಿಕೆಯೊಂದರಲ್ಲಿ ಒಬ್ಬರು ಪತ್ರ ಪ್ರಕಟಿಸಿ, ಚಿಕ್ಕ ಮಕ್ಕಳಿಗಾಗಿ ಪ್ರಕಟಿಸಿದ ನೀತಿ ಪಾಠ ಪುಸ್ತಕದ ಒಂದು ಪಾಠವನ್ನು ಟೀಕಿಸಿದರು. ಅದು 'ಪಾಪ'ವನ್ನು ಕುರಿತದ್ದಾಗಿತ್ತು. ನಿಷ್ಕಲ್ಮಷ ಚಿತ್ತರಾದ ಚಿಕ್ಕ ಮಕ್ಕಳ ಮನಸ್ಸಿನಲ್ಲಿ 'ಪಾಪಪ್ರಜ್ಞೆ'ಯನ್ನುಂಟು ಮಾಡುವ ಈ ಪಾಠ ಸಲ್ಲದ್ದೆಂಬುದು ಅವರ ಆಕ್ಷೇಪವಾಗಿತ್ತು.

ಪಾಪಪ್ರಜ್ಞೆಯನ್ನು ಬಿತ್ತುವ 'ಪಾಪೋऽಹಂ ಪಾಪ ಕರ್ಮಾಹಂ' ಇತ್ಯಾದಿ ಶ್ಲೋಕಗಳನ್ನೂ ಅದೇ ತಾತ್ಪರ್ಯದ ಹಾಡುಗಳನ್ನೂ ಬೆಳಿಗ್ಗೆ ಮಕ್ಕಳಿಗೆ ಪಾಠ ಮಾಡಿಸುವುದೂ ಆಕಾಶವಾಣಿಯಲ್ಲಿ ಬಿತ್ತರಿಸುವುದೂ ನನ್ನ ಕೆಲ ಸ್ನೇಹಿತರ ಟೀಕೆಗೆ ಗುರಿಯಾದದ್ದುಂಟು.

ಇವೆಲ್ಲ ಟೀಕೆಗಳ ಸಾರಾಂಶವೆಂದರೆ, ಮನುಷ್ಯರು, ಅದರಲ್ಲಿಯೂ ಮಕ್ಕಳು, ಪಾಪವನ್ನು ಕಲಿಯುವುದೇ ಪಾಪದ ಬಗ್ಗೆ ಹಿರಿಯರಿಂದ ಕೇಳಿ—ಎಂಬುದಾಗಿ! ಅರ್ಥಾತ್ ಪಾಪದ ಬಗ್ಗೆ ಯಾರೂ ಮಕ್ಕಳಿಗೆ ಬೋಧಿಸದಿದ್ದರೆ ಅವರು ಪಾಪ ಮಾಡಲಿಕ್ಕೇ ಇಲ್ಲ. ನಿಷ್ಪಾಪ ಮಕ್ಕಳು, ನಿಷ್ಪಾಪ ಅನಾಗರಿಕರು ಎಂಬೀ ಕಲ್ಪನೆ ಸತ್ಯವಾಗಿದ್ದರೆ ಎಷ್ಟು ಚೆನ್ನಾಗಿತ್ತು! ಆದರೆ ಈ ರೊಮ್ಯಾಂಟಿಕ್ ಕಲ್ಪನೆ ಸಾವಿರಾರು ವರ್ಷಗಳ ಮಾನವ ಅನುಭವವನ್ನು ಅಲಕ್ಷಿಸುತ್ತದೆ. ವಾಸ್ತವವಾಗಿ, ಬೆಂಕಿ ಸುಡುತ್ತದೆ ಎಂದು ಮಕ್ಕಳನ್ನು ಹೆದರಿಸದಿದ್ದರೆ ಅವರು ಬೆಂಕಿಯಲ್ಲಿ ಕೈಹಾಕಲಿಕ್ಕೇ ಇಲ್ಲ ಎಂದು ವಾದಿಸಿದರೆ ಅದೆಷ್ಟು ಸರಿಯೋ, ಪಾಪದ ಬಗ್ಗೆ ಹೇಳದಿದ್ದರೆ ಮಕ್ಕಳು ನಿಷ್ಪಾಪರಾಗಿರುತ್ತಾರೆ ಎಂಬ ವಾದವೂ ಅಷ್ಟೇ ಸರಿಯಾದೀತು.

ಮಕ್ಕಳು ನಿಷ್ಪಾಪರಾಗಿರುತ್ತಾರೆ, ಅವರ ಮನಸ್ಸು ನಿಷ್ಕಲ್ಮಷವಾಗಿರುತ್ತದೆ ಎಂಬ ಮಾತಿನಲ್ಲಿ ಅತ್ಯಂತ ಸಂಕುಚಿತ ಸೀಮೆಯಲ್ಲಿ ಮಾತ್ರ ಸತ್ಯ ಇದೆ. ಅದಕ್ಕೆ ಒಳಿತು ಕೆಡಕುಗಳ ವಿವೇಚನೆ ಇಲ್ಲ ಎಂಬುದನ್ನು ಒಂದು ಸೀಮೆಯವರೆಗೆ ಒಪ್ಪಬಹುದಷ್ಟೇ. ಉದಾಹರಣೆಗೆ ಬೆಂಕಿ ಮುಟ್ಟಿದರೆ ಸುಡುತ್ತದೆ ಎಂಬ ವಿವೇಚನೆ ಅದಕ್ಕಿಲ್ಲ. ಒಮ್ಮೆ ಮುಟ್ಟಿ ನೋಡಿದರೆ ಅದಕ್ಕೆ ಆ ಅಪ್ರಿಯ ಸತ್ಯ ತಿಳಿದೇ ತಿಳಿಯುತ್ತದೆ.

ಪಾಪದ ವಿಚಾರ ಇನ್ನೂ ಜಟಿಲವಾದದ್ದು. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ, ಮನುಷ್ಯ ಮಾತ್ರವಲ್ಲ , ಸಕಲ ಜೀವಗಳು ಸ್ವಾರ್ಥಿಗಳು ಎಂಬ ತಥ್ಯವನ್ನು ಅಂಗೀಕರಿಸಬೇಕು. ಬದುಕಬೇಕಾದರೆ 'ಸ್ವ'ದ ಪ್ರಜ್ಞೆಬೇಕು. ಅದಿಲ್ಲದಿದ್ದರೆ ನಾವು ನಮ್ಮ ಕೈಯ ತುತ್ತನ್ನು ನಮ್ಮ ಬಾಯಲ್ಲಿ ಹಾಕಲಿಕ್ಕಿಲ್ಲ. ಇತರ ಪ್ರಾಣಿಗಳಿಗೂ ಇದು ಅನ್ವಯಿಸುತ್ತದೆ. ಹಸಿವಾದಾಗ ತಿಂದರೆ

ಹಿತವಾದ ಅನುಭವವಾಗುತ್ತದೆ. ಅದಕ್ಕಾಗಿ 'ನಿಷ್ಪಾಪ' ಪ್ರಾಣಿಯಾದ ಮಗುವೂ ಹಪಹಪಿಸಿ ತಿನ್ನುತ್ತದೆ. ಇಂಥ ಎಲ್ಲ ಹಿತವಾದ ಅನುಭವಗಳು ಜೀವಿಯ ಒಟ್ಟಾರೆ 'ಸ್ವ-ಅರ್ಥ'ವನ್ನು ರೂಪಿಸುತ್ತವೆ. ಹಾಗೆಯೇ ಬೆಂಕಿ ಮುಟ್ಟಿದ ಅಥವಾ ಕಹಿ ತಿಂದ ಮಾದರಿಯ ಪ್ರತಿಕೂಲ ಅನುಭವಗಳೂ ಒಂದು ವಿಪರೀತ 'ಸ್ವ-ಅರ್ಥ'ವನ್ನು ರೂಪಿಸುತ್ತವೆ.

ಪ್ರತಿ ವ್ಯಕ್ತಿಗೂ ತನ್ನ ಸ್ವ-ಅರ್ಥ ಇದೆ—ಪ್ರಾಣಿಗಳಲ್ಲಿರಲಿ ಮನುಷ್ಯರಲ್ಲಿರಲಿ. ಈ ವ್ಯಕ್ತಿ ಸ್ವ-ಅರ್ಥ ಆ ಜಾತಿಯ ವ್ಯಕ್ತಿಗಳೆಲ್ಲವುಗಳ ಸ್ವ-ಅರ್ಥವಾಗಿರಲು ಸಾಧ್ಯವಿಲ್ಲ. ಅದರಿಂದ ಸ್ವ-ಅರ್ಥ ಸ್ವ-ಅರ್ಥಗಳ ನಡುವಿನ ತಾಕಲಾಟವನ್ನು ಹದ್ದುಬಸ್ತಿನಲ್ಲಿಡುವ ಏರ್ಪಾಡು ಇಲ್ಲದಿದ್ದರೆ ಅದು ವ್ಯಕ್ತಿಗಳ ಹೋರಾಟವನ್ನು ಇಡೀ ಜಾತಿಗೇ ಮಾರಕವಾಗಿ ಮಾಡಬಹುದು. ತಿರ್ಯಕ್ ಪ್ರಾಣಿಗಳಲ್ಲಿ ನಿಸರ್ಗವೇ ಜನ್ಮಸಿದ್ಧವಾಗಿ ತಾಕಲಾಟಗಳನ್ನು ಮಿತಿಯಲ್ಲಿಡಲು ಅವುಗಳ ಅಂತಃಪ್ರವೃತ್ತಿಯಲ್ಲೇ ಬಿರಿ (Break)ಗಳನ್ನು ಇರಿಸಿದೆ. ಅದು ಒಂದು ಜಾತಿಯೊಳಗೆ ಮಾತ್ರವಲ್ಲ. ಬೇಟೆ-ಬೇಟೆಗಾರ ಜಾತಿಗಳೊಳಗಿನ ಮಾರಕ ಸಂಬಂಧಗಳನ್ನು ಕೂಡ ಅಂಕೆಯಲ್ಲಿಟ್ಟಿದೆ. ಯಾವ ಪ್ರಾಣಿಯೂ ಸಹಜ ಸ್ಥಿತಿಯಲ್ಲಿ ತನ್ನ ಜಾತಿಯ ಪ್ರಾಣಿಯೊಡನೆ ಅನ್ನ-ಕಾಮಗಳ ಮೇಲಾಟದಲ್ಲಿ ಕೊಲೆಯ ಮಟ್ಟಕ್ಕೆ ಹಿಂಸಕ ಕ್ರಿಯೆಯನ್ನು ಒಯ್ಯುವುದಿಲ್ಲ. ಸ್ವಜಾತಿಯ ಸ್ತ್ರೀಯನ್ನಂತೂ ದಾಕ್ಷಿಣ್ಯದಿಂದ ನಡೆಸಿಕೊಳ್ಳುತ್ತದೆ. ತನ್ನ ಬೇಟೆಯ ಜಾತಿಯನ್ನು ಕೂಡ ಹಸಿವನ್ನು ಪೂರೈಸಿಕೊಳ್ಳುವ ಅಗತ್ಯಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಕೊಲ್ಲುವುದಿಲ್ಲ.

ಮನುಷ್ಯ ಬುದ್ಧಿ ತೆರೆದುಕೊಳ್ಳಲಾರಂಭಿಸಿದಂದಿನಿಂದಲೂ ಕೆಲವು ಒಲವುಗಳು ಗೋಚರವಾಗುತ್ತಿವೆ. ಮಗುವನ್ನು ನಾವು ನಿಷ್ಕಲ್ಮಷ ಎನ್ನುತ್ತೇವೆ. ಆದರೆ ಒಂದು ಇರುವೆಯನ್ನೋ ಪಾತರಗಿತ್ತಿಯನ್ನೋ ಕೊಲ್ಲುತ್ತ ಅದರ ಚಡಪಡಿಕೆಯನ್ನು ನೋಡಿ ಸಂತೋಷಪಡುವ ಮಕ್ಕಳನ್ನು ಕಂಡವರಾರೂ ಮಕ್ಕಳ ನಿಷ್ಕಲ್ಮಷತೆಯನ್ನು ಕರಾರು ರಹಿತವಾಗಿ ಒಪ್ಪಲಾರರು. ಚಿಕ್ಕ ಮಕ್ಕಳಲ್ಲಿರುವ ಇಂಥ ಒಲವುಗಳೇ ಸಕಾಲದಲ್ಲಿ ತಡೆಯಲ್ಪಡದಿದ್ದರೆ ಸ್ವತಃ ಅದಕ್ಕೆ ಮತ್ತು ಅದು ಬದುಕುವ ಸಮುದಾಯಕ್ಕೆ ಅಪಾಯಕರವಾಗುತ್ತದೆ.

ಇದನ್ನು ತಡೆಯುವುದಕ್ಕೆ ತಾನೇ 'ಪಾಪ' ಎಂಬ ಕಲ್ಪನೆ ಅವಶ್ಯವಾಗುವುದು. ಚಿಕ್ಕದಿರುವಾಗಲೇ ಮಗುವಿನ ಮನಸ್ಸಿನಲ್ಲಿ ಇದು ಸರಿ, ಇದು ತಪ್ಪು ಎಂಬ ಭಾವನೆಯನ್ನು ಬಿತ್ತ ಬೇಕಾಗುತ್ತದೆ. ಬೆಳೆದ ಮೇಲೆ ಬಿದಿರನ್ನು ಬಗ್ಗಿಸಲಾಗುವುದಿಲ್ಲ. ಈ ಸರಿ ತಪ್ಪುಗಳೇ ಹೆಚ್ಚು ಕಡಿಮೆ ಪ್ರಶ್ನಾತೀತವಾಗಿರುವುದೇ 'ಪುಣ್ಯ' 'ಪಾಪ'ಗಳು. ಜೀವಗಳನ್ನು ಹಿಂಸಿಸಿದರೆ ಪಾಪ ಬರುತ್ತದೆ ಎಂಬ ಭಾವನೆಯನ್ನು ಆರಂಭದಲ್ಲೇ ಬಿತ್ತಿ ಬೆಳೆಸಬೇಕಾದರೆ ತರ್ಕದಿಂದ ಕೆಲಸವಾಗುವುದಿಲ್ಲ. ಮನುಷ್ಯನ ತರ್ಕ ಸ್ವಾರ್ಥದಿಂದ ನಿಯಂತ್ರಿಸಲ್ಪಡುತ್ತದೆ. ತರ್ಕಾತೀತವಾದ ಮತ್ತು ಸ್ವಪ್ರಮಾಣವಾದ ಮೂಲ್ಯಗಳನ್ನು ಇಲ್ಲಿ ಆಶ್ರಯಿಸುವುದು ಕ್ರಮ ಪ್ರಾಪ್ತವಾಗುತ್ತದೆ. 'ಪುಣ್ಯ'ದ ವಿಷಯ ಹೇಗೇ ಇರಲಿ, 'ಪಾಪ'ದ ವಿಷಯದಲ್ಲಿ ಮಗುವಿನ ಮನಸ್ಸಿನಲ್ಲಿ

ತತ್‌ಕ್ಷಣ ಜಾಗೃತವಾಗಬಲ್ಲಂಥ ಜುಗುಪ್ಸೆಯನ್ನು, ವಿರೋಧ ಪ್ರತಿಕ್ರಿಯೆಯನ್ನು ಹುಟ್ಟಿಸಬೇಕಾಗುತ್ತದೆ. ಪೋಲೀಸು ಪಡೆಗಳಲ್ಲಿ, ಸೈನ್ಯಗಳಲ್ಲಿ ಆಜ್ಞಾಪದಗಳ (command words) ತತ್‌ಕ್ಷಣ ಪ್ರಭಾವವಾಗಿ ಅವಿಚಾರಿತ ಮತ್ತು ಸ್ವಚೋದಿತ ಪ್ರತಿಕ್ರಿಯೆ ಹುಟ್ಟಿಸಲು ಯಾವ ರೀತಿ ತರಬೇತಿ ಕೊಡಲ್ಪಡುತ್ತದೋ ಅದೇ ರೀತಿ ಮಗುವಿಗೆ ಪಾಪದ ವಿರುದ್ಧ ಪ್ರತಿಕ್ರಿಯೆಯುಂಟುಮಾಡುವ ತರಬೇತಿ ಕೊಡುವುದು ಹಿತವೂ ವಿಹಿತವೂ ಹೌದು. ಲೋಕೋತ್ತರವಾದ ಕಾರಣಗಳು ಇಂಥ ಪ್ರತಿಕ್ರಿಯೆಯನ್ನು ಸೃಷ್ಟಿಸುವುದಕ್ಕೆ ಲೌಕಿಕಕಾರಣ ಮೀಮಾಂಸೆ ಅಥವಾ ಉಪದೇಶಕ್ಕಿಂತ ಹೆಚ್ಚು ಕಾರ್ಯಕಾರಿಯಾಗಿವೆ. ಅದಕ್ಕೆ ಅತಿ ಕಡಿಮೆ ಬಲಾತ್ಕಾರ ಸಾಲುತ್ತದೆ.

'ಪಾಪ' ಪ್ರಜ್ಞೆಯನ್ನು ದೈವತ ಕಲ್ಪನೆಯೊಡನೆ ತಳಕು ಹಾಕುವುದು ಅನಿವಾರ್ಯವಲ್ಲ. ದೇವರನ್ನು ಒಪ್ಪದ ಧರ್ಮಗಳೂ 'ಪಾಪ'ವನ್ನು ಒಪ್ಪಿವೆಯೆಂಬುದನ್ನು ಮರೆಯುವಂತಿಲ್ಲ. ವಾಸ್ತವವಾಗಿ, ದೇವರನ್ನು ಒಲ್ಲದ ಅಥವಾ ಗಮನಿಸದ ಧರ್ಮಗಳಲ್ಲಿ ಕರ್ಮ ಫಲದ ಅಪ್ರತಿಹತವಾದ ವರ್ತನೆ, ದೇವರನ್ನು ಒಪ್ಪುವ ಧರ್ಮಗಳಲ್ಲಿರುವುದಕ್ಕಿಂತ ಹೆಚ್ಚು ಬಲವಾಗಿದೆಯೆಂಬುದನ್ನು ಗಮನಿಸಬೇಕು.

ಹೌದು, ಪಾಪ! ಕಲ್ಪನೆ ನಿಹಿತ ಸ್ವಾರ್ಥಗಳ ಹಿತಕ್ಕೆ ಬಳಸಲ್ಪಡುವುದುಂಟು. ಆದರೆ ದುರುಪಯೋಗವಾಗದ ಯಾವ ಸಿದ್ಧಾಂತವೂ ಇಲ್ಲ. ಆದ್ದರಿಂದ 'ಪಾಪ' ಗಳನ್ನು ಮನುಷ್ಯ ಕುಲದ ಹಿತ ಮತ್ತು ರಕ್ಷಣೆಯ ಶಾಶ್ವತ ಮೂಲ ಅವಶ್ಯಕತೆಗಳಿಗೆ ಮೀಸಲಿರಿಸಿದರೆ ಸಾಕು: ಅದರಾಚೆಗಿನದು ಕಾನೂನಿನ ಪರಿಮಿತಿಯಲ್ಲಿ ಬರಬಹುದು.

ಆದರೆ ಕಾನೂನು ಆತ್ಮಸಾಕ್ಷಿಗೆ ಅಧೀನವಲ್ಲ. ಬಾಹ್ಯ ಸಾಕ್ಷಿಯನ್ನು ಅಪೇಕ್ಷಿಸುತ್ತದೆ. ಅದು ಕಾನೂನಿನ ದೌರ್ಬಲ್ಯ.

■

# ಸ್ವಾರ್ಥ - ತ್ಯಾಗ? ಎಲ್ಲ ಲೊಳಲೊಟ್ಟೆಯಂತೆ

## ಜೀವ-ಸಮಾಜವಿಜ್ಞಾನದ ಪ್ರಕಾರ ಪರಾರ್ಥವೆಲ್ಲ ಸ್ವಾರ್ಥವೇ!

ಏತೇ ಸತ್ಪುರುಷಾಃ ಪರಾರ್ಥಘಟಕಾಃ
ಸ್ವಾರ್ಥಂ ಪರಿತ್ಯಜ್ಯ ಯೇ'
ಸಾಮಾನ್ಯಾಸ್ತು ಪರಾರ್ಥಮುದ್ಯಮಭೃತಃ
ಸ್ವಾರ್ಥಾವಿರೋಧೇನ ಯೇ ।
ತೇಽಮೀ ಮಾನುಷರಾಕ್ಷಸಾಃ ಪರಹಿತಂ
ಸ್ವಾರ್ಥಾಯ ನಿಘ್ನಂತಿ ಯೇ
ಯೇ ನಿಘ್ನಂತಿ ನಿರರ್ಥಕಂ ಪರಹಿತಂ
ತೇ ಕೇ ನ ಜಾನೀಮಹೇ ॥

—ಭರ್ತೃಹರಿ

'ನೀತಿಶತಕ' ಬರೆದ ಭರ್ತೃಹರಿ ಮನುಷ್ಯವರ್ಗವನ್ನು ಮೇಲಿನ ಶ್ಲೋಕದಲ್ಲಿ ನಾಲ್ಕು ಬಗೆಯಾಗಿ ವಿಂಗಡಿಸಿದ್ದಾನೆ. ೧) ಸಜ್ಜನರು-ತಮ್ಮ ಸ್ವಾರ್ಥವನ್ನು ಬಲಿಗೊಟ್ಟಾದರೂ ಪರಹಿತವನ್ನು ಸಾಧಿಸುವವರು; ೨) ಸಾಮಾನ್ಯರು-ತಮ್ಮ ಹಿತಕ್ಕೆ ಧಕ್ಕೆ ಬಾರದಂತೆ ಪರೋಪಕಾರ ಮಾಡುವವರು; ೩) ನರರಾಕ್ಷಸರು-ತಮ್ಮ ಸ್ವಾರ್ಥಕ್ಕೆ ಪರರ ಹಿತವನ್ನು ಕೆಡಿಸುವವರು; ಮತ್ತು ೪) ತಮಗೇನೂ ಲಾಭವಿಲ್ಲದಿದ್ದರೂ ಪರಹಿತವನ್ನು ಹಾಳು ಮಾಡುವವರು ಇವರಿಗೆ ಯಾವ ಬಿರುದು ಕೊಡಬೇಕೆಂದು ತನಗೆ ತಿಳಿಯುವುದಿಲ್ಲವೆಂದು ಕವಿ ಹೇಳುತ್ತಾನೆ.

ಆಧುನಿಕ ಜೀವ-ಸಮಾಜ ವಿಜ್ಞಾನದ (ಸೋಶಿಯೊ-ಬಯಾಲಜಿ) ಪ್ರಭೃತಿಗಳೂ ಮಾನವರ ವರ್ತನೆಯನ್ನು ಇದೇ ಬಗೆಯಾಗಿ ವಿಂಗಡಿಸುತ್ತಾರೆ: ಪರಾರ್ಥಿಗಳು; ಸಹಕಾರಿಗಳು; ಸ್ವಾರ್ಥಿಗಳು ಮತ್ತು ದುರ್ಬುದ್ಧಿಗಳು. ಆದರೆ ಭರ್ತೃಹರಿಯಂತೆ ಜೀವ-ಸಮಾಜ ವಿಜ್ಞಾನಿಗಳು ಈ ವರ್ಗಗಳ ಪ್ರತಿನಿಧಿಗಳಿಗೆ ಯಾವ ಉಪಾಧಿಗಳನ್ನೂ ಕೊಡುವುದಿಲ್ಲ, ಅಷ್ಟೇ. ಅದು ಅವರ ವೈಜ್ಞಾನಿಕ ತಾಟಸ್ಥ್ಯಕ್ಕೆ ಸಲ್ಲದ್ದು!

ಮನುಷ್ಯೇತರ ಜೀವಿಗಳ ಸಾಮಾಜಿಕ ಅಂದರೆ ತಮ್ಮ ತಮ್ಮ ಜಾತಿಯೊಳಗಿನ ಪರಸ್ಪರ ವರ್ತನೆಯನ್ನು ಕುರಿತ ಅಧ್ಯಯನ ಈಗ ಅನೇಕ ದಶಕಗಳಿಂದ ನಡೆಯುತ್ತಿದೆ. ಪ್ರಾಣಿಗಳ ವರ್ತನೆಯನ್ನು ನಿರೀಕ್ಷಿಸಿ ಅದರ ಬೆಳಕಿನಲ್ಲಿ ಮನುಷ್ಯ ವರ್ತನೆಯ ಮೂಲಗಳನ್ನು ಅರ್ಥಮಾಡಿಕೊಳ್ಳುವುದೂ ಇದರ ಒಂದು ಉದ್ದೇಶ. ಆಸ್ಟ್ರಿಯದ ಪ್ರಮುಖ ಪ್ರಾಣಿ ಸ್ವಭಾವ ವಿಜ್ಞಾನಿ (ಬಿಹೇವಿಯರಿಸ್ಟ್)ಯಾದ ಕೊನ್ರಾಡ್ ಲಾರೆನ್ಸ್ ದೀರ್ಘಕಾಲದ ನಿರೀಕ್ಷಣೆಯ ನಂತರ ಮನುಷ್ಯೇತರ ಪ್ರಾಣಿಗಳಲ್ಲಿ ಭರ್ತೃಹರಿ ಹೇಳುವ ನಾಲ್ಕನೇ ತರಹದ ದುರ್ಬುದ್ಧಿ ತೀರ ವಿರಳವೆಂದು ಹೇಳುತ್ತಾನೆ. ಸ್ವಾರ್ಥ, ಸಹಕಾರ, ಪರಾರ್ಥ ಇವು ಮೂರು ಗುಣಗಳಿಗೂ ಉದಾಹರಣೆಗಳು ಪ್ರಾಣಿ ಪ್ರಪಂಚದಲ್ಲಿ ಬೇಕಾದಷ್ಟು ಸಿಗುತ್ತವೆ.

ಕೆಲವು ಉದಾಹರಣೆಗಳನ್ನು ನೋಡುವಾ.

### ಸ್ವಾರ್ಥ, ಪರಾರ್ಥ

ಉಡುಪಿಯ ಸಮೀಪವಿರುವ ಕುಂಜಾರುಗಿರಿಯಲ್ಲಿ ದೇವಸ್ಥಾನವನ್ನು ಆಶ್ರಯಿಸಿದ ಒಂದು ಯಜಮಾನ ಮಂಗ ತನ್ನ ಹಿಂಡಿನೊಡನೆ ಇತ್ತಂತೆ. ದಿನವೂ ಮಧ್ಯಾಹ್ನ ಪೂಜೆ ಮುಗಿಯುತ್ತಲೇ ನೈವೇದ್ಯದ ಬಿಸಿಬಿಸಿ ಅನ್ನವನ್ನು ಹಾಸುಗಲ್ಲಿನ ಮೇಲೆ ಒಟ್ಟುತ್ತಿದ್ದರು. ಯಜಮಾನ ಮಂಗ ಅತ್ತಿತ್ತ ನೋಡಿ ಒಂದು ದುರ್ಬಲ ಮಂಗವನ್ನು ಹಿಡಿದು ಅದನ್ನು ಅನ್ನದ ಮೇಲೆ ಅತ್ತಿತ್ತ ತಿಕ್ಕಿ ಅನ್ನವನ್ನು ಬಿಡಿಸಿ ಬೇಗ ಆರುವಂತೆ ಮಾಡಿಕೊಂಡು ತಿನ್ನುತ್ತಿತ್ತಂತೆ. ಇದನ್ನು ಭರ್ತೃಹರಿ ದೌರ್ಜನ್ಯ ಎನ್ನಬಹುದಾದರೂ ವಿಜ್ಞಾನಿಗಳು ಸ್ವಲ್ಪ ಅತಿಯಾದ ಸ್ವಾರ್ಥ ಎಂದೇ ವರ್ಗೀಕರಿಸಬಹುದು. ತನ್ನ ಕೈ ಸುಟ್ಟುಕೊಳ್ಳಲೊಲ್ಲದೆ ಹಿರಿ ಮಂಗ ಕಿರಿ ಮಂಗವನ್ನು ಉಪಯೋಗಿಸಿಕೊಂಡಿತಷ್ಟೇ.

ತೋಳಗಳೂ ಕಾಡುನಾಯಿಗಳೂ ಬೇಟೆಯಾಡುವುದೂ ಹಿಂಡಾಗಿ. ಹಿಡಿದ ಬೇಟೆಯನ್ನು ಅವು ಹಂಚಿಕೊಂಡು ತಿನ್ನುತ್ತವೆ. ಬೇಟೆಯನ್ನು ಓಡಿಸಿ ಅಡ್ಡಗಟ್ಟಿ ಹಿಡಿಯುವುದರಲ್ಲಿ ಎಲ್ಲವೂ ಶ್ರಮ ವಿಭಾಗದಿಂದ ಕೆಲಸ ಮಾಡುತ್ತವೆ. ಇದು ಸಹಕಾರ.

ಬೇಟೆಗಾರನನ್ನು ಅಥವಾ ಹೊಂಚುತ್ತಿರುವ ಗಿಡುಗನನ್ನು ಕಂಡರೆ ಕಾಡಿನಲ್ಲಿ ಹಕ್ಕಿ ಚೀರಿ ಇತರ ಹಕ್ಕಿಗಳಿಗೆ ಎಚ್ಚರಿಕೆ ಕೊಡುತ್ತದೆ. ಇದನ್ನು ಬರೀ ಸಹಕಾರ ಎನ್ನಲಾಗದು. ಯಾಕೆಂದರೆ ತನ್ನ ಕೂಗಿನಿಂದ ಅದು ಬೇಟೆಗಾರನ ಅಥವಾ ಗಿಡುಗನ ಗಮನವನ್ನು ತನ್ನತ್ತ ಆಕರ್ಷಿಕೊಂಡು ತನ್ನ ಜೀವಕ್ಕೆ ಗಂಡಾಂತರ ತಂದುಕೊಳ್ಳುತ್ತದೆ. ಇದು ಪರಾರ್ಥವೇ ಸೈ. ಇರುವೆ ಪಟ್ಟನ್ನು ನೀವು ಕೆದಕಿದರೆ ರಕ್ಷಕ ಇರುವೆಗಳು ನಿಮ್ಮ ಮೇಲೆ ಏರಿಬಂದು ಕಡಿಯುತ್ತವೆ. ನೀವು ಅವುಗಳನ್ನು ಹೊಸಕಿ ಹಾಕುತ್ತೀರೆಂದು ಗೊತ್ತಿದ್ದೂ ಅವು ಪಟ್ಟಿನಲ್ಲಿರುವ ತಮ್ಮ ಸಂಗಡಿಗರ ಕಾಪಿಗಾಗಿ ತಮ್ಮ ಕರ್ತವ್ಯ ಮಾಡಿ ಜೀವ ಕೊಡುವುದು ಇನ್ನಷ್ಟು ಎದ್ದು ಕಾಣುವ ಪರಹಿತಕಾರ್ಯ. ಗೆದ್ದಲು, ಜೇನ್ನೊಣ ಮೊದಲಾದ ಕೀಟಗಳಲ್ಲಿ ಈ ಪ್ರವೃತ್ತಿ ಪ್ರಕೃಷ್ಟ ರೂಪದಲ್ಲಿ ಕಂಡು ಬರುತ್ತದೆ.

**ಸ್ವಾರ್ಥವೇ ಸಹಜ**

ಜೀವಿಗಳ ಸ್ವಾರ್ಥ ಪ್ರವೃತ್ತಿ ನೋಡಿ ವಿಜ್ಞಾನಿಗಳಿಗೆ ಏನೂ ಆಶ್ಚರ್ಯವಾಗುವುದಿಲ್ಲ. ಜೀವಮಾತ್ರದಲ್ಲಿ ಸ್ವಾರ್ಥ ಇದೆ. ಜೀವವೆಂದರೆ 'ಸ್ವ'ದ ಪ್ರಜ್ಞೆಯುಳ್ಳ ಜಡಪದಾರ್ಥ. ಸ್ವ ಎಂದ ತತ್‌ಕ್ಷಣ 'ಸ್ವಾರ್ಥ' ಬೆಂಬತ್ತಿ ಬರುತ್ತದೆ. ಜೀವ 'ತಾನು' ಬದುಕಬೇಕು; ಬೆಳೆಯಬೇಕು. ಇದಕ್ಕಾಗಿ ತಿನ್ನಬೇಕು. ಅಗತ್ಯಬಿದ್ದರೆ ಆಹಾರಕ್ಕಾಗಿ ತನ್ನಂಥ ಇತರ ಆಹಾರಾನ್ವೇಷಿಗಳೊಡನೆ ಸ್ಪರ್ಧಿಸಿ ಜಗಳಮಾಡಿ ಅದನ್ನು ಪಡೆಯಬೇಕು. ಬರೇ ಬದುಕಿದರೆ ಸಾಲದು—ವೈಯಕ್ತಿಕ ಬದುಕು ಶಾಶ್ವತವಲ್ಲ. ಜಾತಸ್ಯ ಮರಣಂ ಧ್ರುವಂ. ಆದ್ದರಿಂದ ಸಂತಾನವೃದ್ಧಿ ಮಾಡಿಕೊಳ್ಳಬೇಕು. ಸಂತತಿಯೆಂಬುದು ಜೀವಗಳು ಮರಣಕ್ಕೆ ಕಂಡುಹಿಡಿದ ಉತ್ತರ. ಸಂತತಿಯಲ್ಲಿ ತಂದೆ-ತಾಯಿ ಎರಡರ ಅರ್ಧರ್ಧ ಅಂಶ ಇರುವುದರಿಂದ ತಾವು ವೈಯಕ್ತಿಕವಾಗಿ 'ಕಾಲವಶ'ವಾದರೂ ಸಂತತಿಯ ಮೂಲಕ ಜೀವಿಗಳು ತಮ್ಮನ್ನು ಕಾಲದಲ್ಲಿ ಮುಂಚಾಚಿಕೊಂಡಂತೆಯೇ. ಮಗುವಿನ ನಾಮಕರಣದಲ್ಲಿ ತಂದೆ ಮಗುವಿನ ಕಿವಿಯೊಳಗೆ 'ಆತ್ಮಾ ವಾ ಪುತ್ರನಾಮಾಸಿ' ಎಂಬ ಋಷಿವಚನವನ್ನು ಊದುವ ಸಂಪ್ರದಾಯವುಂಟು. ಅದರ ಅರ್ಥ 'ತಾನೆ' ಮಗನಾಗಿ ನೀನು ಆಗಿದ್ದೀ—ಎಂದು. ಇದಕ್ಕಾಗಿ ಮೈಥುನ. ಅದಕ್ಕಾಗಿ ಕಾಮಪ್ರವೃತ್ತಿ. ಹೀಗೆ ಬದುಕುವುದಕ್ಕೆ ಅತ್ಯವಶ್ಯವಾಗಿರುವುದರಿಂದ ಎಲ್ಲ ಜೀವಿಗಳಲ್ಲಿ ಅದರ ಮೈಥುನಾಪೇಕ್ಷೆ (ಕಾಮ) ಅತ್ಯಂತ ಪ್ರಬಲವಾಗಿವೆ. ನಿಸರ್ಗ ಇವೆರಡನ್ನೂ ಜೀವಿಯ ಪ್ರಕೃತಿಯಲ್ಲೇ ಇರಿಸಿದೆ. ಇದೂ 'ಸ್ವಾರ್ಥ'. ಇದಕ್ಕಾಗಿ ಸ್ವಜಾತಿಯ ಇತರ ಜೀವಿಗಳೊಡನೆ ಕಚ್ಚಾಟ. ಅದರಲ್ಲಿ ಅತಿ 'ಸಮರ್ಥ' ಜೀವಿ ಗೆದ್ದು ಬರುತ್ತದೆ. ತನ್ನ ಸಂತತಿ ವೃದ್ಧಿ ಮಾಡಿಕೊಳ್ಳುತ್ತದೆ. ತನ್ನ ಕ್ಷಣಿಕ ಬದುಕನ್ನು 'ಅಮರ'ವಾಗಿ ಮಾಡಿಕೊಳ್ಳುವ ಸಂಭವವನ್ನು ಹೆಚ್ಚಿಸಿಕೊಳ್ಳುತ್ತದೆ. ಇದಕ್ಕೆ ಬೇಕಾದ ಗುಣಗಳು ತಂದೆ ತಾಯಿ ಎರಡರಿಂದಲೂ ಇಳಿದು ತಲೆಯಿಂದ ತಲೆಗೆ 'ಜೀನು'ಗಳೆಂಬ ವಂಶವಾಹಕ ಕಣಗಳ ಮೂಲಕ ದಾಟುತ್ತ ಹೋಗುತ್ತವೆ. ಈ ಗುಣಗಳಲ್ಲಿ ಕೊರತೆಯುಳ್ಳವುಗಳು ಸಂತಾನ ಹೆಚ್ಚಿಸಿಕೊಳ್ಳಲಾರದೆ 'ಬಿದ್ದು' ಹೋಗುತ್ತವೆ. ಇದು ನಿಸರ್ಗದ ಆಟ. ತನ್ನ ಪ್ರಕೃತಿಯಲ್ಲೇ ನಿಗದಿತವಾಗಿರುವುದರಿಂದ ಜೀವಿ ತನ್ನ ಸ್ವಾರ್ಥದಿಂದ ತಪ್ಪಿಸಿಕೊಳ್ಳಲಾರದು. ಅದರಲ್ಲಿ ಅದರ ಸ್ವೇಚ್ಛೆಯ ಆಯ್ಕೆಗೆ ಆಸ್ಪದವಿಲ್ಲ. "ಇದು ಅವುಗಳ 'ಜೀನು'ಗಳಲ್ಲೇ ಇದೆ" ಎಂಬೊಂದು ನುಡಿ ಜೀವ-ವಿಜ್ಞಾನಿ ವರ್ಗಗಳಲ್ಲಿ ರೂಢಿಯಲ್ಲಿದೆ.

ಹೀಗೆ ಸ್ವಾರ್ಥ ಸಹಜ ಮತ್ತು ಅನಿವಾರ್ಯ. ಬಲಿಷ್ಠ ಕೋತಿ ದುರ್ಬಲ ಕೋತಿಯ ಕೈಯಿಂದ ಹಣ್ಣು ಕಸಿದುಕೊಂಡು ತಿನ್ನುತ್ತದೆ, ತನ್ನ ಸ್ವಂತ ಉಳಿಗಾಲಕ್ಕಾಗಿ ಹಿಂಡಿನ ಹೆಣ್ಣುಗಳನ್ನು ತಾನೇ ಅನುಭೋಗಿಸಲು ಬಯಸಿ ಇತರ ಗಂಡುಗಳನ್ನು ಯಜಮಾನ ಮಂಗ ಹೆದರಿಸುತ್ತದೆ. ತನ್ನ ಸಂತಾನವೇ ಹೆಚ್ಚು ಹೆಚ್ಚು ಮುಂದುವರಿಯಬೇಕೆಂಬ ಸ್ವಾರ್ಥದಿಂದ. ಆದರೂ ಒಮ್ಮೊಮ್ಮೆ ದುರ್ಬಲ-ಆದರೆ ಚಾಣಾಕ್ಷ ಮಂಗಗಳು ಯಜಮಾನನ ಕಣ್ಣುತಪ್ಪಿಸಿ 'ಜನಾನಾ'ದ ಒಂದಲ್ಲ ಒಂದು ಹೆಣ್ಣನ್ನು ಒಪ್ಪಿಸಿ ಸಂಭೋಗಿಸುತ್ತದೆ. ತನ್ನ ವಂಶವಾಹಿ

ಜೀನುಗಳು ಹೇಗಾದರೂ ಮುಂದುವರಿಯಬೇಕೆಂಬ ಸ್ವಾರ್ಥದಿಂದ ಅದು ಈ ರಿಸ್ಕು ತೆಗೆದುಕೊಳ್ಳುತ್ತದೆ. ಆದರೆ ಕೆಲ ಭಾರತೀಯ ಮಂಗಗಳಲ್ಲಿ, ಹೋರಾಟ ಮಾಡಿ ಗೆದ್ದು ಹೊಸ ಮಂಗ ಯಜಮಾನಿಕೆ ಸಂಪಾದಿಸಿದಾಗ ಹಳೇ ಯಜಮಾನನ ಮರಿಗಳನ್ನು ಕೊಂದು ಹಾಕುತ್ತದಂತೆ. ಇದೂ ಜೀವ ಸಮಾಜ ವಿಜ್ಞಾನಿಗಳ ದೃಷ್ಟಿಯಲ್ಲಿ 'ದೌರ್ಜನ್ಯ'ವಲ್ಲ,— ಸ್ವಾರ್ಥ ಮಾತ್ರ. ತನ್ನ ಸಂತಾನ ಮುಂದುವರಿಯುವ ಸಂಭವ ಮತ್ತು ಅವಕಾಶವನ್ನು ಹೆಚ್ಚಿಸಿಕೊಳ್ಳುವುದು ಈ ಯಜಮಾನನ (ತನಗೇ ಅರ್ಥ ತಿಳಿಯದ) ಇರಾದೆ. ಇದಾವುದಕ್ಕೂ ವಿಜ್ಞಾನಿಗಳು ಆಶ್ಚರ್ಯಪಡುವುದಿಲ್ಲ. ಅವೇನು ಮಾಡಿಯಾವು, ಪಾಪ? ಅವುಗಳ 'ಜೀನು'ಗಳಲ್ಲೆ ಹಾಗೆ ಬರೆದಿದೆ!

**ಪರಾರ್ಥವೇ ಸಮಸ್ಯೆ**

ಆದರೆ ನಿಃಸ್ವಾರ್ಥ ಮತ್ತು ಪೂರ್ತಿ ಪರಾರ್ಥದ ಪ್ರವೃತ್ತಿಗಳು ಅವರಿಗೆ ಅಷ್ಟು ಸುಲಭವಾಗಿ ಅರ್ಥವಾಗುವುದಿಲ್ಲ. ಅವು ಅವರಿಗೆ ಅಸ್ವಾಭಾವಿಕವಾಗಿ ಕಾಣಿಸುತ್ತವೆ. ಹಿಂಡಿನಲ್ಲಿ ಒಂದು ಮರಿ ತಾಯಿಯನ್ನು ಕಳಕೊಂಡು ತಬ್ಬಲಿಯಾದರೆ ಇತರ ಹೆಣ್ಣುಗಳು ಮೊಲೆಯೂಡಿ ಅದನ್ನು ಬೆಳಸುತ್ತವೆ. (ಹೆಣ್ಣಾನೆಗಳಲ್ಲಿ ಮರಿ ಮೊಲೆಯುಣ್ಣುವುದನ್ನು ಬಿಟ್ಟ ಮೇಲೂ ಹಾಲು ಇರುತ್ತದೆ). ಇದರಿಂದ ಅವುಗಳಿಗೇನೂ ನಷ್ಟವಿಲ್ಲ ಅನ್ನಿ; ಆದರೆ ತಮ್ಮದಲ್ಲದ ಮರಿಗೆ ಮೊಲೆಯೂಡಬೇಕೆಂಬ 'ಆಲೋಚನೆ'ಯಾದರೂ ಅವುಗಳಿಗೆ ಹೇಗೆ ಬರುತ್ತದೆ? ಹೆಚ್ಚಿನ ಮನುಷ್ಯೇತರ ಪ್ರಾಣಿಗಳಿಗೆ 'ಆಲೋಚನಾ ಶಕ್ತಿ' ಇಲ್ಲ. ಇದ್ದರೂ ಅತ್ಯಲ್ಪ ಎಂದು ಸ್ವಭಾವ ವಿಜ್ಞಾನಿ ಜೀವಶಾಸ್ತ್ರಿಗಳು ಭಾವಿಸುವುದರಿಂದ ಸ್ವಾರ್ಥಕ್ಕೆ ಸಂಗತವಲ್ಲದ ಪರಹಿತ ವರ್ತನೆ ಅವರಿಗೆ ಸಮಸ್ಯೆಯಾಗಿದೆ. ಕೇವಲ ಪ್ರವೃತ್ತಿಯಿಂದಲೆ ಪ್ರೇರಿಸಲ್ಪಟ್ಟು ವರ್ತಿಸುವ ಅವುಗಳ ಸ್ವಭಾವದಲ್ಲಿ ಈ ಗುಣ ಸೇರಿಕೊಂಡಿರಬೇಕಾದರೆ ಅದರಲ್ಲಿ ನಿಸರ್ಗದ ಯಾವುದೋ ಉದ್ದೇಶ ಸಾಧಿಸುತ್ತಿರಬೇಕು.

ತಮ್ಮದಲ್ಲದ ಮರಿಗಳಿಗೆ ಮೊಲೆಯೂಡುವ ಹೆಣ್ಣಾನೆಗಳ ವರ್ತನೆಗಿಂತಲೂ ಹೆಚ್ಚು ಕೌತುಕದ್ದು ಕಾಡು ನಾಯಿಗಳ ವರ್ತನೆ. ಹಿಂಡಾಗಿ ಬದುಕುವ ಅವುಗಳಲ್ಲಿ ಒಂದು ಹೆಣ್ಣಿಗೆ ಗರ್ಭ ನಿಂತಿದ್ದರೆ ತಂಡದ ಇತರ ಹೆಣ್ಣುಗಳು ಗರ್ಭ ಧರಿಸುವುದಿಲ್ಲ. ಈ ವರ್ತನೆಯಲ್ಲಿ ಲೈಂಗಿಕ ಸ್ವಾರ್ಥತ್ಯಾಗ ಅಡಕವಾಗಿದೆ. ಗರ್ಭಧಾರಣೆಯನ್ನು ನಿಲ್ಲಿಸಿದ್ದರಿಂದ ವೈಯಕ್ತಿಕವಾಗಿ ಇವುಗಳ ವಂಶ ಬೆಳೆಯುವ ಸಂಭವ ಕಡಿಮೆಯಾಗಿ ಅಪಾಯಮಯವಾದ ಪ್ರಾಣಿ ಪ್ರಪಂಚದಲ್ಲಿ ಇವುಗಳು ಮುಂದೆಂದಾದರೊಮ್ಮೆ ನಿರ್ವಂಶವಾಗುವ ಸಂಭವ ಹೆಚ್ಚುತ್ತದೆ. ಅದನ್ನೇಕೆ ಅವು ಆಮಂತ್ರಿಸಬೇಕು?

**ಪರಮ ತ್ಯಾಗ**

ಇರುವೆ, ಜೇನ್ನೊಣ ಮುಂತಾದ 'ಸಾಮಾಜಿಕ' ಕೀಟಗಳ ವರ್ತನೆ ಎರಡು

ವಿಧಗಳಲ್ಲಿ ಇನ್ನೂ ಆಶ್ಚರ್ಯಕರವಾಗಿದೆ. ಗೂಡಿನ ಬಂಧುಗಳ ರಕ್ಷಣೆಗಾಗಿ ಪ್ರಾಣವನ್ನೇ ಕೊಡುವ ಅವುಗಳ ವರ್ತನೆಯನ್ನು ಆಗಲೇ ಉಲ್ಲೇಖಿಸಿದ್ದಾಗಿದೆ. ಅವುಗಳಲ್ಲಿ ಒಂದೇ ಹೆಣ್ಣು 'ರಾಣಿ'ಯಾಗಿ ಎಲ್ಲ ಸಂತಾನವನ್ನು ಹಡೆದುಕೊಡುತ್ತದೆ. ಇತರ ಹೆಣ್ಣುಗಳು ಕೆಲಸಗಾರರಾಗಿ ಪೋಲೀಸರಾಗಿ ಆಹಾರ ಸಂಗ್ರಹಾದಿ ಕಾರ್ಯ ನಿರ್ವಹಿಸುವುದಲ್ಲದೆ ಸೋದರ ಮರಿಗಳನ್ನು ಸಾಕುತ್ತವೆ. ತಾವು ಗೂಡಿನ ರಕ್ಷಣೆಗಾಗಿ ಹೋರಾಡಿ ಸಾಯುವುದರಲ್ಲಿ ವೈಯಕ್ತಿಕವಾಗಿ ಬದುಕುವ ಇಚ್ಛೆಯನ್ನು ತ್ಯಜಿಸುವುದು ಸಾಲದ್ದಕ್ಕೆ ಬಂಜೆಗಳಾಗಿದ್ದು ತಮ್ಮ ವೈಯಕ್ತಿಕ ವಂಶ ಬೆಳೆಸುವುದನ್ನು ಬಿಟ್ಟುಕೊಡುವುದು ಇಮ್ಮಡಿ ತ್ಯಾಗ. ಈ ಕೀಟಗಳ ಯುಗಯುಗಗಳ ವಿಕಾಸದಲ್ಲಿ ಈ ಗುಣಗಳನ್ನು ಅವುಗಳ ಜೀನುಗಳಲ್ಲಿ ನಿಸರ್ಗ ಹೇಗೆ ಎರಕ ಹೊಯ್ದಿತು? ಯಾಕೆ?

ಜೀವ-ಸಮಾಜ ಶಾಸ್ತ್ರದ ಅಧ್ವರ್ಯುಗಳು ಇದಕ್ಕೆ ಮೂರು ಉತ್ತರಗಳ ಸಾಧ್ಯತೆಯನ್ನು ಬೆದಕುತ್ತಾರೆ. (೧) ಗುಂಪಿನ ಉಳಿಗಾಲದ ಉದ್ದೇಶ (೨) ರಕ್ತ ಸಂಬಂಧ (೩) ಸಹಕಾರ. ಉದಾಹರಣೆಗೆ, ಸೀಳುನಾಯಿಗಳಲ್ಲಿ ಗರ್ಭಧಾರಣೆಯನ್ನು ತಡೆಹಿಡಿಯುವುದಕ್ಕೆ ಉದ್ದೇಶ ಹೀಗಿರಬಹುದು—ಸಂತಾನೋತ್ಪಾದನೆ ಮಿತಿ ಮೀರಿದರೆ ಆಹಾರಕೊರತೆಯಿಂದಾಗಿ ಮುಂದೆ ಇಡೀ ಗುಂಪಿಗೆ ಅಪಾಯ ತಟ್ಟುವ ಸಂಭವ ಇದೆ. ಆ ಭಯ ತಪ್ಪಿಸುವ ಉದ್ದೇಶಕ್ಕಾಗಿ ಈ 'ಸಂತತಿ ನಿಯಂತ್ರಣ' ಇರಬಹುದು. ಗುಂಪಿನ ಉಳಿಗಾಲಕ್ಕೆ ಈ ಪ್ರವೃತ್ತಿ ನೆರವಾಗಬಹುದು. ಇದು 'ಪ್ರಬುದ್ಧ ಸ್ವಾರ್ಥ'—ಉಪಕಾರ ಬುದ್ಧಿಯಲ್ಲ. ಅದು 'ಮುದ್ದತಿ ಸ್ವಾರ್ಥ.'

ಆದರೆ ಹೆಚ್ಚು ಜೀವ-ಸಮಾಜಶಾಸ್ತ್ರಗಳಿಗೆ ಪ್ರಿಯವಾದ ಉತ್ತರವೆಂದರೆ ನಡುವಿನದು—ಅಂದರೆ ರಕ್ತ ಸಂಬಂಧ. ಇದನ್ನು ನಾವು ವೈಯಕ್ತಿಕ ಸ್ವಾರ್ಥವೆಂದೆಲ್ಲ, 'ಜೀನುಗಳ ಸ್ವಾರ್ಥ' ಎಂದು ಕರೆಯಬಹುದು.

**ಪರಾರ್ಥವೇ ಸ್ವಾರ್ಥ**

ಉದಾಹರಣೆಗಳನ್ನು ವಿವೇಚಿಸುವಾ. ತನ್ನ ಸಂಗಡಿಗರಿಗೆ ಎಚ್ಚರಿಕೆ ಕೊಡಲು ಚೀರಿ ತನಗೆ ಅಪಾಯ ತಂದುಕೊಳ್ಳುವ ಪುಟ್ಟ ಹಕ್ಕಿಯನ್ನು ತೆಗೆದುಕೊಳ್ಳಿ. ಅದರ ಚೀರಾಟದಿಂದ ಆ ಜಾತಿಯ ಹಕ್ಕಿಗಳೇ ಅಲ್ಲದೆ ಇತರ ಪ್ರಾಣಿಗಳೂ ಪ್ರಯೋಜನ ಹೊಂದಬಹುದಾದರೂ ಅದು ಉದ್ದೇಶಿಸುವುದು ತಮ್ಮ ಜಾತಿಯ ಹಕ್ಕಿಗಳನ್ನು ಕುರಿತು. ಒಂದು ಪರಿಸರದಲ್ಲಿ ವಾಸಿಸುವ ಒಂದು ಜಾತಿಯ ಹಕ್ಕಿಗಳಲ್ಲಿ ಹೆಚ್ಚಿನವು ಒಂದೇ ತಾಯಿಯ ಮಕ್ಕಳು ಮೊಮ್ಮಕ್ಕಳಾಗಿರುವ ಸಂಭವ ಜಾಸ್ತಿ. ಅಂದರೆ ಅವು ಪರಸ್ಪರ ಸಂಬಂಧಿಕರು. ಅರ್ಥಾತ್ ಅವುಗಳ ಶರೀರಗಳಲ್ಲಿ ಸಮಾನ ಪೂರ್ವಜರಿಂದ ಬಂದ ಒಂದೇ ಜೀನುಗಳ ಕೆಲವಾದರೂ ಪ್ರತಿಗಳಿರುವುದರಿಂದ ಎಚ್ಚರಿಕೆ ಪಡೆಯುವ ಹಕ್ಕಿಗಳೂ ಎಚ್ಚರಿಕೆ ಕೊಡುವ ಪಕ್ಷಿಯೂ ಒಂದಂಶದಲ್ಲಿ ಒಂದೇ ಹಕ್ಕಿ ಎನ್ನಬಹುದಲ್ಲ! ಹೀಗೆ ಅವು ಬದುಕುಳಿಯುವ ಈ 'ಉಪಕಾರಿ' ಹಕ್ಕಿಯ 'ಜೀನ್ ಸ್ವಾರ್ಥ' ಅಡಕವಾಗದೆ ಅವುಗಳಿಗೆ ವೈಯಕ್ತಿಕವಾಗಿ ಈ

ಸ್ವಾರ್ಥದ ಪ್ರಶ್ನೆ, ಹೇತು ಇರಲಿಕ್ಕಿಲ್ಲ. ಆದರೆ ಅವುಗಳ ಶರೀರದ ಜೀನುಗಳಿಗೆ ಇದು ಗೊತ್ತು! ಇದೇ ಮಾತು ಆನೆಗಳಿಗೂ ಸಲ್ಲುತ್ತದೆ. ಒಂದು ಹಿಂಡಿನ ಆನೆಗಳು ಹೆಚ್ಚು ಮಟ್ಟಿಗೆ ಅಕ್ಕತಂಗಿಯರು; ತಬ್ಬಲಿ ಮರಿಗೆ ಚಿಕ್ಕಮ್ಮ ದೊಡ್ಡಮ್ಮಗಳು. ಈ ಮರಿಯೂ ಪೂರ್ತಿಯಲ್ಲದಿದ್ದರೂ ಅಂಶತಃ ಅವುಗಳ ಮರಿಗಳೇ. ಆದ್ದರಿಂದ ಅದೂ ಜೀನ್ ಸ್ವಾರ್ಥ.

**ಗಣಿತ ಸೂತ್ರ**

ಈ ಥಿಯರಿಯ ಪ್ರತಿಪಾದಕರು ಈ ವಿಷಯದಲ್ಲಿ ಒಂದು ಅಚ್ಚುಕಟ್ಟಾದ ಗಣಿತ ಸೂತ್ರವನ್ನೇ ರೂಪಿಸಿದ್ದಾರೆ. ಒಂದೇ ತಂದೆ-ತಾಯಿ ಉತ್ಪಾದಿಸಿದ ಪ್ರತಿ ಸಂತಾನದ ಶರೀರದಲ್ಲಿ ತಂದೆಯ ವಂಶ ಲಕ್ಷಣದ ಜೀನುಗಳು ಅರ್ಧ, ತಾಯಿಯವು ಅರ್ಧ ಇರುತ್ತವೆ. ಅಥವಾ ತಮ್ಮ ಮಗುವಿನಲ್ಲಿ ತಾಯಿಯ ಜೀನ್ ಬಂಡವಾಳ ಅರ್ಧ. ತಂದೆಯದು ಅರ್ಧ ಇದ್ದಂತಾಯಿತು. ತಮ್ಮ ಬಂಡವಾಳ ಕಾಪಾಡಲು ಅಷ್ಟಷ್ಟು ಮಟ್ಟಿಗೆ ಅವುಗಳ ಸ್ವಾರ್ಥ ಇದೆ. ಹಾಗೆಯೇ ಒಂದೇ ತಂದೆತಾಯಿಗಳ ಮಕ್ಕಳಲ್ಲಿ (ಸೋದರ-ಸೋದರಿ) ಪರಸ್ಪರ ನೋಡಿದರೆ ಸಮಾನ ಜೀನುಗಳು ಧಾರಾಳವಾಗಿರುವುದರಿಂದ ಅವರಿಗೆ ಪರಸ್ಪರರ ಬದುಕಿನಲ್ಲಿ ಅಷ್ಟು ಮಟ್ಟಿಗೆ ಬಂಡವಾಳ ಸ್ವಾರ್ಥ ಇದೆ. ಒಂದೇ ತಾಯಿ ಮತ್ತು ಬೇರೆ ಬೇರೆ ತಂದೆಗಳ ಮಕ್ಕಳಲ್ಲಿ ಅಂದರೆ 'ಸವತಿ ಸೋದರ'ರಲ್ಲಿ ಪರಸ್ಪರ ಪೂರ್ತಿ ಸೋದರ ರೊಳಗಿರುವುದರ ಅರ್ಧ ಮಾತ್ರ ಸ್ವಾರ್ಥದ ಬಂಡವಾಳ ಇದೆ.

ಸ್ವಲ್ಪ ತಮಾಷೆಯಾಗಿ ಹೇಳುವುದಾದರೆ ತಾಯಿ ತಂದೆಗಳು ಮಗುವಿನ ಜೀವ ಉಳಿಸುವುದಕ್ಕೆ ತ್ಯಾಗಮಾಡುವುದರಲ್ಲಿ ಅವರ ಪೂರ್ಣ ಬಂಡವಾಳದ ಹಿತ ಅಡಕವಾಗಿದೆ ಎನ್ನಿ. ಆದರೆ ಒಬ್ಬನು ತನ್ನ ಇಬ್ಬರು ಸೋದರರ ಜೀವ ಉಳಿಸಲು ಪ್ರಾಣಕೊಡುವುದಾದರೆ ಮಾತ್ರ ಅವನಿಗೆ ತನ್ನ ಬಂಡವಾಳದ ಪ್ರತಿಫಲ ಮುಟ್ಟಿದಂತೆ; ಬದಲಿಗೆ ಒಬ್ಬ ಸೋದರನಿ ಗೋಸ್ಕರ ಬಲಿಯಾಗುವುದು ಅವನಿಗೆ ಜೀನ್ ಬಂಡವಾಳ ದೃಷ್ಟಿಯಿಂದ ನಷ್ಟ ; ತನ್ನ ಜೀವ ಕೊಟ್ಟು ಮೂವರು ಪೂರ್ಣ ಸೋದರ-ಸೋದರಿಯರನ್ನುಳಿಸಿದರೆ ಅದು ಜೀನ್ ಸ್ವಾರ್ಥದ ದೃಷ್ಟಿಯಿಂದ ಲಾಭ! ತಾನು ಸತ್ತರೂ ತನ್ನವೇ ಜೀನುಗಳು ಸೋದರರ ಸಂತತಿ ಮೂಲಕ ಲಾಭಕರವಾಗಿ ಮುಂದುವರಿಯುತ್ತವಲ್ಲವೇ? ಸವತಿ-ಸೋದರರ ವಿಚಾರದಲ್ಲಿ ತ್ಯಾಗದ ಬಂಡವಾಳ ಅಸಲಿಗೆ ಅಸಲು ಬರಬೇಕಾದರೆ ಮತ್ತೂ ಇಮ್ಮಡಿ ಜನರಿಗೆ ಹಿತವಾಗ ಬೇಕಾಗುತ್ತದೆ.

ಪ್ರಾಣಿಗಳು ನೈಸರ್ಗಿಕವಾಗಿ ಸಹಕಾರ, ತ್ಯಾಗ, ಬಲಿದಾನ ಮಾಡುವುದಕ್ಕೆ ತಯಾರಾಗುವುದು ಅವುಗಳ 'ಬುದ್ಧಿಪೂರ್ವಕ' ಕೃತಿಗಳಲ್ಲದಿದ್ದರೂ ಜೀವವಿಕಾಸವನ್ನು ನಿಯಂತ್ರಿಸುವ ನಿಸರ್ಗ ನಿಯಮದಲ್ಲಿ ಮೇಲೆ ಹೇಳಿದಂಥ ಯಾವುದೋ ಲೆಕ್ಕಾಚಾರ ಅಡಕವಾಗಿದೆಯೆಂದು ಜೀವ-ಸಮಾಜ ವಿಜ್ಞಾನದ ಸಂಶೋಧಕರಿಗೆ ಬಲವಾದ 'ನಂಬಿಕೆ' ಇದೆ. ಹಾಗೆಯೆ ಆ ಲೆಕ್ಕಾಚಾರದಲ್ಲಿ ಹೇಳಿದಂತೆ ಜೀನ್-ಬಂಡವಾಳ ಅಸಲಿಗೆ-ಅಸಲಿಗಿಂತ

ಹೆಚ್ಚು ಲಾಭಕರವಾಗುವಂತಿದ್ದರೆ ಮಾತ್ರ ಪ್ರಾಣಿಗಳು ತ್ಯಾಗ ಮಾಡಲು ಮುಂದಾಗುತ್ತವೆ, ನಷ್ಟವಾಗುವಂತಿದ್ದರೆ ಇಲ್ಲವೆಂದೂ ಅವರು ನಂಬುತ್ತಾರೆ. ಪರಿಸರದಲ್ಲಿ ತನ್ನ ಜಾತಿಯ, ರಕ್ತಸಂಬಂಧಿಕ ಹಕ್ಕಿಗಳಿಲ್ಲವೆಂದು ಖಚಿತವಿದ್ದರೆ ಹಕ್ಕಿ ಎಚ್ಚರಿಕೆಯ ಕೂಗು ಹಾಕಿ ವಿಪತ್ತನ್ನು ಬರಮಾಡಿಕೊಳ್ಳಲಿಕ್ಕಿಲ್ಲ. ಅಂಥ ಪೆದ್ದತನಕ್ಕಿಳಿಯುವ ಗುಣ ಒಂದು ಜಾತಿಯಲ್ಲಿ ಇದ್ದರೆ ಬಹುಬೇಗನೆ ಅದರ ವಂಶವೇ ಅಸ್ತಂಗತವಾದೀತು.

ಇರುವೆ, ಜೇನ್ನೊಣ, ಕೆಲವೊಂದು ಕಣಜದ ಹುಳುಗಳು ಇವುಗಳಲ್ಲಿ ಪರಮಾವಧಿ ತ್ಯಾಗ, ಸಾಮೂಹಿಕ ಹಿತದ ಯತ್ನ ಇರುವುದಕ್ಕೆ ಈ ವಿಜ್ಞಾನಿಗಳು ಇದೇ ಲೆಕ್ಕಾಚಾರದ ಸಮಾಧಾನಗಳನ್ನು ಕೊಡುತ್ತಾರೆ. ಒಂದು ಗೂಡಿನಲ್ಲಿರುವ ಜೇನ್ನೊಣ, ಇರುವೆಗಳೆಲ್ಲ ಒಂದೇ ತಾಯಿಯ ಸಂತಾನಗಳು. ಗೂಡಿನ ಜನಸಂಖ್ಯೆಯೂ ಬಹಳ ದೊಡ್ಡದು. ಹೀಗಾಗಿ 'ಜೀನ್ ಬಂಡವಾಳ'ದ ಲಾಭ ನಷ್ಟದ ದೃಷ್ಟಿಯಿಂದ ಇಡೀ ಸಮೂಹದ ರಕ್ಷಣೆಗೆ ಕೆಲವು ವೈಯಕ್ತಿಕ ಬಲಿದಾನ ಮಾಡುವುದು ಲಾಭಕರವಾಗುತ್ತದೆ.

ಸಂತಾನೋತ್ಪಾದನೆಯನ್ನು ಒಂದೇ ಹುಳಕ್ಕೆ ಒಪ್ಪಿಸಿ ಉಳಿದ ಹುಳಗಳು 'ಬ್ರಹ್ಮಚಾರಿಣಿ'ಯರಾಗಿ ಉಳಿಯುವ ಕೀಟಗಳ ವಿಷಯದಲ್ಲಿ ಕೆಲ ಸ್ವಾರಸ್ಯಾಂಶಗಳು ಇವೆ. ಜೇನ್ನೊಣಗಳಲ್ಲಿ ಹೆಣ್ಣು ಹುಳಗಳ ಹುಟ್ಟು ಹೆಣ್ಣು ಗಂಡಿನ ಸಂಯೋಗದಿಂದಾದರೆ, ಗಂಡುಗಳ ಉತ್ಪತ್ತಿ ಸಂಯೋಗವಿಲ್ಲದೆ ಆಗುತ್ತದೆ. ಹೀಗೆ ತಾಯಿಗೂ ಹೆಣ್ಣು (ಕೆಲಸಗಾರ) ಮಕ್ಕಳಿಗೂ ಅರ್ಧಾರ್ಧ ಜೀನ್ ಸಂಬಂಧ (ತಂದೆ-ತಾಯಿ), ಅಕ್ಕತಂಗಿಯರಿಗೆ ಪರಸ್ಪರ ಮುಕ್ಕಾಲಂಶ ಸಂಬಂಧ ಮತ್ತು ಅಕ್ಕತಮ್ಮಂದಿರಿಗೆ ಪರಸ್ಪರ ಅದರ ಅರ್ಧ ಮಾತ್ರ ಸಂಬಂಧವೆಂಬ ವಿಚಿತ್ರ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಕೆಲಸಗಾರ ತುಂಬಿಗಳು ಸಾಧ್ಯವಾದರೆ ತಮ್ಮದೇ ಗಂಡು ತತ್ತಿ ಇಡಲು ಯತ್ನಿಸುತ್ತವೆಂದೂ ತಮ್ಮ ತಾಯಿಯ ಮರಿಗಳನ್ನೇ ಸಾಕಬೇಕಾದಲ್ಲಿ ಗಂಡು ಮರಿಗಳಿಗಿಂತ ಹೆಣ್ಣು ಮರಿಗಳನ್ನು ಹೆಚ್ಚು ಜತನದಿಂದ ಕಾಪಾಡುತ್ತವೆಂದೂ ತಿಳಿದುಬಂದಿದೆ. ಯಾಕೆಂದರೆ ಆ ಜಾತಿಯಲ್ಲಿ ಅಕ್ಕತಂಗಿಯರ ಜೀನ್-ಸಂಬಂಧ ಹೆಚ್ಚಿನದು, ಅಕ್ಕ-ತಮ್ಮಂದಿರದು ಕಮ್ಮಿ ಅಂಶದ್ದು. ಹೀಗೆ 'ರಕ್ತಸಂಬಂಧ' ಥಿಯರಿಗೆ ಪ್ರತ್ಯಕ್ಷ ನಿರೀಕ್ಷಣೆಯ ಬೆಂಬಲ ಸಿಕ್ಕಿದೆ.

ಅಂತೂ ಒಟ್ಟಾರೆ ಹೇಳಬೇಕಾದರೆ ನಮಗೆ ಅತಿಶಯ ನಿಃಸ್ವಾರ್ಥ-ಪರಾರ್ಥಕವೆಂದು ಆಪಾತತಃ ಕಾಣಿಸುವುದು ನಿಜಕ್ಕೂ ಸ್ವಾರ್ಥದ್ದೇ ವ್ಯಾಪಾರ. ನಿಸರ್ಗದಲ್ಲಿ ಸ್ವಾರ್ಥವೇ ಜೀವದ ಮೂಲ ಪ್ರಕೃತಿ. ಅದೇ ಪ್ರಧಾನ ಪ್ರವೃತ್ತಿ.

## ಮನುಷ್ಯ ಸ್ವಾರ್ಥ

ಮನುಷ್ಯರ ವರ್ತನೆ, ಸಂಬಂಧಗಳಿಗೂ ಈ ಥಿಯರಿಯನ್ನು ಅನ್ವಯಿಸಿದ್ದಾರೆ. ತಂದೆ ತಾಯಿಗಳು ಮಕ್ಕಳಿಗಾಗಿ ಮಾಡುವಷ್ಟು ಯತ್ನ ಅಥವಾ ತ್ಯಾಗವನ್ನು ಅಣ್ಣ-ತಮ್ಮ, ಅಕ್ಕ-ತಂಗಿಯರು ಪರಸ್ಪರರಿಗಾಗಿ ಮಾಡಿಕೊಳ್ಳಲು ಅಣಿಯಾಗುವುದಿಲ್ಲ. ಯಾಕಂದರೆ

ಸೋದರರ ಪರಸ್ಪರ ಜೀನ್ ಸಂಬಂಧ ಹೆತ್ತವರಿಗೂ ಮಕ್ಕಳಿಗೂ ಇರುವಷ್ಟಿಲ್ಲ. ಆತ್ಮಾವಾ 'ಪುತ್ರ ನಾಮಾಸಿ' ಹೊರತು 'ಸೋದರ ನಾಮಾಸಿ' ಅಲ್ಲ. ನಿಪುತ್ರಕರಾಗಿದ್ದವರ ಆಸ್ತಿ ಹಿಂದಿನ ಧರ್ಮಶಾಸ್ತ್ರ ಪ್ರಕಾರ ಅಳಿಯನಿಗಲ್ಲ, ದೌಹಿತ್ರನಿಗೆ (ಮಗಳ ಮಗ) ಹೋಗಬೇಕೆಂಬುದಕ್ಕೆ ಅಳಿಯನಿಗೂ ಮಾವನಿಗೂ ಜೀನ್ ಸಂಬಂಧ ಇಲ್ಲ. ಮೊಮ್ಮಗನಿಗೆ ಇದೆಯೆಂಬುದು ಕಾರಣ. ಮಕ್ಕಳಿಲ್ಲದವರು ದತ್ತಕ ಹಿಡಿಯುವುದಕ್ಕೆ ರಕ್ತಸಂಬಂಧಿಕರನ್ನೇ ಆರಿಸುವುದೂ ಇದೇ ಕಾರಣಕ್ಕೆ; ದತ್ತಕ ಹಿಡಿದ ನಂತರ ಸ್ವತಃಕ್ಕೆ ಮಕ್ಕಳಾದರೆ ದತ್ತಕನನ್ನು ಕೈಬಿಡುವುದಕ್ಕೂ ಜೀನ್-ಸ್ವಾರ್ಥದ ಅಂತರ ಕಾರಣವಾಗಿರುವುದರಿಂದ ಅದು ಅಸ್ವಾಭಾವಿಕವಲ್ಲ. ಸವತಿಯ ಮಕ್ಕಳನ್ನು, ಅಥವಾ ಹೆಂಡತಿಗೆ ಮೊದಲ ಗಂಡನಿಂದ ಹುಟ್ಟಿದ ಮಕ್ಕಳನ್ನು ದ್ವೇಷಿಸುವುದು ಕೂಡ ಸಹಜವೇ ಸೈ. ಆ ಮಕ್ಕಳಲ್ಲಿ ತನ್ನ ಜೀನ್ ಬಂಡವಾಳ ಏನೂ ಇಲ್ಲ; ಮಾತ್ರವಲ್ಲ, ನಾಳೆ ತನ್ನ ಸ್ವಂತ ಜೀನ್‌ಗಳನ್ನು ತೊಡಗಿಸಿ ಹುಟ್ಟಿರುವ ಮಕ್ಕಳಿಗೆ ಸವತಿ ಮಕ್ಕಳು ಸ್ಪರ್ಧಿಗಳಾಗಿ ಅವುಗಳ ಬದುಕು, ಬೆಳವಣಿಗೆಗಳಿಗೆ ಕಾಲ್ತೊಡಕೊಡ್ಡುತ್ತವೆ. ಅನೇಕ ಆಸ್ತಿವಂತ ಮನೆತನಗಳಲ್ಲಿ ರಕ್ತಸಂಬಂಧಿಕರೊಳಗೆ ಮದುವೆಗಳಾಗುವುದೂ ಜೀನ್-ಸ್ವಾರ್ಥದ ಫಲವೇ!

ಈ ಥಿಯರಿ ಸ್ವಾರಸ್ಯವೂ ಸಂಭಾವ್ಯವೂ ಆಗಿ ಕಾಣಿಸಿದರೂ ಹಲ ವಿಜ್ಞಾನಿಗಳು ಅದರ ಬಗ್ಗೆ ಅಸಂತೋಷಪಡುತ್ತಾರೆ. ಒಂದು ದೊಡ್ಡ ಕೊರತೆಯೆಂದರೆ ಜೀವಿಗಳ ವರ್ತನೆ ಜೀನುಗಳಲ್ಲಿ ಮುದ್ರಿತವಾಗಿ ಬರುತ್ತದೆಯೆಂದು ಈ ಥಿಯರಿ ಗ್ರಹಿಸುತ್ತದೆ. ಇದು 'ಹಣೆಬರಹ'ದ್ದೇ ಇನ್ನೊಂದು ಆವೃತ್ತಿ. ಸ್ವಂತ ಅನುಭವ (ಪರಿಸರಕ್ಕೆ ಪ್ರತಿಕ್ರಿಯೆಯಾಗಿ) ದಿಂದ ಜೀವಿಗಳು ತಮ್ಮ ವರ್ತನೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವುದಕ್ಕೆ ಈ ಥಿಯರಿಯಲ್ಲಿ ತೀರ ಗೌಣ ಸ್ಥಾನ ಸಿಗುತ್ತದೆ. ಮನುಷ್ಯನಿಗೆ ಈ ಥಿಯರಿಯನ್ನು ಇದ್ದಕ್ಕಿದ್ದಂತೆ ಅನ್ವಯಿಸಿದರೆ, ಕೆಲ ಜಾತಿಗಳು ಅಥವಾ ವರ್ಣಗಳು ಸಹಜ ಸಿದ್ಧವಾಗಿಯೆ ಬುದ್ಧಿವಂತರು, ಶ್ರೇಷ್ಠರು, ಗುಣವಂತರು ಎಂಬ ಅನಿಷ್ಟ ನಂಬಿಕೆ ಬರಬಹುದು. ಈ ಭಯಗಳೊಡನೆ ಮನುಷ್ಯಜೀವಿಗಳ ಸ್ವಂತ ಇಚ್ಛೆ, ಆಯ್ಕೆ ಮತ್ತು ಹೊಣೆಗಾರಿಕೆಯನ್ನು ನಿರಾಕರಿಸುವ ಮೂಲಕ ಅವನನ್ನು ಕುರುಡು ನಿಸರ್ಗದ ಕೈಯ ಸೂತ್ರದಬೊಂಬೆಯಾಗಿ ಪ್ರತಿನಿಧಿಸಬಹುದೆಂಬ ಭಯ ನಿಜವಾದದ್ದೇ.

■

# ಭಾಗ - 4

# ವೈಚಾರಿಕ

# ಪ್ರಜ್ಞಾವಾದ: ದಿಟ ಮತ್ತು ಸಟೆ

**ಕು**ರುಕ್ಷೇತ್ರದಲ್ಲಿ ಪಾಂಡವ ಕೌರವ ಸೈನ್ಯಗಳು ಎದುರುಬದುರಾಗಿ ಯುದ್ಧಕ್ಕೆ ಅಣಿಯಾಗುವ ಸನ್ನಿವೇಶದಲ್ಲಿ ಮೂರುಲೋಕದ ಗಂಡನೆನಿಸಿದ ಅರ್ಜುನ ಒಮ್ಮಿಂದೊಮ್ಮೆ ನಿರ್ವಿಣ್ಣನಾಗಿ ಯುದ್ಧದಿಂದಾಗುವ ಅನಾಹುತಗಳನ್ನೆಲ್ಲಾ ಒಂದೊಂದಾಗಿ ಹೇಳಿ, "ಬೇಡ ಕೃಷ್ಣಾ, ನಾನು ಯುದ್ಧ ಮಾಡಲಾರೆ" ಎಂದು ಕುಳಿತುಬಿಟ್ಟ ಸಂದರ್ಭದಲ್ಲಿ ಕೃಷ್ಣ ಅವನನ್ನು "ಪ್ರಜ್ಞಾವಾದಾಂಶ್ಚ ಭಾಷಸೇ" ಎಂದು ಜರೆಯುವ ವಾಕ್ಯವೊಂದು ಭಗವದ್ಗೀತೆಯಲ್ಲಿ ಬರುತ್ತದೆ. ನೀನು ಬರೇ ಪ್ರಜ್ಞಾವಾದಗಳನ್ನು—ಅರ್ಥಾತ್ ತರ್ಕವಾದವನ್ನು—ಮಾತಾಡುತ್ತೀ ಎಂದು ಹೇಳುವ ಕೃಷ್ಣನ ಈ ನುಡಿ ವಿಚಾರಪರರನ್ನೆಲ್ಲ ರೊಚ್ಚಿಗೆಬ್ಬಿಸುವ ಹಾಗಿದೆ. ತರ್ಕಬದ್ಧವಾಗಿ, ವಿಚಾರಬದ್ಧವಾಗಿ ಮಾತಾಡುವುದು ಅಪರಾಧವಾಗಿ ಹೋಯಿತೆ? ಮನುಷ್ಯ ಸಾರಾಸಾರ ವಿಚಾರ ಮಾಡಿ ಕೆಲಸ ಮಾಡಬೇಕಲ್ಲದೆ ಹಿರಿಯರು ಹೇಳಿದರೆಂದೋ ಅಥವಾ ಕೇವಲ ಭಾವನಾಪರವಶನಾಗಿಯೋ ಕೆಲಸ ಮಾಡಬೇಕೆ?

ಕೃಷ್ಣ ಇಲ್ಲಿ ಶುದ್ಧ ಪ್ರತಿಗಾಮಿಯಾಗಿ ಕಾಣಿಸುತ್ತಾನೆ, ಯುದ್ಧದಿಂದಾಗುವ ಅನಾಹುತಗಳ ವಿಷಯದಲ್ಲಿ ಅರ್ಜುನ ಮುಂದೊಡ್ಡುವ ವಾದಗಳೆಲ್ಲ ಅತ್ಯಂತ ಯುಕ್ತಿಯುಕ್ತವಾಗಿವೆಯೆಂದು ವಿಚಾರವಂತರು ಒಪ್ಪಬೇಕಾಗುತ್ತದೆ. ಕೃಷ್ಣ ಅವುಗಳಲ್ಲಿ ಯಾವುದಕ್ಕೂ ಸಮರ್ಪಕ ಉತ್ತರ ಕೊಡುವ ಗೊಡವೆಗೇ ಹೋಗದೆ, "ಸಾಕು ಸಾಕು!ಬಹಳ ಬುದ್ಧಿವಂತನ ಹಾಗೆ ಮಾತಾಡುತ್ತಿ!" ಎನ್ನುವಂತೆ ಅವನನ್ನು ದಬಾಯಿಸಿ ಬಿಡುತ್ತಾನಲ್ಲ, ಎಂದುಕೊಳ್ಳುತ್ತೇವೆ.

'ಪ್ರಜ್ಞಾವಾದ' ಎಂದರೇನು? ಯಾವ ಕೆಲಸವನ್ನೂ ಭಾವನೆ ಅಥವಾ ಶಾಸ್ತ್ರ ಪರಂಪರೆಗೆ ಕುರುಡು ವಿಧೇಯತೆಯಿಂದ ಮಾಡದೆ ತರ್ಕದ ಒರೆಗಲ್ಲಿಗೆ ಹಚ್ಚಿಯೇ ಮಾಡುವುದು ಪ್ರಜ್ಞಾವಾದ ಎಂದು ನಾವಂದುಕೊಳ್ಳುತ್ತೇವೆ. ಇದು ಅತ್ಯಂತ ಯೋಗ್ಯವೂ ಹೌದು. ಮನುಷ್ಯ ತನ್ನ ಪಾಪಪುಣ್ಯಗಳಿಗೆ ಹೊಣೆಗಾರನಾಗಿರುವಾಗ ಪ್ರತಿಯೊಂದು ಕಾರ್ಯದಲ್ಲಿಯೂ ಪ್ರಜ್ಞೆಗೆ, ವಿಚಾರಕ್ಕೆ, ಅವನ ಸದಸದ್ವಿವೇಕಕ್ಕೆ ಪ್ರಾಧಾನ್ಯವಿರಲೇಬೇಕು.

ಪ್ರಜ್ಞಾವಾದಕ್ಕೆ ಇನ್ನೊಂದು ಮುಖವೂ ಇದೆ. ಒಂದು ಕೆಲಸ ಮಾಡಬೇಕು ಅಥವಾ ಮಾಡಬಾರದು ಎಂಬುದಾಗಿ ಮೊದಲೇ ನಾವು ಮನಸ್ಸಿನಲ್ಲಿ ಮಾಡಿಕೊಂಡುಬಿಡುತ್ತೇವೆ. ಆಮೇಲೆ ಅದನ್ನು ಸಮರ್ಥಿಸುವುದಕ್ಕೆ ತರ್ಕವನ್ನು ಆಶ್ರಯಿಸುತ್ತೇವೆ.

ಎರಡರಲ್ಲಿಯೂ ಪ್ರಜ್ಞೆಗೆ—ವಿಚಾರಕ್ಕೆ, ತರ್ಕಕ್ಕೆ ಸ್ಥಾನವಿದೆ. ಆದರೆ ಅವುಗಳ ಪ್ರಕ್ರಿಯೆಗಳು ಮಾತ್ರ ಬೇರೆ ಬೇರೆ. ಮೊದಲನೆಯದರಲ್ಲಿ, ಒಂದು ವಿಷಯ ಬಂದಾಗ ನಾವು ಅದರಿಂದ ಆಗತಕ್ಕ ಒಳಿತು-ಕೆಡುಕು, ಅದರ ಸಾಧ್ಯತೆ-ಅಸಾಧ್ಯತೆ ಇವೆಲ್ಲವುಗಳನ್ನೂ ತೂಗಿ

ನೋಡುತ್ತೇವೆ. ಹಿತದ ಅಂಶ ಹೆಚ್ಚಾಗಿದೆಯೆಂದು ಖಚಿತಪಟ್ಟರೆ ಅದನ್ನು ಮಾಡುವುದಕ್ಕೆ ಉಪಕ್ರಮಿಸುತ್ತೇವೆ. ಇದರಲ್ಲಿ ಪೂರ್ವನಿರ್ಧಾರದ ಅಂಶವಿಲ್ಲ. ರಾಗ-ದ್ವೇಷ ಅಥವಾ ಪಕ್ಷಪಾತದ ಅಂಶವಿಲ್ಲ. ಅದು ವಕಾಲತ್ತಲ್ಲ. ತರ್ಕವೇ ಅದಕ್ಕೆ ಮಾರ್ಗದರ್ಶಿ ಇದನ್ನು ಪ್ರಜ್ಞಾವಾದ—Rationalism—ಎಂದು ನಿಜವಾದ ಅರ್ಥದಲ್ಲಿ ಕರೆಯಬೇಕು.

ಇನ್ನೊಂದು ನಿಜವಾದ ಪ್ರಜ್ಞಾವಾದವಲ್ಲ. ಅದು ಕೇವಲ ಯುಕ್ತಿವಾದ— Rationalisation. ಅದರಲ್ಲಿ ನಾವು ದ್ವೇಷದಿಂದಲೋ ಮೋಹದಿಂದಲೋ ಭಯದಿಂದಲೋ ಪ್ರೇರಿತರಾಗಿ ಒಂದು ಇತ್ಯರ್ಥಕ್ಕೆ ಮೊದಲೇ ಬಂದುಬಿಟ್ಟಿರುತ್ತೇವೆ. ಆಮೇಲೆ ನಮ್ಮ ನಿರ್ಣಯವನ್ನು ನಾಲ್ಕು ಜನರ ಮುಂದೆ ಸಮರ್ಥಿಸಿಕೊಳ್ಳುವುದಕ್ಕಾಗಿ ಅನುಕೂಲವಾದ ವಾದಗಳನ್ನು ಹುಡುಕುತ್ತೇವೆ. ಆಗ ನಾವು ಪ್ರತಿಕೂಲವಾದ ತಥ್ಯಗಳನ್ನು ಸರಿಯಾಗಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ತೆಗೆದುಕೊಂಡರೂ ಅದರಲ್ಲಿ ಪ್ರಾಮಾಣಿಕತನ ಇರುವುದಿಲ್ಲ. ನಿಜವಾದ ಪ್ರಜ್ಞಾವಾದದಲ್ಲಿ ತರ್ಕ ಒಡೆಯ; ಸುಳ್ಳು ಪ್ರಜ್ಞಾವಾದದಲ್ಲಿ ತರ್ಕ ಗುಲಾಮ. ಅದು ಭಾವನೆಯ ಉನ್ಮಾದಕ್ಕೆ ಕಡಿವಾಣ; ಇದು ಭಾವನೆಯ ಉನ್ಮಾದಕ್ಕೆ ಪ್ರಚೋದಕ.

ನಮ್ಮಲ್ಲಿ ಹೆಚ್ಚಿನವರು ಎರಡನೇ ತರಹದ ಪ್ರಜ್ಞಾವಾದವನ್ನು ಆಶ್ರಯಿಸುವವರು. ಇದಕ್ಕೆ ಕೆಲವು ಸಲ ತಮ್ಮ ಭಾವನೆಗಳನ್ನು ಪರರೆದುರು ಮುಚ್ಚಿಕೊಂಡು ವಿವೇಕದ ಮುಖವಾಡ ತೋರಿಸುವುದು ಉದ್ದೇಶ. ಹಲವು ಸಲ ನಮ್ಮನ್ನೇ ವಂಚಿಸಿಕೊಳ್ಳುವುದಕ್ಕೆ ಪ್ರಜ್ಞಾವಾದವನ್ನು ಉಪಯೋಗಿಸುತ್ತೇವೆ. ಹೀಗೆ ಹೇಡಿಯಾದವನು ಹೋರಾಡದಿರುವುದಕ್ಕೆ ಸಮರ್ಪಕವೆನಿಸುವ ವಾದಗಳನ್ನು ಹುಡುಕಿ ತೆಗೆಯಬಹುದು. ಕುಲಟೆಯಾದವಳು ಪಾತಿವ್ರತ್ಯ ಅರ್ಥವಿಲ್ಲದ್ದೆಂದು ಸಾಧಿಸಬಹುದು.

ಸರಕಾರ ಹಣವನ್ನು ಪೋಲು ಮಾಡುತ್ತದೆ, ಆದ್ದರಿಂದ ಕಂದಾಯ ತಪ್ಪಿಸುವುದು ನ್ಯಾಯವೇ ಸೈ ಎಂದು ಒಬ್ಬರು ಪ್ರಜ್ಞಾವಾದವನ್ನು ಮಂಡಿಸಿದ್ದನ್ನು ನಾನು ಕೇಳಿದೆ. ಸುಳ್ಳು ಜನ್ಮತಿಥಿಯನ್ನು ಕೊಟ್ಟ ನ್ಯಾಯಾಧೀಶನನ್ನು ಬಹಿರಂಗವಾಗಿ ದಂಡಿಸಿದರೆ ಜನಕ್ಕೆ ನ್ಯಾಯಾಲಯಗಳ ಮೇಲಿನ ವಿಶ್ವಾಸವೇ ಹಾರಿಹೋದೀತೆಂದು ವಾದಿಸಿ ಒಬ್ಬ ವರಿಷ್ಠ ನ್ಯಾಯಾಧೀಶರು ತಪ್ಪುಗಾರ ನ್ಯಾಯಾಧೀಶರಿಗೆ ಸದ್ದಿಲ್ಲದೆ ನಿವೃತ್ತರಾಗುವುದಕ್ಕೆ ಅವಕಾಶ ಕೊಟ್ಟರೆಂದು ಎಂ.ಸಿ. ಸೆಟಲವಾಡರು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿದ್ದಾರೆ. ಅಪ್ರಾಮಾಣಿಕನಾದ ಮಂತ್ರಿಯನ್ನು ಕಿತ್ತುಹಾಕಿದರೆ ಪಕ್ಷಕ್ಕೆ ಪೆಟ್ಟು ಬೀಳುತ್ತದೆ; ಪಕ್ಷಕ್ಕೆ ಪೆಟ್ಟು ಬಿದ್ದರೆ ಅದು ಕುಸಿಯುತ್ತದೆ; ಪಕ್ಷ ಕುಸಿದರೆ ದೇಶದಲ್ಲಿ ಸ್ಥಿರವಾದ ಪಕ್ಷವೇ ಇಲ್ಲದಾಗಿ ಅರಾಜಕತೆ ಹಬ್ಬುತ್ತದೆ; ಆದ್ದರಿಂದ ಆ ಮಂತ್ರಿಯನ್ನು ಇಟ್ಟುಕೊಳ್ಳೋಣ ಎನ್ನುವ ಪ್ರಜ್ಞಾವಾದವೂ ನಮ್ಮಲ್ಲಿದೆ. ಇವೆಲ್ಲವುಗಳಲ್ಲಿಯೂ ಮೋಹ, ರಾಗ, ದ್ವೇಷ, ಸ್ವಾರ್ಥ ಇವುಗಳಲ್ಲಿ ಒಂದೋ ಹೆಚ್ಚೋ ಪ್ರೇರಣೆಗಳಿಂದ ಮಾಡಿಕೊಂಡ ಪೂರ್ವ ತೀರ್ಮಾನಕ್ಕೆ ತರ್ಕದ ಗಿಲೀಟು ಹಚ್ಚಿದ್ದೇ ಕಾಣಿಸುತ್ತದೆ.

ಬಹುಶಃ ಕೃಷ್ಣನೂ ಅರ್ಜುನನ ಪ್ರಜ್ಞಾವಾದವನ್ನು ಇದೇ ವರ್ಗಕ್ಕೆ ಸೇರಿಸಿದ್ದಾನೆ. ಈ ತರಹದ ಪ್ರಜ್ಞಾವಾದದಿಂದ ನಾವು ನಮ್ಮನ್ನು ಕಾಪಾಡಿಕೊಳ್ಳಬೇಕು. ■

# ಪ್ರಾಮಾಣಿಕತೆಯಲ್ಲಿ ಸುಖವಿದೆ

ನನ್ನ ಮಿತ್ರರೊಬ್ಬರು ತಮ್ಮ ಒಂದು ಅನುಭವವನ್ನು ಹೇಳುತ್ತಾರೆ. ಅವರೊಬ್ಬ ಸಾಮಾನ್ಯ ಕವಿ. ಅವರಿನ್ನೂ ಹಸಿ ಕವಿಯಾಗಿದ್ದಾಗ ನಾಡಿನ ಒಬ್ಬ ಪ್ರಸಿದ್ಧ ಕವಿಗಳ ಮುಂದೆ ತಮ್ಮ ಕೆಲ ಕವಿತೆಗಳನ್ನು ಓದಿದರು. ಪ್ರಸಿದ್ಧ ಕವಿಗಳು ತಮ್ಮ ಮೆಚ್ಚಿಕೆಯನ್ನು ಸೂಚಿಸುವ ಯತ್ನದಲ್ಲಿ ಮೊದಲೇ ಇವರ ಕವಿತೆಗಳನ್ನೋದಿದವರ ಹಾಗೆ, 'ಈಗ ಹೊಸದಾಗಿ ಕನ್ನಡದಲ್ಲಿ ಬರೆಯುತ್ತಿರುವವರಲ್ಲಿ ಮೂರು ಕವಿಗಳು ನನಗೆ ಮಹತ್ವದವರಾಗಿ ಕಾಣುತ್ತಾರೆ. ಅವರಲ್ಲಿ ನೀವೊಬ್ಬರು,' ಎಂದು ಪ್ರಾರಂಭಿಸಿದರು. ಆಮೇಲೆ ಆ ಮೂವರಲ್ಲಿ ಉಳಿದಿಬ್ಬರನ್ನು ಹೆಸರಿಸುವ ಗಡಿಬಿಡಿಯಲ್ಲಿ ಮೂರು ಬೇರೆ ಹೆಸರುಗಳನ್ನು ಹೇಳಿಬಿಟ್ಟರು. ಮೂವರು ಹೊಸಮುಖ್ಯ ಕವಿಗಳಲ್ಲಿ ಒಬ್ಬರೆಂದು ಹಿರಿಯ ಕವಿಗಳಿಂದ ಸರ್ಟಿಫಿಕೇಟು ಪಡೆಯುವುದು ಯಾವನೇ ಹಸಿ ಕವಿಗೂ ಹುಮ್ಮಸದ ವಿಷಯವಾದರೂ ಹಿರಿಯ ಕವಿಗಳು ತಮ್ಮ ಪ್ರಶಂಸೆಯಲ್ಲಿ ಪ್ರಾಮಾಣಿಕರಾಗಿದ್ದಿಲ್ಲವೆಂಬ ಮಾತು ಹೊರಬೀಳದೆ ಹೋಗಲಿಲ್ಲ. 'ಈಗಲೂ ನಾನು ಈ ಕವಿಗಳ ಕವಿತೆಗಳನ್ನು ಗೌರವಿಸುತ್ತೇನೆ. ಆದರೆ ಆ ಮನುಷ್ಯನ ಮೇಲಿನ ನನ್ನ ಗೌರವ ಹಾರಿ ಹೋಗಿದೆ. ಅವರು ನನ್ನನ್ನು ಈ ರೀತಿ ಅಪ್ರಾಮಾಣಿಕವಾಗಿ ಹೊಗಳಬೇಕಾದ ಅಗತ್ಯವೇ ಇರಲಿಲ್ಲ. ಬೆನ್ನುತಟ್ಟಿ ಕಳಿಸಿದರೆ ಸಾಕಿತ್ತು. ಆದರೆ ನನ್ನನ್ನು ಮೇಲೇರಿಸಿ ಮಾತಾಡುವ ಔದಾರ್ಯದ ಭರದಲ್ಲಿ ಅವರು ನನ್ನನ್ನು ತಮ್ಮ ಶಿಷ್ಯಕೋಟಿಯಲ್ಲಿ ಸೇರಿಸಿಕೊಳ್ಳುವ ಬದಲು ಅವರ ಹೊಗಳಿಕೆ, ತೆಗಳಿಕೆಗೆ ಏನೂ ಬೆಲೆ ಕೊಡದವನನ್ನಾಗಿ ಮಾಡಿಕೊಂಡರು,' ಎಂದು ನನ್ನ ಮಿತ್ರರು ಹೇಳುತ್ತಾರೆ.

ಬದುಕಿನಲ್ಲಿ ಸವಿಮಾತು, ಉಪಚಾರ, ದಾಕ್ಷಿಣ್ಯ—ಎಲ್ಲವೂ ಬೇಕಾಗುತ್ತದೆ. ಆದರೆ ಆ ನೆವದಲ್ಲಿ ಪ್ರಾಮಾಣಿಕತೆಯ ಗಡಿಯನ್ನು ದಾಟಿ ಹೋದರೆ ನಮ್ಮ ಗೌರವವೂ ಉಳಿಯುವುದಿಲ್ಲ , ನಾವು ತೊಂದರೆಯಲ್ಲಿಯೂ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ.

ಪ್ರಾಚೀನ ಕಾಲದ ಯಹೂದ್ಯ ವರ್ತಕನೊಬ್ಬ, 'ಪ್ರಾಮಾಣಿಕತೆಯೇ ಎಲ್ಲಕ್ಕೂ ಒಳ್ಳೆ ಉಪಾಯ' ಎಂದು ತನ್ನ ವಂಶಜರಿಗೆ ಹಿತವಚನವನ್ನು ಬರೆದಿಟ್ಟು ಹೋಗಿದ್ದ. ಅವನು ಪ್ರಾಮಾಣಿಕತೆಯನ್ನು ನೀತಿಯ ಅಥವಾ ಪುಣ್ಯದ ಸ್ತರಕ್ಕೆ ಏರಿಸಿ ಮಾತಾಡಲಿಲ್ಲ. ವ್ಯವಹಾರ ದೃಷ್ಟಿಯಿಂದ ಪ್ರಾಮಾಣಿಕತೆಯನ್ನು ಅನುಮೋದಿಸಿದ್ದ. ಪ್ರಾಮಾಣಿಕತೆ-ಸತ್ಯ ಇವುಗಳ ಆಧ್ಯಾತ್ಮಿಕ ಹಿರಿಮೆ ಏನೇ ಇರಲಿ, ವ್ಯಾವಹಾರಿಕವಾಗಿಯೂ ಪ್ರಾಮಾಣಿಕತೆಗೆ ತುಂಬ ಬೆಲೆಯಿದೆಯೆಂಬುದು ಅವನ ಅನುಭವದ ಸಾರ.

ಒಂದು ಅವಶ್ಯ ಕಾರ್ಯಕ್ಕಾಗಿ ಸಾಲವೆತ್ತುವ ಪ್ರಸಂಗ ನನಗೆ ಬಂತು. ನನ್ನ ಪರಿಚಯದ ಬ್ಯಾಂಕ್ ಮ್ಯಾನೇಜರೊಬ್ಬರನ್ನು ಸಮೀಪಿಸಿದೆ. ನನಗೆ ಬೇಕಾದ ಮೊತ್ತ, ನಾನು ಕೊಡಬಹುದಾದ ಭದ್ರತೆಗಳನ್ನು ತಿಳಿಸಿದೆ. ಅವರು, "ಓಹೋ ಅದಕ್ಕೇನು, ನಿಮಗೆ ಕೊಡದಿದ್ದರೆ ಮತ್ಯಾರಿಗೆ ಕೊಡಬೇಕು; ಒಂದು ಅರ್ಜಿ ಕೊಡಿ ನೋಡುವ", ಎಂದರು. ನಾನು ಕೊಟ್ಟೆ. ವಾರ ಹೋಯಿತು, ಎರಡು ವಾರ ಹೋಯಿತು. ಕೇಳಿದಾಗೆಲ್ಲ ಹೆಡ್ ಆಫೀಸಿನಿಂದ ಉತ್ತರ ಬಂದಿಲ್ಲ ಎಂದು ಹೇಳುತ್ತಿದ್ದರು. ಕೊನೆಗೂ ಆ ಸಾಲ ನನ್ನ ಕೈಗೆ ಬರಲೇಇಲ್ಲ. ಅಂಥ ಸಾಲಕ್ಕೆ ಅವರ ಬ್ಯಾಂಕಿನಂಥ ಸಾಂಪ್ರದಾಯಿಕ ಬ್ಯಾಂಕಿನ ಹೆಡ್ ಆಫೀಸಿನವರು ಒಪ್ಪುವುದೇ ಸಾಧ್ಯವಿಲ್ಲೆಂದೂ ಮ್ಯಾನೇಜರರು ಕೇವಲ ನನ್ನ ದಾಕ್ಷಿಣ್ಯಕ್ಕೆ ನೋಡುವಾ ಎಂದು ಹೇಳಿ ಅರ್ಜಿ ತೆಗೆದುಕೊಂಡಿದ್ದರೆಂದೂ ಆಮೇಲೆ ನನಗೆ ಬೇರೆಯವರಿಂದ ತಿಳಿಯಿತು. ದಾಕ್ಷಿಣ್ಯಕ್ಕಾಗಿ ಹೀಗೆ ಅರ್ಜಿ ತೆಗೆದುಕೊಂಡು ನನ್ನನ್ನು ಪೇಚಿಗೆ ಗುರಿಮಾಡುವ ಬದಲು ಪ್ರಾಮಾಣಿಕವಾಗಿ ಅವರು ನನಗೆ ಈ ಸಾಲ ಮಂಜೂರಾಗುವ ಸಂಭವ ಇಲ್ಲವೆಂದು ಹೇಳಿದ್ದರೆ ನಾನು ಬೇರೆ ಕಡೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೆ. ನಾನೇನು ತಪ್ಪು ತಿಳಿಯುತ್ತಿದ್ದಿಲ್ಲ. ಇಂಥ ದಾಕ್ಷಿಣ್ಯದಲ್ಲಿ ಸ್ವಲ್ಪ ಅಹಂಕಾರವೂ ಬೆರೆತಿರುತ್ತದೆಂದು ತೋರುತ್ತದೆ. ತಮ್ಮಿಂದ ಈ ಕೆಲಸ ಮಾಡಿಸಿಕೊಡಲು ಸಾಧ್ಯವಿಲ್ಲವೆಂದೊಪ್ಪುವುದು ಅನೇಕರಿಗೆ ಇಷ್ಟವಿರುವುದಿಲ್ಲ. ಆದರೆ ಈ ದಾಕ್ಷಿಣ್ಯ, ಈ ಹೆಮ್ಮೆ ಎರಡನ್ನೂ ಬದಿಗಿಟ್ಟು ಪ್ರಾಮಾಣಿಕರಾಗಿದ್ದರೆ ಅವರು ಮತ್ತೇನಲ್ಲದಿದ್ದರೂ ನನ್ನಿಂದ ಬಂದ ಹದಿನೈದು ಫೋನ್ ಕರೆಗಳಿಗೆ ಉತ್ತರ ಕೊಡುವ ತಲೆನೋವಿಂದಾದರೂ ತಪ್ಪಿಸಿಕೊಳ್ಳಬಹುದಾಗಿತ್ತು.

ಜನಪ್ರಿಯತೆಯನ್ನು ಕಳೆದುಕೊಳ್ಳಬೇಕಾಗುತ್ತದೆಂದು ನಾವು ಸಕಾಲದಲ್ಲಿ ಪ್ರಾಮಾಣಿಕವಾಗಿ ವರ್ತಿಸಲು ಅಂಜುವುದುಂಟು. ಆದರೆ ಇದು ವ್ಯರ್ಥ ಭಯ. ನನಗೆ ಗೊತ್ತಿರುವ ಒಬ್ಬ ಸಂಪಾದಕರು ಸಾಕಷ್ಟು ಹಿರಿಯ ಬರಹಗಾರರ ಲೇಖನಗಳನ್ನೂ ಅವು ತಮಗೆ ಸರಿದೋರದಿದ್ದರೆ ತತ್‌ಕ್ಷಣ ಹಿಂದಿರುಗಿಸಿಬಿಡುತ್ತಾರೆ. ಅವರ ಮೇಲೆ ಲೇಖಕರು ಸಿಟ್ಟಾಗುವುದು ವಿರಳ. ಮನುಷ್ಯ ನಿಷ್ಠುರ; ಆದರೆ ಅವನ ವ್ಯವಹಾರ ಸರಳ ಎಂದು ಅವರನ್ನು ಮೆಚ್ಚಿಕೊಳ್ಳುವವರೂ ಉಂಟು.

ನನ್ನ ಸಂಬಂಧಿಕರೊಬ್ಬರನ್ನು ಜಮೀನು ಗಡಿತಂಟೆಯ ವಿಷಯದಲ್ಲಿ ಸಲಹೆ ಕೇಳಲು ನನಗೆ ಗೊತ್ತಿದ್ದ ವಕೀಲರೊಬ್ಬರ ಕಡೆ ಕರೆದೊಯ್ದೆ. ಅವರು ಪ್ರಕರಣದ ಮುಖ್ಯಾಂಶಗಳನ್ನೆಲ್ಲ ಕೇಳಿಕೊಂಡು, "ನೀವೀಗ ಅತಿಕ್ರಮಣದಿಂದ ಕಳೆದುಕೊಂಡ ಜಮೀನಿನ ಬೆಲೆ ಎಷ್ಟಾಗಬಹುದು?" ಎಂದು ನೇರವಾಗಿ ಕೇಳಿದರು. "ಮುನ್ನೂರು ಮುನ್ನೂರೈವತ್ತು", ಎಂದು ನನ್ನ ಸಂಬಂಧಿಕರು ಉತ್ತರಿಸಿದರು. ವಕೀಲರು ತತ್‌ಕ್ಷಣ ಹೇಳಿದರು: "ನೋಡಿ ಇವರೆ, ನಿಮಗೆ ಈ ಅಂಗೈಯಗಲ ಜಮೀನು ಅತಿ ಅಗತ್ಯ, ಬೇರೆ ರೀತಿಯಲ್ಲಿ ಅದು ನಿಮಗೆ ಅತಿಯಾಗಿ ಬೆಲೆಬಾಳುವಂಥಾದ್ದು ಅಂತಿದ್ದರೆ ಮಾತ್ರ ಈ ವ್ಯಾಜ್ಯಕ್ಕೆ ಕೈ ಹಾಕಿ. ಕಮೀಷನ್ ನೇಮಕ,

ಆದರ ಖರ್ಚು ಇವೆಲ್ಲ ಸೇರಿ ನಿಮಗೆ ಈ ಜಮೀನಿನ ಕ್ರಯದ ನಾಲ್ಕರಷ್ಟು ವೆಚ್ಚ ಬರಬಹುದು. ಕಡೆಗೆ ನಿಮಗೆ ಜಯವಾಗುವ ಗ್ಯಾರಂಟಿಯೂ ಇಲ್ಲ." ನಾನು ಕರೆದೊಯ್ದಿದ್ದ ಪಕ್ಷಕಾರರು ಎದೆಗುಂದಿ ರಾಜೀ ಮಾಡಿಕೊಂಡರು.

ಕೆಲ ದಿನಗಳ ನಂತರ ವಕೀಲರನ್ನು ಮತ್ತೊಮ್ಮೆ ಕಂಡಾಗ ನಾನು ತಮಾಷೆಯಾಗಿ, "ಸ್ವಾಮಿ, ನೀವು ಈ ಪಕ್ಷಕಾರರನ್ನು ಬಹಳ ಹೆದರಿಸಿಬಿಟ್ಟಿರಿ. ನೀವು ಹುರಿದುಂಬಿಸಿದ್ದರೆ ನಿಮಗೂ ನಾಲ್ಕು ಕಾಸು ಬರುತ್ತಿತ್ತು. ನೀವು ಕೇಸು ನಡೆಸಿದ್ದರೆ ಅವರಿಗೆ ಜಯವೂ ಆಗಬಹುದಿತ್ತು," ಎಂದೆ. ವಕೀಲರು, "ನೋಡಿ ಇವರೇ, ಪಕ್ಷಕಾರರ ಹತ್ತಿರ ಪೂರಾ ಸತ್ಯ ಹೇಳುವುದು ವಕೀಲರ ಧರ್ಮ ಮಾತ್ರವಲ್ಲ, ಪ್ರಯೋಜನಕರವೂ ಹೌದು. ಕೆಲ ಕಾಸುಗಳನ್ನು ಹಿಂಡಬಹುದೆಂದು ನಾನಿದನ್ನು ವಹಿಸಿಕೊಂಡರೆ ಕೊನೆಗೆ ನಾನು ಇದರ ಮೇಲೆ ಖರ್ಚು ಮಾಡಬೇಕಾದ ಸಮಯವೂ ಕಳೆದುಕೊಳ್ಳುವ ಹೆಸರೂ ಲಾಭದ ಹೋಲಿಕೆಯಲ್ಲಿ ಬಹಳ ಹೆಚ್ಚಾಗುವುದು", ಎಂದರು. ಆ ಮೇಲೆ, "ಕೆಲ ವಕೀಲರು ಈ ಸತ್ಯವನ್ನು ಇನ್ನೂ ಮನಗಂಡಿಲ್ಲ. ಆದರೆ ಹುರುಳಿಲ್ಲದ ಕೇಸುಗಳನ್ನು ಅಪ್ರಾಮಾಣಿಕವಾಗಿ ಪ್ರೋತ್ಸಾಹಿಸುವುದು ವಕೀಲನಿಗೆ ಒಟ್ಟಾರೆ ನೋಡಿದಲ್ಲಿ ಕೌಂಟರ್ ಪ್ರೊಡಕ್ಟಿವ್ (ಪರಿಣಾಮ ವಿಪರೀತ) ಆಗುತ್ತದೆಂದು ನಾನು ಮೊದಲನೇ ವರ್ಷದ ಪ್ರಾಕ್ಟೀಸಿನಲ್ಲೇ ಕಂಡುಕೊಂಡೆ," ಎಂದು ಹೇಳಿದರು.

ಪ್ರಾಮಾಣಿಕತೆಗೆ ಸ್ವಲ್ಪ ಮಟ್ಟಿಗೆ ನಿರ್ದಾಕ್ಷಿಣ್ಯ ಬೇಕಾಗುವುದು ನಿಜ; ಆದರೆ ನಿರ್ದಯತೆಯೇನೂ ಬೇಕಾಗುವುದಿಲ್ಲ. ಪ್ರೊಫೆಸರರೊಬ್ಬರ ಅಭಿಪ್ರಾಯದಲ್ಲಿ ಪ್ರಾಮಾಣಿಕತೆಯನ್ನು ನಾವು ಸಾಧಾರಣ ಕರ್ತವ್ಯ ಎಂದು ತಿಳಿದುಕೊಳ್ಳದೆ ನಮ್ಮ ಪ್ರಾಮಾಣಿಕತೆಯ ಬಗ್ಗೆ ಅಹಂಕಾರ ತಳೆದರೆ ಮಾತ್ರ ಅದು ನಿರ್ದಯತೆಯ ಹಾಗೆ ಕಾಣುತ್ತದೆ. ಅತ್ಯಂತ ನೀತಿಬಾಹಿರವಾದ ರಿಯಾಯತಿಯನ್ನು ಅವರಿಂದ ಕೇಳಲು ಬಂದ ವಿದ್ಯಾರ್ಥಿಗಳನ್ನೂ ಅವರು ಬೈದು ಕಳಿಸುವುದಿಲ್ಲ. ಶಾಂತವಾಗಿ ಅವರೊಡನೆ ವಾದಿಸಿ ಈ ಕ್ರಮದಿಂದ ಅವರಿಗೇ (ವಿದ್ಯಾರ್ಥಿಗಳಿಗೇ) ಹಿತವಿಲ್ಲವೆಂದು ಮನವರಿಕೆ ಮಾಡಿ ಕಳಿಸಲು ಯತ್ನಿಸುತ್ತಾರೆ.

ಪ್ರಾಮಾಣಿಕತೆಯ ಅಭಾವವೂ ಎಷ್ಟೋ ವೇಳೆ ಅಹಂಕಾರದೊಡನೆ ನಿಗದಿತವಾಗಿರುತ್ತದೆಂದು ಅವರು ಹೇಳುತ್ತಾರೆ. ಒಂದು ತಪ್ಪು ನಮ್ಮಿಂದಾದಾಗ ಅದನ್ನು ನೇರವಾಗಿ ಒಪ್ಪಿಕೊಳ್ಳಲು ನಮ್ಮ ಅಹಂಕಾರ ಬಿಡುವುದಿಲ್ಲ. ತಪ್ಪನ್ನು ಮುಚ್ಚಿಕೊಳ್ಳಲು ಅಪ್ರಾಮಾಣಿಕ ಮಾರ್ಗಗಳನ್ನು ಅನುಸರಿಸುತ್ತೇವೆ. ಅಥವಾ ಬೇರೆಯವರ ಸೆರಗಿಗೆ ಅದನ್ನು ಗಂಟಿಕ್ಕಲು ಯತ್ನಿಸುತ್ತೇವೆ. ಕೊನೆಗೆ ನೋಡಿದರೆ ಆ ತಪ್ಪೇನೂ ಅಂಥಾ ಮಹಾ ಪ್ರಮಾದವಾಗಿರುವುದಿಲ್ಲ. (ಹೆಚ್ಚಿನ ಜನರು ಸಾಮಾನ್ಯರಾಗಿರುವುದರಿಂದ ಅವರಿಗೆ ಅಸಾಮಾನ್ಯ ಪ್ರಮಾದಗಳನ್ನು ಮಾಡುವ ಸಂದರ್ಭಗಳೇ ಸಿಗುವುದಿಲ್ಲ). ತಪ್ಪೊಪ್ಪಿ ಬಿಟ್ಟರೆ ಅದು ಅಲ್ಲಿಗೇ ಮುಗಿದು ಹೋಗಬಹುದು. ಪ್ರತಿಯೊಬ್ಬನೂ ತಪ್ಪು ಮಾಡುತ್ತಾನೆ ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡರೆ

ಅಹಂಕಾರಮೂಲವಾದ ಅಪ್ರಾಮಾಣಿಕತೆಯಿಂದ ಉಳಿದುಕೊಳ್ಳಬಹುದು.

ದರ್ಜಿಗಳೂ ಅಗಸರೂ ಸುಳ್ಳು ಹೇಳುವುದರಲ್ಲಿ ನಿಸ್ಸೀಮರೆಂದು ಖ್ಯಾತಿ ತಾನೇ. ಆದರೆ ನನಗೆ ಗೊತ್ತಿರುವ ಒಬ್ಬ ದರ್ಜಿ ಅಪ್ಪಟ ಪ್ರಾಮಾಣಿಕತೆಗೆ ಖ್ಯಾತನಾಗಿದ್ದಾನೆ. ಅವನ ಪ್ರಕಾರ ಅದು ತುಂಬಾ ಸಮಯವನ್ನು ಉಳಿಸುತ್ತದೆ. ರಗಳೆಯನ್ನೂ ತಪ್ಪಿಸುತ್ತದೆ. "ನಾನು ಗಡುವು ಕೊಟ್ಟ ಮೇಲೆ ತಪ್ಪಿಸುವುದಿಲ್ಲ. ಆಯಾ ದಿನ ಎಷ್ಟು ಕೆಲಸ ಸಾಧ್ಯವೋ ಅಷ್ಟರ ಮೇಲಿಂದ ಗಡುವು ನಿರ್ಧರಿಸಿ ಗಿರಾಕಿಗಳಿಗೆ ಹೇಳುತ್ತೇನೆ. ಅದಕ್ಕಿಂತ ಮುಂಚೆ ಬೇಕು ಅನ್ನುವವರ ಕೆಲಸವನ್ನು ಸ್ವೀಕರಿಸುವುದೇ ಇಲ್ಲ. ನೀವು ನಂಬಲಿಕ್ಕಿಲ್ಲ, ಆದರೆ ಹೀಗೆ ಮಾಡಿದ್ದರಿಂದ ನನಗೆ ಹೆಚ್ಚು ಕೆಲಸ ಮಾಡಲು ಸಾಧ್ಯವಾಗುತ್ತದೆ. ದಿನಕ್ಕೆ ನಾಲ್ಕು ಗಿರಾಕಿಗಳಿಗೆ ಸುಳ್ಳು ಹೇಳಿ ಕಳಿಸಲು ಖರ್ಚಾಗುವ ಸಮಯ ಒಂದು ಶರ್ಟನ್ನು ಸಲೀಸಾಗಿ ಹೊಲಿಯಲು ಸಾಕು ಎಂದು ನಾನು ಲೆಕ್ಕ ಹಾಕಿದ್ದೇನೆ. ಮೊಂಡು ಗಿರಾಕಿಗಳ ಹತ್ತಿರ ಬೈಸಿಕೊಳ್ಳುವ ರಗಳೆಯೂ ತಪ್ಪುತ್ತದೆ," ಎನ್ನುತ್ತಾನವನು. "ನಿಮಗೆ ಗಿರಾಕಿಗಳು ಕಮ್ಮಿ ಯಾಗುವುದಿಲ್ಲವೇ?" ಎಂದು ಕೇಳಿದರೆ, "ನಿಮ್ಮದು ತಪ್ಪು ಲೆಕ್ಕ, ಒಬ್ಬ ಮನುಷ್ಯ ಅಥವಾ ಒಂದು ಗುಂಪು ಮಾಡುವ ಕೆಲಸಕ್ಕೆ ಒಂದು ಮಿತಿ ಉಂಟು. ನೀವು ಹೆಚ್ಚು ಕೆಲಸ ತೆಗೆದುಕೊಂಡಾಕ್ಷಣ ದಿನಕ್ಕೆ ಮೂವತ್ತು ತಾಸುಗಳೇನೂ ಉಂಟಾಗುವುದಿಲ್ಲ", ಎಂಬುದು ಆತನ ಉತ್ತರ.

ಕೆಲ ವರ್ಷಗಳ ಹಿಂದೆ, 'ಕಸ್ತೂರಿ'ಯಲ್ಲೇ ಅಂತ ಕಾಣುತ್ತದೆ, ಸಕಾಲದಲ್ಲಿ ಪ್ರಾಮಾಣಿಕತೆಯನ್ನು ತೋರಿಸಲಾರದೇ ಜೀವಮಾನದ ಅನೇಕ ವರ್ಷಗಳನ್ನು ಹಾಳು ಮಾಡಿಕೊಂಡವನೊಬ್ಬನ ವೃತ್ತಾಂತವನ್ನು ಓದಿದೆ. ಬಿ.ಎ. ಪರೀಕ್ಷೆಯಲ್ಲಿ ಪಾಸಾಗುವ ಖಂಡಿತ ನಿರೀಕ್ಷೆ ಇಟ್ಟುಕೊಂಡಿದ್ದ ಆತ. ಸಹಪಾಠಿಯೊಬ್ಬ ನೀನು ಪಾಸಾಗಿದ್ದಿ ಎಂದು ಹೇಳಿಯೂ ಇದ್ದ ಅವನಿಗೆ. ಹಾಗೆ ಬಂದು ತಂದೆಗೆ ತಿಳಿಸಿದ ಎರಡು ದಿನಗಳ ಮೇಲೆ ತಾನು ಪಾಸಾಗಿಲ್ಲವೆಂದು ಅವನಿಗೆ ತಿಳಿಯಿತು. ಅದನ್ನು ತಂದೆ ತಾಯಿಗಳ ಮುಂದೆ ಹೇಳಲಾರದೆ ಪಾಸಾಗಿದ್ದೇನೆ ಎಂದೇ ನಟಿಸಿದ. ಇದರಿಂದ ಅವನು ಅನನ್ವಿತವಾದ ಮಾನಸಿಕ ಸಂಕಟವನ್ನು ಅನುಭವಿಸಿ, ಊರನ್ನೇ ಬಿಟ್ಟು ಅನೇಕ ವರ್ಷ ಕಾಲ ತನ್ನ ಯೋಗ್ಯತೆಗೆ ಸರಿಹೋಗದ ಕೆಲಸ ಮಾಡಬೇಕಾಯಿತು. ಸತ್ಯವನ್ನು ಒಪ್ಪಿಕೊಳ್ಳುವ ಧೈರ್ಯವಿದ್ದಿದ್ದರೆ ಮುಂದಿನ ವರ್ಷವೇ ಪಾಸಾಗಿ ಆತ ತನ್ನ ಮಾರ್ಗ ಕಂಡುಕೊಳ್ಳಬಹುದಾಗಿತ್ತು.

ಪ್ರಾಮಾಣಿಕತೆ ಮತ್ತು ನಿರ್ದಾಕ್ಷಿಣ್ಯ ಎಂಬುವು ಒರಟಾಟಿಕೆಯಾಗದಂತೆ ನೋಡಿ ಕೊಳ್ಳುವುದು ಮಾತ್ರ ಅತ್ಯಗತ್ಯ. ನಿಮ್ಮ ನವವಿವಾಹಿತ ಮಿತ್ರನನ್ನು ಕುರಿತು, "ಎಂಥಾ ಕುರೂಪಿಯನ್ನು ಮಾಡಿಕೊಂಡು ಬಂದಿದ್ದೀಯೊ!" ಅನ್ನುವುದನ್ನು ಪ್ರಾಮಾಣಿಕ ನಿರ್ದಾಕ್ಷಿಣ್ಯದ ಸಾಲಿನಲ್ಲಿ ನಿಲ್ಲಿಸಲಾಗುವುದಿಲ್ಲ. ಅದು ಅಸಂಸ್ಕೃತ ದುಡುಕೇ ಸೈ. ಇತರರಿಗೆ ಅನವಶ್ಯಕ ನೋವನ್ನುಂಟುಮಾಡುವ ನಿರ್ದಾಕ್ಷಿಣ್ಯವನ್ನು ಪ್ರಾಮಾಣಿಕತೆಯೆನ್ನುವುದಕ್ಕಿಂತಲೂ ಪರಪೀಡಕತನ

ಎನ್ನಬೇಕಾಗುತ್ತದೆ. ಆದರ ಹಿಂದೆ ಇನ್ನೊಬ್ಬನನ್ನು ಹೀಗಳೆದು ತನ್ನ ಶ್ರೇಷ್ಠತ್ವವನ್ನು ಅಪ್ರತ್ಯಕ್ಷವಾಗಿ ಜಾಹೀರು ಮಾಡುವ ಚಪಲ ಇರುತ್ತದೆ.

ಆದ್ದರಿಂದ ನಿರ್ದಾಕ್ಷಿಣ್ಯ ಪ್ರಾಮಾಣಿಕತೆಯನ್ನು ಅಥವಾ ಪ್ರಾಮಾಣಿಕ ನಿರ್ದಾಕ್ಷಿಣ್ಯವನ್ನು ಬೆಳಸಿಕೊಳ್ಳುವೆನೆಂಬವರು ನಿರಂತರವಾಗಿ ತಮ್ಮ ಆಯಾ ದಿನದ ಸತ್ಯವಾಕ್ಕುಗಳ ಹಿಂದಿದ್ದ ನಿಜವಾದ ಮನೋಭಾವವನ್ನು ಹಿಂಜಿ ನೋಡಬೇಕು. ಅದು ಹೇಳುವವನಿಗೂ ಕೇಳುವವನಿಗೂ ಹಿತವನ್ನು ಮಾಡಲು ಉಚ್ಚರಿಸಲ್ಪಟ್ಟಿದೆ ಎಂದು ನಂಬಿಕೆ ಮಾಡಿಕೊಳ್ಳಬೇಕು. ಪ್ರಾಮಾಣಿಕತೆಗೆ ಅಗತ್ಯವಿದ್ದಷ್ಟೇ ನಿರ್ದಾಕ್ಷಿಣ್ಯ ಇರುವಂತೆ ನೋಡಿಕೊಳ್ಳಬೇಕು. ಪ್ರಾಮಾಣಿಕವಾಗಿ ಮಾತಾಡುವ ನಿರ್ಧಾರ ಮಾಡಿಕೊಂಡು ಅದನ್ನು ದಯೆಯಿಂದ ನಿಯಂತ್ರಿಸಿಕೊಂಡರೆ ಸಾವಕಾಶವಾಗಿ ಪ್ರಾಮಾಣಿಕ ನಿರ್ದಾಕ್ಷಿಣ್ಯದ ಕೌಶಲ್ಯವನ್ನು ಬೆಳಸಿಕೊಳ್ಳಬರುತ್ತದೆ.

■

# ಕೃತಜ್ಞತೆ ಎಂಬ ಸದ್ಗುಣ

**ಮೊ**ನ್ನೆ ನನ್ನ ಸಂಬಂಧಿಕನೊಬ್ಬ ಒಳ್ಳೇ ಇಕ್ಕಟ್ಟಿನ ಸ್ಥಿತಿಯಲ್ಲಿ ನನ್ನ ಕಡೆ ಸಹಾಯಕ್ಕಾಗಿ ಬಂದ. ಅವನಿಗೆ ಸ್ವಲ್ಪ ಹಣ ಬೇಕಾಗಿತ್ತು. ನನ್ನ ಹತ್ತಿರ ಇರಲಿಲ್ಲ ಹತ್ತಿರದಲ್ಲಿ ಗುರುತಿನವರು ಯಾರೂ ಸಿಗಲಿಲ್ಲ. ಎರಡು ಮೈಲು ನಡೆದು ಹೋಗಿ ಯಾರಿಂದಲೊ ಇಸಿದುಕೊಂಡು ತಂದುಕೊಟ್ಟೆ. ಆ ತರುಣ ಹಣ ತೆಗೆದುಕೊಂಡವನು ಉಪಕಾರವಾಯಿತು ಎಂದು ಹೇಳುವುದಿರಲಿ, ಒಂದು ಹಿತವಾದ ನಸುನಗೆಯನ್ನು ಕೂಡ ತೋರ್ಪಡಿಸದೆ ನೆಟ್ಟಗೆ ಹೋಗಿಯೇ ಬಿಟ್ಟ. ಇಷ್ಟು ಕಾಲ ತನ್ನನ್ನು ಕಾಯಿಸಿದೆನೆಂದು ಕೋಪಿಸಿಕೊಂಡಹಾಗೆ.

ನಾನು ತೆಗೆದುಕೊಂಡ ತೊಂದರೆ ಮಹತ್ತೇನೂ ಅಲ್ಲ. ನಿಜವೆಂದರೆ ಹಿಂದೊಮ್ಮೆ ಅವನ (ಈಗ ದಿವಂಗತ) ತಂದೆ ನನಗೆ ಬಹಳ ಸಹಾಯ ಮಾಡಿದ್ದರು. ಅದಕ್ಕೆ ಇದೊಂದು ಕಾಲ ಮೀರಿದ ಅಲ್ಪ ಪ್ರತ್ಯುಪಕಾರವಾಗಿತ್ತು. ಆದರೂ ತರುಣನ ವರ್ತನೆಯಿಂದ ನನಗೆ ತುಂಬ ನೋವಾಯಿತು. ಐವತ್ತು ವರ್ಷಗಳ ಜೀವಮಾನದಲ್ಲಿ ನಾನಾ ಜನರ ಹಾರ್ದಿಕ ಸಹಾಯವನ್ನು ಹಾರ್ದಿಕವಾಗಿ ಪಡೆದವನು ನಾನು. ಹೀಗಿಲ್ಲದೆ ಹೋಗಿದ್ದರೆ ಮುಂದೆ ಈ ಪರಿ ತೊಂದರೆಯಲ್ಲಿರುವ ಹುಡುಗರಿಗೆ ಯಥಾಶಕ್ತಿ ಸಹಾಯ ಮಾಡುವ ನನ್ನ ಉತ್ಸಾಹ ಬಹಳ ಕುಗ್ಗಿ ಹೋಗುತ್ತಿತ್ತು.

ಏಕೆಂದರೆ ಕೃತಜ್ಞತೆಯೆಂಬುದು ಸಾಮಾನ್ಯ ಮನುಷ್ಯರು ತಮ್ಮಿಂದ ಉಪಕಾರ ಹೊಂದುವವರಿಂದ ನಿರೀಕ್ಷಿಸುವ ಭಾವನೆಯಾಗಿದೆ. ಭರ್ತೃಹರಿಯೇನೋ ಅಪಕಾರ ಮಾಡುವವರಿಗೂ ಒಳಿತನ್ನು ಬಯಸುವವನೇ ನಿಜವಾದ ಸಾಧು ಎನ್ನುತ್ತಾನೆ; ಶ್ರೀಕೃಷ್ಣ ನಿಷ್ಕಾಮ ಕರ್ಮವನ್ನು ಬೋಧಿಸುತ್ತಾನೆ—ನಿಜ. ಆದರೆ ಅದು ಯೋಗಿಗಳಿಗೆ ಸಾಧ್ಯವಾದ ಮಾತು. ಸಾಮಾನ್ಯಮಾನವರಿಗೆ ಮಾಡಿದ ಉಪಕಾರಕ್ಕೆ ಒಂದು ಒಳ್ಳೇಮಾತು ಕೂಡ ಪ್ರತಿಯಾಗಿ ದೊರೆಯದಿದ್ದರೆ ಉಪಕಾರಬುದ್ಧಿ ಮೊಟಕಾಗಿ ಹೋಗುವುದು ಸಹಜ.

ನನ್ನದೇ ಇನ್ನೊಂದು ಅನುಭವ ಮೇಲಿನದಕ್ಕೆ ಬದ್ಧ ವಿರುದ್ಧವಾಗಿದೆ. ನನ್ನ ದೂರದ ಆಪ್ತರಲ್ಲೊಬ್ಬರು ನಮ್ಮೂರಲ್ಲಿ ಒಂದು ವ್ಯಾಪಾರದಲ್ಲಿ ಕೈತೊಡಕಿಸಿಕೊಂಡು ಪೇಚಾಡುತ್ತಿದ್ದರು. ಅವರಿಗೆ ದೊಡ್ಡ ಆರ್ಥಿಕ ಪೆಟ್ಟು ಬೀಳುವುದರಲ್ಲಿತ್ತು. ಅವರನ್ನು ಈ ಕಂಟಕದಿಂದ ಪಾರು ಮಾಡುವ ಆರ್ಥಿಕ ಅಥವಾ ಪ್ರಭಾವ ಬಲ ನನ್ನಲ್ಲಿರಲಿಲ್ಲ. ಆದರೆ ನನ್ನ ಪರಿಚಯದ ಒಬ್ಬರು ಪ್ರಭಾವಶಾಲಿಗಳನ್ನು ಕಂಡು ಅವರ ಪರವಾಗಿ ಎರಡು ಮಾತು ಹೇಳಿದೆ. ಅವರು ನಡುವೆ ಬಿದ್ದು ನನ್ನ ಬಂಧುವನ್ನು ಇಕ್ಕಟ್ಟಿನಿಂದ ಬಿಡಿಸಲು ಸಮರ್ಥರಾದರು. ಅನಂತರ

ಅವರು ದೊಡ್ಡ ನಗರವೊಂದರಲ್ಲಿ ವ್ಯಾಪಾರ ಪ್ರಾರಂಭಿಸಿ ಇಂದು ತಿಂಗಳಿಗೆ ಸಾವಿರಾರು ಗಳಿಸುತ್ತಿದ್ದಾರೆ; ಕಾರಿನಲ್ಲಿ ಓಡಾಡುತ್ತಿದ್ದಾರೆ. ಬಡ, ಅದೂ ಬಹುದೂರದ ಸಂಬಂಧಿಕನಾದ ನನ್ನನ್ನು ಅವರು ಸಂಪೂರ್ಣ ಮರೆತಿದ್ದರೆ ಏನೂ ಆಶ್ಚರ್ಯಪಡಬೇಕಾಗಿರಲಿಲ್ಲ.

ಆದರೆ ಹಾಗಾಗಲಿಲ್ಲ. ತಮ್ಮ ಈಗಿನ ಅಂತಸ್ತನ್ನು ಸ್ವಲ್ಪವೂ ಗಣಿಸದೆ ಅವರು ಇತ್ತ ಕಡೆ ಬಂದಾಗ ನಮ್ಮ ಹರಕು ಮುರುಕು ಬಿಡಾರದಲ್ಲೇ ಬಂದು ಉಳಿಯುತ್ತಾರೆ. ಯಾವ ಪರಿಚಯಸ್ಥನಾದರೂ ಮಾಡಬಹುದಾಗಿದ್ದಂಥ ಅಲ್ಪ ಸಹಾಯ ಮಾಡಿದ ನಾನು ಅವರ ತ್ರಾತ, ಮಹಾ ಉಪಕಾರಿಯೆಂಬಂತೆ ಮಾತಾಡುತ್ತಾರೆ. ಮೊನ್ನೆ ಅವರು ಮಗನ ಉಪನಯನ ಮಾಡಿದಾಗ ನಮ್ಮ ಯೋಗ್ಯತೆಗೆ ಮೀರಿದ ಉಡುಗೊರೆ ಕಳಿಸಿಕೊಟ್ಟರು. ಅವರ ಕೃತಜ್ಞತಾ ಬುದ್ಧಿಯು ಮಾನವರ ಮೂಲ ಸದ್ಗುಣಗಳಲ್ಲಿ ನನ್ನ ವಿಶ್ವಾಸವನ್ನು ದೃಢಪಡಿಸಿದೆ. ನೂರು ಕೃತಘ್ನತೆಗಳನ್ನೆದುರಿಸಿಯೂ ನಾನು ನನ್ನ ಸದ್ಭಾವನೆಯನ್ನು ಕಾಪಾಡಿಕೊಳ್ಳಬಲ್ಲೆ ಎಂದು ಅವರ ನೆನಪಾದಾಗೆಲ್ಲ ಅನಿಸುತ್ತದೆ.

ಕೃತಜ್ಞತೆಯೆಂಬುದು ಉಪಕಾರವನ್ನು ಹಾರ್ದಿಕವಾಗಿ ಸ್ವೀಕರಿಸುವ ಕಲೆ. ಅದೊಂದು ಅವಶ್ಯಕ ಧರ್ಮ. ಹೌದು ಧರ್ಮ, ಏಕೆಂದರೆ ಅದು ಉಪಕಾರಬುದ್ಧಿಯನ್ನು, ಸಹಕಾರ ಬುದ್ಧಿಯನ್ನು ಉತ್ತೇಜನಗೊಳಿಸಿ ಮಾನವತೆಯನ್ನು ಎತ್ತಿ ನಿಲ್ಲಿಸುತ್ತದೆ.

ಕೃತಜ್ಞತೆಯು ದೊರೆತ ಸಹಾಯದ ಪರಿಮಾಣವನ್ನು ಅವಲಂಬಿಸಿರದೆ ಅದನ್ನು ಪಡೆದವರ ಹೃದಯದ ಪರಿಮಾಣವನ್ನು, ಅವಲಂಬಿಸಿದೆ. 'ಪರಗುಣ ಪರಮಾಣುವುಂ ಗಿರಿಗೈದುರ್ಬುವ' ಎಂದು ಭರ್ತೃಹರಿ ವರ್ಣಿಸಿದ ಹೃದಯಗಳು ಕೆಲವಿವೆ. ಇಂಥವರಿಗೆ ಸಹಾಯ ಮಾಡುವುದೊಂದು ಆನಂದ ಮಾತ್ರವಲ್ಲ, ಒಂದು ಧನ್ಯತೆ ಕೂಡ.

ಕೃತಜ್ಞತೆಯು ಹೊತ್ತಿಸಿದ ಜ್ಯೋತಿ ಎಷ್ಟು ದೂರ ಬೆಳಕು ಚೆಲ್ಲಬಲ್ಲದೆಂಬುದಕ್ಕೆ ಅಮೇರಿಕದ ಲೇಖಕ ಎ.ಜೆ. ಕ್ರೋನಿನ್ ಒಂದು ಉದಾಹರಣೆ ಹೇಳುತ್ತಾರೆ. ಎರಡನೇ ಮಹಾಯುದ್ಧ ಕಾಲದಲ್ಲಿ ನಾರ್ಮಂಡಿ ರಣರಂಗದಲ್ಲಿ ಗಾಯಗೊಂಡಿದ್ದ ಅಮೇರಿಕನ್ ಸೈನಿಕನೊಬ್ಬನನ್ನು ಫ್ರೆಂಚ್ ಮಹಿಳೆಯೊಬ್ಬಳು ತನ್ನ ಮನೆಯಲ್ಲಿ ಆರೈಕೆ ಮಾಡಿ, ಜರ್ಮನ್ನರಿಂದ ಅವನನ್ನು ಅಡಗಿಸಿಟ್ಟು ಕಾಪಾಡಿದಳು. ಮುಂದೆ ಇನ್ನೊಂದು ರಣಾಂಗಣದಲ್ಲಿ ಆತ ಪ್ರಾಣಕೊಟ್ಟ. ಆದರೂ ಅವನ ಪತ್ರಗಳಿಂದ ಅವನಿಗೆ ಆಶ್ರಯಕೊಟ್ಟ ಫ್ರೆಂಚ್ ಮಹಿಳೆಯ ವಿಚಾರ ತಿಳಿದು ಕೃತಜ್ಞತೆಯಿಂದ ತುಂಬಿದ ಅವನ ಬಡತಾಯಿ ಯುದ್ಧಮುಗಿದ ನಂತರ ಕಷ್ಟಪಟ್ಟು ಹಣ ಉಳಿಸಿ ನಾರ್ಮಂಡಿಗೆ ಬಂದರು. ಆ ಮಹಿಳೆಯನ್ನು ಹುಡುಕಿ ತೆಗೆದು ಅವಳಿಗೆ ಕೃತಜ್ಞತೆ ಸಲ್ಲಿಸಿ ನೆನಪಿಗಾಗಿ ತನ್ನ ಮಗನ ಕೈಗಡಿಯಾರವನ್ನು ಅವಳಿಗೆ ಕಾಣಿಕೆ ಕೊಟ್ಟಳು.

ಉಪಕಾರಕ್ಕೆ ಪ್ರತ್ಯುಪಕಾರ ಮಾಡಿ ಋಣ ತೀರಿಸಿಕೊಂಡೆನೆಂದು ಭಾವಿಸುವುದು ಕೃತಜ್ಞತೆಯಾಗದು. ಏಕೆಂದರೆ ಒಂದು ಉಪಕಾರವನ್ನು ಇನ್ನೊಂದರಿಂದ ಎಂದೂ ತೀರಿಸಲು ಸಾಧ್ಯವಿಲ್ಲ. ಹಾಗೆ ತಿಳಿಯುವವನು ಉಪಕಾರವನ್ನು ವ್ಯಾಪಾರದ ಸರಕನ್ನಾಗಿ

ಮಾಡುತ್ತಾನೆ. ಉಪಕಾರವು ತನ್ನ ಕಾಲ ದೇಶ ಸನ್ನಿವೇಶಗಳಲ್ಲಿ ಒಂದು ಅನನ್ಯವಾದ ಶ್ರದ್ಧೆಯ ಕೃತಿಯಾಗಿರುತ್ತದೆ. ಪ್ರತಿಯೊಂದು ಉಪಕಾರವೂ ಅನನ್ಯವಾಗಿರುವುದರಿಂದ ಒಂದನ್ನೊಂದರಿಂದ ವಜಾಮಾಡಲು ಸಾಧ್ಯವಿಲ್ಲ. ಕೃತಜ್ಞತೆಯೆಂಬ ಇನ್ನೊಂದು ಶ್ರದ್ಧಾಮೂಲ ಭಾವನೆಯೇ ಉಪಕಾರಕ್ಕೆ ಪ್ರತಿಫಲವಾಗಬಲ್ಲದು.

ಕೃತಜ್ಞತೆಯೆಂಬುದು ಹೃದಯದ ಗುಣ. ಆದ್ದರಿಂದ ಅದು ಕಲಿತು ಬರತಕ್ಕದ್ದಲ್ಲ. ಆದರೆ ಮಾನವರಾದ ನಮ್ಮಲ್ಲೇ ಏಕೆ, ಅನೇಕ ತಿರ್ಯಕ್ ಜಂತುಗಳಲ್ಲಿ ಕೂಡ ಕೃತಜ್ಞತೆಯೆಂಬುದು ಸಹಜಗುಣವಾಗಿ ಬಂದಿದೆ. ಅಂಡ್ರೊಕ್ಲೆಸ್ ಮತ್ತು ಸಿಂಹದ ಕಥೆ ಎಲ್ಲ ಶಾಲಾಬಾಲಕರಿಗೂ ಗೊತ್ತು. ಆದರೆ ನಮ್ಮ ಹೃದಯದಲ್ಲಿರುವ ಕೃತಜ್ಞತೆಯನ್ನು ವ್ಯಕ್ತಗೊಳಿಸುವ ಔದಾರ್ಯವನ್ನು ನಾವು ಕೃಷಿಮಾಡಬೇಕು. ಅದು ನಾಗರಿಕತೆಯ ಒಂದು ಪ್ರಾಥಮಿಕ ಪಾಠವಾಗಿದೆ. ಮನುಷ್ಯನು ಮಾತಾಡುವ ಮೃಗ ತಾನೆ.

ಎಷ್ಟೋ ದಾಂಪತ್ಯಗಳು ಗಂಡ ಹೆಂಡತಿಗಾಗಿ ಅಥವಾ ಹೆಂಡತಿ ಗಂಡನಿಗಾಗಿ ಕೈಕೊಂಡ ಚಿಕ್ಕ ದೊಡ್ಡ ತೊಂದರೆಯ ಬಗ್ಗೆ ಸಾಮಾನ್ಯ ಪ್ರಶಂಸಾವಚನದ ವಿನಿಮಯವಿಲ್ಲದ್ದರಿಂದ ನೀರಸ ಪಥದಲ್ಲಿ ಸಾಗುವುದುಂಟು. ತನಗೆ ಆರೋಗ್ಯ ಚೆನ್ನಾಗಿಲ್ಲದಿದ್ದರೂ ತನ್ನ ಗಂಡನ ಸುಖ-ಸೌಕರ್ಯಗಳಿಗಾಗಿ ವಿಶೇಷ ಶ್ರಮವಹಿಸಿ ದುಡಿಯುತ್ತಿರುವ ನನ್ನ ಮಿತ್ರಪತ್ನಿಯೊಮ್ಮೆ ತನ್ನ ಹೃದಯವನ್ನು ನನ್ನೆದುರು ಬಿಚ್ಚಿದರು: “ಏನು ಮಾಡಿದರೇನು, ಗುಡ್ಡಕ್ಕೆ ಮಣ್ಣು ಹೊತ್ತ ಹಾಗೆ. ನಮ್ಮವರ ಬಾಯಿಂದ ಒಂದೇ ಒಂದು ಸಲ ಕೂಡ ನಾನು ಪಟ್ಟ ಶ್ರಮಕ್ಕೆ ಒಳ್ಳೇ ಮಾತು ಉದುರುವುದಿಲ್ಲ. ಒಮ್ಮೊಮ್ಮೆ ಬಹಳ ಬೇಸರಕ್ಕಿಟ್ಟುಕೊಂಡು ಬಿಡುತ್ತದೆ ನೋಡಿ. ನಾನು ಇವರ ಮನೆಯಲ್ಲಿ ಜೀತದ ಆಳಾಗಿ ಹೋದೆ ನೋಡಿ.”

“ಆದರೆ ಅವನ ಮನಸ್ಸಿನಲ್ಲಿ ಕೃತಜ್ಞತೆ ಇಲ್ಲವೆ? ಬಿಡಿಸಿ ಹೇಳುವುದರಲ್ಲಿ ಸ್ವಲ್ಪ ಮಾತು ಕಳ್ಳ ಇರಬಹುದಷ್ಟೇ” ಎಂದೆ ನಾನು.

“ಅದು ನನಗೂ ಗೊತ್ತು. ಹಾಗೇ ಸಮಾಧಾನ ಹಚ್ಚಿಕೊಳ್ಳುತ್ತೇನೆ. ಆದರೆ ಅವರು ಅಪರೂಪಕ್ಕೊಮ್ಮೆ ಒಂದು ಒಳ್ಳೇ ಮಾತು ಹೇಳುವಷ್ಟು ಧಾರಾಳಿಗಳಾದರೆ ನನ್ನ ಹೃದಯ ಎಷ್ಟು ಅರಳುತ್ತಿತ್ತು ಬಲ್ಲಿರಾ? ಇದು ನನ್ನ ಸ್ತ್ರೀ ಸಹಜ ಸ್ತುತಿಪ್ರಿಯತೆ ಇದ್ದರೂ ಇರಬಹುದು. ಆದರೆ ಅದು ವಾಸ್ತವ ಭಾವನೆ.”

ಅವಳು ಹೇಳುವುದು ನಿಜ. ಮಾಡಿದ ಕೆಲಸಕ್ಕೆ ಒಂದು ಒಳ್ಳೇ ಭಾವ ಇದೆಯೆಂಬುದಕ್ಕೆ ಹೆಂಡತಿ ಗಂಡನ ಹೃದಯದೊಳಗೆ ಕೆದಕಿ ನೋಡಬೇಕೆ? ತನ್ನ ಗಂಡ ತನ್ನ ಶ್ರಮವನ್ನು ಮೆಚ್ಚಿದ್ದಾನೆ ಎಂಬ ಮಾತು ಹೆಂಡತಿಗೆ ನೇರವಾಗಿ ಅವಗತವಾದರೆ ಅವಳ ಧನ್ಯತೆಯೇ ಬೇರೆ. ಗಂಡ ತನ್ನನ್ನು ಮೆಚ್ಚಲಿಲ್ಲವಲ್ಲಾ ಎಂಬ ಕ್ಲೇಶ ಮೂಡಿದ ಮೇಲೆ, ಇಲ್ಲ ಮನಸ್ಸಿನಲ್ಲೇ ಮೆಚ್ಚಿದ್ದಾರೆ. ಬಾಯಿ ಬಿಡೋಲ್ಲ ಎಂದು ಸಮಾಧಾನ ಹೇಳಿಕೊಳ್ಳುವುದು ಕ್ಲೇಶ ಪರಿಹಾರ ವಾದೀತಾಗಲಿ, ಆನಂದದಾಯಿಯಾಗಲಾರದು. “ಮೆಚ್ಚಿಕೆಯಾಗದೆ ಇಲ್ಲ”. ಎಂಬುದು “ಮೆಚ್ಚಿಕೆಯಾಗಿದೆ” ಎಂಬುದರ ಸಮಾನಾರ್ಥಕವಲ್ಲ.

ನಾವು ಭಾರತೀಯರು ಎಷ್ಟೋ ವಿಷಯಗಳಲ್ಲಿ ಅತ್ಯಂತ ಹೃದ್ಯವಾದ ಭಾವನೆಗಳನ್ನು ಮಾತಿನಲ್ಲಿ ವ್ಯಕ್ತಗೊಳಿಸುವಲ್ಲಿ ಹಿಂದೆ. ಇಂಗ್ಲಿಷಿನ 'ಥ್ಯಾಂಕ್ ಯು', ಉರ್ದುವಿನ 'ಶುಕ್ರಿಯಾ'ಗಳಂಥ ಕೃತಜ್ಞತಾವ್ಯಂಜಕವಾದ ಔಪಚಾರಿಕ ಶಬ್ದ ನಮ್ಮ ಭಾಷೆಗಳ ದಿನ ಬಳಕೆಯ ಶಬ್ದ ಭಾಂಡಾರದಲ್ಲಿ ಇಲ್ಲವೇ ಇಲ್ಲ. ಬಹಳ ದೊಡ್ಡದೇನಾದರೂ ಸಹಾಯವಾದರೆ 'ಉಪಕಾರವಾಯಿತು' ಅಥವಾ 'ನಿಮ್ಮ ಋಣ ಎಂದೂ ತೀರಿಸಲಾರೆ' ಎಂದು ನಾವೆನ್ನುತ್ತೇವೆ. ಆದರೆ ನಿತ್ಯಜೀವನದಲ್ಲಿ ಮಾಡಿಸಿಕೊಳ್ಳುವ ಚಿಕ್ಕ ಪುಟ್ಟ ಕಾರ್ಯಗಳಿಗಾಗಿ ಆಭಾರ ಮನ್ನಿಸುವುದಕ್ಕೆ ಈ ಶಬ್ದಗಳು ಉಪಯೋಗಬೀಳುವುದಿಲ್ಲ. ನಿಮಗೆ ದಾರಿ ಹೇಳಿದ ಪೋಲೀಸ್, ದುಡ್ಡು ತೆಗೆದುಕೊಂಡೇ ಆಗಲೊಲ್ಲದೇಕೆ ನಿಮ್ಮನ್ನು ಕರೆದೊಯ್ದ ಟಾಂಗಾವಾಲಾ, ನಿಮ್ಮ ಒಂದು ಚಿಕ್ಕ ಕೆಲಸ ಮಾಡಿಕೊಟ್ಟ ನಿಮ್ಮ ಮಗ—ಇವರಿಗೆ ನಿಮ್ಮ ಮೆಚ್ಚಿಕೆ ವ್ಯಕ್ತಪಡಿಸಲು 'ಥ್ಯಾಂಕ್ಯು' ಎಂಬ ಇಂಗ್ಲಿಷ್ ಶಬ್ದವೇ ನಿಮಗೆ ಗತಿ.

ವಿಶೇಷವಾಗಿ ನಮಗಿಂತ ಅಂತಸ್ತಿನಲ್ಲಿ ಕೆಳಗಿನವರು ಎನಿಸಿರುವವರಿಂದ ಮಾಡಿಸಿಕೊಂಡ ಕೆಲಸಕ್ಕೆ ಮೆಚ್ಚಿಕೆ ಹೇಳುವ ಅಗತ್ಯವನ್ನು ನಾವು ಮನಗಾಣುವುದೇ ಇಲ್ಲ. ಆದರೂ ಜನಗಳ ಹೃದಯದಲ್ಲಿ ಶಾಶ್ವತವಾದ ಸ್ಥಾನಪಡೆದಿರುವ ದೊಡ್ಡವರು ಈ ಚಿಕ್ಕ ·ಔದಾರ್ಯದ ಗುಣವನ್ನು ಬೆಳಸಿಕೊಂಡಿರುತ್ತಾರೆ. ಪ್ರಧಾನಮಂತ್ರಿ ಶಾಸ್ತ್ರಿಗಳು ತಮಗೆ ಫೈಲ್ ತಂದು ಕೊಟ್ಟ ಆಫೀಸು ಪೇದೆಗೆ ಕೂಡ 'ಶುಕ್ರಿಯಾ' ಎನ್ನಲು ಮರೆಯುವುದಿಲ್ಲ.

ಚಿಕ್ಕಂದಿನಿಂದಲೇ ಮಕ್ಕಳನ್ನು ಕೃತಜ್ಞತೆಯಲ್ಲಿ ತರಬೇತಿ ಮಾಡಿದರೆ ಅವರ ಜೀವನದ ಮಗ್ಗದಲ್ಲಿ ನಾವೊಂದು ಬಂಗಾರದ ಎಳೆ ಸೇರಿಸಿ ಕೊಟ್ಟಂತಾಗುವುದು. ಇದರಲ್ಲಿ ನಮ್ಮ ಮೇಲ್ಪಂಕ್ತಿಯಷ್ಟು ಪರಿಣಾಮಕರವಾದದ್ದು ಬೇರಾವುದೂ ಇರದು. ನನ್ನ ಕ್ರೈಸ್ತಮಿತ್ರರೊಬ್ಬರು ತಮ್ಮ ಚಿಕ್ಕಮಗಳ ಕೈಲಿ ಒಂದು ಲೋಟ ನೀರು ತರಿಸಿಕೊಂಡಾಗ ಕೂಡ ನಸುನಕ್ಕು 'ಥ್ಯಾಂಕ್ಯು' ಎನ್ನಲು ಮರೆಯುವುದಿಲ್ಲ.

ಆದರೆ ಈ ಉಪಕಾರಸ್ಮರಣೆ ತೀರ ಔಪಚಾರಿಕವಾದರೆ ಒಳಿತಕ್ಕಿಂತ ಕೆಡುಕನ್ನೇ ಮಾಡುತ್ತದೆ. ಮುಖಲಕ್ಷಣವನ್ನು ರವಷ್ಟೂ ಮೆದುಗೊಳಿಸದೆ ಅಥವಾ ಎಲ್ಲೋ ಯೋಚನೆಯಲ್ಲಿ ಅಭ್ಯಾಸ ಬಲದಿಂದ 'ಉಪಕಾರ' ಎನ್ನುವವರನ್ನು ನಾನು ನೋಡಿದ್ದೇನೆ. ನನಗೆ ಗೊತ್ತಿರುವ ಒಬ್ಬ ಮನುಷ್ಯ 'ಥ್ಯಾಂಕ್ಸ್‌ರೆಪಾ!' ಎಂದು ಗಂಟು ಕಳೆದುಕೊಳ್ಳುವವನ ಮುಖ ಭಂಗಿಯಿಂದ ಹೇಳುತ್ತಾನೆ. ಇದು ಬರಿ ಶಾಬ್ದಿಕ ಉಪಚಾರ. ಮನಃಪೂರ್ವಕ ವ್ಯಕ್ತಗೊಳಿಸುವ ಕೃತಜ್ಞತೆ ಮಾತ್ರ ನಮ್ಮ ಬಾಳಿನಲ್ಲಿ ಸಕ್ಕರೆಯನ್ನು ಬೆರಸುತ್ತದೆ.

ಮನಃಪೂರ್ವಕ ಕೃತಜ್ಞತೆಯನ್ನರ್ಪಿಸಲಾರದವನ ಚಾರಿತ್ರ್ಯದಲ್ಲಿ ಮಾತ್ರವಲ್ಲ, ಮನೋಭೂಮಿಕೆಯಲ್ಲೇ ಏನೋ ದೋಷವಿದೆಯೆಂದು ತಿಳಿದುಕೊಳ್ಳಬಹುದು. ಅವನು ಪ್ರಪಂಚ ದ್ವೇಷಿಯಾಗಿರುತ್ತಾನೆ (ಈ ಪ್ರಪಂಚ ನನಗೆ ಬಹಳ ಅಪಕಾರ ಮಾಡಿದೆ, ಇದೊಂದು ಚಿಕ್ಕ ಉಪಕಾರ ಈತನಿಂದಾದ್ದೇನು ಮಹಾ?) ಅಥವಾ ಅವನು ಮಹಾ ದುರಹಂಕಾರಿಯಾಗಿರುತ್ತಾನೆ. (ಈ ಹುಲುಮಾನವರಿಗೇನು ಉಪಕಾರ ಮನ್ನಿಸುವುದು?)

ಅಥವಾ ಅವನು ನೈಚ್ಯಾನುಸಂಧಾನದಿಂದ ಬಳಲುತ್ತಿದ್ದಾನೆ. (ಅಯ್ಯೋ, ನನ್ನ ಅಲ್ಪತನವೇ, ಇವರಿಂದ ಸಹಾಯ ಪಡೆಯಬೇಕಾಯಿತಲ್ಲಾ!) ದೇವರ ವಿಶ್ವದಲ್ಲಿ ನೆರವು ಬೇಡ ಎಂಬಷ್ಟು ದೊಡ್ಡವನಾರೂ ಇಲ್ಲ ಎಂದು ಇವರಾರಿಗೂ ಮನವರಿಕೆ ಇಲ್ಲ.

ಕೃತಜ್ಞತೆಯ ಅಭಿವ್ಯಕ್ತಿ ವಿನಯದ ಆತ್ಮಶಿಕ್ಷಣವಾಗಿದೆ ಅದು ಆತ್ಮಿಕ ಶಿಕ್ಷಣವೂ ಹೌದು. ನೀವು ಹೇಳುವ ಪ್ರತಿಯೊಂದು 'ಥ್ಯಾಂಕ್ ಯು'ವಿನಲ್ಲಿ ಸೌಜನ್ಯದ ಬಾಹ್ಯ ಉಪಚಾರ ಮಾತ್ರ ಅಡಕವಾಗಿಲ್ಲ. ಅದು ಮಾನವರ ಸಮಾನತೆಯ ಮತ್ತು ಪರಸ್ಪರಾವಲಂಬನೆಯ ನೆನವರಿಕೆಯಾಗಿದೆ. ಯಾರೂ ನಮಗಾಗಿ ಏನನ್ನೂ ಮಾಡಲು ಕರ್ತವ್ಯಬದ್ಧರಲ್ಲ-ಅವರು ಎಷ್ಟೇ ಬಡವರಿರಲಿ, ಕೆಳ ಅಂತಸ್ತಿನವರಿರಲಿ ಆದ್ದರಿಂದ ನಾವು ಯಾರಿಂದಲಾದರೂ ಉಪಕಾರ ಹೊಂದಿದ್ದಕ್ಕಾಗಿ ನಾವು ಕೃತಜ್ಞರಾಗಿರಬೇಕು—ಆಗಿದ್ದರೆ ಸಾಲದು, ಅದನ್ನು ಹೇಳಬೇಕು ಅದು ನಮ್ರತೆಯನ್ನು ಕಲಿಸುತ್ತದೆ.

■

# ಅಹಿಂಸೆ, ಶಾಕಾಹಾರ ಇತ್ಯಾದಿ

**ಭಾ**ರತೀಯ ಸಂಸ್ಕೃತಿಯಲ್ಲಿ ನಾವು ಹೆಮ್ಮೆ ಹಚ್ಚಿಕೊಳ್ಳುತ್ತಿರುವ ಒಂದು ಅಂಶವೆಂದರೆ, ಅಹಿಂಸಾ ವ್ರತ. ಎಲ್ಲ ದೇಶಗಳಲ್ಲಿ ಎಲ್ಲ ಧರ್ಮಗಳಲ್ಲಿ ಅರ್ಥರಹಿತ ಹಿಂಸೆಯನ್ನು ನಿಷೇಧಿಸಿದ್ದರೂ ಅದನ್ನು ಒಂದು ಘನವಾದ ಆದರ್ಶದ ಮಟ್ಟಕ್ಕೆ ಏರಿಸಿದವರು ಭಾರತೀಯರೇ ಎಂಬುದು ಒಪ್ಪಬೇಕಾದ ಮಾತು. ಇತರ ದೇಶಗಳಲ್ಲಿ ಕ್ರೌರ್ಯ ಮಾತ್ರ ಸಕಲ ಪ್ರಾಣಿಗಳಿಗೂ ಅನ್ವಯಿಸುವ ತತ್ವವಾಗಿದ್ದು ಅಹಿಂಸೆ (=ಕೊಲ್ಲದಿರುವುದು) ಮನುಷ್ಯರಿಗಷ್ಟೇ ಅನ್ವಯಿಸುವುದಾದರೆ, ಭಾರತದಲ್ಲಿ ಮಾತ್ರ ಕ್ರೌರ್ಯ ಹಿಂಸೆಗಳೆರಡೂ ಸಕಲ ಪ್ರಾಣಿಗಳ ವಿಷಯದಲ್ಲಿ ಅನುಸರಿಸತಕ್ಕ ಆದರ್ಶಗಳಾದವು.

ಸೃಷ್ಟಿಯ ಸಕಲ ಜೀವಜಾತಗಳೂ, ಮೂಲತಃ ನಮ್ಮ ನೈತಿಕ ಆದರ್ಶಗಳಿಗೆ ಭಾಗಿಗಳಾಗಬೇಕೆಂಬ ಈ ಕಲ್ಪನೆ ತುಂಬ ಉದಾತ್ತವೇ ಸೈ. ಯಜ್ಞಗಳಲ್ಲಿ ಧಾರಾಳ ಪ್ರಾಣಿವಧೆ ಮಾಡುತ್ತಿದ್ದ ವೇದವಾದಿಧರ್ಮ ಅಹಿಂಸೆಯನ್ನು ಕೇವಲ ಆದರ್ಶವಾಗಿ ಮಾಡಿಕೊಳ್ಳಲಿಲ್ಲ. ಆ ಯಶಸ್ಸು ಅವೈದಿಕವಾದ ಬೌದ್ಧ, ಜೈನ ಧರ್ಮಗಳಿಗೆ ಸಲ್ಲುತ್ತದೆ. ಬುದ್ಧ ಪ್ರಾಣಿಹಿಂಸೆಯನ್ನು ತಿರಸ್ಕರಿಸಿದ. ಅವನ ಅನುಯಾಯಿ ಅಶೋಕ ಪ್ರಾಣಿಹಿಂಸಾತ್ಮಕ ಆರಾಧನೆಗಳನ್ನು ತಡೆಗಟ್ಟುವ ಕಾನೂನುಗಳನ್ನು ಮಾಡಿ 'ದೇವಾನಾಂಪ್ರಿಯ ಇತಿ ಮೂರ್ಖಃ' ಎಂದು ಹಳೇ ಯಾಜ್ಞಿಕ ಧರ್ಮಾನುಯಾಯಿಗಳಿಂದ ಬಿರುದು ಗಳಿಸಿದ. ಜೈನ ಧರ್ಮವಂತೂ ಪೂರ್ತಿಯಾಗಿ ಎಲ್ಲ ವಿಧದಿಂದಲೂ ಪ್ರಾಣಿಹಿಂಸೆಯನ್ನು ನಿಷೇಧಿಸಿತು. ಅದು ಜೈನಧರ್ಮದ ಅತ್ಯಂತ ಮೂಲಭೂತ ನಿಯಮವಾಗಿ ಬಿಟ್ಟಿದೆ.

ಯಜ್ಞದಲ್ಲಿ ಕೊಂದ ಪಶುಗಳ ಚರ್ಮದಿಂದ ನದಿ ಮುಚ್ಚಿಹೋಗಿ ಅದಕ್ಕೆ ಚರ್ಮಣ್ವತಿ (ಈಗಿನ ಚಂಬಲ್) ಎಂದು ಹೆಸರು ಬರಿಸಿದ ರಂತಿದೇವನನ್ನು ಹೊಗಳುವ ವೈದಿಕ ಧರ್ಮಾನುಯಾಯಿಗಳ ಸಂಗಡ ಹೋಲಿಸುವಾಗ, ಅರಮನೆಯಲ್ಲಿ ಹಂತ ಹಂತವಾಗಿ ಮಾಂಸಕ್ಕಾಗಿ ಪ್ರಾಣಿ ಮಾರಣವನ್ನು ಇಳಿಸಿದ ಅಶೋಕ ಚಕ್ರವರ್ತಿಗೂ ವಾತಾವರಣದಲ್ಲಿ ಅದೃಶ್ಯವಾಗಿರಬಹುದಾದ ಜೀವಿಗಳು ಬಾಯೊಳಗೆ ಹೊಕ್ಕು ಸತ್ತಾವೆಂದು ಅಂಜಿ ಬಾಯಿಗೆ ಬಟ್ಟೆಯ ಪರದೆ ಕಟ್ಟಿಕೊಂಡು ಓಡಾಡುವ ಜೈನ ಸನ್ಯಾಸಿಗಳಿಗೆ ಮತ್ತು ಕತ್ತಲಲ್ಲಿ ಪ್ರಾಣಿಹತ್ಯೆಯಾದೀತೆಂದು ರಾತ್ರಿಯಾದ ನಂತರ ಊಟವನ್ನೇ ಮಾಡದಿರುವ ಜೈನ ಭವ್ಯರಿಗೂ ನಮ್ಮ ಆದರ್ಶವಾದಿ ಮನಸ್ಸು ನಮೋ ಎನ್ನುತ್ತದೆ.

ಆದರೆ ಈ ಅತಿಶಯವಾದ ಅಹಿಂಸೆಯ ಸಾಮಾಜಿಕ ಪರಿಣಾಮಗಳನ್ನು ನೆನೆದರೆ

ನನಗೆ ಅದು ದೇಶಕ್ಕೆ ಹಿತ ಮಾಡಲಿಲ್ಲ ಎಂದು ತೋರುತ್ತದೆ. ವೈದಿಕ ಧರ್ಮದವರು ಪ್ರಾಣಿವಧೆಯ ನಿಷೇಧವನ್ನು ಅಂಗೀಕರಿಸಲಿಲ್ಲ. ಅಶೋಕನ ಸಾಮ್ರಾಜ್ಯ ಅಳಿದ ನಂತರ ಪುನಃ ಪ್ರಾಣಿ ಬಲಿಯುಕ್ತವಾದ ಯಜ್ಞಗಳು ಪ್ರಾರಂಭವಾಗಿ ನಮ್ಮ ಸ್ವರ್ಣಯುಗದ ಗುಪ್ತರು, ಕದಂಬರು, ಚಾಳುಕ್ಯರು ಮತ್ತು ಇತರರು ಅಶ್ವಮೇಧ ಯಜ್ಞಗಳನ್ನು ಮಾಡಿ ಹೆಮ್ಮೆಪಟ್ಟರು. ಅಷ್ಟೇಕೆ, ಕ್ರಿ.ಶ. ಒಂಭತ್ತನೇ ಶತಮಾನದಲ್ಲಿ ಇದ್ದಿರಬೇಕಾದ ಪಂಪ ಕವಿಯ ಪೂರ್ವಜನಾದ ಮಾಧವ ಸೋಮಯಾಜಿ ಹಿಂಸಾಯುಕ್ತವಾದ ಯಜ್ಞ ಮಾಡಿ, ಅದರ ಹೊಗೆಯಿಂದ 'ಕರಿದು ಮಾಡಿದಂ ನಿಜಯಶಮಂ' ಎಂದು ಪಂಪನಿಂದ ಉಲ್ಲೇಖಿಸಲ್ಪಟ್ಟಿದ್ದಾನೆ. ಆದರೆ ನಮ್ಮ ದೇಶದಲ್ಲಿ ಯಾವ ಕಾರಣದಿಂದಲೋ ಅತಿಯಾದದ್ದಕ್ಕೇ ಕೊನೆಗೆ ಕೈಮೇಲಾಗುತ್ತದೆಂದು ಕಾಣುತ್ತದೆ. ಬಹುಶಃ ಜನಸಾಮಾನ್ಯರ ಮನಸ್ಸಿನ ಮೇಲೆ ಆತ್ಯಂತಿಕ ಇಂದ್ರಿಯ ನಿಗ್ರಹ ಮತ್ತು ಕಠೋರ ವ್ರತಗಳು ಆಳವಾದ ಪರಿಣಾಮ ಮಾಡಿ ಸಮಾಜದ ಎಲ್ಲ ಸ್ತರಗಳ ಜನರ ಗೌರವ ಅಂಥ ನೈಷ್ಠಿಕರಿಗೆ ಲಭಿಸುತ್ತದೋ ಏನೋ. ಆದ್ದರಿಂದ ವೈದಿಕ ಧರ್ಮಾನುಯಾಯಿಗಳಿಗೂ ಆತ್ಯಂತಿಕ ಅಹಿಂಸೆ ಆಕರ್ಷಕವಾಗಿ ಕಂಡಿರಬೇಕು. ಅಂಥ ಗೌರವವನ್ನು ಬೌದ್ಧ ಭಿಕ್ಷುಗಳೂ ಅದಕ್ಕಿಂತ ಹೆಚ್ಚಾಗಿ ಜೈನ ಯತಿಗಳೂ ಪಡೆಯುವುದನ್ನು ಕಂಡ ಬ್ರಾಹ್ಮಣರು ಅನಿವಾರ್ಯವಾಗಿ ತಾವೂ ಪೂರ್ತಿ ಅಹಿಂಸೆಯನ್ನು ಮತ್ತು ಮಾಂಸ ವರ್ಜನೆಯನ್ನು ಅಂಗೀಕರಿಸಿರಬಹುದು. ಅಂತೂ ಬ್ರಾಹ್ಮಣರು ಮದ್ಯ ಮಾಂಸಗಳನ್ನು ವರ್ಜಿಸಿ ತಾವು ನಿಗ್ರಹಿಗಳೆನಿಸಿದರು.

ಬೌದ್ಧ ಜೈನ ಧರ್ಮಗಳು ಇಲ್ಲಿ ಬಲಗುಂದುವುದಕ್ಕೆ ಈ ಬ್ರಾಹ್ಮಣ ಪರಿವರ್ತನೆ ಎಷ್ಟು ಸಹಾಯ ಮಾಡಿತೋ ಗೊತ್ತಿಲ್ಲ. ಆದರೆ ಅವು ಭರತಭೂಮಿಯಲ್ಲಿ ಬಹುತರ ನಾಮಶೇಷವಾದರೂ ತಮ್ಮ ಪ್ರಭಾವವನ್ನು ದೃಢವಾಗಿ ನಿಲ್ಲಿಸಿದವೆಂದು ಹೇಳದೆ ವಿಧಿಯಿಲ್ಲ.

ಈ ಅಹಿಂಸಾ ವ್ರತವನ್ನು ಇಂದಿನ ಯುಗದಲ್ಲಿ ಅನೇಕರು ಅನೇಕ ಕಾರಣಗಳಿಗಾಗಿ ನಿಂದಿಸಿದ್ದಾರೆ. ಹೆಸರಾಂತ ಇತಿಹಾಸ ಸಂಶೋಧಕರೊಬ್ಬರು (ಬಹುಶಃ ಶಾಮಾಶಾಸ್ತ್ರಿಗಳು) ಈ ಶತಮಾನದ ಮೂರು-ನಾಲ್ಕನೇ ದಶಕಗಳಲ್ಲಿ ಯಜ್ಞದಲ್ಲಿನ ಹಿಂಸೆಯನ್ನೂ ಪ್ರಾಣಿಬಲಿಯನ್ನೂ ಎತ್ತಿಹಿಡಿದು, ಅದರಿಂದ ಧೈರ್ಯ ಸಾಹಸಗಳು ಹೆಚ್ಚುತ್ತವೆಂದೂ ಮನಸ್ಸು ದಾರ್ಢ್ಯ ಪಡೆಯುತ್ತದೆಂದೂ ಬರೆದದ್ದು ನನಗೆ ನೆನಪಿದೆ. ಅವರ ಅಭಿಪ್ರಾಯದಲ್ಲಿ ಅಹಿಂಸೆ ಭಾರತೀಯರನ್ನು ಹೆಣ್ಣಿಗರನ್ನಾಗಿ ಮಾಡಿತು. ದಿವಂಗತ ಡಾ. ಬಿ.ಎಸ್. ಮುಂಜೆಯವರು ಬ್ರಾಹ್ಮಣರಾದಿಯಾಗಿ ಹಿಂದುಗಳೆಲ್ಲ ಮಾಂಸಾಹಾರವನ್ನು ಪುನರಾರಂಭಿಸಬೇಕೆಂದೂ ಅದರಿಂದ ದೇಹದಾರ್ಢ್ಯವೂ ಪೌರುಷವೂ ಬೆಳೆದು ಹಿಂದುಗಳು ಇತರ ಧರ್ಮೀಯರ ಕೆಣಕಾಟವನ್ನು ಎದುರಿಸಲು ಸಮರ್ಥರಾಗುವರೆಂದೂ ಪ್ರಚಾರ ಮಾಡುತ್ತಿದ್ದರು.

ನಾನು ಬರೆಯುತ್ತಿರುವುದು ಇಂಥ ಕಾರಣಗಳಿಗಾಗಿ ಅಲ್ಲ. ಅಹಿಂಸೆ, ಶಾಕಾಹಾರ ನಿಷ್ಠೆ ಮೊದಲಾದ ಅತಿರೇಕಗಳು ಜನರನ್ನು ಪೌರುಷಹೀನರನ್ನಾಗಿ ಮಾಡಿದವೆಂಬುದು ವಿವಾದಾಸ್ಪದವಾಗಿದೆ. ಬೌದ್ಧ ಮತ್ತು ಜೈನ ರಾಜರು ಯುದ್ಧಾಸಕ್ತಿಯಲ್ಲಿ ವೈದಿಕರಿಗಿಂತ

ಕಮ್ಮಿಯವರಾಗಿರಲಿಲ್ಲ. ಬುದ್ಧನ ಪವಿತ್ರ ಅವಶೇಷವಾದ ಅವನ ಹಲ್ಲುಗಳಿಗಾಗಿಯೇ ಈ ದೇಶದಲ್ಲಿ ಯುದ್ಧವಾಯಿತಂತೆ!

ನಾನು ಚಿಂತಿಸುತ್ತಿರುವುದು ಅಹಿಂಸೆ ಮತ್ತು ಮಾಂಸಾಹಾರ ವರ್ಜನೆಯ ಮಾನಸಿಕ ಮತ್ತು ಸಾಮಾಜಿಕ ಪರಿಣಾಮಗಳ ವಿಚಾರ. ಅದು ನಮ್ಮಲ್ಲಿ ಮೊದಲೇ ರೂಢವಾಗಿದ್ದ ಸಾಮಾಜಿಕ ದೂರಗಳನ್ನು ಹೆಚ್ಚಿಸಿ ಶ್ರೇಷ್ಠ ಕನಿಷ್ಠ ಭಾವಕ್ಕೆ ಒತ್ತು ಕೊಟ್ಟಿತು.

ಬ್ರಾಹ್ಮಣರು ಮಾಂಸ ವರ್ಜನೆ ಮಾಡಿ ಅಹಿಂಸೆಯನ್ನು ಸ್ವೀಕರಿಸಿದ ನಂತರ ಅವರು ಸಮಾಜದ ಇತರ ವರ್ಗಗಳಿಂದ ಇನ್ನಷ್ಟು ದೂರವಾದರು. ಶಾಸ್ತ್ರಗಳನ್ನು ಆಳವಾಗಿ, ಆದರೆ ತೆರೆದಮನಸ್ಸಿನಿಂದ ಅಧ್ಯಯನ ಮಾಡಿದ ಸಂನ್ಯಾಸಿಗಳೊಬ್ಬರು, ಪ್ರಾಚೀನ ಕಾಲದಲ್ಲಿ ಬ್ರಾಹ್ಮಣ ಕ್ಷತ್ರಿಯಾದಿ ವರ್ಗಗಳ ಸಹಪಂಕ್ತಿ ಭೋಜನಕ್ಕೆ ಪ್ರತಿಬಂಧವಿದ್ದಿಲ್ಲವೆಂದೂ ಬ್ರಾಹ್ಮಣರು ಮಾಂಸ ಮದ್ಯಗಳನ್ನು ಬಹಿಷ್ಕರಿಸಿದ ಮೇಲೆ, ಅವುಗಳನ್ನು ಬಿಡಲಾರದ ಬೇರೆ ಜಾತಿಗಳೊಡನೆ ಒಟ್ಟಿಗೆ ಕುಳಿತು ಊಟ ಮಾಡುವುದನ್ನು ನಿಷೇಧಿಸಿದರೆಂದೂ ನನಗೆ ಹೇಳಿದರು. ತಮಗೆ ಮತ್ತೊಮ್ಮೆ ಈ ಪದಾರ್ಥಗಳಲ್ಲಿ ಆಸಕ್ತಿ ಹುಟ್ಟಬಾರದೆಂಬುದು ಸಹಪಂಕ್ತಿ ನಿಷೇಧದ ಉದ್ದೇಶವಾಗಿತ್ತೆಂದು ಅವರು ವಿವರಿಸಿದರು.

ಮೂಲ ಉದ್ದೇಶ ಆಮಿಷಗಳಿಂದ ಆತ್ಮರಕ್ಷಣೆಯಾಗಿದ್ದರೂ ಮನುಷ್ಯ ಸ್ವಭಾವ ಈ ವಿಶೇಷವನ್ನು ಕಾಲಾಂತರದಲ್ಲಿ ಶ್ರೇಷ್ಠತ್ವದ ಆಯುಧವಾಗಿ ಮಾಡಿಕೊಂಡಿತು. ಊಟ ಉಪಚಾರಗಳಲ್ಲಿ ಸಹಭಾಗಿತನ ಸೋದರ ಭಾವಕ್ಕೆ ಒಂದು ಬಲವಾದ ಬೆಸುಗೆಯಾಗುತ್ತದೆ. ಆ ಬೆಸುಗೆ ಬಿಡಿಸಿದಂತಾಗಿ ಇತರ ಮೇಲ್ಜಾತಿಗಳಿಂದ ಕೂಡ—ಕೀಳೆನಿಸಿದ ಜಾತಿಗಳ ಮಾತಂತೂ ದೂರ—ಬ್ರಾಹ್ಮಣರು ಪೂರ್ತಿ ಪ್ರತ್ಯೇಕರೂ 'ಉಚ್ಚ'ರೂ ಆದರು. ಇದಕ್ಕೆ ಬೇಕಾದ ನಿಗ್ರಹ ಶಕ್ತಿ ಸೌಕರ್ಯ ಇಲ್ಲದ ಇತರ ಜಾತಿಗಳು ಕನಿಷ್ಠರಾದರು. ಹೆಚ್ಚಿನ ಆಹಾರ ಸ್ವಾತಂತ್ರ್ಯಕ್ಕಾಗಿ ಇತರರು ಈ ಕಾಲ್ಪನಿಕ ಶ್ರೇಷ್ಠ ಕನಿಷ್ಠತೆಗಳನ್ನು ಅಂಗೀಕರಿಸಿದರು. ಮೊದಲೇ ಇದ್ದ ಮಡಿ ಮೈಲಿಗೆಗಳ ಕಲ್ಪನೆಗೆ ಇನ್ನಷ್ಟು ಬಲ ಕೊಟ್ಟಂತಾಯಿತು. ವಿದ್ಯೆ, ಬುದ್ಧಿ , ಸುಶೀಲ ಮೊದಲಾದವುಗಳಲ್ಲಿ ಯಾವ ಹಿರಿಮೆ ಇಲ್ಲದವರಿಗೆ ಕೂಡ ಈ ಆಹಾರ ನಿಗ್ರಹದ ಕಾರಣದಿಂದ ತಮ್ಮ ಶ್ರೇಷ್ಠತ್ವವನ್ನು ಹೇಳಿಕೊಳ್ಳಲು ಅವಕಾಶವಾಯಿತು.

ಬ್ರಾಹ್ಮಣರಿಗೆ ಇದರಿಂದ ಒಳ್ಳೇದು ಮಾತ್ರ ಆಯಿತೆಂದಲ್ಲ. ಅಹಿಂಸಾ ವ್ರತದೊಡನೆ ಅವರು ಇತರ ಕೆಲ ನಿಷೇಧಗಳನ್ನೂ ಸ್ವೀಕರಿಸಬೇಕಾಯಿತು. ಬ್ರಾಹ್ಮಣರು ಹೊಲಗದ್ದೆಗಳನ್ನು ಉಳಬಾರದೆಂದಾಯಿತು. ನೇಗಿಲ ಬಾಯಿಗೆ ಸಿಕ್ಕಿ ಎಷ್ಟೋ ಭೂಗತಜೀವಿಗಳು, ಹಾವು ಹುಳಹುಪ್ಪಡಿಗಳು ಸಾಯುತ್ತವಾದ್ದರಿಂದ ಈ ನಿಷೇಧ. (ಆತ್ಯಂತಿಕ ಅಹಿಂಸೆಯನ್ನು ಒಪ್ಪಿಕೊಂಡ ಜೈನ ಭವ್ಯರು ಕೂಡ ಅದೇ ಕಾರಣದಿಂದ ಕೃಷಿ ವೃತ್ತಿಯಿಂದ ದೂರವಾದದ್ದನ್ನೂ ವ್ಯಾಪಾರವನ್ನೇ ಮುಖ್ಯ ವೃತ್ತಿಯಾಗಿ ಮಾಡಿಕೊಂಡದ್ದನ್ನೂ ಇಲ್ಲಿ ನೆನೆದುಕೊಳ್ಳಬಹುದು). ತಾವು ಹೊಲಹೂಡಿ ಕೈ ಮೈ ಕೆಸರು ಮಾಡಿಕೊಳ್ಳುವುದಿಲ್ಲವೆಂಬುದು ಭೂಮಾಲಿಕ ವಿಪ್ರರಿಗೆ ಶ್ರೇಷ್ಠತ್ವದ ಒಂದು ಬಂಡವಾಳವಾದರೂ ಅದು ಅವರನ್ನು ತಮ್ಮ ಹೊಲಗೆಲಸಗಳಲ್ಲಿ

ಪರಾವಲಂಬಿಗಳನ್ನಾಗಿ ಮಾಡಿತು. ಈ ಡಂಬಾಚಾರ ಅನೇಕ ಶತಮಾನಗಳ ನಂತರ ಈಗ ತನ್ನ ಪ್ರತೀಕಾರವನ್ನು ಮಾಡುತ್ತಿದೆ. ಉಳುವವನೇ ಹೊಲದೊಡೆಯನಾದ ಕಾಲದಲ್ಲಿ ಬೇರಾವ ಜಾತಿಗಿಂತ ಬ್ರಾಹ್ಮಣ ಜಾತಿ ಜಮೀನಿಗೆ ಹೆಚ್ಚು ಎರವಾಗಲು ಬ್ರಾಹ್ಮಣ ಉಳುವವನಲ್ಲ ಅನ್ನುವುದೂ ಒಂದು ಕಾರಣ. ಜಮೀನನ್ನು ಸ್ವಂತ ಸಾಗುವಳಿಗೆಂದು ಉಳಿಸಿಕೊಂಡ ಬುದ್ಧಿವಂತರು ಕೂಡ ಉಳುಮೆ ಮಾಡುವವರಿಂದ ಪಡುವ ಬವಣೆ, ಅವರಿಗೆ ತೆರಬೇಕಾದ ಕೂಲಿಯಿಂದ ಹೊಂದುವ ನಷ್ಟ ಅಷ್ಟಿಷ್ಟಲ್ಲ.

ಅತಿಯಾದ ವ್ರತನಿಷ್ಠೆಯ ಮಾನಸಿಕ ಮತ್ತು ಸಾಮಾಜಿಕ ಪರಿಣಾಮಗಳು ಮಾನವ ಮಾನವರೊಳಗಿನ ದೂರವನ್ನು ಹೆಚ್ಚಿಸುತ್ತವೆ ಮತ್ತು ಒಂದು ಅದೃಶ್ಯ ಡಂಭವನ್ನು ಉಂಟುಮಾಡುತ್ತವೆ ಎಂಬುದಕ್ಕೆ ಬೇರೆ ದೇಶ, ಧರ್ಮಗಳಿಂದಲೂ ಉದಾಹರಣೆಗಳನ್ನು ಕೊಡಬಹುದು. ಮಧ್ಯಮ ಮಾರ್ಗದ ಪ್ರಣೇತನಾದ ಗೌತಮಬುದ್ಧ ಅಹಿಂಸೆಯನ್ನು ಪ್ರತಿಪಾದಿಸಿದರೂ ಮಾಂಸಾಹಾರವನ್ನು ನಿಷೇಧಿಸಲಿಲ್ಲ. ಇದನ್ನು, ಮಾಂಸ ತಿನ್ನಲಡ್ಡಿಯಿಲ್ಲ , ಆದರೆ ಸ್ವತಃ ಪ್ರಾಣಿವಧೆ ಮಾಡದಿದ್ದರಾಯಿತು ಎನ್ನುವಂತೆ ವ್ಯಾಖ್ಯಾನಿಸಲಾಯಿತು. ಆಢ್ಯ ವರ್ಗಗಳು ಮಾಂಸವನ್ನು ಬಿಡದಿದ್ದರೂ ಸ್ವತಃ ಪ್ರಾಣಿಗಳನ್ನು ಕೊಲ್ಲುವುದನ್ನು ಕೀಳೆಂದು ಭಾವಿಸಿದರು. ಹೀಗೆ, ಜಪಾನಿನಲ್ಲಿ ಮೇಲ್ವರ್ಗದ ಬೌದ್ಧ ಜನರು ಸ್ವತಃ ಪ್ರಾಣಿವಧೆ ಮಾಡುವುದಿಲ್ಲ. ಬೌದ್ಧೇತರ ಕೀಳು ಜಾತಿಗಳನ್ನು ಈ ಕೀಳು ಕೆಲಸಕ್ಕೆ ನೇಮಿಸುತ್ತಾರೆ. ಅಲ್ಲಿನ 'ಐನು' ಎಂಬ ಆದಿಮ ಜನ ಕಟುಕರ ಕೆಲಸಕ್ಕಾಗಿ ಮೀಸಲಿದ್ದಾರಂತೆ. ಅವರನ್ನು ನಮ್ಮಲ್ಲಿನ ಹೊಲೆಯ ಮಾದಿಗರಂತೆಯೇ ನಡೆಸಿಕೊಳ್ಳುತ್ತಾರೆ. ಅವರು ಕೂಡ ನಮ್ಮ ಹರಿಜನರಂತೆ ಈಗ ಪ್ರತಿಭಟನೆ ಪ್ರಾರಂಭಿಸಿದ್ದಾರೆನ್ನಿ. ಸಿಂಹಳದಲ್ಲಿ ಕೂಡ ಹೆಚ್ಚುಕಡಿಮೆ ಈ ಸ್ಥಿತಿ ಇದೆಯಂತೆ. ಅಲ್ಲಿ ಭಿಕ್ಷೆ ಹಾಕಿದರೆ ಬೌದ್ಧ ಭಿಕ್ಷುಗಳೂ ಮಾಂಸ ತಿನ್ನುತ್ತಾರೆ. ಸ್ವತಃ ಕೊಲ್ಲುವುದಿಲ್ಲ. ಇದೊಂದು ಧಾರ್ಮಿಕ ಸಾಮಾಜಿಕ ಠಕ್ಕಲ್ಲದೆ ಮತ್ತೇನು? ಸ್ವತಃ ಹಿಂಸೆಯಿಂದ ದೂರ ಉಳಿದು ಆ ಕೆಲಸಕ್ಕಾಗಿಯೇ ಒಂದು ಜಾತಿಯನ್ನು ನಿರ್ಮಿಸುವುದು ಎಷ್ಟು ಧರ್ಮ? ಎಷ್ಟು ನೀತಿ?

ನನಗೆ ಆಶ್ಚರ್ಯ ತಂದಿರುವ ಸಂಗತಿಯೆಂದರೆ ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಒಂದು ಹೊಸ ಧಾರ್ಮಿಕ ಸಾಮಾಜಿಕ ಮನ್ವಂತರವನ್ನು ಪ್ರಾರಂಭಿಸಲು ಗಂಭೀರ ಪ್ರಯತ್ನ ಕೈಕೊಂಡ ಲಿಂಗಾಯತ ಚಳವಳಿ ಮಾಂಸಾಹಾರ ವರ್ಜ್ಯಕ್ಕೆ ಮನ್ನಣೆ ಕೊಟ್ಟದ್ದು. ಶೈವಾಚಾರದಲ್ಲಿ ಮಾಂಸ ಭಕ್ಷಣಕ್ಕೆ ನಿಷೇಧವಿಲ್ಲ. ಶೈವ ಪುರಾಣಗಳಲ್ಲಿ ಜಂಗಮರು ಕೂಡ ಭಕ್ತರಿಂದ ಮಾಂಸ ಭೋಜನವನ್ನು ಕೇಳಿದ ಕಥೆಗಳು ಬರುತ್ತವೆ. 'ಸ್ವತಃ ಬಸವಣ್ಣನವರು ಆಹಾರಾದಿ ವಿಷಯಗಳಲ್ಲಿನ ಅತಿ ಮಡಿವಂತಿಕೆಯಲ್ಲಿರುವ ಅಪಾಯವನ್ನು ಗ್ರಹಿಸಿದವರಾಗಿದ್ದರು. ನೀರುಳ್ಳಿಯ ಬಗ್ಗೆ ಇರುವ ನಿಷೇಧವನ್ನು—ಬಹುಶಃ ಸ್ವಂತದ ಬ್ರಾಹ್ಮಣ ಹಿನ್ನೆಲೆಯ ಜುಗುಪ್ಸೆಯನ್ನೂ—ಗೆಲ್ಲುವುದಕ್ಕಾಗಿ ಅವರು ನೀರುಳ್ಳಿ ಮಾಲೆ ತೊಟ್ಟು ಬೀದಿಗಳಲ್ಲಿ ಮೆರೆದು ಬಂದರೆಂದು ಕಥೆಯಿದೆ. ಸಾಮಾನ್ಯರಿಗೆ ಸಾಧ್ಯವಾದ ಆಹಾರವನ್ನು ಎಲ್ಲರೂ

ಸ್ವೀಕರಿಸಿದರೆ ಮಾತ್ರ ಧಾರ್ಮಿಕ ಸಾರ್ವಜನೀನತೆ ಸಾಧ್ಯವೆಂದು ಅವರು ಮನಗಂಡಿರಬೇಕು. ಹೀಗಿದ್ದೂ ಅವರು ಮಾಂಸಾಹಾರದ ವಿಷಯ ಏನೂ ಮಾಡಲಿಲ್ಲ. ಇದಕ್ಕೆ ಕಾಲ ಪರಿಸ್ಥಿತಿಯ ಕಾರಣಗಳು ಇರಬಹುದು. ಹಲ ಶತಮಾನಗಳ ಜೈನ ಪರಂಪರೆ ಮಧ್ಯಮ ವರ್ಗಗಳ ಮೇಲೆ ಮಾಡಿಟ್ಟಿದ್ದ ಪರಿಣಾಮವನ್ನು ಸಹಸಾ ಬಿಡಿಸಲು ಸಾಧ್ಯವಾಗದೆ ಇದ್ದಿರಬಹುದು.

ಆದರೆ ಮಾಂಸಾಹಾರದಲ್ಲೇ ಮುಂದುವರಿದ ಜಾತಿಗಳೊಡನೆ ಸೋದರ್ಯ ಸ್ಥಾಪಿಸುವುದಕ್ಕೆ ಇದು ಆತಂಕವಾಗಿರಬೇಕು. ಇಲ್ಲದಿದ್ದರೆ ಸರ್ವರನ್ನೂ ಸ್ವೀಕರಿಸ ಹೊರಟ ಲಿಂಗಾಯತ ಚಳವಳಿ, ಕೇವಲ ಶೇಕಡಾ ೧೮-೨೦ ಜನಸಂಖ್ಯೆಯನ್ನು ಮಾತ್ರ ಸೆಳೆದುಕೊಳ್ಳಲು ಸಮರ್ಥವಾದದ್ದು ಸೋಜಿಗವೇ ಸೈ. ಕೇಳಿದವರಿಗೆ ಲಿಂಗಧಾರಣೆಯೇನೋ ಸಿಕ್ಕಿತು; ಆದರೆ ಅವರು ಲಿಂಗವಂತ ಸಮಾಜದಲ್ಲಿ ಸಮಾನ ಸ್ಥಾನ ಪಡೆಯಲಿಲ್ಲ. ಹೀಗೆ ಕ್ರೈಸ್ತ ಅಥವಾ ಇಸ್ಲಾಂ ಧರ್ಮದಂತೆಯೇ ಎಲ್ಲರನ್ನು ಒಳಗೊಳ್ಳುವ ಶಕ್ಯತೆಯನ್ನು ಗರ್ಭಿಸಿಕೊಂಡ ಒಂದು ಧರ್ಮ ಸೀಮಿತ ಕ್ಷೇತ್ರ ಮತ್ತು ಸೀಮಿತ ಅನುಯಾಯಿಗಳೂ ಇವುಗಳಿಂದ ತೃಪ್ತವಾಗಬೇಕಾಯಿತು.

ಮಾಂಸಾಹಾರ ಸಮಾಜದ ಕೆಳಸ್ತರಗಳಲ್ಲಿ ಇರುವವರಿಗೆ ಅನೇಕ ಕಾರಣಗಳಿಂದಾಗಿ ಅನಿವಾರ್ಯವಾಗಿರುತ್ತದೆ. ಅದು ಬರೇ ಬಾಯಿ ಚಪಲವಲ್ಲ. ಅದನ್ನು ವರ್ಜಿಸುವುದು ಒಳ್ಳೇ ಮಡಿವಂತಿಕೆಯಾಗಬಹುದು. ಆದರೆ ಶಾಕಾಹಾರ ಎಲ್ಲರಿಗೂ ನಿಲುಕುವಂಥಾದ್ದಲ್ಲ. ನಾವೆಣಿಸುವಂತೆ ಅದು ಅಗ್ಗವೂ ಅಲ್ಲ.

ಅಹಿಂಸೆ, ಮಾಂಸಾಹಾರ ವರ್ಜನೆ ಮತ್ತು ಇತರ ಮಡಿವಂತಿಕೆ ವಿಧಿ ನಿಷೇಧಗಳು ಭಾರತದ ಮೇಲೆ ಬೇರೆ ಪರಿಣಾಮಗಳನ್ನೂ ಮಾಡಿರಬಹುದು. ಬ್ರಾಹ್ಮಣರ ವಿದೇಶ ಗಮನಕ್ಕೆ ತಡೆಯೊಡ್ಡಿದ ಕಾರಣಗಳಲ್ಲಿ ಅದೊಂದೆಂಬಲ್ಲಿ ಸಂಶಯ ಕಾಣುವುದಿಲ್ಲ. ಜೈನ ಧರ್ಮ ಬೌದ್ಧ ಧರ್ಮದಂತೆ ವಿದೇಶಗಳಿಗೆ ಹಬ್ಬದಿರಲು ಕೂಡ ಅದು ಕಾರಣವಿರಬಹುದು. ಕರ್ಣಾಟಕದ ವರ್ತಕ ವರ್ಗ ಬಹುತರವಾಗಿ ಜೈನ ಮತ್ತು ಅನಂತರ ಲಿಂಗಾಯತ ಧರ್ಮದ ಅನುಯಾಯಿಗಳಾದುದು ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಅವರನ್ನು ಹಿಂದೆ ತಳ್ಳಿರಬಹುದು.

ಹಾಗೆ ವಿಚಾರಿಸಿದಲ್ಲಿ ಪ್ರಾಣಿವಧೆಯ ತ್ಯಾಗದಿಂದಲೇ ಯಾವುದೇ ಮಾನವ ಮೌಲ್ಯಕ್ಕೆ ಬಲಬರುವುದಿಲ್ಲ. ಇರುವೆಗಳಿಗೆ ಆಸ್ಪತ್ರೆ ಕಟ್ಟಿದ ಬೌದ್ಧರೂ ರಾತ್ರಿಯಲ್ಲಿ ಉಣ್ಣದ ಜೈನರೂ ಮಡಿ ಮಡಿ ಬ್ರಾಹ್ಮಣರೂ ಹಿಂಸ್ರ ಯುದ್ಧಗಳನ್ನು ಮಾಡಿದರು; ಮನುಷ್ಯರಿಗೆ ಮರಣದಂಡನೆ ವಿಧಿಸಿದರು; ಜನರನ್ನು ನಿರ್ದಯವಾಗಿ ಶೋಷಿಸಿದರು. ಮಾಂಸ ಭಕ್ಷಕ ಧರ್ಮಗಳೂ ಜಾತಿಗಳೂ, ಅಹಿಂಸಕ ಜಾತಿಗಳಷ್ಟೇ ಪರೋಪಕಾರ, ಕ್ಷಮೆ, ದಮೆ, ದಯೆ, ದಾಕ್ಷಿಣ್ಯಗಳನ್ನು ಪ್ರದರ್ಶಿಸಿದ್ದುಂಟು.

ಸಾಮಾನ್ಯರಿಗೆ ನಿಲುಕದ ಭಾಷೆ, ಎಟುಕದ ಅನ್ನ ಪಾನ, ಪಾಲಿಸಲು ಕಠಿನವಾದ ವಿಧಿ ನಿಷೇಧ ಬಾಹ್ಯಾಚಾರ ಇವು ಕೊನೆಯಲ್ಲಿ ಮನುಷ್ಯ ಮನುಷ್ಯರ ನಡುವೆ ಗೋಡೆ ಕಟ್ಟುತ್ತವೆ. ಅವರನ್ನು ದೂರ ದೂರ ಮಾಡುತ್ತವೆ. ■

# ಸಹಿಷ್ಣುತೆ

ಭಾರತದ ಗತೇತಿಹಾಸದಲ್ಲಿ ನಾವೆಲ್ಲರೂ ಹೆಮ್ಮೆ ಪಡುವ ಇನ್ನೊಂದು ಸಂಗತಿಯೆಂದರೆ ನಮ್ಮ ಪುರಾತನರ ಪರಧರ್ಮಸಹಿಷ್ಣುತೆ. ಇಲ್ಲಿ ಎಲ್ಲ ಮತಗಳಿಗೂ ಸ್ವಾಗತವಿತ್ತು; ಯಾರಿಗೂ ಇಂಥಾದ್ದೇ ಧರ್ಮವನ್ನು ಅನುಸರಿಸಬೇಕು ಎಂಬ ನಿರ್ಬಂಧವಿರಲಿಲ್ಲ; ಇಂಥಾ ದೇವರನ್ನೇ ಇಂಥಾ ರೀತಿಯಲ್ಲೇ ಆರಾಧಿಸಬೇಕೆಂದು ಒತ್ತಾಯ ಇರಲಿಲ್ಲ. ದೇವರೊಂದು ನಾಮ ಹಲವು; ಏಕೋ ದೇವಃ ಕೇಶವೋ ವಾ ಶಿವೋ ವಾ; ಹರಿ ಇದ್ದ, ಹರ ಇದ್ದ, ಹರಿಹರ ಇದ್ದ; "ಏಸೋ ಹೇ ಆರ್ಯ, ಏಸೋ ಅನಾರ್ಯ, ಹಿಂದೂ ಮುಸಲ್ಮಾನ, ಏಸೋ ಏಸೋ ಕ್ರಿಸ್ತಾನ"* ಈ ವಿಷಯದಲ್ಲಿ ನಾವು ಜಗತ್ತಿನಲ್ಲೇ ಅಪ್ರತಿಮರು.... ಇದು ವಿಚಾರ್ಯ.

ಮೊದಲನೆಯದಾಗಿ, ನಾವು ಅಪ್ರತಿಮ ಪರಧರ್ಮಸಹಿಷ್ಣುಗಳು ಎಂಬ ಮಾತು ನಿಜವಲ್ಲ. ಯಹೂದ್ಯ ಧರ್ಮವೊಂದನ್ನು ಬಿಟ್ಟರೆ ಪುರಾತನ ಕಾಲದಲ್ಲಿ ಪರಧರ್ಮ ಸಹಿಷ್ಣುತೆ ಅಂಥಾ ಅಪರೂಪ ಪದಾರ್ಥವಾಗಿರಲಿಲ್ಲ. ಕ್ರಿಸ್ತಪೂರ್ವ ರೋಮನ್ ಸಾಮ್ರಾಜ್ಯದಲ್ಲಿ ಧರ್ಮ ಸಹಿಷ್ಣುತೆ ಧಾರಾಳವಾಗಿತ್ತೆಂದು ಗಿಬ್ಬನ್ನನ ರೋಮನ್ ಸಾಮ್ರಾಜ್ಯದ ಅವನತಿ ಮತ್ತು ಪತನವನ್ನು ಕುರಿತ ಗ್ರಂಥದಿಂದ ತಿಳಿಯುತ್ತದೆ. ಭಾರತ, ಇರಾನ್‌ಗಳಿಂದ ಹೊರಟ ಮಿತ್ರ (ಮಿಥ್ರ) ಸಂಪ್ರದಾಯಕ್ಕೆ ಕೂಡ ರೋಮನ್ ಸಾಮ್ರಾಜ್ಯದಲ್ಲಿ ಆಶ್ರಯ ಸಿಕ್ಕಿತ್ತು. ಗ್ರೀಸ್ ದೇಶದಲ್ಲಿಯೂ ಧರ್ಮ ಸಹಿಷ್ಣುತೆ ಇತ್ತು. ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತಧರ್ಮ ಸ್ವೀಕರಿಸಿದವರ ಮೇಲೆ ದಬ್ಬಾಳಿಕೆ ಮಾರ್ಕಸ್ ಅರೇಲಿಯಸ್ಸನಂಥ ಕರುಣಾಳು ಮತ್ತು ಸಹಿಷ್ಣು ಸಮ್ರಾಟನ ಕೈಯಿಂದ ಆಗಿದ್ದರೆ, ಅದಕ್ಕೆ ಕ್ರೈಸ್ತ ಧರ್ಮವನ್ನು ಅಲ್ಲಿಗೆ ತಂದವರು ಇತರ ಧರ್ಮಗಳ-ದೇವತೆಗಳನ್ನು—ರೋಮನ್ನರ ಅನಾದಿ ದೇವತೆಗಳನ್ನೊಳಗೊಂಡು—ಧಿಕ್ಕರಿಸುವಂತೆ ಪ್ರೇರೇಪಿಸುತ್ತಿದ್ದದ್ದು ಕಾರಣವಾಗಿತ್ತು. ಅದು ರಾಷ್ಟ್ರೀಯತೆಯ, ರಾಷ್ಟ್ರನಿಷ್ಠೆಯ ಪ್ರಶ್ನೆಯಾಯಿತು.

ಎರಡನೆಯದಾಗಿ ನಾವು ಅಂಥಾ ನಿಷ್ಕಳಂಕ ಸಹಿಷ್ಣುಗಳಾಗಿರಲಿಲ್ಲ. ಮೌರ್ಯ ಸಾಮ್ರಾಜ್ಯದ ಪತನದ ನಂತರ ಅಧಿಕಾರಕ್ಕೆ ಬಂದ ಪುಷ್ಯಮಿತ್ರ ಶುಂಗನು ಶಾಕಲ ನಗರದಲ್ಲಿ ಒಂದು ಶಾಸನ ಹೊರಡಿಸಿ, ಬೌದ್ಧ ಭಿಕ್ಷುಗಳನ್ನು ಕೊಂದವರಿಗೆ ಪ್ರತಿ ರುಂಡಕ್ಕೆ ನೂರು

---

* ಕವಿ ರವೀಂದ್ರರ ಒಂದು ಗೀತದಿಂದ.

ಹೊನ್ನಿನಂತೆ ಬಹುಮಾನವನ್ನು ಘೋಷಿಸಿದನೆಂದು ಬೌದ್ಧರ 'ದಿವ್ಯಾವದಾನ' ಎಂಬ ಗ್ರಂಥದಲ್ಲಿ ಹೇಳಿದೆ.

ಐನೂರು ವರ್ಷಗಳ ನಂತರ ತಮಿಳುನಾಡಿನಲ್ಲಿ ಆರಂಭವಾದ ಹಿಂದೂ ಪುನರುಜ್ಜೀವನದಲ್ಲಿ ಜೈನರನ್ನೂ ಬೌದ್ಧರನ್ನೂ ಮೂಲೋತ್ಪಾಟನೆ ಮಾಡುವುದಕ್ಕೆ ಶೈವರೂ ವೈಷ್ಣವರೂ ಒಂದಾದರು; ಈ ಹಿಂದೂ ಕ್ರೋಧ ಸಿತ್ತನ್ನವಾಸಲ್ಲಿನ ಗುಹೆಯ ಸುಂದರ ಜೈನ ಕಲೆಯನ್ನು ಹಾಳುಗೆಡಹಲು ಹಿಂದೆಗೆಯಲಿಲ್ಲ. ಮತ್ತೆ ಐನೂರು ವರ್ಷಗಳ ನಂತರ ಅದೇ ತಮಿಳು ನಾಡಿನಲ್ಲಿ ವೈಷ್ಣವ-ಶೈವ ಸ್ಪರ್ಧೆಯಲ್ಲಿ ಶೈವರಾದ ಚೋಳರಾಜರ ಹಿಂಸೆಯಿಂದಾಗಿ ರಾಮಾನುಜಾಚಾರ್ಯರು ಕರ್ನಾಟಕಕ್ಕೆ ಬಂದು ಆಶ್ರಯ ಪಡೆಯಬೇಕಾಯಿತು.

ಕರ್ನಾಟಕದಲ್ಲಿ ಅದೇ ಸುತ್ತಮುತ್ತ ಶೈವಧರ್ಮದ ಪುನರುಜ್ಜೀವನ ಪರ್ವದಲ್ಲಿ ಅಸಹಿಷ್ಣುತೆಗೆ ಕೊರತೆ ಇರಲಿಲ್ಲ. ಮಡಿವಾಳ ಮಾಚಿದೇವನು ಶೈವೇತರ ಬಟ್ಟೆಗಳನ್ನು ಮಡಿ ಮಾಡುತ್ತಿರಲಿಲ್ಲ; ಶೈವರ ಮಡಿ ಬಟ್ಟೆಗಳನ್ನು ಒಯ್ಯುವಾಗ ಶೈವೇತರರು ತನ್ನನ್ನು ಮುಟ್ಟಿದರೆ ಅವರನ್ನು ವಧಿಸುವುದಾಗಿ ಹೇಳುತ್ತಿದ್ದ. ಅನಂತರದ ಧಾರ್ಮಿಕ ಸ್ಪರ್ಧೆಯಲ್ಲಿ ಜೈನರ ಮೇಲೆ ಸಾಕಷ್ಟು ದಬ್ಬಾಳಿಕೆ ನಡೆದಿರಬೇಕು. ರಾಘವಾಂಕನ ಒಂದು ಕಾವ್ಯ ಒಂದು ಜೈನ ದೇಗುಲವನ್ನು ಲಿಂಗಪ್ರತಿಷ್ಠೆಯ ಮೂಲಕ ಶಿವಾಲಯವಾಗಿ ಮಾಡಿದ್ದನ್ನು ಬಣ್ಣಿಸುತ್ತದೆ. ಅನೇಕ ದೇವಾಲಯಗಳಲ್ಲಿ ಮೂಲದಲ್ಲಿದ್ದ ಒಂದು ಪಂಥದ ಪೂಜಾ ಬಿಂಬವನ್ನು ಕಿತ್ತು ಇನ್ನೊಂದರ ಬಿಂಬವನ್ನು ಪ್ರತಿಷ್ಠಿಸಿದ ನಿಸ್ಸಂದಿಗ್ಧ ಕುರುಹುಗಳು ಕಾಣಿಸುತ್ತವೆ. ಇಡೀ ಜಗ್ಗಾಟದಲ್ಲಿ ಜೈನರಿಗೆ ಎಲ್ಲಕ್ಕಿಂತ ಹೆಚ್ಚು ನಷ್ಟವಾಯಿತು. ಇವೆಲ್ಲ ಸಹಿಷ್ಣುತೆಯ ಆದರ್ಶ ಪಾಲನೆಯಲ್ಲ.

ಸಾಮಾನ್ಯವಾಗಿ ರಾಜರು ಎಲ್ಲಾ ಧರ್ಮಗಳನ್ನು ಸಮದೃಷ್ಟಿಯಿಂದ ನೋಡಿದರೂ ಅದು ಯಾವಾಗಲೂ ಹಾಗೆಯೇ ಇತ್ತೆನ್ನಲು ಬಾರದು. ಪುಷ್ಯಮಿತ್ರನ ಮತ್ತು ಚೋಳರ ವಿಚಾರ ಮೇಲೆ ಹೇಳಿದೆ. ಪ್ರತಿಲೋಮ ವಿವಾಹ ಸಂಬಂಧ ಹೂಡಿದ ಬ್ರಾಹ್ಮಣ ಮಧುವಯ್ಯ ಅಂತ್ಯಜ ಹರಳಯ್ಯರ ವಧೆಗೆ ಆಜ್ಞಾಪಿಸಿದ ಬಿಜ್ಜಳ ರಾಜನ ಕೃತಿ ಧಾರ್ಮಿಕ ಸಹಿಷ್ಣುತೆಯದಾಗಿರಲಿಲ್ಲ. ವರ್ಣಸಂಕರವನ್ನು ತಪ್ಪಿಸುವ ಕರ್ತವ್ಯವನ್ನು ಅವನು ಪಾಲಿಸಿದನೆಂದೇ ಇಟ್ಟುಕೊಂಡರೂ ವೈದಿಕ ಧರ್ಮದಿಂದ ಹೊರಬಿದ್ದು ಅವೈದಿಕ ಶೈವ ಮತವನ್ನು ಆರಿಸಿಕೊಂಡಿದ್ದ ಆ ಇಬ್ಬರ ಗೊಡವೆಗೆ ಹೋಗುವುದು ಅವನ ಕರ್ತವ್ಯವಾಗಿರಲಿಲ್ಲ. ಹಾಗೆಯೇ ಬಂಗಾಲದಲ್ಲಿ ಸೇನರಾಜರು ಪ್ರಬಲವಾಗಿದ್ದ ಬೌದ್ಧಧರ್ಮವನ್ನು ಹತ್ತಿಕ್ಕಿ ವೈದಿಕ ಧರ್ಮಕ್ಕೆ ಪ್ರೋತ್ಸಾಹ ಕೊಟ್ಟರೆಂಬುದು ನಿರಾಕರಿಸಲಾಗುವುದಿಲ್ಲ.

ಇದರಲ್ಲೆಲ್ಲ ಧಾರ್ಮಿಕ ನಂಬಿಕೆಗಳ ಸಂಗಡ ರಾಜಕೀಯದ ಇರಾದೆಗಳೂ ಇದ್ದವೆಂದು ತೋರುತ್ತದೆ. ಬೌದ್ಧರಾದ ಮೌರ್ಯರನ್ನು ಕೆಡವಿದ ವೈದಿಕ ಮತಾನುಯಾಯಿ ಪುಷ್ಯಮಿತ್ರನಿಗೆ ಬೌದ್ಧರ ವಿರೋಧ ಇದ್ದಿರಬೇಕು; ಆದ್ದರಿಂದಲೇ ಅವನ ಅಕೃತ್ಯದಂತೆ ಕಾಣುವ ಕೃತಿಗಳು. ಕಲ್ಯಾಣಪಟ್ಟಣದಲ್ಲಿ ಹನ್ನೆರಡು ಸಾವಿರ ಜಂಗಮರನ್ನು ಯಾಕೆ ಸಾಕುತ್ತಿದ್ದಾರೆ ಎಂಬ

ರಾಜಕೀಯ ಶಂಕೆ ಬಿಜ್ಜಳನನ್ನು ಕಾಡುತ್ತಿದ್ದಿರಬೇಕು (ಅವನೂ ಪುಷ್ಯಮಿತ್ರನಂತೆ ಚಾಳುಕ್ಯರಿಂದ ರಾಜ್ಯವನ್ನು ಪಿತೂರಿಯಿಂದ ಕಸಿದುಕೊಂಡವನಲ್ಲವೇ? ಆದ್ದರಿಂದ ಅವನಿಗೆ ಸಂದಿಗೊಂದಿಗಳಲ್ಲಿ ಪಿತೂರಿಯ ವಾಸನೆ ಬರುತ್ತಿತ್ತೋ ಏನೊ) ಅದಕ್ಕೋಸ್ಕರವೇ ಅವನು ವರ್ಣಸಂಕರದ ನೆವದಿಂದ ಉದೀಯಮಾನ ಲಿಂಗಾಯತ ಶಕ್ತಿಯನ್ನು ಮೆಟ್ಟಿ ಹಾಕಲು ಈ ಹೆಜ್ಜೆ ಇಟ್ಟಿರಬಹುದು.

ಚೀನದ ಮೂರು ಕಪಿಗಳಂತೆ ಕೆಟ್ಟದ್ದನ್ನು ನೋಡೆ, ಕೆಟ್ಟದ್ದನ್ನು ಕೇಳೆ, ಕೆಟ್ಟದ್ದನ್ನು ಆಡೆ ಎನ್ನುವ ನಮ್ಮ ದಾಕ್ಷಿಣ್ಯಪರ ಇತಿಹಾಸ ಲೇಖಕರು ಏನೇ ಹೇಳಲಿ ಹೇಳದಿರಲಿ, ಧರ್ಮಗಳ ಹುಟ್ಟಿನಲ್ಲಿ ಅಲ್ಲದಿದ್ದರೂ ವಿಸ್ತರಣೆ ಮತ್ತು ಅವನತಿಯಲ್ಲಿ ರಾಜಕೀಯವೂ ಸೇರಿ ಅನೇಕ ಸಮ್ಮಿಶ್ರ ಹೇತುಗಳು ಕೆಲಸ ಮಾಡುತ್ತಿರುತ್ತವೆ. ರೋಮನ್ ಸಾಮ್ರಾಜ್ಯದಲ್ಲಿ ಆದದ್ದು ಅದೇ, ಇಲ್ಲಿಯೂ ಸ್ವಲ್ಪ ಪರಿಮಿತಿಯಲ್ಲಿ ಅದು ನಡೆದಿರಬೇಕು.

ಆದರೆ ಧರ್ಮಗಳ ವಿಸ್ತರಣೆ ಮತ್ತು ನಿಗ್ರಹದಲ್ಲಿ ಪಾಶ್ಚಾತ್ಯ ದೇಶಗಳಲ್ಲಾದಷ್ಟು ಉಗ್ರವಾಗಿ ಇಲ್ಲಿ ಹಿಂಸಾಚಾರ, ವಿನಾಶಗಳು ಒದಗಿಲ್ಲವೆಂಬುದನ್ನು ಒಪ್ಪಬೇಕು. ರೋಮನ್ ಸಾಮ್ರಾಜ್ಯದಲ್ಲಿ ಕ್ರಿಸ್ತಶಕದ ಮೊದಲ ಮೂರು ಶತಮಾನಗಳಲ್ಲಿ ಕ್ರೈಸ್ತರ ವಿರುದ್ಧ ಮತ್ತು ಅನಂತರದ ಮೂರು ಶತಮಾನಗಳಲ್ಲಿ ಪ್ರಬಲರಾದ ಕ್ರೈಸ್ತರಿಂದ ಮೂಲಧರ್ಮದ ವಿರುದ್ಧ ಆದಂಥ ಅತ್ಯಾಚಾರ, ಪೂಜಾಗೃಹಗಳ ಧ್ವಂಸಕಾರ್ಯ ಇಲ್ಲಿ ಆಗಲಿಲ್ಲ; ಆದದ್ದು ಅದರೊಡನೆ ಹೋಲಿಸಿದರೆ ಸೊಳ್ಳೆ ಕಡಿತ ಮಾತ್ರ ಎನ್ನಬಹುದು. ಇಸ್ಲಾಂ ವಿಸ್ತರಣೆಯೊಡನೆಯೂ ಹಿಂಸಾಚಾರಗಳಾದವು. ಇಲ್ಲಿ ನಾವು ನಮ್ಮದಲ್ಲದ ಮತಗಳನ್ನು, ಅವುಗಳ ಸ್ಥಾಪಕರನ್ನು, ಅನುಯಾಯಿಗಳನ್ನು ಜರೆಯುವುದರಲ್ಲಿ ದೈತ್ಯ, ರಾಕ್ಷಸ, ನಾರಕಿ ಇತ್ಯಾದಿ ಅತಿರೇಕದ ಭಾಷೆಯನ್ನು ಉಪಯೋಗಿಸಿದ್ದೇವೆಯೇ ಹೊರತು ಆ ದೈತ್ಯರನ್ನು ಕೊಲ್ಲುವ ಕೆಲಸಕ್ಕೆ ಹೆಚ್ಚಾಗಿ ಇಳಿಯಲಿಲ್ಲ. ಅದನ್ನು ದೇವರಿಗೇ ಬಿಟ್ಟೆವು.

ಇದಕ್ಕೆ ಕಾರಣ ನಮ್ಮಲ್ಲಿರುವ ಯಾವೊಂದು ಸದ್ಗುಣವೇ ಎಂಬುದು ಮಾತ್ರ ಸಂಶಯಾಸ್ಪದ. ಯೋಚಿಸಿದರೆ, ನಮ್ಮ ದೇಶ ಜಗತ್ತಿನ ಕೋಲಾಹಲಕರ ಧಾರ್ಮಿಕ ಘಟನೆಗಳ ಬಿರುಗಾಳಿಗೆ ಕೇಂದ್ರವಾಗಿದ್ದ ಪಶ್ಚಿಮ ಏಶಿಯದಿಂದ ದೂರದಲ್ಲಿ ಇದ್ದದ್ದು ನಮ್ಮನ್ನು ಬಹುಮಟ್ಟಿಗೆ ಕಾಪಾಡಿತೆನ್ನಿಸುತ್ತದೆ. ಅಲ್ಲಿಂದ ಹೊರಟ ಯಾವೊಂದು ಬಿರುಗಾಳಿ ಇಲ್ಲಿ ತಲುಪುವುದರೊಳಗೆ ಸತ್ವ ಕಳೆದುಕೊಂಡುಬಿಡುತ್ತಿತ್ತು. ಹೆಚ್ಚು ಕಡಿಮೆ ಇದೇ ಸ್ಥಿತಿಯಲ್ಲಿದ್ದ ಚೀನ ಕೂಡ ರಾಜಕೀಯ, ತಾತ್ವಿಕ ದಬ್ಬಾಳಿಕೆ ಎಷ್ಟಿದ್ದರೂ ಧಾರ್ಮಿಕ ದಬ್ಬಾಳಿಕೆಯ ಪರಂಪರೆ ಬೆಳೆಸಿಕೊಳ್ಳಲಿಲ್ಲ—ಕಮ್ಯುನಿಸಂ ಬರುವವರೆಗೆ.

ಭಾರತದಲ್ಲಿ ಕ್ರಿಸ್ತನಿಗಿಂತ ಪೂರ್ವದಲ್ಲೇ ರೂಢಮೂಲವಾಗಿದ್ದ ಜಾತಿಪದ್ಧತಿ ಇಲ್ಲಿಯೇ ಉದ್ಭವಿಸಿದ ಯಾವುದೇ ಧರ್ಮದ ದಬ್ಬಾಳಿಕೆಯಿಂದ ನಮ್ಮನ್ನು ರಕ್ಷಿಸಿದ ಒಂದಂಶವಾಗಿತ್ತು. ಹಿಂದೂಧರ್ಮ ಎಂದು ಇಂದು ನಾವು ಕರೆಯುವ ಜೀವನಧಾರೆಯಲ್ಲಿ ಯಾರು ಬೇಕಾದರೂ ಬಂದು ಕೂಡಬಹುದು. ಆದರೆ ಹಿಂದೂ ಧರ್ಮ ಅವರನ್ನು ಜಗಿದು ನುಂಗಿ

ಜೀರ್ಣಿಸಿ ಸಮೀಕರಿಸಿಕೊಳ್ಳುವುದಿಲ್ಲ; ಆದರೂ ಹತ್ತು ಹಲವು ಜಾತಿಗಳ ಪೈಕಿ ಒಂದಾಗಿ ಇರುತ್ತಾರಷ್ಟೇ. ಅವರು ಅವರೇ ತಂದ ದೇವರನ್ನು ನಂಬುತ್ತ ಇರಬಹುದು (ಪಾರ್ಸಿಗಳಂತೆ) ಅಥವಾ ನಮ್ಮ ಯಾವೊಂದು ಅಥವಾ ಹೆಚ್ಚು ದೇವರನ್ನು ನಂಬಬಹುದು (ಶಕ, ಹೂಣ ಮೊದಲಾದವರಂತೆ). ಆದರೆ ಅವರು ನಮ್ಮಲ್ಲಿ ಒಂದಾಗಿ ಏಕ ಜೀವವಾಗುವುದಿಲ್ಲ. ನಂಬಿಕೆಗಳೇ ಬೇರೆ, ಜಾತಿಗಳೇ ಬೇರೆ. ಯಾರನ್ನಾದರೂ ನಮ್ಮ ಧಾರ್ಮಿಕ ನಂಬಿಕೆಗಳಿಗೆ ಒತ್ತಾಯದಿಂದ ಸೇರಿಸಿಕೊಳ್ಳಬೇಕಾದರೆ ಬಲವಾದ ಪ್ರೇರಣೆ ಯಾವುದು? ನಮ್ಮ ನಂಬಿಕೆಗಳಲ್ಲಿ ಮಾತ್ರವಲ್ಲ, ನಮ್ಮ ಸಮಾಜದಲ್ಲಿಯೂ ಅವರನ್ನು ನುರಿಸಿ ಸೇರಿಸಿಕೊಂಡು ನಮ್ಮ ಗುಂಪನ್ನು ದೊಡ್ಡದನ್ನಾಗಿ ಮಾಡಿಕೊಳ್ಳುವುದು. ಜಾತಿಪದ್ಧತಿಯಲ್ಲಿ ಇದಕ್ಕೆ ಅವಕಾಶವಿಲ್ಲದ್ದರಿಂದ ಬಲಾತ್ಕಾರಕ್ಕೆ ತಕ್ಕ ಇರಾದೆಯೇ ಇಲ್ಲ. ಅವರಿಗೆ ಬೇಕಾದ ಹಾಗೆ ಅವರು ಇರುತ್ತಾರೆ; ನಮಗೆ ಸರಿದೋರಿದ ಹಾಗೆ ನಾವು. ಅವರನ್ನು ನಾವು ನಮ್ಮ ಕುಲದಲ್ಲಿ ಸೇರಿಸಿಕೊಳ್ಳುವುದಿಲ್ಲವೆಂದ ಮೇಲೆ ಅವರು ಏನು ನಂಬಿದರೆ ನಮಗೇನು? ಈ ಮನೋವೃತ್ತಿಗೆ ಸಹಿಷ್ಣುತೆ ಎನ್ನುವುದು ತೀರ ದೊಡ್ಡ ಹೆಸರು. ಉದಾಸೀನ ಎನ್ನುವುದು ಹೆಚ್ಚು ಸರಿಯಾದ ಅಭಿಧಾನ.

ಜಾತಿಯನ್ನು ಮೀರಿ ನಿಲ್ಲಬಯಸಿದ ಎರಡು ಮಹಾ ಧರ್ಮಗಳು ಈ ದೇಶದಲ್ಲಿ ಉದಯವಾದವು. ಆದರೆ ಅವೆರಡರಲ್ಲಿಯೂ ಅಹಿಂಸೆ ಒಂದು ಮೂಲಭೂತ ವಿಶ್ವಾಸವಾಗಿತ್ತು. ಆದ್ದರಿಂದ ಬೌದ್ಧ, ಜೈನ ಧರ್ಮಗಳು ಬಲಾತ್ಕಾರದಿಂದ ಮತಾಂತರ ಮಾಡಿಕೊಳ್ಳುವ ಪ್ರಶ್ನೆಯೇ ಇರಲಿಲ್ಲ. ಕಾಲಾಂತರದಲ್ಲಿ ಅವೂ ಜಾತಿಗಳನ್ನು ಒಪ್ಪಿದವು. ಸಾಮಾಜಿಕ ಬದಲಾವಣೆಯ ಉಪಕರಣಗಳಾಗಿ ಅವು ನಿರರ್ಥಕವಾದವು.

ಸಹಿಷ್ಣುತೆ ಎಂಬ ದಪ್ಪ ಹೆಸರಿನಿಂದ ನಾವು ಕರೆಯುವ ಈ ಉದಾಸೀನ ಭಾವದ ಫಲವಾಗಿ ನಮ್ಮಲ್ಲಿ ಧಾರ್ಮಿಕ ರಕ್ತಪಾತ ಕಡಿಮೆಯಾಯಿತು ನಿಜ. ಆದರೆ ನಮ್ಮ ನೆರೆಹೊರೆಯವರ ಆಚಾರ ವಿಚಾರಗಳಲ್ಲಿ ಮಾತ್ರವಲ್ಲ, ಒಳಿತು ಕೆಡುಕುಗಳಲ್ಲಿಯೂ ನಮ್ಮನ್ನು ಅದು ಅನಾಸಕ್ತರನ್ನಾಗಿ ಮಾಡಿದೆ. ನಮ್ಮ ಭಾವನಾತ್ಮಕ ಐಕ್ಯ ಎನ್ನುವುದು ಬರೀ ಬಾಯಿ ಬಡಾಯಿ ಆಗಿ ಉಳಿದಿದೆ.

ನಾವು ಸಹಿಷ್ಣುತೆ ಎಂದು ಕರೆಯುವ ಈ ಮನೋವೃತ್ತಿ ನಮ್ಮನ್ನು ಯಾವುದೇ ನೈತಿಕ ಅಥವಾ ವೈಚಾರಿಕ ನಿಲುವನ್ನು ದೃಢವಾಗಿ ನೆಚ್ಚಿಕೊಳ್ಳದಂತೆ ಮಾಡಿದೆ. ಯಾವ ನಿಲುವಿನ ಬಗ್ಗೆಯೂ ನಮ್ಮ ಭಾವನೆಗಳು ನಿಮಿರಿ ನಿಲ್ಲುವುದಿಲ್ಲ. ಹರಿ ಮೇಲೆಂದೆವು; ಹರ ಮೇಲೆಂದೆವು; ಕೆಲ ಕಾಲ ಕೂಗಾಡಿಕೊಂಡೆವು; ಆಮೇಲೆ ಹರಿಯೇನು, ಹರನೇನು ಎಲ್ಲಾ ಒಂದೇ, ಹರಿಹರ ಎನ್ನೋಣ ಎಂದೆವು. ಒಳ್ಳೇ ಮಧ್ಯಪಂಚಾತಿಕೆಯೆ ಸೈ. ಆದರೆ ಹರಿಯೆಂಬುದರ ಭಾವಪ್ರತಿಮೆ ಬೇರೆ, ಹರ ಎಂಬುದರ ಭಾವ ಪ್ರತಿಮೆ ಬೇರೆ. ರಾಜಿ ಪಂಚಾತಿಕೆಯಿಂದ ಎರಡೂ ಪ್ರತಿಮೆಗಳು ನುಸುಳಿ ಹೋಗುತ್ತವೆ. ಉತ್ಕಟತೆ ಉಳಿಯುವುದಿಲ್ಲ.

ದೈವಿಕ ವಿಶ್ವಾಸಗಳು, ಪ್ರತಿಮೆಗಳು ಕೇವಲ ಮನಸ್ಸನ್ನು ಏಕಾಗ್ರಗೊಳಿಸುವುದಕ್ಕೆ

ಕಾಲ್ಪನಿಕ ಬಿಂದುಗಳು ಎಂಬುದು ಸರಿಯಲ್ಲ. ನಾವು ಏನನ್ನು ನಂಬುತ್ತೇವೋ ಅದೇ ಆಗುತ್ತೇವೆ. ಆ ನಂಬಿಕೆಯ ಮೂರ್ತಿ ಚಂಚಲ ಅಥವಾ ಅಸ್ಪಷ್ಟವಾದರೆ ನಮ್ಮ ಬದುಕಿನ ಎಲ್ಲ ನಿಲುವುಗಳೂ ಅಸ್ಪಷ್ಟವೇ ಆಗುತ್ತವೆ. ಅಂದರೆ ಏನನ್ನೂ ನಾವು ಗಟ್ಟಿಯಾಗಿ ನಂಬುವುದಿಲ್ಲ; ಅಥವಾ ಎಲ್ಲವನ್ನೂ ನಂಬುವ 'ಜಾಣ'ರಾಗುತ್ತೇವೆ.

ಈಗ ನಮಗೆ ಆಗಿರುವುದು ಇದೇ. ನಾವು ಏಕಕಾಲದಲ್ಲಿ ಉತ್ಕಟ ಆಸ್ತಿಕರೂ ಉತ್ಕಟ ನೈತಿಕ ಪಾಷಂಡಿಗಳೂ ಆಗಿರಬಲ್ಲೆವು. ಏಕಕಾಲದಲ್ಲಿ ಜಾತಿನಿಷ್ಠರೂ ಜಾತ್ಯತೀತರೂ ಆಗಿರಬಲ್ಲೆವು. ಬಂಡವಳಿಗರ ಹಿತೈಷಿಗಳೂ ಸಮಾಜವಾದಿಗಳೂ ಆಗಿರಬಲ್ಲೆವು; ಪ್ರಜಾಸತ್ತೆಯ ಭಕ್ತರೂ ಇಂದಿರಾಗಾಂಧಿಯವರ ಭಕ್ತರೂ ಆಗಿರಬಲ್ಲೆವು. ಇಂದಿನ ಪಕ್ಷಾಂತರಗಳು ಕೂಡ ನಿಶ್ಚಿತವಾದ ನಂಬಿಕೆಗಳ ಅಭಾವದ ವ್ಯಕ್ತ ಲಕ್ಷಣಗಳು. ನಾವು ಸಹಿಷ್ಣುಗಳು. ಅನ್ಯಾಯಗಳನ್ನೂ ಅವ್ಯಾಪಾರಗಳನ್ನೂ ನಿರ್ವಿಕಾರವಾಗಿ ಸಹಿಸುತ್ತೇವೆ. ನಮ್ಮ ಪಾಲಿಗೆ ಸತ್-ಅಸತ್‌ಗಳ ನಡುವಣ ಗೆರೆ ಮಸಕಾಗುತ್ತ ಹೋಗಿ ಮಾಯವಾಗಿಬಿಟ್ಟಿದೆ.

ಖಚಿತವಾದ, ಪ್ರಾಮಾಣಿಕವಾದ ನಂಬಿಕೆಗಳು ಒಂದಿಷ್ಟು ಅಸಹನೆಯಿಂದ ಕೂಡಿರುತ್ತವೆ. ಆ ನಂಬಿಕೆಗೆ ಮಾರಕವಾದ ಗಂಡಾತರ ಬಂತೆಂದು ತೋರಿದಾಗ ಅದರ ವಿರುದ್ಧ ಎದ್ದು ಹೋರಾಡಲು, ಹಿಂಸೆ ಮಾಡಲು ಕೂಡ ಅಣಿಯಾಗುತ್ತದೆ.

ಅಸಹಿಷ್ಣು ಜನಾಂಗಗಳನ್ನು ತೆಗಳಿ ಆಡುವಾಗ ನಾವು ಇದನ್ನು ಮರೆಯುತ್ತೇವೆ. ಪರದೇಶಗಳಲ್ಲಿನ ಜನರ ಐಕ್ಯವನ್ನು ಕೊಂಡಾಡುತ್ತ ನಮ್ಮವರ ಅನೈಕ್ಯವನ್ನು ಕೂಡ ಅದೇ ಬಾಯಿಯಿಂದ ನಾವು ತೆಗಳಿಕೊಳ್ಳುತ್ತೇವೆ. ಪರದೇಶಗಳಲ್ಲಿ ಕಾಣಿಸುವ ಐಕ್ಯದ ತಳಹದಿಯಲ್ಲಿ ಒಂದಾನೊಂದು ಕಾಲದ ಧಾರ್ಮಿಕ ಅಸಹಿಷ್ಣುತೆ, ಹಿಂಸೆಯಿಂದ ಸ್ಥಾಪಿಸಲ್ಪಟ್ಟ ಏಕ ಜಾತೀಯತೆ—ಹೊಮೊಜೀನಿಯಿಟಿ—ಇದೆ ಎಂಬುದನ್ನೂ ಮರೆಯುತ್ತೇವೆ. ಈ ಏಕ ಜಾತೀಯತೆಯಿಂದಾಗಿ ಅವರಲ್ಲಿ ಇಂದು ಯಾವೊಂದು ನೈತಿಕ ಅಥವಾ ಭಾವನಾತ್ಮಕ ಪ್ರಶ್ನೆಯ ಬಗ್ಗೆ ಸುಮಾರಾಗಿ ಏಕಪ್ರಕಾರ ಪ್ರತಿಕ್ರಿಯೆ ಉದ್ಭವಿಸುತ್ತದೆ. ಕ್ರೈಸ್ತಧರ್ಮದ ದೈವತಾಂಗದ ಬಗ್ಗೆ ಇಂದು ನಂಬಿಕೆ ಉಳಿದಿರಲಿಕ್ಕಿಲ್ಲ; ಆದರೆ ಅದರ ಛತ್ರಛಾಯೆಯಲ್ಲಿ ರೂಢವಾದ ಈ ಏಕಮುಖ ಪ್ರತಿಕ್ರಿಯೆ ಅವರಲ್ಲಿ ಸ್ವಪ್ರಚೋದಿತವಾಗಿರುವುದರಿಂದ ನಾವು ಐಕ್ಯವೆಂದು ಕರೆಯುವ ಗುಣ ಅಲ್ಲಿ ಪ್ರಬಲವಾಗಿದೆ.

■

# ಆಜ್ಞಾಪಾಲನೆ ಮನುಷ್ಯ ಸ್ವಭಾವವೆ?

**ಪಾ**ಕಿಸ್ತಾನಿ 'ಯುದ್ಧಾಪರಾಧಿ'ಗಳು ಬಾಂಗ್ಲಾದೇಶದಲ್ಲಿ ೩೦ ಲಕ್ಷ ಜನರನ್ನು ಚಿತ್ರಹಿಂಸೆ ಮಾಡಿ ಕೊಂದರು. ಪಾಕಿಸ್ತಾನಿ ಸೈನ್ಯ ಶರಣಾಗತವಾಗುವ ಕೆಲವೇ ಗಂಟೆಗಳ ಮೊದಲು ಬಾಂಗ್ಲಾದ ಪಟ್ಟಣಗಳಲ್ಲಿ ನೂರುಗಟ್ಟಳೆಯಲ್ಲಿ ಬೌದ್ಧಿಕ ಜನರನ್ನು ಹಿಡಿದು ಚಿತ್ರವಧೆ ಮಾಡಿ ಗುಂಡಿಗಳಲ್ಲಿ ಹುಗಿದರು.

ಈ ಅಪರಾಧಗಳಿಗೆ ಕಾರಣರಾದವರನ್ನು ವಿಚಾರಣೆಗೆ ಒಳಪಡಿಸಿ ತಕ್ಕ ಶಿಕ್ಷೆ ಕೊಡಬೇಕು ಎಂದು ಬಾಂಗ್ಲಾದೇಶದ ಜನತೆ ಹೇಗೋ ಹಾಗೆ ನಮ್ಮ ದೇಶದ ಜನಸಾಮಾನ್ಯರೂ ಅಪೇಕ್ಷಿಸುತ್ತಾರೆ.

ಇದು ಸರಿಯೋ ತಪ್ಪೋ, ಈ ಕ್ರೂರ ವ್ಯಕ್ತಿಗಳನ್ನು ದಂಡಿಸುವುದು ಅಗತ್ಯವೋ ಅಲ್ಲವೋ ಎಂಬುದು ಬೇರೆ ಸಂಗತಿ. ಯುದ್ಧಾಪರಾಧಗಳ ವಿಚಾರಣೆ ಈಗ ಹೊಸ ಸಂಗತಿಯಾಗಿ ಉಳಿದಿಲ್ಲ. ಎರಡನೇ ಮಹಾಯುದ್ಧದಲ್ಲಿ ಘೋರ ಅನ್ಯಾಯಗಳನ್ನು ಮಾಡಿದ ಜರ್ಮನ್ ನಾಜಿ ಮುಖಂಡರನ್ನು ವಿಚಾರಣೆಗೊಳಪಡಿಸಿ ದಂಡನೆಗೊಳಪಡಿಸಿದರು. ಜಪಾನಿ 'ಯುದ್ಧಾಪರಾಧಿ'ಗಳ ವಿಚಾರಣೆಯೂ ಗೆದ್ದ ರಾಷ್ಟ್ರಗಳ ಪ್ರತಿನಿಧಿಗಳಿಂದ ಕೂಡಿದ 'ನ್ಯಾಯಾಲಯ'ಗಳಲ್ಲಿ ಆಯಿತು. ಕೆಲವರನ್ನು ಗಲ್ಲಿಗೇರಿಸಿದ್ದೂ ಆಯಿತು.

ಇದೀಗ ಇತಿಹಾಸದ ಮಾತಾಗಿದೆ. ಭವಿಷ್ಯತ್ತಿನಲ್ಲಿಯೂ ಬಹುಶಃ ಇಂಥ ಕಾರ್ಯಗಳೂ (ನಾಜಿಗಳು ೬೦ಲಕ್ಷ ಯಹೂದ್ಯರನ್ನು ಅಮಾನುಷವಾಗಿ ಕೊಲೆ ಮಾಡಿದ್ದರು) ಅವುಗಳಿಗಾಗಿ ವಿಚಾರಣೆಗಳೂ ನಡೆದೇ ನಡೆಯುವವೆಂದು ನಂಬಬಹುದು. ಪ್ರಶ್ನೆ ಅದಲ್ಲ. ಆದರೆ ನಿತ್ಯಜೀವನದಲ್ಲಿ ಸಾಮಾನ್ಯರಾಗಿ ಕಾಣುವ ವ್ಯಕ್ತಿಗಳು ಹೀಗೇಕೆ ಹಿಂಸೆ ಮಾಡುತ್ತಾರೆ? ಅವರ ಆತ್ಮಸಾಕ್ಷಿ ಅವರನ್ನು ತಡೆಯುವುದಿಲ್ಲವೇ?

ಈ ಬಗೆಯ ಹಿಂಸಾಚಾರಗಳನ್ನು ಮಾಡಿದವರ ವಿಚಾರಣೆ ನಡೆದಾಗ ಅವರು ಸಾಮಾನ್ಯವಾಗಿ ಕೊಡುವ ಸಬೂಬೆಂದರೆ, 'ಮೇಲಿನವರ ಅಪ್ಪಣೆ' ಎಂಬುದು. ನಾಜಿ ಹತ್ಯಾಕಾರಿ ಅಡಾಲ್ಫ್ ಐಕ್‌ಮನ್ನನ ವಿಚಾರಣೆ ನಡೆದಾಗ ಅವನು ಇದೇ ಸಬೂಬು ಹೇಳಿದ. ದಕ್ಷಿಣ ವಿಯತ್‌ನಾಮ್‌ನಲ್ಲಿ ನಿರಪರಾಧಿ ಹೆಂಗಸರು ಮಕ್ಕಳನ್ನು ಕೊಂದು ಹಾಕಿದ ಲೆಫ್ಟಿನಂಟ್ ಕ್ಯಾಲಿಯ ವಿಚಾರಣೆಯಲ್ಲಿಯೂ ಅವನ ಪರವಾಗಿ 'ಮೇಲಿನವರ ಆಜ್ಞೆ'ಯ ಸಬೂಬನ್ನೇ ಮುಂದೊಡ್ಡಲಾಯಿತು. ನಾಳೆ ಬಾಂಗ್ಲಾದೇಶದಲ್ಲಿನ ಅತ್ಯಾಚಾರಗಳಿಗಾಗಿ ಪಾಕಿಸ್ತಾನಿ ಅಧಿಕಾರಿಗಳ ವಿಚಾರಣೆಯಾದರೆ ಅವರೂ ಮೇಲಿನವರ ಆಜ್ಞೆಯಂತೆ ನಡೆದುದಾಗಿ ತಮ್ಮನ್ನು ಸಮರ್ಥಿಸಿಕೊಳ್ಳುವುದು ಖಂಡಿತ.

ಇದನ್ನು ಕೇಳಿದ ಕಾನೂನು ಪಂಡಿತರು, ಮೇಲಿನವರ ಆಜ್ಞೆಗಳು ಕಾನೂನು ಬಾಹಿರವಾಗಿದ್ದರೆ ಅವುಗಳನ್ನು ಪಾಲಿಸಬೇಕೆಂಬ ನಿಯಮ ಎಲ್ಲಿಯೂ ಇಲ್ಲ; ಅನ್ಯಾಯದ ಆಜ್ಞೆಗಳನ್ನು ಪಾಲಿಸಿದವನೂ ಅಪರಾಧಿಯೇ ಎಂದು ಹೇಳುವರು. ನಾವೆಲ್ಲರೂ 'ನಿಜ ನಿಜ' ಎನ್ನುತ್ತೇವೆ. ಪಾಕಿಸ್ತಾನಿಗಳು ಬಾಂಗ್ಲಾದಲ್ಲಿ ಮಾಡಿದ ಅತ್ಯಾಚಾರಗಳನ್ನು ಕುರಿತು ಓದಿ, "ನಾವಾದರೆ ಖಂಡಿತ ಇಂಥ ಹೇಯ ಕಾರ್ಯಕ್ಕೆ ಒಪ್ಪುತ್ತಿರಲಿಲ್ಲ", ಎಂದುಕೊಳ್ಳುತ್ತೇವೆ.

ಆದರೆ ಇದೆಷ್ಟು ಮಟ್ಟಿಗೆ ನಿಜ? ನಮ್ಮ ಮೇಲಿನವರು ನಮಗೆ ಕೊಡುವ ಆಜ್ಞೆಯ ನ್ಯಾಯಾನ್ಯಾಯ, ಕಾನೂನುಬದ್ಧತೆ, ಅದನ್ನು ಪಾಲಿಸುವುದರಿಂದ ಆಗಬಹುದಾದ ಹಿಂಸೆ ಇವುಗಳನ್ನೆಲ್ಲ ವಿಚಾರಿಸಿ ಆಜ್ಞೆಯನ್ನು ನಿರಾಕರಿಸುವ ಧೈರ್ಯ, ವಿವೇಚನೆ ನಮ್ಮಲ್ಲಿ ಎಷ್ಟು ಜನರಿಗಿದೆ?

ಮುಸ್ಲಿಮರು, ಅದರಲ್ಲಿಯೂ ಪಂಜಾಬಿಗಳು ತಮ್ಮನ್ನು ಯೋಧ ಜನಾಂಗವೆಂದು ಹೇಳಿಕೊಳ್ಳುತ್ತಾರೆ. ಜರ್ಮನ್ನರಿಗೂ ಯುದ್ಧಪ್ರಿಯರು ಎಂಬ ಹೆಸರು ಇದೆ! ಇಂಥ ಜನರು ತಮ್ಮ ಇತಿಹಾಸ, ಜನಾಂಗಿಕ ಮನೋವೃತ್ತಿ ಇವುಗಳಿಂದಾಗಿ ಎಂಥಾ ಕ್ರೂರ ಆಜ್ಞೆಗಳನ್ನು ಪಾಲಿಸಲೂ ಸಿದ್ಧರಾಗುತ್ತಾರೆಂದು ಸಾಮಾನ್ಯ ತಿಳಿವಳಿಕೆ ಇದೆ. ಈ ಕಲ್ಪನೆಯಲ್ಲಿ ಎಷ್ಟು ಸತ್ಯವಿದೆ? ಹೆಚ್ಚು ಸೌಮ್ಯ ಹೆಚ್ಚು ಪ್ರಜಾಸತ್ತಾತ್ಮಕ ಮನೋಭಾವವುಳ್ಳ ಜನಾಂಗಗಳೆಂದು ಹೆಸರಾದವುಗಳಲ್ಲಿ ಕುರುಡು ಆಜ್ಞಾಧಾರಕತ್ವ ಕಡಿಮೆ, ಕಾರ್ಯಾಕಾರ್ಯ ವಿವೇಚನೆ ಹೆಚ್ಚು ಇದೆಯೇ?

ಕಳೆದ ಹತ್ತು ವರ್ಷಗಳಿಂದ ಯೇಲ್ ವಿಶ್ವವಿದ್ಯಾಲಯದ ಡಾ. ಸ್ಟ್ಯಾನ್ಲಿ ಮಿಲ್‌ಗ್ರಾಂ ಎಂಬ ಮನಶ್ಶಾಸ್ತ್ರಿ ಈ ವಿಷಯವನ್ನು ಒರೆಗೆ ಹಚ್ಚುವುದಕ್ಕೆ ಕೆಲವೊಂದು ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಸಾವಿರಕ್ಕಿಂತಲೂ ಹೆಚ್ಚು ಜನರ ಮೇಲೆ ಅವರು ನಡೆಸಿದ ಪ್ರಯೋಗಗಳ ಫಲಿತಾಂಶಗಳು ಒಟ್ಟೇ ಮಾನವಕುಲದ ಕಾರ್ಯಾಕಾರ್ಯ ವಿವೇಚನೆಗೆ ಅಷ್ಟೊಂದು ಅನುಕೂಲವಾದ ಸಾಕ್ಷ್ಯ ಹೇಳುವುದಿಲ್ಲ.

ಅವರ ಪ್ರಯೋಗಗಳ ಸ್ಥೂಲ ರೂಪರೇಖೆ ಹೀಗಿದೆ:

ವ್ಯಕ್ತಿಗಳ ಕಲಿಯುವ ಶಕ್ತಿಯನ್ನು ಕುರಿತ ಪ್ರಯೋಗಗಳ ಸಲುವಾಗಿ ಎಂದು ಹೇಳಿ 'ಸ್ವಯಂಸೇವಕ'ರನ್ನು ಆಮಂತ್ರಿಸಲಾಗುತ್ತದೆ. ಸ್ವಯಂಸೇವಕನಿಗೆ ಒಂದು ಅಧಿವೇಶನಕ್ಕೆ ಇಂತಿಷ್ಟು ಎಂದು ಭತ್ಯ ಕೊಡಲಾಗುತ್ತದೆ. ಪ್ರಯೋಗದ ಪ್ರತಿ ಗುಂಪಿನಲ್ಲಿ ಮೂರು ಜನರಿರುತ್ತಾರೆ. ಒಬ್ಬ ಪ್ರಯೋಗ ನಿರ್ದೇಶಕ; ಇನ್ನೊಬ್ಬ ಗುರು; ಮೂರನೆಯವ ಶಿಷ್ಯ. ಸ್ವಯಂಸೇವಕನು ಗುರುವಾಗಿರುತ್ತಾನೆ. ಪ್ರಯೋಗ ಕಾಲದಲ್ಲಿ ಅವನು ಹೇಗೇ ವರ್ತಿಸಿದರೂ ಅವನ ಭತ್ಯದ ಐದು ಡಾಲರು ಅವನಿಗೆ ಸಿಕ್ಕೇ ಸಿಗುತ್ತದೆ ಎಂದು ಮೊದಲೇ ಅವನಿಗೆ ಆಶ್ವಾಸನೆ ಕೊಡಲಾಗುತ್ತದೆ.

ಶಿಷ್ಯನನ್ನು ವಿಶೇಷವಾಗಿ ಚಡಪಡಿಸದ ಹಾಗೆ ಕುರ್ಚಿಗೆ ಕಟ್ಟಿಹಾಕಲಾಗುತ್ತದೆ. ಗುರು ಅವನಿಗೆ ಕಲಿಸತಕ್ಕದ್ದೇನೂ ಇಲ್ಲ. ಇಬ್ಬರಿಗೂ ನಮ್ಮ ಆಧುನಿಕ ಪರೀಕ್ಷೆಗಳಲ್ಲಿ ಕೇಳುವ

ಪ್ರಶ್ನೆಗಳಂಥ ಪ್ರಶ್ನೆಗಳನ್ನು ಒದಗಿಸಲಾಗುತ್ತದೆ. ಉದಾಹರಣೆಗೆ-ಹಗಲು ಎಂಬ ಶಬ್ದ ಇದೆ. ಅದರ ಎದುರು ೧) ದೀಪ ೨) ಬಿಸಿಲು ೩) ಮನೆ ೪) ನಿದ್ರೆ ಎಂಬ ನಾಲ್ಕು ಶಬ್ದಗಳಿವೆ. ಗುರು ಹಗಲು ಎಂದು ಕೂಗಿದೊಡನೆ ಶಿಷ್ಯನು ನಾಲ್ಕು ಶಬ್ದಗಳಲ್ಲಿ ಒಂದನ್ನು ಆರಿಸಿಕೊಂಡು (ಅವುಗಳಲ್ಲಿ ಹಗಲು ಶಬ್ದಕ್ಕೆ ಜತೆಗೂಡುವುದೆಂದು ತಾನು ಭಾವಿಸಿದ) ಶಬ್ದದ ನಂಬರನ್ನು ಸೂಚಿಸುವ ಒಂದು ವಿದ್ಯುತ್ ಗುಂಡಿಯನ್ನು ಒತ್ತಬೇಕು. ಗುರುವಿಗೆ ಆ ನಾಲ್ಕರಲ್ಲಿ ಯಾವ ಶಬ್ದ ಸರಿಯಾದದ್ದು ಎಂದು ತೋರಿಸುವ ಪ್ರತ್ಯೇಕ ಪಟ್ಟಿಯೊಂದನ್ನು ಕೊಟ್ಟಿರುತ್ತಾರೆ. ಶಿಷ್ಯನ ಉತ್ತರ ಸರಿಯಾಗಿದ್ದರೆ ಗುರು ಮುಂದಿನ ಪ್ರಶ್ನೆ (ಇಂಥದೇ ಶಬ್ದ ಜೋಡಣೆಯ ಪ್ರಶ್ನೆ)ಯನ್ನು ಎತ್ತಿಕೊಳ್ಳುತ್ತಾನೆ. ಉತ್ತರ ತಪ್ಪಾಗಿದ್ದರೆ ಅವನು ತಪ್ಪಿಗೆ ಶಿಕ್ಷೆಯಾಗಿ ತನ್ನ ಮುಂದಿರುವ ೩೦ ವಿದ್ಯುತ್ ಗುಂಡಿಗಳಲ್ಲಿ ಒಂದನ್ನು ಒತ್ತುತ್ತಾನೆ. ಆ ಗುಂಡಿಗಳನ್ನೊತ್ತಿದರೆ ಕ್ರಮವಾಗಿ ೧೫, ೩೦, ೪೫.... ೪೫೦ ವೋಲ್ಟ್ ಶಕ್ತಿಯುಳ್ಳ ವಿದ್ಯುತ್ ಆಘಾತ ಶಿಷ್ಯನಿಗೆ ಬಡಿಯುತ್ತದೆ ಎಂಬುದಾಗಿ ಗುರುಶಿಷ್ಯರಿಬ್ಬರಿಗೂ ಮೊದಲೇ ತಿಳಿಸಲಾಗುತ್ತದೆ. ಈ ಆಘಾತ ಮರಣಾಂತಿಕವಾಗಿಲ್ಲ; ಆದರೆ ೪೫ ವೋಲ್ಟ್ ಮೀರಿದ ಮೇಲೆ ಆಘಾತ ಹೆಚ್ಚು ಹೆಚ್ಚು ನೋವನ್ನು ಕೊಡುತ್ತದೆ; ಕೊನೆಕೊನೆಗಂತೂ ತೀರ ಅಸಹ್ಯ ನೋವು ಉಂಟಾಗುತ್ತದೆ—ಹೀಗೆಂದು ಗುರುಶಿಷ್ಯರಿಬ್ಬರಿಗೂ ಪ್ರಯೋಗ ನಿರ್ದೇಶಕ ವಿವರಿಸುತ್ತಾನೆ. ಗುರುವಿಗೆ ೪೫ ವೋಲ್ಟಿನ ಆಘಾತವನ್ನು ಕೊಟ್ಟು ಅದರ ನೋವಿನ ಅನುಭವವನ್ನೂ ಅವನಿಗೆ ಕೊಡಲಾಗುತ್ತದೆ. ಹೆಚ್ಚುಹೆಚ್ಚು ತಪ್ಪುಮಾಡಿದಂತೆ ಹೆಚ್ಚು ಹೆಚ್ಚು ಬಲವಾದ ವೋಲ್ಟೇಜುಳ್ಳ ಗುಂಡಿಯನ್ನು ಒತ್ತಬೇಕೆಂದೂ ಸೂಚಿಸುತ್ತಾನೆ. ಇದೆಲ್ಲವೂ ಏಕೆ? ಶಿಕ್ಷೆಯಿಂದ ಮನುಷ್ಯನ ಕಲಿಕೆಗೆ ಎಷ್ಟು ಮಟ್ಟಿಗೆ ಪ್ರಯೋಜನವಾಗುತ್ತದೆ ಎಂದು ಕಂಡು ಹಿಡಿಯುವುದಕ್ಕೆ—ಎಂಬುದಾಗಿಯೂ ಅವರಿಗೆ ಸುಳ್ಳೇ ತಿಳಿಹೇಳಲಾಗುತ್ತದೆ.

'ಪರೀಕ್ಷೆ' ಪ್ರಾರಂಭವಾಗುತ್ತದೆ. ಸ್ವಾಭಾವಿಕವಾಗಿ ಶಿಷ್ಯ ತಪ್ಪುಗಳನ್ನು ಮಾಡುತ್ತಾನೆ. ಪ್ರತಿಯೊಂದು ತಪ್ಪಿನೊಡನೆ ವಿದ್ಯುತ್ತಿನ ಆಘಾತ ತೀಕ್ಷ್ಣವಾಗುತ್ತ ಹೋಗುತ್ತದೆ. ಗುರುವಿನ ಮನಸ್ಸಿಗೆ ಕಷ್ಟವಾಗುತ್ತದೆ. ಏಕೆಂದರೆ ವಿದ್ಯುತ್‌ಗುಂಡಿಗಳ ಮೇಲೆ ಸೌಮ್ಯ, ಸಾಧಾರಣ, ಪ್ರಬಲ, ಅತಿಪ್ರಬಲ, ತೀವ್ರ, ತೀಕ್ಷ್ಣ, ಅತ್ಯಂತ ತೀಕ್ಷ್ಣ, ದಾರುಣ, ಅಸಹನೀಯ, ಅಪಾಯಕರ ಇತ್ಯಾದಿಯಾಗಿ ಪಟ್ಟಿ ಹಚ್ಚಿರುವುದನ್ನು ಗುರು ನೋಡಿದ್ದಾನೆ. ಗುರು ನಿರ್ದೇಶಕನಿಗೆ ಪ್ರಯೋಗ ನಿಲ್ಲಿಸೋಣವೇ ಎಂದು ಕೇಳುತ್ತಾನೆ. ಆತ, "ಮುಂದೆ ಸಾಗಲಿ, ಪ್ರಯೋಗ ಮುಂದುವರಿಯುವುದು ಅಗತ್ಯವಿದೆ", ಎಂದು ಹೇಳುತ್ತಾನೆ.

ಈಗ ನಾವು ಗಮನಿಸಬೇಕಾದ ಅಂಶಗಳು ಇಷ್ಟು: ೧) ನಿರ್ದೇಶಕನ ಆಜ್ಞೆಯನ್ನು ಗುರು ಪಾಲಿಸಲೇಬೇಕೆಂಬ ಯಾವ ಕಾನೂನೂ ಇಲ್ಲ; ೨) ಪಾಲಿಸಿದರೂ ಬಿಟ್ಟರೂ ಅವನಿಗೆ ಭತ್ಯ ಸಿಕ್ಕೇ ಸಿಗುತ್ತದೆಂದು ಮೊದಲೇ ಒಪ್ಪಂದವಾಗಿದೆ; ೩) ವಿದ್ಯುತ್ತಿನ ಆಘಾತ ಸೌಮ್ಯ (೪೫ ವೋಲ್ಟ್) ವಾಗಿದ್ದಾಗಲೂ ಎಷ್ಟು ನೋವಾಗುತ್ತದೆಂದು ಗುರು ಸ್ವಾನುಭವದಿಂದ ಬಲ್ಲ.

ಹೀಗಿರುವಾಗ ತಪ್ಪು ಉತ್ತರಗಳು ಹೆಚ್ಚುತ್ತ ಹೋದ ಹಾಗೆ ಹೆಚ್ಚು ಹೆಚ್ಚು ತೀವ್ರವಾದ ವಿದ್ಯುದಾಘಾತವನ್ನು ಕೊಡಲು ಎಷ್ಟು ಜನ ಸ್ವಯಂಸೇವಕರು ಸಿದ್ಧರಾಗಬಹುದು? ತೀರ ಕ್ರೂರ ಪ್ರವೃತ್ತಿಯವರನ್ನು ಬಿಟ್ಟರೆ ತೀವ್ರ ಮತ್ತು ಅದಕ್ಕೂ ಮೇಲಿನ ವಿದ್ಯುತ್ ಆಘಾತಗಳನ್ನು ಕೊಡಲು ಯಾರೂ ಸಿದ್ಧರಾಗಲಿಕ್ಕಿಲ್ಲ ಎಂದಲ್ಲವೇ ನಿಮ್ಮ ಅಂದಾಜು?

ಡಾ. ಮಿಲ್‌ಗ್ರಾಂ ಮತ್ತು ಅವರ ಸಹಕಾರಿಗಳೂ ಹಾಗೆಯೇ ಎಣಿಸಿದ್ದರು. ಯಾರೂ 'ಅತಿ ತೀಕ್ಷ್ಣ'ಕ್ಕಿಂತ ಮುಂದೆ ಹೋಗಲಿಕ್ಕಿಲ್ಲ ಎಂದೇ ಅವರು ನಂಬಿದ್ದರು. ಆದರೆ ನಿಜವಾಗಿ ಆದದ್ದೇನು? ಪರೀಕ್ಷೆಗೊಳಪಟ್ಟ ಪ್ರಥಮ ೪೦ ಜನರಲ್ಲಿ ಎಲ್ಲರೂ ೩೦೦ ವೋಲ್ಟಿನವರೆಗೆ ನಿಶ್ಚಿಂತೆಯಿಂದ ಮುಂದುವರಿದರು. ೧೪ ಜನರು ಮಾತ್ರ ಮುಂದೆ ೪೫೦ ವೋಲ್ಟಿನ ಆಘಾತ ಕೊಡಲು ನಿರಾಕರಿಸಿದರು.

ನಿಜವಾಗಿಯೂ 'ಶಿಷ್ಯ'ನಿಗೆ ವಿದ್ಯುದಾಘಾತವಾಗಿರಲಿಲ್ಲ. ಗುಂಡಿ ಒತ್ತಿದೊಡನೆ ಆಘಾತವಾಗುತ್ತದೆಂದು ಗುರುವಿಗೆ ಸುಳ್ಳೇ ಹೇಳಲಾಗಿತ್ತಷ್ಟೇ. ಆದರೆ ಗುರು ತಾನು ನೋವಾಗುವಂತೆ ಶಿಷ್ಯನಿಗೆ ಆಘಾತ ಕೊಡುತ್ತಿದ್ದೇನೆಂಬ ನಂಬಿಕೆಯಿಂದಲೇ ಪ್ರಯೋಗದಲ್ಲಿ ಭಾಗವಹಿಸುತ್ತಿದ್ದನೆಂದು ಗಮನಿಸಬೇಕು.

ನಿಜವಾಗಿ ಆಘಾತವಾಗಿದ್ದು ಡಾ. ಮಿಲ್‌ಗ್ರಾಮರಿಗೆ! ಇಷ್ಟು ಜನ 'ಆಜ್ಞೆ'ಯನ್ನು ನಿರ್ದಯವಾಗಿ ಪಾಲಿಸುವರೆಂದು ಅವರು ಕನಸಿನಲ್ಲಿಯೂ ಕಲ್ಪಿಸಿರಲಿಲ್ಲ.

ಪ್ರಾಥಮಿಕ ಪ್ರಯೋಗದಲ್ಲಿ 'ಶಿಕ್ಷೆಗೆ' ಗುರಿಯಾದ ಶಿಷ್ಯ ಮಿಸುಕದೆ ಪ್ರಯೋಗದುದ್ದಕ್ಕೂ ಕುಳಿತಿರುತ್ತಿದ್ದ. ನೋವು ಮಾಡುತ್ತಿದ್ದೇನೆಂದು ಗುರುವಿಗೆ ವಿದ್ಯುತ್ ಗುಂಡಿಗಳ ಮೇಲೆ ಬರೆದಿದ್ದ ಶಬ್ದಗಳಿಂದಷ್ಟೇ ಪ್ರತೀತವಾಗುತ್ತಿತ್ತು. ಇದು 'ಗುರು'ಗಳ ಆತ್ಮಸಾಕ್ಷಿಯನ್ನು ಎಚ್ಚರಿಸಲು ಸಾಲಲಿಲ್ಲವೇನೋ ಎಂದುಕೊಂಡು 'ವಿದ್ಯುತ್ ಆಘಾತ'ಗಳ ವೋಲ್ಟೇಜು ಏರಿದಂತೆ 'ಶಿಷ್ಯ'ನು ಮಾತಿನ ಮೂಲಕ ದಯಾಯಾಚನೆ ಮಾಡುವಂತೆ ಅವನಿಗೆ ಹೇಳಿಕೊಟ್ಟದ್ದಾಯಿತು. ಆದರೆ ಇಂಥ ವಾಕ್ ಪ್ರತಿಭಟನೆಗಳಿಂದ ಏನೂ ಪ್ರಯೋಜನವಾಗಲಿಲ್ಲ. ಅನಂತರ ಶಿಷ್ಯ ಜೋರಾಗಿ ಮಿಡುಕುವುದು ಒದ್ದಾಡುವುದೇ ಮೊದಲಾದ್ದನ್ನು ಮಾಡುವಂತೆ ಏರ್ಪಡಿಸಲಾಯಿತು. ಹೀಗಾದರೂ ಹೆಚ್ಚಿನ 'ಗುರು'ಗಳು ನಿರ್ದಯವಾಗಿ ಶಿಕ್ಷೆ ಕೊಡುತ್ತ ಹೋದರು. ತೀರ ಕೆಲವು ಮಂದಿ ಮಾತ್ರ ಮಧ್ಯದಲ್ಲೆ "ಇನ್ನು ಒಲ್ಲೆ" ಎಂದರು. ಆಮೇಲೆ ಜೋರಾಗಿ ಆರ್ತನಾದ ಮಾಡಿ, "ಇನ್ನು ತಾಳಲಾರೆ!" "ನನ್ನನ್ನು ಬಿಡಿರಪ್ಪೋ" ಇತ್ಯಾದಿಯಾಗಿ ಹೇಳುವಂತೆ ಮಾಡಿದರು. ಹೀಗೆ ಮಾಡಿದರೂ 'ಸ್ವಯಂಸೇವಕ ಗುರು'ಗಳಲ್ಲಿ ಶೇಕಡಾ ೬೨.೫ ರಷ್ಟು ಜನರು ಕೊನೆಯವರೆಗೆ—ಅಂದರೆ ೪೫೦ ವೋಲ್ಟ್ ಆಘಾತದವರೆಗೂ—ಗಟ್ಟಿ ಮನಸಿನಿಂದ ಮುಂದುವರಿದರು.

ಡಾ. ಮಿಲ್‌ಗ್ರಾಂ ಪ್ರಯೋಗಗಳನ್ನು ಮತ್ತೂ ಮುಂದುವರಿಸಿದರು. ಕೊನೆಗಂತೂ ಆಘಾತದಾಯಕವಾದ ಲೋಹಪಟ್ಟಿಯಿಂದ 'ಶಿಷ್ಯ'ನು ಕೈ ಹಿಂತೆಗೆದುಕೊಳ್ಳುವಂತೆ ಮಾಡಿ 'ಗುರು'ಗಳಿಗೆ ಬಲಾತ್ಕಾರದಿಂದ ಅವನ ಕೈಯನ್ನು ಎಳೆದು ಪಟ್ಟಿಗೆ ತಗಲಿಸಲು ಹೇಳಿದರು.

ಶಿಷ್ಯನು ಪ್ರಕಟಿಸಿದ ಯಾತನೆ, ಆರ್ತನಾದ ಎಲ್ಲದರ ಮಧ್ಯದಲ್ಲಿಯೂ ಶೇಕಡಾ ೬೦ ಜನ ಸ್ವಯಂಸೇವಕ ಗುರುಗಳು ಹೀಗೆ ಬಲಾತ್ಕಾರವನ್ನು ಪ್ರಯೋಗಿಸಲು ಹಿಂಜರಿಯಲಿಲ್ಲ. ಯೇಲ್ ವಿಶ್ವವಿದ್ಯಾಲಯಕ್ಕಿರುವ ಪ್ರತಿಷ್ಠೆಯಿಂದಾಗಿ ಸ್ವಯಂಸೇವಕರು ಹೀಗೆ ವಿಧೇಯತೆ ತೋರಿಸುತ್ತಿರಬಹುದೇ ಎಂಬ ಸಂದೇಹದಿಂದ ಪ್ರಯೋಗದ ಸ್ಥಳವನ್ನು ಬದಲಾಯಿಸಿದರು. ಆದರೂ ಶೇಕಡಾ ೪೮ ಜನರು ಪೂರ್ಣ ವಿಧೇಯತೆಯಿಂದ ಶಿಷ್ಯರನ್ನು 'ಶಿಕ್ಷಿಸಿ'ದರು.

೧೯೭೦ರ ವರೆಗೆ ಡಾ. ಮಿಲ್‌ಗ್ರಾಮರು ೧೦೦೦ಕ್ಕೂ ಮೇಲ್ಪಟ್ಟು ಅಮೇರಿಕನ್ ಜನರನ್ನು ಈ 'ಗುರುತ್ವ'ಕ್ಕೇರಿಸಿ ಪರೀಕ್ಷಿಸಿದ್ದಾರೆ. ಫಲಿತಾಂಶಗಳು ಒಂದೇ ವಿಧವಾಗಿದ್ದವು. ಈ ಗುರುಗಳೆಲ್ಲರೂ ನಿರ್ವಿಕಾರವಾಗಿ ತಮ್ಮ 'ಕ್ರೂರ ಕರ್ತವ್ಯ'ವನ್ನು ಪಾಲಿಸಿದರೆಂದಲ್ಲ. ಪ್ರತಿಭಟಿಸಿದವರಿದ್ದರು; ಅನೇಕರು 'ಶಿಷ್ಯ'ರ ಯಾತನೆ ನೋಡಿ ಬೆವರಿದರು, ನಡುಗಿದರು; ತೊದಲಿ ಮಾತಾಡಿದರು; ತುಟಿ ಕಚ್ಚಿದರು; ತಿಣುಕಿದರು; ಕಡೆಕಡೆಯ ಹಂತದಲ್ಲಿ ಶಿಷ್ಯರ ಕೂಗು ಕೇಳಿ ಹುಚ್ಚು ಅಟ್ಟಹಾಸ ಮಾಡಿದರು—ಇದೆಲ್ಲವೂ ಅವರ ಮನುಷ್ಯತ್ವ ಜಾಗೃತವಾಗುತ್ತಿರುವುದರ ದ್ಯೋತಕವಾಗಿತ್ತಾದರೂ 'ಮೇಲಿನವರ' ಆಜ್ಞೆಯನ್ನು ಧಿಕ್ಕರಿಸಲು ತಯಾರಾದವರು ಮಾತ್ರ ಕಡಿಮೆ. 'ಪ್ರತಿಷ್ಠಿತ'ರೆನಿಸಿದವರಿಂದ 'ಆಜ್ಞೆ' ಬಂದರೆ—ಅದಕ್ಕೆ ಕಾನೂನಿನ ಬಲವಿಲ್ಲದಿದ್ದರೂ—ಶೇಕಡಾ ೬೫ರಷ್ಟು ಜನ ತಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿ ಅತ್ಯಂತ ಹೇಯ ಕರ್ಮಕ್ಕೂ ಸಿದ್ಧರಾಗುತ್ತಾರೆಂದು ಸಿದ್ಧವಾಯಿತು. ಯಾವ ಪ್ರತಿಷ್ಠೆಯ ಬಲವಿಲ್ಲದಿದ್ದವರು ಕೂಡ ಸ್ವಯಂಕಲ್ಪಿತ ಅಧಿಕಾರಸ್ಥಾನದಿಂದ ಆಜ್ಞೆ ಕೊಟ್ಟರೂ ಅರ್ಧಕ್ಕರ್ಧ ಜನ ಅದನ್ನು ಪಾಲಿಸಲು ಸಿದ್ಧರಾಗುತ್ತಾರೆ. ಕೆಲವರು ಬಾಯಿಯಿಂದ ಪ್ರತಿಭಟಿಸಬಹುದು; ಅಯ್ಯೋ ಪಾಪ ಎನ್ನಬಹುದು; ತಮ್ಮ 'ಕೊಳ್ಳಿ'ಯೊಡನೆ ವಾದಿಸಬಹುದು; ಕೆಲವರು 'ಮೇಲಿನ'ವರಿಗೆ 'ನಿಮ್ಮ ಹಣ ನಿಮಗೇ ಇರಲಿ, ನಾ ಇನ್ನು ಮುಂದುವರಿಸಲಾರೆ' ಎಂದೂ ಹೇಳಬಹುದು. ಆದರೂ ಎದ್ದುಹೋಗಿಬಿಡುತ್ತೇನೆ ಎಂದು ಹೊರಟವರು ಕಡಿಮೆ.

ಅಮೇರಿಕನ್ನರು ಪ್ರಜಾಸತ್ತೆಯ, ವ್ಯಕ್ತಿ-ಸ್ವಾತಂತ್ರ್ಯದ ವಾತಾವರಣದಲ್ಲಿ ಪಳಗಿದ ಜನ, ಆಳುವವರ ಭಯದಿಂದ ಅವರ ಕಾನೂನುಗಳು ಅವರಿಗೆ ರಕ್ಷಣೆ ಕೊಡುತ್ತವೆ. ಆದರೂ ಯಾರಾದರೊಬ್ಬರು ಮಾಡು ಎಂದು ಆಜ್ಞಾಪಿಸುವವರಿದ್ದರೆ ಅಲ್ಲಿಯೂ ಬಹುಸಂಖ್ಯಾಕರು ಏನನ್ನೂ ಮಾಡಲು ಸಿದ್ಧರು ಎಂದು ತೋರಿಸಿದಂತಾಗಿದೆ. ಇದು ಮಾನವನ ವ್ಯಕ್ತಿತ್ವದಲ್ಲೇ ಇರುವ ದೌರ್ಬಲ್ಯವೆಂದು ತೋರುತ್ತದೆ. ಹೆಚ್ಚು ದಬ್ಬಾಳಿಕೆಯ ಅಭ್ಯಾಸವುಳ್ಳ ಜನಾಂಗಗಳಲ್ಲಿ ಈ ಆಜ್ಞಾಪಾಲಕ ವೃತ್ತಿ ಇನ್ನೂ ಹೆಚ್ಚಾಗಿರಬಹುದೇನೋ. ಏನಿದ್ದರೂ 'ಯುದ್ಧಾಪರಾಧಿ'ಗಳನ್ನು ದಂಡಿಸಬೇಕೆಂದು ದನಿಯೆತ್ತುವಾಗ ಈ ಪ್ರಯೋಗದ ಫಲಿತಾಂಶವನ್ನು ಗಮನಿಸಬೇಕು.

ಎರಡನೇ ಮಹಾಯುದ್ಧದ ನಂತರ ಜಪಾನಿ ಯುದ್ಧಾಪರಾಧಿಗಳ ವಿಚಾರಣಾ ಆಯೋಗದಲ್ಲಿ ಭಾರತೀಯ ನ್ಯಾಯಾಧೀಶರಾಗಿದ್ದ ವಿವಿಯನ್ ಬೋಸರೊಬ್ಬರೇ 'ಅಪರಾಧಿ'ಗಳನ್ನು ಶಿಕ್ಷೆಗೊಳಪಡಿಸಲು ಒಪ್ಪದೆ ವಿರುದ್ಧ ತೀರ್ಪು ಕೊಟ್ಟದ್ದನ್ನು ಇಲ್ಲಿ ನೆನೆಯಬಹುದು. ■

# 'ನಾನು' ಹೋದರೆ ಸ್ವರ್ಗಕ್ಕೆ ಹೋಗಬಹುದು

ವ್ಯಾಸರಾಯ ಸ್ವಾಮಿಗಳು ತಮ್ಮ ಶಿಷ್ಯರ ನೆರವಿಯಲ್ಲಿ ಯಾರು ಎಷ್ಟು ಬೇಗ ಮೋಕ್ಷಕ್ಕೆ ಹೋಗಬಹುದು ಎಂದೊಂದು ಪ್ರಶ್ನೆ ಎತ್ತಿದರಂತೆ. ಹೆಚ್ಚಿನ ಶಿಷ್ಯರು ಸುತ್ತುಹಾಕಿ ಮಾತಾಡಿದರು. ಕನಕದಾಸನನ್ನು ಸ್ವಾಮಿಗಳು ಕೇಳಿದರು. ಆತ ಕೆಮ್ಮನೆ, "ನಾನು ಹೋದರೆ ಹೋಗಬಹುದು" ಎಂದನು. ಅವನ ಅಭಿಪ್ರಾಯ 'ನಾನು' ಎಂಬ ಅಹಂಕಾರ ಹೋದರೆ ಯಾರೂ ಮೋಕ್ಷಕ್ಕೆ ಹೋಗಬಹುದು ಎಂಬುದಾಗಿತ್ತು.

ಕನಕದಾಸ ಹೊಸ ಸತ್ಯವನ್ನೇನೂ ಹೇಳುತ್ತಿರಲಿಲ್ಲ. ಹೆಚ್ಚಿನ ಧರ್ಮಗಳು ಅಹಂಕಾರವನ್ನು ಅನೇಕ ಮಹಾಪಾತಕಗಳ ಮೂಲ ಎಂದು ಹೇಳಿವೆ. ಮನುಷ್ಯನ ಅನೇಕ ಸಾಧನೆಗಳಿಗೆ ಅಹಂಕಾರವೇ ಮೂಲವಾಗಿದ್ದರೂ ವ್ಯಕ್ತಿಯ ಮತ್ತು ಮಾನವಕೋಟಿಯ ಅನೇಕ ಮಹಾ ದುಃಖಗಳಿಗೂ ಅಹಂಕಾರವೇ ಮೂಲವಾಗಿದೆ.

ಅಹಂಕಾರವೆಂದರೆ ತನ್ನ ಶ್ರೇಷ್ಠತೆಯನ್ನು ಪ್ರದರ್ಶಿಸುವ ಹವ್ಯಾಸವೆಂದು ಒಂದು ವಾಕ್ಯದಲ್ಲಿ ಹೇಳಿಬಿಡಬಹುದು. ಇನ್ನೊಬ್ಬನಿಗಿಂತ ನಾನು ಶ್ರೀಮಂತ, ಬುದ್ಧಿವಂತ, ಶಕ್ತಿವಂತ, ಅಧಿಕಾರವಂತ ಎಂದು ತೋರಿಸಿಕೊಳ್ಳುವ ಚಪಲ ಅದು.

ಇಂದಿನ ಜಗತ್ತಿನಲ್ಲಿ ಈ ಅಹಂಕಾರದ ಅತ್ಯಂತ ಕೀಳು ರೂಪಗಳು ಮೆರೆಯುತ್ತಿವೆ. ರಾಷ್ಟ್ರೀಯ ಅಹಂಕಾರವನ್ನೆ ತೆಗೆದುಕೊಳ್ಳಿ. ಅಮೇರಿಕಕ್ಕೂ ರಷ್ಯಾಕ್ಕೂ ತಾವು ಅತಿ ದೊಡ್ಡ, ಅತಿ ಶಕ್ತ ದೇಶಗಳೆಂಬ ಹೆಮ್ಮೆಯಲ್ಲಿ ಸ್ಪರ್ಧೆ. ಇದು ಜಗತ್ತಿನ ಅತ್ಯಂತ ವಿನಾಶಕಾರಿ ಆಯುಧಗಳನ್ನು ತಯಾರಿಸುವ ಮೇಲಾಟದಲ್ಲಿ ಪರಿಣಮಿಸಿದೆ. ಈ ತರಹದ ಹೆಮ್ಮೆಯೇ ನಾಜಿಗಳನ್ನು ಅತ್ಯಂತ ಭಯಾನಕ ಯುದ್ಧಕ್ಕೆ ತಳ್ಳಿತು. ನಾವಾದರೂ ಜಗತ್ತಿನ ಅತಿ ದೊಡ್ಡ ಪ್ರಜಾಸತ್ತೆ ಎಂದು ಹೆಮ್ಮೆಪಡುತ್ತೇವೆ. ಜಗತ್ತಿಗೆ ಜ್ಞಾನದೀಪವನ್ನು ಕೊಟ್ಟವರೇ ನಾವೆಂದು ಸಾಧಿಸುತ್ತೇವೆ. ರಾಷ್ಟ್ರಗಳ ಅಹಂಕಾರ ಎಷ್ಟು ತೀವ್ರವಾಗಿದೆಯೆಂದರೆ ಈ ಹೆಮ್ಮೆಯ ಹೇಳಿಕೆಗಳಿಗೆ ವಿರುದ್ಧವಾದ ಯಾವ ತಥ್ಯವನ್ನೂ ನಾವು ಗಮನಿಸಲು ನಿರಾಕರಿಸುತ್ತೇವೆ.

ವೈಯಕ್ತಿಕ ಅಹಂಕಾರ ಕೆಲ ವೇಳೆ ತಮಾಷೆಯಾದ ಸ್ವರೂಪಗಳನ್ನು ವ್ಯಕ್ತಪಡಿಸುತ್ತದೆ. ನೆರೆಯವರಿಗಿಂತ ನಾವು ಕಡಿಮೆಯಲ್ಲವೆಂದು ತೋರಿಸಲು ನಾವು ಬೇಕಾದಷ್ಟು ಸುಳ್ಳನ್ನು ಸಾಧಿಸಲು ಹಿಂದೆಗೆಯುವುದಿಲ್ಲ. ಅತ್ಯಂತ ಅಮ್ಮಾವ್ರ ಗಂಡನಾದ ಪತಿಯನ್ನು ಒಬ್ಬ ಸಭ್ಯ ಮಹಿಳೆ ತನ್ನ ಗಂಡನ ದುರ್ವಾಸಾವತಾರವನ್ನು ನೆರೆಯವಳ ಮುಂದೆ ವರ್ಣಿಸುತ್ತಿದ್ದುದನ್ನು

ನಾನೊಮ್ಮೆ ಕೇಳಿದೆ. ತನ್ನ ಗಂಡ ಇತರ ಗಂಡಂದಿರಿಗಿಂತ ಪತ್ನೀವಿಧೇಯ ಎನ್ನುವುದು ಅವಳಿಗೆ ಸಹಿಸುತ್ತಿರಲಿಲ್ಲ.

ಇದು ನಿರುಪದ್ರವಿ ಅಹಂಕಾರ ಎನ್ನಬಹುದು ನೀವು. ಆದರೆ ಸತ್ಯವನ್ನು ಬಹುಕಾಲ ಬಚ್ಚಿಡಲಾಗುವುದಿಲ್ಲವಾಗಿ ನಮಗೆ ಇದು ಯಾವಾಗಲೂ ಭಯದ ಮೂಲವೇ. ಭಯ ನಮ್ಮನ್ನು ದುಃಖಿಗಳನ್ನಾಗಿ ಮಾಡುತ್ತದೆ.

ಅಹಂಕಾರದ ಇನ್ನೊಂದು ಹಾಸ್ಯಾಸ್ಪದ ರೂಪವೆಂದರೆ, ದೊಡ್ಡವರ ಸಂಬಂಧವನ್ನು ಹೇಳಿಕೊಳ್ಳುವ ಚಟ. "ಮೊನ್ನೆ ಡೆಪ್ಯುಟಿ ಕಮೀಶನರರ ಹೆಂಡತಿಯ ಹತ್ತಿರ ನಾನು ಮಾತಾಡ್ತಾ ಇದ್ದಾಗ," "ಮುಖ್ಯಮಂತ್ರಿಗಳು ನಮ್ಮ ಮಾವನ ಮನೆಗೆ ಬಂದಿದ್ದಾಗ", ಇತ್ಯಾದಿಯಾಗಿ ಗಳಿಗೆ ಗಳಿಗೆಗೆ ದೊಡ್ಡವರೆನಿಸಿಕೊಳ್ಳುವವರ ಸಂಗಡ ತಮಗಿರುವ ಪರಿಚಯದ ಮಿಥ್ಯಾಪ್ರದರ್ಶನ ಮಾಡುವವರು ಕೆಲವರಾದರೆ, "ಅದಕ್ಕೇನಂತೆ, ಮುಖ್ಯಮಂತ್ರಿ ಗಳಿಗೆ ಹೇಳಿ ಮಾಡಿಸಿಕೊಡುತ್ತೇನೆ. ಅವರ ಸೋದರಮಾವನಿಗೂ ನನ್ನ ಮಾವನಿಗೂ ಗಳಸ್ಯ ಕಂಠಸ್ಯ" ಎಂದು ಕೊಚ್ಚಿಕೊಳ್ಳುವವರು ಕೆಲವರು. ಹೆಚ್ಚಾಗಿ ಈ ಜನರಿಗೆ ಸ್ವಂತದ ಯಾವ ಸ್ಥಾನ ಮಾನವೂ ಇರುವುದಿಲ್ಲ. ದೊಡ್ಡವರೊಡನೆ ಹೆಸರು ಜೋಡಿಸಿಕೊಳ್ಳುವ ಈ ಹುಚ್ಚನ್ನು ನೋಡಿ ಅಳಬೇಕೋ ನಗಬೇಕೋ ತಿಳಿಯುವುದಿಲ್ಲ.

ಹೆಮ್ಮೆಯ ಈ ರೂಪದಿಂದ ಇತರರಿಗೆ ಬೋರು ಹೊಡೆಯುತ್ತದೆನ್ನುವುದನ್ನು ಬಿಟ್ಟರೆ ಬೇರೆ ತೊಂದರೆ ಇಲ್ಲ. ಆದರೆ ಇದರ ವಿರುದ್ಧವಾದ ಹೆಮ್ಮೆಯೊಂದಿದೆ. ಅದು ಮನುಷ್ಯನನ್ನು ತನ್ನ ತಂದೆ ತಾಯಿಗಳನ್ನೇ ನಿರಾಕರಿಸಲು ತೊಡಗಿಸುತ್ತದೆ. ಅವಿದ್ಯಾವಂತರಾದ ತಂದೆ ತಾಯಿಗಳನ್ನು ಹೊಂದಿದ ವಿದ್ಯಾವಂತ ಮಕ್ಕಳು ಎಷ್ಟೋ ವೇಳೆ ಈ ಪಾಪವನ್ನು ಗೊತ್ತಿದ್ದೂ ಮಾಡುತ್ತಾರೆ. ಉಚ್ಛ್ರಾಯಕ್ಕೆ ಬಂದ ಮೇಲೆ ಹಳೇ ಬಡ ಸಂಗಾತಿಗಳನ್ನೂ ಬಾಂಧವರನ್ನೂ ಕಂಡೂ ಕಾಣದಂತೆ ಮಾಡುವವರ ಸಂಖ್ಯೆ ದೊಡ್ಡದಾಗಿದೆ. ತಾವು ಆಢ್ಯ ಕುಲದಿಂದ ಬಂದವರೆಂಬಂತೆ ಅವರು ನಟಿಸುತ್ತಾರೆ. ಅವರು ಸುತ್ತಮುತ್ತಲವರ ತಿರಸ್ಕಾರಕ್ಕೇ ಪಾತ್ರರಾಗುತ್ತಾರಲ್ಲದೆ ಅವರ ಆಢ್ಯತೆ ಬೆಳೆಯುವುದಿಲ್ಲ. ಅವರ ಬುರುಡೆಗಳು ಒಂದಲ್ಲ ಒಂದು ದಿನ ಒಡೆಯದೆ ಇರುವುದಿಲ್ಲ. ಅದಕ್ಕಿಂತಲೂ ಕೆಟ್ಟದ್ದೆಂದರೆ ಕಾಲಾಂತರದಲ್ಲಿ ಅವರು ತಮ್ಮ ಸುಳ್ಳುಗಳನ್ನು ತಾವೇ ನಂಬತೊಡಗುತ್ತಾರೆ. ಆಗ ನಮ್ಮ ನಿಜಸ್ವರೂಪ ನಮ್ಮಿಂದ ಮರೆಯಾಗಿಬಿಡುತ್ತದೆ. ಇತರರು ನಮ್ಮ ಬಗ್ಗೆ ಏನು ಗ್ರಹಿಸುತ್ತಿದ್ದಾರೆಂಬುದಂತೂ ನಮಗೆ ತಿಳಿಯುವುದೇ ಇಲ್ಲ.

ಅಧಿಕಾರ ಸ್ಥಾನಗಳ ಹಂಬಲಕ್ಕೂ ಅಹಂಕಾರವೇ ಅನೇಕ ವೇಳೆ ಕಾರಣವಾಗಿದೆ. ಶಾಸನಸಭಾ ಸದಸ್ಯನೋ ಯಾವುದಾದರೂ ಸಮಿತಿಯ ಅಧ್ಯಕ್ಷನೋ ಆಗಲು ಆತುರ ಪಡುವವರಲ್ಲಿ ನಿಜವಾಗಿ ಎಷ್ಟು ಜನರಿಗೆ ನಿಜವಾದ ಸೇವಾಭಾವವಿದೆ? ಯೋಗ್ಯತೆ ಇದೆ? ನೂರಕ್ಕೆ ಹತ್ತೋ ಹನ್ನೆರಡೋ ಜನರಿಗಿರಬಹುದು. ಮಹತ್ವಾಕಾಂಕ್ಷೆ ಸ್ವತಃ ಪಾಪಕರ ವಾಗಿಲ್ಲದಿರಬಹುದು. ಆದರೆ ತಮಗಿಂತ ಯೋಗ್ಯರಾದವರನ್ನು ಯಾವುದಾದರೊಂದು

ತಂತ್ರದಿಂದ ಹಿಂದೆ ತಳ್ಳಿ ಮುನ್ನುಗ್ಗ ಬಯಸುವವರು. ತಮ್ಮ ದುರಹಂಕಾರವನ್ನು ತುಷ್ಟಿಪಡಿಸುವ ಹೊರತು ಮತ್ತಾವ ಉದ್ದೇಶವನ್ನೂ ಇಟ್ಟುಕೊಂಡಿರುವುದಿಲ್ಲ. ಅವರಿಗೆ ಸಿಗುವುದು ಟೊಳ್ಳು ಸಮಾಧಾನ ಹೊರತು ಮತ್ತೇನೂ ಇಲ್ಲ. ಇದು ಇಂದಿನ ಸಮಾಜದಲ್ಲಿ ಬಹಳವಾಗಿ ಹಬ್ಬಿದ ಡಂಭವಾಗಿದೆ. ಭಾರತದಲ್ಲಿ ಇಂದು ಎದ್ದಿರುವ ಅರಾಜಕತೆಗೆ ಈ ಬಗೆಯ ಅಹಂಕಾರವೇ ಮೂಲವಾಗಿದೆ.

ತುಂಬಾ ಆಕ್ಷೇಪಾರ್ಹವಾದ ಅಹಂಕಾರವೆಂದರೆ ದುರ್ಬಲರ ಮೇಲೆ ತೋರಿಸುವ ದರ್ಪ. ತಮಗೆ ಎದುರಾಡಲಾರರೆಂಬ ಧೈರ್ಯದಿಂದಲೇ ಅನೇಕ ಗಿರಾಕಿಗಳು ಹೋಟೆಲ್ ಮಾಣಿಗಳ ಮೇಲೆ, ಅಧಿಕಾರಿಗಳು ತಮ್ಮ ಕಡೆ ಯಾವುದಾದರೂ ಕೆಲಸಕ್ಕಾಗಿ ಬರುವ ಸಾರ್ವಜನಿಕರ ಮೇಲೆ ಭಯೋತ್ಪಾದಕವಾದ ಜಬರನ್ನು ತೋರಿಸುತ್ತಾರೆ. ಇಂಥವರ ಮುಖದ ನೀರಿಳಿಸುವವರು ಒಬ್ಬಿಬ್ಬರಾದರೂ ಸಿಕ್ಕಿದರೆ ಚೆನ್ನಾಗಿರುತ್ತದೆ.

ಅಹಂಕಾರ ಮಿಥ್ಯೆಯಾಗಿದ್ದಷ್ಟೂ ಅದು ಪಾಪಕರವಾಗುತ್ತದೆ. ಶ್ರೀಮಂತಿಕೆ, ಅಧಿಕಾರ, ಸ್ಥಾನಮಾನ ಇವುಗಳಿಗೆ ಮಿತಿಮೀರಿ ಮಹತ್ವ ಕೊಡುವುದು ಮಿಥ್ಯಾಹಂಕಾರದ ಕಾರಣ. ಆದರೆ ಪಾಪಕರವಲ್ಲದ ಅಹಂಕಾರವೂ ಇದೆ.

ನಾವು ಮಾಡುವ ಕೆಲಸದಲ್ಲಿ ನಮ್ಮ ಕೌಶಲ್ಯದ ಬಗ್ಗೆ ಇರುವ ಅಭಿಮಾನವೂ ಅಹಂಕಾರದ ಒಂದು ರೂಪವೇ ಆದರೂ ಅದು ಹಿತಕರವಾದ ಅಹಂಕಾರ. ಅದು ಪಾಪಕ್ಕೆ ಪೋಷಣೆಕೊಡುವ ಬದಲು ಅದಕ್ಕೆ ಶತ್ರುವಾಗಿದೆ. ತನ್ನ ಸಜ್ಜನಿಕೆಯ ಬಗ್ಗೆ ಹೆಮ್ಮೆಯುಳ್ಳ ಯಾವನೂ ದುಷ್ಕರ್ಮಗಳನ್ನು ಮಾಡಲು ಒಪ್ಪಲಾರ. ತನ್ನ ಕರ್ತವ್ಯ ದಕ್ಷತೆಯಲ್ಲಿ ಅಭಿಮಾನ ತಾಳುವವನಾರೂ ತನ್ನ ಕೆಲಸವನ್ನು ಅಲಕ್ಷ್ಯದಿಂದ ಮಾಡಲಾರ.

ಪ್ರಚಂಡ ಬುದ್ಧಿಶಕ್ತಿಯುಳ್ಳ ಮತ್ತು ಮಹತ್ಸಾಧನೆ ಮಾಡಿದ ಅನೇಕರು ನಿರಹಂಕಾರಿಗಳಾಗಿದ್ದುದನ್ನು ನಾವು ಕಾಣುತ್ತೇವೆ. ಕರ್ನಾಟಕದಲ್ಲಿ ತಟ್ಟನೆ ನೆನಪಿಗೆ ಬರುವ ಹೆಸರೆಂದರೆ ಬಸವಣ್ಣನವರದು. ದೇವರ ಮುಂದೆ ಮಾತ್ರವಲ್ಲದೆ ಮನುಷ್ಯನ ಮುಂದೆಯೂ ಅವರು ವಿನಯಶೀಲರಾಗಿದ್ದರು. ಕನ್ನಡದ ಕಥೆಗಾರರಲ್ಲಿ ನಿಸ್ಸೀಮರಾದ ಮಾಸ್ತಿಯವರು ವಿನಯದ ಇನ್ನೊಂದು ದೊಡ್ಡ ಉದಾಹರಣೆ. ಮಹಾತ್ಮಾಗಾಂಧಿಯವರ ಉದಾಹರಣೆಯನ್ನಂತೂ ಹೇಳಲೇಬೇಡ.

ಅತಿಯಾದ ಅಹಂಕಾರ ನಮ್ಮ ವಿಚಾರದ ತೂಕವನ್ನು ತಪ್ಪಿಸುತ್ತದೆ. ಅದು ಅನೇಕ ಮೂಢಕೃತಿಗಳಿಗೆ ಪ್ರೇರಕವಾಗುತ್ತದೆ. ದಿವಾಳಿ ತೆಗೆಯುವವರ ಸ್ವಭಾವವನ್ನು ಅಭ್ಯಸಿಸಿದರೆ ಅವರಲ್ಲಿ ಅಹಂಕಾರ ಮಿತಿ ತಪ್ಪಿದ್ದು ಹೆಚ್ಚಾಗಿ ಗೋಚರವಾಗುತ್ತದೆ. ತನ್ನ ಆರ್ಥಿಕ ಶಕ್ತಿಗೆ ಮೀರಿದ್ದರೂ ಅವರು ಕಾರು, ಕುಡಿತ, ವಿಲಾಸ, ದೇಶ ಸಂಚಾರಗಳಂಥ ಹುಚ್ಚುಗಳನ್ನು ನೆಚ್ಚಿಕೊಳ್ಳುತ್ತಾರೆ. ಏಕೆಂದರೆ ತಮ್ಮ 'ಲೈನಿ'ನಲ್ಲಿರುವ ಹೆಚ್ಚು ಶ್ರೀಮಂತರ ಮುಂದೆ ಕಡಿಮೆಯಾಗಿ ತೋರಿಸಿಕೊಳ್ಳಲು ಅವರ ಅಹಂಕಾರ ಬಿಡುವುದಿಲ್ಲ. ನನ್ನ ಪರಿಚಯಸ್ಥರೊಬ್ಬರು ಅತಿಯಾಗಿ ವಾಣಿಜ್ಯ ವ್ಯವಹಾರದಲ್ಲಿ ಕೈ ತೊಡಕಿಸಿಕೊಂಡಿದ್ದರು. ಸಕಾಲದಲ್ಲಿ ಕೈ

ಹಿಂದೆಗೆದುಕೊಂಡಿದ್ದರೆ ಅವರು ಸೋಲು ತಿನ್ನುತ್ತಿರಲಿಲ್ಲ. ಆದರೆ 'ಅಡಿಯ ಹಿಂದಿಡುವುದು' ಹೇಡಿತನವೆಂದು ,ಅವರ ನಂಬಿಕೆಯಾಗಿತ್ತು. ಪರಿಣಾಮವಾಗಿ ತಮ್ಮನ್ನೂ ತಮ್ಮನ್ನು ಹೊಂದಿದವರನ್ನೂ ತಮಗೆ ಸಾಲಕೊಟ್ಟವರನ್ನೂ ಸೇರಿಯೇ ಅವರು ಮುಳುಗಿಸಿದರು.

ಮತ್ತೇನಲ್ಲದಿದ್ದರೂ ಇತರರಿಗಿಂತ ಹಿಂದೆ ಬೀಳಬಾರದೆಂಬ ಹಮ್ಮು ನಮ್ಮನ್ನು ಮತ್ಸರಿಗಳನ್ನಾಗಿಯೂ ದುರಾಶೆಯವರನ್ನಾಗಿಯೂ ಮತ್ತೂ ಕೆಡುಕೆಂದರೆ ಅಸುಖಿಗಳನ್ನಾಗಿಯೂ ಮಾಡುತ್ತದೆ. ಪ್ರಪಂಚದಲ್ಲಿ ಒಂದನ್ನು ಮೀರಿದ್ದು ಇನ್ನೊಂದು ಇದ್ದೇ ಇದೆ. ನಾವು ಶ್ರೀಮಂತರಿರಲಿ ರಾಜರಿರಲಿ ಬಡವರಿರಲಿ ಒಂದು ದಿನ ಎಲ್ಲವನ್ನೂ ಮುಗಿಸಿ ಹೋಗಲೇಬೇಕು. ನಮ್ಮ ಗೆಲವುಗಳನ್ನು ಹೇಗೋ ಹಾಗೆ ಸೋಲುಗಳನ್ನೂ ಪ್ರಪಂಚ ಮರೆಯುವುದು ಖಂಡಿತ. ಇಂದಿನ ವಿಜ್ಞಾನನಿಷ್ಠ ಮಾನವ ತನ್ನ ಸರ್ವಶಕ್ತಿಯ ಹೆಮ್ಮೆಯಿಂದ ಜಗತ್ತಿನ ದುಃಖಗಳನ್ನು ಹೆಚ್ಚಿಸುತ್ತಿದ್ದಾನೆ. ಗಿಲ್ಬರ್ಟ್ ಹಾರ್ಡಿಂಜ್ ಹೇಳಿದಂತೆ, ವಿಜ್ಞಾನಿ ಜೀವನ ರಹಸ್ಯವನ್ನು ಭೇದಿಸಿದನೆಂದೇ ತಿಳಿದರೂ ಜೀವನವನ್ನಾಗಲಿ ವಿಶ್ವವನ್ನಾಗಲಿ ಅವನು ಸೃಷ್ಟಿಸಲಿಲ್ಲ ಎಂಬ ಕೊರತೆ ಉಳಿದೇ ಉಳಿಯುವುದಲ್ಲವೇ? ಆದ್ದರಿಂದ ಅಹಂಕಾರವೇಕೆ? ನಮ್ಮ ನೆರೆಯವನಿಗಿಂತ ನಾವು ಶಕ್ತರಾಗಿದ್ದರೆ, ಬುದ್ಧಿವಂತರಾಗಿದ್ದರೆ, ಸುಂದರರಾಗಿದ್ದರೆ ಅದಕ್ಕಾಗಿ ನಾವು ಕೃತಜ್ಞರಾಗಿರ ಬೇಕಲ್ಲದೆ ಹೆಮ್ಮೆಪಡಬೇಕಾಗಿಲ್ಲ.

■

# ಭಾಗ - 5

# ಶೈಕ್ಷಣಿಕ

# ಶಿಕ್ಷಣ ಮತ್ತು ಜೀವನಮೌಲ್ಯಗಳು

ಶಿಕ್ಷಣ ಮತ್ತು ಮೌಲ್ಯ ಇವೆರಡೂ ಪ್ರಾಣಿಲೋಕದಲ್ಲಿ ಮನುಷ್ಯನಿಗೇ ವಿಶೇಷವಾದ ಪದಾರ್ಥಗಳು. ಈ ಏಕದೇಶೀಯತೆ ಆಕಸ್ಮಿಕವಲ್ಲ ಎಂದು ನನಗೆ ತೋರುತ್ತದೆ. ತಿರ್ಯಕ್ ಪ್ರಾಣಿಗಳಲ್ಲಿ ನಾವು ತಿಳಿಯುವ ಅರ್ಥದಲ್ಲಿ ಶಿಕ್ಷಣ ಇಲ್ಲ. ಹುಲಿಯಂಥ ಪ್ರಾಣಿ ಮರಿಗಳಿಗೆ ಬೇಟೆ ಆಡಲು ಅಷ್ಟಿಷ್ಟು ತರಬೇತಿಯನ್ನು ಕೊಡಬಹುದು. ಆದರೆ ಅನೇಕ ಪ್ರಾಣಿಗಳಲ್ಲಿ ಅಷ್ಟೂ ಇಲ್ಲ. ಕಣಜದ ಹುಳ ತೆಗೆದುಕೊಳ್ಳಿ. ಅದು ತತ್ತಿಗಳನ್ನಿಡುವ ಮುಂಚೆ ಒಂದು ಅರೆಜೀವ ಹುಳುವನ್ನು ತಂದು ಅದರ ಮೇಲೆಯೇ ತತ್ತಿ ಇಟ್ಟು ಗೂಡನ್ನು ಮುಚ್ಚಿ ಹೊರಟು ಹೋಗುತ್ತದೆ. ಆಮೇಲೆ ತನ್ನ ಸಂತಾನವನ್ನು ಅದು ಹಿಂತಿರುಗಿಯೂ ನೋಡುವುದಿಲ್ಲ. ತತ್ತಿ ಒಡೆದು ಮರಿಗಳಾಗಿ ಅವುಗಳು ಆ ಹುಳುವನ್ನು ತಿಂದು ಹೊರಬಂದು ವಿಶಾಲ ವಿಶ್ವದಲ್ಲಿ ತಮ್ಮ ಪಾಡಿಗೆ ತಾವು ಬದುಕನ್ನು ಕಂಡುಕೊಳ್ಳುತ್ತವೆ. ಮಕ್ಕಳ ಕಾಟದಿಂದ ಸೋತ ಎಷ್ಟೋ ತಾಯಂದಿರು ತಾವು ಕಣಜದ ಹುಳಗಳಾಗಿ ಹುಟ್ಟಲಿಲ್ಲವಲ್ಲ ಎಂದು ಪಶ್ಚಾತ್ತಾಪ ಪಡಬಹುದು. ವಾಸ್ತವಿಕವಾಗಿ ಪ್ರಾಣಿಗಳು ಹುಟ್ಟಿನಿಂದ ಸಾವಿನವರೆಗೆ ತಮ್ಮ ವಾಸನಾಬಲದಿಂದ ಅಂದರೆ ತಮ್ಮ ಪ್ರಕೃತಿಯಲ್ಲಿ ಅಡಕವಾದ ಪ್ರಚೋದನೆಯಿಂದಲೇ ಸಕಲ ಕ್ರಿಯೆಗಳನ್ನೂ ಮಾಡುತ್ತವೆ. ಯಾವ ಸಮಸ್ಯೆ ಎದುರು ಬಂದರೂ ಈ ಪ್ರಕೃತಿದತ್ತ ವಾಸನೆಯಿಂದಲೇ ಅವು ಪರಿಹಾರ ಕಂಡುಕೊಳ್ಳುತ್ತವೆ. ಬುದ್ಧಿಯನ್ನುಪಯೋಗಿಸಬೇಕಾದ ಪ್ರಮೇಯವೇ ಇಲ್ಲ. ಎಷ್ಟು ಸುಖಿಗಳು ಅಲ್ಲವೆ? ಆದರೆ ತಮ್ಮ ಪ್ರಕೃತಿಯಲ್ಲಿ ಉತ್ತರವಿಲ್ಲದ ಸಮಸ್ಯೆಗಳು ಎದುರಾದರೆ ಪ್ರಾಣಿಗಳು ಅವುಗಳನ್ನು ಪರಿಹರಿಸಿಕೊಳ್ಳಲಾರದೆ ಬಿದ್ದುಹೋಗುತ್ತವೆ. ಪ್ರಾಗೈತಿಹಾಸಿಕ ಕಾಲದ ಪೆಡಂಭೂತಗಳು ನಿರ್ವಂಶವಾದದ್ದು ಹೀಗೆಯೇ ಎಂಬ ಸಂಶಯವಿದೆ. ಹೊಸಪರಿಸ್ಥಿತಿಗಳಿಗೆ ಹೊಸ ಪರಿಹಾರ ಕಂಡು ಹಿಡಿಯಲು ಅವುಗಳ ಪ್ರಕೃತಿಯಲ್ಲಿ ವ್ಯವಸ್ಥೆ ಇರಲಿಲ್ಲ. ಕೆಲ ಪ್ರಾಣಿಗಳಲ್ಲಿ ಸೂಕ್ಷ್ಮರೂಪದಲ್ಲಿ ಶಿಕ್ಷಣ ಇರಬಹುದು. ಆದರೆ ಈ ಪ್ರಾಣಿಗಳಿಗೆ ಕೂಡ ಮನುಷ್ಯ ತರಬೇತಿ ಕೊಟ್ಟರೆ ಮಾಡುವಷ್ಟು ಆಶ್ಚರ್ಯಕರ ಕೆಲಸಗಳನ್ನು ಸ್ವಜಾತಿಯಿಂದ ತರಬೇತಿ ಹೊಂದಿದ ಪ್ರಾಣಿಗಳು ಮಾಡಲಾರವು. ಅವು ತಮ್ಮನ್ನು ತಿಳಿದುಕೊಂಡದ್ದಕ್ಕಿಂತ ಹೆಚ್ಚಾಗಿ ಮನುಷ್ಯ ಅವುಗಳನ್ನು ಅರ್ಥಮಾಡಿಕೊಂಡಿರುವುದೇ ಇದಕ್ಕೆ ಕಾರಣ. ಪ್ರಾಣಿಗಳಿಗೆ ಗೊತ್ತು ಇದೆ; ಆದರೆ ಅರ್ಥವಾಗುವುದಿಲ್ಲ: They know, but don't understand.

ಹಾಗೆಯೇ ಪ್ರಾಣಿಗಳಿಗೆ ಮೌಲ್ಯದ ಅರಿವು ಇಲ್ಲ. ಮಂಗನಂಥ ಕೆಲ ಪ್ರಾಣಿಗಳನ್ನು ಮನುಷ್ಯ ತರಬೇತು ಮಾಡಿದಾಗ ಒಂದು ತರಹದ 'ವ್ಯಾಪಾರಿ ಮೌಲ್ಯ'ದ ಕಲ್ಪನೆಯನ್ನು ಅವು ಮಾಡಿಕೊಂಡ ಉದಾಹರಣೆಗಳು ಇವೆ. ಯಂತ್ರದ ಹಿಡಿಕೆ ತಿರುಗಿಸಿದರೆ ರಟ್ಟಿನ ಬಿಲ್ಲೆಗಳು ಬರುತ್ತವೆ; ಬಿಲ್ಲೆಗಳನ್ನು ಕೊಟ್ಟರೆ ಬಾಳೆಹಣ್ಣು ಸಿಗುತ್ತದೆ. ಹೀಗೆ ವ್ಯವಸ್ಥೆ ಮಾಡಿದಾಗ ಮಂಗಗಳು ಬಿಲ್ಲೆಗಳನ್ನು ಗಳಿಸುವುದಕ್ಕೆ ಹಿಡಿಕೆ ತಿರುಗಿಸಿ ದುಡಿದವು. ದುಡ್ಡು ಕಂಡರೆ ಕುಂಜಾರು ದಡ್ಡನ ತಲೆ ಕೂಡ ಓಡತೊಡಗುತ್ತದೆ. ಆದರೆ ಇದನ್ನು ಕೂಡ ಮನುಷ್ಯನ ಮೌಲ್ಯ ಕಲ್ಪನೆಗೆ ಹೋಲಿಸಲು ಸಾಧ್ಯವಿಲ್ಲ.

ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ಈ ವೈಷಮ್ಯದ ಚರ್ಚೆ ಈ ನಿಟ್ಟಿನಲ್ಲಿ ಅಪ್ರಸ್ತುತ ಎನಿಸಬಹುದು. ಆದರೆ ಮೌಲ್ಯ ಮತ್ತು ಶಿಕ್ಷಣ ವಿಷಯದಲ್ಲಿ ನಾನು ಮುಂದೆ ಪ್ರತಿಪಾದಿಸಲಿರುವ ಅಂಶಗಳು ಇದಕ್ಕೆ ಸಂಬಂಧಿಸಿವೆ.

ಆದರೆ ಮೊದಲು ಮೌಲ್ಯ ಎಂದರೇನು? ತತ್ವಜ್ಞಾನಿಗಳು ನೂರಾರು ವರ್ಷಗಳಿಂದ ಇದನ್ನು ಚರ್ಚಿಸಿದ್ದಾರೆ. ಅರ್ಥಶಾಸ್ತ್ರಿಗಳು ಇದರಲ್ಲಿದ್ದಾರೆ. ಪ್ರಾಚೀನ ಭಾರತೀಯರ 'ಸತ್', 'ಪುರುಷಾರ್ಥ', 'ಪ್ರಯೋಜನ' ಮೊದಲಾದ ಶಬ್ದಗಳಲ್ಲಿ ಮೌಲ್ಯ ಕಲ್ಪನೆಯ ಅಂಶ ಇದೆ. ಗ್ರೀಕರ 'ಒಳಿತಿನ' ಕಲ್ಪನೆಯಲ್ಲಿಯೂ ಮೌಲ್ಯದ ಅಂಶ ಉಂಟು. ಕೇವಲ ಭೌತಿಕ ದೃಷ್ಟಿಯಿಂದ ಮೌಲ್ಯ ಎಂಬ ಪದಾರ್ಥಕ್ಕೆ ಅಸ್ತಿತ್ವ ಇಲ್ಲ. ಆದರೂ ಕ್ಯಾಂಟ್ ಹೇಳುವ ಹಾಗೆ ಮನುಷ್ಯ ಪ್ರಪಂಚದಲ್ಲಿ ಸಂಯೋಜಿತ ಕ್ರಿಯೆ ಸಾಧ್ಯವಾಗಬೇಕಾದರೆ ಮೌಲ್ಯದ ಸತ್ಯತ್ವವನ್ನೂ ಸಾಂಗತ್ಯವನ್ನೂ ಒಪ್ಪಬೇಕಾಗುತ್ತದೆ. ಶಿವ ಅಂದರೆ ನಮಗೂ ಸುತ್ತಲಿನವರಿಗೂ ಹಿತ ಅಥವಾ ಮಂಗಲವನ್ನುಂಟುಮಾಡುವಂಥಾದ್ದು, ಸುಂದರ ಎಂದರೆ ಸಂಗೀತ, ಕಲೆ, ಆಕಾರಸೌಷ್ಠವ ಮುಂತಾದವುಗಳಿಂದ ಮನಸ್ಸಿಗೆ ಹಿತವಾದ ಅನುಭವವನ್ನುಂಟುಮಾಡುವಂಥಾದ್ದು ಮತ್ತು ಸತ್ಯ ಅಂದರೆ ಲೌಕಿಕ ತಥ್ಯಗಳಿಗಿಂತ ಬೇರೆ ಸ್ತರದಲ್ಲಿ ಪ್ರಪಂಚದಲ್ಲಿ ಒಂದು ಏಕ ಸೂತ್ರತೆಯನ್ನು ಕಾಣುವಂಥದ್ದು. ಇವೆಲ್ಲವೂ ಮೌಲ್ಯಗಳ ಪರಿಧಿಯಲ್ಲಿ ಬರುತ್ತವೆ. ಕೆಲ ತತ್ವಜ್ಞಾನಿಗಳು ಆರ್ಥಿಕ, ತಾರ್ಕಿಕ, ಕಲಾತ್ಮಕ, ನೈತಿಕ ಮತ್ತು ಆಧ್ಯಾತ್ಮಿಕ ಎಂದು ಪಂಚವಿಧ ಮೌಲ್ಯಗಳನ್ನು ಹೇಳುತ್ತಾರೆ. ಇವು ಉತ್ತರೋತ್ತರವಾಗಿ ಒಂದಕ್ಕಿಂತ ಒಂದು ಶ್ರೇಷ್ಠವೆಂದು ಭಾವಿಸಲ್ಪಡುತ್ತದೆ. ಮೌಲ್ಯಗಳ ಪ್ರಯೋಜನ ವಿಶೇಷವಾದದ್ದು. ಆಹಾರ ಮೊದಲಾದವುಗಳ ಸೇವನೆಯಿಂದ ಜೀವಿಗೆ ಒಂದು ಸಮಾಧಾನ ದೊರಕುತ್ತದೆ. ಆ ಸಮಾಧಾನದ ಸಲುವಾಗಿ ಜೀವಿ ಪುನಃ ಪುನಃ ಆ ವಸ್ತುಗಳನ್ನು ಸೇವಿಸುತ್ತದೆ. ಆದರೆ ಮೌಲ್ಯಗಳಿಂದ ನಮಗೆ ದೊರಕುವ ಸಮಾಧಾನ ಈ ವರ್ಗದ್ದಲ್ಲ. ಅದಕ್ಕಿಂತ ಮೇಲಿನ ಸ್ತರದಲ್ಲಿ ಮನಸ್ಸಿಗೆ ಅದು ಒಂದು ಹಿತವಾದ ಭಾವನೆಯನ್ನುಂಟುಮಾಡುತ್ತದೆ. ಒಬ್ಬನಿಗೆ ಉಪಕಾರ ಮಾಡಿದರೆ ಆಗುವ ಸಮಾಧಾನ, ಸುಖ ಇವುಗಳನ್ನು ಇಲ್ಲಿ ಉದಾಹರಿಸಬಹುದು. ಪ್ರಾರ್ಥನೆಯಿಂದ ದೊರಕುವ ಸುಖವೂ ಇಂಥಾದ್ದೇ. (ಕಣ್ಣು ಮುಚ್ಚಿದರೆ ಕೃಷ್ಣಮೂರ್ತಿಯ ಬದಲು ಇನ್ನಾವುದಾದರೂ ಮೂರ್ತಿ ಕಾಣತೊಡಗಿದರೆ ಆ ಮಾತು ಬೇರೆ.)

ಮನುಷ್ಯನನ್ನು ಮನುಷ್ಯನಾಗಿ ಮಾಡುವುದು ಮೌಲ್ಯದ ಕಲ್ಪನೆ ಮತ್ತು ಜೀವನದಲ್ಲಿ ಅದರ ಅನುಸಂಧಾನದ ಯತ್ನವೇ ಆಗಿದೆ. ಆದರೂ ಮೌಲ್ಯಪ್ರಜ್ಞೆ ಹೆಚ್ಚುಮಟ್ಟಿಗೆ ತರಬೇತಿಯಿಂದ ಬರತಕ್ಕದ್ದು. ತರಬೇತಿಗೆ ಸಂಬಂಧಪಟ್ಟದ್ದೆಲ್ಲ ಶಿಕ್ಷಣ ರಂಗದಲ್ಲಿ ಸೇರುತ್ತದೆ. ಮೌಲ್ಯ ಪಾಲನೆಯಿಂದ ಮನುಷ್ಯನಿಗೆ ದೊರಕುವ ಸಮಾಧಾನ ಲೋಕೋತ್ತರ ಆನಂದದ ವರ್ಗದ್ದೆಂಬುದು ನಿಜವಾದರೂ ಅದು ಮನುಷ್ಯನ ಅಸ್ತಿತ್ವಕ್ಕೆ ಅನಿವಾರ್ಯವಾದದ್ದು. ಮೌಲ್ಯಗಳ ಪ್ರಜ್ಞೆ ಬೆಳೆದಿರದಿದ್ದರೆ ಮಾನವ ಕುಲದ ಜೀವಶಾಸ್ತ್ರೀಯ ಉಳಿವೇ ಗಂಡಾಂತರಕ್ಕೆ ಸಿಲುಕಬಹುದಾಗಿತ್ತು. ಆದ್ದರಿಂದ ಶಿಕ್ಷಣದಲ್ಲಿ ಮೌಲ್ಯಕ್ಕೆ ಪ್ರಾಧಾನ್ಯ ಇರಬೇಕು.

ಶಿಕ್ಷಣದಲ್ಲಿ ಮೌಲ್ಯದ ಸ್ಥಾನವನ್ನು ಚರ್ಚಿಸುವ ಮೊದಲು ಮೌಲ್ಯ ಕಲ್ಪನೆಯ ಹುಟ್ಟು ಬೆಳವಣಿಗೆಗಳ ಬಗ್ಗೆ ಕೆಲ ಸಂಗತಿಗಳನ್ನು ಗಮನಿಸಬೇಕು. ಮೌಲ್ಯವೆಂಬುದು ಎಷ್ಟೇ ಲೋಕೋತ್ತರವಾದರೂ ಅದು ಜೀವಶಾಸ್ತ್ರೀಯ ದೃಷ್ಟಿಯಲ್ಲಿ ಪ್ರಕೃತಿಜನ್ಯ ಪ್ರವೃತ್ತಿಯ ವಿಸ್ತರಣೆ ಅಥವಾ ಅದರ ಸ್ಥಳದಲ್ಲಿ ಹುಟ್ಟಿಕೊಂಡ ಗುಣವೇ ಆಗಿದೆ. ಪ್ರಾಣಿಗಳಲ್ಲಿ ಪ್ರಕೃತಿಯ ಪ್ರಚೋದನೆ ಅಥವಾ ವಾಸನೆ (instinct) ಸರ್ವಸ್ವವಾಗಿದೆಯೆಂದು ಆಗಲೇ ಹೇಳಿದ್ದೇನೆ. ಅದೇ ಪ್ರಾಣಿಯನ್ನು ನಡೆಸುತ್ತದೆ ಮತ್ತು ಪ್ರಾಣಿ ಕುಲಗಳನ್ನು ಕಾಪಾಡಿದೆ. ಇಂದ್ರಿಯ ತೃಷ್ಣೆಗಳಾದ ಆಹಾರ ಮತ್ತು ಮೈಥುನದ ಹಂಬಲ ಪ್ರಾಣಿಗಳಲ್ಲಿ ಇದೆ. ಅದಕ್ಕಿಂತ ಉದಾತ್ತ ಎನ್ನಬಹುದಾದ ಮರಿಗಳನ್ನು ಕಾಪಾಡುವ ಪ್ರವೃತ್ತಿಯೂ ಇದೆ. ಇದು ಸರ್ವವಿದಿತವಾದದ್ದು. ಹಾಗೆಯೆ ಕಾಮಕ್ಕೆ ಜೊತೆಯಾದ ಕ್ರೋಧ ಮತ್ತು ಮತ್ಸರಗಳೂ ಪ್ರಾಣಿಗಳಲ್ಲಿವೆ. ಅದರ ಪರಿಣಾಮವಾದ ಹೋರಾಟವೂ ಇದೆ. ಆದರೆ ಹೆಣ್ಣಿನ ಸಲುವಾಗಿಯೋ ಬೇರೆ ಯಾವ ಕಾರಣಕ್ಕಾಗಿಯೋ ಎರಡು ಗಂಡು ನಾಯಿಗಳಲ್ಲಿ ಎಂಥಾ ಕಲಹವಾದರೂ ಅವು ಒಂದನ್ನೊಂದು ತೀರ ಗಂಭೀರವಾಗಿ ಹಿಂಸಿಸುವುದಿಲ್ಲ. ಎರಡರಲ್ಲಿ ದುರ್ಬಲವಾದದ್ದು ಹಿಂದೆ ಸರಿಯುತ್ತದೆ. ಆಮೇಲೆ ಸಬಲವಾದದ್ದು ಅದನ್ನು ಕಾಡುವುದಿಲ್ಲ. ಎರಡು ಸಮಬಲ ನಾಯಿಗಳಲ್ಲಿ ದೀರ್ಘ ಹೋರಾಟವಾಗಬಹುದು. ಕೊನೆಗೆ ಸೋತ ನಾಯಿ ಅಂಗಾತ ಬಿದ್ದು ತನ್ನ ನಾಲಿಯನ್ನು ಗೆದ್ದ ನಾಯಿಯ ಮುಂದೆ ಒಡ್ಡುತ್ತದೆ. ಇದು ಶರಣಾಗತಿಯ ಸೂಚನೆ. ಶರಣಾಗತವಾದ ನಾಯಿಯನ್ನು ಬಲಿಷ್ಠ ನಾಯಿ ಮುಂದೆ ಸ್ವಲ್ಪವೂ ಹಿಂಸಿಸುವುದಿಲ್ಲ. ಜಲ ಸ್ಥಲ ಗಗನ ಚರ ಇವೆಲ್ಲ ಪ್ರಾಣಿವರ್ಗಗಳಲ್ಲಿಯೂ ಸ್ವಜಾತೀಯ ಪ್ರಾಣಿಗಳನ್ನು ಕೊಲ್ಲದಿರುವ, ಹಿಂಸಿಸದಿರುವ ಮನೋವೃತ್ತಿ—ನಿರೋಧಕ ಅಂತರ್ವೃತ್ತಿ—inhibition ಹೆಚ್ಚು ಮಟ್ಟಿಗೆ ಇರುವುದನ್ನು ಪ್ರಾಣಿಶಾಸ್ತ್ರಿಗಳು ಗಮನಿಸಿದ್ದಾರೆ. ಇದು ಬುದ್ಧನ ಅಹಿಂಸಾಬೋಧೆ ಕೇಳಿಬಂದ ಬುದ್ಧಿಯಲ್ಲ. ಅವುಗಳ 'ರಕ್ತ'ಗತವಾದ ಗುಣ. ಅವುಗಳಿಗೆ ಸ್ವಜಾತಿಯನ್ನು ಕೊಲ್ಲದಂತೆ ಪ್ರಕೃತಿಯೇ ತಡೆಹಾಕುತ್ತದೆ.

ಲೈಂಗಿಕ ವಿಚಾರದಲ್ಲಿಯೂ ಪ್ರಾಣಿಗಳಲ್ಲಿ ಪ್ರಕೃತಿದತ್ತ ನಿರೋಧಗಳು ಇವೆ. ಬಲಾತ್ಕಾರವಾಗಿ ಹೆಣ್ಣನ್ನು ಭೋಗಿಸುವ ಕ್ರಮ ಸಾಮಾನ್ಯ ಸ್ಥಿತಿಯಲ್ಲಿ ಪ್ರಾಣಿಗಳಲ್ಲಿ ಇಲ್ಲ. ಬೆದೆಗೆ ಬಂದ ಹೆಣ್ಣಿಲಿಯನ್ನು ಗಂಡು ಬೆನ್ನಟ್ಟುತ್ತದೆ. ಹೆಣ್ಣು ಹೋಗಿ ಬಿಲ ಹೊಕ್ಕರೆ ಗಂಡು

ಪ್ರವೇಶಿಸುವುದಿಲ್ಲ. ರಾಣೀಸಾಹೇಬರ ಚಿತ್ತಕ್ಕೆ ಬರುವವರೆಗೆ ಹೊರಗೇ ಕಾಯುತ್ತದೆ. ರಾಣೀ ಸಾಹೇಬರ ಚಿತ್ತಕ್ಕೆ ಬಾರದೇನೇ ಹೋದರೆ ಒದೆ ತಿಂದ ನಾಯಿಯ ಹಾಗೆ ಜೋಲುಮೋರೆ ಹಾಕಿಕೊಂಡು ವಾಪಸಾಗುತ್ತದೆಯೇ ಹೊರತು ಅದು ಅತಿಕ್ರಮಣ ಮಾಡುವುದು ಅಪರೂಪ. ಪೀನಲ್ ಕೋಡಿನ sanctions ಇಲ್ಲದೇನೇ ಕ್ಷುದ್ರಪ್ರಾಣಿಯಾದ ಇಲಿ ನೀತಿಯುತವಾಗಿ ವರ್ತಿಸುತ್ತದೆ. ಇದು ನಿಸರ್ಗದ ಮೋಡಿ. ಬುದ್ಧಿಯ ಗಾಡಿಯಲ್ಲ.

ಸಾರಾಂಶ ಇಷ್ಟೇ. ತಿರ್ಯಕ್ ಪ್ರಾಣಿಗಳಲ್ಲಿ ಪ್ರಕೃತಿ ನಿಟ್ಟು ನಿಟ್ಟಿನಲ್ಲಿಯೂ ದಾರಿಯನ್ನು ತೋರಿಸುತ್ತದೆ. ಅಪಾಯಕರ ಸಂಘರ್ಷಗಳಿಂದ ಕಾಪಾಡುತ್ತದೆ. ಮನುಷ್ಯನ fight to the finish ಮನೋವೃತ್ತಿ ಪ್ರಾಣಿಗಳಲ್ಲಿಲ್ಲ. ಹಾಗಿದ್ದಿದ್ದರೆ ಕೋಡು, ಉಗುರು, ಹಲ್ಲುಗಳಿಂದ ಸಜ್ಜಿತವಾದ ಪ್ರಾಣಿಗಳ ಇಡೀ ಕುಲಗಳೇ ಹೆಣ್ಣು ಅಥವಾ ನಾಯಕತ್ವಕ್ಕಾಗಿ ನಡೆಯುವ ಹೋರಾಟಗಳಲ್ಲಿ ಸುಂದೋಪಸುಂದರ ಹಾಗೆ ನಾಶವಾಗಿ ಹೋಗಬಹುದಿತ್ತು.

ಇನ್ನು ಮನುಷ್ಯನನ್ನು ನೋಡೋಣ. ವಿಕಾಸದ ಯಾವುದೋ ಗಳಿಗೆಯಲ್ಲಿ ಮನುಷ್ಯನ ಮಿದುಳಲ್ಲಿ ವಿಚಾರ ಶಕ್ತಿಗೆ ಪ್ರಾಧಾನ್ಯ ಬಂತು. ಊಹಾ ಮತ್ತು ಅಪೋಹಾ ವಿಧಾನದ ತತ್ವದಿಂದ ಮನುಷ್ಯ ತನ್ನ ಪರಿಸರವನ್ನು ಅರ್ಥಮಾಡಿಕೊಂಡ. ಪ್ರಕೃತಿಯ ಪ್ರಚೋದನೆಗಳಿಗೆ ಅಧೀನನಾಗಿ ಉಳಿಯದೆ ಪರಿಸರದ ಮೇಲೆ ಪ್ರಭುತ್ವ ಸ್ಥಾಪಿಸುವುದು ತರ್ಕದಿಂದ ಅವನಿಗೆ ಸಾಧ್ಯವಾಯಿತು. ಇದನ್ನೇ ನಾವು ಸಂಸ್ಕೃತಿ ಎನ್ನುವುದು. ಆದರೆ ಯಾವುದು ತನ್ನನ್ನು ಪ್ರಾಣಿಲೋಕದ ಪ್ರಭುವಾಗಿ ಮಾಡಿತೋ ಆ ವಿಚಾರಶಕ್ತಿಗೆ ಮನುಷ್ಯ ಬೆಲೆ ತೆರಬೇಕಾಯಿತು. ಮೆಲ್ಲಮೆಲ್ಲನೆ ಪ್ರಕೃತಿಯ ಆತ್ಮರಕ್ಷಕ ಮತ್ತು ಜಾತಿರಕ್ಷಕ ವಾಸನೆಗಳು ಅವನನ್ನು ಬಿಟ್ಟುಹೋದವು. ಆದರೆ ಸಕಲ ಪ್ರಾಣಿಗಳಲ್ಲಿಯೂ ಇದ್ದ ಕಾಮ, ಕ್ರೋಧ, ಸ್ಪರ್ಧೆ, ಮತ್ಸರಗಳು ಅವನಲ್ಲಿಯೂ ಬಲವಾಗಿಯೇ ಇದ್ದವು. ಬಲಾತ್ಕಾರ, ಮಾರಕವಾದ ಪ್ರತಿಹಿಂಸೆಗಳಿಗೆ ತಡೆಹಾಕುವ inhibitions ಮಾತ್ರ ಮಾಯವಾದವು. ಬುದ್ಧಿಬಲವನ್ನುಪಯೋಗಿಸಿ ತನ್ನ ಎದುರಾಳಿಯನ್ನು ಸೋಲಿಸಿದ ಮೇಲೆ ಎದುರಾಳಿಯನ್ನು ಕೊಲ್ಲಬಾರದೆಂದು ಅವನ ಪ್ರವೃತ್ತಿ ತಡೆಹಾಕಲಿಲ್ಲ. ಹೀಗೆ ಮನುಷ್ಯನು ಸ್ವಜಾತಿಯವರನ್ನು ಹೋರಾಟದಲ್ಲಿ ಕೊಲ್ಲುವ ಮತ್ತು ತಿನ್ನುವ ಅಪೂರ್ವ ಪಶುವಾದ. ಮನುಷ್ಯನ ಈ ಅಮಾನುಷ ಯುಗದ ಆಗುಹೋಗುಗಳ ಬಗ್ಗೆ ಪುರಾತತ್ವಶಾಸ್ತ್ರಿಗಳೂ ಮನುಷ್ಯ ಶಾಸ್ತ್ರಿಗಳೂ ಧಾರಾಳವಾದ ಪುರಾವೆಗಳನ್ನು ಅಗೆದು ತೆಗೆದಿದ್ದಾರೆ.

ಬಹುಶಃ ಈ ನಿಟ್ಟಿನಲ್ಲಿ ಮಾನವಜಾತಿಯಲ್ಲಿ ಮೌಲ್ಯಗಳು ಎಂದು ನಾವು ಕರೆಯುವ ಅಂಶಗಳು ಸಾವಕಾಶವಾಗಿ ತಲೆಯೆತ್ತಿರಬೇಕು ಮತ್ತು ಮಾನವಕುಲದ ತಲೆ ಕಾಯಲು ಸಹಾಯವಾಗಿರಬೇಕು. ಈ ಬದಲಾವಣೆಯನ್ನು ಹಂತಹಂತವಾಗಿ ಗುರುತಿಸುವುದಕ್ಕೆ ಇಲ್ಲಿ ಸಮಯ ಸಾಲದು. ಆದರೆ ಮಾನವಮಾತ್ರರು ಇಂದು ಸಾರ್ವತ್ರಿಕವಾಗಿ ಒಪ್ಪುವ ದಯೆ, ಶರಣಾಗತ ರಕ್ಷಣೆ, ಸ್ತ್ರೀ ದಾಕ್ಷಿಣ್ಯ ಮೊದಲಾದ ಮೌಲ್ಯಗಳಿಗೂ ಪ್ರಾಣಿಗಳಲ್ಲಿ ನಿಸರ್ಗವೇ ಇಟ್ಟ ನಿರೋಧ (inhibitions) ಗುಣಗಳಿಗೂ ಇರುವ ಸಾಮ್ಯವನ್ನು ನೋಡಿದರೆ ಮೌಲ್ಯ

ಕಲ್ಪನೆಯಲ್ಲಿ ಮಾನವನ ಜೀವಶಾಸ್ತ್ರೀಯ ಉಳಿಗಾಲ (biological survival) ಮತ್ತು ಬೆಳೆಗಾಲ (successful propogation)ದ ಅಂಶಗಳೇ ಒಳಗೊಂಡಿವೆ ಎಂದು ಅರ್ಥವಾಗುತ್ತವೆ. ಅಲ್ಲೇ ಕಾನೂನಿನ ಉದಯ, ನ್ಯಾಯದ ಉದಯ. ಪ್ರಾಣಿ ಮಾತ್ರದಲ್ಲಿ ಹೋರಾಟಕ್ಕೆ ಮುಖ್ಯ ಕಾರಣವಾದದ್ದು ಕಾಮ ಪ್ರವೃತ್ತಿ. ಅದು ಮದ್ದಿನ ಮನೆ. ಅದರ ಅಪಾಯದ ಅಂಚಿನಿಂದ ತಪ್ಪಿಸಲು ವಿವಾಹದ ಉದಯವಾಯಿತು ಮತ್ತು ಪಾತಿವ್ರತ್ಯ ಎಂಬ ಮೌಲ್ಯದ ಉದಯವಾಯಿತು. ನಾವು ಮೌಲ್ಯಗಳೆಂದು ಕರೆಯುವ ಅನೇಕ ನೈತಿಕ ವಿಧಿಗಳು ನೇರವಾಗಿ ಮಾನವಕುಲದ survivalಗೆ ಸಂಬಂಧಿಸಿವೆ. ಆದರೆ ಕಲಾತ್ಮಕ ಮತ್ತು ಆಧ್ಯಾತ್ಮಿಕ ಮೌಲ್ಯಗಳಿಗೆ ಹೀಗೆ ಜೀವಶಾಸ್ತ್ರೀಯ ಬೆಲೆಯನ್ನು ಹೇಳುವುದು ಕಷ್ಟ. ಅವುಗಳ ಜೀವಶಾಸ್ತ್ರೀಯ ಬೆಲೆ ಸಾಮಾಜಿಕ ಮೌಲ್ಯಗಳಿಗಿಂತ ಗೂಢವೂ ಅಷ್ಟೇ ಗಾಢವೂ ಆಗಿರಬಹುದು. ಕಾಮ ಮತ್ತು ಮತ್ಸರಗಳೆಂಬ ಮದ್ದಿನ ಮನೆಗಳನ್ನು ತಣ್ಣಗಿಡುವುದಕ್ಕೆ ಅವು ಸಹಾಯವಾಗಿರಬಹುದು. ಸಂಗೀತ, ಕಲೆಗಳು ಕೊಡುವ ಬೇರೊಂದು ವಿಧವಾದ ಆನಂದವು ಪ್ರಳಯ ತಾಂಡವಕಾರಿಯಾದ ಕಾಮದಿಂದ ಚಿತ್ತವನ್ನು ವ್ಯಸ್ತಗೊಳಿಸುವುದರಿಂದ ನಿಸರ್ಗ ಅವುಗಳ ಬೆಳವಣಿಗೆಗೆ ಮನುಷ್ಯ ಜೀವನದಲ್ಲಿ ಸ್ಥಾನಕೊಟ್ಟಿರಬಹುದೆ? ಕಾಮತೃಪ್ತಿಯಲ್ಲಿ ದೊರೆಯುವ ಆನಂದವನ್ನು ಬ್ರಹ್ಮಾನಂದ ಸೋದರ ಎಂದೂ ಬ್ರಹ್ಮಾನಂದ ಕಾಮಾನಂದಕ್ಕಿಂತ ಸಾವಿರ ಪಾಲು ಹೆಚ್ಚು ಎಂದೂ ಉಪನಿಷತ್ತಿನಲ್ಲಿ ಹೇಳಿದ್ದು ಅರ್ಥಪೂರ್ಣವಾಗಿದೆ. ಆಧಿದೈವಿಕ ಆಧ್ಯಾತ್ಮಿಕ ಕಲ್ಪನೆಗಳು ಮತ್ತು ಮೌಲ್ಯಗಳು ಕೂಡ ಮನುಷ್ಯ ಜಾತಿಯ ಉಳಿಗಾಲಕ್ಕೆ ಅವಶ್ಯವಾಗಿರಬಹುದು. Religion is the opium of the people ಎಂದು ಹೇಳಿ ವಿಚಾರವನ್ನು ದೇವತ್ವಕ್ಕೆ ಏರಿಸಿದ ಕಾರ್ಲ್‌ಮಾರ್ಕ್ಸ್‌ನ ಅನುಯಾಯಿ ಮತ್ತು ರಶಿಯನ್ ಕ್ರಾಂತಿಯ ನಾಯಕನೂ ಆದ ಲಿಯಾನ್‌ಟ್ರಾಟ್‌ಸ್ಕಿ ಬರೆದ ರಶಿಯನ್ ಕ್ರಾಂತಿಯ ಚರಿತ್ರೆಯಲ್ಲಿ , ರಶಿಯದ ಹಳೆಯ ಝಾರ್ ಸತ್ತೆ spiritual ದಿವಾಳಿಗಿರಿಯಿಂದ ಬಳಲುತ್ತಿತ್ತೆಂದು ಹೇಳುತ್ತಾನೆ. Materialismನ ಅಧ್ವರ್ಯುವಾದ ಟ್ರಾಟ್‌ಸ್ಕಿ spiritualನ ಅಗತ್ಯತೆಯ ಮಾತಾಡುತ್ತಿದ್ದ. ರಶಿಯದ ಕ್ರಾಂತಿಕಾರರು ಬೈಬಲ್ಲಿನ ದೇವರನ್ನು ಪದಚ್ಯುತಗೊಳಿಸಿದರು. ಆಮೇಲೆ ಮಾರ್ಕ್ಸ್‌ನನ್ನೂ ಲೆನಿನ್ನನನ್ನೂ ದೇವರ ಪಟ್ಟಕ್ಕೇರಿಸಿದರು. ಅವರ ಬರವಣಿಗೆಗಳು ವೇದವಾದವು. ಮನುಷ್ಯನಿಗೆ ಒಂದಲ್ಲ ಒಂದು religion ಬೇಕೇಬೇಕೆಂದು ಇದು ತೋರಿಸುವುದಿಲ್ಲವೆ?

ನನ್ನ ತಾತ್ಪರ್ಯ ಇಷ್ಟೇ. ಆರ್ಥಿಕದಿಂದ ಧಾರ್ಮಿಕದವರೆಗೆ, ಕಲಾತ್ಮಕದಿಂದ ಆಧ್ಯಾತ್ಮಿಕದವರೆಗೆ ಎಲ್ಲಾ ಮಾನವ ಮೌಲ್ಯಗಳೂ ಜೀವನಮೌಲ್ಯಗಳೂ ಮಾನವಜಾತಿಯ ಉಳಿಗಾಲ ಮತ್ತು ಬೆಳೆಗಾಲ (survival and success)ಗಳಿಗೆ ಅವು ಉಪಷ್ಟಂಭಕ ಗಳಾಗಿವೆ. Instinctನ್ನು ಕಳೆದುಕೊಂಡದ್ದಕ್ಕೆ ಅವು ಪೂರಕಗಳಾಗಿವೆ. ಮೌಲ್ಯಗಳೆಂಬವು ಕಲಾತ್ಮಕ ಮತ್ತು ಆಧ್ಯಾತ್ಮಿಕವೇ ಆಗಿದ್ದರೂ ಅವು ಹೊಟ್ಟೆತುಂಬಿದ Romantic ಜನರ ಕನಸುಗಳಲ್ಲ. ಮೌಲ್ಯಗಳನ್ನು ಕಳೆದು ಹಾಕಿದರೆ ಮನುಷ್ಯ ಮನುಷ್ಯನಾಗಿ ಉಳಿಯುವುದಿಲ್ಲ ,

ಮಾತ್ರವಲ್ಲ ಮಾನವ ಜಾತಿಯೇ ಉಳಿಯಲಿಕ್ಕಿಲ್ಲ—ಎಂದು ತೋರುತ್ತದೆ. ಕೇವಲ ಇಂದ್ರಿಯ ಪ್ರವೃತ್ತಿಗಳಿಂದ ದೊರೆಯುವ ಸುಖದಿಂದ ತೃಪ್ತಿ ಹೊಂದದೆ ಮನುಷ್ಯ ಮೌಲ್ಯಗಳನ್ನು ಬೆಂಬತ್ತುವುದರಿಂದ ದೊರೆಯುವ ಹೆಚ್ಚಿನ ಸುಖದ ಕಡೆ ಒಲಿಯುತ್ತಾನೆ. ಒಂದು ಪರೋಪಕಾರದ ಕೆಲಸ, ಒಂದು ಕಲೆಯಲ್ಲಿ ಪರಿಣತಿ, ಒಂದು ಧಾರ್ಮಿಕ ಆಚರಣೆ ಇವುಗಳಿಗಾಗಿ ದುಡಿಯುತ್ತಾನೆ. ಆಗ ರಾಗ ದ್ವೇಷಗಳು ಕಡಿಮೆಯಾಗುತ್ತವೆ. ಸಮಾಜಕ್ಕೂ ಹಿತವಾಗುತ್ತದೆ.

ಹೀಗೆ ಮೌಲ್ಯಗಳ ಮಹತ್ವವನ್ನು biological function ಜೀವಶಾಸ್ತ್ರೀಯ ಅವಶ್ಯಕತೆಯೆಂದು ಹೇಳಬಹುದು. ಆದರೂ ಮೌಲ್ಯಗಳು ಬಹುಮಟ್ಟಿಗೆ ಪ್ರಕೃತಿ ಸಿದ್ಧವಾಗಿರದೆ ಅಭ್ಯಾಸದಿಂದ ಬರಬೇಕಾದವುಗಳೆಂದೂ ನಾವು ಅರಿತುಕೊಳ್ಳಬೇಕು. ಅವು ಎಷ್ಟೇ ಬಲವಾಗಿದ್ದರೂ ನಮ್ಮ ಸ್ವಭಾವದಲ್ಲಿ ಪ್ರಕೃತಿದತ್ತ ಪ್ರಚೋದನೆಗಳಷ್ಟು ಬಲವಾದವುಗಳಲ್ಲ. ಮಾತೃತ್ವ ಬಹು ಬಲವಾದ ಭಾವನೆಯೆಂದು ನಾವೆಲ್ಲ ಬಲ್ಲೆವು. 'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ' ಎಂದು ಶಂಕರಾಚಾರ್ಯರು ಅಪ್ಪಣೆ ಕೊಡಿಸಿದ್ದಾರೆ. ಆದರೂ ಕುಮಾರಿ ಮಾತೆಯರು ಮರುವಿಚಾರವಿಲ್ಲದೆ ಶಿಶುಹತ್ಯೆ ಮಾಡುವರು. ಮೌಲ್ಯಗಳ ಬಳ್ಳಿ ಅಷ್ಟು ದುರ್ಬಲವಾದದ್ದು, ಅದನ್ನು ಜಾಗ್ರತೆಯಿಂದ ಕೃಷಿಮಾಡಬೇಕು, ಕಸಿಮಾಡಬೇಕು, ಕಳೆ ಕೀಳಬೇಕು. ತರಬೇತಿಯಿಂದ ಅದು ನಮ್ಮಲ್ಲಿ ಬೇರೂರಬೇಕು. ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುವ formative ವಯಸ್ಸಿನಲ್ಲೇ ಅವು ಅಭ್ಯಾಸವಾಗಬೇಕು. ಈ ವಯಸ್ಸಿನಲ್ಲಿ ಆಧುನಿಕ ಮಾನವನಂತೂ ಶಿಕ್ಷಣ ಸಂಸ್ಥೆಗಳಲ್ಲಿರುತ್ತಾನೆ. ಆದ್ದರಿಂದ ಮೌಲ್ಯಗಳು ಶಿಕ್ಷಣದ ವಿಷಯಗಳಾಗುತ್ತವೆ. ಜೀವನೋಪಾಯದ ಶಿಕ್ಷಣ ಅಗತ್ಯ ನಿಜ. ಆದರೆ ಅದು ತಾಯಿ ಹುಲಿ ಮರಿಗೆ ಬೇಟೆಯಾಡುವುದಕ್ಕೆ ಕೊಡುವ ಶಿಕ್ಷಣದ ಮಟ್ಟದ್ದೇ. ನಿಜವಾದ ಶಿಕ್ಷಣ ಎಂದರೆ ಮೌಲ್ಯ ಶಿಕ್ಷಣವೇ. ಜೀವನಮೌಲ್ಯಗಳ ಪ್ರತಿಪಾದನೆ, ವಿಶದೀಕರಣ, ವಿಮರ್ಶೆ, ಪುನರ್ವಿಚಾರ ಇವೆಲ್ಲ ಶಿಕ್ಷಣದಲ್ಲಿ ಸ್ಥಾನ ಪಡೆಯುತ್ತವೆ. ಸತ್ಯ, ಕ್ಷಮೆ, ದಯೆ, ನ್ಯಾಯಾನ್ಯಾಯ ವಿವೇಕ ಇವೇ ಮೊದಲಾದ ಮೂಲಜೀವನ ಮೌಲ್ಯಗಳು ಮಗು ಶಾಲೆಗೆ ಬರುವ ಮೊದಲೇ ಅದರ ಮನಸ್ಸಿನಲ್ಲಿ ದೃಢಗೊಳ್ಳಬೇಕಾದವು ಎಂಬುದು ನಿಜ. ಆದರೆ ಅನೇಕ ನೈತಿಕ ಸಾಮಾಜಿಕ ರಾಜಕೀಯ ಮೌಲ್ಯಗಳನ್ನು ಶಿಕ್ಷಣ ಮೂಲಕವಾಗಿಯೇ ರೂಪಿಸಬೇಕಾಗುವುದು. ಕಲಾ ಮೌಲ್ಯಗಳ ಪರಿಷ್ಕರಣವಂತೂ ಶಿಕ್ಷಣದ ಉನ್ನತವಾದ ಕೆಲಸ. ಆಧ್ಯಾತ್ಮಿಕ ಮೌಲ್ಯಗಳ ವಿಷಯ ನಾನು ಧೈರ್ಯವಾಗಿ ಹೇಳಲಾರೆ. ಅದು ಅತ್ಯಂತ ಸ್ವಕೀಯ, personal ಅನುಭವಕೋಟಿಯದು.

ದುರ್ದೈವದಿಂದ ಜೀವನ ಮೌಲ್ಯಗಳು ಇಂದಿನ ಶಿಕ್ಷಣ ಪದ್ಧತಿಯಲ್ಲಿ ಮಹತ್ವ ಪಡೆದಿಲ್ಲ. ದೇಶದಲ್ಲಿ ಇಂದು ಉಸಿರುಕಟ್ಟಿಸುವ ವೇಗದಲ್ಲಿ ಸಾಮಾಜಿಕ ಬದಲಾವಣೆಗಳಾಗುತ್ತಿವೆ. ನಿನ್ನೆ ಮೊನ್ನೆಯವರೆಗೆ ಕೆಲ ಮೂಲಭೂತ ಮೌಲ್ಯಗಳ ಪರಿಚಯ ಮಾತ್ರ ಇದ್ದ ವರ್ಗಗಳು ಇಂದು ರಾಷ್ಟ್ರದ ಆಗುಹೋಗುಗಳಲ್ಲಿ ಮಹತ್ವದ ಸ್ಥಾನಕ್ಕೆ ಮೇಲೇರುತ್ತಿವೆ.

ಈ ಆಕಾರವಿಲ್ಲದ ಮಾನವ ಪದಾರ್ಥ ಅದರ ಒಂದು ದೊಡ್ಡ ಭಾಗ. ನಮ್ಮ ಶಿಕ್ಷಣ ಸಂಸ್ಥೆಗಳ ಮೂಲಕ ಹಾಯ್ದುಹೋಗುತ್ತಿದೆ. ಅದಕ್ಕೆ ಮೌಲ್ಯಗಳ ತಳಹದಿಯಲ್ಲಿ ಆಕಾರ ಕೊಡುವುದು ಶಿಕ್ಷಣದ ಕೆಲಸವಾಗಿದೆ. ಈ ಜನರು ಶಿಕ್ಷಣದಿಂದ ಯಾವ ಮೌಲ್ಯಾಕಾರವನ್ನೂ ಹೊಂದದೆ ಹೊರಬಿದ್ದಲ್ಲಿ ಇಡೀ ರಾಷ್ಟ್ರದ ಅಸ್ತಿತ್ವಕ್ಕೆ ಗಂಡಾಂತರ ಪ್ರಾಯವಾಗಬಹುದು. ಯಾಕೆಂದರೆ ಶಿಕ್ಷಣದ ಮತ್ತು ನಗರ ಜೀವನದ ಪರಿಸರದಲ್ಲಿ ಆ ಜನವರ್ಗಗಳು ತಮ್ಮಲ್ಲಿದ್ದ ಅನಾದಿ ಜೀವನ ಮೌಲ್ಯಗಳನ್ನು ಕಳೆದುಕೊಳ್ಳುತ್ತವೆ. ಉತ್ತರಭಾರತದ ವಿಶ್ವವಿದ್ಯಾಲಯಗಳ ಗಲಭೆಗಳನ್ನು ಪರಿಶೀಲಿಸಿ ವಿದೇಶೀಯನೊಬ್ಬ ಎನ್‌ಕೌಂಟರ್ ಪತ್ರಿಕೆಯಲ್ಲಿ ಒಂದು ಲೇಖನ ಬರೆದಿದ್ದ. ಅದರಲ್ಲಿ ಆತ ಹಳ್ಳಿಗಾಡಿನಿಂದ ಬಂದ ವಿದ್ಯಾರ್ಥಿಗಳೇ, ಅಧಿಕತರವಾಗಿ, ಗಲಭೆಗಳ ಮುಂಚೂಣಿಯಲ್ಲಿರುತ್ತಾರೆ ಎಂದು ಹೇಳಿದ್ದಾನೆ. ತಕ್ಕ ಮೌಲ್ಯ ತರಬೇತಿಯಾಗದೆ ಇದ್ದರೆ ನಮ್ಮ ಪುರಾತನರು ಹೇಳಿದ ಹಾಗೆ 'ಸಾಕ್ಷರೋ ರಾಕ್ಷಸೋ ಭವೇತ್' ಅಕ್ಷರ ಬಂದ ಹುಂಬರು ರಾಕ್ಷಸರೇ ಆಗುತ್ತಾರೆ ಎಂಬುದು ಸತ್ಯವಾಗುತ್ತದೆ. ಹಳೇ ಮೌಲ್ಯಗಳನ್ನು ಕಳೆದುಕೊಂಡವರಿಗೆ ಹೊಸ ಮೌಲ್ಯಗಳನ್ನು ಕೊಡದೆ ಮುಂದೆ ಕಳಿಸಿದ್ದಕ್ಕೆ ಇದು ದೇಶಕ್ಕೆ ಆಗುವ ಶಿಕ್ಷೆ. ಬುದ್ಧಿ ಬಲಿತು ಮೌಲ್ಯಕಲ್ಪನೆ ಇನ್ನೂ ಹುಟ್ಟದಿದ್ದ ಕಾಲದಲ್ಲಿ ಮನುಷ್ಯ ಮನುಷ್ಯನನ್ನು ಕೊಲ್ಲುವ ಅಸ್ವಾಭಾವಿಕ ಪ್ರಾಣಿಯಾದದ್ದನ್ನು ಹಿಂದೆ ನಾನು ಹೇಳಿದ್ದೇನೆ. ಆ ಸ್ಥಿತಿ ಈಗ ಪುನಃ ನಮ್ಮ ದೇಶದಲ್ಲಂತೂ ಇನ್ನೊಮ್ಮೆ ಉಂಟಾಗುತ್ತಿದೆ.

ಮೌಲ್ಯದೃಷ್ಟಿಯಿಂದ ನಿರಾಕಾರವಾದ ಈ ಮಾನವ ಸಾಮಗ್ರಿಗೆ ಮೌಲ್ಯಕಾರವನ್ನು ಕೊಡುವುದು ಒಂದು ಶಿಕ್ಷಣ ಸಮಸ್ಯೆಯಾಗಿದ್ದರೆ, ಮೌಲ್ಯಗಳ ಪುನರ್ವಿಚಾರ ಮಾಡುವುದು ಇನ್ನೊಂದು ಪ್ರಶ್ನೆಯಾಗಿದೆ. ಒಂದು ಕಾಲದಲ್ಲಿ ಅತ್ಯಂತ ಹಿತಕರವಾದ ಮೌಲ್ಯಗಳು ಕಾಲಕ್ಕೆ ಭಾರಮಾತ್ರವಾಗಿ ಪರಿಣಮಿಸಬಹುದು. ನನ್ನ ತರುಣ ತತ್ವಜ್ಞಾನಿ ಮಿತ್ರನೊಬ್ಬನ ಹತ್ತಿರ ಮೌಲ್ಯಗಳ ಬಗ್ಗೆ ಮಾತಾಡುತ್ತಿದ್ದೆ. ಆತ ತನ್ನ ಒಂದು ಅನುಭವವನ್ನು ಹೇಳಿದ. ಲಾರೆನ್ಸ್ ಆಫ್ ಅರೇಬಿಯಾ ಚಿತ್ರಕ್ಕೆ ಆತ ಹೋಗಿದ್ದ. ಅದರ ಒಂದು ದೃಶ್ಯದಲ್ಲಿ ಲಾರೆನ್ಸ್ ತನ್ನ ಇಬ್ಬರು ಅರಬ ಸಂಗಡಿಗರೊಡನೆ ಮರಳುಗಾಡಿನಲ್ಲಿ ಹೋಗುತ್ತಿದ್ದಾನೆ. ಒಮ್ಮೆಲೇ ಅವನ ಒಬ್ಬ ಸಂಗಡಿಗ ಮರಳು ಕಾಡುಗಳಲ್ಲಿ ಇರುವ ಮರಳಿನ ಮಡುವಿನಲ್ಲಿ (quick sand) ಕಾಲಿಟ್ಟು ಸಿಕ್ಕಿಕೊಳ್ಳುತ್ತಾನೆ. ಮರಳಿನಲ್ಲಿ ಆತ ಮುಳುಗುತ್ತಿರುವುದನ್ನು ಕಂಡು ಇನ್ನೊಬ್ಬ ಸಂಗಡಿಗ ಅವನ ಸಹಾಯಕ್ಕೆಂದು ಧಾವಿಸುತ್ತಾನೆ. ಲಾರೆನ್ಸ್ ಆತನನ್ನು ತಡೆದು ನಿಲ್ಲಿಸುತ್ತಾನೆ. ನನ್ನ ಮಿತ್ರನನ್ನು ಮರಳಿನ ಸುಳಿ ನುಂಗುತ್ತಿದೆಯಲ್ಲಾ ಎಂದಾತ ಹೇಳಿದರೆ ಲಾರೆನ್ಸ್, ಹೌದು, ನೀನು ಅವನನ್ನು ಹೊರಗೆಳೆಯುವುದಕ್ಕೆ ಅದರ ಹತ್ತಿರ ಹೋದರೆ ಅದು ನಿನ್ನನ್ನೂ ಎಳೆದುಕೊಳ್ಳುತ್ತದೆ. ನೀನೂ ಹೋಗುತ್ತೀ ಹೊರತು ಅವನನ್ನು ಹೊರಗೆಳೆಯುವುದಕ್ಕೆ ಸಾಧ್ಯವಾಗದು. ಹೋಗಬೇಡ ಎಂದು ಉಪದೇಶಿಸಿ ಅವನನ್ನು ಬಲವಂತದಿಂದ ಎಳೆದುಕೊಂಡು ಮುಂದೆ ಹೋಗುತ್ತಾನೆ. "ಮಿತ್ರನನ್ನು ಉಳಿಸುವುದಕ್ಕೆ ಮಿತ್ರ ಪ್ರಾಣ ಬಲಿಕೊಡಲಿಕ್ಕೆ ಹೋಗುವ ಉದಾತ್ತ ಮೌಲ್ಯದ ಆಚರಣೆಗೆ ಹೊರಟವನನ್ನು ಲಾರೆನ್ಸ್

ನಿರ್ಘೃಣನಾಗಿ ತಡೆದದ್ದು ನನಗೆ ಹೇಸಿಗೆ ತಂದಿತು" ಎಂದು ನನ್ನ ಮಿತ್ರ ಹೇಳಿದ. ಆದರೆ ಮಿತ್ರನಿಗಾಗಿ ಜೀವಕೊಡುವುದು ಹಿಂದಿನ ಕಾಲದಲ್ಲಿ ಗೌರವಾರ್ಹ ಮೌಲ್ಯವಾಗಿತ್ತು. ಕೆ.ವಿ. ಅಯ್ಯರರ ಶಾಂತಲಾ ಕಾದಂಬರಿಯಲ್ಲಿ ಸ್ವಾಮಿ ಸತ್ತೊಡನೆ ತಾವೂ ಸಾಯುವುದಕ್ಕೆ ಪಣತೊಟ್ಟ ಗರುಡರ ಉದಾಹರಣೆಗಳು ಬರುತ್ತವೆ. ಓದುವಾಗ ಅದು ಆಹಾ! ಅನಿಸುತ್ತದೆ. ಆದರೆ ವ್ಯರ್ಥವಾಗಿ ಜೀವ ಕೊಡುವುದರಲ್ಲಿ ಏನು ಪುರುಷಾರ್ಥ? ಓಬೀರಾಯನ ಕಾಲದ ಈ ಮೌಲ್ಯವನ್ನು ತ್ಯಜಿಸಿದ್ದರಿಂದ ಯುರೋಪಿಯನ್ನರು ಜೀವನದಲ್ಲಿ ಹೆಚ್ಚು ಯಶಸ್ವಿಗಳಾದದ್ದು ಕಾಣಿಸುತ್ತದೆ. ಅದೇ ಚಲನಚಿತ್ರದಲ್ಲಿ ಲಾರೆನ್ಸ್ ದೂರದಲ್ಲಿ ನಿಂತು ಹಗ್ಗ ಒಗೆದು ಮರಳಿನ ಸುಳಿಯಲ್ಲಿ ಸಿಕ್ಕಿದವನನ್ನು ರಕ್ಷಿಸುವುದಕ್ಕೆ ಹೆಚ್ಚು ವಿಚಾರಪೂರ್ಣ ಪ್ರಯತ್ನವನ್ನೂ ಮಾಡುತ್ತಾನೆ. ಗರುಡ ಹೋಗುವ ಮೌಲ್ಯಕ್ಕಿಂತ ಜೀವಂತ ಉಳಿದೆ ಕಷ್ಟದಲ್ಲಿರುವವರನ್ನು ಕಾಪಾಡುವುದಕ್ಕೆ ಯತ್ನಿಸುವ ಚಿತ್ತಸ್ಥೈರ್ಯವನ್ನು ಕೊಡುವ ಮೌಲ್ಯ survival ದೃಷ್ಟಿಯಿಂದ ಹೆಚ್ಚು ಬೆಲೆ ಬಾಳುವಂಥಾದ್ದಲ್ಲವೆ?

ಸರ್ವಜ್ಞನ 'ಅಡಿಯ ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ ನರಕ' ಎಂಬ ಉದಾತ್ತ ಮೌಲ್ಯವೂ ಪುನಃ ವಿಚಾರಿಸಬೇಕಾದ್ದೇ. ಕೈ ಕೈ ಯುದ್ಧದ ಕಾಲದಲ್ಲಿ ಬೆಲೆಬಾಳುತ್ತಿದ್ದ ಈ ಮೌಲ್ಯ ವೇಗವಾದ ವಾಹನ, ದೂರದಿಂದ ಘಾತಿಸುವ ಆಯುಧಗಳ ಕಾಲದಲ್ಲಿ ಅರ್ಥವನ್ನು ಕಳೆದುಕೊಂಡಿತು. ಯೂರೋಪಿಯನ್ನರೂ ಮುಸ್ಲಿಮರೂ 'ಅಡಿಯ ಹಿಂದಿಡೆ ನರಕ' ಎಂಬ ಮೌಲ್ಯವನ್ನು ನೂರಾರು ವರ್ಷಗಳ ಹಿಂದೆ ತ್ಯಜಿಸಿ ಮುನ್ನಡೆ ಹಿನ್ನಡೆಗಳ ಹೊಸ ಮಿಲಿಟರಿ ಮೌಲ್ಯಗಳನ್ನು ಕಲ್ಪಿಸಿಕೊಂಡದ್ದರಿಂದ ಅವರು ಮಾನವ ಜೀವಗಳನ್ನೂ ಉಳಿಸಿದರು. ಹೆಚ್ಚು ಯುದ್ಧಗಳನ್ನೂ ಗೆದ್ದರು. ನಾವು 'ಅಡಿಯ ಹಿಂದಿಡೆ ನರಕದ' ಮೌಲ್ಯವನ್ನು ನಚ್ಚಿ ಎಷ್ಟೋ ಯುದ್ಧಗಳಲ್ಲಿ ಸೋತೆವು. ೧೯೬೨ರಲ್ಲಿ ಕೂಡ ಈ ಅಡಿಯ ಹಿಂದಿಡೆ ನರಕಕ್ಕೆ ಹೋಗಲೆಂದು ಹೆದರಿಯೇ ಹಿಮಾಲಯದಲ್ಲಿ ನಾವು ಅವಮಾನಕರವಾದ ಸೋಲನ್ನು ಕಂಡೆವೆಂದು ತೋರುತ್ತದೆ.

ಮಾತೃದೇವೋಭವ, ಪಿತೃದೇವೋಭವ ಮತ್ತು ಆಚಾರ್ಯದೇವೋಭವ ಎಂಬ ಮೌಲ್ಯಗಳ ಪುನರ್ವಿಚಾರವೂ ಬೇಕಾಗಿದೆ. ದಯವಿಟ್ಟು ನನ್ನನ್ನು ತಪ್ಪು ತಿಳಿದುಕೊಳ್ಳಬಾರದು. ಚಿಕ್ಕ ಚಿಕ್ಕ ಕುಟುಂಬ ಘಟಕಗಳೂ ದೂರದೂರದ ಗುರುಕುಲಗಳೂ ಇದ್ದಾಗ ಈ ಮೌಲ್ಯಕ್ಕೆ ಅರ್ಥವಿತ್ತು. ಈಗ ಅದು ನಿರರ್ಥಕ ಭಾರವಾಗಿದೆ. ಪ್ರತಿಯೊಂದಕ್ಕೂ ತಂದೆ ತಾಯಿ ಗುರುಗಳ ಮುಖ ನೋಡುವುದಕ್ಕೆ ಈ ಮೌಲ್ಯಗಳು ಕಾರಣವಾಗಿವೆ. ೧೫-೧೬ರ ಯೂರೋಪಿಯನ್ ಯುವಕ ಬರಿಗೈಯಲ್ಲಿ ಆಸ್ಟ್ರೇಲಿಯಾಕ್ಕೆ ಹೋಗಿ ತನ್ನ ಭವಿಷ್ಯವನ್ನು ಹುಡುಕಲು ಯತ್ನಿಸುತ್ತಾನೆ. ತಂದೆ ತಾಯಿಗಳು ಆಶೀರ್ವದಿಸುತ್ತಾರೆ. ನಾವು ನಲವತ್ತಾದರೂ ತಂದೆ ತಾಯಿಗಳನ್ನು ಕೇಳದೆ ಏನೂ ಮಾಡಲು ಧೈರ್ಯಪಡುವುದಿಲ್ಲ. ಯೂರೋಪಿಯನ್ ಮನುಷ್ಯ ಹೆಚ್ಚು ಯಶಸ್ವಿಯಾದದ್ದು ಏನಾಶ್ಚರ್ಯ? ನಾನೂ ಒಬ್ಬ ತಂದೆ. ಆದರೂ ಈ ಮೌಲ್ಯ ಹೋಗಬೇಕೆನ್ನುತ್ತೇನೆ. ಮಕ್ಕಳನ್ನು ಸಾಕುವಾಗ ಉಂಟಾಗುವ ಆನಂದವೇ ಅವುಗಳನ್ನು

ಸಾಕಿದ್ದರ ಸಾರ್ಥಕ್ಯ ಎಂಬುದಾಗಿ ಶಿವರಾಮ ಕಾರಂತರು ಹೇಳುತ್ತಾರೆ. ಮುಂದೆ ಮಕ್ಕಳು ನಮ್ಮ ಸೆರಗಿಗೆ ಅಂಟಿಕೊಂಡಿರಬೇಕೆಂದು ಅಪೇಕ್ಷಿಸಬಾರದು. ಈ ಹೊಸ ಮೌಲ್ಯವು ತನ್ನ ಮುಪ್ಪನ್ನು ತೆಗೆದುಕೊಳ್ಳಲು ಒಪ್ಪದ ಮಕ್ಕಳಿಗೆ ಶಾಪಕೊಟ್ಟ ಯಯಾತಿಯ ಮೌಲ್ಯಕ್ಕಿಂತ ಹಿರಿದೆಂದು ತೋರುವುದಲ್ಲವೆ? ಇಂದಿನ ಭಾರತದಲ್ಲಿರುವ ನೆಪಾಟಿಸಂ ಮೊದಲಾದ ದುರ್ವ್ಯಾಪಾರಗಳನ್ನು ನಾವೆಲ್ಲ ಖಂಡಿಸುತ್ತೇವೆ. ಮಿತಿಮೀರಿದ ಕುಟುಂಬವಾತ್ಸಲ್ಯವೆ ಈ ದುರ್ವ್ಯಾಪಾರಕ್ಕೆ ಕಾರಣ. ಮಾತೃದೇವೋಭವ ಮೊದಲಾದ ಮೌಲ್ಯಗಳು ಸಂಕುಚಿತ ಕುಟುಂಬ ಭಾವವನ್ನು ಬಲಪಡಿಸುವ ಸಾಧನಗಳಾಗಿವೆ. ಮಾತೃದೇವೋಭವವನ್ನು ಇಟ್ಟುಕೊಂಡು ನೆಪಾಟಿಸಂ ಹೋಗಲಾಡಿಸುವುದು ಸಾಧ್ಯವಾಗಲಿಕ್ಕಿಲ್ಲ.

ಇಂಥಾ ಕಾಲ ವಿರುದ್ಧ ಮೌಲ್ಯಗಳನ್ನು ಚರ್ಚಿಸಿ ವಿದ್ಯಾರ್ಥಿಗಳ ಮನಸ್ಸು ಗಟ್ಟಿಗೊಳ್ಳುವ ಮೊದಲೇ ಆ ಮೌಲ್ಯಗಳ ಅತಿಯಾದ ಹಿಡಿತದಿಂದ ಅವರನ್ನು ಪಾರುಗಾಣಿಸುವುದು ಶಿಕ್ಷಣದ ಕಾರ್ಯವೆಂದು ನನಗೆ ತೋರುತ್ತದೆ.

ಭಾರವಾದ ಮೌಲ್ಯಗಳ ವಿಚಾರ ಇಲ್ಲಿಗೆ ಬಿಡೋಣ. ಕೆಲ ಮಹತ್ವದ ಮೌಲ್ಯಗಳ ಅಭಾವದಿಂದ ಭಾರತೀಯರು ಬಳಲುತ್ತಿರುವುದನ್ನೂ ಹೇಳಬೇಕು. ಬುದ್ಧನ ದೇಶದವರಾದ ನಾವು ಸಾಮಾನ್ಯವಾಗಿ ಪ್ರಾಣಿಗಳ ಮತ್ತು ಮನುಷ್ಯರ ಯಾತನೆಗಳಿಗೆ ಕರಗುವ ಶ್ರೇಷ್ಠ ಮೌಲ್ಯವನ್ನು ಮರೆತೇ ಬಿಟ್ಟಿದ್ದೇವೆ. ನಮ್ಮಲ್ಲಿ ವಿಶೇಷವಾಗಿ ಕೊರತೆಯಾಗಿರುವ ಇನ್ನೊಂದು ಮೌಲ್ಯ ನೈತಿಕ ಧೈರ್ಯದ ಅಭಾವ. ನೀರದ ಚೌಧುರಿಯವರು Hindu Mind ಎಂಬ ಸುತ್ತಲೂ ಲತ್ತೆಕೊಡುವ ಒಂದು ಪುಸ್ತಕ ಬರೆದಿದ್ದಾರೆ. ಅದರಲ್ಲಿ ಮುಸಲ್ಮಾನರಿಗಿಂತ ಹಿಂದುಗಳಿಗೆ ನೈತಿಕ ಧೈರ್ಯ ಕಡಿಮೆಯಾಗಿದೆ ಎಂದು ಹೇಳಿ ವಿದೇಶೀಯರಿಗೆ ಹಿಂದುಗಳಿಗಿಂತ ಮುಸಲ್ಮಾನರು ಹೆಚ್ಚು ಮೆಚ್ಚಿಕೆಯಾಗುವುದಕ್ಕೆ ಇದೊಂದು ಕಾರಣ ಎನ್ನುತ್ತಾರೆ. ಮಹಾರಾಷ್ಟ್ರದ ಪ್ರಗತಿಶೀಲ ಮುಸ್ಲಿಂ ಬುದ್ಧಿಜೀವಿ ಹಮೀದ ದಲವಯಿಯವರೂ ಹಿಂದೂಗಳಲ್ಲಿ ನೈತಿಕ ಧೈರ್ಯವಿಲ್ಲದ್ದರಿಂದ ಪ್ರತಿಗಾಮಿ ಮುಸ್ಲಿಮರು ರಾಜಕಾರಣದಲ್ಲಿ ಮೆರೆಯುತ್ತಿದ್ದಾರೆ ಎನ್ನುತ್ತಾರೆ. ವಾಸ್ತವಿಕವಾಗಿ ನಮ್ಮಲ್ಲಿ ಶೌರ್ಯಕ್ಕೆ ಕೊರತೆಯಿಲ್ಲ. ಸಾಯುವುದಕ್ಕೆ ನಾವೆಲ್ಲ ಸಿದ್ಧರೇ. ಆದರೆ ಧೈರ್ಯದ್ದೇ ಕೊರತೆ. ಅಪಾಯದ ಎದುರಲ್ಲಿ ಪಕ್ಕನೆ ನಿರಾಶರಾಗದಿರುವುದೇ ಧೈರ್ಯ. ಶೌರ್ಯವಿದ್ದರೂ ಧೈರ್ಯದ ಅಭಾವದಿಂದ ನಾವು ಸೋತ ಯುದ್ಧಗಳೆಷ್ಟೋ, ಸೋತ ಕ್ರಿಕೆಟ್ ಆಟಗಳೆಷ್ಟೋ.

ಮೌಲ್ಯಗಳ ರಕ್ಷಣೆ, ಪೋಷಣೆ, ನವಮೌಲ್ಯಗಳ ಪ್ರತಿಪಾದನೆ, ನಿರರ್ಥಕ ಮೌಲ್ಯಗಳ ನಿರಸನ ಮೊದಲಾದ ಇವೆಲ್ಲಾ ಶಿಕ್ಷಣದ ಕೆಲಸಗಳಾಗಬೇಕು ಎಂದು ಹೇಳಿದ ಮೇಲೆ ಈಗೇನಾಗುತ್ತಿದೆ ಎಂದು ಕೇಳಿದರೆ ನಿರಾಶಾದಾಯಕ ಸಂಗತಿಗಳು ಕಣ್ಣಿಗೆ ಬೀಳುತ್ತವೆ. ನಮ್ಮ ಶಿಕ್ಷಣ ಸಂಸ್ಥೆಗಳು ಯಾವ ಮೌಲ್ಯಗಳನ್ನು ಸಾಧಿಸಬೇಕೋ ಆ ಮೌಲ್ಯಗಳು ಸ್ವತಃ ಶಿಕ್ಷಣಸಂಸ್ಥೆಗಳಲ್ಲಿ ಉಂಟೇ? ಎಲ್ಲಾ ಮೌಲ್ಯಗಳ ಪ್ರಯೋಜನ ಒಂದು ಮನಸ್ಸಮಾಧಾನ, ಒಂದು ಅಲೌಕಿಕ ತೃಪ್ತಿ ಎಂದು ಹೇಳಿದ್ದೇನೆ. ಹಾಗೆಯೆ ಎಲ್ಲಾ ಮೌಲ್ಯಗಳ ತಾಯಿ

ಪ್ರಾಮಾಣಿಕತೆ. ಮಾಡುವ ಕೆಲಸವನ್ನು ಸಾಧ್ಯವಿದ್ದಷ್ಟು ಪರಿಪೂರ್ಣವಾಗಿ ಮಾಡುವುದೇ ಪ್ರಾಮಾಣಿಕತೆ. ಆದರೆ ಶಾಲೆಯಿಂದ ಹಿಡಿದು ವಿಶ್ವವಿದ್ಯಾಲಯಗಳವರೆಗೆ ವಿಷಯಜ್ಞಾನಕ್ಕಿಂತ ಮಾರ್ಕು ಗಿಟ್ಟಿಸುವುದಕ್ಕೆ, ಜ್ಞಾನಕ್ಕಿಂತ ಡಿಗ್ರಿಗೆ ಮಹತ್ವವಿರುವಾಗ ಮೌಲ್ಯ ಎಲ್ಲಿ ನಿಂತೀತು? ಪರೀಕ್ಷೆಗೆ ಅದೇನು ಬರುವುದಿಲ್ಲವೋ ಯಾಕೆ ಓದಿ ತಲೆಕೆಡಿಸಿಕೊಳ್ಳುತ್ತೀ ಎನ್ನುವ ಗುರುಗಳೂ ನೋಟ್ಸು ಕೊಟ್ಟುಬಿಡಿ ಎಂಬ ಶಿಷ್ಯರೂ ಫಲಿತಾಂಶ ಕಡಿಮೆಯಾದರೆ ಗ್ರೇಸ್ ಮಾರ್ಕು ಕೊಟ್ಟು ಪರ್ಸೆಂಟೇಜು ಹೆಚ್ಚಿಸಿರಿ ಎನ್ನುವ ವಿಶ್ವವಿದ್ಯಾಲಯಗಳೂ ಎಂಥಾ ಮೌಲ್ಯಗಳನ್ನು ಸಾಧಿಸಬಲ್ಲವು? ಶಿಕ್ಷಣ ಇಂದು ವಿದ್ಯಾರ್ಜನೆಯ ಪ್ರಶ್ನೆಯಾಗಿಲ್ಲ. ಎಂಜಿನಿಯರಿಂಗ್ ಸಮಸ್ಯೆಯಾಗಿದೆ. ಆದಷ್ಟು ಕಡಿಮೆ ಶ್ರಮ ವ್ಯಯದಿಂದ ಆದಷ್ಟು ಹೆಚ್ಚು ಕೆಲಸ ಮಾಡಿಸುವುದು ಎಂಜಿನಿಯರಿಂಗ್ ಉದ್ದೇಶ. ಆದಷ್ಟು ಕಡಿಮೆ ಓದಿ ಆದಷ್ಟು ಹೆಚ್ಚು ಮಾರ್ಕು ಹೊಂದುವುದು ಶಿಕ್ಷಣದ ಗುರಿಯೆಂದು ನಾವು ತಿಳಿದುಕೊಂಡಿದ್ದೇವೆ.

ನಾವೆಲ್ಲರೂ ಪರಿಸ್ಥಿತಿಗಳ ದಾಸರು. ಕಾಲವೇ ಹಾಗಾಗಿ ಬಿಟ್ಟಿದೆ, ಎಂಬ ಉತ್ತರ ಬರುತ್ತದೆಂದು ನಾನು ಬಲ್ಲೆ. ಆದರೆ ಪರಿಸ್ಥಿತಿಗಳ ದಾಸ್ಯದಿಂದ ಮುಕ್ತರಾಗಲು ಮೌಲ್ಯಗಳೇ ಬೇಕಲ್ಲವೆ? ಶಾಲೆ ಕಾಲೇಜುಗಳನ್ನು ಬಾಯಿಪಾಠದ ವಾತಾವರಣದಿಂದ ಮುಕ್ತಗೊಳಿಸಿ ಮುಕ್ತಚರ್ಚೆ, ಸಾಧನೆ, performance ತಳಹದಿಯ ಮೇಲೆ ನಿಲ್ಲಿಸಿದರೆ ಮೌಲ್ಯಗಳ ಬೆಳವಣಿಗೆಗೆ ಸಹಾಯವಾಗಲಾರದೆ? ಈಗಿಗಿಂತ ಒಳ್ಳೇ ಪಠ್ಯಪುಸ್ತಕಗಳು ನೆರವಾಗಲಾರವೇ? ಪರೀಕ್ಷೆಗಳ ಬದಲು ನಿತ್ಯಭ್ಯಾಸದ ಮೇಲೆ ವಿದ್ಯಾರ್ಥಿಯ ಯೋಗ್ಯತೆಯನ್ನು ನಿರ್ಧರಿಸುವ ಅಮೇರಿಕದ ಪದ್ಧತಿಯನ್ನು ತರಲಾಗದೆ? ಈ ಬಗೆಯ ಪ್ರಯೋಗಗಳು ಆಗಿಲ್ಲವೆಂದಲ್ಲ. ಆದರೆ ಒಂದು ವರ್ಷ ಕೂಡ ಆ ಪ್ರಯೋಗಗಳನ್ನು ಪ್ರಾಮಾಣಿಕವಾಗಿ ಪೂರೈಸದೆ ಮತ್ತೆ ಹಳೇ ಕಂಬಿಗೇ ನಮ್ಮ ರೈಲು ಬಂದು ಕೂಡುವಂತೆ ಮಾಡುತ್ತೇವೆ. ಶಿಕ್ಷಣಕ್ಷೇತ್ರಕ್ಕೆ ಈಗಿಗಿಂತ ಹೆಚ್ಚು ಜನ ಪ್ರಥಮ ವರ್ಗದ ಜನರನ್ನು ತರಬೇಕು. ಆದರೂ ಪ್ರಥಮ ವರ್ಗದ ಮಾನವ ಸಾಮಗ್ರಿ ವಿದೇಶಗಳಿಗೆ ರಫ್ತಾಗುತ್ತಿದೆ. ನಮ್ಮ ಜನರ ಬುದ್ಧಿಮಟ್ಟ ಬೇರಾವ ದೇಶಕ್ಕಿಂತ ಕೆಳಗಿಲ್ಲ. ಈ ದೇಶಬಿಟ್ಟು ಹೋದ ಹತ್ತು ವರ್ಷಗಳೊಳಗೆ ಅದು ನೋಬೆಲ್ ಬಹುಮಾನ ತರಲು ಸಮರ್ಥವಾಗುತ್ತದೆ. ಆದರೆ ಪ್ರಾಮಾಣಿಕತೆಯ ಅಭಾವದ ವಾತಾವರಣದಲ್ಲಿ ಅದು ಈ ದೇಶದಲ್ಲಿ ಅರಳದೆ ಹೋಗುತ್ತದೆ. ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ನಿರ್ಭಯ ವಾತಾವರಣವಿಲ್ಲ. ಮೌಲ್ಯಗಳ ಬೆಳವಣಿಗೆಗೆ ಪೋಷಕವಾದ ಬಹಿರಂಗ ಸ್ಪರ್ಧೆಯ ಬದಲು ಒಳಸಂಚಿನಿಂದ ಸ್ಥಳಗಳನ್ನು ಗಿಟ್ಟಿಸಲಾಗುತ್ತಿದೆ. Spiritual-ಆಧ್ಯಾತ್ಮಿಕವೆಂದು ಹೇಳಿಕೊಳ್ಳುವ ಈ ದೇಶ stark materialism ಶುದ್ಧ ಭೌತಿಕ ಸ್ವಾರ್ಥದಿಂದ ಬಳಲುತ್ತಿದೆ. ಈ ಪರಿಸ್ಥಿತಿಯ ಬದಲಾವಣೆಗೆ ಶತಪ್ರಯತ್ನಬೇಕು. ಆದರ ಕಷ್ಟವನ್ನೆಲ್ಲ ಶಿಕ್ಷಣ ರಂಗದಲ್ಲಿರುವವರೇ ಹೊರಬೇಕಾದರೂ ಸಾರ್ವಜನಿಕ ನೀತಿಯ ಬೆಂಬಲ ಅಗತ್ಯವಿದೆ. ಶಿಕ್ಷಕ ಏನೇ ಸಸಿ ನಟ್ಟರೂ ಪ್ರಾಮಾಣಿಕತೆಗೆ ಬೆಲೆಯಿಲ್ಲ ಎನ್ನುವ ಸ್ಥಿತಿ ದೇಶದಲ್ಲಿದ್ದರೆ ಹೊರಗೆ ಬಂದೊಡನೆ ಸಸಿ ಒಣಗಿ ಹೋದೀತು.

ಈ ಪರಿಸ್ಥಿತಿ ಇರುವವರೆಗೆ ಮೌಲ್ಯಗಳು ಶಿಕ್ಷಣಕ್ಷೇತ್ರದೊಳಗಿಗಿಂತಲೂ ಹೊರಗೆ ಬೆಳೆಯಬಹುದಷ್ಟೇ. ಕಾರಂತರ ಹಾಗೆ ಮತ್ತು ಅವರ ಈಚಿಗಿನ ಕೆಲ ಕಾದಂಬರಿಗಳ ನಾಯಕರ ಹಾಗೆ ತಮ್ಮ ಮೌಲ್ಯವನ್ನು ತಾವೇ ಹುಡುಕಿ ತೆಗೆದು, ಕಷ್ಟವೇನೇ ಬಂದರೂ ಆ ಮೌಲ್ಯಗಳನ್ನು ಬೆಂಬತ್ತಿ, ಅದರಿಂದ ದೊರೆಯುವ ಲೋಕೋತ್ತರ ಸಮಾಧಾನವೇ ತಮಗೆ ಸಾಕೆನ್ನುವ ಅಪರೂಪ ವ್ಯಕ್ತಿಗಳೇ ಮೌಲ್ಯಗಳ ಆಧಾರಸ್ತಂಭವಾಗಬಹುದಷ್ಟೇ. ಆದರೆ ಅಷ್ಟು ಸಾಲದು. ರಾಷ್ಟ್ರದ ಉನ್ನತಿಯಾಗಬೇಕಾದರೆ ಅದರ ವ್ಯಕ್ತಿಗಳಲ್ಲಿ ಒಂದು ದೊಡ್ಡ ಅಂಶ ಮೌಲ್ಯಗಳಿಗೆ ಮುಖಹಾಕಿ ನಡೆಯುವವರಿರಬೇಕು. ನಂಬಿದ ಮೌಲ್ಯಗಳನ್ನು ಬಾಯಿಯಿಂದ ಪಾಠಹೇಳಿ ಆಮೇಲೆ ವ್ಯವಹಾರಿಕ ಕಾರಣಗಳ ನೆವ ಹೇಳಿ ಆ ಮೌಲ್ಯಗಳನ್ನು ಮೀರಿ ನಡೆಯುವವರ ಮುಂದಾಳ್ತನದಲ್ಲಿ ಅದು ಸಾಧ್ಯವಿಲ್ಲ. ಮೌಲ್ಯ ಯಾವಾಗಲೂ ಸ್ವಲ್ಪ ತ್ಯಾಗವನ್ನು ಒಳಗೊಂಡಿರುತ್ತದೆ. ಸ್ವಲ್ಪ ನೈತಿಕ ಧೈರ್ಯವನ್ನೂ ಅಪೇಕ್ಷಿಸುತ್ತದೆ. ಈ ಬೆಲೆ ತೆರುವುದಕ್ಕೆ ಸಿದ್ಧರಾಗದೆ ನಮ್ಮನ್ನೊಳಗೊಂಡು ಎಲ್ಲರ ನಿಜವಾದ ರಕ್ಷಣೆ, ವಿಕಾಸ ಸಾಧ್ಯವಿಲ್ಲ. ಬೈಬಲ್ಲಿನಲ್ಲಿ ಹೇಳಿದ ಹಾಗೆ ಜೀವ ಉಳಿಸಿಕೊಳ್ಳಬೇಕೆಂಬವರು ಕಳೆದುಕೊಳ್ಳುತ್ತಾರೆ, ಜೀವ ಕೊಡುವವರು ಅದನ್ನು ಉಳಿಸಿಕೊಳ್ಳುತ್ತಾರೆ.

ಆರ್ಥಿಕ ವಿಕಾಸ ಹೊಂದದ ಅನೇಕ ದೇಶಗಳಲ್ಲಿ ನಮ್ಮಲ್ಲಿಯ ಸ್ಥಿತಿಯೇ ಇದೆ. ನಮ್ಮದೇನೂ, ಏಕಮಾತ್ರ ಉದಾಹರಣೆಯಲ್ಲ. ಬಹುಶಃ ಆರ್ಥಿಕ ಸ್ಥಿತಿ ಸುಧಾರಿಸಿ ಎಲ್ಲರಿಗೂ ಹೊಟ್ಟೆ ಬಟ್ಟೆಗೆ ತತ್ವಾರ ಇಲ್ಲ ಎಂದಾದಮೇಲೆ ಒಂದು ವೇಳೆ ಮೌಲ್ಯಗಳ ಶಿಕ್ಷಣ ಹೆಚ್ಚು ಸಂಭವವಾದೀತು. ಆದರೂ ಮೌಲ್ಯಗಳಿಗೆ ಪ್ರಾಧಾನ್ಯವಿಲ್ಲದ ಸಮಾಜದಲ್ಲಿ ಅನ್ನ ವಸ್ತ್ರಾದಿಗಳನ್ನು ಎಲ್ಲರಿಗೂ ಒದಗಿಸುವುದಕ್ಕೆ ಬೇಕಾದ ಪ್ರಯತ್ನವಾದರೂ ಸಫಲವಾಗಬಹುದೇ ಎಂಬುದು ಸಂಶಯ.

■

# ಉಚ್ಚ ಶಿಕ್ಷಣ- ಒಂದು ಪ್ರತಿಕ್ರಿಯೆ

**ಉ**ಚ್ಚಶಿಕ್ಷಣ ಎಲ್ಲರಿಗಲ್ಲ ಎಂಬ ಅಭಿಪ್ರಾಯಕ್ಕೆ (ತರಂಗ, ೧೭.೩.೯೧) ಶಿಕ್ಷಣತಜ್ಞರೆನಿಸಿದವರು ಬರುವುದು ಇದೇ ಮೊದಲಲ್ಲ. ಶತಮಾನದ ಐದನೇ ದಶಕದ ಮಧ್ಯದಲ್ಲಿ ಸೆಕೆಂಡರಿ ಎಜ್ಯುಕೇಶನ್ ಕಮಿಷನ್ ಎಂಬ ವಿಚಾರಣಾ ಸಮಿತಿ ತನ್ನ ಗಡುತರವಾದ ವರದಿಯಲ್ಲಿ ಇದೇ ಅಭಿಪ್ರಾಯ ಪ್ರತಿಪಾದಿಸಿತ್ತು. ಮಾತ್ರವಲ್ಲ , ಕಾಲೇಜು ಶಿಕ್ಷಣ ಪಡೆದು ಏನೂ ಸಾಧಿಸಲಾರದ ಸಾಧಾರಣ ವಿದ್ಯಾರ್ಥಿಗಳು ಉಚ್ಚಶಿಕ್ಷಣ ಸಂಸ್ಥೆಗಳ ಗರ್ದಿಯನ್ನು ಹೆಚ್ಚಿಸದಂತೆ ಕೆಲ ಮುಂಜಾಗ್ರತಾ ಉಪಾಯಗಳನ್ನೂ ಸೂಚಿಸಿತ್ತು.

ಈ ದೇಶದಲ್ಲಿ ಹೆಚ್ಚಿನ ಬಾಲಕರು ಸರಕಾರಿ ನೌಕರಿಗೋಸ್ಕರ ವಿದ್ಯಾಭ್ಯಾಸ ಮಾಡುತ್ತಾರಲ್ಲದೆ ವಿದ್ಯೆಯ ಹಂಬಲದಿಂದಲ್ಲ. ಸಾಧಾರಣ ಸರಕಾರಿ ನೌಕರಿಗಳಿಗೆ ಕಾಲೇಜು ಶಿಕ್ಷಣದ ಅವಶ್ಯಕತೆ ಇಲ್ಲ. ಇಂಥವರು ಕಾಲೇಜಿಗೆ ನುಗ್ಗದಂತೆ ಮಾಧ್ಯಮಿಕ (ಸೆಕೆಂಡರಿ) ಶಿಕ್ಷಣ ಮುಗಿಸಿದೊಡನೆ ನೌಕರಿಗೆ ಸೇರಲು ಅನುಕೂಲ ಮಾಡಿಕೊಡಬೇಕು; ಮತ್ತು ಸುಮ್ಮನೆ ಕಾಲೇಜಿಗೆ ಹೋಗುವುದಕ್ಕೆ ಪ್ರತಿಕೂಲ ಮಾಡಿಡಬೇಕು.

ಈ ಉದ್ದೇಶಕ್ಕಾಗಿ ಕಮಿಷನ್ ಎರಡು ಉಪಾಯಗಳನ್ನು ಸೂಚಿಸಿತ್ತು. ಒಂದು, ಸಾಮಾನ್ಯ ಸರಕಾರಿ ನೌಕರಿಗಳಿಗೆ ಸೇರುವ ಪರಮಾವಧಿ ವಯಸ್ಸನ್ನು ೨೫ ರಿಂದ ೨೧ ಕ್ಕಿಳಿಸಬೇಕು; ಎರಡು ಕಾಲೇಜು ಪದವಿ (ಗ್ರಾಜುಯೇಶನ್)ಯನ್ನು ಕಾರಕೂನಿಕೆಯೆ ಮೊದಲಾದ್ದಕ್ಕೆ ಅತಿಯೋಗ್ಯತೆ (ಓವರ್ ಕ್ವಾಲಿಫಿಕೇಶನ್) ಎಂದು ಸಾರಿಬಿಡಬೇಕು, ಅಂದರೆ ದೊಡ್ಡ ಸರಕಾರಿ ನೌಕರಿಗಳಿಗಷ್ಟೇ ಪದವಿ ಅವಶ್ಯ. ಆಗಿನ ಪರಿಸ್ಥಿತಿಯಲ್ಲಿ ಸಾಧಾರಣ ವಿದ್ಯಾರ್ಥಿಗೆ ಗ್ರಾಜುಯೇಶನ್ ಮುಗಿಸುವಷ್ಟರಲ್ಲಿ ೨೧ ವಯಸ್ಸಾಗಿಬಿಡುತ್ತಿತ್ತು. ಆದ್ದರಿಂದ ಹೆಚ್ಚಿನ ನವತರುಣರು ಹದಿನೆಂಟಕ್ಕೇ ನೌಕರಿ ಸೇರಲು ಮುಂದಾಗಬೇಕಾಗುತ್ತಿತ್ತು. ಇಂಥವರಿಗೆ ಕೆಳಹಂತದ ಸರಕಾರಿ ಕೆಲಸಕ್ಕೆ ಬೇಕಾದ ತರಬೇತಿಯನ್ನು ಆಡಳಿತ ಶಾಲೆಗಳ ಮೂಲಕ ಕೊಟ್ಟುಬಿಟ್ಟರೆ ಅವರಿಗೆ ಅನುಕೂಲವಾಗುತ್ತದೆ. ಪದವೀಧರರು ನೌಕರಿ ಸಂತೆಯಲ್ಲಿ ನಿರರ್ಥಕವಾಗಿ ಸ್ಪರ್ಧಿಸುವುದು ತಪ್ಪುತ್ತದೆ. ದೇಶಕ್ಕೆ ಪ್ರತಿಯೊಬ್ಬ ನೌಕರನಿಂದ ನಾಲ್ಕುವರ್ಷ ಹೆಚ್ಚು ಸೇವೆ ಸಿಕ್ಕುತ್ತದೆ. ಇದರಿಂದ ಅವನಿಗೂ ಲಾಭವೇ. ತುಂಬಾ ಯೋಗ್ಯತೆಯುಳ್ಳವರಷ್ಟೇ ಕಾಲೇಜು ವಿಶ್ವವಿದ್ಯಾಲಯಗಳನ್ನು ಸೇರುವುದಾದರೆ ಅಂಥ ವಿದ್ಯಾಲಯಗಳ ನಿರರ್ಥಕ ಸಂಖ್ಯಾವೃದ್ಧಿಯೂ, ದಟ್ಟಣೆ ವೃದ್ಧಿಯೂ ಆಗುವುದಿಲ್ಲ. ಶಿಕ್ಷಣದ

ಮಟ್ಟ ಏರುತ್ತದೆ. ಉಚ್ಚಶಿಕ್ಷಣ ಸಂಸ್ಥೆಗಳಿಗೆ ಹಣ ಸುರಿಯುವ ಬದಲು ಪ್ರಾಥಮಿಕ ಮಾಧ್ಯಮಿಕ ಶಿಕ್ಷಣಕ್ಕೆ ಒತ್ತುಬಿದ್ದು ಅದಕ್ಕೆ ಹೆಚ್ಚು ಹಣ ದೊರೆಯುತ್ತದೆ; ಮಟ್ಟವೂ ಏರುತ್ತದೆ.

ಆದರೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಪ್ರಜಾತಾಂತ್ರಿಕ ನಾಯಕರು ಈ ಸೂಚನೆಗಳನ್ನು ಕಸದ ಬುಟ್ಟಿಗೆ ಹಾಕಿದರು. ಅವರ ಇರಾದೆಗಳು ಬೇರೆಯೆ ಇದ್ದವು.

ಮೆಟ್ರಿಕ್ಯುಲೇಶನ್ ಆದೊಡನೆ ತರುಣರು ನೌಕರಿ ಸಂತೆಯಲ್ಲಿ ಮಾರಿಕೊಳ್ಳಲು ನುಗ್ಗಿದರೆ ಅದರಿಂದ ಹೆಚ್ಚುವ ಒತ್ತಡವನ್ನು ಎದುರಿಸುವ ತಲೆನೋವು ಯಾರಿಗೆ ಬೇಕಾಗಿದೆ? ಪದವೀಧರರಾಗುವವರೆಗೆ ಅವರನ್ನು ಮುಂದೂಡಿದರೆ ಬರುವ ಗ್ರಹಚಾರವನ್ನು ಕನಿಷ್ಠ ನಾಲ್ಕು ವರ್ಷ ಮುಂದೂಡಿದಂತಾಗುತ್ತದೆ.

ಎರಡನೆಯದಾಗಿ, ನಮ್ಮ ನವೋದಿತ ಜಾನಪದ ಧುರೀಣರ ಆಕಾಂಕ್ಷೆಗಳ ಪೂರೈಕೆ. ಮುಂಬಯಿ ರಾಜ್ಯಕ್ಕೆ ವೈ.ಬಿ. ಚವ್ಹಾಣರು ಮುಖ್ಯಮಂತ್ರಿಯಾಗಿದ್ದಾಗ 'ಕಿರ್ಲೋಸ್ಕರ' ಮಾಸಪತ್ರಿಕೆ ಅವರೊಡನೆ ಒಂದು ಸಂದರ್ಶನ ನಡೆಸಿತು. ಅದರಲ್ಲಿ ಒಂದು ಪ್ರಶ್ನೆ ಕಾಲೇಜುಗಳಲ್ಲಿ ಶಿಕ್ಷಣಮಟ್ಟ ಇಳಿಯುವುದನ್ನು ಕುರಿತಾಗಿತ್ತು. ಯಶವಂತರಾಯರು ಶಿಕ್ಷಣಮಟ್ಟ ಇಳಿದಿರುವುದನ್ನು ನಿಸ್ಸಂಕೋಚವಾಗಿ ಒಪ್ಪಿಕೊಂಡರು. ಆದರೆ ಅದೇ ಸಮಯಕ್ಕೆ ಅವರು ಉಚ್ಚಶಿಕ್ಷಣದ ಈ ವಿಸ್ತರಣ ಮತ್ತು ಸ್ವಲ್ಪ ಇಳಿಸಿದ ಮಟ್ಟದಿಂದಾಗಿ ಆಗಲೇ ಪ್ರತಿಹಳ್ಳಿಯಲ್ಲಿಯೂ ಒಬ್ಬನಾದರೂ ಪದವೀಧರನು ಉಂಟಾಗುವಂತಾಗಿದೆಯೆಂದೂ ತತ್ಫಲವಾಗಿ ಗ್ರಾಮೀಣ ಜನತೆಯಲ್ಲಿ ಒಂದು ಅಭಿಮಾನ, ಆತ್ಮವಿಶ್ವಾಸವುಂಟಾಗಿದೆಯೆಂದೂ ಹೇಳಿದರು.

ಈ ಧೋರಣೆಯೇ ನಮ್ಮಲ್ಲಿ ಅಷ್ಟು ಉಚ್ಚವಲ್ಲದ ಉಚ್ಚಶಿಕ್ಷಣದ ವಿಸ್ತರಣೆಯಲ್ಲಿ ಪರಿಣಮಿಸಿದ್ದು. ಉಚ್ಚಶಿಕ್ಷಣಾರ್ಥಿಗಳು ತಮ್ಮ ಮಟ್ಟ ಏರಿಸಿಕೊಳ್ಳುವ ಪ್ರಯತ್ನಶೀಲತೆಯಲ್ಲಿ ತೊಡಗುವ ಬದಲು ಶಿಕ್ಷಣವೇ ಅವರ ಅನುಕೂಲಕ್ಕಾಗಿ ಇಳಿದು ಬಂದು ಅವರಿಗೆ ಪದವಿಗಳನ್ನು ಕೊಡಬೇಕೆಂಬ ತತ್ವಕ್ಕೆ ಮೌನ ಸ್ವೀಕೃತಿ ಲಭಿಸಿತು.

ಈ ನೀತಿಯ ಪ್ರಯೋಜನ ಯಾರನ್ನು ಉದ್ದೇಶಿಸಿತ್ತು? ಹಳ್ಳಿಗಾಡಿನ ಭೂರಹಿತ ಕೆಲಸಗಾರರನ್ನಲ್ಲ, ಬಡ ಕೈಕಸುಬಿನವರನ್ನಲ್ಲ. ಆಗಲೇ ಹಳ್ಳಿಗಾಡಿನಲ್ಲಿ ಪ್ರಬಲರಾಗುತ್ತಿದ್ದ ಭೂಮಾಲಿಕರ ಪ್ರತಿಷ್ಠೆಯನ್ನೂ ಬಲವನ್ನೂ ಹೆಚ್ಚಿಸುವ ಒಂದು ತಂತ್ರ ಇದಾಗಿತ್ತು.

■

# ಸಂಸ್ಕೃತ ಶಿಕ್ಷಣ: ಹೊಸ ರೀತಿ ಬೇಕು

**ಕ**ರ್ನಾಟಕದಲ್ಲಿ ಸಂಸ್ಕೃತ ಶಿಕ್ಷಣಕ್ಕೆ ಎಂಥಾ ಸ್ಥಾನ ಇರಬೇಕು ಎಂಬುದು ಈಚೆಗೆ ಸಾಕಷ್ಟು ಕೋಲಾಹಲ ಎಬ್ಬಿಸಿದೆ. ಇದ್ದಕ್ಕಿದ್ದಂತೆ ಸಂಸ್ಕೃತವನ್ನು ಪ್ರಥಮ ಭಾಷೆಯ ಸ್ಥಾನದಿಂದ ಇಳಿಸಿಬಿಡುವುದಾಗಿ ವಿದ್ಯಾಮಂತ್ರಿಗಳು ನಿರ್ಣಯಿಸಿದ್ದರಿಂದ ಇಷ್ಟು ಧೂಳು ಎದ್ದಿದೆ. ನಮ್ಮ ದೇಶದ ಸರಕಾರಗಳು ಯಾವಾಗಲೂ ಮಾಡುವಂತೆ ಒಂದು ತೀರ್ಮಾನವನ್ನು ಪ್ರಕಟಿಸಿಬಿಟ್ಟು ಆಮೇಲೆ ವಿಚಾರ ವಿಮರ್ಶೆಗೆ ಆಸ್ಪದ ಕೊಡುವ ರೀತಿಯನ್ನು ಈ ವಿಷಯದಲ್ಲಿಯೂ ಅನುಸರಿಸಿದೆ. ಬೊಬ್ಬಾಟ ತುಂಬಾ ಎದ್ದ ಮೇಲೆ ಈಗ ಇಡೀ ಸಂಸ್ಕೃತ ವಿದ್ಯಾಭ್ಯಾಸ ಕ್ರಮದ ಬಗ್ಗೆ ಪುನರ್ವಿಮರ್ಶೆ ಮಾಡಲು ಒಂದು ಸಮಿತಿ ನಿರ್ಮಾಣವಾಗಲಿದೆ ಯಂತೆ. ಆಗಲಿ, ಸಂತೋಷ. ನಮ್ಮಲ್ಲಿ ಎಲ್ಲ ಇಕ್ಕಟ್ಟಿನ ಪ್ರಶ್ನೆಗಳು ಆಗುವ ಹಾಗೆ ಈ ಸಮಿತಿಯ ನಡವಳಿಕೆಯೂ ತೌಡು ಕುಟ್ಟುವುದರಲ್ಲಿ ಮುಗಿದು ಸಮಸ್ಯೆಗೆ ತನ್ನನ್ನು ತಾನೇ ಪರಿಹರಿಸಿಕೊಳ್ಳುವ ಅವಕಾಶ ಕೊಡಲಿಕ್ಕಿಲ್ಲವೆಂದು ಹಾರೈಸೋಣ.

ಸಂಸ್ಕೃತದ ಸ್ಥಾನದ ಚರ್ಚೆ ಅನವಶ್ಯಕ ಉದ್ವೇಗದಿಂದ ಪರವಶವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಂಥ ಹೊಣೆಗಾರ ಸ್ಥಾನದಲ್ಲಿದ್ದವರು ಸಂಸ್ಕೃತವನ್ನು ತಿಥಿ ಮಾಡಿಸುವ ಭಾಷೆ ಎಂದು ಕರೆಯುವಷ್ಟು ಬಿಸಿಯೇರಿ ಬಿಟ್ಟರು. (ಈಚೆಗೆ ಅವರು ಕೊಟ್ಟ ಹೇಳಿಕೆಗಳು ಬಿಸಿ ಆರಿದ ಲಕ್ಷಣ ತೋರಿಸುತ್ತಿವೆ) ಕುವೆಂಪು ಅವರು ಸಂಸ್ಕೃತಕ್ಕೆ ಕೊಡುವ ಮಹತ್ವ ಒಂದು ಜಾತಿಯವರ ಹಿಡಿತವನ್ನು ಬಲಪಡಿಸುತ್ತದೆ ಎಂಬುದಕ್ಕಾಗಿ ಆ ಭಾಷೆಯನ್ನು ಓಡಿಸುವ ಮಾತಾಡಿದರು. ಸಂಸ್ಕೃತ ಮೃತಭಾಷೆ. ಅದಕ್ಕೆ ಕಸದ ಬುಟ್ಟಿಯೇ ಯೋಗ್ಯ ಸ್ಥಳ ಇತ್ಯಾದಿಯಾಗಿ ಎದುರು ಕಡೆಯವರನ್ನು ಬೇಕೆಂದೇ ರೊಚ್ಚಿಗೆಬ್ಬಿಸುವ ಮಾತುಗಳೂ ತರುಣವೀರರಿಂದ ಬಂದವು. ಸಂಸ್ಕೃತದ ಅಭಿಮಾನಿಗಳೂ ಅದು ಭಾರತದ (ಕೆಲವರ ಪ್ರಕಾರ ವಿಶ್ವದ) ಸಕಲ ಭಾಷೆಗಳಿಗೂ ತಾಯಿಯಾಗಿದ್ದು ಅದನ್ನು ಕೈಬಿಡುವುದೆಂದರೆ ಮಾತೃದ್ರೋಹ ಮತ್ತು ಕನ್ನಡಕ್ಕೇ ಘಾತಕ ಎನ್ನುವ ಅತಿರೇಕದ ನಿಲುಮೆ ತಾಳಿದ್ದಾರೆ. ಅದೇ ರೀತಿ ಸಂಸ್ಕೃತ ಕನ್ನಡವನ್ನು ಕೊಲ್ಲುತ್ತದೆ ಎನ್ನುವ ವಾದವೂ ಇದೆ.

ಎರಡು ಕಡೆಗಳಲ್ಲಿಯೂ ರೋಷದ ವೇಷ ಧರಿಸಿದ ಭಯ ಕೆಲಸ ಮಾಡುತ್ತಿದೆ. ಸಂಸ್ಕೃತವನ್ನು ಛಲದಿಂದ ಎತ್ತಿ ಹಿಡಿಯುವವರಲ್ಲಿ ಒಂದು ದೊಡ್ಡ ಗುಂಪು ನೋಡನೋಡಿದಂತೆ ಮಾಯವಾಗಿ ಹೋಗುತ್ತಿರುವ ತನ್ನ ಜಗತ್ತಿನ ಪರಿಯಿಂದ ಗಾಬರಿ ಬಿದ್ದಿದೆ. ಓಡುತ್ತಿರುವ ಓತಿಕ್ಯಾತದ ಬಾಲ ಹಿಡಿದುಕೊಂಡರೆ ಅದು ಬಾಲದ ತುದಿಯನ್ನು ಅವರ ಕೈಲಿ ಬಿಟ್ಟು

ಪಾರಾಗಿ ಹೋಗಿದೆಯೆಂಬ ಅರಿವು ಅವರಿಗೆ ಬರಲೊಲ್ಲದು. ಅವರದು ಬಾಲಕ್ಕೆ ಬಡಿದಾಟ. ಶಿಕ್ಷಕ ವೃತ್ತಿಯಲ್ಲಿರುವ ಸಂಸ್ಕೃತವಾದಿಗಳಿಗೆ ಅದು ಬದುಕಿನ ಪ್ರಶ್ನೆಯಾಗಿರುವುದರಿಂದ ಸಂಸ್ಕೃತ ಖಂಡಿತವಾಗಿ ಅವರಿಗಂತೂ ಮೃತಭಾಷೆಯಲ್ಲ. ಈ ವರ್ಗದ ಜನರಲ್ಲಿ ಸದ್ಯಕ್ಕೆ ಒಂದು ಹೆಸರು ಹೇಳಬಾರದ ಗುಮ್ಮ 'ಜಾತಿ'ಯ ಜನರ ಆಧಿಕ್ಯವಿರುವುದು ನಿಜ. ಇದು ಇತಿಹಾಸದ ಒಂದು ಪ್ರತಿಧ್ವನಿ ಮಾತ್ರ. ಸಂಸ್ಕೃತದ ದೈವ ದಯೆಮಾಡಿ ಇನ್ನೊಂದೆರಡು ದಶಕ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಉಳಿದುಕೊಂಡರೆ ಅದರ ಜಾತೀಯ ಸ್ವರೂಪ ಅಳಿದುಹೋದೀತು.

ವಿರುದ್ಧ ಗುಂಪಿನ ಮನೋವೃತ್ತಿಯನ್ನು ಎರಡು ಪರಸ್ಪರ ಸಂಬಂಧವಿಲ್ಲದ ಸಂಗತಿಗಳು ರೂಪಿಸಿವೆ. ಒಂದು ಬ್ರಾಹ್ಮಣ ಭಯ. ಬ್ರಾಹ್ಮಣ್ಯ ಹೋಗಿದ್ದರೂ ಬ್ರಾಹ್ಮಣ ಉಳಿದಿರುವುದೂ ಅವನು ಇನ್ನೂ ವಿವಿಧ ರಂಗಗಳಲ್ಲಿ ಸಾಕಷ್ಟು ಯಶಸ್ವಿಯಾಗಿ (ಮತ್ತು ಎಲ್ಲ ಅಪಾಯಗ್ರಸ್ತ ಅಲ್ಪಸಂಖ್ಯಾತರ ಹಾಗೆ ಧೂರ್ತತನದಿಂದ) ಹೋರಾಡುತ್ತಿರುವುದೂ ಇತರ ಜಾತಿಗಳಲ್ಲಿ ಅನೇಕ ಶತಮಾನಗಳಿಂದ ಬೇರು ಬಿಟ್ಟಿದ್ದ ನೈಚ್ಯಾನುಸಂಧಾನ ಈಗ ಕ್ರೋಧಕ್ಕೆ ತಿರುಗಿರುವುದೂ ಬ್ರಾಹ್ಮಣ ವಿರೋಧಕ್ಕೆ ಸಂಸ್ಕೃತವನ್ನು ಪ್ರತೀಕವಾಗಿ ಮಾಡಿದೆ. ಇದು ಗಾಳಿ ಗುದ್ದುವ ಕೆಲಸ ನಿಜ. ಆದರೆ ಅದರ ಅಸ್ತಿತ್ವವೂ ಅಷ್ಟೇ ನಿಜ.

ಎರಡನೆಯದಾಗಿ ಕನ್ನಡಕ್ಕಾಗಿ ನಿಜವಾದ ಕಳಕಳಿ. ಸಂಸ್ಕೃತಕ್ಕೆ ಸಮ ಸ್ಥಾನ ಕೊಟ್ಟು ಕಲಿಸಿದರೆ ಕನ್ನಡಕ್ಕೆ ಬುದ್ಧಿವಂತ ವಿದ್ಯಾರ್ಥಿಗಳು ಸಿಗುವುದಿಲ್ಲ ಸಂಸ್ಕೃತದಲ್ಲಿ ಅಂಕಗಳನ್ನು ಸುಲಭವಾಗಿ ಗಳಿಸಬಹುದಾದ್ದರಿಂದ ರ್‍ಯಾಂಕ್ ಬಯಸುವವರು ಅತ್ತ ಸೆಳೆಯಲ್ಪಡುತ್ತಾರೆ. ಆದ್ದರಿಂದ ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ; ಇತರ ಭಾಷೆಗಳಿಗೆ ಗೌಣ ಸ್ಥಾನ-ಇರಬೇಕು.

ಸಂಸ್ಕೃತ ಬ್ರಾಹ್ಮಣರದು, ಎಂಬ ಭ್ರಾಮಕ ಭಾವನೆ, ಸಂಸ್ಕೃತದಿಂದ ಕನ್ನಡಕ್ಕೆ ಬಾಧಕ ಎಂಬ ನಿರಾಧಾರ ಭಯ ಈ ವಿವಾದವನ್ನು ಅಳತೆಗೆಡಿಸಿದೆ. ಹಿಂದಿನ ಪ್ರಮುಖ ಕನ್ನಡ ಕವಿಗಳೆಲ್ಲ ಸಂಸ್ಕೃತ ವಿದಗ್ಧರಾಗಿದ್ದು ಕೆಲವರಂತೂ ಸಂಸ್ಕೃತದಲ್ಲೇ ಬರೆಯುವ ಸಾಮರ್ಥ್ಯವಿದ್ದರೂ ಕನ್ನಡದಲ್ಲಿ ಬರೆದರು. ಸಾರ್ಥಕ ಕವಿಯಾದವನು ಕೇವಲ ಭಾಷಾಭಿಮಾನದಿಂದಲೇ ಬರೆಯುವುದಿಲ್ಲ ; ತನ್ನ ನಿರ್ಮಾಣ ಶಕ್ತಿ ಆ ಭಾಷೆಯಲ್ಲಿ ಸಫಲವಾಗಿ ಅಭಿವ್ಯಕ್ತವಾಗಬಲ್ಲದೆಂಬ ಮನವರಿಕೆಯಿಂದ ಬರೆಯುತ್ತಾನೆ. ಆಡು ಭಾಷೆ ಶಾಸ್ತ್ರ ಭಾಷೆಗಿಂತ ಕಾವ್ಯಕ್ಕೆ ಉತ್ತಮ ವಾಹನವೆಂಬ ಪ್ರಜ್ಞೆ ಸಂಸ್ಕೃತದಲ್ಲಿ ಕಾವ್ಯ ಶಾಸ್ತ್ರ ಬರೆದವರಿಗಿತ್ತೆಂಬುದಕ್ಕೆ ಅವರು ಅನೇಕ ಲಕ್ಷ್ಯಗಳನ್ನು ಪ್ರಾಕೃತ ಕಾವ್ಯಗಳಿಂದ ಎತ್ತಿಕೊಂಡದ್ದೇ ಪ್ರಮಾಣ. ಸಂಸ್ಕೃತ ಓದಿದ್ದರಿಂದ ವ್ಯುತ್ಪತ್ತಿ ಹೆಚ್ಚುತ್ತದೆ. ಆಕರ ಗ್ರಂಥಗಳ ನೇರ ಪರಿಚಯವಾಗುತ್ತದೆ ಎಂಬುದಕ್ಕೆ ಸಂಸ್ಕೃತದ ಆಶ್ರಯ ಅಷ್ಟೆ. ಶಾಸ್ತ್ರಗ್ರಂಥ-ಅದೂ ಮೌಲಿಕವಾದದ್ದನ್ನು-ರಚಿಸುವಾಗ ಅಖಿಲ ಭಾರತ ವ್ಯಾಪ್ತಿ ಉಂಟೆಂಬುದಕ್ಕೆ ಸಂಸ್ಕೃತವನ್ನು ಉಪಯೋಗಿಸಿದರು. ಈಗಿನ ವಿದ್ವಾಂಸರು ಅದೇ ಕಾರಣಕ್ಕಾಗಿ ಇಂಗ್ಲೀಷನ್ನು ಬಳಸುತ್ತಾರೆ. ಇಲ್ಲಿ ಅಭಿಮಾನ ನಿರಭಿಮಾನದ ಪ್ರಶ್ನೆ ಇಲ್ಲ;

ಅಧಿಕಾರಿಭೇದದ ಪ್ರಶ್ನೆ ಮಾತ್ರ ಇದೆ. ಪ್ರೊಫೆಸರ್ ಕೃಷ್ಣನ್ ಅವರು ತಮಿಳು ಅಭಿಮಾನದಿಂದ ತಮ್ಮ ಪ್ರಾರಂಭ ವೈಜ್ಞಾನಿಕ ಸಂಶೋಧನಾ ಪ್ರಬಂಧಗಳನ್ನು ಮಾತೃಭಾಷೆಯಲ್ಲೇ ಬರೆದರೆಂದೂ ಆ ಮೇಲೆ ಅನಿವಾರ್ಯವಾಗಿ ಇಂಗ್ಲೀಷಿಗೆ ತಿರುಗಬೇಕಾಯಿತೆಂದೂ ಇಲ್ಲಿ ಸ್ಮರಿಸಬಹುದು. ಬ್ರಾಹ್ಮಣರು ಕನ್ನಡ ವಿರೋಧಿಗಳೆಂಬ ಕಲ್ಪನೆ ನಿರಸನಗೊಳ್ಳಬೇಕಾದರೆ, "ಲಲಿತವಹ ಕನ್ನಡದ ನುಡಿಯಲಿ ತಿಳಿದು ತನ್ನಲಿ ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೆ? ಸಂಸ್ಕೃತದಲ್ಲಿನ್ನೇನು?" ಎಂದ ಮಹಲಿಂಗ ರಂಗ ಕವಿ ಸಹವಾಸಿ ಬ್ರಾಹ್ಮಣ ಎಂದು ಗಮನಿಸಿದರೆ ಸಾಕು.

ಸಂಸ್ಕೃತ ತೆಗೆದುಕೊಂಡವರು ಸುಲಭದಲ್ಲಿ ಅಂಕಗಳನ್ನು ಗಿಟ್ಟಿಸುತ್ತಾರೆ, ಆದ್ದರಿಂದ ಕನ್ನಡ ತೆಗೆದುಕೊಂಡವರಿಗೂ ಅವರಿಗೂ ಅಸಮಾನ ಸ್ಪರ್ಧೆ ಎನ್ನುವುದರಲ್ಲಿ ಸತ್ಯ ಇದೆ. ಇದೇ ಮಾತನ್ನು ಗಣಿತಶಾಸ್ತ್ರ ತೆಗೆದುಕೊಂಡ ವಿದ್ಯಾರ್ಥಿಗಳಿಗೂ ಅನ್ವಯಿಸಬಹುದು. ಇತಿಹಾಸ, ಅರ್ಥಶಾಸ್ತ್ರ ತೆಗೆದುಕೊಂಡವರು ಗಣಿತದವರೊಡನೆ ಅಂಕಗಳ ವಿಷಯದಲ್ಲಿ ಅಸಮ ಸ್ಪರ್ಧೆಯನ್ನೇ ಎದುರಿಸುತ್ತಾರೆ. ಗಣಿತದಂತೆ, ಸಂಸ್ಕೃತವೂ—ಈಗ ಕಲಿಸುವ, ಪರೀಕ್ಷಿಸುವ ರೀತಿಯಲ್ಲಿ-ತಾಕಿದರೆ ಇಡೀ ಹಣ್ಣು, ತಪ್ಪಿದರೆ ಬರೀ ಮಣ್ಣು ಎಂಬಂಥ ವಿಷಯವಾಗಿದೆ. ಕಲಿಸುವ ರೀತಿಯ ಬದಲಾವಣೆ ಈ ವೈಷಮ್ಯವನ್ನು ತಪ್ಪಿಸಬಲ್ಲದು.

ಸಂಸ್ಕೃತವನ್ನು ಪ್ರಥಮ ಭಾಷೆಯ ಸ್ಥಾನದಿಂದ ತಪ್ಪಿಸಿದರೆ ಸರ್ವನಾಶ ಎಂಬ ಕೂಗು—ಕನ್ನಡ ಭಾಷೆಯ ಹಿತದ ದೃಷ್ಟಿಯಿಂದ ಮಾತ್ರ ನೋಡಿದರೆ—ಸ್ವಲ್ಪ ಮಿತಿಗೆಟ್ಟದ್ದೆಂದು ಹೇಳದೆ ನಿರ್ವಾಹವಿಲ್ಲ. ಕನ್ನಡ ಸಂಸ್ಕೃತಕ್ಕೆ ಹೇಗೋ ಹಾಗೆ ಇಂಗ್ಲೀಷ್, ಫ್ರೆಂಚ್ ಮೊದಲಾದ ಯೂರೋಪಿಯನ್ ಭಾಷೆಗಳು ಮುಕ್ಕಾಲು ಪಾಲು ಲ್ಯಾಟಿನ್-ಗ್ರೀಕ್ ಭಾಷೆಗಳಿಗೆ ಋಣಿಗಳಾಗಿವೆ. ೧೮ನೇ ಶತಮಾನದವರೆಗೂ ಲ್ಯಾಟಿನ್ ಏಕೈಕ ಶಾಸ್ತ್ರಭಾಷೆ ಯಾಗಿತ್ತು. ಕಳೆದ ಶತಮಾನದಿಂದ ಕಾವ್ಯ ಮತ್ತು ಶಾಸ್ತ್ರ ಸಾಹಿತ್ಯಗಳೆರಡೂ ದೇಶೀಯ ಭಾಷೆಗಳಲ್ಲೇ ಬರತೊಡಗಿದವು. ಲ್ಯಾಟಿನ್ ಕೆಳಗಿಳಿಯಿತು. ಶಿಕ್ಷಣದಲ್ಲಿಯೂ ಅದರ ಮಹತ್ವ ಈಗ ಹೋಗಿದೆ. ವಿನ್‌ಸ್ಟನ್ ಚರ್ಚಿಲ್ಲರು ಪಬ್ಲಿಕ್ ಸ್ಕೂಲಿನಲ್ಲಿ ಕಡ್ಡಾಯವಾಗಿದ್ದ ಲ್ಯಾಟಿನ್ನಿನ ಓದಿನಲ್ಲಿ ಹಿಂದಿದ್ದರು. ಅದರಲ್ಲಿ ಹೇಗೊ ಹೇಗೊ ಪಾಸಾಗುವುದಕ್ಕೆ ಅವರು ಅಷ್ಟು ಪ್ರಾಮಾಣಿಕವಲ್ಲದ ಉಪಾಯ ಮಾಡಿದ್ದಾಗಿ ಸ್ವತಃ ಹೇಳಿಕೊಂಡಿದ್ದಾರೆ. ಆದರೆ ಈ ಲ್ಯಾಟಿನ್ ಅಜ್ಞಾನದಿಂದ ಚರ್ಚಿಲ್ಲರಿಗೆ ಈ ಶತಮಾನದ ಒಬ್ಬ ವರಿಷ್ಠ ಇಂಗ್ಲಿಷ್ ಗದ್ಯ ಚಕ್ರವರ್ತಿ ಎನಿಸಲು ಅಡ್ಡಿ ಆಗಲಿಲ್ಲ.

ಆದರೆ ನಾವು ಈ ಶತಮಾನದ ಇಂಗ್ಲಿಷ್ ಭಾಷೆಯ ದೃಷ್ಟಾಂತ ಕೊಟ್ಟಿದ್ದು ಕನ್ನಡದ ಮಟ್ಟಿಗೆ ಇನ್ನೂ ಪೂರ್ಣವಾಗಿ ಅನ್ವಯಿಸುವ ಸ್ಥಿತಿ ಇಲ್ಲ. ಕನ್ನಡದ ಬೆಳವಣಿಗೆ ಸಾಹಿತ್ಯದಲ್ಲಿ ಆದಷ್ಟು ಶಾಸ್ತ್ರ ಚರ್ಚೆಯಲ್ಲಿ ಆಗಿಲ್ಲ. ಈವರೆಗಿನ ಕನ್ನಡದ ಇತಿಹಾಸ ಮತ್ತು ಇಂದಿನ ಅದರ ಸ್ಥಿತಿಯನ್ನು ನೋಡಿದರೆ, ಪರಂಪರೆಯಿಂದ ಬಂದ ಸಂಸ್ಕೃತದ ನೆರವು ಕೆಲ ದಶಕ

ಮುಂದುವರಿದರೆ ಲಾಭವಿದೆಯೆಂದು ನನಗೆ ತೋರುತ್ತದೆ. ಈ ದೃಷ್ಟಿಯಿಂದ ಮಾಧ್ಯಮಿಕ ದಿಂದಲೂ ಸಂಸ್ಕೃತ-ಪ್ರಥಮವೋ ದ್ವಿತೀಯವೋ ಕಡ್ಡಾಯದ ವಿಷಯವಾಗಿರುವುದು ಇಷ್ಟ.

ಆದರೆ ಈಗಿರುವ ಸಂಸ್ಕೃತ ಶಿಕ್ಷಣ ಕ್ರಮವೇ ಸಾಗುವುದಾದರೆ-ಅದು ಪ್ರಥಮವಾಗಿದ್ದರೂ ಅಷ್ಟೇ ದ್ವಿತೀಯವಾಗಿದ್ದರೂ ಅಷ್ಟೇ-ಪ್ರಯೋಜನ ಕಡಿಮೆ. ನಾಲ್ಕು ವ್ಯಾಕರಣ ಪ್ರಶ್ನೆಗಳಿಗೆ, ಒಂದೆರಡು ಭಾಷಾಂತರ ಪ್ರಶ್ನೆಗಳಿಗೆ, ಉರುಹೊಡೆದ ಉತ್ತರಗಳನ್ನು ಬರೆದು, ಶೇಕಡಾ ನೂರರ ಸಮೀಪ ಅಂಕಗಳನ್ನು ಹೊಡೆದು, ರ್‍ಯಾಂಕು ಗಿಟ್ಟಿಸುವುದನ್ನು ತಪ್ಪಿಸಬೇಕು. ಸಂಸ್ಕೃತ ವ್ಯಾಕರಣದ ಅರಣ್ಯದಲ್ಲಿನ ಹುಲಿಯಾಗಿಸುವುದು ಅಥವಾ ಕೆಲ ಸುಭಾಷಿತಗಳನ್ನೋ ಕಾವ್ಯ ಸರ್ಗಗಳನ್ನೋ ಓದಿಸಿ ಕೈಬಿಡುವುದು ಸಂಸ್ಕೃತ ಶಿಕ್ಷಣದ ಗುರಿಯಾಗದೆ, ಅದರ ಸಂಪತ್ತಿನ ಅರಿವು, ಅದರ ಶಬ್ದ ನಿರ್ಮಾಣ ವಿಧಾನಗಳ ತಿಳಿವಳಿಕೆ ಮನಹೊಕ್ಕುವಂತೆ ಮಾಧ್ಯಮಿಕದಿಂದ ಪಿ.ಯು.ಸಿ. ಕೊನೆಯವರೆಗಾದರೂ ಅದು ಕಡ್ಡಾಯವಾಗಿದ್ದರೆ ಸಾರ್ಥಕವಾಗಬಲ್ಲುದು.

ಕನ್ನಡದ ಹಿತದೃಷ್ಟಿಯಿಂದ ನೋಡುವಾಗ ಸಂಸ್ಕೃತವನ್ನು ಕನ್ನಡಕ್ಕೆ ತಗಲಿದ ಒಂದು ಬಾಹ್ಯಾಂಗವಾಗುವಂತೆ ಏರ್ಪಾಡು ಮಾಡಿದರೆ ಒಳಿತು ಅನಿಸುತ್ತದೆ. ಅದರ ಪಾಠಕ್ರಮ ಆ ದೃಷ್ಟಿಯಿಂದಲೇ ಯೋಜಿಸಬೇಕು. ಅದನ್ನು ಕನ್ನಡದ್ದೇ ಮೂರನೇ ಪೇಪರ್ ಎಂದರೂ ಸರಿಯೇ. ಬರೇ ೫೦ ಅಂಕಗಳೇ ಇದ್ದರೂ ಸಾಕು. ಆದರೆ ಅದರಲ್ಲಿ ತೇರ್ಗಡೆ ಕಡ್ಡಾಯದ್ದಾಗಬೇಕು. ಪರೀಕ್ಷೆಯಲ್ಲಿ ಅದಕ್ಕೆ ಮಹತ್ವ ಇಲ್ಲ ಎಂದು ಮಾಡುವುದಾದರೆ ಸಂಸ್ಕೃತ ಕಲಿಸುವುದನ್ನು ನಿಲ್ಲಿಸಿಬಿಡುವುದು ಲೇಸು. ಹಾಗೆ ಮಾಡದಿದ್ದರೆ ಸಂಸ್ಕೃತ ಶಿಕ್ಷಕರನ್ನು ಹೊಟ್ಟೆಪಾಡಿಗಾಗಿ ಕಿವುಡರ ಮುಂದೆ ಅರಚಿಕೊಳ್ಳುವವರನ್ನಾಗಿ ಮಾಡಿದಂತೆ.

ಇನ್ನೊಂದು ಪರಮಕಾರಣಕ್ಕಾಗಿ ಸಂಸ್ಕೃತಕ್ಕೆ ಮಹತ್ವ ಇದೆ. ಸಂಸ್ಕೃತ ವ್ಯಾವಹಾರಿಕ ದೃಷ್ಟಿಯಿಂದ ಮಾತ್ರ ನೋಡಿದರೆ ಮಾತೃಭಾಷೆಯೇ ಸೈ. ಆದರೆ ಯುರೋಪಿನಲ್ಲಿ ಲ್ಯಾಟಿನ್ ಗ್ರೀಕುಗಳಿಗೆ ಇದ್ದದ್ದಕ್ಕಿಂತ ಹೆಚ್ಚಿನ ಒಂದು ಜೀವಂತಿಕೆ ಭಾರತದಲ್ಲಿ ಸಂಸ್ಕೃತಕ್ಕಿದೆ. ಅದು ಪ್ರತಿನಿಧಿಸುವ ಸಂಸ್ಕೃತಿ ನಮ್ಮ ರಾಷ್ಟ್ರೀಯ ಚೇತನ ಸ್ವರೂಪಿಯಾಗಿದೆ. ಪೂರ್ವ ಪಶ್ಚಿಮ-ದಕ್ಷಿಣೋತ್ತರಗಳೆಲ್ಲ ಅದರ ಬೆಳವಣಿಗೆಯಲ್ಲಿ, ಅದರ ವೈಭವದಲ್ಲಿ ಪಾಲುಗೊಂಡಿವೆ. ವೈದಿಕ ಅವೈದಿಕ ಆರ್ಯ ಅನಾರ್ಯ ಮತಗಳೆಲ್ಲ ಅದರಲ್ಲಿ ತಮ್ಮ ತತ್ವ ಸೂಕ್ಷ್ಮಗಳನ್ನು ವಿವೇಚಿಸಿವೆ. ನಮ್ಮ ತತ್ವಜ್ಞಾನ, ವಿಜ್ಞಾನ ಮೊದಲಾಗಿ ನಮ್ಮ ಐಹಿಕ ಪಾರಮಾರ್ಥಿಕ ಬುದ್ಧಿ ಭಾವನೆಗಳ ಉತ್ಪಾದನೆಗಳು ಅಲ್ಲಿ ಸಂಗಮಿಸಿವೆ. ಇಡೀ ದೇಶ ಏಕಪ್ರಕಾರವಾಗಿ ಹೆಮ್ಮೆಪಡತಕ್ಕ ಯಾವೊಂದು ಪದಾರ್ಥ ಇದ್ದರೆ ಅದು ಸಂಸ್ಕೃತ. ಒಂದು ಮಾತಿನಲ್ಲಿ, ಸಂಸ್ಕೃತ ಭಾರತದ ಈಥೋಸಿನ ವಾಙ್ಮಯಬಿಂಬ, ತಾವು ವಾಲ್ಮೀಕಿಗಳು, ತಾವು ಕಾಳಿದಾಸ ಕುಲದವರು, ತಾವು ಮಾತಂಗರು ಎಂದು 'ಮೇಲು ಕೀಳು' ವರ್ಗದವರೆಲ್ಲ ಆ ಈಥೋಸಿನಲ್ಲಿ ಒಂದಾಗಲು ಹಂಬಲಿಸುತ್ತಾರೆ. ಹಿಂದಿಯ ಮೇಲೆ ಇರುವಂತೆ, ದಕ್ಷಿಣ ಭಾರತದಲ್ಲಿ ಪೂರ್ವ ಭಾರತದಲ್ಲಿ ಇಂದಿನ ಹಿತಕ್ಕೆ ಅಪಾಯ ತರುವ ಸಂದೇಹ ಸಂಸ್ಕೃತದ ಮೇಲೆ ಇರಬೇಕಾಗಿಲ್ಲ. ಹಿಂದಿ ನಮ್ಮ ದೇಶದ 'ರಾಷ್ಟ್ರಭಾಷೆ' ಆಗುವ ಸಂಭವ ದೂರ

ದೂರ ಹೋಗುತ್ತಿರುವಾಗ ಸಂಸ್ಕೃತವನ್ನು ಭಾರತದ ಏಕತ್ವದ ಪ್ರತೀಕವಾಗಿ ಮಾಡಿಕೊಳ್ಳ ಬಹುದಾಗಿದೆ. ಈ ಭಾಷೆ ಈವರೆಗೆ ಅದರ ಈಥೋಸಿನಲ್ಲಿ ಭಾಗಿಗಳಾಗಬೇಕೆನ್ನುವ ಎಲ್ಲರಿಗೆ ಸುಲಭಪ್ರಾಪ್ಯವಾಗಿರಲಿಲ್ಲ. ಇಂದು ಸಕಲರಿಗೆ ಅದು ಲಭ್ಯವಾಗಿರುವಾಗ ಅದನ್ನು ವಾಸ್ತವಿಕವಾಗಿ ಎಲ್ಲರಿಗೂ ಲಬ್ಧವಾಗಿ ಮಾಡುವುದು ಭಾರತದ ಐಕ್ಯ ಅಖಂಡತೆಗಳಿಗೆ ಪೋಷಕವಾಗದೆ ಇರದು. ಸಂಸ್ಕೃತವನ್ನು ಬ್ರಾಹ್ಮಣತ್ವದಿಂದ ಬಿಡುಗಡೆ ಮಾಡಬೇಕು.

ಹಿಂದಿಯ ಮೇಲೆ ಸಂಶಯ, ಸಂಸ್ಕೃತ ನಿಷ್ಪ್ರಯೋಜಕವಾದ್ದರಿಂದ ಬೇಡ. ಈ ಅವಸ್ಥೆಯಲ್ಲಿ ಇಂದು ಭಾರತದ ಐಕ್ಯದ ಒಂದೇ ಸಾಧನ ಇಂಗ್ಲಿಷ್ ಭಾಷೆಯಾಗಿದೆ. ಇವೆರಡು ಭಾಷೆಗಳನ್ನು ಹೊರಗಿಟ್ಟರೆ ಅದರ ಲಾಭ ಪಡೆಯುವವರು ಇಂಗ್ಲಿಷ್‌ವಾದಿಗಳು, ಹೊರತು ಮಾತೃಭಾಷಾವಾದಿಗಳಲ್ಲ. ತಪ್ಪೇನು? ಭಾಷೆಗೇಕೆ ಮಡಿಮೈಲಿಗೆ? ಆದರೆ ಇಂಗ್ಲಿಷು ಎಂದೂ ಭಾರತದ ಆತ್ಮವಾಗಲಾರದು. ಹಿಂದಿ ಸಂಸ್ಕೃತಗಳೆರಡರ ಅಭಾವದಲ್ಲಿ, 'ಜೈ ಭಾರತಮಾತೆಯ ತನುಜಾತೆ, ಜಯ ಹೇ ಕರ್ನಾಟಕಮಾತೆ' ಎಂಬುದು ಬಹಳ ಕಾಲ ಭಾವನಾತ್ಮಕವಾಗಿ ಉಳಿಯದು. ಬಹುಶಃ ಪ್ರಾದೇಶಿಕ ಅಭಿಮಾನಗಳೂ ಹಿತಸಂಬಂಧಗಳೂ ತಾಕಲಾಡಿ, ಬಲಾತ್ಕಾರವೊಂದೇ ರಾಜಕೀಯ ಐಕ್ಯವನ್ನು ಉಳಿಸಬಲ್ಲದೆಂಬ ಸ್ಥಿತಿ ಉಂಟಾಗಿ ಕೊನೆಗೆ, ಯೂರೋಪಿನಲ್ಲಿ ಪವಿತ್ರ ರೋಮನ್ ಸಾಮ್ರಾಜ್ಯ ಭಾಷಾತ್ಮಕ ರಾಷ್ಟ್ರಗಳಲ್ಲಿ ವಿಭಜನೆ ಹೊಂದಿದಂತೆ ಇಲ್ಲಿಯೂ ಆದೀತು.

ಸಂಸ್ಕೃತ, ಹಿಂದಿ, ಇಂಗ್ಲಿಷ್ ಮೂರೂ ಬೇಡ ಎಂಬವರಲ್ಲಿ ಕೆಲವರಾದರೂ ಇದನ್ನೇ ಬಯಸುತ್ತಾರೆಂದು ನನಗೆ ತೋರುತ್ತದೆ. ತಪ್ಪೇನು? ಆದರೆ ಕಣ್ಣು ಮುಚ್ಚಿಕೊಂಡಲ್ಲ, ತೆರೆದುಕೊಂಡು ಈ ಸಂಭಾವ್ಯತೆಯ ಲಕ್ಷ್ಮಣರೇಖೆ ದಾಟೋಣ.

■

# ಯುವಕರೇನು ಮಾಡಬೇಕು?

ದೇಶದಲ್ಲಿ ಬೆಳೆಯುತ್ತಿರುವ ಸಾರ್ವಜನಿಕ ಭ್ರಷ್ಟಾಚಾರ, ಅಭಾವಗಳಿಂದ ಬೆಲೆಗಳ ಏರಿಕೆ, ಇದರಿಂದ ಬಡ ಬಗ್ಗರಿಗೆ ಜೀವನ ಅಸಾಧ್ಯವಾಗಿರುವುದು-ಯೋಚಿಸುವವರನ್ನೆಲ್ಲ ಚಿಂತೆಗೀಡುಮಾಡಿರುವುದು ಸಹಜವಾಗಿದೆ. ಬಹುಶಃ ಈಗ ಚೆನ್ನಾಗಿ ಮಳೆಯಾಗಿ ಕೆಲ ಮಟ್ಟಿಗೆ ಜನರ ಕಷ್ಟ ನಿಷ್ಠುರಗಳನ್ನು ಹಗುರಗೊಳಿಸಲಿದೆ. ಆದರೆ ಸಮಸ್ಯೆ ಹಾಗೆಯೆ ಉಳಿದಿದೆ. ಅತ್ಯಂತ ಅಲ್ಪವಾದ ಕೊರತೆಗಳನ್ನೂ ತಮ್ಮ ಲಾಭಕ್ಕಾಗಿ ನಿರ್ದಯದಿಂದ ಉಪಯೋಗಿಸಿಕೊಳ್ಳುವ ಸಮಾಜದ್ರೋಹಿಗಳು ಈ ದೇಶದಲ್ಲಿ ಧಾರಾಳವಾಗಿ ಇದ್ದಾರೆ. ಲಕ್ಷಾಂತರ ಜನರ ಜೀವ ಹೋಗುವ ಸಂಭವ ಕೂಡ ಈ ಜನರನ್ನು ತಮ್ಮ ಸಂಗ್ರಹಪಥದಿಂದ ಹಿಂದೆ ಸೆಳೆಯುವುದಿಲ್ಲ.

ಇಂಥ ಸ್ಥಿತಿಯನ್ನು ಗಮನಿಸಿಯೇ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು, ಬಹುಶಃ ನಿರಾಶೆಯ ಗಳಿಗೆಯೊಂದರಲ್ಲಿ ಒಂದು ಯುವಕ ಸಭೆಯಲ್ಲಿ ಹೀಗೆ ಹೇಳಿದ್ದು: "ಸಟ್ಟಾಬಡಕ ಮತ್ತು ಲಾಭಬಡಕ ವ್ಯಾಪಾರಿಗಳ ಸಾಮಾಜಿಕ ಜೀವನವೇ ಅಶಕ್ಯವಾಗುವಂತೆ ಮಾಡುವ ಕಾರ್ಯವನ್ನು ಯುವಕರು ಕೈಗೆತ್ತಿಕೊಂಡರೆ ಮಾತ್ರ ಬೆಲೆಗಳ ಏರಿಕೆಯನ್ನು ತಡೆಗಟ್ಟಬಹುದು. ಬೇರೆ ಮಾರ್ಗವಿಲ್ಲ."

ತುಂಬಾ ಗಮನಾರ್ಹವಾದ ವಿಚಾರ. ಪ್ರಧಾನಮಂತ್ರಿಗಳು ಹೇಳಿದ್ದಾರೆಂಬುದರಿಂದ ಅದರ ಅರ್ಥದ ವ್ಯಾಪ್ತಿ ಹೆಚ್ಚು ವಿಸ್ತಾರವೇ ಆಗುತ್ತದೆ. ಇದರಲ್ಲಿ ಒಂದು ಒಪ್ಪಿಗೆಯೂ ಇದೆ. ಇಂದಿರಾ ಗಾಂಧಿಯವರು ಕಾಂಗ್ರೆಸ್ಸಿನ ಮುದಿ ಹುಲಿಗಳ ಕೈಯಿಂದ ಅಧಿಕಾರವನ್ನು ಕಿತ್ತುಕೊಂಡು ದೇಶವನ್ನು ಹೊಸ ಹಾದಿಯಲ್ಲಿ ಮುನ್ನಡೆಸುವ ವ್ರತವನ್ನು ಕೈಕೊಂಡಾಗ ಸರಕಾರದ ಯಂತ್ರವನ್ನೂ ಅಧಿಕಾರವನ್ನೂ ಜನಸಾಮಾನ್ಯರ ಹಿತಕ್ಕೆ ಉಪಯೋಗಿಸುವ ಆತ್ಮವಿಶ್ವಾಸ ಅವರಿಗೆ ಎಷ್ಟು ಮಟ್ಟಿಗೆ ಇತ್ತೋ ಅಷ್ಟು ಈಗ ಉಳಿದಿಲ್ಲ. ವಾಸ್ತವಿಕವಾಗಿ ಆ ಯಂತ್ರವನ್ನು ಉಪಯೋಗಿಸಿ ಜನಹಿತವನ್ನು ಮಾಡಬಹುದೆಂಬ ನಂಬಿಕೆ ಅವರಿಗೆ ಹಾರಿಯೇ ಹೋಗಿದೆಯೆಂಬ ಸಂಶಯವನ್ನು ಅವರ ಈ ಹೇಳಿಕೆ ಹುಟ್ಟಿಸುತ್ತವೆ.

ಆದರೆ ಯುವಕರು 'ವ್ಯಾಪಾರಿಗಳ ಸಾಮಾಜಿಕ ಜೀವನವೇ ಅಶಕ್ಯವಾಗುವಂತೆ' ಪರಿಸ್ಥಿತಿ ನಿರ್ಮಾಣ ಮಾಡುವುದೆಂದರೆ ಅದರ ಅರ್ಥವೇನು? ಯುವಕರು ಏನು ಮಾಡಬೇಕು?

ಸ್ವಲ್ಪ ವಿಚಾರಮಾಡಿದರೆ ಇದಕ್ಕೆ ಯುವಕರು ಏನು ಮಾಡಬಹುದೆಂದು ತರ್ಕಿಸಲು ಸಾಧ್ಯವಿದೆ.

* ಕಳ್ಳಸಂತೆ ಕದೀಮರ ವಿರುದ್ಧ ಸಭೆ ಮೆರವಣಿಗೆಗಳನ್ನು ಸಂಘಟಿಸಬಹುದು;

* ಅವರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಬಹುದು;

* ಖಚಿತವಾಗಿ ಲಾಭಬಡಕರೆಂದು ಗೊತ್ತಿರುವವರ ಅಂಗಡಿ, ಮನೆಗಳ ಮುಂದೆ ಪ್ರದರ್ಶನಗಳನ್ನು ಏರ್ಪಡಿಸಬಹುದು;

* ಅವರ ಹೆಂಡತಿ ಮಕ್ಕಳ ಮುಂದೆ ಅವರ ದುರ್ವ್ಯಾಪಾರಗಳ ಬಗ್ಗೆ ಹೇಳಿ ಅವರ ಬಗ್ಗೆ ತಿರಸ್ಕಾರ ಮೂಡಿಸುವುದು;

* ಇನ್ನೂ ಸ್ವಲ್ಪ ಮುಂದೆ ಹೋಗಿ ಅವರನ್ನು ಕಂಡಲ್ಲೆಲ್ಲ ಖಂಡನಾತ್ಮಕ ಘೋಷಣೆಗಳನ್ನು ಹೊರಡಿಸಬಹುದು;

* ನೀವು ಸ್ವತಃ ಅಂಥವರ ಮಕ್ಕಳೋ ಸಂಬಂಧಿಕರೋ ಆಗಿದ್ದರೆ ಅವರ ಮೇಲೆ ಖಾಸಗಿ ಸತ್ಯಾಗ್ರಹವನ್ನೋ ಮತ್ಯಾವುದೇ ಆಯುಧವನ್ನೋ ಉಪಯೋಗಿಸಬಹುದು.

ಒಂದು ಮಾತಿನಲ್ಲಿ ಇದೊಂದು ಚೀನೀ ಮಾದರಿಯ ಪರಿಮಿತ ಸಾಂಸ್ಕೃತಿಕ ಕ್ರಾಂತಿಯಾಗಬೇಕು. ಇಲ್ಲದಿದ್ದರೆ ಇಚ್ಛಿತ ಪರಿಣಾಮ ಆಗಲಾರದು.

ಆದರೆ ಇಂಥ ಯುವಕ ಕ್ರಾಂತಿಯೊಂದು ಸಾಧ್ಯವಾಗುವಂಥ ನೈತಿಕ ಮತ್ತು ರಾಜಕೀಯ ವಾತಾವರಣ ಈ ದೇಶದಲ್ಲಿ ಇಂದು ಇದೆಯೇ?

ಮೊದಲನೆಯದಾಗಿ, ಪ್ರಧಾನಮಂತ್ರಿಗಳು ಜನತೆಯ ವೈರಿಗಳು ಯಾರೆಂಬುದನ್ನು ಪೂರ್ತಿಯಾಗಿ ಗ್ರಹಿಸಿಲ್ಲ; ಅಥವಾ ಗ್ರಹಿಸಿದ್ದರೆ ಹೇಳಿಲ್ಲ. ಲಾಭಬಡಕರು ಇಂದು ವ್ಯಾಪಾರಿ ವರ್ಗದಲ್ಲಿ ಮಾತ್ರ ಇಲ್ಲ; ಅದೊಂದೇ ವರ್ಗ ತನ್ನ ಸ್ವಂತ ವೇಗದಿಂದ ಈ ಅವ್ಯಾಪಾರ ಚಕ್ರವನ್ನು ನಡೆಸುತ್ತಿಲ್ಲ. ಅದೊಂದು ತ್ರಿಕೋಣ. ಅದರ ಒಂದು ಮೂಲೆಯಲ್ಲಿ, ವ್ಯಾಪಾರಿ, ಇನ್ನೊಂದರಲ್ಲಿ ಅಧಿಕಾರಿ, ಮತ್ತೊಂದರಲ್ಲಿ ರಾಜಕಾರಣಿ ಇದ್ದಾರೆ. ಈ ಉಕ್ಕಿನ ತ್ರಿಕೋಣದಲ್ಲಿ ಸಮಾಜ ಬಂಧಿಸಲ್ಪಟ್ಟಿದೆ. ಅವ್ಯಾಪಾರದ ಮೇಲೆ ಆಯುಧ ಎತ್ತಬೇಕೆನ್ನುವವರು ಈ ಮೂರು ಶತ್ರುಗಳನ್ನು ಏಕಕಾಲದಲ್ಲಿ ಎದುರಿಸಲು ತಯಾರಾಗಬೇಕಾಗುತ್ತದೆ. ಇದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಹೋದರೆ ಏನಾಗುತ್ತದೆಂದು ತೀರ ಈಚೆಗಿನ ಘಟನೆಗಳೇ ತೋರಿಸಿರುವುದು ಪ್ರಧಾನಮಂತ್ರಿಗಳ ಗಮನಕ್ಕೆ ಬಾರದೆ ಇದ್ದಿರಲಾರದು.

ವ್ಯಾಪಾರಿಗಳ ಮೇಲೆ 'ಒತ್ತಡ' ತರುವ ಯತ್ನಗಳು ಆಗದೆ ಇಲ್ಲ. ದೇಶದ ಹಲಪಟ್ಟಣಗಳಲ್ಲಿ ವ್ಯಾಪಾರಿಗಳ ವಿರುದ್ಧ ಸಭೆ ಮೆರವಣಿಗೆಗಳಾಗಿವೆ. ವ್ಯಾಪಾರಿ ವರ್ಗ ಇಂಥವುಗಳಿಗೆ ತುಂಬ ಖಾರವಾದ ಪ್ರತಿಕ್ರಿಯೆಯನ್ನೇ ತೋರಿಸಿದೆ. ಅದು ಸಾರ್ವತ್ರಿಕ ಹರತಾಳವನ್ನು ಆಚರಿಸಿದೆ; ಯಾವ ವಸ್ತು ಅನ್ಯಾಯವಾಗಿ ತುಟ್ಟಿಯಾಗಿದೆಯೆಂದು ಚಳವಳಿ ಆಯಿತೋ ಆ ವಸ್ತು ಪೇಟೆಯಿಂದ ಕಟ್ಟ ಕಣ್ಮರೆಯಾಗುವಂತೆ ವ್ಯವಸ್ಥೆ ಮಾಡಿದೆ. ಸ್ವತಃ

ಸರಕಾರವೇ ಮುಂದಾಗಿ ವ್ಯಾಪಾರಿಗಳ ಮೇಲೆ ಕ್ರಮ ಕೈಕೊಂಡಾಗಲೂ ವ್ಯಾಪಾರಿಗಳು ಮಾತಿಲ್ಲದೆ ತಮ್ಮ ಪ್ರತಿಭಟನೆಯನ್ನು ತೋರಿಸಿದ್ದಾರೆ. ಸಾಮಾನ್ಯವಾಗಿ ಸರಕಾರವೇ ಸೋತು ಶರಣಾಗತವಾಗಬೇಕಾಯಿತು. ಇಂಥ ಪ್ರತಿಯೊಂದು ಘಟನೆಯ ನಂತರ ಬೆಲೆಗಳು ಮತ್ತಷ್ಟು ಏರಿವೆಯೇ ಹೊರತು ಇಳಿದಿಲ್ಲ. ಸರಕಾರ ತನ್ನ ಮುಖ ಉಳಿಸಿಕೊಳ್ಳಲು ಏನಾದರೊಂದು ಸವಲತ್ತನ್ನು ಜನಕ್ಕೆ ಕೊಡಿಸಿದ ಹಾಗೆ ನಟಿಸುತ್ತದೆ. ಅದು ಆಚರಣೆಗೆ ಬರುವುದು ತೀರ ಕ್ವಚಿತ್.

ಕರ್ನಾಟಕದಲ್ಲೇ ಹೇಳುವುದಾದರೆ ತರುಣರೋ ಶ್ರಮಿಕರೋ ಅಷ್ಟಿಷ್ಟು ಕಡೆ ಇಂಥ ಲಾಭಬಡಕ ವಿರೋಧಿ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಆದರೆ ಅವರು ದೊಡ್ಡ ಪ್ರಮಾಣದಲ್ಲಿ ಸಂಗ್ರಹ ಮಾಡಿದವರನ್ನು ಬಯಲಿಗೆಳೆಯಲು ಸಮರ್ಥರಾಗಿಲ್ಲ. ಅದೇ ಪ್ರಕಾರ ಸರಕಾರಿ ಅಧಿಕಾರಿಗಳೇ ಮುಂದೆ ಬಿದ್ದು ವ್ಯಾಪಾರಿಗಳಿಂದ ಸಂಗ್ರಹಗಳನ್ನು ವಶಪಡಿಸಿಕೊಂಡಾಗಲೂ ಅವರು ಸಾವಿರಗಟ್ಟಲೆ ಟನ್ ಬಿಡಿ, ಸಾವಿರಾರು ಕ್ವಿಂಟಲ್ ಧಾನ್ಯಗಳನ್ನು ಕೂಡಿಟ್ಟವರನ್ನು ಹಿಡಿದಿಲ್ಲ. ಇದರ ಅರ್ಥ ಎರಡರಲ್ಲಿ ಒಂದಾಗುತ್ತದೆ. ಒಂದೋ ದೊಡ್ಡ ಸಂಗ್ರಹಕಾರರನ್ನು ಹೊರಗೆಳೆಯುವ ಆಸಕ್ತಿ ಈ ಇಬ್ಬರಿಗೂ ಇಲ್ಲ; ಅವರು ತಾವು ಸುಮ್ಮನೆ ಕೂತಿಲ್ಲವೆಂದು ತೋರಿಸುವುದಕ್ಕಷ್ಟೇ ಈ ಕ್ರಮಗಳನ್ನು ಕೈಕೊಳ್ಳುತ್ತಾರೆ; ಅಥವಾ ನಿಜವಾಗಿಯೂ ವ್ಯಾಪಾರಿಗಳ ಹತ್ತಿರ ಅವರು ಸಮಾಜದ್ರೋಹಿಗಳು ಎಂಬ ಬಿರುದಿಗೆ ಯೋಗ್ಯರಾಗುವಷ್ಟು ಸಂಗ್ರಹವಿಲ್ಲ. ಎರಡನೆಯದು, ನಿಜವಾಗಿದ್ದ ಪಕ್ಷದಲ್ಲಿ ಪ್ರಧಾನಮಂತ್ರಿಗಳೆನ್ನುವಂತೆ ವ್ಯಾಪಾರಿಗಳನ್ನು ಸಮಾಜಬಾಹಿರರಾಗಿ ಮಾಡುವುದಕ್ಕೆ ತರುಣರು ಸಂಘಟಿತರಾಗುವುದರಲ್ಲಿ ಔಚಿತ್ಯವೇನು? ಮೊದಲನೆಯದು ನಿಜವಾಗಿದ್ದಲ್ಲಿ ಆಳುವ ಪಕ್ಷ ಮತ್ತು ಸರಕಾರಿ ಯಂತ್ರ ನಿಷ್ಕ್ರಿಯವಾಗಿರುವಲ್ಲಿ ತರುಣರಾದರೂ ಹೇಗೆ ಸಫಲರಾಗಬಲ್ಲರು?

ಒಂದು ತಮಾಷೆಯ ವಿಷಯವೆಂದರೆ ವಿರೋಧಿಪಕ್ಷಗಳೂ ಆಳುವ ಪಕ್ಷವೂ ಆಡುವ ಕಣ್ಣುಮುಚ್ಚಾಲೆ. ವಿರೋಧಿಪಕ್ಷಗಳಿಗೆ ಜನರ ಈ ಕಷ್ಟಕಾರ್ಪಣ್ಯಗಳು ಸರಕಾರವನ್ನು ನಿಂದಿಸುವ ಸಂದರ್ಭಗಳಾಗಿ ಕಾಣುತ್ತಿವೆಯೇ ಹೊರತು ಆ ತೊಂದರೆಗಳನ್ನು ನಿವಾರಿಸಲು ತಾವೇನಾದರೂ ಪ್ರತ್ಯೇಕ ಪ್ರಯತ್ನ ಮಾಡಿ ಜನರ ಕೃತಜ್ಞತೆಯನ್ನು ಸಂಪಾದಿಸುವ ಸಂದರ್ಭಗಳಾಗಿ ಕಾಣಿಸುವುದಿಲ್ಲ. ಎಡ ಪಕ್ಷಗಳೆಂದು ಹೇಳಿಕೊಳ್ಳುವವುಗಳು ಸಂಘಟಿಸುವ ವ್ಯಾಪಾರಿ ವಿರೋಧಿಯೆನಿಸುವ ಪ್ರದರ್ಶನಗಳೂ ಬರಿ ಸಾಂಕೇತಿಕವಾಗಿರುತ್ತವೆ. ನಿಜವಾಗಿ ಅವು ನಾಳೆ ಅಧಿಕಾರಕ್ಕೇರುವ ಆಸೆ ಇಟ್ಟುಕೊಂಡಿದ್ದಲ್ಲಿ ಅವುಗಳಿಗೆ ತಮ್ಮ ಬೆಂಬಲಿಗರಾದ ಶ್ರಮಿಕರ ಮೂಲಕ ಆಯಾ ಊರಿನ ಹಿರಿಯ ಲಾಭಬಡಕರ ಹೆಸರುಗಳೂ ಅವರ ವಖಾರಗಳೂ ತಿಳಿದಿರಬೇಕು. ಇಂಥವುಗಳನ್ನು ಗುರಿಯಾಗಿ ಮಾಡಿಕೊಂಡರೆ ವ್ಯಾಪಾರಿಗಳೂ ಸರಕಾರವೂ ಸೇರಿಯೆ ಪೇಚಾಟಕ್ಕೆ ಬೀಳುವುದು ಖಂಡಿತ. ಆದರೆ ಅವು ಇಂಥ

ಹವ್ಯಾಸಕ್ಕಿಳಿಯುವುದಿಲ್ಲ. ಎಲ್ಲ ಬಂದ್‌ಗಳು ಸರಕಾರವನ್ನು ಗುರಿಯಾಗಿಟ್ಟವುಗಳೇ. ಅವು ತುಂಬಾ ಯಶಸ್ವಿಯೂ ಆಗುತ್ತವೆ. ಏಕೆಂದರೆ ವ್ಯಾಪಾರಿಗಳು ಇಷ್ಟವಿದ್ದೋ ಒತ್ತಾಯಕ್ಕೋ ಅವುಗಳಲ್ಲಿ ಸಹಕರಿಸುತ್ತಾರೆ. (ಅವರಿಗೆ ಹೆಚ್ಚು ನಷ್ಟವೂ ಇಲ್ಲ) ಈ 'ಜನತಾ ಕಾರ್ಯಾಚರಣೆ'ಯಿಂದ ಜನತೆಗೇ ಕಷ್ಟ. ಆಳುವ ಪಕ್ಷ ಅಥವಾ ಪಕ್ಷಗಳು ಇಂಥ ವಿಷಯಗಳಲ್ಲಿ ಸಕ್ರಿಯವಾಗಿ ಹೀಗಾಗಲಿ ಹಾಗಾಗಲಿ ಕೆಲಸ ಮಾಡುವದು ತೀರ ಅಪೂರ್ವ.

ವಸ್ತುಸ್ಥಿತಿಯೆಂದರೆ ಹೆಚ್ಚಿನ ದೊಡ್ಡ ರಾಜಕೀಯ ಪಕ್ಷಗಳು ವರ್ತಕ ವರ್ಗದ ಮತ್ತು ಗ್ರಾಮಾಂತರದಲ್ಲಿ ಶ್ರೀಮಂತ ರೈತರ ತುತ್ತುಗಳನ್ನು ಸ್ವೀಕರಿಸುವುದರಿಂದ ಈ ಎರಡೂ ವರ್ಗಗಳನ್ನು ಎದುರುಹಾಕಿಕೊಳ್ಳುವುದು ಅವುಗಳಿಗೆ ಸಾಧ್ಯವಾಗುತ್ತಿಲ್ಲ. ಚುನಾವಣೆಗಳಿಗೆ ಹಣ ಬೇಕು. ಹಣ ಶ್ರೀಮಂತರ ಹತ್ತಿರ ಇದೆ. ಅವರು ತಮಗೆ ಅಹಿತ ಬಗೆಯುವವರಿಗೆ ಹಣ ಕೊಡುವುದಿಲ್ಲ (ಸುಮ್ಮನೆ ಬೆದರಿಕೆ ಹಾಕುವುದಕ್ಕೆ ಈ ವರ್ಗದ ವಿರೋಧವೇನೂ ಇಲ್ಲ-ಬೆದರಿಕೆ ಕ್ರಿಯೆಗಿಳಿದರೆ ಅವರಿಗೆ ಎಲ್ಲಿ ಸೂತ್ರಗಳನ್ನು ಎಳೆಯಬೇಕೆಂದು ಗೊತ್ತು). ಸಕ್ಕರೆಗೆ ಇಂದು ಗ್ರಾಹಕ ಇಮ್ಮಡಿ ಬೆಲೆ ತೆರುತ್ತಿರುವುದಕ್ಕೆ ಆಳುವ ಪಕ್ಷ ಸಕ್ಕರೆ ವ್ಯವಹಾರದವರ ಉಪ್ಪು ತಿಂದದ್ದೇ ಕಾರಣವಾಗಿದೆಯೆಂಬುದು ಇಂದು ಬಹಿರಂಗ ರಹಸ್ಯವಾಗಿದೆ.

ಇಷ್ಟೆಲ್ಲ ಏಕೆ ಹೇಳಬೇಕಾಯಿತೆಂದರೆ ಇಂದು ಗ್ರಾಹಕರು ದಿನ ಬಳಕೆಯ ವಸ್ತುಗಳಿಗೆ ಅಗಾಧ ಬೆಲೆ ತೆರಬೇಕಾಗಿರುವುದು ಕೇವಲ ವರ್ತಕ ವರ್ಗದ ತೃಷ್ಣೆಯಿಂದಲ್ಲ. ದುರ್ಧನದಲ್ಲಿ ಪಾಲುಗೊಳ್ಳುವ ಪ್ರಬಲ ಶಕ್ತಿಗಳ ಸಹಕಾರ ಅದಕ್ಕಿರುವುದರಿಂದ ಮತ್ತು ಅವುಗಳು ಪರಸ್ಪರರಿಗೆ ಜೀವಾಳದ ಸಹಕಾರಿಗಳಾಗಿರುವದರಿಂದ ಈ ಲಾಭಬಡಕತನವನ್ನು ದಮನ ಮಾಡುವುದು ಇಷ್ಟು ಕಷ್ಟವಾಗಿದೆ.

ಈ ಕೆಲಸದಲ್ಲಿರುವ ದಾಟಲಾರದ ತೊಡಕುಗಳನ್ನು ಮನಗಂಡೇ ಬಹುಶಃ ಶ್ರೀಮತಿ ಗಾಂಧಿಯವರು ತರುಣರಿಗೆ ಎದ್ದೇಳಲು ಕರೆಯಿತ್ತಿದ್ದಾರೆ. ಈ ಆಟದಲ್ಲಿ ಇನ್ನೂ ಕೈ ತೊಡಕಿಸಿಕೊಳ್ಳದಿದ್ದ ಒಂದು ವರ್ಗವೆಂದರೆ ತರುಣರು ಎಂದು ಅವರು ಭಾವಿಸಿದಂತಿದೆ.

ಆದರೆ ಈ ಕರೆಯನ್ನು ತರುಣರು ಸ್ವೀಕರಿಸಬಲ್ಲರೆ? ಬಲ್ಲರೆನಿಸಿದರೆ ಅವರಿಗೆ ಸಹಕಾರ ಸಿಕ್ಕೀತೆ? ಅದು ಸಿಕ್ಕಿದರೆ ಪ್ರಜಾಸತ್ತಾತ್ಮಕ ಆಳಿಕೆಯ ಮೇಲೆ ಅದರ ಪರಿಣಾಮವೇನು?

ತರುಣರು ಈ ಕಾರ್ಯ ನಿರ್ವಹಿಸಬಲ್ಲರೆ? ನಿರ್ವಹಿಸಲು ಅರ್ಹರೇ? ಎಂಬ ಬಗ್ಗೆಯೇ ಸಂಶಯವಿದೆ. ಇಂದು ಮುಂದಾಳ್ತನದ ಮಟ್ಟಕ್ಕೆ ಮಾತ್ರವಲ್ಲ ಕ್ರಿಯಾತ್ಮಕ ಮಟ್ಟಕ್ಕೆ ಏರಬಲ್ಲರೆಂದು ನಾವು ಗ್ರಹಿಸಬಹುದಾದ ತರುಣರು ಯಾವ ವರ್ಗದವರು? ಅವರಲ್ಲಿ ಅಧಿಕಾಂಶ ಜನರು ಈ ಲೇಖನದ ಪ್ರಾರಂಭದಲ್ಲಿ ಹೇಳಿದ ತ್ರಿಕೋಣದ ಒಂದಲ್ಲ ಒಂದು ಭುಜಕ್ಕೆ ಸೇರಿದವರು. ಅವರ ಶಿಕ್ಷಣ, ಅವರ ಭವಿಷ್ಯ, ಅವರ ಐಷ್ ಆರಾಮ, ಅವರ

ಬದುಕೀ ಅವ್ಯಾಪಾರಗಳಿಂದ ಲಭಿಸಿದ ಅನುಕೂಲಗಳಿಂದ ಸಾಧ್ಯವಾಗಿದೆ. ಈಚೆಗೆ ನಡೆದ ಕಾಲೇಜು ಚುನಾವಣೆಗಳಲ್ಲಿ ಲಕ್ಷಾಂತರ ಹಣ ಪುಡಿಯಾಯಿತು. ಅದೆಲ್ಲವೂ ಸದ್ಧನವೆಂದು ಹೇಳಲಾದೀತೆ? ಅವರು ತಮಗೆ ಇದೆಲ್ಲವನ್ನೂ ದೊರಕಿಸಿಕೊಟ್ಟ ಪದ್ಧತಿಯ ನಾಶಕ್ಕಾಗಿ ಕೆಲಸ ಮಾಡುವರೆಂದು ನಂಬುವುದು ಹೇಗೆ? ಇದು ಅಂಥ ಹೃದಯಪರಿವರ್ತನೆಯ ಯುಗವಲ್ಲ.

ಇಂದು ಶೋಷಣಕ್ಕೆ ಗುರಿಯಾದ ವರ್ಗಗಳಿಂದ ಬಂದ ಲಕ್ಷಾಂತರ ಸುಶಿಕ್ಷಿತ ತರುಣರಿದ್ದಾರೆಂಬುದು ನಿಜ. ಆದರೆ ಅವರಿಗೆ ಮುಂದಾಳ್ತನದ ಅನುಭವವಿಲ್ಲ. ಅನನುಭವಿಗಳ ವರ್ಗದಲ್ಲೇ ಮುಂದಾಳ್ತನ ಉದ್ಭವಿಸಬಾರದೆಂದಿಲ್ಲ. ಆದರೆ ಅಂಥಾ ಮುಂದಾಳ್ತನದಲ್ಲಿ ಪ್ರಜಾಸತ್ತಾತ್ಮಕ ಸಂಯಮಗಳನ್ನು ನಾವು ನಿರೀಕ್ಷಿಸುವಂತಿಲ್ಲ..

ಇನ್ನೊಂದು ವಿಚಾರವೆಂದರೆ ಇಂದಿನ ತರುಣರು ಈ ವಾತಾವರಣದಲ್ಲೇ ಬೆಳೆದು ಬಂದವರಾದ್ದರಿಂದ ಅವರಿಗೆ ಇದು ಸಹಜವೇ ಅನಿಸಿ ಬಂಡಾಯಕ್ಕೆ ಸ್ಫೂರ್ತಿಯೇ ಇಲ್ಲದಂತಾಗಿರಲೂಬಹುದು. ಇದಕ್ಕಿಂತ ಒಳ್ಳೇದನ್ನು ಕಂಡವರಿಗೆ ತಾನೆ ಇದು ಕೆಟ್ಟದ್ದೆನಿಸಬೇಕು!

ಒಳ್ಳೇದು, ವಾದಕ್ಕಾಗಿ ಇದೆಲ್ಲ ತೊಂದರೆಗಳು ಕಾಲ್ಪನಿಕವೆಂದೂ ತರುಣರು ಈ ಆಂದೋಲನ ನಡೆಸಲು ಅರ್ಹರೆಂದೂ ಒಪ್ಪಿದರೂ ಅವರಿಗೆ ಅದು ಸಾಧ್ಯವಾದೀತೆ ಎಂಬ ಪ್ರಶ್ನೆ ಬರುತ್ತದೆ. ಈವರೆಗಿನ ಚರ್ಚೆಯಿಂದ ಬೆಲೆಯೇರಿಕೆಯನ್ನು ತರುಣರು ತಡೆಯಲು ಇಂದಿರಾ ಗಾಂಧಿಯವರು ಹೇಳಿದ್ದನ್ನು ಕೃತಿಗಿಳಿಸಬೇಕಾದರೆ ಅವರು ಕಾನೂನುಬದ್ಧ ಸೀಮೆಯೊಳಗೆ ಉಳಿಯಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿರಬೇಕು. ಏಕೆಂದರೆ, ಲೇಖನದ ಪ್ರಾರಂಭದಲ್ಲಿ ಹೇಳಿದ ಉಪಾಯಗಳೆಲ್ಲವೂ ಸುಮಾರಾಗಿ ಕ್ರಾಂತಿಕಾರಕ ವರ್ಗಕ್ಕೆ ಸೇರಿದವೇ. ಪ್ರತಿಷ್ಠಿತ ಸರಕಾರ ಕಣ್ಮುಚ್ಚಿಕೊಂಡು ಕೂತದ್ದರಿಂದಲೇ ಚೀನದಲ್ಲಿ 'ಸಾಂಸ್ಕೃತಿಕ ಕ್ರಾಂತಿ' ಸಾಧ್ಯವಾಯಿತು. ಭಾರತದಲ್ಲಿ ಸರಕಾರ ಕಣ್ಮುಚ್ಚಿ ಕುಳ್ಳಿರಬಲ್ಲದೆ? ಎದುರಾಳಿಗಳು ಚೀನದಲ್ಲಿ ಅಸಹಾಯರಾಗಿದ್ದರು. ಅವರಿಗೆ ಧನಬಲವಿರಲಿಲ್ಲ. ಇಲ್ಲಿ ಹಾಗಲ್ಲ—'ಲಾಭಬಡಕರ ಜೀವನವನ್ನು ಅಸಹ್ಯವಾಗಿ ಮಾಡುವ' ಯತ್ನ ಇಲ್ಲಿ ನಡೆದರೆ ಎದುರುಗಡೆಯಿಂದ ಪ್ರತೀಕಾರವನ್ನು ನಿರೀಕ್ಷಿಸಲೇಬೇಕು. ಪೋಲೀಸರು ಕೈ ಹಾಕದಿದ್ದರೆ ಅದು ಯಾದವೀಯುದ್ಧದ ರೂಪ ತಳೆದೀತು. ಕೈ ಹಾಕಿದರೆ ಕಾನೂನಿಗೆ ಹೊರತಾದ ಚಳವಳಿ ತಣ್ಣಗಾಗುವುದು ಖಂಡಿತ. ಅಧಿಕಾರಿಗಳೂ ರಾಜಕಾರಣಿಗಳೂ ಯಾರಿಂದ ಲಾಭ ಹೊಂದುತ್ತಿದ್ದಾರೆಂಬುದನ್ನು ನೆನೆದರೆ ಅವರ ಸಹಾನುಭೂತಿ ಯಾರ ಕಡೆಗಿರಬಹುದೆಂದು ಕಲ್ಪಿಸಿಕೊಳ್ಳಲು ಕಲ್ಪನಾಶಕ್ತಿ ಬೇಕಾಗಿಲ್ಲ.

ಕೊನೆಯ ಪ್ರಶ್ನೆ, ಈ ಸಂದರ್ಭದಲ್ಲಿ ಸಂವಿಧಾನಾತ್ಮಕ ಆಡಳಿತೆಯ ಮೇಲೆ ಏನು ಪರಿಣಾಮವಾದೀತೆಂಬುದು ಸಮಾಜ ದ್ರೋಹಿಗಳ ಜೀವನವನ್ನು ಅಶಕ್ಯವಾಗಿ ಮಾಡುವುದೆಂದರೆ ಸಿವಿಲ್ ಮತ್ತು ಕ್ರಿಮಿನಲ್ ಎರಡೂ ರಂಗಗಳಲ್ಲಿ ಸೇರುವ ಅನೇಕ

ಕಾನೂನುಗಳನ್ನು ಧಿಕ್ಕರಿಸಿ ನಡೆಯುವುದು. ಅರ್ಥಾತ್ 'ಸಾರ್ವಜನಿಕ ಅಭಿಪ್ರಾಯದ ನ್ಯಾಯಾಲಯ'ದಲ್ಲಿ ಜನರನ್ನು ವಿಚಾರಣೆಗೊಳಪಡಿಸಿ 'ಗಲ್ಲಿಗೇರಿಸುವುದು!' ಒಬ್ಬನನ್ನು ಕಳ್ಳಪೇಟೆ ಮಾಡಿದ್ದಾನೆಂದು ಸುತ್ತ ಮುತ್ತಲವರು ಅವನನ್ನು ಬಹಿರಂಗವಾಗಿ ನಿಂದಿಸಿ ಅವನಿಗೆ ಅದರ ವಿರುದ್ಧ ಏನೂ ಇಲಾಜು ಇಲ್ಲವೆಂದಾಗುವುದಾದರೆ ಕ್ಷಿಪ್ರದಲ್ಲಿಯೇ ಅದು ಫ್ರೆಂಚ್ ಕ್ರಾಂತಿಯಲ್ಲಿ ನಡೆದಂಥ ಅನ್ಯಾಯಗಳಲ್ಲಿ ಪರ್ಯವಸಾನ ಹೊಂದುತ್ತದೆ. ಕಾನೂನು ಪ್ರಕಾರ ಅವನಿಗೆ ಆತ್ಮರಕ್ಷಣೆಗಿರುವ ಹಕ್ಕು ಹಾರಿಹೋಗುತ್ತದೆ. ಈ ಸ್ಥಿತಿಯನ್ನು ಸಂವಿಧಾನಾತ್ಮಕ ಎನ್ನಲು ಸಾಧ್ಯವಿಲ್ಲ—ಅದರಲ್ಲಿ ಶಾರೀರಿಕ ಹಿಂಸೆ ಇಲ್ಲದಿದ್ದರೆ ಕೂಡ. ಅದು ರಾಷ್ಟ್ರೀಯ ಅವ್ಯವಸ್ಥೆಗೆ ಆಮಂತ್ರಣವಾಗಿದೆ.

ಹಾಗಾದರೆ ಸಮಸ್ಯೆಗೆ ಪರಿಹಾರವೇ ಇಲ್ಲವೆ? ಇದೆ. ಶ್ರೀಮತಿ ಇಂದಿರಾ ಗಾಂಧಿಯವರೂ ಅವರ ನಿಕಟ ಬೆಂಬಲಿಗರೂ ತಾವು ಹೇಳುತ್ತಿರುವುದನ್ನು ತಾವು ನಿಜವಾಗಿ ನಂಬಿದ್ದೇವೆ ಎಂದು ತೋರಿಸಿಕೊಡಬೇಕು. ಒಂದು ಕಡೆಯಿಂದ ವ್ಯಾಪಾರಿಗಳೊಡನೆ ಸಂಧಿ ಮಾಡಿಕೊಂಡು ಇನ್ನೊಂದು ಕಡೆ ಅವರ ಜೀವನವನ್ನು ಅಶಕ್ಯವಾಗಿ ಮಾಡಬೇಕೆನ್ನುತ್ತ ತಿರುಗುವುದು ಉದ್ದೇಶಕ್ಕೆ ಘಾತಕವಾಗುವುದು. ಪಕ್ಷದ ಕಾರ್ಯಕರ್ತರು ನಿಜವಾದ ಕಾರ್ಯಕರ್ತರಾಗಬೇಕು. ಕಳ್ಳಹಣದ ಶ್ರೀಮಂತರ ವಿರುದ್ಧ ಜನಾಭಿಪ್ರಾಯವನ್ನು ನಿರ್ಮಿಸುವುದಕ್ಕಾಗಿ ಕಾಂಗ್ರೆಸ್ಸಿನ ಜವಾಬ್ದಾರಿ ನಾಯಕರೇ ಮುಂದೆ ಬರಬೇಕು. ಇದರ ಅರ್ಥ ಆಳುವ ಪಕ್ಷದ ಮತ್ತು ಬಡಜನರ ಹಿತಾರ್ಥ ಆಳಬೇಕೆಂದು ಆಸೆಯುಳ್ಳ ಎಲ್ಲ ಪಕ್ಷಗಳ ಸಂಘಟಣ ಸ್ವರೂಪವನ್ನೇ ಬದಲು ಮಾಡಬೇಕಾಗುತ್ತದೆ. ನಾಯಕರು 'ಕಮಿಟೆಡ್ ನ್ಯಾಯಾಧೀಶರು' 'ಕಮಿಟೆಡ್ ಸರಕಾರಿ ನೌಕರರು' ಬೇಕು ಎಂದು ಹೇಳುವ ಮೊದಲು ತಮ್ಮ ಪಕ್ಷವೇ ಮೊದಲು ಕಮಿಟೆಡ್ ಆಗುವಂತೆ ನೋಡಿಕೊಳ್ಳಬೇಕು. ಈಗಿರುವ ಪಕ್ಷ ಸಂಘಟನೆ ಇದಕ್ಕೆ ಏನೇನೂ ಅರ್ಹವಾಗಿಲ್ಲ. ಇಂದು ಸರಕಾರದ ಘೋಷಿತ ನೀತಿಗಳು ವ್ಯವಹಾರದಲ್ಲಿ ತೀರ ಅಳ್ಳಕವಾಗಿ ಹೋಗಲು ಪಕ್ಷವನ್ನು ಕೆಳಗಿನ ಸ್ತರಗಳಲ್ಲಿ ಹಿಡಿತದಲ್ಲಿಟ್ಟುಕೊಂಡಿರುವ ಪಟ್ಟಭದ್ರ ಹಿತಾಸಕ್ತಿಗಳ ಪ್ರತಿನಿಧಿಗಳೇ ಕಾರಣ.

ಪ್ರಜಾಸತ್ತೆಯ ಮುಖ್ಯ ಸಮಸ್ಯೆಯೆಂದರೆ ಶ್ರೀಮಂತ ಪಟ್ಟಭದ್ರರಿಂದ ಚುನಾವಣೆಗಳಿಗೆ ಹಣವನ್ನೂ ಬಡಜನರಿಂದ ಮತಗಳನ್ನೂ ಹೇಗೆ ಕಿತ್ತಬೇಕು ಎಂಬುದು ಅಂತ ಯಾರೋ ಒಬ್ಬರು ಹೇಳಿದ್ದಾರೆ. ನಮ್ಮ ಪ್ರಧಾನಿಗಳು ಈ ಸಮಸ್ಯೆಯನ್ನು ಈವರೆಗಿನ ರೀತಿಯಲ್ಲೇ ಇನ್ನೂ ಬಗೆಹರಿಸುವುದಾದರೆ ತರುಣರು ಅಥವಾ ಇನ್ನಾರೇ ಆದರೂ ನಮ್ಮ ದೇಶದಲ್ಲಿ ಬದಲಾವಣೆಗಳನ್ನು ತರಲಾರರು. ತದ್ವಿರುದ್ಧವಾಗಿ ತರುಣರನ್ನು ಹುರಿದುಂಬಿಸಿ ಕೊನೆಗೆ ಕಾನೂನುಭಂಗದಲ್ಲಿ ಪರ್ಯವಸಾನ ಹೊಂದಲೇಬೇಕಾದ ಪ್ರಚಾರ ಪ್ರದರ್ಶನಗಳಲ್ಲಿ ತೊಡಗಿಸಿದರೆ ಅದು ದಬ್ಬಾಳಿಕೆಯ ಮತ್ತು ರಾಜಕೀಯ ಸ್ವಾರ್ಥಸಾಧನೆಯ ಇನ್ನೊಂದು ಉಪಕರಣವಾದೀತು.

ಪ್ರಜೆಗಳ ಮತ ಪಡೆದು ಸರಕಾರಿ ಯಂತ್ರವನ್ನು ಶಾಂತಿಯಿಂದ ವಶಪಡಿಸಿಕೊಂಡು

ಆಳುವುದರಲ್ಲಿ ವಿಶ್ವಾಸವುಳ್ಳ ಪ್ರತಿಯೊಂದು ಪಕ್ಷವೂ ಕಾನೂನುಬದ್ಧ ಮಾರ್ಗಗಳಿಂದ, ಸರಕಾರಿ ಯಂತ್ರದ ವಿಜ್ಞ ಪ್ರಯೋಗದಿಂದ ತನ್ನ ಘೋಷಿತ ನೀತಿಯನ್ನು ಯಶಸ್ವಿಯಾಗಿ ಜಾರಿಗೆ ತರುವ ಪ್ರತಿಜ್ಞೆಯನ್ನು ಮಾಡಿರುತ್ತದೆಂದೇ ಅರ್ಥ. ಅಧಿಕಾರಕ್ಕೆ ಬಂದ ಪಕ್ಷದ ಹತ್ತಿರ ಕಾನೂನು ಮಾಡುವ ಅಧಿಕಾರವಿದೆ: ಆಡಳಿತ ಯಂತ್ರ ಅದರ ವಶದಲ್ಲಿದೆ; ಪೊಲೀಸು, ಸೈನ್ಯ ಮೊದಲಾದ ದಂಡಶಕ್ತಿಸ್ರೋತಗಳೂ ಅದರ ಅಧೀನದಲ್ಲಿವೆ. ಇಷ್ಟಿದ್ದೂ 'ತರುಣರು' ಅಥವಾ ಇನ್ನಾವುದೇ ಬಾಹ್ಯಶಕ್ತಿಯ ಸಹಾಯಕ್ಕೆ ಅದು ಕೈ ಚಾಚುವುದೆಂದರೆ ಅದು ಹೊಣೆ ತಪ್ಪಿಸಿಕೊಳ್ಳುವ ಉಪಾಯವೇ ಸೈ. ಇಂಥ ಬಾಹ್ಯ ಒತ್ತಡಗಳು ಬಹಳವಾದರೆ ಅರ್ಧ ಕ್ರಾಂತಿಗಳನ್ನು ತರಬಹುದು. ಅರ್ಧ ಕ್ರಾಂತಿಗಳು ಜನತೆಯ ಕಷ್ಟಗಳನ್ನು ನೀಗಿಸದ ದಬ್ಬಾಳಿಕೆಯನ್ನು ಹೆಚ್ಚಿಸುತ್ತವೆ; ಪೂರ್ಣ ಕ್ರಾಂತಿಯಿಂದ ಸಾಧ್ಯವಾಗಬಹುದಾದ, ಪೂರ್ಣ ಕ್ರಾಂತಿಯಲ್ಲಿ ಸಂಭಾವ್ಯವಾದ ಕ್ಷಿಪ್ರ ಬದಲಾವಣೆಯ ಆಸೆಯನ್ನೂ ಕೊಲ್ಲುತ್ತವೆ.

■

# ವಿದ್ಯಾರ್ಥಿಗಳು ಯೋಚಿಸಬೇಕು

## ನಿನ್ನೆಗಳನ್ನು ಮೆಟ್ಟಿನಿಂತು ನಾಳೆಗಳನ್ನು ಎದುರುನೋಡುತ್ತಿರುವವರ ಕುರಿತು...

ಸ್ವತಂತ್ರ ಭಾರತದಲ್ಲಿ ಎದ್ದು ಕಾಣುವ ಒಂದು ಅವಲಕ್ಷಣವೆಂದರೆ ಜನಜಂಗುಳಿ 'ರಸ್ತೆಗಿಳಿ'ಯುವುದು. ಕೆಲವು ಸಲ ತಕ್ಕಮಟ್ಟಿಗೆ ಗಂಭೀರ ಕಾರಣಗಳಿಗಾಗಿ ಮತ್ತು ಹೆಚ್ಚು ಸಲ ಕ್ಷುಲ್ಲಕ ಮತ್ತು ಕಾಲ್ಪನಿಕ ಕಾರಣಗಳಿಗಾಗಿ ಜನರು ರಸ್ತೆಗಿಳಿದು ಗೊಂದಲ ಹಾಕುವುದೂ ರಸ್ತೆ ದೀಪ ಮೊದಲಾದ ಅವಶ್ಯಕ ಸಾರ್ವಜನಿಕ ಸೊತ್ತುಗಳಿಗೆ ನಷ್ಟವನ್ನುಂಟುಮಾಡುವುದೂ ಈಗೀಗ ದಿನನಿತ್ಯದ ಪರಿಪಾಠವಾಗಿದೆ.

ಒಂದು ಕಾಲದಲ್ಲಿ ಧಾಂದಲೆ ಹಾಕುವುದು ಶ್ರಮಿಕ ವರ್ಗದ ವಿಶಿಷ್ಟ ಸ್ವಭಾವವೆಂದು ಪರಿಗಣಿಸಲ್ಪಟ್ಟಿತ್ತು. ಅವರಿಗೊಂದು ನೆವವೂ ಇತ್ತು: 'ಅವರಿಗೆ ಅವರ ಕೋಳಗಳನ್ನು ಮಾತ್ರ ಕಳೆದುಕೊಳ್ಳಲು ಸಾಧ್ಯವಿದೆ'—ಅರ್ಥಾತ್ ಕೆಲಸ ಬಿಟ್ಟು ರಸ್ತೆಗಿಳಿದು ಗೊಂದಲ ಹಾಕುವುದರಿಂದ ಸಮಾಜಕ್ಕೆ ಹಾನಿಯಾಗಬಹುದಾದರೂ ಆ ಸಮಾಜ ಶ್ರಮಿಕವರ್ಗವನ್ನು ದುರ್ಲಕ್ಷಿಸಿದೆಯಾದ್ದರಿಂದ ಆ ವರ್ಗಕ್ಕೆ ಏನೂ ಹಾನಿಯಿಲ್ಲ. ಆದರೆ ಇಂದು ಶ್ರಮಿಕವರ್ಗ ಬೀದಿಗಿಳಿದು ಧಾಂದಲೆ ಹಾಕುವುದು ವಿರಳವಾಗುತ್ತಿದೆ. ಇಂದು ಕೂಡ ಅವರು ಮುಷ್ಕರಾದಿಗಳನ್ನು ಮಾಡುತ್ತಾರಾದರೂ ಒಟ್ಟಿನ ಮೇಲೆ ಅವರು ಶಿಸ್ತಿನಿಂದ ನಡೆದುಕೊಳ್ಳುತ್ತಾರೆ.

ಇಂದು ಗಲಾಟೆ ಮಾಡುತ್ತಿರುವವರು ಹೆಚ್ಚು ಜವಾಬ್ದಾರಿಯುಳ್ಳ ವರ್ಗಗಳಿಂದ ಬಂದ ಜನರು. ಆಂಧ್ರದಲ್ಲಿ ಅನೇಕ ವಾರಗಳ ತನಕ ಸಾಮಾನ್ಯ ಜೀವನವನ್ನು ತಮ್ಮ ಚಳವಳಿಯಿಂದ ಅಸಹನೀಯವಾಗಿ ಮಾಡಿದವರು ಸುಶಿಕ್ಷಿತರಾದ ಸರಕಾರೀ ನೌಕರರು. ಹಾಗೆಯೆ ಜಾತೀಯ ಭಾವನೆಗಳು ಕೆರಳಿಸಲ್ಪಟ್ಟಾಗಿ ನಾನಾ ವರ್ಗಗಳ ಜನಗಳಿಂದ ಕೋಲಾಹಲ ಎಬ್ಬಿಸುತ್ತಾರೆ.

ಆದರೆ ಇಂದು 'ರಸ್ತೆಗಿಳಿಯು'ವುದಕ್ಕೆಂತ ಮುಂದಾಗಿರುವ ಒಂದು ವರ್ಗವಿದೆ ಎಂದಾದರೆ ಕಾಲೇಜು ವಿದ್ಯಾರ್ಥಿಗಳು ಎಂದು ಹೇಳದೆ ವಿಧಿಯಿಲ್ಲ. ಇದಕ್ಕೆ ಪ್ರತಿಯಾಗಿ ಕೆಲವೊಮ್ಮೆ ಅವರವೇ ಕುಂದುಕೊರತೆಗಳು, ದರಗಳ ಏರಿಕೆ ಇತ್ಯಾದಿ; ಕೆಲವೊಮ್ಮೆ ವರ್ಗದಲ್ಲೊಬ್ಬನಿಗಾದ ಅನ್ಯಾಯ—ವಶದಲ್ಲಿರುವಾಗ ವಿದ್ಯಾರ್ಥಿಯ ಮರಣ ಇತ್ಯಾದಿ; ಕೆಲವೊಮ್ಮೆ ವಿದ್ಯಾರ್ಥಿಗಳಿಗೆ ಏನೂ ಸಂಬಂಧವಿಲ್ಲದ ಅಥವಾ ಬಾದರಾಯಣ ಸಂಬಂಧವುಳ್ಳ ವಿಷಯಗಳು.

ಈ ಕೊನೆಯ ವರ್ಗದಲ್ಲಿ ಈಚೆಗೆ ಕರ್ನಾಟಕ ರಾಜ್ಯದಲ್ಲಿ ನಡೆದ ವಿದ್ಯಾರ್ಥಿ ಚಳವಳಿ ಒಂದು. ಇದನ್ನು ಬರೆಯುತ್ತಿರುವಾಗ ಈ ಚಳವಳಿಯ ಫಲವಾಗಿ ಮಂತ್ರಿಮಂಡಲದಲ್ಲಿ ಗಂಭೀರ ಬಿಕ್ಕಟ್ಟು ಉಂಟಾಗಿ ಅದು ಡೋಲಾಯಮಾನವಾಗಿದೆ. ಇದಕ್ಕೆ ಮೂಲ ಕಾರಣವೆಂದರೆ ಹರಿಜನ ಮಂತ್ರಿಗಳೊಬ್ಬರು ಕನ್ನಡ ಸಾಹಿತ್ಯದ ಮಟ್ಟದ ಬಗ್ಗೆ ಆಡಿದರೆಂದು ವರದಿಯಾದ ತುಚ್ಛೀಕಾರದ ಮಾತುಗಳು. ಈ ವರದಿ ಬಂದು ಪತ್ರಿಕೆಗಳಲ್ಲಿ ಅಷ್ಟಿಷ್ಟು ವಿವಾದಗಳಾದ ಮೇಲೆ ಒಮ್ಮೆಲೆ ವಿದ್ಯಾರ್ಥಿಗಳು ಮಂತ್ರಿಗಳ ವಿರುದ್ಧ ಪ್ರತಿಭಟನಾ ರೂಪವಾಗಿ ಚಳವಳಿ ಆರಂಭಿಸಿದರು. ಪ್ರತಿಯೊಂದು ವಿದ್ಯಾರ್ಥಿ ಚಳವಳಿಯ ಹಾಗೆ ಇದೂ ಅಲ್ಲಲ್ಲಿ ಮಾರಾಮಾರಿ, ಪೋಲೀಸರೊಡನೆ ದ್ವಂದ್ವ, ಸಾರ್ವಜನಿಕ ಆಸ್ತಿಯ ಹಾನಿ ಮತ್ತು ಬಂಧನಗಳಲ್ಲಿ ಪರ್ಯವಸಾನ ಹೊಂದಿತು. ಸಂಬಂಧಪಟ್ಟ ಮಂತ್ರಿಗಳು ತಾವು ಇಡೀ ಕನ್ನಡ ಸಾಹಿತ್ಯವನ್ನು ದೂಷಿಸಿಲ್ಲ; ಕೆಲ ಅಗ್ಗದ ಟೊಳ್ಳು ಕೃತಿಗಳನ್ನಷ್ಟೇ ಆಕ್ಷೇಪಿಸಿದ್ದೆವು ಎಂದು ವಿವರಣೆ ಕೊಟ್ಟರೂ ಚಳವಳಿ ಶಾಂತವಾಗಲಿಲ್ಲ.

ನಮ್ಮ ವಿದ್ಯಾರ್ಥಿಗಳ ಕನ್ನಡಾಭಿಮಾನ ಪ್ರಶಂಸಾರ್ಹವಾದದ್ದೇ. ಆದರೆ ಮಾನ್ಯ ಮಂತ್ರಿಗಳ ಅನುದಾರ ಹೇಳಿಕೆಯಿಂದ ಅವಮಾನಿತರಾದವರು ಯಾರಾದರೂ ಇದ್ದರೆ ಅದು ಕನ್ನಡ ಸಾಹಿತಿಗಳು ಈ ವರ್ಗ ಮಂತ್ರಿಗಳ ಹೇಳಿಕೆಗೆ ಅಂಥಾ ಉಗ್ರ ಪ್ರತಿಭಟನೆ ವ್ಯಕ್ತಪಡಿಸಿಲ್ಲ. ಪ್ರಕಟಿಸಲ್ಪಟ್ಟ ಹತ್ತಾರು ಸಾಹಿತಿಗಳ ಅಭಿಪ್ರಾಯಗಳು ಏಕಮುಖವಾಗಿಲ್ಲ. ಸ್ವತಂತ್ರ ಚಿಂತನೆಯ ಗಂಭೀರ ಸಾಹಿತ್ಯ ಕನ್ನಡದಲ್ಲಿ ಸಾಕಷ್ಟು ಬಂದಿಲ್ಲ ಎಂಬುದನ್ನು ಸಕಾರಣವಾಗಿ ಅಲ್ಲಗಳೆಯುವುದು ಕಷ್ಟವೇ. ಅದು ಹೇಗಿದ್ದರೂ ವಿದ್ಯಾರ್ಥಿಗಳು ಮಾತ್ರವೇ ಕನ್ನಡ ಸಾಹಿತ್ಯದ ರಕ್ಷಣೆಗೆ ತೋಳೇರಿಸಬೇಕಾಗಿದ್ದು ಏನು ಬಂತು? ತಮ್ಮ ಅಮೂಲ್ಯವಾದ ಅಭ್ಯಾಸವನ್ನು ಬದಿಗಿಟ್ಟು ಈ ಚಳವಳಿಯನ್ನು ಹೂಡಲು ಬೇಕಾದಷ್ಟು ಗಂಭೀರವಾದ ಅಪಾಯ ಕನ್ನಡ ಸಾಹಿತ್ಯಕ್ಕೆ ಬಂದಿತ್ತೆ? ಇದನ್ನು ವಿದ್ಯಾರ್ಥಿಗಳಾಗಲಿ (ಮಂತ್ರಿಗಳಿಗೆ ಪ್ರತಿಕೂಲ ಮತ್ತು ಅನುಕೂಲ ಎರಡೂ ಚಳವಳಿಗಳಲ್ಲಿ ನಿರತರಾದ ವಿದ್ಯಾರ್ಥಿಗಳು), ಅವರ ಪಾಲಕರಾಗಲಿ, ಅವರಿಗೆ ಶಹಬಾಸ್ ಕೊಡುವ ರಾಜಕಾರಣಿಗಳಾಗಲಿ ಯೋಚಿಸಿದ್ದಾರೆಯೆ?

ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತ ನಡೆಯುತ್ತಿರುವ ಸಂಗತಿಗಳತ್ತ ಕಣ್ಣು, ಕಿವಿ, ಮೂಗು ಮುಚ್ಚಿಕೊಂಡು ತಮ್ಮ ಪುಸ್ತಕಗಳ ರಾಶಿಯಲ್ಲಿ ಹುದುಗಿರಬೇಕೆಂಬ ಮೌಢ್ಯದ ಉಪದೇಶ ಕೊಡುವುದು ಈ ಲೇಖನದ ಉದ್ದೇಶವಲ್ಲ. ಇಂದಿನ ಜನಾಂಗ ಅವರಿಗಾಗಿ ಯಾವ ತರದ ನಾಳೆಯನ್ನು ರೂಪಿಸುತ್ತಿದೆ—ಆ ನಾಳೆಯ ಲೋಕ ಬದುಕಲರ್ಹವಾದದ್ದೋ ಎಂದು ನೋಡುವುದೂ ಯೋಚಿಸುವುದೂ ವಿದ್ಯಾರ್ಥಿಗಳ ಕರ್ತವ್ಯಗಳಲ್ಲಿ ಒಂದು. ಏಕೆಂದರೆ ಇಂದಿನವರು ರೂಪಿಸಿಟ್ಟ ಲೋಕದಲ್ಲಿ ನಾಳೆ ಬದುಕಬೇಕಾದವರು ಅವರು.

'ಯೋಚಿಸುವುದು'—ಎಂದೆ ಆದರೆ ವಿದ್ಯಾರ್ಥಿಗಳು ಯೋಚಿಸುವ ಹಾಗೆ ಕಾಣುವುದಿಲ್ಲ. (ಯೋಚಿಸುವುದನ್ನು ಕಲಿಸುವುದಕ್ಕೆ ನಮ್ಮ ವಿದ್ಯಾಸಂಸ್ಥೆಗಳು ಪ್ರಯತ್ನಿಸುತ್ತಲೂ

ಇಲ್ಲ. ವಿದ್ಯಾರ್ಥಿಗಳು ನಿಜವಾಗಿ ಯೋಚಿಸಲು ಕಲಿತರೆ ತಮಗೆ ಕಷ್ಟ ಬಂದೀತೆಂದು ಅವು 'ಯೋಚಿಸು'ವ ಹಾಗೆ ಕಾಣುತ್ತದೆ) ತಾವು ಕೈಕೊಳ್ಳುವ ಚಳವಳಿಗಳು ಎಷ್ಟು ಅಗತ್ಯ, ಅವುಗಳಲ್ಲಿ ಪ್ರತಿಯೊಂದರಲ್ಲಿ ಅಡಕವಾದ ಮೂಲ ಪ್ರಶ್ನೆಗಳೇನು? ಅವುಗಳಲ್ಲಿ ಮಹತ್ವದ ತಾರತಮ್ಯವೇನು—ಇವೆಲ್ಲ ಅವರು ಯೋಚಿಸಬೇಕಾದ ವಿಷಯಗಳು.

ಈಗ ನಾವು ವಿವೇಚನೆಗೆ ತೆಗೆದುಕೊಂಡ ಚಳವಳಿಯನ್ನೇ ನೋಡೋಣ. ಕನ್ನಡ ಸಾಹಿತ್ಯದ ಬಗ್ಗೆ ಮಂತ್ರಿಗಳು ತಪ್ಪಿ ಆಡಿದರೆಂದಿಟ್ಟುಕೊಳ್ಳೋಣ. ವಿದ್ಯಾರ್ಥಿಗಳು ಇದನ್ನು ಪ್ರತಿಭಟಿಸಿ ಪ್ರತಿಯೊಂದು ಕಾಲೇಜಿನಲ್ಲಿ ಸಭೆಗಳನ್ನು ಜರುಗಿಸಿ ನಿರ್ಣಯಗಳನ್ನು ಸ್ವೀಕರಿಸಿ ಮುಖ್ಯ ಮಂತ್ರಿಗಳಿಗೆ ಕಳಿಸಿದ್ದರೆ ಸಾಲುತ್ತಿರಲಿಲ್ಲವೆ? ಇವುಗಳಲ್ಲಿ ತಮಗೆ ಪಾಠ ಹೇಳುವವರನ್ನೂ ಸೇರಿಸಿಕೊಳ್ಳಬಹುದಾಗಿತ್ತು. ಕನ್ನಡದ ಬಗ್ಗೆ ತಾವೆಷ್ಟು 'ಕಮಿಟೆಡ್' ಆಗಿದ್ದೇವೆ ಎಂಬುದನ್ನು ತೋರಿಸಲು ಇದು ಮುಷ್ಕರಕ್ಕಿಂತ ಉತ್ತಮ ಮಾರ್ಗವಾಗಬಹುದಿತ್ತು. ಹೀಗೆ ಮಾಡಿದ್ದರೆ ಪಾಠ ಪ್ರವಚನಗಳನ್ನು ಕಳೆದುಕೊಳ್ಳುವ ಅಗತ್ಯವೂ ಇರಲಿಲ್ಲ.

ಕನ್ನಡವನ್ನು ರಾಜ್ಯಭಾಷೆಯಾಗಿ ಸ್ವೀಕರಿಸಿದ ಈ ಸಂದರ್ಭ ಹೊಸತರಲ್ಲಿ ಮಂತ್ರಿಗಳಲ್ಲೇ ಒಬ್ಬರು ಅದರ ಬಗ್ಗೆ ಅಸಾಧು ಮಾತುಗಳನ್ನ ಆಡಬಾರದಿತ್ತೆಂಬ ವಾದದಲ್ಲಿ ವಾಸ್ತವತೆ ಇದೆ. ಆದರೆ ಸರಕಾರದ ಸ್ವೀಕೃತ ಧೋರಣೆಗಳ ಬಗ್ಗೆ ವಿವಾದಾಸ್ಪದವಾಗಿ ಮಾತಾಡಿದವರಲ್ಲಿ ಇವರು ಏಕಮಾತ್ರ ಮಂತ್ರಿಯಲ್ಲ. ಈ ದೇಶದಲ್ಲಿ ಹೆಚ್ಚು ಕಡಿಮೆ ಪ್ರತಿಯೊಬ್ಬ ಮಂತ್ರಿಯೂ ಹೊತ್ತಲ್ಲದ ಹೊತ್ತಿನಲ್ಲಿ ಅರ್ಥವಿಲ್ಲದ ಮಾತುಗಳನ್ನು ಆಡುತ್ತಲೇ ಇರುತ್ತಾನೆ. ಇಂಥವುಗಳನ್ನೆಲ್ಲ ಪ್ರತಿಭಟಿಸಿ ಮಂತ್ರಿಗಳು ತಮ್ಮ ಮಾತುಗಳನ್ನು ಹದ್ದುಬಂದಿಯಲ್ಲಿಟ್ಟುಕೊಳ್ಳಬೇಕೆಂದು ಕದಾಚಿತ್ ರಾಜಕೀಯದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳು ಚಳವಳಿ ಹೂಡಿದರೆ ಒಂದು ವೇಳೆ ತಪ್ಪಾಗಲಿಕ್ಕಿಲ್ಲ. ಅಷ್ಟೇಕೆ, ಇದೇ ಮಂತ್ರಿಗಳು ಹತ್ತು ವರ್ಷಕಾಲ ಅಹಿಂಸೆಗೆ ರಜಾ ಕೊಡಬೇಕೆಂದು ಹೇಳಿದ್ದಾಗಿ ಹಿಂದೆ ವರದಿಯಾಗಿತ್ತು. ಅದು ಗಂಭೀರವಾದ ಅವಿಚಾರದ ಮಾತಾಗಿರಲಿಲ್ಲವೆ? ಆಗ ಹೊತ್ತದ ಉರಿ ಈಗೇಕೆ ಹೊತ್ತಿತು?

ಈ ದೇಶದಲ್ಲಿ ಪ್ರಜಾಸತ್ತೆಗೆ ಘಾತಕವಾದ ಎಷ್ಟೋ ಸಂಗತಿಗಳು ಒಳಗೊಳಗೆ ಅಥವಾ ಹೆಚ್ಚು ಕಡಿಮೆ ಬಹಿರಂಗವಾಗಿ ನಡೆಯುತ್ತಿರುತ್ತವೆ. ವಿಶ್ವವಿದ್ಯಾನಿಲಯಗಳಿಂದಾರಂಭಿಸಿ ಸರಕಾರದವರೆಗೆ ಎಲ್ಲ ಕಡೆ ವ್ಯಕ್ತಿಸ್ವಾತಂತ್ರ್ಯವನ್ನೂ ವಾಕ್‌ಸ್ವಾತಂತ್ರ್ಯವನ್ನೂ ಅಪಹರಿಸುವುದಲ್ಲದೆ ಸ್ವತಂತ್ರ ವಿಚಾರದ ಜನರನ್ನು ನಾನಾ ಕಿರುಕುಳಗಳಿಗೊಳಪಡಿಸುವುದನ್ನು ವಿದ್ಯಾರ್ಥಿಗಳು ಗಮನಿಸುತ್ತಿರುತ್ತಾರೆ. ಇಂಥ ವಿಷಯಗಳಲ್ಲಿ ಅವರು ಎಷ್ಟು ತೀವ್ರಾಸಕ್ತಿ ಹೊಂದಿದ್ದಾರೆ? ಒಬ್ಬ ಉಪನ್ಯಾಸಕರು ತಮ್ಮ ಮೇಲಧಿಕಾರಿಗಳ ಅಭಿಪ್ರಾಯಗಳಿಗಿಂತ ಭಿನ್ನವಾದ ಅಭಿಪ್ರಾಯಗಳನ್ನು—ವೈಯಕ್ತಿಕ ಅಲ್ಲ , ವಿಶಿಷ್ಟ ವಿದ್ಯಾವಿಷಯಕ—ಪ್ರಕಟಿಸಿದರೂ ಅವರಿಗೆ ಕಿರುಕುಳ ಆರಂಭವಾಗುವುದುಂಟು. ಇಂಥವು ವಿದ್ಯಾರ್ಥಿಗಳ ಪ್ರತಿಭಟನೆಗೆ ತಕ್ಕ ವಿಷಯಗಳಲ್ಲವೆ?

ಕಾಲೇಜುಗಳಲ್ಲಿ ಸರಿಯಾಗಿ ಪಾಠ ಹೇಳದೇ ಬೇರೆ ಕೆಲಸ ಮಾಡುವ ಪ್ರಾಧ್ಯಾಪಕರು ಇದ್ದಾರೆ. ವಿದ್ಯಾರ್ಥಿಗಳು ಎತ್ತಿದ ಸಂಶಯಗಳಿಗೆ ಉತ್ತರ ಕೊಡುವ ಬದಲು ಉರಿದೇಳುವ ಗುರುಗಳಿದ್ದಾರೆ. ಪರೀಕ್ಷೆಗಳ ಪರಿಣಾಮಗಳನ್ನು 'ರಿಗ್' ಮಾಡುವ ಅಧಿಕಾರಿಗಳಿದ್ದಾರೆ, ತಮ್ಮ ಮೂಗಿನ ಕೆಳಗೇ ನಡೆಯುವ ಇಂಥ ಉದಾಹರಣೆಗಳ ಬಗ್ಗೆ ವಿದ್ಯಾರ್ಥಿಗಳು ಸಾಮೂಹಿಕವಾಗಿ ಪ್ರತಿಭಟನೆ ಬೇಡ, ಪ್ರತಿಕ್ರಿಯೆ ವ್ಯಕ್ತಪಡಿಸಿದರೂ ತಂತಾನೇ ಸುಧಾರಣೆ ಗಳಾಗಬಹುದು. ಈ ವಿಷಯಗಳು ನೇರವಾಗಿ ಅವರ ಭವಿಷ್ಯಕ್ಕೇ ಸಂಬಂಧಿಸಿದವುಗಳಾಗಿರು ವುದರಿಂದ ಅವರು ಹೆಚ್ಚು ಆಸಕ್ತಿ ವಹಿಸಬೇಕಾಗಿತ್ತು. ಹಾಗಾಗುತ್ತಿಲ್ಲವೆನ್ನುವುದು ದುಃಖದ ಸಂಗತಿ.

ಇಂಥ ಆಂದೋಲನಗಳ ಒಂದು ಪರಿಣಾಮವೆಂದರೆ ಅನೇಕ ಸಲ ವಾರ್ಷಿಕ ಪರೀಕ್ಷೆಗಳು ಮುಂದೆ ಬೀಳುವುದು (ಅವುಗಳನ್ನು ಮುಂದೂಡುವ ಉದ್ದೇಶದಿಂದಲೇ ಚಳವಳಿ ನಡೆದದ್ದೂ ಇದೆ); ಆದರಿಂದ ಪರೀಕ್ಷೆಗಳ ಫಲಿತಾಂಶಗಳು ಇನ್ನೂ ಮುಂದೆ ಬೀಳುವುದು ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಿ ನಿಜಜೀವನದಲ್ಲಿ ಕಾಲಿಡಬೇಕೆಂಬ ಅನೇಕರು ಇದರ ಪರಿಣಾಮವಾಗಿ ಅನ್ಯಾಯವಾಗಿ ಇಡೀ ವರ್ಷವನ್ನೇ ಕಳೆದುಕೊಳ್ಳಬೇಕಾದ ಉದಾಹರಣೆಗಳೂ ಇವೆ.

ಕೆಲ ಕಾಲ ಹಿಂದೆ ಮುಂಬಯಿಯ ಕಾಮರ್ಸ್ ವಿದ್ಯಾರ್ಥಿಗಳು ಒಂದು ಚಳವಳಿ ಹೂಡಿದರು. ಕಾಮರ್ಸ್ ಪಾಠಕ್ರಮದಲ್ಲಿ ಬದಲಾವಣೆಯಾಗಬೇಕು; ಅದು ತೀರ ಪುಸ್ತಕೀ ಶಿಕ್ಷಣವಾಗುತ್ತಿದ್ದು ಅದನ್ನು ಮುಗಿಸಿ ಹೊರಬಂದ ಮೇಲೆ ವ್ಯವಸಾಯಕ್ಕಿಳಿದಾಗ ಏನೂ ಫಲವಾಗುವುದಿಲ್ಲ; ಪಾಠಕ್ರಮದಲ್ಲಿ ಹೆಚ್ಚು ಪ್ರಾಕ್ಟಿಕಲ್ ತರಬೇತಿ ಬೇಕು; ಮೂರು ವರ್ಷಗಳ ಕಾಮರ್ಸ್ ಅಧ್ಯಯನದಲ್ಲಿ ಒಮ್ಮೆ ಕೂಡ ಒಂದು ಬ್ಯಾಂಕಿನಲ್ಲೋ ವ್ಯಾಪಾರಿ ಸಂಸ್ಥೆಯಲ್ಲೋ ನಡೆಯುವ ಕೆಲಸದ ಮಾದರಿಗಳನ್ನು ಪ್ರತ್ಯಕ್ಷವಾಗಿ ತೋರಿಸಿ ಅನುಭವ ದೊರಕಿಸಿಕೊಡುವ ವ್ಯವಸ್ಥೆ ಪಾಠಕ್ರಮದಲ್ಲಿಲ್ಲ; ಇದನ್ನು ಬದಲಿಸಬೇಕು—ಎಂದು. ವಿಶ್ವವಿದ್ಯಾಲಯಕ್ಕೆ ಈ ಬಗ್ಗೆ ಮಾಡಿಕೊಂಡ ಮನವಿಗಳು ಬೋರ್ಗಲ್ಲ ಮೇಲೆ ಹುಯ್ದ ಮಳೆಯಾದ್ದರಿಂದ ನಾವು ಪ್ರತ್ಯಕ್ಷ ಚಳವಳಿ ಆರಂಭಿಸಿದ್ದೇವೆ—ಎಂದು ಮುಂಬಯಿ ವಿದ್ಯಾರ್ಥಿಗಳು ಸಾರಿದರು. ಇಂಥ ವಿಚಾರಯುಕ್ತ ಆಂದೋಲನಗಳು ಇನ್ನೂ ಹೆಚ್ಚಾಗಬೇಕು.

ಪ್ರಸ್ತುತ ಆಂದೋಲನದಿಂದ ಉದ್ಭವಿಸುವ ಎರಡು ಮಹತ್ವದ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ಆಳವಾಗಿ ಯೋಚಿಸಬೇಕು, ಇದು. ಬಹುಶಃ ಮೊದಲ ಬಾರಿ ವಿದ್ಯಾರ್ಥಿ ವರ್ಗದಲ್ಲಿ ಎರಡು ಖಂಡಗಳನ್ನುಂಟುಮಾಡಿದೆ. ಕನ್ನಡ ಸಾಹಿತ್ಯವನ್ನು ತೆಗಳಿದರೆಂಬ ಮಂತ್ರಿಗಳು ಹರಿಜನ ವರ್ಗದವರಾಗಿದ್ದು ಅವರು ಹರಿಜನರನ್ನು ಜಾಗೃತಗೊಳಿಸಲು ಯತ್ನಿಸುತ್ತಿದ್ದಾರೆನ್ನುವುದಕ್ಕಾಗಿಯೇ ಸಾಹಿತ್ಯದ ಹೆಸರಲ್ಲಿ ಈ ಆಂದೋಲನ ಎದ್ದಿದೆ ಎಂದು ಅರ್ಥ ಹಚ್ಚಲಾಗಿದೆ. ಮಂತ್ರಿಗಳಾರೂ ನಿಯತ್ತಿನಲ್ಲಿ ಆಡುವುದಿಲ್ಲ ಎಂಬ ತಥ್ಯ ನಮ್ಮ ಮುಂದಿರುವಾಗ ಈ ಮಂತ್ರಿಗಳ ಹೇಳಿಕೆಯ ಬಗ್ಗೆಯೇ—ಅದೂ ಅಕಾಲದಲ್ಲಿ—ಈ

ಕೋಲಾಹಲವೆದ್ದಿರುವುದರಿಂದ ಈ ಅಪಾರ್ಥಕ್ಕೆ ಆಸ್ಪದವುಂಟಾಗಿದೆಯೆಂಬುದನ್ನು ನಿರಾಕರಿಸಲಾಗದು. ವಿದ್ಯಾರ್ಥಿ ಸಮಾಜದಲ್ಲಿ ಹರಿಜನೇತರ ಮತ್ತು ಹರಿಜನ ಎಂಬ ಎರಡು ಪರಸ್ಪರ ವಿರೋಧಿ ವರ್ಗಗಳಾಗಿ ಹೋರಾಟವಾಗುವುದು ಇಂದು ಅಪೇಕ್ಷಣೀಯವೆ? ಆದರಿಂದ ಕೊನೆಯಲ್ಲಿ ಪ್ರತಿ ಹಳ್ಳಿ-ಪಟ್ಟಣದಲ್ಲಿ ಒಂದು ತರಹದ ಯಾದವಿಕಲಹದ ಸ್ಥಿತಿ ಉದ್ಭವಿಸಲಾರದೆ? ದೇಶದಲ್ಲಿ ಸುಮಾರು ಐದರಲ್ಲೊಂದಂಶ ಹರಿಜನ-ಗಿರಿಜನರಿದ್ದು ಅವರು ಹೆಚ್ಚುಕಮ್ಮಿ ಇಡೀ ದೇಶದಲ್ಲಿ ಸಮನಾಗಿ ಹಂಚಿಹೋಗಿದ್ದಾರೆ. ರಾಜಕಾರಣಿಗಳು ತಮ್ಮ ಇಂದಿನ ಕಾರ್ಯಸಾಧಕತೆಯಲ್ಲಿ ಇದನ್ನೆಲ್ಲ ಅವಗಣಿಸಬಹುದು. ಆದರೆ ಶಾಶ್ವತ ಮೌಲ್ಯಗಳನ್ನು ಮುಂದಿಟ್ಟುಕೊಳ್ಳಬೇಕಾದ ವಿದ್ಯಾರ್ಥಿಗಳು ಈ ಪರಿಸ್ಥಿತಿಗೆ ನೆರವಾಗುವುದು ಸೂಕ್ತವೆ?

ಎರಡನೆಯದು ವಾಕ್‌ಸ್ವಾತಂತ್ರ್ಯದ ಪ್ರಶ್ನೆ. ಕನ್ನಡ ಸಾಹಿತ್ಯ ಅಮೂಲ್ಯವೇ ಆಗಿರಬಹುದು. ಒಬ್ಬ ಅಧಿಕಾರಸ್ಥಾನದಲ್ಲಿರುವ ವ್ಯಕ್ತಿ ಅದನ್ನು ಅನ್ಯಾಯವಾಗಿಯೆ ಬೂಸಾ ಎಂದು ಕರೆದಿರಬಹುದು. ಆ ಮಾತು ಎಲ್ಲರಿಗೂ ಅಪಥ್ಯವೇ ಆಗಿರಬಹುದು. ಆದರೆ ಆ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ ವ್ಯಕ್ತಿಯನ್ನು ಚಳವಳಿ ಮೂಲಕ ಬೇಟೆಯಾಡುವುದು ಪ್ರಜಾಸತ್ತೆಯಾಗದು. ಒಮ್ಮೆ ಜನಪ್ರಿಯವಲ್ಲದ ಅಭಿಪ್ರಾಯವನ್ನು ಸಾಮೂಹಿಕ ಚಳವಳಿಯ ಮೂಲಕ ಬೆದರಿಸುವ ಪರಂಪರೆ ಪ್ರಾರಂಭವಾದರೆ ನಾಳೆ ಯಾವುದೊಂದು ಸ್ವತಂತ್ರ ಅಭಿಪ್ರಾಯವನ್ನು ಯಾರೂ ಬಾಯಿ ಬಿಟ್ಟು ಹೇಳುವುದೇ ಅಸಾಧ್ಯವಾಗಿಬಿಡಬಹುದು. ಈಗಾಗಲೆ ಧರ್ಮ, ಜಾತಿಗಳ ಬಗ್ಗೆ ಐತಿಹಾಸಿಕವಾಗಿ ಕೂಡ ವಾಸ್ತವಾಂಶಗಳನ್ನು ಆಡುವುದು ಕಷ್ಟವಾಗಿದೆ. ಸಾಹಿತ್ಯದಲ್ಲಿಯೂ 'ಸಾರ್ವಜನಿಕ ಚಳವಳಿ ಮೂಲಕ ವಿಮರ್ಶೆ'ಯ ಸಂಪ್ರದಾಯವನ್ನು ನಾವು ತರಬೇಕೆ? ಇಂದು ಸಾಹಿತ್ಯದ ಬಗ್ಗೆ ಒಟ್ಟಾಗಿ ಹೇಳಿದ್ದು ಅಪರಾಧವೆಂದು ಪರಿಗಣಿಸಲ್ಪಟ್ಟರೆ ನಾಳೆ ಒಬ್ಬ ವಿಶಿಷ್ಟ ಕವಿಯ ಬಗ್ಗೆ ಪ್ರಾಮಾಣಿಕವಾಗಿ ಅನಿಸಿದ್ದನ್ನು ಹೇಳುವುದು ಅಪರಾಧವಾಗಲಿಕ್ಕಿಲ್ಲವೆ? ಸಾಹಿತ್ಯ ಮತ್ತು ವಿಜ್ಞಾನ ಮುಕ್ತ ವಿಮರ್ಶೆಯ (ಅದು ಅವಿವೇಕದ್ದಾದರೂ) ವಾತಾವರಣದಲ್ಲಿ ಬೆಳೆಯತಕ್ಕವುಗಳಲ್ಲವೆ? ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯವನ್ನು ಜರೆದ ಮಂತ್ರಿಗಳನ್ನು ಯಾವುದಾದರೂ ಕಾಲೇಜಿಗೆ ಕರೆದು ಅವರಿಂದ ಕನ್ನಡ ಸಾಹಿತ್ಯದಲ್ಲಿ ಬೂಸಾ ತುಂಬಿದೆಯೆಂಬ ಮಾತನ್ನು ಸಾಹಿತ್ಯದ ವಿದ್ಯಾರ್ಥಿಗಳ ಮುಂದೆ ಪ್ರಮಾಣಿಸಿ ತೋರಿಸಲು ಕೇಳಿಕೊಳ್ಳಬಹುದಿತ್ತಲ್ಲವೆ?

ಮಂತ್ರಿಗಳು ಅತಿಯಾಗಿ ಮಾತಾಡುತ್ತಾರೆ—ಎಂದು ನಾವು ಇಂಥ ಕೆಲವು ಸಂದರ್ಭಗಳು ಬಂದಾಗ ಮನಗಾಣುತ್ತೇವೆ. ಆದರೆ ಅದಕ್ಕೆ ಕಾರಣರು ಯಾರು? ವಿದ್ವಾಂಸರು, ವಿಜ್ಞಾನಿಗಳು, ಸಾಹಿತಿಗಳು, ವಿದ್ಯಾರ್ಥಿಗಳು ಎಲ್ಲರೂ ಮಂತ್ರಿಗಳನ್ನು ತಮ್ಮ ಸಭೆ ಪರಿಷತ್ತುಗಳಿಗೆ ಆಮಂತ್ರಿಸಿ ಅವರಿಂದ ಶಹಬಾಶನ್ನೋ ನಾಳೆಗಾಗಿ ಪಥ್ಯವನ್ನೋ ಅಪೇಕ್ಷಿಸುವುದು ನಮ್ಮಲ್ಲಿ ನಿತ್ಯದ ದೃಶ್ಯವಾಗಿದೆ. ಆಯಾ ಮಹನೀಯರಿಗೆ ತಮ್ಮ ಪರಿಷತ್ತುಗಳಲ್ಲಿ ಮಾತಾಡಲು ಎಷ್ಟು ಅಧಿಕಾರಸಂಪತ್ತಿದೆಯೆಂದು ನಾವು ಯೋಚಿಸುತ್ತೇವೆಯೆ?

ಅವರಿಗಿರುವ ಸರಕಾರಿ ಅಧಿಕಾರ ಸಂಪತ್ತೇ ಸಾಕೆಂದು ನಾವು ಎಣಿಸುವಾಗ ಆಗೊಮ್ಮೆ ಈಗೊಮ್ಮೆ ಅವರು ಕಿವಿ ಹಿಂಡಿದರೆ ನಾವೇಕೆ ಕೆರಳಬೇಕು?

ಇನ್ನೊಂದು ವಿಚಾರ ಸ್ವಾರ್ಥಿಗಳಾದ ರಾಜಕಾರಣಿಗಳೋ ಮತ್ತಾರೋ ವಿದ್ಯಾರ್ಥಿಗಳನ್ನು ಪ್ರಚೋದಿಸಿ ತಮ್ಮ ಉದ್ದೇಶ ಸಾಧನೆಗಾಗಿ ಬಳಸುತ್ತಾರೆಂಬ ಮಾತೂ ಕೇಳಿಬರುತ್ತಿದೆ. ಹೀಗೆ ಹೇಳುವುದರಿಂದ ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿಯರಿಯದ ಹಸುಳೆಗಳು ಎಂದು ಭಾವಿಸಿದಂತಾಗಲಿಕ್ಕಿಲ್ಲವೆ? ಕನಿಷ್ಠ ಕಾಲೇಜು ವಿದ್ಯಾರ್ಥಿಗಳಂತೂ ತಮ್ಮ ಹೊಣೆಯರಿಯುವ ಪ್ರಾಯಕ್ಕೆ ಬಂದವರೇ ಆಗಿರುತ್ತಾರೆಂದು ನಿರೀಕ್ಷಿಸಬಹುದು. ಹೆಚ್ಚೆಂದರೆ ಯಾವುದೋ ಅಸ್ಪಷ್ಟ ಆದರ್ಶದಿಂದ ಉದ್ದೀಪ್ತರಾದ ಅವರು ಸಾಕಷ್ಟು ದೂರಾಲೋಚನೆಯಿಲ್ಲದೆ ಇಂಥ ಕಾರ್ಯಕ್ಕಿಳಿಯಬಹುದು.

ವಿದ್ಯಾರ್ಥಿ ಆಂದೋಲನಗಳ ವಿಷಯದಲ್ಲಿ ಮತ್ತೊಂದು ಎಚ್ಚರಿಕೆಯ ಮಾತನ್ನು ನಾವು ಹೇಳಬೇಕು. ಮೇಲಿಂದ ಮೇಲೆ ಇಂಥ ಆಂದೋಲನಗಳೆದ್ದು ಸಾವಿರಗಟ್ಟಳೆ ವಿದ್ಯಾರ್ಥಿಗಳು 'ಬೀದಿಗಿಳಿಯು'ತ್ತಿದ್ದರೆ ಕಾನೂನು ಸುವ್ಯವಸ್ಥೆಗಳು ಪ್ರಥಮ ಜವಾಬ್ದಾರಿಯಾದ ಸರಕಾರ—ಅದು ಯಾವುದೇ ಪಕ್ಷದ್ದಿರಲಿ—ಪೋಲೀಸರನ್ನು ಹೆಚ್ಚು ಹೆಚ್ಚು ಅವಲಂಬಿಸ ಬೇಕಾಗುತ್ತದೆ. ಈ ಅವಲಂಬನೆ ಹೆಚ್ಚಿದಷ್ಟೂ ಪೋಲೀಸ್ ದಳಗಳನ್ನು ಹಿಡಿತದಲ್ಲಿಟ್ಟು ಕೊಳ್ಳುವುದು ಸರಕಾರಕ್ಕೆ ಕಷ್ಟವಾಗುತ್ತದೆ. ಪೋಲೀಸರು ಮಾಡಬಹುದಾದ ದಬ್ಬಾಳಿಕೆಗಳನ್ನು ಸರಕಾರ ಸಹಿಸಿಕೊಳ್ಳಬೇಕಾಗುತ್ತದೆ. ಬೀದಿಗಿಳಿಯುವ ಆಂದೋಲನಗಳು ಕಾಲಾಂತರದಲ್ಲಿ ಪೋಲೀಸು ಆಳಿಕೆಯಲ್ಲಿ ಪರ್ಯವಸಾನ ಹೊಂದದೆ ಬಿಡವು. ಇದರ ಲಕ್ಷಣಗಳು ಈಗಾಗಲೆ ಕಾಣಿಸತೊಡಗಿವೆ. ಬೀದಿಗಿಳಿಯುವ ಆಂದೋಲನ ನಿತ್ಯ ವ್ಯವಹಾರವಾಗದೆ ಅಪರೂಪವಾಗಿ ಪ್ರಯೋಗಿಸುವ ಆಯುಧವಾದರೆ ಸರಕಾರಗಳು ಅದಕ್ಕೆ ಹೆದರಬಹುದಷ್ಟೆ.

■

# ನಮ್ಮ ಮಕ್ಕಳನ್ನು ನಾವು ಹೀಗೆ ಬಿಡಬೇಕೆ?

**ದೇ**ಶದ ತುಂಬೆಲ್ಲ ಕೋಲಾಹಲ. ಬೀದಿ ಬಲ್ಬುಗಳು ಒಡೆದವು, ಬಸ್ಸುಗಳು ಅಗ್ನಿಗಾಹುತಿಯಾದವು, ರೈಲುಗಳನ್ನು ತಡೆ ಹಿಡಿದರು, ರೈಲು ಡಬ್ಬಿಗಳನ್ನು ಸುಟ್ಟರು, ಪೋಲೀಸರನ್ನು ಸುತ್ತುಗಟ್ಟಿದರು, ವಿಶ್ವವಿದ್ಯಾಲಯ ಆವಾರಗಳನ್ನು ಗಲಭೆಯ ಕ್ಷೇತ್ರಗಳನ್ನಾಗಿ ಮಾಡಿದರು, ರಾಜ್ಯಘಟನೆಯನ್ನು ಅವಮಾನಿಸಿದರು, ರಾಷ್ಟ್ರಧ್ವಜಕ್ಕೆ ಬೆಂಕಿ ಹಚ್ಚಿದರು.

ಯಾರು ಇವುಗಳನ್ನೆಲ್ಲ ಮಾಡುವವರು? ಜೈಲುಗಳಿಂದ ತಪ್ಪಿಸಿಕೊಂಡು ಬಂದ ಕ್ರಿಮಿನಲ್ ಕೈದಿಗಳಲ್ಲ. ಕೊಳಚೆ ಪ್ರದೇಶದಲ್ಲಿ ವಾಸಿಸುವ ಸಮಾಜದ್ರೋಹಿ ಘಟಿಂಗರಲ್ಲ. ವಿದ್ಯಾರ್ಥಿಗಳು ಎಂದು ಹೇಳಿಸಿಕೊಳ್ಳುವವರು. ನಮ್ಮ ರಾಜ್ಯದಲ್ಲಿ ಒಂದು ಚಳವಳಿಯಲ್ಲಿ ಎಂಟು ಹತ್ತು ವರ್ಷದ ಹುಡುಗರು ಬೀದಿಗಳಲ್ಲಿ ಕಲೆತು ಗೊಂದಲ ಹಾಕಿದರು. ಕೊಡಗಿನಲ್ಲಿ ಎನ್.ಸಿ.ಸಿ. ಹುಡುಗರು ರಾಷ್ಟ್ರಧ್ವಜವನ್ನು ವಂದಿಸಲು ನಿರಾಕರಿಸಿದರು. ಮದ್ರಾಸ್ ರಾಜ್ಯದಲ್ಲಿ ವಿದ್ಯಾರ್ಥಿಗಳು ಕೇಂದ್ರಮಂತ್ರಿಗಳನ್ನು ಗಾಯಗೊಳಿಸಿದರು. ಉತ್ತರ ಪ್ರದೇಶ, ಬಂಗಾಲ, ಆಂಧ್ರ, ಮದ್ರಾಸ್, ಮೈಸೂರು ಎಲ್ಲಿ ನೋಡಿದರಲ್ಲಿ ವಿದ್ಯಾರ್ಥಿ ಪುಂಡರು ಇಚ್ಛಾನುಸಾರವಾಗಿ ತಮ್ಮ ಧ್ವಂಸಲೀಲೆಯನ್ನು ಸಾಗಿಸುವುದು ನಿತ್ಯ ಕರ್ಮವಾಗಿ ಬಿಟ್ಟಿದೆ.

ನಿಜ, ಅವರಿಗೆ ದೂರುಗಳಿವೆ. ಮದ್ರಾಸಿನಲ್ಲಿ ಹಿಂದಿಯನ್ನು ವಿರೋಧಿಸಲು ವಿದ್ಯಾರ್ಥಿಗಳು ಎದ್ದು ನಿಂತಿದ್ದಾರೆ. ಅವರಿಗೆ ಹಿಂದಿ ಬೇಡ. ಉತ್ತರಪ್ರದೇಶದಲ್ಲಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಬೇಡ. ಇಬ್ಬರಿಗೂ ದೂರು ಹೇಳಲು ಕಾರಣಗಳಿವೆ. ಹಿಂದೀ ರಾಷ್ಟ್ರಭಾಷೆಯಾದರೆ ದಕ್ಷಿಣದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ನಾಳೆ ಹಿಂದೀ ಮಾತೃಭಾಷೆಯಾದ ಜನರೊಡನೆ ಸ್ಪರ್ಧಿಸಿ ನೌಕರಿ ಸಂಪಾದಿಸುವುದು ಅವರಿಗೆ ಕಷ್ಟವಾಗುತ್ತದೆ. ಉತ್ತರದವರದೂ ಸರಿಯೇ. ಇಂಗ್ಲಿಷಿನ ದೆಸೆಯಿಂದ ಅವರು ಅನಾವಶ್ಯಕ ಕಷ್ಟಕ್ಕೊಳಗಾಗಿದ್ದಾರೆ. ಸಂವಿಧಾನವು ಇಪ್ಪತ್ತು ವರ್ಷಗಳ ಹಿಂದೆ ಮಾಡಿದ ನಿರ್ಣಯ ಇನ್ನೂ ಜಾರಿಗೆ ಬರುವುದಿಲ್ಲ , ಎಂದರೇನು? ಇಂಗ್ಲಿಷ್ ಹೋದ ವಿನಾ ಸರಕಾರಿ ಸೇವೆಗಳಲ್ಲಿ 'ಮದ್ರಾಸಿ'ಗಳ ಗುತ್ತಿಗೆಯನ್ನು ಮುರಿಯಲು ಸಾಧ್ಯವೇ ಇಲ್ಲ. ಎರಡರಲ್ಲಿಯೂ ಸತ್ಯಾಂಶವಿದೆ.

ಆದರೆ ವಿದ್ಯಾರ್ಥಿಗಳು ಏನನ್ನು ಕಲಿಯಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರ ಅವರಿಗೆ ಯಾವಾಗ ಬಂತು? ಅವರೇ ತಮಗೆ ಇದನ್ನೇ ಕಲಿಸಬೇಕು, ಇನ್ನೊಂದನ್ನು ಬಾರದು ಎಂದು ನಿರ್ಣಯಿಸುವುದಾದರೆ ಈ ಶಿಕ್ಷಣ ಆಯೋಗಗಳೇಕೆ? ಸಿಲೆಬಸ್

ಕ್ರಮಗಳನ್ನು ನಿರ್ಧರಿಸುವ ತೊಂದರೆಯೇಕೆ? ವಿದ್ಯಾರ್ಥಿಗಳು ತಮಗೆ ಕಲಿಸಲ್ಪಟ್ಟದ್ದನ್ನು ಕಲಿಯಬೇಕು ಎಂಬುದು ಎಂದಿನಿಂದಲೂ ಗ್ರಹಿಸಲ್ಪಟ್ಟ ವಿಚಾರ. ರಾಷ್ಟ್ರದ ಚುನಾವಣೆಗಳಲ್ಲಿ ಮತದಾನದ ಹಕ್ಕು ಚಲಾಯಿಸಲು ಇನ್ನೂ 'ಬುದ್ಧಿ ಸಾಲದು' ಎಂದು ಭಾವಿಸಲ್ಪಟ್ಟ ವಿದ್ಯಾರ್ಥಿಗಳು ತಮಗೆ ಕಲಿಸತಕ್ಕ ವಿಷಯಗಳ ಮೇಲೆ ನಿರ್ಣಯ ಕೊಡುವ ಜಾಣರಾಗಿ ಹೋದರೆ? ಅದೂ ಹತ್ತು ಹನ್ನೆರಡು ವರ್ಷದ ವಿದ್ಯಾರ್ಥಿಗಳು.

ಆದರೆ ನಾನು ವಿದ್ಯಾರ್ಥಿಗಳನ್ನು ದೂಷಿಸುವುದಿಲ್ಲ. ಈಚೆಗೆ ನಡೆದ ಒಂದು ಗೋಳೀಬಾರಿನಲ್ಲಿ ಇನ್ನೂ ಪ್ರಾಯ ಬಾರದ ಹುಡುಗನೊಬ್ಬ ಜೀವಕೊಟ್ಟನೆಂದು ವರದಿಯಾಗಿದೆ. ಕನ್ನಡ ಹುಡುಗನೊಬ್ಬನ ಹತ್ಯೆಯ ಈ ಪಾಪ ನಮ್ಮೆಲ್ಲರ, ಪ್ರಾಯ ಬಂದು ತಂದೆ-ತಾಯಿ ಗಳಾದವರ, ಮಕ್ಕಳನ್ನು ಶಾಲೆಗೆ ಕಳಿಸುವ ರಕ್ಷಕರ, ಹೆತ್ತವರ ತಲೆಯ ಮೇಲಿದೆ. ನಾವು ನಮ್ಮ ಕರ್ತವ್ಯಗಳನ್ನು ಮಾಡುತ್ತಿಲ್ಲ, ನಮ್ಮ ಜವಾಬ್ದಾರಿಗಳನ್ನು ಪೂರೈಸುತ್ತಿಲ್ಲ.

ಹಿಂದಿ (ಅಥವಾ ಇಂಗ್ಲೀಷ್) ನಮ್ಮ ಮಕ್ಕಳ ಭವಿಷ್ಯಕ್ಕೆ ಒಳ್ಳೆಯದಲ್ಲವೆಂದು ನಮ್ಮಲ್ಲಿ ಅನೇಕರಿಗೆ ಅನಿಸುತ್ತಿರಬಹುದು. ಪ್ರಾಮಾಣಿಕವಾಗಿ ಅನಿಸುತ್ತಿರಬಹುದು. ಹಾಗಿದ್ದರೆ ಅದರ ವಿರುದ್ಧ ದನಿ ಎತ್ತುವುದು ನಮ್ಮ—ಹಿರಿಯರ, ಪಾಲಕರ—ಕರ್ತವ್ಯ. ನಮ್ಮಿಂದ ಮತ ಪಡೆದು ಆರಿಸಿ ಹೋದವರಿಗೆ ನಾವು ನಮ್ಮ ವಿರೋಧವನ್ನು ಕರೆದೋ ಬರೆದೋ ತಿಳಿಹೇಳಬಹುದು. ಅದು ನಿರರ್ಥಕವಾದರೆ ಮತ್ತು ನಮ್ಮ ಅಭಿಪ್ರಾಯಗಳನ್ನು 'ಬಲವಾಗಿ' ಪ್ರದರ್ಶಿಸಬೇಕು ಎಂದು ನಮ್ಮ ಖಚಿತಾಭಿಪ್ರಾಯವಾದರೆ ನಾವೇ ಬೀದಿಗಿಳಿದು ಸರಕಾರವನ್ನು, ಪೋಲೀಸರನ್ನು, ಲಾಠಿಗಳನ್ನು, ಬಂದೂಕುಗಳನ್ನು ಎದುರಿಸಬೇಕು. ಅದು ಬಿಟ್ಟು ತಲೆ ಮಾಸು ಆರದ ನಮ್ಮ ಮಕ್ಕಳನ್ನು ಬೀದಿಗಿಳಿಯಲು, ಗೊಂದಲ ಹಾಕಲು ಬಿಡುವುದು ಹೇಡಿತನ. ಶಿಖಂಡಿಯನ್ನು ಎದುರಿಟ್ಟು ಹಿಂದೆ ನಿಂತು ಬಾಣ ಹೊಡೆಯುವ ಷಂಡತನ.

ಮಕ್ಕಳು ನಾವು ಹೇಳಿದ್ದನ್ನು ಕೇಳುವುದಿಲ್ಲ, ನಾವೇನು ಮಾಡೋಣ? ಮಕ್ಕಳ ಉಪಟಳಕ್ಕೆ ನಾವು ಜವಾಬ್ದಾರರಲ್ಲ ಎನ್ನುವವರಿದ್ದಾರೆ. ನಮ್ಮ ಮಕ್ಕಳನ್ನು ನಮಗೆ ಅಂಕೆಯಲ್ಲಿಡಲಾಗುವುದಿಲ್ಲವೆಂದು ಹೇಳುವುದು ನಂಬಲು ಕಷ್ಟವಾದ ಮಾತು. ಬೀದಿಯಲ್ಲಿ ಎಷ್ಟೇ ಅಲೆದರೂ ಮಧ್ಯಾಹ್ನದ ಊಟಕ್ಕೆ ಅವರು ಮನೆಗೆ ಬರುತ್ತಾರೆ. ಆಗ ಅವರನ್ನು ಹಿಡಿತಕ್ಕೆ ತರಲು ಸಾಧ್ಯವಾಗಲೇಬೇಕು. ಎಷ್ಟೇ ಕಿಡಿಗೇಡಿಗಳಾದರೂ ಹಣಕ್ಕೆ ತಂದೆತಾಯಿಗಳಿಗೆ ಬರೆಯುತ್ತಾರೆ. ಮನಿಯಾರ್ಡರು ಸಕಾಲಕ್ಕೆ ಬಾರದಿದ್ದರೆ ಅವರ ಹಾಯಿಯ ಗಾಳಿಯೆಲ್ಲ ಖಾಲಿಯಾಗುತ್ತದೆ. ನಾವು ಗಳಿಸಿ ಅವರ ಶಿಕ್ಷಣಕ್ಕೆ ಆಧಾರ ನೀಡುವುದರಿಂದ ಅವರ ವರ್ತನೆಯನ್ನು ಅಗತ್ಯವಿದ್ದಷ್ಟು ಕಠೋರವಾಗಿ ತಿದ್ದಲು ನಮಗೆ ಅಧಿಕಾರವಿದೆ. ಈ ಅಧಿಕಾರವನ್ನು ನಾವು ಚಲಾಯಿಸದೆ ಹೋದರೆ ನಮಗೂ ನಮ್ಮ ಮಕ್ಕಳಿಗೂ ನಾವು ದ್ರೋಹ ಬಗೆಯುತ್ತೇವೆ. ನಮ್ಮ ಮಕ್ಕಳು ತಮಗೆ ಮೆಚ್ಚಿಗೆಯಾದವರನ್ನು ಲಗ್ನವಾಗುವುದನ್ನು ತಡೆಯಲು ನಮಗೆ ಸಾಧ್ಯವಾಗುತ್ತದಂತೆ. ಇದಕ್ಕಾಗಿ ನಾವು ಬೇಕಾದ ನಿಷ್ಠುರ ಕ್ರಮ

ಕೈಗೊಳ್ಳಲು ಸಿದ್ಧರಾಗುತ್ತೇವೆ. ಶಾಲೆ ಕಾಲೇಜುಗಳಲ್ಲಿ ಕಲಿಯುವ ನಮ್ಮ ಹುಡುಗರನ್ನು ಮಾತ್ರ ಏನೂ ಮಾಡಲು ನಮ್ಮಿಂದಾಗುವುದಿಲ್ಲವಂತೆ.

ವಾಸ್ತವಿಕ ಮಾತೆಂದರೆ ನಾವು ತಂದೆ-ತಾಯಿಗಳು ಯಾವುದಕ್ಕೂ ನಿಗಾ ಕೊಡುವುದಿಲ್ಲ. ನಮ್ಮ ಮಕ್ಕಳು ಶಾಲೆ ಕಾಲೇಜುಗಳಿಗೆ ಹೋಗುವವರು ಓದುತ್ತಾರೋ ಏನನ್ನಾದರೂ ಕಲಿಯುತ್ತಾರೋ ಎಂದು ನಾವು ನೋಡುವುದಿಲ್ಲ. ನಮಗೆ ಅವರು ಕಲಿಯುವುದು ಮುಖ್ಯವಲ್ಲ. ಪಾಸಾಗುವುದು ಮುಖ್ಯ. ಪಾಸಾಗಲು ಅವರು ಅತಿ ಸಮೀಪದ ದಾರಿ ಹಿಡಿದರೆ ನಮಗೆ ಬಹು ಸಂತೋಷ. ಅಂದ ಮೇಲೆ ತಾವು ಕಲಿಯುವ ವಿಷಯಗಳು ಸುಲಿದ ಬಾಳೇಹಣ್ಣಿನಂತಿರಬೇಕೆಂದು ನಮ್ಮ ಮಕ್ಕಳು ಏಕೆ ಅಪೇಕ್ಷಿಸಬಾರದು? ಕಷ್ಟಪಟ್ಟು ದುಡಿಯಬೇಕೆಂಬ ವಿಚಾರವನ್ನು ನಾವು ಅವರ ತಲೆಯಲ್ಲಿ ತುಂಬಿದರೆ ತಾನೆ? ಆದ್ದರಿಂದ ಅವರು ಹಿಂದೀ ಕಷ್ಟವಾಗುತ್ತದೆ ಅದು ಬೇಡ, ಇಂಗ್ಲಿಷ್ ಕಷ್ಟವಾಗುತ್ತದೆ. ಅದು ಬೇಡ, ಸಂಸ್ಕೃತ ಬಹಳ ಬಿಗು ಅದು ಬೇಡ, ಗಣಿತ ಪೇಪರು ಬಹಳ ಕಷ್ಟವಾಗಿದೆ, ಆದ್ದರಿಂದ ನಾವು ಪರೀಕ್ಷಾಭವನದಿಂದ ಹೊರಬಿದ್ದು, ಉಳಿದವರನ್ನು ಹೊರಗೆಳೆದು ಹಾಕುತ್ತೇವೆ ಎನ್ನುವುದು ಸ್ವಾಭಾವಿಕವೇ.

ನಮ್ಮ ಮಕ್ಕಳ ಶಿಕ್ಷಣ ಪ್ರಗತಿಯಲ್ಲಿ ನಾವು ತೋರಿಸುವ ಆಸಕ್ತಿ ಏನೂ ಸಾಲದು. ಅವರು ಹೇಗೆ ಕಲಿಯುತ್ತಾರೆಂದು ನಾವೆಂದೂ ಅವರ ಶಿಕ್ಷಕರನ್ನು ವಿಚಾರಿಸುವುದಿಲ್ಲ. ನಮ್ಮ ಮಕ್ಕಳಿಗಾಗಿ ಖಾಸಗಿ ಶಿಕ್ಷಕರನ್ನು ನೇಮಿಸಲು ಸಿದ್ಧರಾಗುತ್ತೇವೆಯೇ ಹೊರತು, ಶಾಲೆಯಲ್ಲಿ ಅವರೇಕೆ ಈ ವಿಷಯಗಳಲ್ಲಿ ಜ್ಞಾನ ಪಡೆಯಲು ಅಸಮರ್ಥರಾಗಿದ್ದಾರೆಂದು ಕಂಡುಹಿಡಿಯಲು ಪ್ರಯತ್ನಿಸುವುದಿಲ್ಲ. ಮಕ್ಕಳನ್ನು ಶಾಲೆಗೆ ಪ್ರವೇಶಗೊಳಿಸಿ ಬಂದ ಮೇಲೆ ಇನ್ನೊಮ್ಮೆ ನಾವು ಶಾಲೆಗೆ ಮುಖ ಹಾಕಿ ಕೂಡ ನಡೆಯುವುದಿಲ್ಲ. ನನ್ನ ಪರಿಚಯದ ಒಬ್ಬ ಶಾಲಾ ಹೆಡ್ಮಾಸ್ತರರು ವಿದ್ಯಾರ್ಥಿಗಳ ಪಾಲಕರ ಸಭೆಗಳನ್ನು ಸಂಘಟಿಸಲು ಯತ್ನಿಸಿ ವಿಫಲರಾದರು. ಅವರು ಯಶಸ್ವಿಯಾಗಿದ್ದರೆ ಶಿಕ್ಷಕ ಪಾಲಕ ಸಂಬಂಧವೊಂದು ಸ್ಥಾಪಿತವಾಗಬಹುದಿತ್ತು. ನಮ್ಮ ಮಕ್ಕಳ ಚಟುವಟಿಕೆಗಳ ಬಗ್ಗೆ ಶಿಕ್ಷಕರ ಆತ್ಮೀಯ ಕಿವಿಮಾತು ನಮಗೆ ದೊರೆಯಬಹುದಾಗಿತ್ತು. ಮೈಗಳ್ಳ ಶಿಕ್ಷಕರೂ ಎಚ್ಚರಗೊಳ್ಳಬಹುದಾಗಿತ್ತು. ಆದರೆ ನಮಗೆ ಅದೆಲ್ಲ ಬೇಡ. ಪಬ್ಲಿಕ್ ಪರೀಕ್ಷೆ ಬಂದು, ನಮ್ಮ ಹುಡುಗ ಪಾಸಾಗುವ ಸಂಭವ ಕಡಿಮೆಯೆಂದು ಅವನಿಂದಲೇ ವರದಿ ಬಂದ ಮೇಲೆ ನಾವು ಎಚ್ಚರಿಯುತ್ತೇವೆ. ಆಮೇಲೂ ಏಕೆ ಓದಲಿಲ್ಲ ಎಂದು ಅವನನ್ನು ಕೇಳುವ ಬದಲು ಅವನ ಪೇಪರು ಯಾವ ಮಾಸ್ತರ, ಯಾವ ಪ್ರೊಫೆಸರರ ಕಡೆ ಹೋಗಿದೆಯೆಂದು ಪತ್ತೆ ಹಚ್ಚಲು ಧಡಪಡಿಸುತ್ತೇವೆ. ಅವನನ್ನು ಪಾಸುಮಾಡಿಸಲು ನಾಲ್ಕೂ ಉಪಾಯಗಳನ್ನು ಹೂಡುತ್ತೇವೆ.

ಕೆಲ ವರ್ಷಗಳ ಹಿಂದೆ ನಮ್ಮ ರಾಜ್ಯದಲ್ಲಿ ಶಾಲಾ ಕಾಲೇಜು ಫೀ ಹೆಚ್ಚಳದ ವಿರುದ್ಧ ಆಂದೋಲನವಾಯಿತು. ಆಂದೋಲನ ಹೂಡಿದವರು ಕಷ್ಟಪಟ್ಟು ದುಡಿದು ಫೀ ತುಂಬುತ್ತಿದ್ದ ತಂದೆತಾಯಿಗಳಲ್ಲ, ತಂದೆತಾಯಿಗಳಿಂದ ಹಣಪಡೆದು ವೆಚ್ಚಮಾಡುತ್ತಿದ್ದ ವಿದ್ಯಾರ್ಥಿಗಳು.

ಅವರು ಸಂತೋಷದಿಂದ ಶಾಲೆ ಕಾಲೇಜುಗಳಿಂದ ದೂರ ಉಳಿದು ಗೊಂದಲಹಾಕುತ್ತ ತಿರುಗಾಡಿದರು. ರಸ್ತೆಗಳನ್ನು ಬಂದ್‌ಮಾಡಿದರು. ತಿಂಗಳು ಮೇಲ್ಪಟ್ಟು ಈ ಗಲಾಟೆ ನಡೆದು ಕಾಲೇಜುಗಳೆಲ್ಲ ನಿಂತು ಹೋದರೂ ವಿದ್ಯಾರ್ಥಿಗಳ ಪಾಲಕರಾಗಲಿ ತಂದೆತಾಯಿಗಳಾಗಲಿ ಕಿರಿಬೆರಳು ಎತ್ತಲಿಲ್ಲ. ಆಂದೋಲನ ನ್ಯಾಯವಾಗಿರಬಹುದಾದರೂ ಕಳೆದು ಹೋಗುತ್ತಿರುವುದು ನಮ್ಮ ಮಕ್ಕಳ ಸಮಯ, ಆಯುಷ್ಯ ಎಂದು ಯಾರಿಗೂ ಚಿಂತೆಯಾದಂತೆ ಕಾಣಲಿಲ್ಲ. ಅನೇಕ ವಾರಗಳ ನಂತರ ತಾನೇ ಪಾಲಕರಲ್ಲಿ ಕೆಲವರು ಸೇರಿ ಪರಿಸ್ಥಿತಿಯನ್ನು ಶಾಂತ ಗೊಳಿಸಲು ಯತ್ನಿಸಿದ್ದು. ಅಷ್ಟರಲ್ಲಿ ವಿದ್ಯಾರ್ಥಿಗಳು ಸುಮಾರು ಅರ್ಧ ಟರ್ಮನ್ನು ಕಳೆದುಕೊಂಡಿದ್ದರು.

ಯಾವುದೇ ಯೋಗ್ಯ, ಅಯೋಗ್ಯ ಉದ್ದೇಶಕ್ಕಾಗಿ ಆಂದೋಲನವಾದರೂ ನಮ್ಮ ದೇಶದಲ್ಲಿ ನಾವು ವಿದ್ಯಾರ್ಥಿಗಳಿಗೆ ಮುಂದಾಳ್ತನ ವಹಿಸಿಕೊಡುತ್ತೇವೆ. ನಾವು ಅದರ ಮುಂದಾಳ್ತನ ವಹಿಸುವುದಿಲ್ಲ. ವಿದ್ಯಾರ್ಥಿಗಳು ಚಳವಳಿಮಾಡಲು ಶಿಕ್ಷಣ ವಿಷಯವೇ ಬೇಕೆಂದಿಲ್ಲ. ಬಸ್ ದರ ಏರಿದರೆ, ಸಿನೇಮಾ ದರ ಹೆಚ್ಚಿದರೆ, ಕನ್ನಡ ಚಲನಚಿತ್ರಗಳಿಗೆ ಹೆಚ್ಚು ಪ್ರೋತ್ಸಾಹ ಬೇಕಾದರೆ, ಏಕೀಕರಣ ಆಗಬೇಕಾದರೆ ಅದಕ್ಕೆಲ್ಲ ಚಳಿವಳಿ ನಡೆಸುವವರು ವಿದ್ಯಾರ್ಥಿಗಳೇ. ಅವರು ತಮ್ಮ ವಯಸ್ಸಿಗೆ ಸಹಜವಾದ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ಅದರಿಂದ ಕೋಟ್ಯಂತರ ರೂಪಾಯಿಗಳ ಸಾರ್ವಜನಿಕ ಆಸ್ತಿ ಹಾಳಾಗುತ್ತದೆ. ಈ ಆಸ್ತಿಯನ್ನು ನಾವು ನಮ್ಮ ಬೆವರಿಳಿಸಿ ಕೊಟ್ಟ ಕರ ಕಂದಾಯದಿಂದ ನಿರ್ಮಿಸಲಾಗಿದೆಯೆಂದು ಯಾರೂ ಗಮನಿಸುವುದಿಲ್ಲ. ಈ ಚಳವಳಿಯನ್ನೆಲ್ಲ ನಾವು ಮಾಡದೆ ನಮ್ಮ ಮಕ್ಕಳಿಗೇಕೆ ಬಿಟ್ಟುಕೊಡುತ್ತೇವೆ? ನಮಗೆ ಸಮಯವಿಲ್ಲ. ಮೇಲಾಗಿ ನಾವು ನೇರವಾಗಿ ಆಂದೋಲನಗಳಲ್ಲಿ ಧುಮುಕಿದರೆ ನಮ್ಮ ನೌಕರಿಗಳಿಗೆ ಧಕ್ಕೆ ಬರಬಹುದು. ಅಥವಾ ಸರಕಾರ ನಮ್ಮನ್ನು ಉಗ್ರವಾಗಿ ಎದುರಿಸಬಹುದು. ಮಕ್ಕಳನ್ನು ಕ್ರೂರವಾಗಿ ನಡೆಸಿಕೊಳ್ಳಲು ಯಾವ ಸರಕಾರವೂ ಹಿಂಜರಿಯಬೇಕಾಗುತ್ತದೆಂದು ನಮಗೆ ಗೊತ್ತಿದೆ. ಆದ್ದರಿಂದ ನಾವು ಹಿಂದೆ ನಿಂತು ಇದಕ್ಕೆ ಪ್ರಚೋದನೆ ಕೊಡುತ್ತೇವೆ. ಪ್ರಚೋದನೆ ಕೊಡದಿದ್ದರೂ ಅಲಕ್ಷಿಸುತ್ತೇವೆ. ನಮ್ಮೆಲ್ಲರ ಏಕಾಭಿಪ್ರಾಯವೆಂದರೆ, ನಮ್ಮ ಮಕ್ಕಳ ಶಾಲಾ ಕಾಲೇಜು ವೇಳೆ ಹಾಳುಮಾಡಲು ತಕ್ಕಂಥಾದ್ದು. ಅದು ಬೆಲೆಯುಳ್ಳದ್ದಲ್ಲ.

ಈ ವಿಪರೀತ ಬುದ್ಧಿಯಿಂದ ನಾವು ಪರಾವೃತ್ತರಾದ ಹೊರತು ದೇಶಕ್ಕೆ ಉಳಿಗಾಲವಿಲ್ಲ. ತಂದೆ ತಾಯಿಗಳಾಗಿ ನಾವು ನಮ್ಮ ಮಕ್ಕಳ ಚಟುವಟಿಕೆಗಳ ಮೇಲೆ ನಿಯಂತ್ರಣವಿಡಲು ಸಿದ್ಧರಾಗದಿದ್ದರೆ ಅವರ ಭವಿಷ್ಯತ್ತನ್ನು ಜಾರುವ ದಾರಿಯಲ್ಲಿ ಉರುಳಿಸಿಬಿಟ್ಟಂತೆ. ಅವರಿಗಾಗಿ ಗಳಿಸಿದಂತೆ ಅವರ ಒಳಿತಿಗಾಗಿ ಅಗತ್ಯವಿದ್ದರೆ ಹೋರಾಡುವುದೂ ನಮ್ಮ ಕರ್ತವ್ಯ. ಅವರನ್ನು ಎದುರು ಹಾಕಿ, ನಾವು ಹಿರಿಯರು—ರಾಜಕಾರಣಿಗಳೇ ಇರಲಿ, ಅಧಿಕಾರಿಗಳೇ ಇರಲಿ, ಸಾಮಾನ್ಯ ನಾಗರಿಕರೇ ಇರಲಿ—ಆಳುವ ಸರಕಾರವನ್ನು ಹಣಿಯಲು ಯತ್ನಿಸುವುದು ಶುದ್ಧ ಅನೀತಿ. ನಮ್ಮ ಮಕ್ಕಳಿಗೇ ನಾವು ಬಗೆಯುವ ದ್ರೋಹ. ■

# ಸಾಮಾಜಿಕ ಬದಲಾವಣೆ
# ಮತ್ತು
# ಸಾಮಾಜಿಕ ಮನೋವೃತ್ತಿಗಳು*

ಇವೊತ್ತು ನಿಮ್ಮ ಮುಂದೆ ನಿಂತು ನಾಲ್ಕು ಮಾತು ಆಡುವುದಕ್ಕೆ ಅವಕಾಶ ಒದಗಿಸಿದ್ದಕ್ಕಾಗಿ ನಾನು ಪ್ರಾರಂಭದಲ್ಲಿಯೇ ನಿಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನೀವು ರೊಟೇರಿಯನ್ನರು— ಈ ನಗರದ V.I.P. ಗಳು. ನಾನೋ ಒಂದು mofussil ಪಟ್ಟಣದ ಒಬ್ಬ V.O.P.—Very Ordinary person. ನಾನು ಕೇವಲ ಓದುತ್ತೇನೆ. ಎಲ್ಲ ಬಲ್ಲವನಿಗೆ ಏನೂ ಗೊತ್ತಿಲ್ಲ ಅನ್ನುತ್ತಾರಲ್ಲ. ಆದ್ದರಿಂದ ನೀವು ನನ್ನಿಂದ ಬಹಳ ನಿರೀಕ್ಷಿಸಬಾರದು. ಈಗ ಇಪ್ಪತ್ತೈದು ವರ್ಷಗಳಿಂದ ನಮ್ಮ ಸುತ್ತಮುತ್ತ ನಡೆಯುತ್ತಿರುವ ಸಂಗತಿಗಳನ್ನು ಗಮನಿಸಿ ನನಗೆ ತೋಚಿದ ಕೆಲ ಅಭಿಪ್ರಾಯಗಳನ್ನು ನಿಮ್ಮ ಮುಂದೆ ತೋಡಿಕೊಳ್ಳುತ್ತೇನೆ. ಅಷ್ಟೇ. ನನ್ನ ಎಲ್ಲಾ ವಿಚಾರಗಳನ್ನು ನೀವು ಒಪ್ಪಲಿಕ್ಕಿಲ್ಲ. ಆದರೆ ವಿಚಾರಿಸುತ್ತೀರಿ ಅಂತ ನಂಬುತ್ತೇನೆ.

ಈವೊತ್ತಿನ ಭಾಷಣಕ್ಕೆ ನಾನು ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ಮನೋವೃತ್ತಿಗಳು Social change and Social attitudes ಎಂಬ ವಿಷಯವನ್ನು ಆರಿಸಿಕೊಂಡದ್ದಕ್ಕೆ ಕಾರಣ ಉಂಟು. ಈವೊತ್ತು ನಮ್ಮ ಪ್ರಧಾನ ಮಂತ್ರಿಗಳಿಂದ ತೊಡಗಿ ಎಲ್ಲರೂ ಸಾಮಾಜಿಕ ಬದಲಾವಣೆಗಳ ವಿಷಯ ಮಾತಾಡುತ್ತಿದ್ದಾರೆ. ಜಗತ್ತಿನಲ್ಲಿ ಎಲ್ಲ ಕಡೆ ಆಗುತ್ತಿರುವ ಹಾಗೆ ನಮ್ಮ ದೇಶದಲ್ಲಿಯೂ ಸಾಮಾಜಿಕ ಬದಲಾವಣೆಗಳು ಆಗುತ್ತಾ ಇವೆ. ಈ ಬದಲಾವಣೆಗಳು ಪ್ರತಿಯೊಬ್ಬರ ಜೀವನದ ಮೇಲೂ ಪರಿಣಾಮ ಮಾಡುತ್ತಾ ಇವೆ. ಆದರೆ ಈ ಬದಲಾವಣೆಗಳು ಯಾಕೆ ಆಗುತ್ತಿವೆ. ನಮ್ಮ ಮನಸ್ಸುಗಳು ಈ ಬದಲಾವಣೆಗಳಿಗೆ ಹೇಗೆ ಪ್ರತಿಕ್ರಿಯೆ ತೋರಿಸುತ್ತಾ ಇವೆ? ನಾವು ನಂಬಿಕೊಂಡಿರುವ ವಿಚಾರಗಳು ನಾವು ನಡೆದುಕೊಳ್ಳುತ್ತಿರುವ ರೀತಿ ನೀತಿಗಳು ಎಷ್ಟು ಮಟ್ಟಿಗೆ ಈ ಬದಲಾವಣೆಗಳಿಗೆ ಹೊಂದಿಕೊಂಡಿವೆ? ಇದನ್ನು ನೋಡಬೇಕು.

ನಾವು ಬದಲಾವಣೆಗಳು ಬೇಕು ಅನ್ನುತ್ತೇವೆ. ಬುದ್ಧಿಪೂರ್ವಕವಾಗಿ ಬದಲಾವಣೆಗಳಿಗೆ ಚಾಲನೆ ಕೊಡುತ್ತಾ ಇದ್ದೇವೆ. ಆದರೆ ಈ ಬದಲಾವಣೆಗಳ ಅರ್ಥವೇನು? ಈ

---

* ಹುಬ್ಬಳ್ಳಿಯ ಒಂದು ರೋಟರಿ ಕ್ಲಬ್ ಸಭೆಯಲ್ಲಿ ಮಾಡಿದ ಉಪನ್ಯಾಸ.

ಬದಲಾವಣೆಗಳಿಂದ ಒದಗುವ ಪರಿಸ್ಥಿತಿಗಳನ್ನು ಎದುರಿಸುವದಕ್ಕೆ ನಾವು ಎಷ್ಟುಮಟ್ಟಿಗೆ ಸಿದ್ಧರಾಗುತ್ತಿದ್ದೇವೆ? ಈ ಪ್ರಶ್ನೆಗಳನ್ನು ಇಂದು ಚರ್ಚಿಸುವುದು ನನ್ನ ಉದ್ದೇಶವಾಗಿದೆ. ಬದಲಾವಣೆಯೇ ವಿಶ್ವದ ಸ್ವಭಾವ ಅನ್ನುವುದನ್ನು ವಿಜ್ಞಾನಿಗಳು ಹೇಳುತ್ತಾರೆ. ಜೈನ ಧರ್ಮದ ತತ್ವಜ್ಞಾನಿಗಳು ವಿಶ್ವವನ್ನು ಕ್ಷಣಿಕ ಅನ್ನುತ್ತಾರೆ. ಈ ಕ್ಷಣದಲ್ಲಿದ್ದ ಹಾಗೆ ಈ ಜಗತ್ತು ಇನ್ನೊಂದು ಕ್ಷಣದಲ್ಲಿ ಇರುವುದಿಲ್ಲ. ಈ ವಾಕ್ಯವನ್ನು ಪ್ರಾರಂಭ ಮಾಡುವಾಗ ಇದ್ದ ನಾನೇ ಬೇರೆ. ಇದನ್ನು ಮುಗಿಸುವಾಗ ಇರುವ ನಾನೇ ಬೇರೆ. ಶರೀರ ಶಾಸ್ತ್ರಜ್ಞರು ಇದನ್ನು ದೃಢಪಡಿಸುತ್ತಾರೆ.

ಪ್ರತಿ ನಿಮಿಷದಲ್ಲಿಯೂ ನಮ್ಮ ಶರೀರದಲ್ಲಿ ಲಕ್ಷಾಂತರ ಕಣಗಳು ಸಾಯುತ್ತವೆ, ಅವುಗಳ ಸ್ಥಾನದಲ್ಲಿ ಲಕ್ಷಾಂತರ ಹೊಚ್ಚ ಹೊಸ ಕೋಶಗಳು ಹುಟ್ಟಿಕೊಳ್ಳುತ್ತವೆ. ಆದರೂ ನಿಸರ್ಗದಲ್ಲಿ ಬದಲಾವಣೆಗಳು ಆಗುವುದು ಸಾವಕಾಶವೇ. ೪೦೦ ಕೋಟಿ ವರ್ಷಗಳ ಹಿಂದೆ ಈ ಪೃಥ್ವಿ ಹುಟ್ಟಿತು ಅಂತ ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ. ಅದರಲ್ಲಿ ಜೀವವೆಂದು ನಾವು ಕರೆಯುವ ಚೈತನ್ಯ ಪದಾರ್ಥದ ಉದಯವಾದದ್ದು ಕೋಟಿ ಕೋಟಿ ವರ್ಷಗಳ ಹಿಂದೆ. ಜೀವಗಳು ಬೇರೆ ಬೇರೆ ರೂಪತಾಳಿ ಇಂದು ನಮಗೆ ಕಾಣಿಸುವ ಲಕ್ಷಾಂತರ ಜೀವ ಜಾತಿಗಳಾಗಿದ್ದು ಬಹಳ ಸಾವಕಾಶವಾಗಿಯೇ. ಈ ವಿಕಾಸದಲ್ಲಿ ಸುಮಾರು ಆರು ಲಕ್ಷ ವರ್ಷಗಳ ಹಿಂದೆ ಮನುಷ್ಯ ಈಗಿರುವ ರೂಪದಲ್ಲಿ ಉದಯವಾದ. ಮನುಷ್ಯ ಈ ಭೂಮಿಯ ಮೇಲೆ ನಡೆಯಲಿಕ್ಕೆ ತೊಡಗಿದ ಮೇಲೆ ಕೂಡ ಬದಲಾವಣೆಗಳು ಜೋರಾಗಿ ಆಗಲಿಲ್ಲ. ಮನುಷ್ಯನ ಉದಯವಾಗಿ ಪ್ರಥಮ ಆರುಲಕ್ಷ ವರ್ಷಗಳಲ್ಲಿ ಏನೂ ಆಗಲಿಲ್ಲ ಅಂತಲೇ ಹೇಳಬಹುದು. ಈ ಅವಧಿಯಲ್ಲಿ ಮನುಷ್ಯ ಗುಹೆಗಳಲ್ಲೇ ವಾಸಮಾಡಿದ. ಬೇರೆ ಮಾಂಸಾಹಾರಿ ಪ್ರಾಣಿಗಳ ತರಹದಲ್ಲೇ ಬೇಟೆಯಿಂದ ಜೀವನ ಮಾಡಿದ. ಅಥವಾ ಹಣ್ಣು ಹಂಪಲು ಸಂಗ್ರಹಮಾಡಿ ಬದುಕಿದ. ಈ ಅವಧಿಯಲ್ಲಿ ಅವನು ಹೊಸತು ಮಾಡಿದ್ದೆಂದರೆ ಕಲ್ಲಿನಿಂದ ಆಯುಧಗಳನ್ನು ತಯಾರುಮಾಡಿಕೊಂಡದ್ದು ಮಾತ್ರ. ಪಶುಗಳಿಗೂ ಅವನಿಗೂ ಇದ್ದ ಭೇದ ಇದೊಂದೇ.

ಮನುಷ್ಯನಲ್ಲಿ ನಿಜವಾಗಿ ಬದಲಾವಣೆಯಾದದ್ದು ಕೃಷಿಯಿಂದ ೧೦೦೦೦ ವರ್ಷಗಳ ನಂತರ. ಹತ್ತು ಸಾವಿರ ವರ್ಷಗಳ ಹಿಂದೆ ಕೃಷಿ ಪ್ರಾರಂಭವಾಯಿತು. ಕೃಷಿಯೇ ಮನುಷ್ಯನ ಜೀವನದಲ್ಲಿ ಆದ ಪ್ರಥಮ ಕ್ರಾಂತಿ. ಕೃಷಿಯ ಸಂಗಡ ಮನುಷ್ಯ ಒಂದೆಡೆ ನೆಲೆಸಿದ. ಕೃಷಿಯೇ ಸಮಾಜವನ್ನು ಸಮಾಜವಾಗಿ ಮಾಡಿದ್ದು. ಕೃಷಿಯಿಂದ ಮನುಷ್ಯ ಅಲೆಮಾರಿಯಾಗಿರುವುದನ್ನು ಬಿಟ್ಟು 'ಗೃಹಸ್ಥ'ನಾದ. ಗೃಹಸ್ಥ ಅಂದರೆ ಮನೆಯಲ್ಲಿರುವವ. ಇಂಗ್ಲೀಷಿನ husband ಶಬ್ದದ ಅರ್ಥವೂ ಇದೇ. House man ಏ husband. ಹೆಂಗಸು ಗೃಹಿಣಿಯಾದಳು—House wife.

ಕೃಷಿ ಮನುಷ್ಯನ ಮೇಲೆ ತಂದ ಮೂಲಭೂತ ಬದಲಾವಣೆ ಯಾವುದು? ಹಿಂದೆ ಮನುಷ್ಯ ಆಹಾರವನ್ನು ಹುಡುಕುವವನಾಗಿದ್ದ. ಅವನು ಆಹಾರವನ್ನು ಉತ್ಪಾದಿಸುವವನಾದ.

ಧಾನ್ಯಗಳನ್ನು ವರ್ಷಾವಧಿ ಕಾಪಾಡಲಿಕ್ಕೆ ಸಾಧ್ಯವಿದೆ ಆದ್ದರಿಂದ ಸಂಗ್ರಹ ಮಾಡುವುದು-ಕೂಡಿಡುವುದು ಅವನಿಗೆ ಸಾಧ್ಯವಾಯಿತು. ಆಗಿನಿಂದ ಮನುಷ್ಯ Economic Man ಅರ್ಥಜೀವಿ ಆದ. ಕೃಷಿಯೊಡನೆಯೆ ಸ್ವಂತ ಆಸ್ತಿಯ ಕಲ್ಪನೆ ಬಲಗೊಂಡದ್ದು. ಆಸ್ತಿಯ ರಕ್ಷಣೆಗಾಗಿ ಕಾಯದೆ ಕಾನೂನುಗಳು ಬೇರಾದವು. ಕಾನೂನುಗಳನ್ನು ಜಾರಿಗೆ ತರುವುದಕ್ಕೆ ಒಂದು ಜನವರ್ಗ ಬೇಕಾಯಿತು. ಕ್ಷತ್ರಿಯ ವರ್ಗ ಮತ್ತು ಅವರನ್ನು ಮುನ್ನಡೆಸುವುದಕ್ಕೆ ಒಬ್ಬ ರಾಜನನ್ನು ಆರಿಸುವದು ಅವಶ್ಯವಾಯಿತು.

ಕೃಷಿಯೇ ಜಾತಿ ಭೇದಗಳ ಮೂಲವೆಂದು ಭಗವಾನ್ ಬುದ್ಧ ಹೇಳಿದ್ದಾನೆ. ಲೋಭದ ಮೂಲ ಕೂಡಾ ಕೃಷಿಯಲ್ಲಿಯೇ ಎಂದೂ ಬುದ್ಧ ಹೇಳುತ್ತಾನೆ. ಸುಸಂಘಟಿತ ಸೈನ್ಯಗಳನ್ನು ಕಟ್ಟಲಿಕ್ಕೂ ಯುದ್ಧಗಳನ್ನು ಮಾಡಲಿಕ್ಕೂ ಕೃಷಿಯಿಂದಲೇ ಸಾಧ್ಯವಾಯಿತು. ಆಹಾರದ Surplus ಇದ್ದದ್ದರಿಂದ ಪ್ರತ್ಯಕ್ಷವಾಗಿ ಉತ್ಪಾದನೆ ಮಾಡದೇ ಇದ್ದ ಬುದ್ಧಿವಂತರನ್ನೂ ಶೂರರನ್ನೂ ಸಂಬಳಕ್ಕೆ ಇಟ್ಟುಕೊಳ್ಳುವುದು ಸಾಧ್ಯವಾಯಿತು. ಗುಲಾಮಗಿರಿಯೂ ಕೃಷಿಯ ಫಲವೇ. ಪುರೋಹಿತ ವರ್ಗ ಕೂಡ ಅದರಿಂದಲೇ ಹುಟ್ಟಿತು. ಮದುವೆಯ ಸಂಸ್ಥೆ ಕೃಷಿಗಿಂತ ಸ್ವಲ್ಪ ಮೊದಲೇ ಹುಟ್ಟಿರಬಹುದು. ಆದರೆ ಕೃಷಿಮೂಲ ಸಮಾಜದಲ್ಲಿ ಅದು ಬಲವಾಯಿತು. ಜಗತ್ತಿನ ಸುತ್ತಲೂ ವ್ಯಾಪಿಸಿದ ಸ್ತ್ರೀಯರ ಸ್ವಾತಂತ್ರ್ಯದ ಹರಣ ಸಹಿತ ಕೃಷಿಯ ಬೆಳವಣಿಗೆಯ ಫಲವೇ ಅಂತ ಕಾಣುತ್ತದೆ. ಕೃಷಿ ಮನುಷ್ಯನ ಸಾಮಾಜಿಕ ವರ್ತನೆಯಲ್ಲಿ ತಂದ ಬದಲಾವಣೆಗಳನ್ನು ಅಷ್ಟಿಷ್ಟೆಂದು ಹೇಳುವ ಹಾಗಿಲ್ಲ.

ವಿದ್ಯೆ, ಉದ್ಯೋಗ-ಕೈಗಾರಿಕೆಗಳು, ವಾಣಿಜ್ಯ ವ್ಯಾಪಾರ, ಕಲೆ, ಸಾಹಿತ್ಯ ಇವೆಲ್ಲವಕ್ಕೂ ಕೃಷಿಯಿಂದ ಉಳಿದ Surplus ಆಧಾರವಾಗಿದೆ. ಜನಸಂಖ್ಯೆಯ ಹೆಚ್ಚಳಕ್ಕೂ ಅದು ಪ್ರೋತ್ಸಾಹ ಕೊಟ್ಟಿತು. ಕೃಷಿಯನ್ನು ಸಾಧಿಸಿದ ಮೇಲೆ ಮನುಷ್ಯ ತನ್ನ ಮುನ್ನಡೆಯಲ್ಲಿ ಒಮ್ಮೆಯೂ ಹಿಂದೆ ನೋಡಿಲ್ಲ. ಕೃಷಿಗೆ ತಮ್ಮನ್ನು ಹೊಂದಿಸಿಕೊಳ್ಳಲಾರದ ಜನಾಂಗಗಳನ್ನು ಹಿಂದೆ ಬಿಟ್ಟು ಮಾನವ ಸಮಾಜ ಮುಂದೆ ಮುಂದೆ ಸಾಗಿದೆ. ಇಂದಿನ ಗುಡ್ಡಗಾಡು ಜನಾಂಗಗಳು ಯಾರು? ಕೃಷಿಗೆ ತಟ್ಟನೆ ಹೊಂದಿಕೊಳ್ಳದೆ ಹಿಂದೆ ಬಿದ್ದ ಜನರ ವಂಶಜರೆಂದು ನನಗೆ ತೋರುತ್ತದೆ.

ಈ ಗತಪುರಾಣ ಎಲ್ಲರಿಗೂ ತಿಳಿದದ್ದೇ. ಇದನ್ನೆಲ್ಲಾ ಇಲ್ಲಿ ಹೇಳಲಿಕ್ಕೆ ಕಾರಣ ಅಂದರೆ ಇವತ್ತು ನಾವು ನಮ್ಮ ದೇಶದಲ್ಲಿ ಕಾಣುವ ಮನುಷ್ಯ ಸಮಾಜದ ಸ್ವರೂಪ ಈ ಕೃಷಿಕ್ರಾಂತಿಯಿಂದ ತಲೆಯೆತ್ತಿದ್ದು. ನಮ್ಮ ಮನೋವೃತ್ತಿಗಳೆಲ್ಲ ಕೃಷಿಯುಗದಿಂದ ಇಳಿದು ಬಂದದ್ದು. ನಮ್ಮ ಧಾರ್ಮಿಕ ಭಾವನೆಗಳು, ನಮ್ಮ ನೀತಿ ಕಲ್ಪನೆಗಳು ಕೃಷಿಯುಗದ ಅವಶೇಷಗಳೇ ಆಗಿವೆ. ನಮ್ಮ ಮಕ್ಕಳು ನಮ್ಮ ಮಾತು ಕೇಳಬೇಕು ಅಂತ ನಾವು ಬಯಸುವಾಗ ನಮ್ಮ ಹೆಂಡಂದಿರು ನಮಗೆ ಆಧೀನರಾಗಿರಬೇಕು ಅನ್ನುವಾಗ ನಾವು ಕೃಷಿಯುಗದ ಅವಶ್ಯಕತೆಗಳಿಂದ ಹುಟ್ಟಿದ ನಿಯಮಗಳನ್ನು ಜಾರಿಮಾಡಲಿಕ್ಕೆ ಯತ್ನಿಸುತ್ತಿದ್ದೇವೆ. ಹತ್ತು ಸಾವಿರ ವರ್ಷಗಳ ಹಿಂದೆ ಕೃಷಿಯ ಕ್ರಾಂತಿಯಾದ ಕಾಲಕ್ಕೂ ಇಂದಿಗೂ ಇರುವ

ಅಂತರವನ್ನೂ ನಮ್ಮ ಬುದ್ಧಿ ತಿಳಿದುಕೊಂಡಿದೆ. ಆದರೆ ನಮ್ಮ ಮನಸ್ಸು ಅದಕ್ಕೆ ಹೊಂದಿಕೊಳ್ಳಲಿಕ್ಕೆ ತಯಾರಾಗಿಲ್ಲ. ಇದೇ ನಮ್ಮ ಸಮಸ್ಯೆಗಳ ಮೂಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಕಾರಣವೇನು?

ಕೃಷಿಯನ್ನು ಒಂದು ಕ್ರಾಂತಿ ಅಂತ ನಾನು ಹೇಳಿದೆ. ಆದರೆ ಈ ಕ್ರಾಂತಿ ಆದದ್ದು ಸಾವಕಾಶವಾಗಿ. ಅದಾದಮೇಲೆ ೯೯೦೦ ವರ್ಷಗಳಲ್ಲಿ ಮನುಷ್ಯ ಬಹುಸಾವಕಾಶವಾಗಿ ಮುಂದೆ ಸಾಗಿದ. ಕೆಲವು ಅಂಕೆ ಸಂಖ್ಯೆಗಳನ್ನು ನೋಡುವಾ. ಕೃಷಿ ಆರಂಭವಾಗಿ ಎಷ್ಟೋ ಸಾವಿರ ವರ್ಷಗಳ ನಂತರ ಮನುಷ್ಯನು ಚಕ್ರವನ್ನು ಕಂಡು ಹಿಡಿದದ್ದು. ಕೃಷಿ ಪ್ರಾರಂಭವಾಗಿ ಆರು ಸಾವಿರ ವರ್ಷಗಳ ನಂತರ ಕಬ್ಬಿಣ ತಯಾರಿಸಲು ಮನುಷ್ಯ ಕಲಿತದ್ದು. ಚಕ್ರ ಮತ್ತು ಕಬ್ಬಿಣದ ಕ್ರಾಂತಿ ಬಹಳ ಅದ್ಭುತವೇ ಆಗಿತ್ತು. ಚಕ್ರಗಳ ಮೇಲೆ ಓಡುವ ಕುದುರೆ ಕಟ್ಟಿದ ರಥಗಳನ್ನು ಬಹುಶಃ ಪ್ರಥಮ ಬಾರಿಗೆ ಹಿಟ್ಟೈಟ್ ಎಂಬ ಜನಾಂಗದವರು ಯುದ್ಧದಲ್ಲಿ ಉಪಯೋಗಿಸಿದರು. ಕೆಲವೇ ಸಾವಿರ ಹಿಟ್ಟೈಟ್ ಯೋಧರು ಆಗಿನ ಜಗತ್ತಿನ ಅತಿ ಪ್ರಬಲ ರಾಷ್ಟ್ರವಾದ ಇಜಿಪ್ತಿನ ಸಾಮ್ರಾಜ್ಯವನ್ನು ಸೋಲಿಸಿದರು. ಯಾಕೆಂದರೆ ಇಜಿಪ್ಶನ್ನರಿಗೆ ಚಕ್ರಗಳುಳ್ಳ ವಾಹನಗಳು ಗೊತ್ತಿರಲಿಲ್ಲ. ಇದು ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ, ಅಂದರೆ ಕೃಷಿಯುಗ ಆರಂಭವಾಗಿ ಆರು ಸಾವಿರ ವರ್ಷಗಳ ನಂತರ ಮನುಷ್ಯ ವೇಗವಾದ ವಾಹನವನ್ನು ಕಂಡು ಹಿಡಿದದ್ದು. ಕಬ್ಬಿಣದ ಕಲೆಯೂ ಸುಮಾರು ಅದೇ ಸಮಯದ್ದು. ಅದು ಕೃಷಿಯಲ್ಲಿಯೂ ಯುದ್ಧ ವಿದ್ಯೆಯಲ್ಲಿಯೂ ಬಹಳ ಬದಲಾವಣೆಗಳನ್ನು ಮಾಡಿತು. ಆದರೂ ಕಬ್ಬಿಣದ ಯುಗದ ಪೂರ್ಣವಾದ ಪ್ರಭಾವ ಕಾಣಬೇಕಾದರೆ ಮತ್ತೆ ನಾಲ್ಕುಸಾವಿರ ವರ್ಷಗಳೇ ಬೇಕಾಯಿತು. ರಥದಲ್ಲಿ ಕುಳಿತು ಹತ್ತಾರು ಮೈಲು ಧಾವಿಸುವುದಕ್ಕೆ ಮನುಷ್ಯ ಕಲಿತ ಮೇಲೆ ಕಳೆದ ಶತಮಾನದಲ್ಲಿ ರೈಲಿನ ಎಂಜಿನ್ ತಯಾರಾಗುವವರೆಗೂ ವಾಹನಗಳ ವೇಗ ಹೆಚ್ಚಾಗಲಿಲ್ಲ. ಗಂಟೆಗೆ ಹತ್ತೋ ಹನ್ನೆರಡೋ ಮೈಲು. ನೀರಿನ ಮೇಲಿನ ಪ್ರಯಾಣ ಕುದುರೆ ಗಾಡಿಗಿಂತಲೂ ಸಾವಕಾಶವಾಗಿತ್ತು. ರೈಲ್ ಎಂಜಿನ್ ಬಂದ ಮೇಲಾದ್ರೂ ಏನು? ಮೊದಲನೇ ರೈಲ್ ಎಂಜಿನ್ ಗಂಟೆಗೆ ಹದಿಮೂರು ಮೈಲಿ ವೇಗದಲ್ಲಿ ಓಡಿತು. ಇದು ಸುಮಾರು ಒಂದು ನೂರೈವತ್ತು ವರ್ಷಗಳ ಹಿಂದೆ ಇದ್ದ ಜಗತ್ತು.

ಈ ಸಾವಕಾಶ ಗತಿಯಿಂದ ಓಡುತ್ತಿದ್ದ ಜಗತ್ತಿನ ಮೇಲೆ ಔದ್ಯೋಗಿಕ ಕ್ರಾಂತಿ ಒಮ್ಮೆಗೆಲೇ ಮುಗಿಬಿತ್ತು. ಯಂತ್ರಗಳು ಒಮ್ಮಿಂದೊಮ್ಮೆಲೇ ಮನುಷ್ಯನ ಕೆಲಸಗಳನ್ನು ವಹಿಸಿಕೊಂಡವು. ಮುನ್ನೂರು ವರ್ಷಗಳಿಂದ ತನ್ನ ಪಾಡಿಗೆ ತಾನು ವಿಕಾಸ ಹೊಂದುತ್ತಿದ್ದ ವಿಜ್ಞಾನ ಜನರ ಜೀವನದ ಮೇಲೆ ವಿಶೇಷ ಪ್ರಭಾವವನ್ನೇನೂ ಮಾಡಿರಲಿಲ್ಲ. ಕಾಪರ್ನಿಕಸ್, ಕೆಪ್ಲರ್ ಮೊದಲಾದವರು ಆಕಾಶದ ಗ್ರಹಗಳ ಗತಿಯ ಬಗ್ಗೆ ಹೊಸ ಸಂಗತಿಗಳನ್ನು ಕಂಡು ಹಿಡಿದದ್ದಾಗಲಿ, ಗೆಲಿಲಿಯೋ ದೂರದರ್ಶಕ ಮೂಲಕ ಗ್ರಹಗಳ ನಿಜ ರೂಪವನ್ನು ಬೆಳಕಿಗೆ ತಂದದ್ದಾಗಲಿ ಪಂಡಿತರನ್ನು ಬೆರಗು ಪಡಿಸಿತೇ ಹೊರತು ಜನರ ಜೀವನದಲ್ಲಿ ಏನೂ ಹೆಚ್ಚು ಕಡಮೆ ಮಾಡಲಿಲ್ಲ. ಯಾಕೆಂದರೆ ಜೀವನಕ್ಕೆ ಅವಶ್ಯವಾದ ಪದಾರ್ಥಗಳ ಉತ್ಪಾದನೆ ಮತ್ತು

ಹಂಚಿಕೆಯನ್ನು ಅದು ಹೆಚ್ಚು ಕಡಮೆ ಮಾಡಲಿಲ್ಲ. ಆದರೆ ಈ ವಿಜ್ಞಾನಿಗಳ ಕೆಲಸದ ಫಲವಾಗಿಯೇ ಮುಂದೊಂದು ದಿನ ಯಂತ್ರ ವಿಜ್ಞಾನ ಬೆಳೆದು ಮನುಷ್ಯನ ಜೀವನದಲ್ಲಿ ಉತ್ಪಾತವನ್ನೇ ಎಬ್ಬಿಸಿತು.

ಮನುಷ್ಯನ ಇತಿಹಾಸದಲ್ಲಿ ಎದ್ದ ಎರಡನೇ ಮಹಾಕ್ರಾಂತಿಯೇ ಈ ವಿಜ್ಞಾನ—ಔದ್ಯೋಗಿಕ ಕ್ರಾಂತಿ. ಈ ಕ್ರಾಂತಿಯ ವೇಗವನ್ನೂ ವಿಸ್ತಾರವನ್ನೂ ನೋಡಿದರೆ ಆಶ್ಚರ್ಯವಾಗುತ್ತದೆ. ಔದ್ಯೋಗಿಕ ಕ್ರಾಂತಿಯಾಗಿ ಅರ್ಧ ಶತಮಾನ ದಾಟಿದ ಮೇಲೆ ವಾಹನಗಳ ವೇಗ ಬಹಳವಾದರೆ ಗಂಟೆಗೆ ೩೦ ಮೈಲುಗಳಷ್ಟಿತ್ತು. ಈ ನಿಟ್ಟಿನಲ್ಲೇ ಮೋಟಾರು ವಾಹನಗಳು ಬಂದದ್ದು. ಮೋಟಾರಿನ ಉದಯ ೨೦ನೇ ಶತಮಾನದ ಆರಂಭದಲ್ಲಿ ಎಂದಿಟ್ಟುಕೊಳ್ಳುವಾ. ಅದಾಗಿ ೪೦ ವರ್ಷಗಳಲ್ಲಿ ವಿಮಾನಗಳು ಗಂಟೆಗೆ ೪೦೦ ಮೈಲು ವೇಗದಲ್ಲಿ ಹಾರತೊಡಗಿದವು. ಅದಾಗಿ ೨೦ ವರ್ಷಗಳಲ್ಲಿ ರಶಿಯ ಮತ್ತು ಅಮೇರಿಕ ಆಕಾಶಕ್ಕೆ ಹಾರಿಸಿದ ಉಪಗ್ರಹಗಳು ಮಿನಿಟಿಗೆ ೨೫೦೦೦ ಮೈಲಿನ ವೇಗವನ್ನು ಸಾಧಿಸಿದವು. ಇವೊತ್ತು ಅದಕ್ಕಿಂತಲೂ ಎಷ್ಟೋ ವೇಗವಾದ ಯಾನಗಳು ಸಿದ್ಧವಾಗಿವೆ. ಗಂಟೆಗೆ ೧೩ ಮೈಲಿನಿಂದ ಆರಂಭವಾದ ರೈಲುಗಳು ಕೂಡ ಈಗ ೩೦೦ ಮೈಲು ವೇಗದಲ್ಲಿ ಓಡಲಾರಂಭಿಸಿವೆ. ಇಂದು ಆಕಾಶದಲ್ಲಿ ಮನುಷ್ಯರನ್ನು ಸಾಗಿಸುವ ವಾಹನಗಳು ಸೂರ್ಯನ ಸಂಗಡ ಸ್ಪರ್ಧಿಸುತ್ತಿವೆ.

ಮನುಷ್ಯನು ಸಾಧಿಸಿದ ವಾಹನದ ವೇಗ ಬಹಳ ನಾಟಕೀಯವಾಗಿರುವುದರಿಂದ ಇದನ್ನು ಇಲ್ಲಿ ಉದಾಹರಿಸಿದ್ದೇನೆ. ಆದರೆ ಈ ಮುಕ್ಕಾಲು ಶತಮಾನದಲ್ಲಿ ಜೀವನದ ಎಲ್ಲ ರಂಗಗಳಲ್ಲಿಯೂ ಇದೇ ತರಹದ ಪ್ರಚಂಡ ಬದಲಾವಣೆಗಳಾಗಿವೆ. ಪುಸ್ತಕಗಳ ಉತ್ಪಾದನೆಯನ್ನೇ ತೆಗೆದುಕೊಳ್ಳಿ. ೧೫ನೇ ಶತಮಾನದಲ್ಲಿ ಮುದ್ರಣ ಆರಂಭವಾಯಿತು. ಅದಕ್ಕಿಂತ ಮುಂಚೆ ಇಡೀ ಯುರೋಪಿನಲ್ಲಿ ವರ್ಷಕ್ಕೆ ಒಂದು ಸಾವಿರ ಪುಸ್ತಕಗಳು ಬರುತ್ತಿದ್ದವಂತೆ. ಮುದ್ರಣ ಪ್ರಾರಂಭವಾಗಿ ೪೫೦ ವರ್ಷಗಳ ನಂತರ ೧೯೫೦ರಲ್ಲಿ ಯುರೋಪಿನಲ್ಲಿ ವರ್ಷಕ್ಕೆ ೧,೨೦,೦೦೦ ಗ್ರಂಥಗಳು ಬಂದವು. ಇಂದು ಜಗತ್ತಿನಲ್ಲೇ ಮುದ್ರಣ ಕಲೆ ಹಬ್ಬಿದೆ. ಜಗತ್ತು ಒಂದು ದಿವಸಕ್ಕೆ ೧೦೦೦ ಹೊಸಪುಸ್ತಕಗಳನ್ನು ಕಾಣುತ್ತಿದೆ.

ವಿಜ್ಞಾನಯುಗದ ಅದ್ಭುತಗಳನ್ನೆಲ್ಲ ಇಲ್ಲಿ ಒತ್ತಿ ಹೇಳುವುದು ಅಗತ್ಯವಿಲ್ಲ. ಅದು ಎಲ್ಲರಿಗೂ ಗೊತ್ತಿದ್ದ ವಿಚಾರ. ಆದರೆ ಅದು ಮಾನವ ಸಮಾಜದ ಮೇಲೆ ಮಾಡಿದ ಪರಿಣಾಮಗಳನ್ನು ಇಲ್ಲಿ ಸ್ವಲ್ಪ ವಿವರಿಸಬೇಕು. ಅದು ಹತ್ತು ಸಾವಿರ ವರ್ಷಗಳಿಂದ ಮನುಷ್ಯನಿಗೆ ರೂಢಿ ಬಿದ್ದದ್ದನ್ನೆಲ್ಲಾ ಒಂದೇ ತಲೆಮಾರಿನ ಅಂತರದಲ್ಲಿ ತಲೆಕೆಳಗು ಮಾಡಿದೆ. ವಿಜ್ಞಾನ ಯುಗದ ಒಂದು ದಾಯವೆಂದರೆ ರೋಗಗಳ ಮೇಲಿನ ಹತೋಟಿ. ಹಿಂದೆ ಜನಸಂಖ್ಯೆಯನ್ನು ಹತೋಟಿಯಲ್ಲಿಡುತ್ತಿದ್ದ ಪಿಡುಗುಗಳು ಇಂದು ಇಲ್ಲವಾಗಿವೆ. ವೇಗವಾದ ಸಾಗಾಣಿಕೆಯಿಂದ ಬರಗಾಲಗಳ ಭಯಂಕರ ಸ್ವರೂಪ ಹೋಗಿದೆ. ಯಮನ ಕೈಯಿಂದ ಹೆಚ್ಚು ಹೆಚ್ಚು ಆಯುಧಗಳನ್ನು ವೈದ್ಯರು ಕಸಿದುಕೊಂಡಿದ್ದಾರೆ. ಪರಿಣಾಮವಾಗಿ ಜಗತ್ತಿನ

ಜನಸಂಖ್ಯೆ ಅಪಾರವಾಗಿ ಹೆಚ್ಚಿಕೊಂಡಿದೆ. ಮುಂದುವರಿದ ದೇಶಗಳು ಜನಸಂಖ್ಯೆಯನ್ನು ಇಳಿಸುವುದಕ್ಕೆ ಹಾದಿ ಹುಡುಕಿವೆ. ಹಿಂದುಳಿದ ದೇಶಗಳಿಗೆ ಜನಸಂಖ್ಯೆ ಬಹಳ ದೊಡ್ಡ ತಲೆನೋವಾಗಿದೆ. ಆದರೆ ಅದರಲ್ಲಿ ನಾನು ಒತ್ತಿ ಹೇಳುತ್ತಿರುವುದು ಜನಸಂಖ್ಯೆಯ ನಿಯಂತ್ರಣ, ಮೂರು ಸಾಕು, ಎರಡು ಬೇಕು ಇತ್ಯಾದಿ ಘೋಷಣೆಗಳ ಮಾನಸಿಕ ಪರಿಣಾಮವೇನಾಗುತ್ತದೆ? "ಪತಿಮೇಕಾದಶಂ ಕೃಧಿ" ಹತ್ತು ಮಕ್ಕಳನ್ನು ಹಡೆದು ಗಂಡನನ್ನು ಹನ್ನೊಂದನೇ ಮಗುವಾಗಿ ಮಾಡು ಎಂದು ಹೇಳುವ ವೈದಿಕ ಮಂತ್ರಕ್ಕೆ ನಾವು ಒಗ್ಗಿದ್ದೆವು. ಈಗ ಒಂದೇ ತಲೆಮಾರಿನಲ್ಲಿ ಮಕ್ಕಳು ಬೇಡ ಎನ್ನುವ ಉಪದೇಶವನ್ನು ನಾವು ಕೇಳುತ್ತಿದ್ದೇವೆ. ತಂದೆ ತಾಯಿಗಳು ಮಕ್ಕಳು ಬೇಡ ಎನ್ನುತ್ತಿರುವಾಗ ಮಕ್ಕಳು ತಂದೆ ತಾಯಿಗಳಿಗೆ ಯಾಕೆ ಕೃತಜ್ಞರಾಗಿರಬೇಕು? ತಮ್ಮನ್ನು ಹುಟ್ಟಿಸಿದ ತಲೆಮಾರಿನವರು ಕಟ್ಟಿದ ಕಾಲೇಜುಗಳನ್ನು, ಕಟ್ಟಿದ ಸಮಾಜವನ್ನು ಕೆಡವಿಬಿಡಬೇಕೆಂದು ಮಕ್ಕಳಿಗೆ ಅನ್ನಿಸುವುದು ಏನು ಆಶ್ಚರ್ಯ?

ಹೆಚ್ಚುತ್ತ ಇರುವ ಜನಸಂಖ್ಯೆ ಏನಾಗುತ್ತಿದೆ? ಜಗತ್ತಿನಲ್ಲೆಲ್ಲ ಕಾಣಸುವ ಒಂದು ಪ್ರವೃತ್ತಿಯೆಂದರೆ, ಹಳ್ಳಿಗಳಿಂದ ನಗರಗಳಿಗೆ ಜನರು ಧಾವಿಸುತ್ತಿರುವುದು. ನಗರಗಳು ಸಾವಿರಾರು ವರ್ಷಗಳಿಂದ ಇವೆ. ಆದರೆ ದೊಡ್ಡದೊಡ್ಡ ಸಾಮ್ರಾಜ್ಯಗಳ ರಾಜಧಾನಿಗಳಲ್ಲಿ ಕೂಡ ಕೆಲ ಸಾವಿರ ಅಥವಾ ಒಂದು ಲಕ್ಷಕ್ಕೆ ಸಮೀಪ ಜನಸಂಖ್ಯೆ ಇದ್ದಿರಬಹುದು. ೧೮೫೦ ರಲ್ಲಿ ಜಗತ್ತಿನ ನಾಲ್ಕು ಪಟ್ಟಣಗಳಲ್ಲಿ ಮಾತ್ರ ೧೦ ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇತ್ತು. ೧೯೬೦ರಲ್ಲಿ ಅಂಥಾ ಪಟ್ಟಣಗಳ ಸಂಖ್ಯೆ ೧೪೧ಕ್ಕೆ ಏರಿತ್ತು. ಇನ್ನು ಹನ್ನೊಂದೇ ವರ್ಷಗಳಲ್ಲಿ ನಗರಗಳ ಜನಸಂಖ್ಯೆ ಇಂದಿಗಿಂತ ಇಮ್ಮಡಿಯಾಗಲಿದೆ.

ನಗರವಾಸ ಮನುಷ್ಯನ ಮೇಲೆ ತುಂಬಾ ಪ್ರಭಾವಗಳನ್ನು ಬೀರುತ್ತದೆ. ಅಲ್ಲಿ ಯಾರಿಗೂ ಯಾವ ಸಂಬಂಧವಿಲ್ಲ. ಯಾಕಂದರೆ ಅಲ್ಲಿನ ಜನಸಂಖ್ಯೆಯೇ ಅಪರಿಚಿತರ ಒಂದು ಮಹಾರಾಶಿ. ಮುಂಬಯಿಗೆ ಹೋದರೆ ನಮಗೆ ಇದರ ಅನುಭವ ಬರುತ್ತದೆ. ಅಲ್ಲಿ ಮನುಷ್ಯ ಮಹಾ ಜನಸಾಗರದ ಮಧ್ಯದಲ್ಲಿ ಏಕಾಕಿಯಾಗುತ್ತಾನೆ. ಅವನ ಮಾನವ ಸಂಪರ್ಕಗಳೆಲ್ಲ ವ್ಯವಹಾರದ ಮಾತಾಗುತ್ತವೆ. ಅಲ್ಲಿ ಆತ್ಮೀಯತೆ ಬೆಳೆಯುವದಿಲ್ಲ. ಅವನು ಕಲ್ಮನಸಿನವನಾಗುತ್ತಾನೆ. ಆದರೆ ಮನುಷ್ಯನ ಮನಸ್ಸು ಆತ್ಮೀಯತೆಗೆ ಕಾತರಿಸುತ್ತ ಇರುತ್ತದೆ. ಬೇರು ಕಿತ್ತವನಂತೆ ಅವನಿಗೆ ಅನಿಸುತ್ತದೆ.

ಆಧುನಿಕ ಯಂತ್ರ ಸಂಸ್ಕೃತಿ ತಂದೊಡ್ಡಿದ ಈ ಸಮಸ್ಯೆಯೇ ಇಂದಿನ ಸಾಹಿತ್ಯದ ಮುಖ್ಯ ವಸ್ತುವಾಗಿದೆ. ಈ ಬೇರುಕಿತ್ತ ಮನುಷ್ಯನ ಆರ್ತನಾದವೇ ನವ್ಯಕಾವ್ಯದ ಜೀವಾಳವಾಗಿದೆ. ಅದ್ಭುತ ವೇಗದಿಂದ ಓಡುತ್ತಿರುವ ಈ ಪ್ರಪಂಚದಲ್ಲಿ ಉಸಿರುಗಟ್ಟಿದಂತಾಗಿ ಮನುಷ್ಯ ಪೇಚಾಡುತ್ತಿದ್ದಾನೆ. ಈಚೆಗೆ ಪಾಶ್ಚಾತ್ಯ ದೇಶಗಳಲ್ಲಿ STOP THE WORLD–I WANT TO GET OFF ಅಂತ ಒಂದು ಗೀತನಾಟಕ ಪ್ರದರ್ಶನವಾಯಿತು. ಅದು ಬಹು ಜನಪ್ರಿಯವಾಯಿತು. ಅದು ಜಗತ್ತಿನ ಅನೇಕ ಜನರ ಭಾವನೆಯನ್ನೇ ಪ್ರತಿಬಿಂಬಿಸುತ್ತದೆ.

ಇಂದು ನಮ್ಮ ದೇಶದಲ್ಲಿ ಕಾಣುವ ಕೋಲಾಹಲಗಳಲ್ಲಿ ಹೆಚ್ಚಿನವು ಈ ಉಸಿರು ಕಟ್ಟಿಸುವ ಬದಲಾವಣೆಗಳ ಫಲವಾಗಿವೆ. ನಮ್ಮ ನಗರಗಳಲ್ಲಿ ವಿದ್ಯಾರ್ಥಿಗಳು ಹೀಗೇಕೆ ಶಿಸ್ತುಗೆಟ್ಟು ವರ್ತಿಸುತ್ತಾರೆ? ನನ್ನ ಅಭಿಪ್ರಾಯದಲ್ಲಿ ದೊಡ್ಡ ಪ್ರಮಾಣದಲ್ಲಿ ಗ್ರಾಮಾಂತರಗಳಿಂದ ಬಂದಿರುವ ವಿದ್ಯಾರ್ಥಿಗಳಿಗೆ ಬೇರು ಕಿತ್ತಂತೆ ಅನಿಸುತ್ತಿರುವುದು ಇದಕ್ಕೆ ಒಂದು ಕಾರಣ. ಅವರಿಗೆ ಈ ನಗರ ವಾತಾವರಣದಲ್ಲಿ ದಿಕ್ಕು ತಪ್ಪಿದಂತಾಗುತ್ತದೆ. ಅವರಿಗೆ ಯಾವುದೂ ಅರ್ಥವಾಗುವುದಿಲ್ಲ. ಅವರು ಬಂದ ಪರಿಸರದಲ್ಲಿ ಮಾನವೀಯ ಸಂಬಂಧಗಳು ಬೇರೆ ವಿಧವಾಗಿದ್ದವು. ನಗರದ ಜೀವನದಲ್ಲಿ ಒಂದು ಮುಖ್ಯ ಅಂಶವೆಂದರೆ ಪ್ರತಿಯೊಬ್ಬನೂ ಶಕ್ತಿಮೀರಿ ದುಡಿಯಬೇಕು. ಅದು ವಿರಾಮವಾಗಿದ್ದ ಗ್ರಾಮಾಂತರ ಪರಿಸರದಲ್ಲಿ ಬೆಳೆದವರಿಗೆ ಬಹಳ ಕಷ್ಟವಾಗಿ ಕಾಣುತ್ತದೆ. ಅವರು ದಂಗೆಯೇಳುತ್ತಾರೆ. ಅವರಿಗೆ ದಾರಿ ತೋರಿಸುವುದಕ್ಕೆ ನೇಮಕವಾದವರು ಕೂಡ ಸ್ವತಃ ಗ್ರಾಮ ಪರಿಸರಕ್ಕೆ ಸೇರಿದವರೇ. ಅವರೂ ಈ ಉಸಿರುಗಟ್ಟಿಸುವ ನಗರಗಳಲ್ಲಿ ಕಣ್ಣು ಕಾಣಿಸದೆ ತೊಳಲುವವರೇ. ತಕ್ಕ ಮಾರ್ಗದರ್ಶನ ಮಾಡುವುದಕ್ಕೆ ಅವರಿಂದಲೂ ಆಗುವುದಿಲ್ಲ.

Then why don't you get off ಎಂದು ನೀವು ನನಗೆ ಕೇಳುವಿರಿ. The point is I can't get off. ನಾವು ಸಿಂಹವನ್ನು ಏರಿದ್ದೇವೆ. ನಮಗೆ ಇಳಿಯಲು ಆಗುವುದಿಲ್ಲ. ಈ ಯಂತ್ರ ತಂತ್ರಯುಗವನ್ನು ಹಿಂತೆಗೆದುಕೊಳ್ಳುವುದು ಸಾಧ್ಯವಿಲ್ಲ. ಈ ಜಗತ್ತಿನ ಗಡಿಯಾರ ಹಿಂದಕ್ಕೆ ನಡೆಯುವುದಿಲ್ಲ. ನಾವು ಈ ಯುಗದಲ್ಲಿ ನಮ್ಮ ಕೈ ತೊಡಕಿಸಿಕೊಂಡಿದ್ದೇವೆ. ಇಲ್ಲಿಂದ ನಾವು ಮುಂದೆ ಹೋಗಬೇಕೇ ಹೊರತು ಹಿಂದಲ್ಲ.

ಹಾಗೆ ಕೇಳಿದರೆ ಈ ಯಂತ್ರಯುಗದಲ್ಲಿ ಅನೇಕ ಸಮಸ್ಯೆಗಳಿದ್ದ ಹಾಗೆ, ಅನೇಕ ಹಿತಕರವಾದ ಸಂಗತಿಗಳು ಇವೆ. ಈ ಕ್ರಾಂತಿ ಮನುಷ್ಯನನ್ನು ಅನಾದಿಯಿಂದ ಬಾಧಿಸುತ್ತ ಇದ್ದ ಬಡತನದಿಂದ ಮುಕ್ತಮಾಡಿದೆ; ಮತ್ತು ಮುಕ್ತ ಮಾಡುವ ಆಶೆಯನ್ನು ತೋರಿಸಿದೆ. ಜನಸಂಖ್ಯೆ ಹೆಚ್ಚಾದರೂ ಜನರ ಹೊಟ್ಟೆ ತುಂಬುವ ದಾರಿಯನ್ನು ತೋರಿಸಿ ಕೊಟ್ಟಿದೆ. ಮನುಷ್ಯ ಬರೀ ಹೊಟ್ಟೆತುಂಬಿಸಿಕೊಳ್ಳುವುದಕ್ಕೆ ದಿನವಿಡೀ ಶ್ರಮ ಮಾಡಬೇಕಾಗಿದ್ದ ಅವಸ್ಥೆಯನ್ನು ಅದು ನೀಗಿಸಿದೆ.

ಹೊಟ್ಟೆ ಬಟ್ಟೆಗಳಿಗೆ ಬೇಕಾಗಿ ಅವನು ಕೆಲವೇ ಗಂಟೆಗಳ ಶ್ರಮ ಮಾಡಿದರೆ ಸಾಕು. ಮನುಷ್ಯನು ತನ್ನ ಮನಸ್ಸನ್ನು ಬೆಳಸಿಕೊಳ್ಳುವುದಕ್ಕೆ ಅದು ಅವಕಾಶ ಮಾಡಿಕೊಟ್ಟಿದೆ. ಇಂದು ಎಂದಿಗಿಂತಲೂ ಹೆಚ್ಚು ಜನರು ಎಂದಿಗಿಂತಲೂ ಹೆಚ್ಚಾಗಿ ವಿದ್ಯೆ ಪಡೆಯುತ್ತಿದ್ದಾರೆ. ಆಧುನಿಕ ಯುಗದಲ್ಲಿ ಮನುಷ್ಯನಿಗೆ ಯಂತ್ರಗಳು ಅವನ ಕೈಕಾಲುಗಳ ಕೆಲಸವನ್ನು ಮಾತ್ರ ನೀಗಿಸಿಲ್ಲ. ಅದು ಮನುಷ್ಯನ ಮಿದುಳಿನ ಅನೇಕ ಶ್ರಮದ ಕಾರ್ಯಗಳನ್ನು ಯಂತ್ರಗಳಿಂದ ಮಾಡಿಸತೊಡಗಿದೆ. ಮನುಷ್ಯ ಮಹತ್ವಾಕಾಂಕ್ಷೆಯುಳ್ಳ ಪ್ರಾಣಿ. ಅವನು ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವುದಕ್ಕೆ ಈಗ ಎಲ್ಲ ಸಲಕರಣೆಗಳೂ ಲಭ್ಯವಾಗಿವೆ. ತನ್ನ ಸಮಸ್ಯೆಗಳನ್ನು

ತಾನು ತಿಳಿದುಕೊಂಡು ಅವನು ಅವುಗಳನ್ನು ಎದುರಿಸಿದರೆ ಅವನಿಗೆ ಬೇರೆಯೇ ಭವಿಷ್ಯ ಇದೆ ಎನ್ನಿಸುತ್ತದೆ. ಅವನ ಪ್ರಗತಿಗೆ Sky is the limit.

ಭಾರತದಲ್ಲಿರುವ ನಾವು ಇಂದು ಈ ನವೀನ ಯುಗಕ್ಕೆ ಅಣಿಯಾಗಬೇಕಾಗಿದೆ. ನಮ್ಮ ಭವಿಷ್ಯವೆಲ್ಲ ನಾವು ಜಗತ್ತಿನಲ್ಲಾಗುತ್ತಿರುವ ಈ ಪ್ರಚಂಡ ಬದಲಾವಣೆಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸುತ್ತೇವೆ ಎನ್ನುವುದನ್ನೇ ಅವಲಂಬಿಸಿದೆ. ನಾವು ಯಂತ್ರ ಯುಗದಲ್ಲಿ ಇನ್ನೂ ಹಿಂದುಳಿದಿದ್ದೇವೆ. ಈ ಹಿಂದುಳಿಕೆಯಿಂದ ನಾವು ನಮ್ಮನ್ನು ವಿಸ್ತರಿಸಿಕೊಳ್ಳಬೇಕಾದರೆ ನಾವು ನಮ್ಮ ಮನೋವೃತ್ತಿಗಳನ್ನು ಬದಲು ಮಾಡಿಕೊಳ್ಳಬೇಕಾಗುತ್ತದೆ. ದುರ್ದೈವದಿಂದ ನಾವು ಇನ್ನೂ ಕೃಷಿಯುಗದ ಮನೋವೃತ್ತಿಯಲ್ಲಿಯೇ ಇದ್ದೇವೆ.

ನಮ್ಮನ್ನು ಎದುರಿಸಿರುವ ಈ ಉತ್ಪಾತದ ಮುಂದೆ ನಾವು ಅನುಸರಿಸುತ್ತಿರುವ ಕೆಲವೊಂದು ರೀತಿಗಳು ನಿಜವಾಗಿ ಆಶ್ಚರ್ಯವನ್ನುಂಟುಮಾಡುತ್ತದೆ. ಇಂದಿನ ವಿಜ್ಞಾನಯುಗದಲ್ಲಿ ನಮ್ಮ ಭೌತಿಕ ಪ್ರಗತಿಗೆ ಮನುಷ್ಯಯತ್ನ ಅತ್ಯವಶ್ಯವಾದದ್ದು. ಆದರೆ ಎಲ್ಲಾ ಕಡೆಗೂ ಅಂಥ ಧಾರ್ಮಿಕ ಭಾವನೆಗಳು ಹೊಸದಾಗಿ ನಮಗೆ ಕಾಣಿಸುತ್ತಿವೆ. ಹಿಂದೆಂದೂ ಇಲ್ಲದಷ್ಟು ಸಾಧು ಸಂತರು ಪವಾಡ ಪುರುಷರು ನಮ್ಮ ದೇಶದಲ್ಲಿ ಈಗ ತಲೆಯೆತ್ತಿದ್ದಾರೆ. ಅವರು ತಮ್ಮ ಪವಾಡಗಳನ್ನು ಯಾವ ವಿಧದ ಪರೀಕ್ಷೆಗೂ ಒಳಪಡಿಸಲು ಸಿದ್ಧರಿಲ್ಲ. ಇವರ ಸುತ್ತ ಸಾಮಾನ್ಯ ಜನರು ಮುಕುರುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಸುಶಿಕ್ಷಿತರೆನಿಸಿಕೊಳ್ಳುವವರು ದೊಡ್ಡ ದೊಡ್ಡ ಅಧಿಕಾರಿಗಳು ಬಹಿರಂಗವಾಗಿ ಅವರ ಭಕ್ತರು ಮಾತ್ರವಲ್ಲ , ಬೆಂಬಲಿಗರಾಗಿ ನಿಲ್ಲುತ್ತಿರುವುದು ಆಶ್ಚರ್ಯವೇ ಸೈ. ನಾನು ನಾಸ್ತಿಕನಲ್ಲ; ಧರ್ಮವಿರೋಧಿಯೂ ಅಲ್ಲ. ಆದರೆ ನಮ್ಮ ದೇಶದಲ್ಲಿ ಯಾರು ಮಾರ್ಗದರ್ಶಕರಾಗಬೇಕೋ ಅವರೇ ಅಂಧಶ್ರದ್ಧೆಗೆ ಪ್ರೋತ್ಸಾಹ ಕೊಟ್ಟರೆ ನಮ್ಮ ಭವಿಷ್ಯವೇನು ಎಂಬ ಶಂಕೆ ನನ್ನನ್ನು ಕಾಡುತ್ತದೆ. ಅತ್ಯಾಶ್ಚರ್ಯ ವಿಷಯವೆಂದರೆ ಈ ವಿಚಿತ್ರ ಶ್ರದ್ಧೆಗೆ ಯಾವ ಬೌದ್ಧಿಕ ಕಟ್ಟುಪಾಡೂ ಇಲ್ಲ. ನಾವು ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ, ಕ್ರಿಸ್ತ, ಮುಸ್ಲಿಂ ಇವೆಲ್ಲ ತತ್ವಜ್ಞಾನಗಳನ್ನು ಬೋಧಿಸುವ ಪವಾಡ ಪುರುಷರಿಗೂ ಏಕಕಾಲದಲ್ಲಿ ನಡೆದುಕೊಳ್ಳುತ್ತೇವೆ. ಇದನ್ನೇ ನಾವು ಸರ್ವಧರ್ಮ ಸಮನ್ವಯ ಅಂದರೆ ನಾನು ಯಾವುದನ್ನೂ ನಂಬುವುದಿಲ್ಲ. ಯಾರಿಂದ ಏನೇನು ಸಿಗುತ್ತದೋ ಅದೆಲ್ಲ ಲಾಭ ನನಗೆ ಸಿಗಲಿ ಎಂಬ ವ್ಯವಹಾರಜ್ಞಾನವೇ ಏನು? ನಾವು ಈ ಜಗತ್ತಿನ ಕಷ್ಟಗಳಿಗೆ ಹೆದರಿ ತಿರುಗಾ ತಾಯಿಯ ಗರ್ಭವನ್ನು ಸೇರಲಿಕ್ಕೆ ಹೊರಟ ಹಾಗೆ ಕಾಣುವುದಿಲ್ಲವೆ?

ಇಂದಿನ ಔದ್ಯೋಗಿಕ ಯುಗಕ್ಕೆ ಪಾಶ್ಚಾತ್ಯ ದೇಶಗಳು ನಾಯಕತ್ವ ವಹಿಸಿದವು. ಇದು ಆಕಸ್ಮಿಕವಲ್ಲ. ಈ ಆಧುನಿಕತೆಗೆ ಆಧಾರವಾದದ್ದು ವೈಯಕ್ತಿಕ ಪ್ರಯತ್ನ. ವೈಯಕ್ತಿಕ ಸಾಹಸ. ಪಾಶ್ಚಾತ್ಯ ಸಮಾಜ ರಚನೆ ವೈಯಕ್ತಿಕ ಸಾಹಸಕ್ಕೆ ಅನುಕೂಲವಾಗಿತ್ತು. ಅಲ್ಲಿ ಏಕತ್ರ ಕುಟುಂಬ ಪದ್ಧತಿ ಇಲ್ಲ. ಮಕ್ಕಳ ವಿಷಯದಲ್ಲಿ ಹಿರಿಯರ ಜವಾಬ್ದಾರಿ ಅಲ್ಲಿ ಮಿತವಾಗಿದೆ. ಇಂದಿನ ಸಮೃದ್ಧಿಯುಗದಲ್ಲಿ ಕೂಡ ಅವರು ೧೫ ವಯಸ್ಸಿನ ನಂತರ ಮಕ್ಕಳು ತಮ್ಮ ಅದೃಷ್ಟವನ್ನು

ತಾವೇ ಕಂಡುಕೊಳ್ಳಲು ಬಿಡುತ್ತಾರೆ. ಆ ವಯಸ್ಸಿನಲ್ಲಿ ಹುಡುಗ ಅದೃಷ್ಟದ ಬೆನ್ನು ಹತ್ತಿ ಸಾವಿರಾರು ಮೈಲು ದೂರ ಹೋಗುತ್ತಾನೆ. ಅಲ್ಲೇ ದುಡಿದು ಏನನ್ನಾದರೂ ಸಾಧಿಸುತ್ತಾನೆ. ಅಲ್ಲೇ ತನಗೆ ಬೇಕಾದವಳನ್ನು ಲಗ್ನವಾಗುತ್ತಾನೆ.

ಇಲ್ಲಿ ನಾವು ಹಾಗಲ್ಲ. ಮಕ್ಕಳನ್ನು ಹೊತ್ತು ಹೆತ್ತು ಸಾಕಿ ಬೆಳೆಸುವುದು ಮಾತ್ರವಲ್ಲ, ಅವರಿಗೆ ವಿದ್ಯೆಕೊಡುವುದು ಮಾತ್ರವಲ್ಲ ಅವರಿಗೆ ಹೆಣ್ಣು ಹುಡುಕಿ ಲಗ್ನ ಮಾಡಿಸಿ ಬದುಕಿರುವವರೆಗೂ ಅವರಿಗೆ ಮಾರ್ಗದರ್ಶನ ಮಾಡಬೇಕು. ಈ ಜವಾಬ್ದಾರಿಯನ್ನು ನಾವು ನಮ್ಮ ಕರ್ತವ್ಯವೆಂದು ವಹಿಸಿಕೊಳ್ಳುತ್ತೇವೆ. ಆದರೆ ಇದು ನಮ್ಮ ಕಿರಿಯರಲ್ಲಿ ನಿರ್ಣಯ-ಶಕ್ತಿಯನ್ನು ಪ್ರೇರಿಸುವುದಕ್ಕೆ ಏನೂ ನೆರವಾಗುವದಿಲ್ಲ. ರಿಸ್ಕ್ ತೆಗೆದುಕೊಳ್ಳುವ ಜವಾಬ್ದಾರಿಯನ್ನು ಇನ್ನೊಬ್ಬರ ಮೇಲೆ ಹೊರಿಸುವ ತರುಣ ಸ್ವತಂತ್ರ ಸಾಹಸವನ್ನು ಮಾಡುವುದು ಹೇಗೆ? ಈ ಸಾಮಾಜಿಕ ಮನೋವೃತ್ತಿಯಿಂದ ನಮ್ಮ ದೇಶದಲ್ಲಿ ಮುದುಕರ ರಾಜ್ಯಭಾರ ಕಾಯಂ ಆಗುತ್ತದೆ. ಮುದುಕರಿಗೆ ಅನುಭವ ಹೆಚ್ಚು ಇದೆ ಎಂದು ಒಪ್ಪೋಣ. ಆದರೆ ಅವರು ಇದ್ದ ಜಗತ್ತೇ ಬೇರೆ, ಇಂದಿನ ತರುಣರು ಇರುವ ಜಗತ್ತೇ ಬೇರೆ. ಮುದುಕರ ಅನುಭವ ಈಗಿನ ಕಾಲಕ್ಕೆ ಕಿಡಿಕಿಯಾಗದೆ ಗೋಡೆಯಾಗುವ ಭಯ ಹೆಚ್ಚಾಗಿದೆ. ನಮ್ಮ ತರುಣರನ್ನು ನಾವು ಸ್ವಾವಲಂಬನೆಗೆ ಪ್ರೋತ್ಸಾಹಿಸಬೇಕು. ಈಸು ಕಲಿಯಲು ನೀರಿಗೆ ಇಳಿಯದೆ ಸಾಧ್ಯವಿಲ್ಲ. ನಾವು ತರುಣರಿಗೆ ಮಾರ್ಗದರ್ಶನ ಮಾಡಿ ಅವರನ್ನು ಅಂಕೆಯಲ್ಲಿ ಇಟ್ಟುಕೊಳ್ಳುವುದರಲ್ಲಿ ಅವರ ಹಿತದೃಷ್ಟಿ ಎಷ್ಟು, ನಮ್ಮ ಅಹಂಕಾರ ಎಷ್ಟು ಎಂಬುದನ್ನು ನಾವು ಯೋಚಿಸಬೇಕು.

ಆಧುನಿಕ ಜಗತ್ತಿನ ಪ್ರಬಲ ಪ್ರವಾಹದಲ್ಲಿ ಸಿಕ್ಕಿಕೊಂಡು ನಾವು ಪರಿಣಾಮಗಳನ್ನು ಯೋಚಿಸದೆ ಎಷ್ಟೋ ಕ್ರಮಗಳನ್ನು ಕೈಕೊಳ್ಳುತ್ತೇವೆ. ನಮ್ಮ ಹೆಣ್ಣು ಮಕ್ಕಳನ್ನು ಕಾಲೇಜುಗಳಿಗೆ ಕಳಿಸುತ್ತೇವೆ. ಯಾಕೆಂದರೆ ಎಲ್ಲರೂ ಕಳಿಸುತ್ತಾರೆ. ಅದರಿಂದ ನಮ್ಮ ಪ್ರತಿಷ್ಠೆ ಹೆಚ್ಚುತ್ತದೆ. ಕಾಲೇಜುಗಳಲ್ಲಿ ಅವರಿಗೆ ಬೇರೆ ಪುರುಷರ ಸಂಪರ್ಕ ಬರುತ್ತದೆ. ನಾವೇನೂ ಇಡೀ ದಿನ ಅವರ ಮೇಲೆ ಕಣ್ಣಿಟ್ಟಿರಲಾಗುವುದಿಲ್ಲ. ವಯಸ್ಸಿನ ಧರ್ಮದಿಂದ ಯಾವನಾದರೊಬ್ಬನ ಸಂಗಡ ಆತ್ಮೀಯತೆ ಬೆಳೆಯುತ್ತದೆ. ಇಂಥ ಪ್ರಸಂಗಗಳನ್ನು ನಿರ್ವಹಿಸುವುದಕ್ಕೆ ನಮ್ಮ ಹಿಂದೂ ಸಮಾಜದ ರಚನೆಯಲ್ಲಿ ಯಾವ ಸಾಧನವೂ ಇಲ್ಲ. ಇಂಥ ಆತ್ಮೀಯತೆಯನ್ನು ಮುರಿಯುವುದಕ್ಕೆ ನಾವು ಆಮೇಲೆ ಸಾಧ್ಯವಿದ್ದದ್ದನ್ನೆಲ್ಲ ಮಾಡುತ್ತೇವೆ.

ಇಂದಿನ ತರುಣ ತರುಣಿಯರು ನೋಡುವ ಸಿನೆಮಾಗಳು ಅವರು ಓದುವ ಪುಸ್ತಕಗಳು ಅವರು ಮಾಡುವ ಫ್ಯಾಶನ್ನುಗಳು ಇವೆಲ್ಲವೂ ಅವರಿಗೆ ಕಾಮ ವಿಷಯದಲ್ಲಿ ಉತ್ತೇಜನ ಕೊಡುವವುಗಳೇ ಆಗಿವೆ. ಆದರೆ ಇದರಿಂದ ಅವರ ಮನಸ್ಸಿನ ಮೇಲೆ ಆಗುವ ಪರಿಣಾಮಗಳನ್ನು ಸಮಾಧಾನಗೊಳಿಸಲು ನಮ್ಮ ಸಮಾಜದಲ್ಲಿ ಏನು ಸಾಧನವಿದೆ? ಹತ್ತಿರದ ಸಂಬಂಧಿಕರಲ್ಲಿ ಕೂಡ ನಾವು ಗಂಡು ಹೆಣ್ಣುಗಳನ್ನು ಪ್ರತ್ಯೇಕ ಇಡುತ್ತೇವೆ. ಶಾಲೆ ಕಾಲೇಜುಗಳಲ್ಲಿ ಅವರಿಗೆ ಪ್ರತ್ಯೇಕ ಸೀಟು ಏರ್ಪಡಿಸುತ್ತೇವೆ.

ಬಸ್ಸುಗಳಲ್ಲಿ ಹೆಂಗಸರಿಗೆ ರಿಜರ್ವ್ ಸೀಟುಗಳಿವೆ. ಕಾಲೇಜು ಹುಡುಗರು ಹುಡುಗಿಯರ ಮೇಲೆ ಕಾಗದದ ಉಂಡೆಗಳನ್ನು ಒಗೆದರೆ, ಬೀದಿಗಳಲ್ಲಿ ಬಸ್ಸುಗಳಲ್ಲಿ ಅವರನ್ನು ಛೇಡಿಸಿದರೆ ಏನು ಆಶ್ಚರ್ಯ? ನಾವು ಎಲ್ಲಾ ಕಡೆ ಸ್ತ್ರೀ ಪುರುಷರಿಗೆ ಮಿಶ್ರ ಆಸನ ವ್ಯವಸ್ಥೆ ಮಾಡಿದೆವೆಂದು ತಿಳಿದುಕೊಳ್ಳಿ. ನಿಜವಾಗಿ ಇದರಿಂದ ಏನಾದರೂ ಕೆಡುಕಾಗುತ್ತದೆಯೆ? ಮುಂಬಯಿಯಲ್ಲಿ ಹೀಗೆ ಇಲ್ಲವೇ? ಆಧುನಿಕ ಸಮಾಜದಲ್ಲಿ ನಮ್ಮ ಸ್ತ್ರೀಯನ್ನು ಇಷ್ಟು ಬಂದೋಬಸ್ತಿನಲ್ಲಿ ನಾವು ಇಡಬೇಕೆ? ಈ ಅತಿಯಾದ ಬಂದೋಬಸ್ತು ನಮ್ಮ ಉಳಿದೆಲ್ಲ ಚಟುವಟಿಕೆಗಳ ಮೇಲೆ ಅದೇ ತರಹದ ಬಂದೋಬಸ್ತನ್ನು ತರುವುದಿಲ್ಲವೆ?

ನಮ್ಮ ದೇಶದಲ್ಲಿ ಸಂಯುಕ್ತ ಕುಟುಂಬ ವ್ಯವಸ್ಥೆ ಹಾಳಾಗಿದೆ ಅಂತ ನಾವೆಲ್ಲ ಹೇಳುತ್ತೇವೆ. ಇದು ಎಷ್ಟು ಸತ್ಯ ಅಂತ ನನಗೆ ಸಂಶಯವಿದೆ. ನಾವು ಬೇರೆ ಬೇರೆ ಮನೆಗಳಲ್ಲಿ ವಾಸಿಸುತ್ತೇವೆ. ಆದರೆ ಒಂದೇ ಬಿಗಿಯಾದ ಕುಟುಂಬದ ಕಟ್ಟು ದೂರದವರೆಗೆ ಹಬ್ಬಿರುತ್ತದೆ. ದೂರದ ಸಂಬಂಧಿಕರಿಗೂ ನಾವು ಪ್ರತಿಯೊಂದರಲ್ಲಿ ಸಹಾಯ ಮಾಡಬೇಕು. ಅವರಿಗೆ ನೌಕರಿ ಕೊಡಿಸುವುದಕ್ಕೆ ವಶೀಲಿ ಹಚ್ಚಬೇಕು. ಅವರು ಲಂಚದಲ್ಲಿ ಸಿಕ್ಕಿದರೆ ಬಿಡಿಸಬೇಕು. ಇದು ನಮ್ಮ ಕರ್ತವ್ಯ ಅಂತ ನಾವೂ ಅವರೂ ನಂಬಿರುವಾಗ ವಶೀಲಿ ವಿರಹಿತವಾದ ಹೊಸ ಸಮಾಜ ಕಟ್ಟುವುದು ಹೇಗೆ ಸಾಧ್ಯ? ಪ್ರತಿಯೊಬ್ಬರಿಗೂ ಅವರವರ ಯೋಗ್ಯತೆಗೆ ಅನುಸಾರವಾಗಿ ಕೆಲಸ ಸಿಕ್ಕಿ ಅದನ್ನು ಮಾಡಿದರೇನೇ ಸಮಾಜಕ್ಕೆ ಪರಮಾವಧಿ ಪ್ರಯೋಜನ ಸಿಕ್ಕಬಲ್ಲದು. ಪಾಶ್ಚಾತ್ಯ ದೇಶಗಳಲ್ಲಿ ಬಹುಮಟ್ಟಿಗೆ ಹೀಗಿದೆ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ದೇಶದಲ್ಲಿ ಸ್ವಾರ್ಥದಿಂದಾಗಿ ಎಷ್ಟು ಲಂಚ ವಂಚನೆ ವಶೀಲಿ ನಡೆಯುತ್ತದೋ ಅದಕ್ಕಿಂತ ಹೆಚ್ಚಾಗಿ ಈ ವಿಶಾಲವಾದ ಸಂಯುಕ್ತ ಕುಟುಂಬ ಭಾವನೆಯಿಂದ ಅನ್ಯಾಯಗಳು ಆಗುತ್ತವೆ ಅಂತ ನನಗೆ ತೋರುತ್ತದೆ.

ಮಹನೀಯರೆ, ಆಧುನಿಕ ಜೀವನದ ಪರಿಸರದಲ್ಲಿ ನಮ್ಮ ಪ್ರಗತಿಗೆ ಆತಂಕವಾದ ಇನ್ನೂ ಅನೇಕ ಸಂಗತಿಗಳನ್ನು ಹೇಳಲು ಸಾಧ್ಯವಿದೆ. ಪ್ರತಿಯೊಬ್ಬರೂ ನಮ್ಮ ಜಾತಿ ಪದ್ಧತಿಯನ್ನು ಖಂಡಿಸುತ್ತಾರೆ. ಆದರೆ ಯಾರೂ ತಮ್ಮ ಜಾತಿಯನ್ನು ಬಿಡುವುದಕ್ಕೆ ತಯಾರಿಲ್ಲ. ನಮ್ಮ ಜಾತಿ ಪದ್ಧತಿ ಕೃಷಿ ಪ್ರಧಾನವಾದ ಸಮಾಜದ ಒಂದು ಮುಖ. ಅದು ತನ್ನ ಕಾಲದಲ್ಲಿ ತನ್ನ ಕೆಲಸಮಾಡಿದೆ. ಅದರ ಉದ್ದೇಶ ಮನುಷ್ಯನ ಸುಖ ಮತ್ತು ಶಾಂತಿ. ಪ್ರತಿಯೊಬ್ಬನಿಗೂ ಹುಟ್ಟಿದ ಕೂಡಲೆ ಅದು ನಿಶ್ಚಿತ ಸ್ಥಾನವನ್ನು ಕೊಡುತ್ತದೆ. ಅದರಲ್ಲಿ ಸ್ಪರ್ಧೆಗೆ ಅವಕಾಶ ಕಡಿಮೆ. ಆದ್ದರಿಂದ ಚಿಂತೆಗೂ ಅದರಲ್ಲಿ ಹೆಚ್ಚು ಅವಶ್ಯಕತೆ ಇಲ್ಲ. ಆದ್ದರಿಂದ ಅದು ಸುಖ ಕೊಡುತ್ತದೆ. ಆದರೆ ಅದರಿಂದ ನಾವು ಪ್ರಗತಿಯನ್ನು ನಿರೀಕ್ಷಿಸುವುದು ತಪ್ಪು. ಮುಕ್ತ ನಿರ್ದಯ ಸ್ಪರ್ಧೆಯಿಂದ ಪ್ರಗತಿ ಬರುತ್ತದೆ. ನಮಗೆ ಸುಖ ಶಾಂತಿಗಳೇ ಬೇಕು. ಚಿಂತೆ ಅನಿಶ್ಚಿತತೆ ಬೇಡ ಎಂದಿದ್ದರೆ ಈವೊತ್ತಿಗೂ ಜಾತಿ ಪದ್ಧತಿಯೇ ಒಳ್ಳೇದು.

ನಾನು ಇಲ್ಲಿ ಹೇಳಿದ ಅನೇಕ ಸಂಗತಿಗಳು ನಮ್ಮ ಹಿಂದೂ ಸಂಸ್ಕೃತಿಗೆ ವಿರುದ್ಧವಾದವುಗಳು ಅಂತ ತೋರಬಹುದು. ಆದರೆ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳ

ಒತ್ತಡವನ್ನು ಯಾರಿಗೂ ತಡೆಯುವುದಕ್ಕೆ ಸಾಧ್ಯವಿಲ್ಲ. ಅದು ನಮ್ಮ ಸಂಸ್ಕೃತಿ ಎಷ್ಟು ಪುರಾತನವಾದದ್ದು ಅಂತ ನೋಡುವುದಿಲ್ಲ; ಇಂದಿನ ಪರಿಸ್ಥಿತಿಗೆ ಅದು ಎಷ್ಟು ಹೊಂದಿಕೊಳ್ಳುತ್ತದೆ ಅಂತ ನೋಡುತ್ತದೆ. ನಮ್ಮ ಅನೇಕ ಮನೋವೃತ್ತಿಗಳು ಈಗಿನಂತೆ ಉಳಿದರೆ ನಾವು ಹಿಂದೆ ಬೀಳುವೆವು. ಕೃಷಿಕ್ರಾಂತಿಯಾದಾಗ ಹಿಂದುಳಿದ ಗುಡ್ಡಗಾಡು ಜನಾಂಗಗಳ ಗತಿ ನಮಗೂ ಬಂದೀತು.

ಆಧುನಿಕ ವಿಜ್ಞಾನದ ಪ್ರಪಂಚ ಎಷ್ಟು ಅಪಾಯದಿಂದ ಕೂಡಿದೆ ಎಂದು ನಾನು ಮೊದಲೇ ಹೇಳಿದ್ದೇನೆ. ಅದರ ಉಸಾಬರಿಯೇ ಬೇಡ ಎಂದು ನನಗೆ ಅನಿಸಬಹುದು. ಆದರೆ ಅದು ಸಾಧ್ಯವಿಲ್ಲ. ಮನುಷ್ಯನಿಗೆ ಸಾವಿರಾರು ವರ್ಷಗಳಿಂದ ಆದ ಅಭ್ಯಾಸವನ್ನು ಒಂದೇ ತಲೆಮಾರಿನಲ್ಲಿ ಬದಲಾಯಿಸುವುದೂ ಸುಲಭವಲ್ಲ. ಆದರೆ ನಾವು ನಮ್ಮ ಸಮಸ್ಯೆಗಳನ್ನು ತಿಳಿದುಕೊಂಡರೆ, ಬದಲಾವಣೆಗೆ ಆತಂಕ ಮಾಡದಿದ್ದರೆ ಅಷ್ಟೇ ಸಾಕು. ಸಮಾಜ ಹೊಸ ಪರಿಸ್ಥಿತಿಗೆ ಹೊಂದಿಕೊಂಡು ಪ್ರಗತಿಯನ್ನು ಕಾಣಬಹುದಾಗಿದೆ ಬದಲಾವಣೆಗಳಿಂದ ನಮ್ಮ ಸಮಾಜಕ್ಕೆ ಆಗುವ ನೋವುಗಳನ್ನು ನಾವು ಕಮ್ಮಿ ಮಾಡಬಹುದು.

ಅದು ನಮ್ಮಿಂದಾಗದಿದ್ದರೆ ಏನಾದೀತು? ರಶಿಯ ಮತ್ತು ಚೀನದ ಇತಿಹಾಸ ನಮ್ಮ ಮುಂದೆ ಇದೆ. ನಾವು ನಾವಾಗಿ ಮಾಡದಿದ್ದದ್ದನ್ನು ಬಲಾತ್ಕಾರದಿಂದ ಮಾಡಿಸುವವರು ಹುಟ್ಟುತ್ತಾರೆ. ರಶಿಯ ಮತ್ತು ಚೀನ ಇವೆರಡರಲ್ಲಿಯೂ ಸುಶಿಕ್ಷಿತ ಮೇಲ್ವರ್ಗದ ಜನರನ್ನು ಬಹಳ ಹಿಂಸೆ ಮಾಡಿದರೆಂದು ನಾವು ಓದುತ್ತೇವೆ. ಚೀನದಲ್ಲಿ ವಿಶ್ವವಿದ್ಯಾಲಯದ ಪ್ರೊಫೆಸರುಗಳನ್ನು ಹೊಲಗಳಲ್ಲಿ ದುಡಿಸಿದರಂತೆ. ಇತಿಹಾಸದ ಪ್ರವಾಹದ ಪರಿವೆ ಇಲ್ಲದೆ ತಮ್ಮ ಹಳೇ ಮನೋವೃತ್ತಿಗಳನ್ನೇ ನೆಚ್ಚಿಕೊಂಡವರು ಈ ಅವ್ಯವಸ್ಥೆಗೆ ಬರುತ್ತಾರೆ. ಇದು ತುಂಬಾ ಅಮಾನುಷ ಹೌದು. ಆದರೆ ಇತಿಹಾಸದ ರೀತಿಯೇ ಹಾಗಿದೆ. ಬದಲಾವಣೆಗೆ ಬಗ್ಗದವರು ಮುಳುಗುತ್ತಾರೆ. ಇಲ್ಲದಿದ್ದರೆ ಅವರು ಬಲಾತ್ಕಾರದಿಂದ ಬದಲಾಗುತ್ತಾರೆ.

ಮಹನೀಯರೆ, ಇನ್ನು ನಾನು ನಿಮ್ಮ ಸಮಯ ತೆಗೆದುಕೊಳ್ಳುವುದಿಲ್ಲ. ನನಗೆ ಇಲ್ಲಿ ಮಾತಾಡುವುದಕ್ಕೆ ಸಂದರ್ಭ ಒದಗಿಸಿದ್ದಕ್ಕೆ ನಿಮಗೆ ಮತ್ತೊಮ್ಮೆ ಉಪಕಾರಸ್ಮರಣೆ ಮಾಡಿ ಮುಗಿಸುತ್ತೇನೆ. ■

# ನಮ್ಮ ಕೆಲವು ಪ್ರಮುಖ ಪ್ರಕಟಣೆಗಳು

## ಅಂಕಿತ ಪುಸ್ತಕ

53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-4 ☎ 661 7100 (O)

| | | |
|---|---|---|
| ❑ | ರಂಗ ವಿಹಾರ (ರಂಗ ಸಮೀಕ್ಷೆ) ಪ್ರಕಾಶ್ ಕಂಬತ್ತಳ್ಳಿ | 40/- |
| ❑ | ಪ್ರತಿಕ್ರಿಯೆ (ವಿಮರ್ಶೆ) / ಎಚ್.ಎಸ್. ಮುರಳೀಧರ | 35/- |
| ❑ | ನಾಳೆ ಯಾರಿಗೂ ಇಲ್ಲ ಮತ್ತು ಇತರ ನಾಟಕಗಳು / ಚಿ.ಶ್ರೀನಿವಾಸರಾಜು | 40/- |
| ❑ | ಅನ್ವೇಷಕರು ಮತ್ತು ಇತರ ನಾಟಕಗಳು / ಪ್ರಕಾಶ್ ಕಂಬತ್ತಳ್ಳಿ | 30/- |
| ❑ | ಹಾತಿರಾಂ ಬಾವಾಜಿ (ಕಾದಂಬರಿ) / ಜಿ. ಹೀರಾನಾಯ್ಕ್ | 60/- |
| ❑ | ಮೀಡಿಯ (ನಾಟಕ) / ಡಾ|| ಕೆ. ಮರುಳಸಿದ್ದಪ್ಪ | 40/- |
| ❑ | 1084ರ ತಾಯಿ (ಕಾದಂಬರಿ) / ಮಹಾಶ್ವೇತಾದೇವಿ, ಅನು: ಎಚ್.ಎಸ್. ಶ್ರೀಮತಿ | 60/- |
| ❑ | ರುಡಾಲಿ (ಕಾದಂಬರಿ) / ಮಹಾಶ್ವೇತಾದೇವಿ, ಅನು: ಎಚ್.ಎಸ್. ಶ್ರೀಮತಿ | 25/- |
| ❑ | ಹಬ್ಬ ಮತ್ತು ಬಲಿ (ಕಥಾ ಸಂಕಲನ) / ಬಿ.ಟಿ. ಲಲಿತಾನಾಯಕ್ | 40/- |
| ❑ | ನಮ್ಮೊಳಗಿನ ಬ್ರಹ್ಮಾಂಡ (ವೈಜ್ಞಾನಿಕ ಲೇಖನಗಳು) / ನಾಗೇಶ ಹೆಗಡೆ | 70/- |
| ❑ | ವಿಮರ್ಶೆಯ ಪರಿಭಾಷೆ / ಓ.ಎಲ್. ನಾಗಭೂಷಣಸ್ವಾಮಿ | 250/- |
| ❑ | ಕೆರೆಯಲಿ ಚಿನ್ನ, ಕೆರೆಯೇ ಚಿನ್ನ (ಮಕ್ಕಳ ಪುಸ್ತಕ) / ನಾಗೇಶ ಹೆಗಡೆ | 40/- |
| ❑ | ಸಾಹಿತ್ಯ ಸಂಸ್ಕೃತಿ (ವಿಮರ್ಶೆ) / ನರಹಳ್ಳಿ ಬಾಲಸುಬ್ರಹ್ಮಣ್ಯ | 125/- |
| ❑ | ನಮ್ಮ ಗ್ರಂಥಾಲಯಗಳು / ಡಾ. ಕೆ. ಎಸ್. ಉಮಾಪತಿ | 60/- |
| ❑ | ಹತ್ತು ಮುಖದವರು / ಲಿಂಗರಾಜು | 60/- |
| ❑ | ಜನಪದ ಗೀತೆಗಳು / ಎನ್. ಪ್ರಭಾ | 40/- |
| ❑ | ನಗೆಪಾಟಲು (ನಗೆಹನಿಗಳು) / 'ಅಂಕಿತ' | 30/- |
| ❑ | ಸಾಹಿತಿಗಳ ಸಂಗದಲ್ಲಿ (ಪರಿಷ್ಕೃತ-ವಿಸ್ತೃತ ಆವೃತ್ತಿ) / ದೇಜಗೌ | 150/- |
| ❑ | ಮುಯ್ಯಿಗೆ ಮುಯ್ಯಿ (ಕಾದಂಬರಿ) / ಅನಕೃ | 40/- |
| ❑ | ಗತಿ, ಸ್ಥಿತಿ (ಕಾದಂಬರಿ) / ಗಿರಿ | 50/- |
| ❑ | ಸಮಗ್ರ ಲಲಿತ ಪ್ರಬಂಧಗಳು / ಎ. ಎನ್. ಮೂರ್ತಿರಾವ್ | 150/- |
| ❑ | ವಿಶ್ವಕಪ್ ಕ್ರಿಕೆಟ್ / ಸತೀಶ್ ಚಪ್ಪರಿಕೆ | 60/- |
| ❑ | ಅನರ್ಥಕೋಶ / ನಾ. ಕಸ್ತೂರಿ | 40/- |
| ❑ | ಚೌ ಚೌ ಚೌಕ (ವಿಜ್ಞಾನ-ವಿನೋದ) / ಟಿ. ಆರ್. ಅನಂತರಾಮು, ಶರಣ ಬಸವೇಶ್ವರ ಅಂಗಡಿ | 90/- |
| ❑ | ಹೊಸಗನ್ನಡ ಸಾಹಿತ್ಯ ಚರಿತ್ರೆ / ಪ್ರೊ. ಎಲ್. ಎಸ್. ಶೇಷಗಿರಿರಾವ್ | 130/- |
| ❑ | ಯೂಲಿಸಿಸ್ಸಿನ ಸಾಹಸಗಳು / ಡಾ. ಕೆ. ಎಸ್. ಉಮಾಪತಿ | 30/- |
| ❑ | ಒಂದು ಊರಿನ ಕತೆಗಳು / ಬರಗೂರು ರಾಮಚಂದ್ರಪ್ಪ | 60/- |
| ❑ | ತೆಂಬರೆ (ಕಾದಂಬರಿ) / ಎಂ. ವೀರಪ್ಪ ಮೊಯಿಲಿ | 96/- |
| ❑ | ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ / ಎಂ. ಎಚ್. ಕೃಷ್ಣಯ್ಯ | 90/- |
| ❑ | ಚಿತ್ರಪಟ, ಅಗ್ನಿವರ್ಣ, ಉರಿಯ ಉಯ್ಯಾಲೆ (ನಾಟಕಗಳು) / ಎಚ್.ಎಸ್. ವೆಂಕಟೇಶಮೂರ್ತಿ | 40/- |
| ❑ | ನಟಸಾರ್ವಭೌಮ (ಕಾದಂಬರಿ) / ಅನಕೃ | 200/- |
| ❑ | ಹೆರೋದೊತನ ಸಮರ ಕತೆಗಳು / ಅನು: ಡಾ. ಎಚ್.ವಿ. ರಂಗಾಚಾರ್ | 350/- |
| ❑ | ಗ್ರಾಮಾಯಣ (ಕಾದಂಬರಿ) / ರಾವಬಹಾದ್ದೂರ | 150/- |
| ❑ | ಯಯಾತಿ (ಕಾದಂಬರಿ) / ವಿ.ಎಸ್. ಖಾಂಡೇಕರ್ ಅನು: ವಿ.ಎಂ. ಇನಾಂದಾರ್ | 150/- |
| ❑ | ಪದಸಂಚಯ (ಸಾದೃಶ್ಯಾರ್ಥಕ ಪದಕೋಶ) / ಪ್ರಕಾಶ್ ಮತ್ತು ಮಧುಸೂದನ | 40/- |
| ❑ | ಊರುಕೇರಿ (ಆತ್ಮಕಥನ) / ಡಾ. ಸಿದ್ಧಲಿಂಗಯ್ಯ | 45/- |
| ❑ | ಸೃಜನಕ್ರಿಯೆ ಮತ್ತು ಸಂವೇದನೆ (ವಿಮರ್ಶೆ) / ಡಾ. ಸುರೇಂದ್ರನಾಥ ಮಿಣಜಗಿ | 80/- |
| ❑ | ಮೆರವಣಿಗೆ (ಇಲ್ಲಿಯವರೆಗಿನ ಕವನಗಳು) / ಡಾ. ಸಿದ್ಧಲಿಂಗಯ್ಯ | 70/- |
| ❑ | ಅಳಿಲು ಸೇವೆ (ಹನಿಗವನಗಳು) / ಡುಂಡಿರಾಜ್ | 30/- |
| ❑ | ಹನಿಖಜಾನೆ (ಇಲ್ಲಿಯವರೆಗಿನ ಹನಿಗವನಗಳು) / ಡುಂಡಿರಾಜ್ | 95/- |

❑ ಠಕ್ಕನೊಬ್ಬನ ಆತ್ಮಚರಿತ್ರೆ (ಕಾದಂಬರಿ) / ಅನು: ಎನ್.ಪಿ. ಶಂಕರನಾರಾಯಣರಾವ್ 90/-
❑ ವೈಕುಂಠಕೆ ಬುಲಾವ್ (ನಗೆಬರಹಗಳು) / ಎಂ. ಎಸ್. ನರಸಿಂಹಮೂರ್ತಿ 70/-
❑ ಕಾವ್ಯ ಭಾಷೆ (ವಿಮರ್ಶೆ) / ಎಂ. ಎಚ್. ಕೃಷ್ಣಯ್ಯ 95/-
❑ ಉತ್ತರಭೂಪ / ಬೀchi 150/-
❑ ಇಹದ ಪರಿಮಳದ ಹಾದಿ (ವಿಮರ್ಶೆ) / ನರಹಳ್ಳಿ ಬಾಲಸುಬ್ರಹ್ಮಣ್ಯ 150/-
❑ ಯಾಪಿಲ್ಲು (ಕಾದಂಬರಿ) / ಕುಂ. ವೀರಭದ್ರಪ್ಪ 45/-
❑ ಬಡವರ ನಗುವಿನ ಶಕ್ತಿ (ಸಿದ್ಧಲಿಂಗಯ್ಯನವರ ಸಾಹಿತ್ಯ ಕುರಿತ ವಿಮರ್ಶೆ) ಸಂ: ದಂಡಪ್ಪ 150/-
❑ ಟಾಲ್‌ಸ್ಟಾಯ್ ಅವರ ಮಹಾಪ್ರಸ್ಥಾನ ಮತ್ತು ಇತರ ಕಥೆಗಳು / ಅನು: ಜಿ.ಎನ್.ಆರ್. 80/-
❑ ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ (ವಿಮರ್ಶೆ) / ಬರಗೂರು ರಾಮಚಂದ್ರಪ್ಪ 330/-
❑ ಕಾಂಟೆಸಾದಲ್ಲಿ ಕಾವ್ಯ (ಕವನ ಸಂಕಲನ) / ಬರಗೂರು ರಾಮಚಂದ್ರಪ್ಪ 90/-
❑ ಮಹಿಳಾ ಅಧ್ಯಯನ / ನೇಮಿಚಂದ್ರ 80/-
❑ ಗಾಂಪರ ಗುಂಪು (ಹಾಸ್ಯ) / ದಾಶರಥಿ ದೀಕ್ಷಿತ್ 80/-
❑ ಮರಳಿ ಮಠಕ್ಕೆ (ಹಾಸ್ಯ) / ದಾಶರಥಿ ದೀಕ್ಷಿತ್ 70/-
❑ ಓ ಹೆನ್ರಿ ಕಥೆಗಳು / ಅನು: ಜಿ.ಎನ್. ರಂಗನಾಥ ರಾವ್ 80/-
❑ ನೇಮಿಚಂದ್ರರ ಕಥೆಗಳು / ನೇಮಿಚಂದ್ರ 160/-
❑ ಪ್ರಾಸಂಗಿಕ ಪ್ರಬಂಧಗಳು (ವಿಮರ್ಶೆ) / ಎನ್. ಬಾಲಸುಬ್ರಹ್ಮಣ್ಯ 95/-
❑ ರಂಗಣ್ಣನ ಕನಸಿನ ದಿನಗಳು / ಎಂ.ಆರ್. ಶ್ರೀನಿವಾಸಮೂರ್ತಿ 90/-
❑ ಜ್ಞಾನರಥ (ಕಥೆಗಳು) ಸುಬ್ರಹ್ಮಣ್ಯ ಭಾರತಿ / ಅನು: ಬಿ.ಜಿ.ಎಲ್. ಸ್ವಾಮಿ 70/-
❑ ಕೈಲಾಸಂ Jokಗ್ಳು ... Songಗ್ಳು ... (ನಗೆ ಹನಿಗಳು) / ಬಿ. ಎಸ್. ಕೇಶವರಾವ್ 40/-
❑ ಅವತಾರಗಳು / ಡಾ. ಸಿದ್ಧಲಿಂಗಯ್ಯ 60/-
❑ ಆಧುನಿಕ ಕನ್ನಡ ನಾಟಕ (ವಿಮರ್ಶೆ) / ಡಾ. ಕೆ. ಮರುಳಸಿದ್ದಪ್ಪ 250/-
❑ ಪಕೋಡ ಪ್ರಿಯ (ಹಾಸ್ಯ) / ದಾಶರಥಿ ದೀಕ್ಷಿತ್ 50/-
❑ ಆಫ್ ದಿ ರೆಕಾರ್ಡ್ / ಬೋನಂತಾಯ ಹರಿಶ್ಚಂದ್ರಭಟ್ 80/-
❑ ಕರಗ ಸಂಪ್ರದಾಯ / ಡಾ। ಎಂ. ಸುಮಿತ್ರ 90/-
❑ ಪುರಂದರದಾಸರ ಜನಪ್ರಿಯ ಕೀರ್ತನೆಗಳು/ಸಂ: ಶ್ರೀನಿವಾಸ ಹಾವನೂರ, ಹೊ. ರಾ. ಸತ್ಯನಾರಾಯಣರಾವ್ 90/-
❑ ಬೇರು (ಕಥಾಸಂಕಲನ) / ಸತೀಶ್ ಚಪ್ಪರಿಕೆ 80/-
❑ ಕನ್ನಡಾಭಿಮಾನ / ಬರಗೂರು ರಾಮಚಂದ್ರಪ್ಪ 25/-
❑ ಚೌಕಟ್ಟಿನಿಂದ ಹೊರಬಂದ ಚಿತ್ರಗಳು (ಕಥಾ ಸಂಕಲನ) ವಿವಿಧ ಲೇಖಕರು 80/-
❑ ಬೆಳುದಿಂಗಳಲ್ಲಿ ಅರಳಿದ ಮೊಲ್ಲೆ / ಬಿ.ಜಿ.ಎಲ್. ಸ್ವಾಮಿ 120/-
❑ ನೋಟ ನಿಲುವು (ಯುರೋಪ್ ಪ್ರವಾಸಕಥನ) / ಕೆ. ಮರುಳಸಿದ್ಧಪ್ಪ 95/-
❑ ಸಾವಿರಾರು ಕೀರ್ತನೆಗಳು / ಸಂ: ಪ್ರೊ. ಎ. ವಿ. ನಾವಡ, ಡಾ. ಗಾಯತ್ರಿ ನಾವಡ 295/-
❑ ರೋಮಿಯೊ ಜ್ಯೂಲಿಯಟ್ / ವಿಲಿಯಂ ಷೇಕ್ಸ್‌ಪಿಯರ್ / ಅನು: ಜಿ. ಎನ್. ರಂಗನಾಥ ರಾವ್ 95/-
❑ ವ್ಯಾಸರಾಯಬಲ್ಲಾಳರ ಸಮಗ್ರ ಕಥೆಗಳು 395/-
❑ ಪಾಪು ಪದ್ಯಗಳು / ಎನ್. ಶ್ರೀನಿವಾಸ ಉಡುಪ 20/-
❑ ಸ್ನಾನ (ಮೂರು ಮಿನಿ ಕಾದಂಬರಿಗಳು) / ಎಂ. ವ್ಯಾಸ 80/-
❑ ಬ್ರಾಹ್ಮಣರೇನು ಮಾಡಬೇಕು? / ಪಾ. ವೆಂ. ಆಚಾರ್ಯ 95/-
❑ ಬೀChi: ಬುಲೆಟ್ಸು, ಬಾಂಬ್ಸು: ಭಗವದ್ಗೀತೆ / ಸಂ: ಬಿ. ಎಸ್. ಕೇಶವರಾವ್ 90/-
❑ ಕಲಸುಮೇಲೋಗರ (ಪ್ರಬಂಧಗಳು) / ಡಾ। ಎಚ್. ಕೆ. ನಂಜುಂಡಸ್ವಾಮಿ 80/-
❑ ದಾಶರಥಿ ದೀಕ್ಷಿತರ ಆಯ್ದ ನಗೆಬರಹಗಳು / ಸಂ. ವೈ. ಎನ್. ಗುಂಡೂರಾವ್ 80/-
❑ ನಗೆ ಕೊರೆವಣಿಗೆ / ಸಂ: ಎಸ್. ರಾಮಮೂರ್ತಿ 70/-
❑ ಸನ್ಮಾನ ಸುಖ ಮತ್ತು ಇತರ ನಗೆ ನಾಟಕಗಳು / ಎಂ. ಎಸ್. ನರಸಿಂಹಮೂರ್ತಿ 30/-
❑ ಕಿವುಡು ಸಾರ್ ಕಿವುಡು ಮತ್ತು ಇತರ ನಗೆ ನಾಟಕಗಳು / ಎಂ.ಎಸ್. ನರಸಿಂಹಮೂರ್ತಿ 30/-
❑ ಬೃಹದ್ದೇಶಿಯ ಚಿಂತನೆ / ಡಾ। ಚಂದ್ರಶೇಖರ ಕಂಬಾರ 95/-

"ಬ್ರಾಹ್ಮಣರೇನು ಮಾಡಬೇಕು?" ಎಂಬ ಶೀರ್ಷಿಕೆ, ಗ್ರಂಥವು ಆಕರ್ಷಕವಾಗಿ ಕಾಣಬೇಕು—ಎಂಬ ದೃಷ್ಟಿಯಿಂದ ಕೊಟ್ಟದ್ದಲ್ಲ. ೩೦ ಪುಟಗಳಷ್ಟು ವಿಸ್ತಾರವನ್ನು ಪಡೆದ ಈ ವಿಷಯವು ಆಚಾರ್ಯರ ಆಳವಾದ ಚಿಂತನೆಯ ಫಲವಾಗಿದೆ. ಒಂದು ಜ್ವಲಂತ ಸಾಮಾಜಿಕ ಸಮಸ್ಯೆಯನ್ನು ನಿರ್ವಿಕಾರವಾಗಿ ವಿಶ್ಲೇಷಣೆಗೆ ಒಳಪಡಿಸುವುದಕ್ಕೆ ಮಾದರಿಯಾಗಿ ಈ ಲೇಖನ ಮೊಗವೆತ್ತಿ ನಿಂತಿದೆ.

ಬ್ರಾಹ್ಮಣರು V/s ಶೂದ್ರರು ಎಂಬ ಧರತಿಯಲ್ಲಿ ಆರೋಪ ಮುಂಬಂದರೂ, ಅವರುಗಳ ನಡುವಣ ಜಾತಿಯವರೂ ಯಾವ ರೀತಿ ಶೋಷಣೆ ಮಾಡುತ್ತಾರೆ. ಅಲ್ಲಿಯೂ ಪುರೋಹಿತಶಾಹಿ ಇದೆ ಎಂಬುದನ್ನು ಸೋದಾಹರಣವಾಗಿ ಈ ಲೇಖದಲ್ಲಿ ತೋರಿಸಿದ್ದಾರೆ. 'ವಿದ್ಯೆ' ಎಂಬುದನ್ನು ಬ್ರಾಹ್ಮಣರು ಗುತ್ತಿಗೆ ಹಿಡಿದವರು. ಬ್ರಾಹ್ಮಣರ ಮೆದುಳು ಇತರರದಕ್ಕಿಂತ ಶ್ರೇಷ್ಠ—ಎಂದೆಲ್ಲ ಆರೋಪವಿದೆಯಷ್ಟೆ. ವ್ಯಂಗ್ಯವೆಂದರೆ, ಬ್ರಾಹ್ಮಣರೇ ವಿದ್ಯೆಯ ವಿಷಯದಲ್ಲಿ ತಾವು ಮುಂದುವರಿದವರು, ಜಾತ್ಯತಃ ಇತರರಿಗಿಂತ ಬುದ್ಧಿವಂತರು ಎಂಬ ಭ್ರಾಮಕ ಕಲ್ಪನೆಯಲ್ಲಿದ್ದುದನ್ನು ಪಾ.ವೆಂ. ಎತ್ತಿ ತೋರಿಸಿದ್ದಾರೆ.

ಇಲ್ಲಿ ಗಮನಿಸಬೇಕಾದ ಮಾತೆಂದರೆ ಬ್ರಾಹ್ಮಣನ ಮೆದುಳೇನೂ ಶ್ರೇಷ್ಠತಮವಲ್ಲ; ವಿದ್ಯೆಯ ಒಲವು ಅವನಲ್ಲಿ ಜೀವನಾಡಿ ಎನಿಸಿದ್ದಿತು ಮತ್ತು ಅದರಲ್ಲಿ ನೈಪುಣ್ಯವನ್ನು ಪಡೆಯಬೇಕೆಂಬ ಛಲವೂ ಇದೆ. ಈವೊಂದು ನಿರ್ವಿಕಾರದ ನಿಲುಮೆಯನ್ನು ವಿವರಿಸುತ್ತ ಪಾ.ವೆಂ. ಕೊನೆಯಲ್ಲಿ ಬ್ರಾಹ್ಮಣವರ್ಗಕ್ಕೆ ಕೆಲವು ಮನನೀಯ ಸೂಚನೆಗಳನ್ನು ಮಂಡಿಸಿದ್ದಾರೆ. ಸಮಾಜ ಜೀವಿಗಳಲ್ಲಿ ತಾನೇ ಶ್ರೇಷ್ಠ ಎಂಬ ಭಾವನೆ ಕೈಬಿಡಬೇಕು. ವಿದ್ಯಾರ್ಜನೆಯಲ್ಲದೆ ಬೇರೆ ಉದ್ದೇಶಗಳು ತಮ್ಮ ಗೌರವಕ್ಕೆ ಕುಂದು ಎಂದು ತಿಳಿಯಬಾರದು. ಜಾತಿಯ ನಿಮಿತ್ತದಿಂದ ಅಗೌರವ ಪ್ರಸಂಗ ಬಂದರೆ ಆತ್ಮರಕ್ಷಣೆ ಮಾಡಿಕೊಳ್ಳಬೇಕು, ಇತ್ಯಾದಿ.

ರೂ. 95/- ISBN: 81-87321-81-4

ಅಂಕಿತ ಪುಸ್ತಕ

53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ
ಬಸವನಗುಡಿ, ಬೆಂಗಳೂರು - 560 004
☎ 661 7100 (O) 652 6134 (R)